ಆನಿ ಬೆಸೆಂಟ್

(ಆತ್ಮ ಚರಿತ್ರೆ – ಭಾಷಾಂತರ)

ಭಾಗ – ೨

ಪಿ. ಎಸ್. ಪಿಟ್ಟಣ್ಣ.

ವಿನಮ್ರ ವರ – ಕನಸು!

1970.

ಒಂದು ಮಾತು.

ಇಲ್ಲಿ ಈ [illegible] ಅಧ್ಯಾಯದಿಂದ ಆನಿ ಬೆಸೆಂಟ್ ಇವರ ಆತ್ಮಕಥೆಯ ಭಾಗ-೨, ಮುಂದುವರಿಯುತ್ತದೆ. ಈ ಇಡೀ ಪುಸ್ತಕದ ಮುದ್ರಣಕ್ಕೆ ಮತ್ತು ಪ್ರಕಟಣೆಗೆ ನಾನು ಹಿಂದೆಯೇ ಹೇಳಿದಂತೆ 1970 ರಿಂದಲೇ ಪ್ರಯತ್ನಿಸಿದೆನಾದರೂ ಈವರೆಗೂ (1988) ಫಲಕಾರಿಯಾಗಲಿಲ್ಲವೆಂದರೆ ಶೋಚನೀಯವಾದ ವಿಚಾರವಾಗಿದೆ. ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ನಾನು ಕೊಟ್ಟಿದ್ದ ಹಸ್ತಪ್ರತಿಯು ಅವರಲ್ಲಿಯೇ ಉಳಿದಿತ್ತೆಂದು ಹಿಂದೆಯೇ ಹೇಳಿದೆನಷ್ಟೆ. ಅದರನಂತರ ಈ ಹಸ್ತಪ್ರತಿಯನ್ನು ತಯಾರಿಸಿ ಸುಮಾರು 1982-83 ರಲ್ಲಿ ಬೆಂಗಳೂರು ಥಿಯೊಸೊಫಿಕಲ್ ಸೊಸೈಟಿ- ಈ ಸಂಸ್ಥೆಯ ಸಂಚಾಲಕರಿಗೆ ಒಪ್ಪಿಸಿದೆನು. ಅವರಾದರೋ ಇದರ ಪೂರ್ತಿ ಮುದ್ರಣಕ್ಕೆ ಬೇಕಾಗುವಷ್ಟು ಹಣದ ಅಭಾವದ ಕಾರಣವನ್ನು ಮುಂದಿಟ್ಟು ಇದರ ಪ್ರಕಟಣೆಯ ಹೊಣೆಯನ್ನು ಹೊತ್ತುಕೊಳ್ಳದಾದರು.

ಕನ್ನಡ ಸಾಹಿತ್ಯದಲ್ಲಿ ಇಂಥಾ ಪರಿಚಯ ಗ್ರಂಥಗಳು ಹೆಚ್ಚು ಇಲ್ಲವೆಂದು ನನಗೆ ತೋರುತ್ತಿದೆ. ಆದರೆ ಇಂಥವರ ಬಗ್ಗೆ ಅಲ್ಲೋ ಬೇಕಾದ ಜನವಿದ್ದು ತಮ್ಮ ಜೀವನಗಳು, ತಮ್ಮ ಕಥೆಗಳು, ಮತ್ತಿತರ ಬಿಡಿ ಬರಹಗಳು ಹಾಗೂ ಪತ್ರ ಪ್ರಶಸ್ತಿಗಳನ್ನು ಪ್ರಕಟಿಸಿಕೊಂಡು ತಾವೂ ಸಾಹಿತಿಗಳೆಂದೆನ್ನಿಸಿಕೊಳ್ಳುತ್ತ ಹೊರಗಿನವರ ಜೊತೆಗೆ ತಮ್ಮ ವ್ಯಾಪಾರ, ವ್ಯವಹಾರ, ರಾಜಕೀಯಾದಿಗಳ ಬಗ್ಗೆ ಆಸಕ್ತಿ ವಹಿಸುವಾಗ ಈ ರೀತಿಯಲ್ಲಿ ಪರಿಸ್ಥಿತಿ ಕಾಣುತ್ತದೆ. ಹೀಗಾಗಲೇ ಸಾಕಷ್ಟು ಕಷ್ಟವಿದೆ. ಈ ಎಲ್ಲಾ ವಿಚಾರಗಳನ್ನು ಕುರಿತಾಗಿ ಹಿಂದೆಯೇ ನಾನು ನನ್ನ ಇತರ ಬರಹಗಳಲ್ಲಿ ಹೇಳಿದ್ದೇನೆ.

ಇತರ ಪ್ರಧಾನ ಭಾರತೀಯ ಭಾಷೆಗಳ ಮಾತನಾಡುವವರ ಮತ್ತು ಕನ್ನಡಿಗರ ಸಂಖ್ಯೆಗಿಂತ ಎಷ್ಟೋ ಕಡಿಮೆ ಸಂಖ್ಯೆಯಲ್ಲಿರುವ ಕೇರಳ ಪ್ರಾಂತದ ಮಲಯಾಳೀ ಭಾಷೆಯನ್ನು ಆಡುವ ಜನರು, ಅಲ್ಲಿನ ಆ ಭಾಷಾಸಾಹಿತಿಗಳು, ಪ್ರತಿ ವರ್ಷವೂ ಕನ್ನಡ ಮತ್ತು ಇತರ ಹಿಂದಿಯೇತರ ಪ್ರಮುಖ ಭಾರತೀಯ ಭಾಷಾ ಸಾಹಿತಿಗಳು ತಮ್ಮ ಭಾಷೆಗಳಲ್ಲಿ ಪ್ರಕಟಿಸುವ ಪುಸ್ತಕಗಳ ಸಂಖ್ಯೆಗಿಂತ ಎಷ್ಟೋ ಹೆಚ್ಚಿನ ಸಂಖ್ಯೆಯಲ್ಲಿ ಬರೆದು ಪ್ರಕಟಿಸುತ್ತಾರೆ. ಹಾಗೆ ಪ್ರಕಟವಾದ ಗ್ರಂಥಗಳಲ್ಲಿ ಇಂಥಾ ಭಾಷಾಂತರ ಕೃತಿಗಳಲ್ಲದೆ ಹಲವು ವ್ಯಾವಹಾರಿಕ, ವೈಜ್ಞಾನಿಕ, ಆರ್ಥಿಕ, ಸಾಮಾಜಿಕ ವಿಚಾರಗಳನ್ನು ಕುರಿತಾಗಿ ಹಲವು ಶಾಸ್ತ್ರೀಯ ಬೃಹದ್ಗ್ರಂಥಗಳು ಪ್ರಕಟವಾಗುತ್ತಾ ಇವೆ. ಆದರೆ

ಕನ್ನಡ ಭಾಷೆಯಲ್ಲಿ ಅಥವಾ ಸಂಖ್ಯೆಯಲ್ಲಿ ಪುಸ್ತಕಗಳು ಪ್ರಕಟವಾಗುತ್ತಿಲ್ಲ. ಕರ್ನಾಟಕದ ಪುಸ್ತಕ ವ್ಯಾಪಾರಿಗಳ ಅಂಗಡಿಗಳಿಗೆ ಹೋದರೆ ಅಲ್ಲಿ ಕನ್ನಡ ಪುಸ್ತಕಗಳಿಗಿಂತ ಇಂಗ್ಲಿಷ್ ಪುಸ್ತಕಗಳೇ ಹೆಚ್ಚು ಕಾಣುತ್ತವೆ. ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಂತೂ ಒಂದೇ ಒಂದು ಕನ್ನಡ ಪುಸ್ತಕಗಳ ಮಾರಾಟದ ಅಂಗಡಿಯಿಲ್ಲ. ಹಲವು ಪುಸ್ತಕ ವ್ಯಾಪಾರಿಗಳು ಆಂಗ್ಲ ಭಾಷಾ ಕೃತಿಗಳನ್ನೇ ಹೆಚ್ಚು ಮಾರಾಟ ಮಾಡುತ್ತಾ ತಾವು ಅಂತೆಯೇ ಇದ್ದರೆ ತಮ್ಮ ಜೀವನಕ್ಕೆ ಬೇರೆ ಉಪಾಯವಿಲ್ಲವೆಂದನ್ನುತ್ತಾರೆ. ಹಲವು ಪುಸ್ತಕ ಅಂಗಡಿಗಳಲ್ಲಿ ಕಾಣುವ ಕನ್ನಡ ಪುಸ್ತಕಗಳೆಂದರೆ ಹೆಚ್ಚಾಗಿ ಕನ್ನಡದಲ್ಲಿ ಬರೆದ ಮತ್ತು ವಿವಿಧ ಪರೀಕ್ಷಾ ಪಠನಗಳಿಗೆ ಸಂಬಂಧಿಸಿದ ಕನ್ನಡ ಶಿಕ್ಷಾ ಪುಸ್ತಕಗಳು, ಮತ್ತು ಕತೆ, ಕಾದಂಬರಿ ಪುಸ್ತಕಗಳು! ಅಂಥಾ ಪುಸ್ತಕ ಅಂಗಡಿಗಳಲ್ಲಿ ಸಹ ಅವೆಷ್ಟೋ ಇಂಗ್ಲಿಷ್ ಪುಸ್ತಕಗಳಂತೂ ಹೇಗೂ ಇರುತ್ತವೆ,

ನಮ್ಮ ದೇಶ, ನಮ್ಮ ಭಾಷೆಯೆಂದು ನಾವು ಹೇಳಿಕೊಳ್ಳುವುದು ಕೇವಲ ಹೆಮ್ಮೆ ಅಭಿಮಾನವಲ್ಲವಾದರೆ ನಮ್ಮ ಭಾಷಾ ಸಾಹಿತಿಗಳು ಮತ್ತು ಪ್ರಾಂತದ ಶಾಸಕ ವರ್ಗದವರು ಈ ವಿಷಯದಲ್ಲಿ ಜಾಗೃತರಾಗಬೇಕು, ನಮ್ಮ ಇಂದಿನ ಪರಿಸ್ಥಿತಿಯಲ್ಲಿ, ಮತ್ತು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕನ್ನಡ ಭಾಷಾಪ್ರಗತಿಯು ಆಶಾದಾಯಕವಾಗಿ ಇಲ್ಲ, ಈ ವಿಷಯವಾಗಿ ನಾನು ಹಲವು ಬಾರಿ ಅಲ್ಲಲ್ಲಿ ಮಾತಾಡುವಾಗ ಹೇಳಿದ್ದೇನೆ, ಇಲ್ಲಿ ಬಹುಶಃ ಪ್ರಾಸಂಗಿಕವಾಗಿಯೆಂಬಂತೆ ಇದನ್ನೇ ಬರೆಯುತ್ತಿದ್ದೇನೆ. ವಿವಿಧ ಕಾರ್ಯಗಳನ್ನು ಮಾಡುತ್ತಾ, ಸರಕಾರದಿಂದ ಲಕ್ಷಗಟ್ಟಲೆ ರೂಪಾಯಿಗಳಂತೆ ಸಹಾಯಧನವನ್ನು ಪಡೆಯುವ ಸಾಹಿತ್ಯ ಸಂಸ್ಥೆಗಳು ಕರ್ನಾಟಕದಲ್ಲಿ ಹಲವು ಇವೆ, ಆ ಸಂಸ್ಥೆಗಳ ಸಂಚಾಲಕ ಜನರು ಬಹುಮಟ್ಟಿಗೆ ತಾವು ಹಾಗೂ ಹೀಗೂ ಎಂಬಂತೆ ಹಣ ಪಡೆದುಕೊಂಡು, ತಮ್ಮ ಸ್ಥಾನಗಳನ್ನು ಉಳಿಸಿಕೊಂಡು ಆ ರೀತಿಯಾಗಿ ತಮ್ಮ ವೈಯಕ್ತಿಕ ಪ್ರತಿಷ್ಠೆ, ಆರ್ಥಿಕ ಲಾಭ ಇತ್ಯಾದಿಗಳ ಕಡೆಗೆ ಮಾತ್ರ ಗಮನ ಹರಿಸಿದಾಗ ಸಾಹಿತ್ಯ, ಸಂಸ್ಕೃತಿಗಳ ಉದ್ಧಾರವಾಗದು, ಕನ್ನಡಿಗರ ಈ ಬಗೆಯ ಔದಾಸೀನ್ಯ, ಕನ್ನಡಿಗ ರಾಜಕಾರಣಿಗಳ ಮತ್ತು ಶಾಸಕ ವರ್ಗದ ಸ್ವಾರ್ಥ ರಾಜಕೀಯವನ್ನೆಲ್ಲ, ನಮ್ಮ ನೆರೆಪ್ರಾಂತಗಳ ಜನರು ದುರುಪಯೋಗಪಡಿಸಿಕೊಂಡು ಕರ್ನಾಟಕದ ಸುತ್ತಲೂ ಅಧಿಕ ಸಂಖ್ಯೆಯಲ್ಲಿ ತುಂಬಿದಾಗ ಕನ್ನಡ ಭಾಷೆಯ ಭವಿಷ್ಯಕ್ಕೇನೇ ಹಾನಿಯುಂಟಾದಂತೆಯೆಂದರೂ ಸರಿ. ಇಂಥದ್ದರ ಬಗ್ಗೆ ಆಲೋಚಿಸಿ ಅದಕ್ಕೆ ತಕ್ಕಂಥಾ ಕ್ರಮವನ್ನು ತೆಗೆದುಕೊಳ್ಳಬೇಕಾದ ಕನ್ನಡಿಗರು ಇಂದಿಗೆ ನಾಡಿನ ಎಲ್ಲಾ ಕ್ಷೇತ್ರಗಳಲ್ಲೂ ಬೇಕು.

ಉಂಟಾಗಬಹುದಿದ್ದರೆ ಕರ್ನಾಟಕದ ಭೂಶಿರವು ಆಗಿನದಕ್ಕಿಂತ ಇನ್ನೂ ಚಿಕ್ಕದಾಗುವ ಸಂದರ್ಭವಿದೆಯೆಂದು ಇಲ್ಲಿ ಹೇಳುತ್ತಿದ್ದೇನೆ.

ಏನೇ ಇರಲಿ, ಇಂತಹ ವಿಷಯ ಪ್ರಾಸಂಗಿಕವಾಗಿ ಇಲ್ಲಿ ಹೇಳಿದೆನೆಂದು ಪುನಃ ಓದುಗರ ನೆನಪಿಗೆ ತರುತ್ತಿದ್ದೇನೆ. ನನ್ನ ಈ ಪುಸ್ತಕ ಮತ್ತು ಇತರ ಕೆಲವು ಪುಸ್ತಕಗಳನ್ನು ಬರೆಯುವಾಗ ನಮ್ಮ ದೇಶದ ಸ್ವಾತಂತ್ರ್ಯ ಪ್ರಗತಿಗೆ ಬಹಳ ಪ್ರಯಾಸದಿಂದ ದುಡಿದ ಅಂದಿನ ಹಲವು ನಾಯಕರನ್ನು ನೆನೆಯುತ್ತೇನೆ. ಅನಿ ಬೆಸೆಂಟ್ ಅಂಥವರಲ್ಲಿ ಒಬ್ಬರು. ಅವರು ಜೀವನವನ್ನು ಕಳೆದ ರೀತಿಗೆ ಅವರೇ ಸವಿಸ್ತಾರವಾಗಿ ಮುಟ್ಟಿಬರೆಯುವುದೇ ಹೇಳಿರುವರು, ಅವರ ಸಾಧನೆಯನ್ನು ಬೆರಗಾಗಿ ನೋಡಿದ ಅಂದಿನ ಹಲವು ಮಹಾಪುರುಷರು ಅವರೊಬ್ಬ ಕರ್ಮಯೋಗಿನಿಯೆಂದು ಹೇಳುತ್ತಾ ಬಂದಿದ್ದಾರೆ. ಅಂಥಾ ಇನ್ನೂ ಹಲವು ನಾಯಕ ವೀರಾಭಿಮಾನಿಗಳು ಕಳೆದ ಶತಮಾನದಲ್ಲಿ ಇದ್ದರು, ಅವರು ಯಾರಾರು ಎಂಬುದನ್ನು ನಮ್ಮ ಜನರು ಸಹನಾದೃಷ್ಟಿಯಿಂದ ನೋಡಬೇಕು. ಇಂಥಾ ಪುಸ್ತಕಗಳು ಆ ದಿಕ್ಕಿನಲ್ಲಿ ನಮಗೆ ಮಾರ್ಗದರ್ಶಕವಾಗಬಹುದೆಂದು ನಾನು ಆಲೋಚಿಸುತ್ತೇನೆ.

ಇದೇ ಭಾವನೆಯಿಂದ ನಾನು MOTHER BESANT and MAHATMA GANDHI — ಎಂದು ಇಂಗ್ಲೀಷಿನಲ್ಲಿ ಬರೆದ ಪುಸ್ತಕ ಕೇವಲ ಎರಡು ವರ್ಷಗಳಿಗೆ ಹಿಂದೆ (1985) ಮದ್ರಾಸಿನಲ್ಲಿ ಪ್ರಕಟವಾಯಿತು. ಆಧುನಿಕ ಭಾರತದ ನಿರ್ಮಾಪಕರು, "builders of modern India" ಎಂಬುದಾಗಿ ಪ್ರಸಿದ್ಧರಾದ ಆ ಇಬ್ಬರ ತುಲನಾತ್ಮಕ ಜೀವನ ಚರಿತ್ರೆಯು ಸಾಹಿತ್ಯದಲ್ಲಿ ಒಂದು ಹೊಸ ಪ್ರಯೋಗವೆಂದು ಅಂತರ್‌ರಾಷ್ಟ್ರೀಯ "The Theosophist" — ಪತ್ರಿಕೆಯು ಪ್ರಶಂಸಿಸುತ್ತಾ ಹೇಳಿರುವುದು ನನಗೆ ಸಮಾಧಾನವನ್ನು ತಂದಿದೆ:—

"DR. Muthanna's book is well-prepared and documented. This work provides a useful introduction to a subject not explored previously."

ವ್ಯಾನ್‌ಕೂವರ್, ಕೆನಡಾ.
ತಾ. 10-10-1988.

ಐ. ಮಾ. ಮುತ್ತಣ್ಣ

ಅಧ್ಯಾಯ ೭

ನಾನು ತಿಳಿದಂತೆ ಮತ್ತು ಬೋಧಿಸಿದಂತೆ ನಾಸ್ತಿಕ ವಾದ!

ಒಂದು ಮಿತಿಗೆ ಸಿಲುಕಿಸಲ್ಪಟ್ಟು ಒಂದು ವ್ಯಕ್ತಿತ್ವದೊಳಗಡೆಗಿದ್ದ ಜಗನ್ನಿಯಾಮಕನೆಂಬ ಕಲ್ಪನೆಯಿಂದ ಆರಂಭಗೊಂಡ ದೇವನಿಂದ ತೊಡಗಿದ ಆ ಮೊದಲ ಜಿಜ್ಞಾಸೆಯಿಂದ ಪೂರ್ವ ಸಾಧಕನನ್ನು ನಾಸ್ತಿಕವಾದ ಮತ್ತು ಅದ್ವೈತ ವಾದಿಗಳು ಬೇರ್ಪಡುವಲ್ಲಿಯ ವರೆಗಿನ ಅಂತ್ಯದ ವರೆಗೂ ಕೊಂಡೊಯ್ಯುತ್ತದಲ್ಲದೆ ನೈಸರ್ಗಿಕ ವೈಚಿತ್ರ್ಯದ ಈ ಮಾರ್ಗದಲ್ಲಿ ಇರುವ ಸೌಂದರ್ಯದಡಿಯಲ್ಲಿ ಅನಂತ ವಿಭಿನ್ನತೆಗಳು ಕೂಡಿದ್ದು ಅಸಂಖ್ಯವಾಗಿರುವ ರೂಪಗಳಿಂದ ಒಂದನ್ನು ಪ್ರತ್ಯೇಕಿಸುವುದರಲ್ಲಿರುವ ರಹಸ್ಯ ವಿಸ್ತರಿಸಬೇಕಿದೆ, ನಾನು ಚಾರ್ಲ್ಸ್ ಬ್ರ್ಯಾಡ್ಲೋರನ್ನು ಮೊದಲ ಬಾರಿಗೆ ಕಾಣುವುದಕ್ಕಿಂತ ಮುಂಚೆ ಇದೇ ದಿಶೆಯಲ್ಲಿ ಜಿಜ್ಞಾಸೆಯನ್ನು ಹಾಕಿದ್ದಲ್ಲದೆ ನಾನು ಹೀಗೂ ಬರೆದೆನು:—

“ನಿಶ್ಚಲತೆಯಿಂದ ಆಲೋಚಿಸುವವರಿಗೆಲ್ಲ ಇದು ತಿಳಿದಿದೆ. ಅದೇನೆಂದರೆ ಇಲ್ಲಿ ಒಂದೇ ಒಂದು ಅನಂತವೂ ಅಲಭ್ಯವೂ ಆದ ವಸ್ತು (matter) ಇರುವುದಾದುದರಿಂದ ಆ ವಸ್ತು (matter) ಮತ್ತು ಜೀವ (spirit) ಇವು ಆ ಒಂದು ವಸ್ತುವಿನಿಂದ ಹಲವು ರೀತಿಯಲ್ಲಿ ವಿಭಿನ್ನವಾಗಿರುವುದು, ಮನಸ್ಸಿನಿಂದಲೇ ಉದಿಸಿದ ನ್ಯಾಯ ಮತ್ತು ನ್ಯಾಯತೀರ್ಪು ಹೇಗೋ ಹಾಗೆಯೇ ಬರಿ ಅನುಕೂಲತೆಗೆ ಮತ್ತು ವಿವರಣೆಗೆ ವಸ್ತು ಮತ್ತು ಜೀವದೊಳಗಿರುವ ಭೇದವನ್ನು ಹೇಳಲಾಗಿದೆ, ವಸ್ತುವು ಅದಕ್ಕೆ ನಿಶ್ಚಿತವಾದ ವಸ್ತುಗಳೊಡಗೂಡಿ ಅತ್ತ ಅದೇ ಜೀವಕ್ಕೆ ಸಮಾನವಾಗಿದೆ. ಈ ಜೀವದ ಅಸ್ತಿತ್ವದ ವೈಖರಿಯು ಬಹು ವಿಧವಾಗಿದೆ. ಜೀವದ ವಿಕಾಸದಲ್ಲಿ ಅದು ಸಹಸ್ರ ರೀತಿಯಲ್ಲಿ ತೋರಿದರೂ ಅದು ಮೂಲತಃ ಒಂದೇ ಆಗಿದೆ, ಕೆಂಡದಲ್ಲಿರುವ ಬೆಂಕಿಯು ಕೆಂಡದಿಂದ ಹೇಗೆ ಬೇರೆಯೋ ಅದೇ ರೀತಿ ಆಲೋಚನೆ, ಗ್ರಹಣಾಶಕ್ತಿ, ನ್ಯಾಯ ವಿಮರ್ಶೆ, ಆವೇಶ ಮತ್ತು ದೃಢಚಿತ್ತಗಳು ಆಲೋಚನೆಗೆ ಮೂಲವಾದ ಮೆದುಳಿನಿಂದ ಬೇರ್ಪಟ್ಟಿದೆ, ಹಾಗಿದ್ದರೂ ಅವೆಲ್ಲವೂ ಅವುಗಳ ಸ್ಥಿತಿಯಲ್ಲಿ ಒಂದಕ್ಕೊಂದು ಬೇರೆನಿಸಿ ಮೂಲತಃ ಒಂದೇ ತತ್ವದಿಂದ ಹುಟ್ಟಿದ್ದಾಗಿದೆ.----ನಾನು ಕಾಣುವಂತೆ ನನ್ನ ಸುತ್ತಲೂ ಬರೀ ಒಂದು ತತ್ವಮಯ ವಸ್ತು (substance) ಮಾತ್ರವಿದೆಯೆಂದು ನಾನು ನಂಬಲೇಬೇಕಾಗಿದೆ. ವಿಶ್ವವು ಅನಂತ

ಮಾಡುದು, ಆದರೆ ಆದಾಗ್ಯೂ ನಮ್ಮ ವಿಚಿತ್ರ ರೀತಿಯಲ್ಲಿ ಹೇಳಿದಂತೆ ನಮಗೆ ನಮ್ಮ ಆವರಣದಿಂದ ಹೊರಗೆ ಎತ್ತಲೂ ಹೋಗಲಾಗುವುದಿಲ್ಲವಾದುದರಿಂದ ನಮ್ಮ ಬುದ್ಧಿಗೆ ತೋರಿದಂತೆ ವಿಶ್ವವು ಹೇಗೂ ಅನಂತವಾದುದೆಂದು ಹೇಳಬೇಕಾಗಿದೆ. ಒಂದು ದೇವರನ್ನು ಈ ವಿಶ್ವದಿಂದ ಬೇರ್ಪಡಿಸಿ ಕಲ್ಪಿಸಲು ಸಾಧ್ಯವಿಲ್ಲ, ಕೆಲಸಗಾರನೂ ಕೆಲಸವೂ ಅನಿವಾರ್ಯವಾಗಿ ಪರಸ್ಪರ ಹೊಂದಿಕೊಂಡಿವೆ; ಕೆಲವು ಬಗೆಯಲ್ಲಿ ಅವೆರಡೂ ಅನಂತವೂ ಅನಿವಾರ್ಯವೂ ಆಗಿ ಹೋಗಿವೆ. ಇಲ್ಲಿಯವರೆಗೆ ಈ ವಿಷಯವಾಗಿ ಹೇಳಿದನಂತರ ಸಾಂಪ್ರದಾಯಿಕರು ಹೇಳಿದ ವಿಧಿಗಳನ್ನನುಸರಿಸಿ ಸರ್ವಮಾನ್ಯವಾಗಿ ತಿಳಿದು ಬಂದ ಆ ದೇವರ ಅಸ್ತಿತ್ವವನ್ನು ಪ್ರಮಾಣಪೂರ್ವಕವಾಗಿ ಪರಿಶೀಲಿಸಬೇಕಿದೆ. ಸನಾತನೀಯವಾಗಿ ನಂಬಲಾದ ಆ ಪರಮಾತ್ಮನ ಅಸ್ತಿತ್ವವು ಅಸಾರಣವೂ ಅಸಹನೀಯವೂ ಎಂದು ತೋರಿಸಿದನಂತರ ಹಾಗೆಂದು ನಂಬಿದ ನಾನು ಇನ್ನು ದೇವತ್ವವನ್ನು ಕುರಿತು ಸಂಪೂರ್ಣವಾಗಿ ತಿಳಿಯಲು ನಮ್ಮ ಬುದ್ಧಿಶಕ್ತಿಯಿಂದ ಸಾಧ್ಯವೋ ಎಂದು ತಿಳಿಯಲು ಯತ್ನಿಸುವ. ದೇವರೆಂದರೆ ಒಂದು ಮಹತ್ತಾದ ವಸ್ತು (substance) ಆಗಿದ್ದು ಅದರಿಂದಲೇ ಇತರ ಎಲ್ಲ ವಸ್ತುಗಳು ಅಂದಿನ ನಿರ್ಮಾಣವಾಗಿವೆಯೆ ಇದ್ದ ಪರಿಸ್ಥಿತಿಯಲ್ಲಿ ಮತ್ತು ವಿಶ್ವದ ಅನಂತವಾದ ನಿಯಮದೊಳಗೆ ಉದಯವಾಗಿರಬೇಕು. ಸ್ಪಿನೋಜರ ಪಾರ್ಕರ್ ಇವನು "ವಸ್ತುವಿನಿಂದ ಉದ್ಭವವಾದ ವಸ್ತು ಮತ್ತು ಅತ್ವದಿಂದ ಉದ್ಭವವಾದ ಅತ್ವ" ಎಂಬುದಾಗಿ ವಿಲಕ್ಷಣ ರೀತಿಯಲ್ಲಿ ಹೇಳಿದಂತೆ ಅವುಗಳು ಒಂದೇ ವಸ್ತುವಿನಿಂದ ಉತ್ಪತ್ತಿಯಾಗಿರಬೇಕು, ಒಂದೇ ಒಂದು ತತ್ವದಿಂದ ಅತ್ವ ಮತ್ತು ವಸ್ತುವು ಬೇರೆ ಬೇರೆ ಪ್ರತ್ಯಕ್ಷವೆಂಬ ಸತ್ಯವನ್ನು ತೀವ್ರವಾಗಿ ಒಪ್ಪಲಾಗಿದೆ. ಹೀಗೆ ನಾವು ವಸ್ತು (substance) ವನ್ನು ನಿಸರ್ಗದಲ್ಲಿರುವ ಎಲ್ಲ ವಸ್ತುಗಳೊಡನೆ ಮತ್ತು ಅವಿಭಾಜ್ಯ ಶಕ್ತಿಯಿಂದಲೇ ಭಾವಿಸುತ್ತೇವೆ. ಜನಗತವಾಗಿ ಸಾಂಪ್ರದಾಯಿಕ ರೀತಿಯಲ್ಲಿ ವಿವೇಚಿಸಿದಂತೆ ದೇವರಿಗೆ ಒಂದು ಪ್ರರೂಪತ್ವವನ್ನು ಕಲ್ಪಿಸದ ಹಾಗೆ ಅವನ ಅಗೋಚರ ಇರುವಿಕೆಯನ್ನು ಆ ಸ್ಥಿತಿಗೆ ಇಳಿಸುತ್ತೇವೆ, ನಾವು ಕಲ್ಪಿಸಿದ ದೇವತೆಯು ನಿಸರ್ಗದೊಡನೆ ಹೊಂದಿಕೊಂಡು ವಿಶ್ವದಲ್ಲಿ ಬೆರೆತಿದ್ದರೂ ಸಮಗ್ರತ್ವನ್ನು ದನಿಸಿದ ಪರಮಾತ್ಮನೆಂಬುವನು ಇಲ್ಲ. ದೇವರೆಂದು ಕರೆಯುವುದರ ಬದಲು ಆ ಶಕ್ತಿಯನ್ನು ಬೇರೊಂದು ರೀತಿಯಲ್ಲಿ ಕರೆಯುವ; ಆದರೆ ಆ ಅಗೋಚರ ಶಕ್ತಿಯನ್ನು ಸನಾತನಿಗಳು ಭಾವಿಸಿದಂತೆ ವಿಶ್ವದಿಂದ ಬೇರ್ಪಡಿಸಿ ಪ್ರತ್ಯೇಕ ಒಂದು ಪ್ರಬಲ ಶಕ್ತಿಯೆಂದು ಮಾತ್ರ ತಿಳಿಯಲಾಗದು.

ದೇವರನ್ನು ಕುರಿತಾದ ವಿಷಯವನ್ನು ಪೂರ್ತಿ ತಿಳಿಯಲು ಸಾಧ್ಯವೋ ಎಂಬುದು ಶೋಧಿಸುತ್ತಿರಲು ಪ್ರಜ್ಞಾಶಕ್ತಿಯೊಂದು ಇದೆ-

ಯಿಂದು ಹೇಳಲು ಹೆಚ್ಚು ಪ್ರಮಾಣವೇನೂ ಇಲ್ಲ; ಮತ್ತು ಅದರಲ್ಲಿ ಹೇಳಲ್ಪಟ್ಟ ಸಾಮಾನ್ಯ ಸಾಕ್ಷ್ಯ ವಿವರಗಳೂ ಅಪೂರ್ಣವಾಗಿವೆಯಲ್ಲದೆ ನಾವು ವಿಶ್ವಾಸ ಅಗಾಧ ಮಹಿಮೆಯನ್ನು ಸಾಕಷ್ಟು ತಿಳಿಯಬಹುದೆಂಬ ತೀರ್ಮಾನಕ್ಕೆ ಬಂದೆನು, ಬುದ್ಧಿಶಕ್ತಿಯನ್ನು ನಾವು ಕಂಡಿದ್ದರೂ ಸ್ವಭಾವಗುಣದಲ್ಲಿ ಮನಸ್ಸು ಎಂಬುದಿರಬಹುದೆಂದು ಸರಿಯಾಗಿ ಆಲೋಚಿಸಿ ಹೇಳುವುದಾದರೆ ಅಸಾಧ್ಯವೆಂದೇ ಅನ್ನಬೇಕು. ಗ್ರಹಾಕರ್ಷಣೆ, ಸ್ಥಿರತೆ, ಹೋಲಿಕೆ ಮತ್ತು ನಿಷ್ಪಕ್ಷಪಾತ ದೃಷ್ಟಿಯೆಲ್ಲ ಕೂಡ ಇರಲಾರವಾದರೂ ಅತ್ಯುತ್ತಮವೂ ಸ್ಥಿರವೂ ಶಾಂತವೂ ಮಾನವೂ ಆದ ಮನಸ್ಸು ಇರಲು ಸಾಧ್ಯವಿಲ್ಲವೆ? ದೇವತ್ವವನ್ನರಿಯಲು ಯತ್ನಿಸುವಲ್ಲಿ ನಮ್ಮ ಬುದ್ಧಿಶಕ್ತಿ ಅದಕ್ಕೆ ಸಾಲದಾಗಿ ಭಿನ್ನಾಭಿಪ್ರಾಯಗಳಿಂದ, ಅನವಶ್ಯಕವಾದ ವಿಚಾರಗಳಿಂದ ನಮ್ಮ ಮನಸ್ಸೇ ಮಂದವಾಗುತ್ತದೆ. ಆ ಕಾರಣದಿಂದ ದೇವರು ಇಲ್ಲವೆಂದೆನ್ನಬಹುದೆ? ದೇವರ ಅಸ್ತಿತ್ವವನ್ನು ಅಲ್ಲಗಳೆಯಲೆತ್ನಿಸುವುದು ಅವನ ಮಹಿಮೆಯನ್ನರಿಯಲು ಪ್ರಯತ್ನಿಸುವ ರೀತಿಯಲ್ಲಿ ನಮ್ಮ ಆಲೋಚನಾ ಶಕ್ತಿಯನ್ನು ಮೀರಿ ಹೋದಂತಾಗುವುದು, ದೇವರು ನಮ್ಮ ತಿಳುವಳಿಕೆಗೆ ಎಟುಕದವನು, ಎಂದು ಸಾರಿ ನಾವು ಅವನನ್ನು ತಿಳಿದಿದ್ದೇವೆ ಎಂದು ತೋರಿಸಿಕೊಳ್ಳುತ್ತೇವೆ, ಹೌದು! ಸಧ್ಯಕ್ಕೆ ಅವನು ನಮಗೆ ತಿಳಿಯಲಸಾಧ್ಯನೇ ಆಗಿರುವನು, ಆದರೆ ಅವನ ಇತರ ಮಹಿಮೆಗಳೂ ಅವನು ಎಂತಿರುವನೆಂದು ತಿಳಿಯಲು ಸಾಧ್ಯವಿಲ್ಲವೆ? ನಾವೀಗ ಆ ವಿಚಾರದಲ್ಲಿ ಇನ್ನೂ ಆಳಕ್ಕೆ ಹೋಗಲು ಅಸಾಧ್ಯವಾದಲ್ಲಿಯವರೆಗೆ ತಲಪಿದ್ದೇವೆ, ಅಲ್ಲಿ ಮಾನವನ ಬುದ್ಧಿ ಕೌಶಲ್ಯವಿಲ್ಲವೂ ನಮ್ಮ ಕೈಬಿಡುತ್ತದೆ; ಅನಂತರ ತಿಳಿಯಲಶಕ್ಯವಾದ ಆ ಮಹಿಮಾತೀತನ ಹೊಸ್ತಿಲಲ್ಲಿ ನಿಂತು ನಾವು ಅವನಿಗೆ ಶರಣಾಗಬೇಕಾಗುತ್ತದೆ,

“----ಮತ್ತು ಮನುಷ್ಯನ ಕಿವಿಯು ಕೇಳಿಸಲಾರದು;
ಕಣ್ಣುಗಳು ನೋಡಲಾರವು!
ಅನಂತಿಯಾಗಿರುವವನಲ್ಲದೆ ಹೋಗಿದ್ದರೆ ಈ ಕಲ್ಪನಾ
ರೂಪವನ್ನು ನಾವು ನೋಡಲಿಕ್ಕೆ ಕೇಳಲಿಕ್ಕೆ ಸಾಧ್ಯವಿತ್ತೇ?”

ಎಂದು ಕವಿ ಆಲ್ಫ್ರೆಡ್ ಟೆನ್ನಿಸನ್ ಇವನು ಹೇಳುತ್ತಾನೆ, “ನಮಗೆ ನೋಡಲಿಕ್ಕೆ ಕೇಳಲಿಕ್ಕೆ ಸಾಧ್ಯವಾಗಿದ್ದರೆ,” — ಅಹಾ, ಯಾವಾಗಲೂ ಅದು “ಕೆ” ಎಂದೇ ಕೊನೆಗೊಳ್ಳುತ್ತದೆ,

ಆಧಾರವಿಲ್ಲದೆ ಒಂದು ವಿಷಯವನ್ನು ನಂಬಲು ತಿರಸ್ಕರಿಸುವುದು; ಮಾನವನ ಇಂದಿನ ಬುದ್ಧಿಶಕ್ತಿಗನುವಾಗಿ ಪರಮಾತ್ಮನ ಅದ್ಭುತ ಲೀಲೆಯನ್ನು ತಿಳಿಯಲು ಅಸಾಧ್ಯ, ಎಂಬೀ ಎರಡು ವಿಚಾರಗಳನ್ನು ಕುರಿತಾಗಿ ಚಾರ್ಲ್ಸ್ ಬ್ರ್ಯಾಡ್ಲೆ ಮತ್ತು ನಾನು ನಾನೂರು ವಾದಿಸಿ ಪ್ರತಿವಾದನೆಯು ಪೇಳಿಗೆ ಪದಿಕೆಯ ಮೇಲಿಂದ

ಸಮರ್ಥಿಸುತ್ತಿದ್ದೆವು. ಕ್ರಿ.ಶ. 1876ರಲ್ಲಿ ನಮ್ಮ ಈ ನಿಲುವು ಇನ್ನೂ ಸ್ಪಷ್ಟವಾಯಿತು. ಬೇರಾವ ಪ್ರತಿವಾದಿಯೂ ಈ ನಾಸ್ತಿಕವಾದವನ್ನು ಅವಿಮರ್ಶಕಾರಕ್ಕೆ ಒಳಗಾಗದೇ ಇದ್ದುದರಿಂದ ಸೂಕ್ಷ್ಮವಾಗಿ ಆ ವಿಷಯವಾಗಿಯೇ ಒತ್ತಿ ಹೇಳುತ್ತಿದ್ದೆವು. ನಾಸ್ತಿಕವಾದವು ದೇವರನ್ನು ನಂಬುವುದಿಲ್ಲವಾದರೂ ದೇವರೇ ಇಲ್ಲವೆಂದು ಅದು ಹೇಳಿದ್ದಿಲ್ಲ. ನಾಸ್ತಿಕನು ದೇವರು ಇಲ್ಲವೆಂದು ಹೇಳಲಾರನು. ಆದರೆ ದೇವರು ಎಂಬ ಪದದಿಂದ ನೀನು ಏನು ತಿಳಿದಿರುವಿಯೋ ಅದನ್ನು ನಾನರಿಯೆನೆಂಬುದಾಗಿ ಅವನು ಹೇಳುತ್ತಾನೆ. ದೇವರನ್ನು ಕುರಿತಾದ ಉದ್ದೇಶವೇ ನನ್ನಲ್ಲಿಲ್ಲ. ದೇವರು ಎಂಬ ಶಬ್ದವು ನನಗೆ ಸ್ಪಷ್ಟವಾದ ಮತ್ತು ನಿರ್ದಿಷ್ಟವಾದ ಅರ್ಥವನ್ನು ಒದಗಿಸದು. ನಾನು ದೇವರನ್ನು ನಿರಾಕರಿಸಲಾರೆನು; ಏಕೆಂದರೆ ನಾನು ಕಲ್ಪಿಸದೇ ಇದ್ದ ವಿಚಾರವನ್ನು ನನಗೆ ನಿರಾಕರಿಸಲು ಸಾಧ್ಯವಿಲ್ಲ. ಆದರೆ ಅಂಥ ಒಂದು ಕಲ್ಪನೆಯನ್ನು ತಾಳಿ ಅದರ ಬಗ್ಗೆ ಪ್ರತಿಪಾದಿಸುವಂಥವನು ಸಮರ್ಥನೀಯವಾಗಿ ವಿವರಣೆಯನ್ನು ಕೊಡಲಾರದಷ್ಟು ದುರ್ಬಲನಾಗಿರುವನು; (ಚಾರ್ಲ್ಸ್ ಬ್ರಾಡ್ಲೆ "Freethinkers' Text book - p. 118-") ಸಾಮಾನ್ಯ ಅನುಭವದಿಂದ ಹೇಳುವುದಾದರೆ ಎಲ್ಲರಿಂದಲೂ ಒಪ್ಪಲಾದ ದೇವತ್ವದ ಸಿದ್ಧಾಂತವನ್ನು ನಾಸ್ತಿಕನು ಅಂಗೀಕರಿಸುವುದಾಗಲೀ ನಿರಾಕರಿಸುವುದಾಗಲೀ ಮಾಡಲಾರನು ---- ಏಕೆಂದರೆ ವಿಶ್ವವನ್ನು ಕುರಿತಾದ ಅವನ ಜ್ಞಾನವು ಒಂದು ಮಿತಿಯೊಳಗಿರುವುದಲ್ಲದೆ ತುಂಬಾ ನ್ಯೂನತೆಯಿಂದ ಕೂಡಿದೆ. ನಾಸ್ತಿಕನಿಗೆ ಏನೂ ತಿಳಿಯದೆಯೇ ಇರುವ ಈ ವಿಶ್ವದ ಸ್ಥಿತಿಗತಿಯನ್ನು ಕುರಿತಾಗಿ ಅವನು ಒಪ್ಪುವುದಾಗಲೀ ತಿರಸ್ಕರಿಸುವುದಾಗಲೀ ಮಾಡಲಾರನು. ಅಷ್ಟೇ ಅಲ್ಲ, ಅವನಿಗೆ ತಿಳಿಯದೇ ಇರುವುದನ್ನು, ಕಾಣದೇ ಇರುವುದನ್ನು, ನಂಬಲಿಕ್ಕೆ ಎಂದೂ ಒಪ್ಪಲಾರನು, ನಂಬಿಕೆಗೆ ಅರ್ಹವಲ್ಲದ ವಿಷಯವು ನಮ್ಮ ಜ್ಞಾನಕೋಶವನ್ನು ತುಂಬಲು ಅರ್ಹವಲ್ಲವೆಂಬುದನ್ನು ಅವನು ಪ್ರತಿಪಾದಿಸುವನು. ಅಗೋಚರನಾದ ದೇವನ ಇರುವಿಕೆಯನ್ನು ಕುರಿತು ನಾಸ್ತಿಕನು ಒಪ್ಪಲಾರನು, ಹಾಗೂ ತಿರಸ್ಕರಿಸಲಾರನು. ಆದರೆ ಅವನು ಪಡೆದ ಜ್ಞಾನದ ಬಗ್ಗೆ ಸಂಶಯವಿದ್ದರೆ ಅಂತಹದನ್ನು ಅವನು ಒಪ್ಪಲಿಕ್ಕೆ ನಿರಾಕರಿಸುವನು. ಉದಾಹರಣೆಗೆ ಒಂದು ಎಂದರೆ "ಒಂದು" ಎಂಬುದು ಅವನಿಗೆ ಗೊತ್ತಿದೆ. ಒಂದರ ಮೂರು ಪಾಲು ಮೂರು ಎಂದೂ ಅವನಿಗೆ ತಿಳಿದಿದೆ. ಆದರೆ ಒಂದರ ಮೂರು ಪಾಲನ್ನು ಒಂದು ಎಂದರೆ ಅವನು ಒಪ್ಪಲಾರನು. ನಾಸ್ತಿಕನು ಬಹಳ ಸ್ಪಷ್ಟವಾಗಿ ಮತ್ತು ಸಕಾರಣವಾಗಿ ವಿಚಾರಜ್ಞಾನವನ್ನು ಪಡೆಯುವನು, ತನಗೆ ದೇವರ ವಿಷಯವಾಗಿ ಏನೂ ತಿಳಿಯದು

ದ, ಆದ್ದರಿಂದ ಅವನು ಇರುವನೆಂಬುದನ್ನು ನಾನು ನಂಬಲಾರೆನು, ನೀನು ಹೇಳುತ್ತಿರುವ ನಿನ್ನ ದೇವರ ವಿಚಾರವು ಒಂದಕ್ಕೊಂದು ವಿರೋಧವಾಗಿದೆ. ಆದುದರಿಂದ ಅದು ನಂಬಲಿಕ್ಕೆ ಸಾಧ್ಯವಾಗದ ವಿಚಾರವಾಗಿದೆ. ನನಗೆ ಪರಿಚಿತವಾದ "ದೇವರು" ಎಂಬ ನುಡಿಯನ್ನು ನಾನು ನಿರಾಕರಿಸಲಾರೆನು; ಆದರೆ ಇರಲಿಕ್ಕೆ ಸಾಧ್ಯವಿಲ್ಲದ ನಿನ್ನ "ದೇವ"ನನ್ನು ನಾನು ಒಪ್ಪಲಾರೆನು, *

ನನಗೆ ದೇವರು ಇಲ್ಲ. ಕ್ರಿ.ಶ. 1887ರ ವರೆಗೂ ನಾನು ಈ ರೀತಿಯಾಗಿಯೇ ಬರೆಯುತ್ತಿದ್ದೆನು. 'ದೇವರು' ಎಂಬುವುದಕ್ಕೆ ನಿಶ್ಚಿತಾರ್ಥವು ಇರುವ ವರೆಗೆ ವಿಶ್ವದಲ್ಲಿರುವುದೆಲ್ಲವೂ ಅವನಿಗೆ ತಿಳಿದಿರುವ ವರೆಗೆ ಮತ್ತು Leibnitz ಇವನು ಹೇಳುವಂತೆ ಪರಿಪೂರ್ಣ ಜ್ಞಾನವನ್ನು ಪಡೆದಿರುವ ವರೆಗೆ "ದೇವರು ಇಲ್ಲವೇ ಇಲ್ಲ", ಎಂಬುದಾಗಿ ಯಾರಿಗೂ ಖಂಡಿತವಾಗಿಯೂ ಹೇಳಲಿಕ್ಕೆ ಸಾಧ್ಯವಿಲ್ಲ. ದೇವರನ್ನು ಕುರಿತು ಸ್ಪಷ್ಟಪಡಿಸಿದಾಗ ಮತ್ತು ವಿವರಿಸಿದಾಗ ನಾಸ್ತಿಕನು ಅಂಥ ದೇವರುಗಳ ಇರುವಿಕೆಯನ್ನು ಕುರಿತು ತಿರಸ್ಕರಿಸಲು ಪ್ರಾರಂಭಿಸುತ್ತಾನೆ. ದೇವರ ಅಸ್ತಿತ್ವವನ್ನು ಕುರಿತಾಗಿ ಒಂದಕ್ಕೊಂದು ವಿರೋಧವಾಗಿಯೂ ಅನರ್ಥವಾಗಿಯೂ ಅಲ್ಲದೆ ಬೇರೆಯಾಗಿ ಪ್ರತಿಪಾದಿಸಿದ್ದೇ ಇಲ್ಲ. ಮಾನವನ ಬುದ್ಧಿಗೆ ಎಟುಕುವಂತೆ ದೇವರ ಇರುವಿಕೆಯನ್ನು ಕುರಿತು ವ್ಯಕ್ತವಾಗಿ ಹೇಳಿದ್ದೇ ಇಲ್ಲ---- ದೇವರು ಅಗೋಚರನಾಗಿರುವನೆಂದು ಪ್ರತಿಪಾದಿಸುವವರು ತಮ್ಮ ಆ ವಾದಗಳಿಂದ ಏನೂ ಗಳಿಸಲಾರರು. ಅವನು ಅಗೋಚರನಾಗಿರುವನೆಂಬುದೇ ಅವನ ವಿಷಯದಲ್ಲಿ ಏನನ್ನೂ ಹೇಳದೇ ಇರಲಿಕ್ಕೆ ದೊಡ್ಡ ಕಾರಣವಾಗಿದೆ. ಒಂದಕ್ಕೊಂದು ವಿರೋಧವಾದ ವಾದಗಳಿಂದ ದೇವರು ಇರುವನೆಂಬುದನ್ನು ಒಪ್ಪದೇ ಇದ್ದರೆ ಕೆಟ್ಟು ಹೋಗುತ್ತೀರಿ, ಎಂದು ಜನವನ್ನು ಗದರಿಸಿ ಆ ರೀತಿಯಾಗಿಯೂ ಆಸ್ತಿಕರಿಗೆ ದೇವರು ಯಾರು ಎಂತು ಎಂಬುದನ್ನು ತೋರಿಸಲಿಕ್ಕಾಗದ ಪರಿಸ್ಥಿತಿ ಅವರದು, (2)

ಪ್ರಮಾಣಗಳು ಎಲ್ಲಿ ನಿಲ್ಲುವುವೋ ಅಲ್ಲಿ ನಾಸ್ತಿಕನ ವಿಶ್ವಾಸವು ನಿಲ್ಲುತ್ತದೆ. ನಮ್ಮ ತಿಳುವಳಿಕೆಗೆ ನಿಲುಕದೆ ಇರುವ ಮತ್ತು ಈ ವಿಶ್ವದ ಎಲ್ಲ ವಿಭಾಗಗಳಿಗೂ ಬೇಕಾದ ಶಕ್ತಿ ಕಾರಣಗಳಿರುವ ಈ ಅದ್ಭುತ ವಿಶ್ವದ ಅಸ್ತಿತ್ವವನ್ನು ಕುರಿತು ಅವನು ನಂಬುತ್ತಾನೆ. ಈ ಅಸ್ತಿತ್ವದ ನಿಯಮಗಳು ನಮ್ಮ ಬುದ್ಧಿಶಕ್ತಿಗೆ ಎಟುಕಲಾರದಷ್ಟು ಪ್ರಯಾಸಕರವಾಗಿರು

---

* "ನಾಸ್ತಿಕವಾದದ ಸೂಕ್ತಿಗಳು"-1873; (The Gospel of Atheism.) (2) "ನಾನೇಕೆ ದೇವರನ್ನು ನಂಬುವುದಿಲ್ಲ?"-1887. (Why I do not Believe in God?)

ವಾಗ ಈ ವಿಶ್ವದ ಮಹಿಮೆಯನ್ನು ಇನ್ನೂ ಆಚೆಗಿನ ಅವ್ಯಕ್ತ ಲೋಕಕ್ಕೆ ಕೊಂಡೊಯ್ಯುವುದರಲ್ಲಿ ನಾಸ್ತಿಕನು ಮಾನಸಿಕವಾಗಿ ತೃಪ್ತಿಯನ್ನು ಹೊಂದಲಾರನು. ನಮ್ಮ ಸೌರಕೋಶವು ಈ ಭೂಗೋಲದಲ್ಲಿ ವ್ಯಾಪ್ತವಾದ ಹವೆಯನ್ನು ಮಾತ್ರ ಆಸ್ವಾದಿಸಬಲ್ಲದಲ್ಲದೆ ಬೇರೆ ಇಲ್ಲ. ಈ ಆವರಣದಿಂದ ಆಚೆಗೆ ಇರುವ ವಿವರಗಳನ್ನು ತಿಳಿಯಲು ನಮ್ಮ ಬುದ್ಧಿಶಕ್ತಿಗೆ ಸಾಧ್ಯವಿಲ್ಲ. (*)

ನಾನು ಈ ಪ್ರಬಂಧದ ಸಾರಾಂಶವನ್ನು ಹೀಗನ್ನುತ್ತಾ ಕೊನೆಗಾಣಿಸಿದೆನು: "ದೇವರು ಇದ್ದಾನೆಂಬುದನ್ನು ನಾನು ನಂಬಲಾರೆನು, ಸಕಾರಣವಾದ ನಂಬಿಕೆಯಲ್ಲಿ ನನ್ನ ಮನಸ್ಸನ್ನು ನಿಲ್ಲಿಸಲು ತಕ್ಕ ಆಧಾರವು ಬೇಕು; ನಿಸ್ಸಹಾಯಕ ಜೀವಿಗಳು ಕೊರಗುವಾಗ ಆ 'ಸರ್ವಶಕ್ತ'ನು ಸುಮ್ಮನಿರುವುದನ್ನು ನೋಡಿ ನನ್ನ ಹೃದಯವು ಉದ್ರೇಕಗೊಂಡಿದೆ. ನನ್ನ ಸುತ್ತಮುತ್ತಲು ತಾಂಡವವಾಡುತ್ತಿರುವ ಅನ್ಯಾಯ, ಹಿಂಸೆ, ಮತ್ತು ಅಸಮತೆಗಳಿಗೆ ವಿರೋಧವಾಗಿ ನನ್ನ ಆತ್ಮಸಾಕ್ಷಿಯು ಪ್ರತಿಭಟಿಸುತ್ತಿದೆ. ಆದರೆ ನಾನು ಮಾನವನನ್ನು ನಂಬಿದ್ದೇನೆ, ರಕ್ಷಿಸಲಿಕ್ಕೆ ಮಾನವನಿಗೆ ಇರುವ ಶಕ್ತಿಯಲ್ಲಿ, ರೂಪಿಸಲಿಕ್ಕೆ ಮಾನವನಿಗೆ ಇರುವ ಚೈತನ್ಯದಲ್ಲಿ, ಜಯಪ್ರದನಾಗಲು ಅವನಲ್ಲಿ ಇರುವ ಬುದ್ಧಿ, ಪ್ರೀತಿ ಮತ್ತು ಕರ್ತವ್ಯದಕ್ಷತೆಗಳಲ್ಲಿ ನನಗೆ ವಿಶ್ವಾಸವಿದೆ."

ಈ ಜಗತ್ ನಿರ್ಮಾಣವನ್ನು ಕುರಿತು, ಮತ್ತು ಅದರ ಅಸ್ತಿತ್ವವನ್ನು ಬಣ್ಣಿಸುವ ಅಭಿಪ್ರಾಯಗಳು ಸ್ವಾಭಾವಿಕವಾಗಿ ಉತ್ಪ್ರೇಕ್ಷೆಗೆ ಅವಕಾಶವೀಯುತ್ತದೆ. ನಾಸ್ತಿಕತೆಗೂ ಅದ್ವೈತವಾದಕ್ಕೂ ಇರುವ ತೀವ್ರ ವ್ಯತ್ಯಾಸವು ಇಲ್ಲಿಂದ ಪ್ರಾರಂಭವಾಗುತ್ತದೆ. ಇವೆರಡೂ ಮಾನವ ಜ್ಞಾನಕ್ಕೆ ಎಟುಕದ ನಿಗೂಢ ಅಸ್ತಿತ್ವವನ್ನು ಪ್ರತಿಪಾದಿಸುತ್ತದೆ. ಆದರೆ ನಾಸ್ತಿಕನಿಗೆ ಅದು ಕೇವಲ ಭೌತಿಕವಾಗಿದ್ದು ತಿಳಿಯಲಿಕ್ಕೆ ಮತ್ತು ಅದರ ರಹಸ್ಯವನ್ನರಿಯಲು ಕಷ್ಟವಾದರೆ ಅದ್ವೈತಿಗೆ ಅದು ಪಾರಮಾರ್ಥಿಕವಾಗಿ, ಅಗೋಚರವಾಗಿ ಮತ್ತು ತನ್ನ ತಿಳುವಳಿಕೆಗೆ ಎಟುಕದಂಥದ್ದಾಗಿ ತೋರುತ್ತದೆ. ಜೀವ ಮತ್ತು ಚೈತನ್ಯವು ವಸ್ತು (matter) ವಿಗೆ ಅನ್ವಯಿಸದ್ದು ಅದರ ಒಂದು ಅಂಗವಾಗಿ ತೋರಿದರೆ ಇನ್ನೊಬ್ಬನಿಗೆ ಅವು ಅದೇ ವಸ್ತುವಿಗೆ ಸಂಬಂಧಿಸದ ಅತ್ಯವಶ್ಯಕವಾದ ಮತ್ತು ಮೂಲಭೂತವಾದ ಜೀವನದ ಮಿತಿಯೊಳಗೆ ಅಡಗಿದಂತೆ ಇದೆ. ಸ್ಪಿನೋಜಾ (Spinoza) ಇವನ ವಿವರಣೆಯ ವಾದಕ್ಕೆ ನಾನು ಆಕರ್ಷಿತನಾದರೂ ವಿಜ್ಞಾನದ ಪ್ರಭಾವವು ನನ್ನ ಮೇಲೆ ಪರಿಣಾಮವನ್ನು ಬೀರುವಾಗ ಜೀವ ಮತ್ತು ಮನಸ್ಸನ್ನು

(*) "ನಾನೇಕೆ ದೇವರನ್ನು ನಂಬುವುದಿಲ್ಲ?" - 1887.

ಕುರಿತು ಇರುವ ಎಲ್ಲ ಸಮಸ್ಯೆಗಳಿಗೆ ವಿವರಣೆಯನ್ನು ಜೀವಶಾಸ್ತ್ರ ರಾಸಾಯನ ಶಾಸ್ತ್ರಜ್ಞರಿಂದ ಪಡೆಯಲು ನನ್ನನ್ನು ಪ್ರೇರೇಪಿಸಿತು. ಈ ಶಾಸ್ತ್ರಜ್ಞರಾದರೋ ತುಂಬಾ ಶ್ರಮಿಸಿದ್ದಾರೆ, ವಿವರಿಸಿದ್ದಾರೆ; ಆದರೂ ಸರ್ವವನ್ನೂ ಅವರಿಗೆ ವಿವರಿಸಲು ಸಾಧ್ಯವಾಗಲಿಲ್ಲವೇ? ಹೀಗೂ ಪ್ರಯೋಗಿಕವಾಗಿ ಇದನ್ನು ತಿಳಿಯುವುದೇ ಸುರಕ್ಷಿತವಾದ ದಾರಿಯೆಂದು ನಾನು ಖಂಡಿತವಾಗಿಯೂ ಭಾವಿಸಿದೆನಲ್ಲದೆ ಹಿಂದೇ ಅಪೂರ್ವಕವಾದ ಮನೋದ್ವೇಗದ ನೆನಪು ಪ್ರಮಾಣಪೂರ್ವಕವಾಗಿ ನನಗೆ ಹೇಳಲಾಗದೇ ಇದ್ದುದನ್ನು ನಂಬಲಿಕ್ಕೂ ನಾನು ಬಹಳ ಸಮಯ ತೆಗೆದುಕೊಳ್ಳಬೇಕಾಯಿತು. ಜೀವನವು ಗೌಣವಾದುದೆಂದು ನಾನು ಅನುಮಾನಿಸದೆನಲ್ಲದೆ ಆ ಅಭಿಪ್ರಾಯವು ನನ್ನಲ್ಲಿ ನಾಸ್ತಿಕತೆಯನ್ನು ಪ್ರಚೋದಿಸಿತು, ವೈಜ್ಞಾನಿಕವಾಗಿ ಜೀವವು ಸತ್ವಾಧಿಪವಾದುದಲ್ಲ, ಅದೊಂದು ಕುಟ! (ಮೃತ್ಯುವಿನವಾದುದು). ಇದು ಅಸ್ತಿತ್ವದ ಒಂದು ರೀತಿ ನೀತಿಯಲ್ಲ; ಇದು ಕೆಲವು ರೀತಿನೀತಿಗಳ ಗುಣಧರ್ಮವಾಗಿದೆ, ವಸ್ತು (matter) ವನ್ನು ಒಂದು ರೀತಿಯಾಗಿ ನಿರ್ಮಿಸಲ್ಪಟ್ಟುದರ ಪರಿಣಾಮವೇ ಜೀವವಾಗಿದೆ; ಆದರೆ ಯಾವಾಗ ಪುನಃ ಇದು ಮಾರ್ಪಡಿಸಲಾಗುವುದೋ ಆವಾಗ ಇದು ಇವರ ಹಿಂದಿನ ಪರಿಣಾಮವನ್ನು ಕಳೆದುಕೊಳ್ಳುವುದು, ಹೀಗೆ ಮಾರ್ಪಡಿಸಲಾಗುವುದರ ಪರಿಣಾಮವೇ ಸಾವು ಎಂದು ನಾವು ಹೇಳುತ್ತೇವೆ. ವಸ್ತು (matter) ವಿನ ಈ ಎರಡು ಬಗೆಯ ಮಾರ್ಪಾಡುಗಳನ್ನು ಹುಟ್ಟು ಮತ್ತು ಸಾವು ಎಂಬ ಎರಡು ಅನುಕೂಲವಾದ ಶಬ್ದಗಳಿಂದ ಕರೆಯುತ್ತೇವೆ, ಇವುಗಳಲ್ಲಿ ಒಂದು ಯಾವಾಗಲೂ ಇನ್ನೊಂದಕ್ಕಿಂತ ಮುಂಚಿತವಾಗಿ ಬರುವುದು ಕಂಡುಬರುತ್ತದೆ.*

ಈ "ವಸ್ತು" ದ್ರವ್ಯದತ್ತೊಂದನ್ನು ಕುರಿತು ವಿವರಿಸಲು ರಾಸಾಯನ ಶಾಸ್ತ್ರದ ಪರಿಷ್ಕೃತದನಂತರ ನನ್ನನ್ನು ಸರ್ವ ಪ್ರಚಾರಕನಾಗಿ ಜಯಪ್ರದಗಳಿಸಲು ಕಾರಣವಾದ ಮತ್ತು ಮನನೀಯವೂ ಸುಲಭವೂ ಆದ ರೀತಿಯಲ್ಲಿ ನೋಡುವ ಮತ್ತು ಜನಕ್ಕೆ ಅರ್ಥವಾಗುವ ಕ್ರಮವನ್ನು ಅನುಸರಿಸದೆನು, ಚಿತ್ರಗಳು ಹೇಗೋ ಹಾಗೆಯೇ ಈ ತರಹದ ಪ್ರತಿಪಾದನೆಯನ್ನು ಕೇಳುವವನಿಗೆ ಇದು ನಿಜವೆನಿಸುವಂತೆ ಅವನಿಗೆ ತೋರುಯುತ್ತದೆ. ಪ್ರಕಾಶಮಾನವಾದ ಹವಳ ಮಣಿಯ ತಾಯಿಯಿಂದೆನಿಸಿದ ರತ್ನವು ಕೋಮಲವೂ ರಮಣೀಯವೂ ಆದ ವರ್ಣಾಂತರಂಗಗಳಿಂದ ಕೂಡಿ ಉಜ್ವಲಕಾಂತಿಯನ್ನು ಹೀಗೆ

---

* "ಹುಟ್ಟು, ಸಾವು ಮತ್ತು ಅಮರತ್ವ." (Life, Death and Immortality - 1886.) Mrs. Besant.

ಬೀರುತ್ತದೆಂದು ಎಲ್ಲರಿಗೂ ತಿಳಿದಿದೆ. ಒಂದು ಚೂರು ಮೇಣದ ಕಡ್ಡಿಯು ದೊರಗಾದ ಮೇಲ್ಭಾಗವು ಇದಕ್ಕಿಂತ ಎತ್ತ ಬೇರ್ಪಟ್ಟಿದೆಯೆಂದೆನಿಸಿದರೂ ಆ ದೊರಗಾದ ಕಪ್ಪು ಮೇಣವನ್ನು ತೆಗೆದುಕೊಂಡು ಹವಳದ ಸಮೀಪ ಹಿಡಿದು ಉಜ್ಜಿದರೆ ಆ ಮೇಣದ ಕಡ್ಡಿಯು ಅದರ ರೂಪವನ್ನು ಹೊಂದುವುದಲ್ಲದೆ ಅದನ್ನು ವಿಲಕ್ಷಣ ಕಾಂತಿಪೂರ್ಣವಾಗಿ ಮಾಡಿದರೆ ಅದು ಹಿಂದಿದ್ದ ಕಾಂತಿಹೀನ ಮೇಲ್ಮೈಯಿಂದ ಬೇರ್ಪಟ್ಟು ಹಿಂದಕ್ಕೆ ನಮ್ಮೆಡೆಗೆ ನೋಡಿ ಮಿನುಗುತ್ತಿರುವುದು, ನಮ್ಮ ಬರಿದಾದ ಕಣ್ಣಿನಿಂದ ನೋಡಿ ತಿಳಿಯಲು ಅಸಾಧ್ಯವಾದರೂ ಆ ಹವಳ ಮತ್ತು ಹೊಸತಾಗಿ ಉತ್ತ.ಗದೆಯಂತೆ ಚಿಕ್ಕ ವರ್ಣಿತಗಳಿಂದ ಕೂಡಿದ್ದು ಅದರ ಮೇಲೆ ಬೆಳಕಿನ ಕಿರಣಗಳು ಬಿದ್ದಾಗ ಅದು ಪ್ರಕಾಶಮಾನವಾಗಿ ಮಿನುಗುತ್ತವೆ, ಅಲ್ಲದೆ ಸಮುದ್ರತೀರದಲ್ಲಿ ಉರುಳುವ ನೀರಿನ ಅಲೆಗಳಂತೆ ತೀರ ಹಿಂದಕ್ಕೆ ಸರಿದು ಪುನಃ ಹಾಯುವ ತೆರೆಗಳ ಧುಮುರಿಯಂತೆ ಮೆರುಗಾಗಿ ತೋರುತ್ತದೆ. ಆ ಪ್ರಕಾಶಮಾನವಾದ ಪ್ರತಿಯೊಂದು ಕಿರಣವು ಏಳು ವರ್ಣಗಳಿಂದ ಕೂಡಿರುವಂತೆ ಈ ಅಲೆಗಳು ಸಹ ಒಂದರಿಂದ ಒಂದು ದೊಡ್ಡದಾಗಿ ಯಾ ಚಿಕ್ಕದಾಗಿದ್ದು ಆ ವರ್ತನಗಳಿಗೆ ಕಾರಣವಾದ, ಮಾಯಾರೂಪದ ಅಲೆಗಳೆಂಬ ಬಿನ್ನಗಳು ನಮ್ಮ ಕಣ್ಣಿಗೆ ಬೀಳುವಾಗ ನಿಜಕ್ಕೂ ಅದು ಬೆಳಕಿನ ವರ್ಣರಂಜಿತ ಮತ್ತು ಹವಳ ಕಾಂತಿಯನ್ನು ಬೀರುವ ಕಿರಣಗಳ ಅತಿಯಾಗಿ ಮಾರ್ಪಡುವುದಲ್ಲದೆ ಸೃಷ್ಟಿಯು ಈ ವಸ್ತು (matter) ವಿನಿಂದ ಉದ್ಭವಿಸುವ ವೈಚಿತ್ರ್ಯವಾಗಿದೆ. ಆ ಕಾಂತಿಹೀನವಾದ ಕಪ್ಪು ಮೇಣಕ್ಕೆ ಅದೇ ರೀತಿಯ ವರ ಬಿನ್ನಗಳನ್ನು ನಿರ್ಮಿಸಿದರೂ ಅದರ ಪ್ರಕಾಶವು ಆ ಚಿಪ್ಪಿನಿಂದ ಹೇಗೂ ಬೇರ್ಪಡಿಸದೆಯೇ ಇರುವುದು. ಇದೇ ವಿವರಣೆಯನ್ನು ಅನುಸರಿಸಿದರೆ ಬಣ್ಣವು ವಸ್ತು (matter) ವಿನ ಒಂದು ಮಾರ್ಪಡಿಗೆ ಅಡಗಿದ್ದರೆ ಮತ್ತು ಅದರ ಇನ್ನೊಂದೆಡೆ ಕಾಂತಿಹೀನವಾದ ಹೊರಮೈಯು ಇದ್ದರೆ ಹೇಗೋ ಹಾಗೆಯೇ ಈ ಜೀವವು ಸಹ ವಸ್ತು (matter) ವಿನ ಕಟ್ಟುಪಾಡು ಮತ್ತು ಅವುಗಳ ಪರಿಣಾಮಗಳಿಗೆ ಒಳಗಾಗಿರಲು ಮಿಶ್ರಿತಿದ ಕಟ್ಟುಪಾಡುಗಳ ಪರಿಣಾಮವು ನಾವು ಎಂಬುದನ್ನು ಇಲ್ಲಿ ಗಮನಿಸುವುದು. ⊛

ಮಾನವನ ಆತ್ಮಶಕ್ತಿಯನ್ನು ಕುರಿತೂ ಸಹಜವಾಗಿ ಇದೇ ರೀತಿಯಾದ ವಿವರಣೆಯನ್ನು ಕೊಡಲಾಗಿದೆ. "ಆತ್ಮಶಕ್ತಿ" ಯು ಪ್ರಯುಕ್ತನವಾದ ಮಾನಸಿಕ ಚಟುವಟಿಕೆಯು ದೈಹಿಕ ಶಕ್ತಿಯನ್ನು ಅವಲಂಬಿಸಿದೆ. ಮಗುವು ಹುಟ್ಟಿದಾಗ ಅದು ಮಾನಸಿಕವಾಗಿ ಯಾವ ಚಿಹ್ನೆಯನ್ನೂ ತೋರಿಸದು. ಕಾಲಕಾಲ ಅದಕ್ಕೆ ಹಸಿವು,

---

⊛ Life, Death & Immortality," Mrs. Besant, 1886.

ತೃಪ್ತಿ, ಶೀತ, ಕಾವು ಇವೇ ಪ್ರಮುಖ ಗೋಚರವಾಗುವಂಥವುಗಳಾಗಿವೆ.
ಅನಂತರ ನಿಧಾನವಾಗಿ ಪ್ರಧಾನಾಂಗಗಳು ಕೆಲಸಕ್ಕೆ ತೊಡಗಿ ಮತ್ತೆ
ಇನ್ನೂ ನಿಧಾನವಾಗಿ ನರ-ನಾಡಿ ಮತ್ತು ಅಂಗಗಳು ಚಲಿಸಲಾರಂಭವಾ
ಗುತ್ತವೆ. ಪ್ರಾರಂಭದಲ್ಲಿ ಒಂದು ನಿಶ್ಚಿತ ಧ್ಯೇಯವಿಲ್ಲದೆ ಕಡೆಗೆ
ಅಂಗಗಳಲ್ಲಿ ಒಂದಕ್ಕೊಂದು ಸುಪ್ತ ಮನೋನಿರ್ಧಾರಕ್ಕೊಳಗಾಗಿ ನಡೆ
ಸಲ್ಪಡುತ್ತವೆ. ಇಲ್ಲೂ ಈ ಯಂತ್ರವನ್ನು ನಡೆಸುವ ಜ್ಞಾನಪೂರ್ಣ
ವಾದ ಶಕ್ತಿಯು ಇರುವ ಚಿಹ್ನೆಯು ಆ ಮಗುವಿನಲ್ಲಿರುವಂತೆ
ತೋರದು; ಆದರೆ ಜ್ಞಾನವನ್ನು ಹೊಂದುವ ಮತ್ತು ಚಿಹ್ನಿಸು
ವ ಮತ್ತು ಅದರಂತೆ ಅಂಗಾಂಗಗಳನ್ನು ಚಲಾಯಿಸುವ ಚಿಹ್ನೆ
ಯು ಇದ್ದೇ ಇದೆ. ದೇಹವು ಯಾವಾಗ ಬೆಳೆಯುತ್ತೋ ಮನ
ಸ್ಸೂ ಸಹ ಅದರೊಡನೆಯೇ ಬೆಳೆಯುತ್ತದೆ. ಹೀಗೆ ಆ ಮಗು
ವಿನ ಮನಸ್ಸು ಬಹು ತ್ವರಿತವಾಗಿ ಮತ್ತು ತೀವ್ರವಾಗಿ ವಿಷ
ಯಗಳನ್ನು ಕಲಿತು ಹೇಳುವ, ಅಲ್ಪವಾಗಿ ತಿಳಿದ ಮತ್ತು
ತಿಳಿದುಕೊಳ್ಳಲಾರದ ವಿಷಯಗಳನ್ನೆಲ್ಲಾ ಕೂಡಿ ಎಲ್ಲೆ ಮನಸ್ಸು
ಅಂತೆಯೇ ಬೆಳೆಯುತ್ತದೆ. ವರ್ಷಗಳು ಕಳೆದಂತೆ ಮಗು
ವಿನ ಮನಸ್ಸು ಅದರ ದೇಹದೊಡನೆಯೇ ಬಲಿತು ಹರಯ
ದಲ್ಲಿಯೇ ಬಲಿಷ್ಠವಾಗಿರುವುದು, ಪ್ರಾಯವೇರುತ್ತಾ ಬಂ
ದಾಗ್ಯೂ ದೈಹಿಕ ಶಕ್ತಿಯು ಇಳಿಯುತ್ತದೆ, ಮಾನಸಿಕ ಬಲವು
ಕುಗ್ಗುತ್ತದೆ. ಹೀಗೆ ಪ್ರಾಯವೇರಿ ವೃದ್ಧಾಪ್ಯಕ್ಕೆ ಬಂದಾಗ ದೇಹ
ಮತ್ತು ಮನಸ್ಸು ಶನೈಃ ಎರಡನೇ ಬಾರಿಗೆ ಬಾಲ್ಯಾವಸ್ಥೆಯನ್ನು
ಪಡೆಯುತ್ತದೆ. ಚಿರಂಜೀವಿಯಾದ ಆತ್ಮವು ಅದರ ನೆಲೆವ
ನೆಯಲ್ಲಿ ಕುಗ್ಗಿಹೋಗುತ್ತದೆಯೇ? ಅಥವಾ ವ್ರಣಯುಕ್ತ
ವಾದ ದೇಹದಲ್ಲಿ ಜತೆಗೆ ಅದು ದುಃಖದಲ್ಲಿ ಮುಳುಗಿರುವು
ದೇ? ಹಾಗಿದ್ದರೆ "ಆತ್ಮ"ವೆಂಬುದು ಚೇತನವಿಲ್ಲದಾಗಿರುತ್ತದೆ.
ಅಥವಾ ಒಬ್ಬ ವ್ಯಕ್ತಿಯ ಒಂದು ಪ್ರಮುಖ ಭಾಗವಾಗಿದ್ದು ಅದ
ನಿಂದ ಬೇರ್ಪಡುತ್ತದೆ; ಹೇಗೆಂದರೆ ಮುದುಕನ ಮನಸ್ಸು
ಮುಪ್ಪಾದರೂ ಅವನು ಒಂದು ಮಗುವಿನ ಅವಸ್ಥೆಯನ್ನು
ಹೊಂದಿ ತೃಪ್ತನಾಗಿದ್ದರೂ ನರಳಲಾರನು. ಹೀಗೆ ದೇಹ ಮತ್ತು ಮ
ನಸ್ಸು ಇವುಗಳೊಡಗೂಡಿ ಬೆಳೆದು ಕಡೆಗೆ ಒಟ್ಟಿಗೆ ಬೆಂಡಾಗು
ವುದನ್ನು ನಾವು ನೋಡಬಹುದಾದರೂ ಮಾನಸಿಕ ಚಟುವಟಿಕೆಗ
ಳು ದೈಹಿಕ ಪರಿಸ್ಥಿತಿಯ ಕಾರಣದಿಂದ ಕುಗ್ಗಿ ಅದರ ಚೇತನಶಕ್ತಿ
ಯು ನಿಂತುಹೋಗುವುದೆಂಬುದನ್ನು ತಿಳಿದಿದ್ದೇವೆ. ಮಾದಕ
ಪಾನೀಯ, ಹಲವು ಮೂಲಿಕೆಗಳು ಮತ್ತು ಜ್ವರವೂ ಮನಸ್ಸನ್ನು
ಕೆಡಿಸುತ್ತದೆ. ತಲೆಬುರುಡೆಗೆ ಧಕ್ಕೆ ಉಂಟಾದರೆ ಮನಸ್ಸಿನ
ಚಟುವಟಿಕೆಯು ನಿಲ್ಲುತ್ತದೆ; ಮತ್ತು ಆತ್ಮವು ವೈದ್ಯನ ಶಸ್ತ್ರ

ಚಿಕಿತ್ಸೆಯೊಡನೆ ಹಿಂದಿರುಗುತ್ತದೆ. ಆತ್ಮಕ್ಕೆ ಕನಸುಗಳನ್ನು ಕಾಣುವುದರಲ್ಲಿ ಪಾಲು ಇದೆಯೆ? ಬುದ್ಧಿಮಾಂದ್ಯದಲ್ಲಿ ಮತ್ತು ಹುಚ್ಚಿನಲ್ಲಿ ಆತ್ಮವು ಇದೆಯೆ? ಹುಚ್ಚನು ಕೊಲೆಗಡುಕನಾಗಿ ಆತ್ಮವೂ ಅದರಲ್ಲಿ ಅಪರಾಧಿಯೆ? ಅಥವಾ ತಾನು ಗಳಿಸದ ಇಂತಹ ಅಪರಾಧವೊಂದನ್ನು ಅದರ ಹಿಂದಿನ ಅಂಗವು ಮಾಡಿದರೆ ಅದು ನಿಸ್ಸಹಾಯಕವಾಗಿ ನೋಡುತ್ತಾ ಇರುವುದೇ? ಆತ್ಮವು ಸಚೇತನಾವಸ್ಥೆಯ ಮೂಲಕ ಮಾತ್ರ ಕೆಲಸ ಮಾಡುವುದಾದರೆ ಸ್ವತಂತ್ರಾವಸ್ಥೆಯಲ್ಲಿ ಅದಕ್ಕೆ ಸಂಬಂಧಿಸಿದುವುಗಳಿಂದ ಬೇರ್ಪಟ್ಟು ಅದರ ಪರಿಸ್ಥಿತಿಯೇ ಬದಲಾಗುವುದೇ? ಅದು ದ್ವೈತಾವಸ್ಥೆಯನ್ನು ಹೊಂದಿದ್ದು ಇದ್ದಾಗ ಅದು ಹಿಂದೆ ಇದ್ದ ಅವಸ್ಥೆಗೆ ಸಂಬಂಧಿಸಿದ ಪರಿಸ್ಥಿತಿಗೆ ಸಮಾನವಾಗಿರುವುದೇ?*

ನಾನು ಆತ್ಮ ಅಥವಾ ಮಾನಸಿಕ ವರ್ಚಸ್ಸಿನ ಮೇಲೆ ಇಟ್ಟ ಅವಿಶ್ವಾಸವು ನಾನು ತಕ್ಷಣ ಮತ್ತು ಸಾವಧಾನದಿಂದ ಮಾಡಿದ ಪರಿಶೀಲನೆಯ ಫಲವೆಂದು ತಿಳಿಯಬಹುದು. ನಾನು 1885ರಲ್ಲಿ ಬರೆದಂತೆ ನಾವು ಹಲವೆಡೆ ಕೇವಲ ವಿಶ್ವಾಸಕ್ಕಿಂತ ಪ್ರಮಾಣವೇ ಮೇಲಾದುದಾಗಿದೆ. ಅಂದಿನ ಆ 1885ರ ಕಾಲದ ದಾರಿದ್ರ್ಯವೂ ಕ್ರೂರಕೃತ್ಯವೂ ಬಡತನವೂ ಇಲ್ಲದಾಗುವುದೆಂದು ನನಗೆ ಸಾಧ್ಯವಾದರೆ ಹೀಗೆ ಸಂತೋಷದಿಂದ ನಂಬುವೆನೋ ಹಾಗೇ ರೀತಿ ನಾನು ಎಲ್ಲರಿಗೂ ಸಂತೃಪ್ತಿಯಾದ ಚಿರಂಜೀವಿತ್ವವು ಉಂಟಾಗುವುದೆಂದು ನಂಬುವೆನು. ಆದರೆ ನನ್ನ ಮನಸ್ಸಿಗೊಪ್ಪುವಂತೆ ಸಾಕ್ಷ್ಯಪೂರ್ಣವಾದ ಆಧಾರವಿಲ್ಲದೆ ಅಂತಹ ಅಸಂಭವ ವಿಚಾರಗಳನ್ನು ನಂಬಲಿಕ್ಕೆ ನನಗೆ ಸಾಧ್ಯವಿಲ್ಲ. ಚಿರಂಜೀವಿತ್ವವು ತುಂಬಾ ಅನಿಶ್ಚಿತ ವಿಚಾರವಾಗಿದೆ. ಅದರ ಪರವಾಗಿ ಯಾವ ತರಹದ ಆಧಾರವೂ ಈ ವರೆಗೆ ಹೇಳಲ್ಪಡುತ್ತಿಲ್ಲ. ನಾನು ಚಿರಂಜೀವಿಯಾಗಿರಬೇಕೆಂದು ಇಚ್ಛಿಸಿದರೂ ಅಂತಾಗುವೆನೆಂಬುದನ್ನು ನಂಬಲಾರೆನು. ಮುಂದೆ ಈ ಪರಿಪಕ್ವತೆಯಲ್ಲಿ ಇಲ್ಲಿ ಪ್ರತಿಪಾದಿಸಿದಂತೆ ನಾನು ಅಂದು ಕೈಗೊಂಡ ಅನ್ವೇಷಣೆಯಿಂದ ನಾನು ಆ ವರೆಗೆ ನಂಬಿದ್ದ ವಿಷಯಗಳಿಗೆ ತಕ್ಕ ಆಧಾರವಿಲ್ಲವೆಂದು ತಿಳಿದಾಗ ನಾನು ನಿರ್ದಾಕ್ಷಿಣ್ಯವಾಗಿ ಅವುಗಳನ್ನು ನಂಬಿದ್ದೆನಲ್ಲಾ ಎಂಬ ತಾತ್ವಿಕವಾದವನ್ನು ನಿರಾಕರಿಸಿ ಕ್ರಿ.ಶ. 1874ರಿಂದ 1886ರ ವರೆಗಿನ ಕಾಲವನ್ನು ಕಳೆದೆನು. ಹೊರಗಿನ ಚಂಡಮಾರುತ, ಆಕ್ರೋಶ ಮತ್ತು ಆಂದೋಲನಗಳೆಡೆಯಲ್ಲಿ ನನ್ನ ಆವೇಶವನ್ನು ಅತ್ಯುನ್ನತ ಸ್ವಾತ್ವಿಕ ಮನೋಭಾವವು ತಣಿಸುತ್ತಿದ್ದಾಗ ಅದು ನನ್ನ ಮಾನಸಿಕ ದಾಹವನ್ನು ಸಂತೃಪ್ತಿಗೊಳಿಸುತ್ತಿತ್ತು. ನನಗೆ ದೇವರೊಬ್ಬನು ಇಲ್ಲದಿದ್ದುದರಿಂದ ನಾನು ನ್ಯಾಯವಾಗಿಯೇ ನಾಸ್ತಿಕನೆಂದು ಕರೆದುಕೊಂಡೆನು, ಅಲ್ಲದೆ ನನ್ನ ದೃಷ್ಟಿಯಲ್ಲಿ

---

* ಹುಟ್ಟು, ಸಾವು ಮತ್ತು ಅಮರತೆ – ಆನಿ ಬೆಸೆಂಟ್ – 1886.

ಈ ಭೂಮಿಯನ್ನು ಆವರಿಸಿದ ದಿಗಂತವನ್ನು ಮಾತ್ರ ವ್ಯಾಪಿಸುತ್ತ. ನಾಸ್ತಿಕರೆಂಬ ಆ ಹೆಸರು ನನಗೆ ಇಂದು ಎಷ್ಟು ಪ್ರಿಯವೋ ಅದೇ ಪ್ರಮಾಣದಲ್ಲಿ ಬಂದು ಆ ಹೆಸರಿಗೆ ಮತ್ತು ಅದಕ್ಕೆ ಸಂಬಂಧಿಸಿದುವುಗಳಿಗೆ ಭಾಗಿಯಾಗಿ ಇದ್ದೇನು. ಓ ವ್ಯಸನ ಆಡಂಬರದಿಂದ ಪ್ರಕಾಶಬದ್ಧದಾದ ಬಿರುದುಗಳಲ್ಲಿ ನಾಸ್ತಿಕನೆಂಬ ಬಿರುದು ಬಹು ಶ್ರೇಷ್ಠವಾದುದಾಗಿದೆ. ಅದು ಲೋಕದ ವೀರರ ನಿಸ್ವಾರ್ಥವಾಗಿ ಕೊಡಲ್ಪಡುತ್ತಿರುವ Order of Merit ಪದವಿಯಾಗಿದೆ. ಹಲವು ಮಹಾಚಿಂತಕರು ಬಹು ದೀರ್ಘವಾಗಿ ಆಲೋಚಿಸುವ ತಾತ್ವಿಕರೂ ಉತ್ಸಾಹೀ ಸುಧಾರಕರೂ ಪ್ರಗತಿಗಾಗಿ ಪರಿಶ್ರಮಿಸಿದ ಅಗ್ರಗಾಮಿಗಳೂ ತಮ್ಮ ತಮ್ಮ ಕಾಲದಲ್ಲಿ ನಾಸ್ತಿಕರೆಂದೇ ಘೋಷಿಸಲ್ಪಟ್ಟಿದ್ದಾರೆ, ಕೋಪರ್ನಿಕಸ್ನ ಸಮಾಧಿಯ ಮೇಲೂ ಹಾಗೆಂದೇ ಕೆತ್ತಲಾಗಿತ್ತು. ಬ್ರೂನೋನ ಸಾವಿನ ಸುತ್ತಲೂ ಅಂತೆಯೇ ಹಾಡಲಾಗಿತ್ತು. ಸ್ಪಿನೋಜಾ, ಷೆಲ್ಲಿ, ವಾಲ್ಟೇರ್, ಹೇಯಿನ್, ಇವರೆಲ್ಲರೂ ಅದೇ ರೀತಿ ಗುರುತಿಸಲ್ಪಡಲಾಗಿತ್ತು. ನಾಸ್ತಿಕನೆಂಬ ಪದವು ವೀರನ ಯಶಸ್ಸು, ಸ್ವಾತಂತ್ರ್ಯ ತೇಜಸ್ಸು ಆಗಿದೆ. ಲೋಕದ ಚರಿತ್ರೆಯಲ್ಲಿ ನಾಸ್ತಿಕನೆಂದರೆ ಅಭಿವೃದ್ಧಿಗೆ ಮಾರ್ಗದರ್ಶಕನೆಂಬ ಅರ್ಥವಾಗಿದೆ. ಎಲ್ಲಿ ಅವನ ಮೊರೆಯು ಕೇಳಲ್ಪಡುತ್ತದೋ ಅಲ್ಲಿ ಮಾನವಕುಲದ ಉದ್ಧಾರದ ಬಗ್ಗೆ ಇನ್ನೊಂದು ಹೆಜ್ಜೆ ತೆಗೆಯಲಾಗಿದೆಯೆಂದು ನಾವು ಖಂಡಿತವಾಗಿಯೂ ಹೇಳಬಹುದಾಗಿದೆ. ಜಗತ್ತಿನ ಸುಧಾರಕರನ್ನು ಹಲವು ಬಾರಿ ನಾಸ್ತಿಕರೆಂದು ಕರೆಯಲ್ಪಟ್ಟಿದ್ದಾರಲ್ಲದೆ ಅನಂತರ ಅವರು ದೇವತೆಗಳೆಂದು ಪೂಜಿಸಲ್ಪಟ್ಟಿದ್ದಾರೆ. ಸ್ವತಂತ್ರ ಮನೋಭಾವದವರ ಸೇನೆಯಲ್ಲಿ ನಾಸ್ತಿಕರು ಮುಂದಿರುವವರಲ್ಲದೆ ಅವರ ಮೇಲೆಯೇ ಹೋರಾಟದ ಭಾರವು ಬೀಳುತ್ತದೆ. ಇತರರು ನೋವುಂಟಾಗದಂತೆ ತುಳಿದ ಮುಳ್ಳಿನ ಹಾದಿಯನ್ನು ಅವರು ತಮ್ಮ ಪಾದಗಳಿಂದ ತುಳಿದು ಸಮಮಾಡಿಸುತ್ತಾರೆ, ನಾಸ್ತಿಕರು ತಮ್ಮ ದೇಹವನ್ನರ್ಪಿಸಿ ಕಟ್ಟಿದ ಆ ಸಂಕದ ಮೇಲೆ ಇತರರು ನಡೆದು ಜಯಶಾಲಿಗಳೆಂದುಕೊಳ್ಳುತ್ತಾರೆ. ಪ್ರಗತಿಯ ಬಗ್ಗೆ ದುಡಿದ ಅಗ್ರಗಾಮಿಗಳಿಗೆ ಒಳ್ಳೆಯದಾಗಲಿ; ಸ್ವಾತಂತ್ರ್ಯವಾದಿಗಳ ಸೇನೆಯ ಸೇನಾನಿಗಳಿಗೆ ಸುಗಮವಾಗಲಿ; ಲೋಕವನ್ನು ಅಭಿವೃದ್ಧಿಗೊಳಿಸಲಿಕ್ಕಾಗಿ ಸ್ವರ್ಗವನ್ನು ಮರೆತ ಮತ್ತು ಮಾನವನ ಮೇಲಿನ ಅಭಿಮಾನದಿಂದ ದೇವರನ್ನು ಮರೆತ ಆ ನಾಸ್ತಿಕರೆಂಬ ಹುತಾತ್ಮರಿಗೆ ಗೌರವವು ಸಲ್ಲಲ್ಪಡಲಿ!*

ಬಹು ತರದ ಕಷ್ಟಗಳೊಳಗಾಗಿ ನಾನು ಕಷ್ಟಪಡದೆ ಜಯಿಸಿ ಈ ವಿಶ್ವವನ್ನು ಸರಿಯಾಗಿ ಕಂಡುಕೊಂಡ ನನ್ನ ಅಲ್ಪ ಭಾವನೆಗೆ ಒಳಗಾದ ಚಿತ್ರವು ನನ್ನ ಹೃದಯಾಂತರಾಳದಲ್ಲಿ

---

* "ನಾಸ್ತಿಕವಾದದ ಸೂಕ್ತಿಮಾಲೆ" – 1876.

ಎಡೆಬಿಡದೆ ಉರುಳಿದ ಈ ಜೀವನ ಚಕ್ರವು ಹನ್ನೆರಡು ವರ್ಷಗಳ ಕಾಲದ ಅನುಭವವನ್ನು ಹೊತ್ತಿದೆ. ಬಹುಶಃ ನಾಸ್ತಿಕವಾದವು ಕೇವಲ ಕುಹಕವಾದುದೆಂದೂ ಮಾನಸಿಕವಾಗಿ ನಿಂದನೀಯವೆಂದೂ ಖಂಡಿಸಿದಾಗ ಅದನ್ನು ಕುರಿತು ನ್ಯಾಯವಾಗಿ ಆಲೋಚಿಸಲಿಲ್ಲವೆಂದೆನ್ನಬಹುದು. ಅದು ಮಾನವ ಸ್ವರೂಪದ ದೇವತೆಗಳ ಕಲ್ಪನೆಯ ಎಲ್ಲೆಯನ್ನು ಮೀರಿ ಎಲ್ಲಾ ಪರಿಶುದ್ಧವಾದ ಮತ್ತು ಸತ್ಯಭರಿತ ಸ್ಫೂರ್ತಿಯನ್ನೀಯುವಂಥದ್ದಾಗಿ ನಮ್ಮನ್ನು ಈ ಸೃಷ್ಟಿಯ ಮೂಲಭೂತ ರಹಸ್ಯದ ಎದುರಾಗಿ ತಂದು ನಿಲ್ಲಿಸುತ್ತದೆ. ಪ್ರಾರ್ಥನೆಯಲ್ಲಿ ಸಹಕಾರ್ಯ ಮಾಡುವ ಒಂದೇ ರೀತಿಯ ಆರಾಧನೆ ಮಾತ್ರ ಇದೆಯೆಂದು ನಾಸ್ತಿಕವಾದವು ಹೇಳುತ್ತದೆ; ಏಕೆಂದರೆ ವಿಶ್ವದ ಜೀವಿಗಳ ಮತ್ತು ಮಾನವ ಜನಾಂಗದ ಏಳಿಗೆಯಲ್ಲಿ ತೋರ್ಪಡಿಸುತ್ತಿರುವ ಮತ್ತು ನಮ್ಮ ಸುತ್ತಮುತ್ತಲೂ ಇರುವ ಮಹತ್ತಾದ ಮತ್ತು ಸುಂದರವಾದ ವಸ್ತುಗಳ ಅದ್ಭುತ ಜೀವಿಗಳ ಪ್ರಭಾವಕ್ಕೆ ಬೆರಗಾಗಿ ಅವುಗಳನ್ನು ಆರಾಧಿಸುವುದೇ ಆಗಿದೆ. ನಾವು ವಿಶ್ವದ ನಿಯಮಕ್ಕೆ ಶರಣಾಗಿ ತಲೆಬಾಗುವಾಗ ಮತ್ತು ಆದೇಶಕ್ಕೆ ವಿಧೇಯರಾಗಿ ನಮ್ಮ ಜೀವನವನ್ನು ನಡೆಸಿಕೊಂಡು ಹೋಗುವಾಗ ನಮ್ಮ ಹೃದಯವನ್ನು ಪ್ರಬಲ ಶಾಂತಿಯು ಸೂರೆಗೊಳ್ಳುತ್ತದೆ. ಪರಿಣಾಮವಾಗಿ ಸತ್ಯಕ್ಕೆ ಜಯವಿದೆಯೆಂದು ಕಂಡಾಗ ಆ ದಿವ್ಯಲೀಲೆಯಲ್ಲಿ ವಿಶ್ವಾಸವೂ ನಮ್ಮ ಜೀವನವನ್ನು ದೈವಿಕವಾಗಿ ಇನ್ನಷ್ಟು ಕಳೆಗೊಳಿಸಬೇಕೆಂಬ ಶಾಂತವಾದ ನಿರ್ಧಾರವೂ ನಮ್ಮಲ್ಲಿ ಮೂಡುತ್ತದೆ. ಈ ಮಾನವೀಯ ಜಗತ್ತಿನಲ್ಲಿ ದೈವಿಕ ಜೀವದ ಉಜ್ವಲ ತೆರೆಗಳು ಹೇಗೆ ಏಳುವುವೆಂಬುದನ್ನು ನಮ್ಮ ಅಗಾಧ ಧ್ಯೇಯಗಳೆಡೆಗೆ ಮತ್ತು ಅಂಧ ಕಾತರದ ಜೀವಿಗಳ ನೆಮ್ಮದಿಯಲ್ಲಿ ತೋರಿಸುತ್ತಿರಲು ನಾವು ಮೂಕವಿಸ್ಮಯದಿಂದ ವಿಶ್ವಕ್ಕೆ ಮೂಲಕಾರಕನನ್ನು ಹೊಂದು ಸ್ತಬ್ಧರಾಗಿ ನಿಲ್ಲುತ್ತೇವೆ. ಅಂಥಾ ಧ್ಯೇಯಗಳಿಂದ ನಾವು ನಿತ್ಯದ ಜೀವನಕ್ಕೆ ಬೇಕಾದ ಸ್ಫೂರ್ತಿಯನ್ನು ಪಡೆಯುತ್ತೇವೆ. ಅಷ್ಟೇ ಅಲ್ಲ, ಅದನ್ನು ಮೀರುವಂತೆ ಶ್ರಮಿಸುತ್ತೇವೆ. ಧ್ಯೇಯವನ್ನು ಕುರಿತಾದ ಧ್ಯಾನವೇ ನಿಜವಾದ ಪ್ರಾರ್ಥನೆಯಾಗಿದೆ. ಅದು ಸ್ಫೂರ್ತಿಯನ್ನೀಯುತ್ತದೆ. ಮನೋದಾರ್ಢ್ಯವನ್ನೀಯುತ್ತದೆ; ಉತ್ತಮ ಅವಸ್ಥೆಗೇರಿಸುತ್ತದೆ. ಪ್ರಾರ್ಥನೆಯ ಇನ್ನೊಂದು ಭಾಗವು ಕರ್ತವ್ಯವಾಗಿದೆ. ಧ್ಯಾನದಿಂದ ಕಾರ್ಯಕಾವಸ್ಥೆಗೆ ಮತ್ತು ಕಾಡಿನಿಂದ ಬೀಡಿಗೆ ಅದು ಒಯ್ಯುತ್ತದೆ. ವಿಶ್ವದ ನಿಯಮಗಳನ್ನು ಪರಿಶೀಲಿಸು; ಅವುಗಳನ್ನು ಪಾಲಿಸು; ಅವುಗಳಿಗೆ ಒಪ್ಪುವಂತೆ ವರ್ತಿಸು! ಹಾಗಾದರೆ ಕೆಲಸವೇ ಪ್ರಾರ್ಥನೆಯಾಗುತ್ತದೆ. ಕೃತಜ್ಞತೆಯನ್ನು

ಸೂಚಿಸುವುದು ವಿಶ್ವ ಜ್ಞಾನಕ್ಕೆ ಒಪ್ಪಿದ ಆರಾಧನೆಯೂ ವಿಶ್ವನಿಯಮಕ್ಕೆ ತೋರುವ ನ್ಯಾಯವಾದ ವಿಧೇಯತೆಯೂ ಆಗುವುದು. *

ಲೋಕವನ್ನು ಉದ್ಧಾರ ಮಾಡಬೇಕೆಂಬ ಹೆಬ್ಬಯಕೆಯಿಂದ ಕೂಡಿದ ನಿಸ್ಸಂದೇಹ ಮನೋಭಾವದ ಹೆಂಗಸಿಗೆ ವಿವರಣೀಯವೂ ಜ್ಞಾನಪ್ರಚೋದಕವೂ ಆದ ವಿಷಯಭಾವಕ್ಕಿಂತ ಮಾನವತ್ವದ ಪ್ರಗತಿ ಮತ್ತು ಅತ್ಯುನ್ನತ ನೈತಿಕ ತತ್ವವು ಮುಖ್ಯವಾದುದಾಗಿವೆ, ನ್ಯಾಯವಾದಿಯಾದ ದೇವರಲ್ಲಿ ನಾನಿಟ್ಟಿದ್ದ ವಿಶ್ವಾಸವೆಲ್ಲ ಪೂರ್ಣತೊಲಗಲು ಕರ್ತವ್ಯ ತತ್ಪರತೆ ಮತ್ತು ಗತ್ಯಾನತೆಗೆ ಇರುವ ಪ್ರಾಮುಖ್ಯತೆಗಳನ್ನು ಕುರಿತು ವಿಸ್ತೃತವಾದಿಂದ ಪ್ರತಿಪಾದಿಸಲು ನನ್ನನ್ನು ಇನ್ನಷ್ಟು ಪ್ರೇರೇಪಿಸಿತು, ನನ್ನ ಈ ಅಭಿಪ್ರಾಯವು True Basis of Morality ಎಂಬುದು ನಾನು 1874ರಲ್ಲಿ ಬರೆದ ಪ್ರಬಂಧದಲ್ಲಿ ಪ್ರತಿಧ್ವನಿತವಾಗಿತ್ತು. ರಾಷ್ಟ್ರೀಯ, ಜಾತ್ಯತೀತ ಸಂಸ್ಥೆ (The National Secular Society) ಇದರ ವೇದಿಕೆಯಲ್ಲಿ! ನಾನು ಕೈಗೊಂಡ ಈ ಎಲ್ಲಾ ವರ್ಷಗಳ ಪ್ರಚಾರ ಕಾರ್ಯದಲ್ಲಿ ಮಾನವನು ಮಾನವನಿಗೆ ಸಲ್ಲಿಸಬೇಕಾದ ಕರ್ತವ್ಯದ ನೈತಿಕ ಧರ್ಮ ಬೆಳವಣಿಗೆಯನ್ನು ಕುರಿತು ಪ್ರತಿಪಾದಿಸಿದ್ದು ಇನ್ನಾವ ವಿಷಯದ ಮೇಲೂ ಹೇಳಲಿಲ್ಲ, ನೈತಿಕ ಮನೋಗುಣವನ್ನು ಕುರಿತಲ್ಲದೆ ಬೇರಾವ ವಿಷಯವೂ ನನ್ನ ಮನಸ್ಸಿನಲ್ಲಿ ಇರಲೇ ಇಲ್ಲ, ಅಲ್ಲದೆ ಈ ವಿಚಾರವಾಗಿ ನಾನು ಸಾರ್ವಜನಿಕ ಕ್ಷೇತ್ರಕ್ಕೆ ಕಾಲಿಟ್ಟಂದಿನಿಂದಲೇ ಹೇಳುತ್ತಲೇ ಇದ್ದೆನು, ಸಾಂಪ್ರದಾಯಿಕವಾಗಿ ಬಂದ ಗತ್ಯಾನತೆಗಳ ಹಳೆ ಕಟ್ಟುನಿಟ್ಟುಗಳನ್ನು ಪೋಷಿಸುತ್ತ ಬೇರೂಪದಕ್ಕಿಂತ ಮುಂಚೆಯೇ ಕಿತ್ತೊಗೆಯಲ್ಪಡಬೇಕೆಂಬುದಾಗಿ ಇಂದಿನ ಅದ್ಭುತ ಅನ್ವೇಷಣೆಯ ಕಾಲದಲ್ಲಿದ್ದು ವಾದಿಸುತ್ತಿರುವ ಅರಾಜಕವನ್ನು ಕುರಿತಾಗಿ ಮಾತಾಡುತ್ತಾ ಈ ರೀತಿಯಾಗಿ ಬರೆದೆನು.'—

"ಸ್ವತಂತ್ರ ಮನೋಭಾವವನ್ನು ಎತ್ತಿ ಹಿಡಿದು ಹೋರಾಡಲು ಕ್ರೈಸ್ತಧರ್ಮಗಳಲ್ಲಿ ಪ್ರತಿಪಾದಿಸಲ್ಪಡುವ ಸಿದ್ಧಾಂತಗಳನ್ನು ಪ್ರತಿಭಟಿಸಲು ಜನರ ಬುದ್ಧಿಶಕ್ತಿಗೆ ಮಿತಿಯನ್ನುಂಟುಮಾಡುವ ಮೂಢನಂಬಿಕೆಗಳನ್ನು ಕಿತ್ತೊಗೆಯಲು, ನೈತಿಕ ಧರ್ಮದ ಬೇರನ್ನು ಕಿತ್ತೆಸೆದು ಅದರ ಬದಲಿಗೆ ಬೇರೂರಿದ ನ್ಯೂನತೆಯ ದೌರ್ಬಲ್ಯದಿಂದ ಕೂಡಿದವನಲ್ಲಿ ಜಾಗೃತಿಯುಂಟುಮಾಡಲು ಅದೀಗ ಕತ್ತಲು ಇರುವ ಬೇಡಿಯನ್ನು ಕಿತ್ತೊಗೆಯಲು, ಕಟ್ಟುಗಳನ್ನು ತರಿಯಲು ಮತ್ತು ದುಷ್ಕೃತ್ಯಗಳನ್ನು ಕಡಿಮೆ ಮಾಡಲು ಅದಕ್ಕೆ ಅತ್ಯುತ್ತರವಾಗಿ ತೋರಿದರೂ ಉತ್ತಮ ಮನೋಧರ್ಮದ ಪ್ರಚಾರದ

* "ದೇವರ ಸ್ವರೂಪ ಮತ್ತು ಅಸ್ತಿತ್ವ" — 1874.

ಬಗ್ಗೆ ತಿಳಿಯುವುದು ಪ್ರತಿಯೊಬ್ಬನ ಕರ್ತವ್ಯವಾಗಬೇಕಿದೆ----ನೀ
ತಿ ಧರ್ಮಕ್ಕೆ ಸಂಬಂಧಿಸಿದ ವಿಚಾರಗಳು ಸಮಾಜದ ಹೃದಯಕ್ಕೆ
ನೇರವಾಗಿ ತಾಗುತ್ತದೆ. ಅತಿ ಉನ್ನತವೂ ಶ್ರೇಷ್ಠವೂ ಆದ ನೈತಿಕ
ಧರ್ಮವು ಮಾನವ ಜನಾಂಗದ ಜೀವಾಳವಾಗಿದೆ, ನಂಬಿಕೆಗ
ಳಲ್ಲಿ ತಪ್ಪುವುದು ಅನಿವಾರ್ಯವಾಗಿದೆ. ಅವು ಬರೀ ಕ್ಷಣಿಕವಾದು
ವುಗಳು. ಆದರೆ ಜೀವನಯಾತ್ರೆಯ ವೇಳೆಗೆ ಮಾಡುವ ತತ್ವ
ಗಳು ಸಂತೋಷವನ್ನು ನೀಡುವಂತಹವು; ಮತ್ತು ಅದರ ಪರಿ
ಣಾಮವು ಬಹು ದೂರಕ್ಕೂ ವ್ಯಾಪಿಸುತ್ತದೆ, ಈವರೆಗೆ ಉತ್ತಮ
ಗುಣಧರ್ಮಗಳ ತಳಹದಿಯ ಮೇಲೆ ಕಟ್ಟಲ್ಪಟ್ಟಿದ್ದ ಆ
ಲೌಕಿಕ ಮನೋಧರ್ಮವನ್ನು ಇನ್ನೀಗ ತೆಗೆದು ಹಾಕಲು ಪ್ರ
ಯತ್ನಿಸುವ ನಾವು ಉತ್ತಮ ಹಾಗೂ ಸಭ್ಯ ಜೀವನಕ್ರಮವೊಂ
ದರ ಮೇಲೆ ಬಹಳ ಭದ್ರವಾದ ನೀತಿಮನೆಯನ್ನು ಕಟ್ಟಿ
ಮೇಲೇರಿಸಬಲ್ಲೆವೋ ಎಂಬುದಾಗಿ ಆಲೋಚಿಸಬೇ
ಕಾದದ್ದು ಪ್ರಾಮುಖ್ಯವಾದ ವಿಷಯವಾಗಿದೆ,

ಆವಿಷ್ಕಾರ ಮತ್ತು ಅಂತಃಜ್ಞಾನವನ್ನು ನೀತಿ ಧರ್ಮಕ್ಕೆ
ಆಧಾರವಾಗಿಟ್ಟು ಅವುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ನೋಡ
ಗಿದೆನು. ಕಡೆಗೆ ಅವೆರಡನ್ನೂ ಒಂದೆಡೆಯಿಟ್ಟು ನಾನು
ಈ ರೀತಿ ವಾದಿಸಿದೆನು. "ನೈತಿಕ ಮನೋಭಾವಕ್ಕೆ ನಿಜ
ವಾದ ಆಧಾರವು ಉಪಯುಕ್ತತೆಯಾಗಿದೆ. 'ಹಾಗೆಂದರೆ ಜ
ನಾಂಗದ 'ಸುಖಕ್ಕೆ ಮತ್ತು ಸಂತೋಷಕ್ಕೆ ನಾವು ಕರ್ತವ್ಯ
ನಿಷ್ಠರಾಗಬೇಕೆಂದೇ ಆಗಿದೆ, ಸೇವೆಯ ಮೂಲಕ ಮಾ
ನವಗಣದ ಉದ್ಧಾರವಾಗಬೇಕೆಂಬ ತತ್ವವು ನಮ್ಮ ಜೀ
ವನದ ಧ್ಯೇಯವಾಗುವಂತೆ ಶ್ರಮಿಸಬೇಕು." ನಾನು ಈ
ತತ್ವವನ್ನು ಆಧಾರವಾಗಿಟ್ಟು ಉತ್ತಮ ಗುಣವನ್ನು ಅವಲಂಬಿ
ಸದ ನೀತಿಭಾವವು ಸಂತೋಷವನ್ನು ಹೊಂದಲು ಕಾರಣವೆಂದು
ಭಾವಿಸಿ ಹಾಗೆಂದೇ ವಾದಿಸಿದೆನು, ಎಲ್ಲ ನ್ಯಾಯವಾದ ಮತ್ತು
ಸಂತೃಪ್ತವಾದ ಸಂತೋಷಕ್ಕೆ ಅತ್ಯಾವಶ್ಯಕವಾಗಿರಬೇಕಾದ ಒ
ಳ್ಳೆಯ ಗುಣವೇ ಮೂಲವಾಗಿದೆ---- ವಿಧಿನಿಯಮಗಳ ಬ
ಗ್ಗೆ ಅರಿಯದ ನಾವು ಈಗ ಜೀವಿಸುತ್ತಾ ಇರುವಂತೆ ಇದ್ದಾಗ
ಸರಿ ಮತ್ತು ತಪ್ಪುಗಳ ಅಂತಿಮ ನಿರ್ಧಾರವು ನಾವು ಪಡೆ
ಯುವ ಸಂತೋಷದಲ್ಲಿ ಇದೆಯೆಂದು ಹೇಳಿದರೆ ಸಮಂಜಸ
ವಾಗುವುದು. ಕಾನೂನನ್ನು ಪಾಲಿಸಿದಾಗ ಸೌಹಾರ್ದತೆ ಮತ್ತು
ಪಾಲಿಸದಿದ್ದಾಗ ಅನೈಕ್ಯತೆಯು ತಾಂಡವವಾಡುತ್ತದೆ, ಹೀಗೂ
ಸೌಹಾರ್ದತೆಯ ಪರಿಣಾಮವು ಸಂತೋಷವೇ ಆಗಿದೆ; ನೈಸರ್ಗಿ
ಕವಾಗಿ ಕಾನೂನು ಪಾಲನೆಯು ಸಂತೋಷವೇ ಆಗಿದೆ! ಮಾತ್ರ=

ವಲ್ಲ, ಆ ವಿಧಿನಿಯಮಗಳ ಅನುಸರಿಸುವಿಕೆಯಿಂದ ಸಂತೃಪ್ತಿಯೂ
ಉಂಟಾಗುವುದು. ಆದರಿಂದ ಪ್ರೀತಿಯೊಂದು ಜೀವಿತಾವಧಿಯೂ ಸಿದ್ಧಿ
ಯನ್ನು ಪಡೆಯುವುದಲ್ಲದೆ ಆ ಗುರಿಸಿದ್ಧಿಯಿಂದ ನಿಜವಾದ ಆತ್ಮತೃ
ಪ್ತಿಯೂ ದೊರೆಯೆ ಹೊಂದುವುದು. ಮತೀಯ ವಿಚಾರಗಳ ಸಂಬಂ
ಧವಾಗಿರುವ ವಾದವಿವಾದಗಳಿಂದ ನೈತಿಕ ಧರ್ಮವನ್ನು ಕಿತ್ತುಹಾಕಿ
ಅನಂತರ ಈ ನೈತಿಕತೆಗೆ ಪ್ರತ್ಯೇಕ ಅಸ್ತಿತ್ವವನ್ನು ಕಲ್ಪಿಸಬೇಕೆಂ
ದು ನನಗನ್ನಿಸುತ್ತದೆ. ದೇವರು ಒಬ್ಬನೆ ಎಂದೆನ್ನುವ ಗಂಭೀರವಾದ
ವಿಷಯವು ವಾದಾಸ್ಪದವಾಗಿರುವಾಗ ಮಾನವನ ಮನಸ್ಸನ್ನು ಅದಕ್ಕೆ
ಬೇಕಾದಂತೆ ನಿರ್ಮಿಸಿಕೊಳ್ಳುವ, ಅಥವಾ ಇಲ್ಲದೇ ಆಗಿರುವ ಆ
ದೈವಿಕತೆಗೆ ಸಂಬಂಧಿಸಿದ ಶ್ರುತಿವಾದನೆಗಳನ್ನು ಸಿದ್ಧಪಡಿಸಲು
ಅಂಥಾ ಸಂಶಯದಲ್ಲಿ ಇದ್ದರೂ ನೈತಿಕ ಮನೋಧರ್ಮವನ್ನು ಈ
ಭಿನ್ನಾಭಿಪ್ರಾಯದ ರಣರಂಗಕ್ಕೆ ಒಯ್ಯಬಾರದು ಎಂಬುದು
ಸಮಾಜವು ಲಕ್ಷಿಸಬೇಕಾದ ಪ್ರಾಮುಖ್ಯವಾದ ವಿಚಾರವಾಗಿದೆ,
ತತ್ವಶಾಸ್ತ್ರದಿಂದ ವಿನಾಯಿಸಿ ನೈತಿಕ ಧರ್ಮಕ್ಕೆ ಪ್ರತ್ಯೇಕ ತಳ
ಹದಿಯೊಂದನ್ನು ನಾವು ನಿರ್ಮಿಸಬಹುದಾದರೆ ಅದು ಸಾಧಾರಣ
ಶಿಕ್ಷಣದಿಂದ ಭಾವಿಸಲಾಗದಷ್ಟು ಉತ್ತಮ ಸೇವೆಯನ್ನು ಜನ
ಕೋಟಿಗೆ ಮಾಡಿದಂತಾಗುತ್ತದೆ, ನಿಸರ್ಗವನ್ನು ಕುರಿತಾದ ವಿಷ
ಯಗಳ ಮೇಲೆ ಪರಿಶೀಲನೆ, ಮತ್ತು ಸಮಾಜದ ಮೇಲೆ ಮಾನ
ವನು ಬೀರುವ ಪರಿಣಾಮವು ಅಂಥ ಒಂದು ತಳಹದಿಯನ್ನು
ನಿರ್ಮಿಸಲು ಸಾಕಾಗುತ್ತದೆ. ನಾವು ಗಳಿಸಿದ ವಿದ್ಯೆಯು ದೇವರ ವಿ
ಷಯವಾಗಿ ನಮಗೆ ತಿಳಿಸಲು ಸಾಲದಾದರೂ ಅದು ಈ ಅದ್ಭುತ
ಸೃಷ್ಟಿಯನ್ನು ಕುರಿತು ವಿವೇಚಿಸಿ ಆ ಮೂಲಕ ತುಲನಾತ್ಮಕ
ವಾಗಿ ಕಂಡುಬಂದ ವಿವರಗಳ ಮೇಲೆ ವಿಧಿನಿಯಮಗಳನ್ನ
ರಿಯಲು ಸಾಕು! ಅಂತಿರುವಾಗ ನಾವು ನಿಜಕ್ಕೂ ತಿಳಿಯಲು
ಸಾಧ್ಯವಾದುದನ್ನು ಕುರಿತು ಅನ್ವೇಷಿಸುವ ಬದಲಾಗಿ ತಿಳಿ
ಯಲು ಸಾಧ್ಯವಿರುವುದನ್ನು ಪರಿಶೋಧಿಸಲು ಬಹಳ ಜಾಣ್ಮೆ
ಯಿಂದ ನಮ್ಮ ಬುದ್ಧಿ ಬಲ ಸತ್ವಗಳನ್ನು ಕ್ರೋಢೀಕರಿಸಿ
ಆ ರೀತಿ ಶ್ರಮಿಸಬೇಕಾಗಿ, ನಮ್ಮ ಊಹನೆಯಲ್ಲಿರುವ ದಿವ್ಯ
ಶಕ್ತಿಯ ಕಲ್ಪನೆಯು ಮತಕ್ಕೆ ನಾವು ಆದರವನ್ನು ತೋರಿಸು
ವುದರಲ್ಲಿಯೇ, ನೈತಿಕ ಧರ್ಮದ ಮೂಲವೆಂದು ತಿಳಿದಾಗ ದೇವ
ರನ್ನು ನಾವು ಹಿಡಿಸಿದಂತಾಯಿತೆಂದು ನಮಗೆ ಹೇಳಲ್ಪಟ್ಟರೆ ಆಗ
ನಮ್ಮ ಸ್ವಂತ ಬುದ್ಧಿಬಲವು ನಿಷ್ಪ್ರಯೋಜಕವೆಂದೂ ನಮ್ಮ
ಪರಿಶೀಲನಾಭಾವವು ತಪ್ಪೆಂದೂ ತಿಳಿಯುವ ಪರಿಸ್ಥಿತಿಗೆ
ಒಮ್ಮೆಲೇ ತಳ್ಳಲ್ಪಡುತ್ತೇವೆ, ಆದರೆ ಉತ್ತಮ ಪ್ರೇಮ ಸ
ಖ್ಯ: ಅದು ಜೀವನವು ಅತ್ಯಾವಶ್ಯವೆಂದೂ ಆದ್ದರಿಂದ

ನಾವು ಸಭ್ಯರಾಗಿರಬೇಕೆಂದೂ, ಹಾಗಾದರೆ ನಿಸರ್ಗ ನಿಯಮಕ್ಕೆ ಒಪ್ಪುವಂತೆ ನಡೆದಂತಾಗುವುದೆಂದೂ ನಾವು ನಡೆಯುವ ದಾರಿಯಲ್ಲಿ ಸಂತೋಷವನ್ನು ಬಿತ್ತರಿಸಿ ನಮ್ಮ ಸಹೋದರರನ್ನು ಸಂತೃಪ್ತಿಗೊಳಿಸುವೆವೆಂದೂ ಹೇಳಲ್ಪಟ್ಟರೆ ಸದುದ್ದೇಶಗಳು ಕೇಳಿ ಅಂಥಾ ಗರ್ಜನೆಗಳ ಕರೆಗೆ ಮತ್ತು ಆ ದನಿಯ ಗಾನಕ್ಕೆ ನಮ್ಮ ಹೃದಯದ ನರನಾಡಿಗಳು ಸಹ ಮಿಡಿಯುತ್ತಾ ಉದ್ರೇಕಿಸುವುವು. ಈ ಭದ್ರವಾದ ತಳಹದಿಯನ್ನು ನಿರ್ಮಿಸಲು ವಸ್ತು ದೇಹವನ್ನು ನಡೆದಿದೆನು, ಅಂದಿನ ಆ ವೇಳೆಯೂ ನನಗೆ ಒಂದು ಸಂದರ್ಭವಾಗಿತ್ತು. ಸಮಾಜದ ಉಗ್ರ ಚಳವಳಿ, ವಕ್ರ ವಾದಗಳು, ಅಸಹನೀಯ ಸಾಮಾಜಿಕ ಸಂಪ್ರದಾಯಗಳು ಮತ್ತು ಅವುಗಳೊಡಗೂಡಿ ಇರುತ್ತಿದ್ದ ಅಂದಿನ ದಬ್ಬಾಳಿಕೆಗೆ ವಿರೋಧವಾದ ಮತ್ತು ನ್ಯಾಯವಾದ ಪ್ರತಿಭಟನೆ, ಮತ್ತು ಹಿಂದಿನ ಸ್ವಾತಂತ್ರ್ಯ ಹಾಗೂ ಉತ್ತಮ ಜೀವನಕ್ಕೆ 'ಹಾತೊರೆದ ಅವಿವೇಚನೆಯ ವಾದಗಳು ನೈತಿಕ ಮನೋಭಾವದ ಸುಭದ್ರ ತಳಹದಿಯ ಮೇಲೆ ಕಟ್ಟಲ್ಪಡಬೇಕಾದ್ದು 'ವಿಶೇಷ ಪ್ರಾಮುಖ್ಯವೆಂದೂ ಖಚಿತವಾಯಿತು. ಎಲ್ಲಾ ರಾಜಕೀಯ ಮತ್ತು ಮತೀಯ ಆಂದೋಲನದ ಮೂಲಕವೇ ಮಾನವ ಜೀವನವು ಶ್ರೇಷ್ಠವೂ ಉದಾತ್ತವೂ ಆಗುತ್ತಾ ಮುಂದುವರಿದು ಬೆಳೆದು 'ಸ್ವಾತಂತ್ರ್ಯದಲ್ಲಿ ನೆಲೆಸುವುದಲ್ಲದೆ ಅರಾಜಕತೆಯ ಅವ್ಯವಸ್ಥೆಯಲ್ಲಿ ಬೀಳಲಾರದು, ಉದಯಿಸುತ್ತಿರುವ ನಮಗೆ ಬಲವಾದ ಆಸ್ತಿಭಾರವನ್ನು ನೀಡಬಲ್ಲದಾಗಿದೆ. ಸಕಾರಣೀಯವಾದ ಅದನ್ನು ಆಲೋಚಿಸಿ ತಿಳಿಯಬಲ್ಲ ವಿದ್ಯಾರ್ಥಿಯೂ ಮನಸ್ಸು ತಿಳಿಯಲು ಸಮರ್ಥನಲ್ಲದ ಕಾರ್ಮಿಕನೂ ಒಪ್ಪುವರು, ಪ್ರಾಯೋಗಿಕತೆಯು ಎಲ್ಲರಿಗೂ ಒಂದೇ ರೀತಿಯಲ್ಲಿ ಒಪ್ಪುವುದು. ಅಲ್ಲದೆ ಎಲ್ಲಾ ಮಾನವ ಹೃದಯಗಳಲ್ಲಿ ಸಮಾನವಾಗಿ ಇರುವ ಉದ್ವೇಗಗಳನ್ನು ಅದು ಕೆರಳಿಸುವುದು, ನೀತಿ, ಮತ ಸಿದ್ಧಾಂತಗಳು ಕ್ಷೇತ್ರ ಕಾಲ ಮಾನವರ್ಗದ ಪ್ರಯೋಜನಕ್ಕೆ ಇದ್ದು ಅವುಗಳಾಗಿ ಮೂಢನಂಬಿಕೆಗಳು ಮಾಯವಾಗಿ ಉದಾರತೆಯಿಂದ ಈ ಭೂಮಿಯ ಮೇಲೆ ಸ್ವಾತಂತ್ರ್ಯ ಮತ್ತು ವಿಜ್ಞಾನದ ಸ್ಪಷ್ಟ ಜ್ಯೋತಿಯು ತೋರ್ಪಡಿಸುವುದೇ? ಹೀಗೂ ಅದು ಜನವೆಲ್ಲ ವಿಶ್ವಾಸ, ಗೌರವ ಮತ್ತು ಸತ್ಯದಿಂದ ಒಟ್ಟಾಗಿ ಮತ್ತು ಕಟ್ಟುನಿಟ್ಟಾಗಿ ಇದ್ದರೆ ಮಾತ್ರ ಸಾಧ್ಯವಾಗುವುದು, ಕಾನೂನಿನ ಎದುರಿಗೆ ಸಮಾನತೆ ನ್ಯಾಯವೂ ಅವಶ್ಯವೂ ಆಗಿದೆ. ಸ್ವಾತಂತ್ರ್ಯವು ಪ್ರತಿಯೊಬ್ಬ ಗಂಡಸಿನ ಮತ್ತು ಹೆಂಗಸಿನ ಜನ್ಮಸಿದ್ಧವಾದ ಹಕ್ಕಾಗಿದೆ, ವೈಯಕ್ತಿಕವಾದ ಸ್ವತಂತ್ರ ಅಭಿವೃದ್ಧಿಯು ಜನಾಂಗದ

ಉನ್ನತಿಗೂ ಪ್ರಗತಿಗೂ ಸಹಾಯಕವಾಗುತ್ತದೆ; ಆದರೆ ಆ ಸ್ವಾತಂತ್ರ್ಯ
ವು ಸ್ವಾರ್ಥಕ್ಕೆ ವಿನಿಯೋಗವಾದರೆ ಆ ಜನ ಸಂಘಟನೆಯು ಮತ್ತು
ನಿಜವಾದ ಸೋದರಭಾವವು ಮಾನವನನ್ನು ಆಳುವ ಹಿತಕ್ಕಾಗಿ
ಮತ್ತು ನಿಸ್ವಾರ್ಥವಾದ ಉದಾರಭಾವದ ಜನಕಲ್ಯಾಣಕ್ಕಾಗಿ ಸ್ವತಃಪ್ರೇ
ರಕವಾಗಿ ಪರಸ್ಪರ ಒಡಗೂಡಿಸಿದ್ದರೆ ಆಂಗ್ಲ ಸ್ವಾತಂತ್ರ್ಯ ಮತ್ತು
ಸಮಾನತೆ ಮತ್ತು ಅವಕ್ಕೆ ಸಂಬಂಧಿಸಿ ಜನಕೋಟಿಗೆ ಇತ್ತ ಬರ
ವಸೆಗಳು ಅಮೂಲ್ಯ ರತ್ನಗಳಲ್ಲವೂ ಯಾವ ಪ್ರಯೋಜನಕ್ಕೂ ಬಾರದೇಯೆ
ಇರುತ್ತವೆ. *

ಮಾನವನ ನೈತಿಕ ಪ್ರಗತಿಗೆ ಎರಡು ವಿಷಯಗಳು ಅತ್ಯಾವಶ್ಯ
ಕವೆಂದು ನನಗೆ ಕಂಡು ಬಂದಿದೆ, ಮನೋಪ್ರೇರಕವನ್ನು ಕೆರ
ಳಿಸಿ ಕಾರ್ಯರಂಗಕ್ಕೆ ಇಳಿಸುವ ಧ್ಯೇಯ ಮತ್ತು ದುರಾಚಾರ ದೌ
ರ್ಬಲ್ಯಗಳಿಗೆ ಮೂಲ ಮತ್ತು ಅವುಗಳನ್ನು ತೊಲಗಿಸಲು ಇರುವ
ದಾರಿಯನ್ನು ಕುರಿತು ಸ್ಪಷ್ಟವಾಗಿ ತಿಳಿಯುವುದು. ಮೊದಲನೆಯದಾ
ಗಿ ಧ್ಯೇಯವನ್ನು ಉತ್ತಮಗೊಳಿಸಲು ಮತ್ತು ಪ್ರಕಾಶರಂಜಿತವಾಗಿ
ಅದನ್ನು ಕಾರ್ಯರೂಪಕ್ಕೆ ಇಳಿಸಿ ಆ ಮೂಲಕವಾಗಿ ಮಾನವನನ್ನು
ಕರ್ತವ್ಯತತ್ಪರನನ್ನಾಗಿ ಮಾಡುವ ಪ್ರೀತಿ ಮತ್ತು ಅಭಿಲಾಷೆಗಳಿಂದ
ನನ್ನ ಸ್ವಾಭಾವಿಕವಾದ ಉತ್ಸಾಹವೆಲ್ಲ ಅದಕ್ಕಾಗಿ ಧಾರೆಯೆರೆದೆನು,
ನೈತಿಕ ಮನೋಭಾವವು ಧರ್ಮ ವಿಶ್ರಿತವಾದ ನನ್ನ ಆವೇಶದಿಂ
ದೊಡಗೂಡಿದಾಗ ಬಹು ಉನ್ನತ ಮಟ್ಟದ ಕಾರ್ಯ ಪ್ರೇರಣೆಯು
ನನ್ನು ಪರಿಪಾಲಿಸಲು ತಕ್ಕ ನೀತಿಯನ್ನು ಹೊಂದಿದರೆ ನನ್ನ ಕಾರ
ಕ್ಕೆ ನಾನೆ ನಿಜವಾಗಿಯೂ ಹೊಕ್ಕ ಧರ್ಮಿಕನಿಷ್ಠನಾಗುವೆನು, ದುಃಖಿ
ತನಾದ ವ್ಯಕ್ತಿಯು ಮಾನವರ ಹೃದಯಗಳಲ್ಲಿ ಕೆರಳಿಸುವ ಆ ದು
ರಂತಕರವಾದ ಆವೇಗವನ್ನು ನೋಡಲು ಅತ್ಯುತ್ತಮ ಮಾನವ
ಗಿಂದ ಪ್ರತೀಕತೆಯ ಪ್ರತಿಬಿಂಬವನ್ನು ಮೀರುತ್ತದೆನು, ಬಹುಮ
ಟ್ಟಿಗೆ ಕ್ಷಣವಾದ, ತುಂಬಾ ಸವೆದು ಹೋದ, ಮಾನವರ ಪಾಪಕ್ಕಾಗಿ
ತುಂಬಾ ನೊಂದು ಅದೇ ದುಃಖದಿಂದ, ಪಶ್ಚಾತ್ತಾಪದಿಂದ ಕೊರಗ
ಕಂಗೆಟ್ಟ ಈ ಭೂಮಿಯನ್ನು ನೋಡಿ ಕಡೆಗೆ ತನ್ನ ಸೊರಗಿದ ಕಣ್ಣು
ಗಳನ್ನು ಮೇಲೆತ್ತಿ ಸ್ವರ್ಗದತ್ತ ದಿಟ್ಟಿಸುವ ದುಃಖ ಮತ್ತು ನೋವಿ
ನಿಂದ ವೃದ್ಧನಾಗಿ ಪ್ರತ್ಯೇಕವಾಗಿ ಬಹುಕಾಲ ನೊಂದು ಸವೆದು ಹೋದ
ಹೃದಯದಿಂದಲೂ ಅಸಹನೆಯ ದುರಾಚಾರವನ್ನು ಕಂಡು ಕಂಗೆಟ್ಟ
ಆತ್ಮದಿಂದಲೂ ಕೂಡಿದ ವಸುವು ಶ್ರೇಷ್ಠ ಮತ್ತು ಕ್ರೈಸ್ತದ ಉತ್ತಮ ಆದ
ರ್ಶವಾದಿಯಾಗಿರುವನು, ಜನಕೋಟಿಯು ವೈಭವಪೂರ್ಣವಾಗಬೇಕಾದರೆ
ಜನತೆಯು ಇಂದು ಪಾಲಿಸುವ ಆ ಸಾಂಪ್ರದಾಯಿಕ ವಿಶಿಷ್ಟತೆಗೆ ಅಲ್ಲ;
ಯಾವುದೊಂದು ಪ್ರಯತ್ನವೂ ಕರುಣಾಮಯ ಸೌಂದರ್ಯವನ್ನು

* ನೈತಿಕ ಧರ್ಮಕ್ಕೆ ನಿಜವಾದ ಆಧಾರ – 1874.

ಪ್ರತಿಬಿಂಬಿಸುವದಕ್ಕೆ ಶಕ್ತಿಹೀನವಾಗಿಯೂ ಲೋಕದ ಸುದೀರ್ಘ ಜೀ-
ವನವನ್ನು ಪ್ರತಿಪಾದಿಸುವಂಥದ್ದಾಗಿಯೂ ಮತ್ತು ಮಾನವರಿಗಾದ
ಸಂಕಷ್ಟಗಳನ್ನು ಮಹತ್ವವಿಲ್ಲದೆ ಹೇಳುವಂಥದ್ದಾಗಿಯೂ
ಇರುತ್ತದೆ. ಹಾಗಿದ್ದಾಗ ಕಾಂತಿಯುಕ್ತವಾಗಿ ಮತ್ತು ಉದಾರದಿಂದ
ಬೇಸಗೆಯಲ್ಲಿ ಬೀಸಿಗೆಯ ನೀಲಾಕಾಶದ ಸೂರ್ಯನ ಕಿರಣಗಳಿಂ-
ದಲೂ ಸಾವಿನ ನೋವಿಗೆ ಸಿಲುಕಿದ ಬಾಧೆಗೆ ಸಿಲುಕಿದ ಸ್ಥಾನಗ-
ಳಿಂದಲೂ ಎಷ್ಟೋ ದೂರ ನಾಸ್ತಿಕನ ಸಮಭಾವವು ಜನಕೋಟಿಗೆ
ತಕ್ಕುದಾದ ಉತ್ಕೃಷ್ಟತೆಗಳಿಂದ ಪ್ರಕಾಶಮಾನವಾಗಿ ತೋರು-
ತ್ತದೆ. ಆ ನಾಸ್ತಿಕ ಧ್ಯೇಯವು ಬಲವತ್ತಾಗಿ, ಸುಂದರವಾಗಿ,
ದೈಹಿಕವಾಗಿ ಗ್ರೀಕ್ ಕಲಾಪ್ರತೀಕವಾದ ಹರ್ಕ್ಯುಲಸ್‌ನಂತೆ ಆಕ-
ರ್ಷಕವಾಗಿ ಗಂಭೀರವಾಗಿ, ಪ್ರೀತಿಯಿಂದ ಪ್ರಕಾಶಿಸುವ, ಆತ್ಮಶಕ್ತಿ-
ಯಿಂದ ಉಜ್ವಲವಾಗಿರುವ ಕ್ರೂರತನವನ್ನು ಪ್ರತಿಭಟಿಸುವ
ಮತ್ತು ಆಕಾಂಕ್ಷೆ ಕರುಣೆಗಳನ್ನು ತೋರುವ, ಮೆತ್ತಗೆ ಬಾಗಿ
ದಿಟ್ಟತನದಿಂದ ಕೂಡಿದ ತುಟಿಗಳಿಂದ ಬಹಳ ಆಳವಾಗಿ ಮತ್ತು
ಬಹಳ ದೂರಕ್ಕೆ ನೋಡಲು ಸಾಧ್ಯವಾಗಿರುವ, ಅಗೋಚರ ರೂಪದ
ಗುರಿಯನ್ನು ಕಾತರತೆಯಿಂದ ಮತ್ತು ನಿಚ್ಚದೃಷ್ಟಿಯಿಂದ ವೀಕ್ಷಿ-
ಸುವ, ಮತ್ತು ಸತ್ಯ ಮತ್ತು ಸೌಂದರ್ಯವನ್ನು ಮಾನ-
ದಿಂದ ಆಸ್ವಾದಿಸುವ ಕಣ್ಣುಗಳಿಂದ, ದುಡಿಯಲು ಬಲಿಷ್ಠವಾದ
ಕೈಗಳಿಂದ, ಭವಿಷ್ಯದ ಮುಕ್ತಿಯನ್ನು ಅನುಭವಿಸುವದೆಂಬ
ವಿಶ್ವಾಸದಿಂದ ತುಂಬಿ ಹೃದಯದಿಂದ, ತನ್ನ ಶ್ರಮ ಹಾಗೂ ಕಲಾ
ನೈಪುಣ್ಯತೆಯ ಚಲುವಿನಿಂದ ಈ ಲೋಕವನ್ನು ಸಂತುಷ್ಟಗೊ-
ಳಿಸುವ ಮತ್ತು ನಾಸ್ತಿಕನ ಹೃದಯದಲ್ಲಿ ಉತ್ಪತ್ತಿಯಾದ ಆ ಉತ್ಕೃ-
ಷ್ಟ ಆದರ್ಶವಾಗಿ ಇದ್ದಾಗ ಅದೇ ನಿಶ್ಚಲವಾಗಿ ಮಾನವನ ಲಕ್ಷಣವಾಗಿ-
ದೆ. ದುಡಿಯುವವನು, ಬಡವನು, ದಲಿತನು, ದುಃಖಿತನು
ದೀನನು, ದಬ್ಬಾಳಿಕೆಗೆ ಅನ್ಯಾಯಕ್ಕೆ ಒಳಗಾಗಿ ಬೆಂಡಾದಂಥ-
ವನು, ಇಂಥವರೆ ಕ್ರೈಸ್ತ ಮತದಲ್ಲಿ ಹೇಳಿದ ಆದರ್ಶ ಮಾ-
ನವರು! ತನ್ನ ಮೇಲೆ ಅಧಿಕಾರ ನಡೆಸುವವನೊಬ್ಬನು
ಇದ್ದಾನೆಂದು ಅರಿಯದ ಸ್ವತಂತ್ರನೂ ಅತ್ಯಾಚಾರಗಳನ್ನು ಸ-
ಹಿಸದವನೂ ತನ್ನ ಶಕ್ತಿಯಲ್ಲಿಯೇ ವಿಶ್ವಾಸವನ್ನು ಇಡುವವನೂ
ತನ್ನ ಸೋದರನ ಸಮೃದ್ಧಿಯೇ ತನ್ನದು ಎಂಬುದಾಗಿ ತಿಳಿಯು-
ವವನೂ, ಹೆಮ್ಮೆ, ಸತ್ಯ, ಸ್ವಾಮಿಭಕ್ತಿ ಮತ್ತು ಧೈರ್ಯದಿಂದ
ಕೂಡಿರುವವನೂ ನಾಸ್ತಿಕವಾದಿಗಳಲ್ಲಿ ಆದರ್ಶನಾಗಿ ಬೆಳಗುವನು.*

ಇದು ಹಿಂದು ಅಭಿಪ್ರಾಯವನ್ನು ಮಾತ್ರ ಪ್ರತಿಧ್ವನಿಸು-
ತ್ತದೆ. ಸರಿ, ಆದರೆ ಅದು ಕೆಲವು ವರ್ಷಗಳ ಅಸಮಾಧಾನದಿಂ

---

* "ನಾಸ್ತಿಕವಾದದ ಸೂಕ್ತಿಗಳು" - 1876. (Gospel of Atheism)

ದಲೂ ಮನಸ್ಸಿನಲ್ಲಿ ಬಲವತ್ತಾಗಿ ನೆಲೆಸಿದ ಒಂದು ಬಗೆಯ ತತ್ವ
ದಿಂದಲೂ ಪರಿಣಮಿಸಿದ ಉತ್ಸಾಹದಾಯಕ ಪ್ರವೃತ್ತಿಯಿಂದ ಸ್ವಾಭಾ
ವಿಕವಾಗಿ ಉದಿಸಿದುದರ ಫಲವಾಗಿ ಆಗಿದೆ. ಒಮ್ಮೆಲೇ ಸ್ವತಂತ್ರ
ವಾಗಿ ಪಡೆದ ಸ್ವಾತಂತ್ರ್ಯ ಮತ್ತು ಸ್ವತಃ ನೀಡಿದ ಶಕ್ತಿಯಿಂದ ಗಂಡ
ಸರ ಮತ್ತು ಹೆಂಗಸರ ಕಾತರಮಯ ಉತ್ಸಾಹವನ್ನು ಕೆರಳಿಸುವ
ಪ್ರಬಲ ಪ್ರವೃತ್ತಿಯನ್ನು ಹೊತ್ತು ತಮ್ಮ ಮಿತಿಯಿಡುತ್ತ, ಬಯಕೆಗ
ಳೇನು ಎಂಬುದಾಗಿ ತಿಳಿದುಕೊಂಡಿರುವ ಮಾನವ ಸ್ವಭಾವದ ಪ್ರತಿ
ಭಾವವೇ ಇದಾಗಿದೆ. ಸಂಕಷ್ಟದಿಂದ ಪಾರಾಗಿ ಮುಕ್ತನಾದ ಆತ್ಮದ
ಮೊರೆಯು ಸ್ಪಷ್ಟವಾದ ಸ್ವನಿಯು ಇದಾಗಿದೆ. ಬಂಧನಕ್ಕೊಳಗಾದ
ಮತ್ತು ಹಾಗೆ ಸೆರೆಯಲ್ಲಿ ಸಿಲುಕಿ ರೆಕ್ಕೆಗಳನ್ನು ಪಟಪಟಿಸುತ್ತ
ಇರುವ ಆತ್ಮಗಳು ಧಿಕ್ಕಾರದಿಂದ ಆ ದನಿಗೆ ಪ್ರತ್ಯುತ್ತರವನ್ನು
ಕೊಡುತ್ತವೆ. ಮಾನವ ಜೀವಕ್ಕೆ ಹೊಂದಲು ಸಾಧ್ಯವಾದ ಚೆಲುವು
ಮತ್ತು ಭವ್ಯತೆಯಿಂದ ಪಡೆಯುವ ಸ್ಫೂರ್ತಿಗಾಗಿ ಬಹು ಬಯ
ಸಾಗಿ ಹಾಗೂ ಹುರಿದುಂಬಿತನಾಗಿ ಹೋರಾಡಿದೆನು, "ನೀನು
ಬಾಳಿನ ಸೌಂದರ್ಯವನ್ನು ಆಶೆ ಭರವಸೆಗಳನ್ನು ಸ್ಫೂರ್ತಿಯ
ನ್ನು ಕಸಿದುಕೊಂಡು ಇದೀಗ ಮಕ್ಕಳಂತೆ ಇತರರಿಗೆ ವಿಧೇ
ಯನಾಗಿ ತಾತ್ಸಾರದಿಂದ ಕೆಲಸವನ್ನು ಮಾಡುತ್ತಾ ದೇವರನ್ನು
ನಂಬದೆ ಅದಕ್ಕೆ ಬದಲಾಗಿ ಕಠಿಣವಾದ ನಿಯಮಗಳನ್ನು
ನಮ್ಮ ಮೇಲೆ ವಿಧಿಸುತ್ತಿರುವೆ," ಎಂದು ಯಾರಾದರೂ ಸಂಬೋ
ಧಿಸುವರೆ? ಜೀವನದಿಂದ ಎಲ್ಲವೂ ಸೌಂದರ್ಯವೇ? ಹಾಗಾದರೆ
ಈ ಅಗಾಧ ವಿಶ್ವದ ಒಂದು ಅದ್ಭುತ ಶಕ್ತಿಯಾಗಿ ಬಾಳಬೇಕೆಂ
ಬ ಉದ್ದೇಶದಲ್ಲಿ ಸೌಂದರ್ಯವಿಲ್ಲವೇ? ಶ್ರದ್ಧೆಯಿಂದ ಕರ್ತ
ವ್ಯವನ್ನು ನಡೆಸುವುದರಲ್ಲಿ ಮತ್ತು ಎಲ್ಲ ಸದ್ಗುಣಗಳಲ್ಲಿರು
ವ ಸದುದ್ದೇಶಗಳಲ್ಲಿ ಸೌಂದರ್ಯವಿಲ್ಲವೇ? "ಎಲ್ಲವೂ ನಂಬಿ
ಕೆಯೇ?" ಏಕೆ? ನಾನು ನಂಬಿಕೆಯನ್ನು ಮಾತ್ರವಲ್ಲ, ಅದ
ಕ್ಕಿಂತಲೂ ಅಧಿಕವಾದ ಸತ್ಯವನ್ನು ಸಾರುತ್ತಿದ್ದೇನೆ. ಇಹದಲ್ಲಿ
ಶ್ರಮಿಸುತ್ತಿರುವ ನಾನು ನಿನಗೆ ಆಜ್ಞಾಪಿಸಿದರೆ ಅದು ಈ
ಲೋಕವು ನಿನಗೆ ಸಹಸ್ರಗಟ್ಟಲೆಯಾಗಿ ಹಿತವನ್ನೀಯುವು
ದೆಂದು ತಿಳಿದುದರಿಂದಲೇ ಆಗಿದೆ. ಹೇಗೆಂದರೆ ಸ
ಮಾಜವು ನಿಶ್ಚಲವಾಗಿ ಅಭಿವೃದ್ಧಿಯನ್ನು ಹೊಂದು
ವುದು, ಸ್ವಾತಂತ್ರ್ಯವು ಸ್ಥಿರವಾಗಿ ನಿಲ್ಲುವುದು; ವಿಧಿನಿಯ
ಮಗಳು ಪಾಲಿಸಲ್ಪಡುತ್ತವೆ ಮತ್ತು ಬಾಳು ಸಂತೋ
ಷದಿಂದ ತುಂಬಿ ತುಳುಕುವುದು. ನೀನು ಹೇಳುವ
ಸ್ವರ್ಗವೆಂದರೆ ಏನು? ಮೋಡದ ಮರೆಯಲ್ಲಿ ಅಡಗಿರುವ ಸ್ವ
ರ್ಗವೇ? ನಾನಾದರೋ ಭೂಮಿಯಲ್ಲಿಯೇ ಪಡೆಯಬಹುದಾದ

ಸ್ವರ್ಗದ ಕಡೆಗೆ ಕೈತೋರಿಸುತ್ತಿದ್ದೇನೆ, "ಎಲ್ಲವೂ ಸ್ವರ್ಗದಲ್ಲಿದೆಯೇ?"
ಏನು? ನೀನು ನಿನ್ನ ಊಹೆಯ ನೆಲೆಯಲ್ಲಿ ಕಲ್ಪಿಸಿ ಎಲ್ಲಾ ತಿಳಿಯದ
ಲಕ್ಷಣವಾದ ಮತ್ತು ಅಗೋಚರನಾದ ದೇವರ ಸೇವೆಯನ್ನು ಉತ್ಸಾ-
ಹದಿಂದ ಮಾಡುತ್ತೀಯೆ; ಆದರೆ ನಿನ್ನ ಬದಿಯಲ್ಲಿಯೇ ಇರುವ ನಿನ್ನ
ಸೋದರನ ಕಡೆಗೆ ಮಾತ್ರ ನೀನು ಔದಾಸೀನ್ಯದ ಸೇವೆಯನ್ನು ಮಾತ್ರ
ಸಲ್ಲಿಸುತ್ತೀಯೆ, ಅಲ್ಲವೇ? ದುಃಖಿತರನ್ನು ಉತ್ಸಾಹಗೊಳಿಸುವ,
ನಿಂದನೆಗಳನ್ನು ನಿವಾರಿಸುವ ಮತ್ತು ಬಡವ ಬಲ್ಲಿದರೆಲ್ಲರಿಗೂ
ಒಂದೇ ರೀತಿಯಾದ ನ್ಯಾಯವನ್ನು ಒದಗಿಸುವುದರಲ್ಲಿ ಮಾತ್ರ ಉ-
ತ್ಸಾಹವಿಲ್ಲ, ಅಲ್ಲವೇ? ನೀನು ನಿನ್ನ ಗುಡಿಯಲ್ಲಿ ಸಂತೋಷವನ್ನು ಕಾ-
ಣುವೆಯಲ್ಲದೆ ನಿನ್ನ ಮನೆಯಲ್ಲಿ ಮಾತ್ರ ಅಲ್ಲ, ಅಲ್ಲವೇ? ಮೋಡ-
ದಿಂದ ಕವಿದ ಸ್ವರ್ಗವನ್ನು ಊಹಿಸುತ್ತಾ ಸಂತೋಷ ಪಡುವೆಯ-
ಲ್ಲದೆ ಈ ಭೂಮಿಯಲ್ಲಿ ದೇವರ ರಾಜ್ಯವನ್ನೀಯುವುದರ
ಕಡೆಗೆ ಶ್ರಮಿಸುವುದರಲ್ಲಿ ಮಾತ್ರ ಇಲ್ಲ, ಅಲ್ಲವೇ? "ಎಲ್ಲವೂ ಸ್ವ-
ರ್ಗದಲ್ಲಿದೆಯೇ?" ನಿನ್ನ ಮನೋಭಾವಕ್ಕೆ ಸ್ಫೂರ್ತಿಯು ಬೇಕೆಂದಾದ-
ರೆ ಬಹುಶಃ ನೀನು ಬೈಬಲನ್ನು ನಿನ್ನ ಮತವನ್ನು ಪಾಲಿಸುವವ-
ನಾಗು. ಶ್ರಮಿಸಲಿಕ್ಕೆ ಸ್ಫೂರ್ತಿಯು ಬೇಕೆಂದಾದರೆ ಲಂಡನ್
ನಗರದ ಪೂರ್ವಭಾಗದಲ್ಲಿ ಅಥವಾ ಮ್ಯಾಂಚೆಸ್ಟರ್‌ನ ಕೊಳೆಗೇರಿಗ-
ಳಲ್ಲಿ ತಿರುಗಾಡುತ್ತಿರು, ಬಹುಕಾಲಕ್ಕೆ ಹಿಂದೆ ಜೂಡ್ಯದಲ್ಲಿ ಮೃ-
ತನಾದ ಏಸುವಿನ ಪಕ್ಕೆಯ ಗಾಯವನ್ನು ನೆಟ್ಟನೆ ನೋಡುತ್ತಾ
ಇದ್ದಂತೆಯೇ ನಿನ್ನ ಕೋಮಲ ಮನಸನ್ನು ಸ್ಫೂರ್ತಿಯನ್ನು ಹೊಂದು-
ವುದು, ಆದರೆ, ಇಂಗ್ಲೆಂಡಿನಲ್ಲಿ ಸಾಯುತ್ತಿರುವ ಗಂಡಸರ ಮ-
ತ್ತು ಹೆಂಗಸರ ನೋವಿಗೆ ನೀನು ಸ್ಫೂರ್ತಿಯನ್ನು ಹೊಂದಲಾರೆ,
ಅಲ್ಲವೇ? ಆ ಕ್ರಿಸ್ತನನ್ನು ನೋಡಿ ಸುರಿಸಲು ಸಾಕಷ್ಟು ಕಂಬನಿ
ನಿನ್ನಲ್ಲಿದೆ, ಆದರೆ ನಿನ್ನ ಬಾಗಿಲ ಬಳಿ ನಿಂತಿರುವ ನರಳುವಂಥವನಿ-
ಗೆ ನೀನು ಕಂಬನಿಯನ್ನು ಮಿಡಿಯಲೊಲ್ಲೆ, ಅಲ್ಲವೇ? ಕ್ರಿಸ್ತ-
ನ ಸಹಿಷ್ಣುತಾ ಭಾವವು ನಿನ್ನ ತಾಪವನ್ನು ಕೆರಳಿಸುತ್ತದೆ, ಆದ-
ರೆ ಬಡಜನರಲ್ಲಿ ಮಾತ್ರ ನೀನು ಅಂಥ ಸಹನೆಯನ್ನು ನೋಡಲಾ-
ರೆ, ಅಲ್ಲವೇ? ಕರ್ತವ್ಯವೆಂದರೆ ಮಕ್ಕಳಂತೆ ವಿಧೇಯತೆಯಿಂದ
ನಡೆಯುವುದೇ? "ಮಕ್ಕಳಂತೆ ವಿಧೇಯತೆ," ಎಂದರೇನು? ನೀ-
ನು ನಂಬಿದ್ದ ಒಳ್ಳೆಯ ಗುಣ ಮತ್ತು ಪ್ರೀತಿಯೆಂಬ ಉತ್ತಮ
ಧ್ಯೇಯಗಳನ್ನು ಸಾಧಿಸಲು ನೀನು ಮಾಡುವ ಕೆಲಸವೇ ವಿಧೇಯ-
ತೆ, ಅಲ್ಲವೇ? ಹಾಗಾದರೆ ಕರ್ತವ್ಯವು ಅನಾದರಣೀಯವಾ-
ಗುವುದು ಹೇಗೆ? ನಿನ್ನ ಪ್ರೇಮದ ಭಕ್ತಿಗೆ ನಾನು ಧ್ಯೇಯವನ್ನು
ಕಾಯುತ್ತೇನೆ, ಯಾರ ಉನ್ನತಿಗಾಗಿ ನಿನ್ನ ಮೇಧಸ್ಸನ್ನು
ಸವೆಸುವೆಯೋ ಆ ನಿನ್ನ ಯಜಮಾನಿಕೆಗಾಗಿ ಇಲ್ಲಿಂದು ಸತ್ಯವು

ಇದೆ. ನೀನು ಯಾರ ವಿಜಯಕ್ಕಾಗಿ ಕಾದುವಿಯೋ ಆ ಸೇನಾನಾಯಕ ನು ಬಯಸುವ ಸ್ವಾತಂತ್ರ್ಯವು ಇಲ್ಲಿ ಇದೆ, ನಿನ್ನ ಅಸ್ತಿತ್ವದ ಪ್ರತಿಯೊಂದು ವಿದ್ಯಮಾನವನ್ನು ನೀನು ಯಾರ ಸೇವೆಗೆಂದು ಅರ್ಪಿಸುವಿಯೋ ಆ ಪ್ರಭುವಿಗೆ ಅಲ್ಲ, ಮಾನವನಿಗೆ; ಅವನು ಸ್ವರ್ಗದಲ್ಲಿ ಇಲ್ಲ, ಇಲ್ಲಿಯೇ ಭೂಮಿಯಲ್ಲಿ ಇದ್ದಾನೆ, "ದೇವರ ಬದಲಾಗಿ ಬಹು ಶಕ್ತಿಶಾಲಿಯಾದ ಶಿಸ್ತು ನಿಯಮಗಳೇ?" ಹೌದು! ನಿನ್ನ ಜೀವನವನ್ನು ನೀನು ಸ್ವತಃ ನಿಯಮಿಸು ಎಂಬುದು ನಿಜಕ್ಕೂ ನಿಶ್ಚಯವಾಗಿದೆ. ಆದರೂ ಕಡೆಗೆ ನೀನು ಸಂಶೋಧಿಸಿದ ಬಹುಮಾನವನ್ನು ಪಡೆಯುವೆ. ನೀನು ದಾರಿದ್ರ್ಯವನ್ನು ಬಿತ್ತಲಾರೆಯಾದರೂ ನೀನು ಸಂತೃಪ್ತಿಯನ್ನು ನಿಭಾಯಿಸುವೆ. ನೀನು ನಿಸ್ವಾರ್ಥಿಯಾಗಿರಲಾರೆಯಾದರೂ ಪ್ರೀತಿಯಿಂದ ಪ್ರೇರಿಸಲ್ಪಡುವೆ. ನೀನು ಪಾಪಗಳನ್ನು ಮಾಡಲಾರೆಯಾದರೂ ಪಶ್ಚಾತ್ತಾಪವನ್ನು ಹೊಂದುವುದರಲ್ಲಿ ನೀನು ಸುಖವನ್ನು ಪಡೆಯುವೆ! ನಿಜ, ನಮ್ಮ ನಮ್ಮ ಮತಗಳು ಶಕ್ತಿಶಾಲಿಯಾಗಿಯೇ ಇದೆ, ನಿಸರ್ಗದ ಸುಂದರವಾದ ಶಾಶ್ವತ ನೀತಿಯೊಡನೆಯೇ/ಅದೂ ಶಕ್ತಿಶಾಲಿಯಾಗಿಯೇ ಇದೆ, ಆದರೆ ನಾವು ಸನ್ಮಾರ್ಗದಲ್ಲಿ ನಡೆದರೆ ನೀವು ನಿಮ್ಮ ಕಡೆಗೆ ನೋಡಿರಿ, ನಿಮ್ಮ ಅಜ್ಞಾನಕ್ಕೆ ವಿಧಿನಿಯಮಗಳು ಅವುಗಳ ಕಾರ್ಯವನ್ನು ಅಂತೆಯೇ ನಾಗಿಸದೆ ಇರಲಾರವು, ನಿಮಗೆ "ತಿಳಿದಿರಲಿಲ್ಲ" ವೆಂಬ ಕಾರಣದಿಂದ ಬೆಂಕಿಯು ತನ್ನ ಸುಡುವಿಕೆಯನ್ನು ನಿಲ್ಲಿಸಲಾರದು. *

"ಸುಶೀಲ್ಯಕ್ಕೆ ಅದರ ಸ್ವಂತ ನೆಲೆಯು ಇದ್ದೇ ಇದೆ," ಎಂಬುದಾಗಿ ನಾನು ಇಷ್ಟೇ ಬಲವತ್ತಾಗಿ ಹೇಳುತ್ತಲೇ ಇದ್ದೇನು, ಶಿಸ್ತು ನಿಯಮಗಳಿಂದ ಜೀವಿಸಲು ಪ್ರೋತ್ಸಾಹವಾಗಿ ಬೇಕಿಯನ್ನು ಸಮಾಧಿಯ ಆಚೆ ಕಡೆಯಿಂದ ಕಟ್ಟುವುದು ಅನವಶ್ಯಕ. "ದೇವರು ಮತ್ತು ಚಿರಂಜೀವಿತನದ ಭಾವವು ಇಲ್ಲದ ಕರ್ತವ್ಯವು ಮಾಡಿದ್ದಾಗಿ ತನಿದು ಕಟ್ಟುಕೊಳ್ಳುವುದರಿಂದ ಶ್ರೀಮತಿ ಕೋಬ್ಬೆ (Miss Cobbe) ಇವರ ವಾದಕ್ಕೆ ನಾವು ಏನನ್ನುವ?" ಹೌದು, ಕರ್ತವ್ಯವೆಂದರೆ ಸ್ವಾರ್ಥವನ್ನು ಹೊಡೆದೋಡಿಸುತ್ತುವ ಸಾಧನವೆಂದು ತಿಳಿಯುವವರಿಗೆ ಮತ್ತು ತಮ್ಮ ಸಮಾಧಿಯ ಆಚೆ "ಚಿನ್ನದ ಕಿರೀಟ" ವೊಂದು ದೊರಕುವುದೆಂಬ ಸ್ವಾರ್ಥಭಾವದಿಂದ ಮಾತ್ರ ಒಳ್ಳೆಯವರಾಗಿರುವವರ ವಿಷಯದಲ್ಲಿ ಅದು ನಿಜವೇ ಆಗಿದೆ, ಹಿತವಾದುದನ್ನೆ ಮಾಡುವುದರಲ್ಲಿ ಸಂತೋಷವನ್ನು ಕಾಣುವ ನಮಗೆ, ಪಡೆಯುವುದರಿಂದ ನಮ್ಮ ಜಿತಸಾಥಿಗಳಿಗೂ ಒಳ್ಳೆಯದಾಗುತ್ತದೆ

---

* ದೇವರ ರೂಪ ಮತ್ತು ಅಸ್ತಿತ್ವವನ್ನು ಕುರಿತು" – 1874.

ದಿಂಬ ಭಾವನೆಯಿಂದ ಶ್ರಮಿಸುವವರಿಗೆ ಚೆನ್ನಾಗಿ ಬಾಳಿ ಬಂದ ಬಾ
ಳ್ವೆಯಿಂದ ನಾವು ಲೋಕದ ಸಂಪತ್ತಿಗೂ ತಮ್ಮ ಕಾಲಿನ ಗುರು
ತನ್ನು ಬಿಟ್ಟುಸದಂತಾಗುವುದು. ನಾವು ಶಾಶ್ವತವಾಗಿ ಈ ಭೂಮಿಯನ್ನು
ಕಂಡುದಕ್ಕಿಂತ ಸಮೃದ್ಧಿಯಿಂದ ನಾವು ಹೋಗುವಾಗ ಕಾಣುವೆವು.
ನಮ್ಮ ಜೀವನದ ಅವಧಿಯಲ್ಲಿ ನಾವು ಸಾಧಿಸಬಹುದಾದುದಕ್ಕೆ ನಮ
ಗೇನೂ ಚಿಕ್ಕದಾದ ಬಹುಮಾನದ ಅವಶ್ಯವಿಲ್ಲ. ಏಕೆಂದರೆ ಆ ನಮ್ಮ
ಬದುಕುವಿಕೆಯೇ ಬಹುಮಾನವನ್ನು ಮೀರಿಸುವುದು.*

"ನನ್ನಲ್ಲಿರುವ ಯಾವುದೊಂದು ಅಂಶವೂ ಸಾಯಬಾರದು"
ಎಂದು ಹೇಳಿದಾಗ ಚಿರಂಜೀವಿಗಳಾಗಿಯೇ ಇರಲು ಇಚ್ಛಿಸುವವರು
ಯಾರಾದರೂ ಇಚ್ಛಿಸದರೆ? ನಾಶವಾದವು ಚಿರಂಜೀವಿಯಲ್ಲವೆ?
ಬದುಕು ನಿಜವೇ? ಚಿರಂಜೀವಿತವೆಂದರೆ ಏನು? ನಿಜವಾದ ಚಿ
ರಂಜೀವಿತವೆಂದು ಬೀಟ್‌ಹೋವನನ್ನು ಹೇಳುವುದು. ಅವನ
ಮೈಯಲ್ಲಿ ಕೀರ್ತಿ ಜಾಗೃತವಾಗಿದೆಯೆ? ಅದೇ ಲೋಕವು ಇರುವ
ವರೆಗೂ ಅವನ ದಿವ್ಯ ಸಂಗೀತವು ಅವತರಿಸುತ್ತಿರುವುದು ಎಂ
ದೇ? ಶೆಲ್ಲಿಯು ಹೇಳಿದ ನಿಜವಾದ ಬಾಳು ಅವನ ಉತ್ಸಾಹ
ದ ಹೊರಗಡೆ ಸ್ವರ್ಗದಲ್ಲಿತ್ತೆ? ಅದೇ ವೀಣೆಯ ವಾದ್ಯದ
ರಚನಕಾರನು ಮತ್ತೊಬ್ಬ ಜನರ ಹೃದಯದ ಮೂಲಕ ಕಲ್ಪಿಸುತ್ತ
ಹರಿವ ಅವನ ನಿರಂತರ ಸಂಗೀತದ ತರಂಗಗಳಲ್ಲಿ ಅಡಗಿ
ದೆಯೆ? ಹಿಂದಿನ ಉಪಕರಣವು ಮುರಿದು ಹೋದರೆ ಸಂಗೀತ
ವು ಸಾಯಲಾರದು, ಮನುಷ್ಯನ ಹಿಂದಿನ ಸ್ವರವು ಕೆಟ್ಟು ಹೋ
ದರೂ ಆಲೋಚನಾಶಕ್ತಿಯು ಮುಗಿಯದು, ಹಿಂದಿನ ಹೃದಯದ
ನಾಡಿಗಳು ಛಿದ್ರವಾದರೂ ಪ್ರೀತಿಯು ಸಾಯಲಾರದು. ಅದೇ
ರೀತಿ ಯಾರ ಪ್ರಾಣವು ಹಾಡುತ್ತಿಲ್ಲ ಪ್ರತಿಧ್ವನಿಸುವುದೋ ಆ
ವರೆಗೂ ಅಂಥ ಮಹಾಪುರುಷನು ಸಾಯಲಾರನು, ನಾದಮಯ
ವಾದ ಆ ಪ್ರಾಣವು ಹಲವಾರು ಮಾನವರ ಮೂಲಕ ಉತ್ಕೃ
ಷ್ಟ ಧ್ವನಿಯಲ್ಲಿ ರಾಗಾಲಾಪಗಳಿಂದ ಚಿತ್ರಿಸಲ್ಪಡುವುದು.
ಚಿರಂಜೀವಿತನವು ಶಿವ ಮಹಾತ್ಮನಿಗೂ ಮಹಾವೀರನಿಗೂ
ಮಾತ್ರ ಕೊಡಲ್ಪಟ್ಟುದಲ್ಲ, ಅದು ಅವರವರ ಯೋಗ್ಯತಾನು
ಸಾರವಾದ ಕ್ರಮಾನುಗತವಾಗಿ ಕೊಡಲ್ಪಟ್ಟಿದೆ. ಲೋಕವ್ಯಾಪ
ಕವಾದ ಜೀವಿಗೆ ಅಷ್ಟೇ ವ್ಯಾಪಕವಾದ ಜೀವವೂ ದಿಟ್ಟತನದ
ಸುಡುವಿಕೆಗೆ ಅದೇ ಬಗೆಯ ಬಾಳ್ವೆಯೂ ವಿಧಿಸಲ್ಪಟ್ಟಿ, ಪ್ರತಿಯೊ
ಬ್ಬನು ತಾನು ಬಿತ್ತಿ ಬೆಳೆಸಿದ ಬೆಳೆಯನ್ನೆ ಅನುಭೋಗಿ
ಸುವನು. ಪ್ರತಿಯೊಬ್ಬನು ಅವನವನ ಹಕ್ಕು ಎಷ್ಟೋ ಅದಕ್ಕೆ
ತಕ್ಕಂತೆಯೇ ಆ ಬೆಳೆಯನ್ನು ಕೂಡಿಟ್ಟುಕೊಂಡು ಅದನ್ನು

* ದೇವರೇ ಇಲ್ಲದ ಹಿಂದು ಲೋಕ — 1885.

ಅನುಭೋಗಿಸುವನು.*

ಜನತೆಗೆ ಪ್ರಾಕೃತಿಕ ಜೀವನವು ಪರಿಣಾಮವಾಗಿ ಕೀರ್ತಿಯನ್ನು ಉಳಿಸಲು ಇರುವ ಆಕಾಂಕ್ಷೆಯು, ಮಾನವ ಪ್ರೀತಿಯನ್ನು ಸಂಪಾದಿಸಲು ಇರುವ ಕಾತರತೆಯು, ಮತ್ತು ಅದರ ಪರಿಣಾಮವಾಗಿ ವಿಶ್ವಬಾಂಧವ್ಯದ ಬಗೆಗೆ ಹೋರಾಡುವ ಸಕ್ರಿಯ ಮತ್ತು ನಿಷ್ಫಲ ತಿಳುವಳಿಕೆಗೆ ಜನರಿಂದ ದೊರಕುವ ಮನ್ನಣೆ – ಇವುಗಳು ಸ್ವತಂತ್ರ ಮನೋಭಾವವನ್ನು ಪ್ರಚೋದಿಸುವ ಕಾರ್ಯಕ್ಕಾಗಿ ಹೋರಾಟವನ್ನು ನಡೆಸುವ ನಮ್ಮ ಕಾಲದ ಧೈರ್ಯವಂತ ಸ್ತ್ರೀ ಮತ್ತು ಪುರುಷರಿಗೆ ಬಹಳ ಹಾರ್ದಿಕವಾದುವಾಗಿವೆ. ಚಾರ್ಲ್ಸ್ ಬ್ರಾಡ್ಲೋಯು ತನ್ನ ಜೀವನವಿಡೀ ಬರೆದ ಮತ್ತು ಹೇಳಿದ ನುಡಿಗಳ ಮೂಲಕ ಆ ಉದ್ದೇಶವು ಇನ್ನೂ ತೇಜೋಪೂರ್ಣವಾಗಿದೆ. "ನನ್ನ ಸಮಾಧಿಯ ಮೇಲೆ ಹುಲ್ಲು ಹಸಿರಾಗಿ ಬೆಳೆದಾಗ ಜನರು ನಾನು ನಡೆಯಲು ಪ್ರಯತ್ನಿಸಿದುದನ್ನು ನೆನೆದು ನನ್ನನ್ನು ಸ್ವಲ್ಪಮಟ್ಟಿಗೆ ಪ್ರೀತಿಸಬಹುದು," ಎಂಬುದಾಗಿ ಅವನು ತನ್ನ ಕಾತರತೆಯನ್ನು ಹೊರಗೆಡಹಿದ್ದು ಅವನ ಪ್ರತಿಯೊಬ್ಬ ಮಿತ್ರನಿಗೂ ತಿಳಿದಿದೆ.

ನಾನು ಪಾತ್ರ ವಹಿಸಿದ ಹಲವು ವಾದ ವಿವಾದಗಳಲ್ಲಿ ಅಂಥಾ ಉದ್ದೇಶಗಳು ಮಾತ್ರ ಸಾಲದೆಂದೂ ಅವು ತಾತ್ವಿಕವಾಗಿ ಅಭಿವೃದ್ಧಿಗೊಂಡ ವಿಷಯಗಳ ಮಟ್ಟಿಗೆ ಮಾತ್ರ ಅನ್ವಯಿಸುತ್ತವೆಂದೂ ಸಾಮಾನ್ಯವಾದ ಮತ್ತು ಅವನಿಗಿಂತಲೂ ಕೀಳುಮಟ್ಟದ ವ್ಯಕ್ತಿಗೆ ಉತ್ತಮ ಗುಣಗಳನ್ನು ಪ್ರಚೋದಿಸಲು ತಕ್ಕ ಉದ್ದೇಶವನ್ನು ಅವು ಕೊಡುವುದೆಂದೂ ನನಗೆ ವಿರೋಧವಾಗಿ ಕೆಲವರು ಆಗಿಂದಾಗ್ಗೆ ಮಾತಾಡುತ್ತಾ ಹೇಳುತ್ತಿದ್ದರೆಂಬುದನ್ನು ನಾನು ಹೇಳುವ ಅವಶ್ಯಕತೆಯಿಲ್ಲ. ಮಾನವ ಸ್ವಭಾವದಲ್ಲಿದ್ದ ನನ್ನ ಅಭಿಮಾನವನ್ನು ನಾನು ದೃಢಚಿತ್ತದಿಂದ ಎತ್ತಿ ಹಿಡಿದೆನು, ಬಹಳ ಉನ್ನತವಾದ ನೀತಿಯಿಂದ ಮನವಿಯನ್ನು ಮಾಡಿದಾಗ ಮಾನವ ಹೃದಯದ ಒಳಗಿನ ಪ್ರತಿಧ್ವನಿಯು, ನಾನು ಈಗ ಆಲೋಚಿಸುವಾಗ, ತುಂಬಾ ಆಶ್ಚರ್ಯಕರವಾಗಿ ತೋರುತ್ತದಲ್ಲದೆ, ಮಾನವನ ಹಾರ್ದಿಕ ಗಾಂಭೀರ್ಯದೊಳಗಡಗಿರುವ, ಮತ್ತು ನನ್ನಲ್ಲಿ ಇರುವ ಹುಟ್ಟುಗುಣವು, ಮಾನವನು ಪೂರ್ವದಲ್ಲಿ ಪ್ರಾಣಿಯಾಗಿದ್ದ ನೀತಿಯಿಂದ ಈ ಸ್ಥಿತಿಗೆ ಬಂದರೂ ನಾನು ಅವನ ಸ್ವಭಾವಗುಣದಲ್ಲಿ ಇಟ್ಟ ನಂಬಿಕೆಯು ಅವನ ಪ್ರಾಮಾಣಿಕತೆಯ ಸಿದ್ಧಿಗೆ ಸಮಂಜಸವಾಗಿಲ್ಲದಿದ್ದರೂ ನನ್ನ ನಿತ್ಯದ ಆಲೋಚನೆಗಳನ್ನೆಲ್ಲ ಆ ಮಾನವ ಗುಣವೇ ಅಂಕಿತದಲ್ಲಿಟ್ಟು ನಡೆಸುತ್ತಿತ್ತು. ಬಹಳ ದೊಡ್ಡ ಮಾನಸಿಕ ಗೊಂದಲಕ್ಕೊಳಗಾದರೂ

---

* ನಾಸ್ತಿಕವಾದದ ಸೂಕ್ತಿಗಳು – 1876.

ಉತ್ತಮ ಗತಿಗಾದ ಅಥವಾ ಸೌಖ್ಯದ ಸ್ವಾತಂತ್ರ್ಯದಾಯಕ ಇನಿದನೆಯ
ನ್ನು ಕೇಳುತ್ತಿದ್ದವರು ಮತ್ತು ಅವರದೇ ಆದ ಸುಖವಿಲಾಸಕ್ಕಾಗಿ ಅವರು
ನ್ನು ಪ್ರೀತಿಸುತ್ತಿದ್ದವರಿಗಾಗಿ ನಾನು ಮನಃಪೂರ್ತಿಯಾದ ತಿರಸ್ಕಾರ
ಭಾವವನ್ನು ತಳೆದು ಅದರ ಆಶ್ರಯವನ್ನು ಹೊಂದಿದ್ದೇನೆ. ಸತ್ಯ
ಲವನ್ನು ಹಿಡಿಯಲು ಚಿರಂಜೀವಿತನವೊಂದು ಬದಿಗೊಂದು ಇಲ್ಲದಿ
ದ್ದರೆ ನಾನು ಸತ್ಯವನ್ನು ಏಕೆ ಪಾಲಿಸಲಿ, ಮತ್ತು ಸೌಜನ್ಯದ ಗು
ಣ್ಣಿಯನ್ನು ಏಕೆ ನಡೆಸಲಿ? ಈ ಪ್ರಶ್ನೆಗೆ ಸ್ವತಂತ್ರ ಮನಸ್ಸುಳ್ಳ
ವಿಚಾರವಂತರು – Free-Thinkers – ಸ್ಪಷ್ಟವಾದ ಮತ್ತು ಸೂಕ್ಷ್ಮವಾದ
ಸುಂದರ ಉತ್ತರವನ್ನೀಯುತ್ತಾರೆ, "ಸತ್ಯಾನ್ವೇಷಣೆಯಿಂದ
ನಿನಗೆ ಆಶ್ಚರ್ಯಕರವಾದ ಯಾವುದೊಂದೂ ಸಂತೃಪ್ತಿಯು ಇಲ್ಲ
ವಾದರೆ ಸತ್ಯವನ್ನರಸಲು ಹಂಬಲಿಸುವುದರಲ್ಲಿ ಯಾವ ಅರ್ಥ
ವೂ ಇಲ್ಲ. ಬಡವನಾಗಿ ಮತ್ತು ಹೀನನಾಗಿ ಬಾಳನ್ನು ನೀನು ಕಳೆ
ದರೆ, ಸಂತೋಷವನ್ನು ಹಿಡಿಯುತ್ತ ಎಂದಾದರೆ, ಉತ್ತಮಗತಿ
ಯನ್ನು ಕೊಡದ ಜೀವನವನ್ನು ನೀನು ಸಾಗಿಸುವುದರಲ್ಲಿ ಯಾವ
ನ್ಯಾಯವೂ ಇಲ್ಲ." ಮಿತ್ರರೆ, ಓವನ ಯೋಗ್ಯತೆಗೆ ಏಟಕದಷ್ಟು
ಬಹು ಎತ್ತರದಲ್ಲಿರುವ ಆ ಸಂತೋಷವನ್ನು ಯಾರಿಂದಲೂ ಅನು
ಭವಿಸಲಾಗುವುದಿಲ್ಲ. ಒಂದು ಗ್ರಂಥವು ಓದಲಿಕ್ಕೆ ತುಂಬಾ ಸ್ವಾ
ರಸ್ಯವಿರಬಹುದು. ಆದರೆ ಒಂದು ನಾಯಿಗೆ ಮೂಳೆಯು ಸ್ವಾತ್ಕರಿ
ಮಾತ್ರ ಅದಕ್ಕೆ ಸರಿಯೆನಿಸುವುದು. ಜೀವನದ ಮೂಲವಸ್ತುವೇ
ಯಾರ ಜೀವನಕ್ಕೆ ಕಿರಿಯ ಸಂತೋಷವನ್ನು ದಿನಗಳು ಬಲ್ಲವೋ
ಅಂಥವನಿಗೆ, ಸ್ವಾರ್ಥಸಾಧನೆಯೇ ತನ್ನ ಜೀವಾಳವೆಂದು
ಯಾರು ಎಣಿಸುವನೋ ಅಂಥವನಿಗೆ, ತನ್ನ ವೈಯಕ್ತಿಕ
ಸುಖವನ್ನೇ ಅಪೇಕ್ಷಿಸುವ ಸ್ವಾರ್ಥಿಗೆ, Free-Thought-ತತ್ವವು
ಯಾವ ಆಕರ್ಷಣೆಯನ್ನು ತಾಯಲಾರದು. ಅಂಥ ವ್ಯಕ್ತಿಗೆ
ಸ್ವರ್ಗವನ್ನು ಲಂಚದ ರೂಪದಲ್ಲಿ ಕೊಟ್ಟರೆ ಅಂಥವನನ್ನು ತಾ
ತ್ಕಾಲಿಕನಾಗಿ ನಿವಾರಿಸಬಹುದು. ಇದರಿಂದ ನನಗೆ ಲಾಭವಿದೆಯೆಂ
ದೆನಿಸಿ ಅಂಥವನು ಸತ್ಯಾನ್ವೇಷಣೆಗೆ ತೊಡಗಬಹುದು. ಆದ
ರೆ ಸ್ವಾರ್ಥಿಯನ್ನು ಸತ್ಯವು ತಿರಸ್ಕರಿಸುವುದು. ಬಹುಮಾನಕ್ಕಾ
ಗಿ ಹಾತೊರೆಯುವ ಶಕ್ತಿಗಳಿಂದ ಸತ್ಯದೇವತೆಯನ್ನು ಹಿಡಿ
ಯಲು ಸಾಧ್ಯವಿಲ್ಲ. ಸತ್ಯವನ್ನು ಸತ್ಯದ ಸಲುವಾಗಿಯೇ
ನಿಷ್ಕಲಂಕ ಹೃದಯದಿಂದ ಪ್ರೀತಿಸದೇ ಇದ್ದರೆ ಉತ್ತಮ
ಬಾಳ್ವೆಯನ್ನು ಸಾಗಿಸಲಿಕ್ಕಾಗಿ, ಮಾನವ ಕಲ್ಯಾಣವನ್ನು ಸಾಧಿ
ಸಲಿಕ್ಕಾಗಿ, ಸತತವೂ ಮತ್ತೂ ಹೊಸದಾದ ವಾತಾವರಣವನ್ನು
ಕಲ್ಪಿಸಲಿಕ್ಕಾಗಿ ಈ ಲೋಕವನ್ನು ನಾವು ಕಂಡುದಕ್ಕಿಂತ
ಉತ್ತಮವಾಗಿ ನಿರ್ಮಿಸಿ ಬಿಟ್ಟುಹೋಗಲಿಕ್ಕಾಗಿ ಎಂಬೀ ಉದ್ದೇ

ಶಿಗಳು ನಮಗೆ-ಆಕರ್ಷಕವಾಗಿ ತೋರುತ್ತಿದ್ದರೆ ಇಂಥ ಧ್ಯೇಯಗಳು ನಮ್ಮನ್ನು ಸ್ಫೂರ್ತಿಗೊಳಿಸದಿದ್ದರೆ ನಾವು ಲೌಕಿಕವಾದಿಗಳು (secularists) ಎಂದು ಕರೆದುಕೊಳ್ಳಲು ಅನರ್ಹರು. Free-Thinkers ಎಂಬುದಾಗಿ ಹೆಮ್ಮೆಯಿಂದ ಕರೆದುಕೊಳ್ಳುವ ಹಕ್ಕು ನಮಗೆ ಇಲ್ಲ! ಸೋಮಾರಿತನದ ಜೀವನವನ್ನು ಅಪೇಕ್ಷಿಸುವ ರೀತಿಯಲ್ಲಿ ನಿಶ್ಚಿಂತನವಾದ ಸ್ವರ್ಗದಲ್ಲಿ ಸುಖಭೋಗದಿಂದ ಕಳೆಯಲು ನಿಮಗೆ ಹಣವನ್ನು ಗಳಿಸಬೇಕೆಂದಾದರೆ ಜೀವನದ ಸ್ವತಂತ್ರ್ಯವನ್ನು ನಿರಿಸಲು ನಮಗೆ ಲಂಚವನ್ನು ಕೊಡಬೇಕೆಂದಾದರೆ ಅವಿಚಾರಿಗಳಾದ ಮಕ್ಕಳಂತೆ ಜ್ಞಾನವನ್ನು ಗಳಿಸದೆ ಕೇವಲ ದ್ರಾಕ್ಷಿಯನ್ನು ತಿನ್ನಲಿಕ್ಕಾಗಿ ಎಂದು ನೀವು ವಿದ್ಯಾಭ್ಯಾಸವನ್ನು ಪಡೆಯುತ್ತಿರುವುದಾದರೆ ನೀವು ನಂಬಿರುವ ನಿಮ್ಮ ಮತವನ್ನು ಒಪ್ಪಿ ನಿಮ್ಮ ಗುಡಿಗಳಿಗೆ ಹಿಂದಿರುಗಿರಿ. ಅವುಗಳಿಗೆ ಮಾತ್ರ ನೀವು ಅರ್ಹರಾಗುವಿರಿ! ನೀವು ಸ್ವತಂತ್ರರಾಗಿರಲು ಯೋಗ್ಯರಲ್ಲ. ಸತ್ಯ ದೇವತೆಯ ಅತೀವ ಸೌಂದರ್ಯದ ಚೆಲುವನ್ನು ಕಂಡ ನಾವು ದರ್ಶಿಸಿ-ಆ ಸತ್ಯದ ಪ್ರೇಮಿಗಳಾದ ನಾವು ಈ ಲೋಕವನ್ನು ಪ್ರವೇಶಿಸಿ ಬದುಕಲು ಮೇಲೆಂದೆನಿಸುವೆವು, ನಮ್ಮ ಕೆಲಸಗಳನ್ನು ಗೊತ್ತುಗುರಿ ಪ್ರೀತಿಯಿಂದ ಮಾಡಲು ನಾವು ಶಕ್ತರಾಗಿರುವೆವು. ನಮ್ಮ ಕೆಲಸದಿಂದ ನಮಗೆ ದೊರಕುವ ಪರಿಣಾಮವೇನೋ ಅಷ್ಟಲ್ಲದೆ ಬೇರಾವ ಫಲವನ್ನೂ ನಾವು ಇಚ್ಛಿಸಲಾರೆವು. ಕ್ರೈಸ್ತದಿಮರ್ಧದ ಸಕ್ರಾ ಜ್ಯೋತ್ಸ್ನ ನಕ್ಷತ್ರಗಳು ಆಕಾಶದಲ್ಲಿಯೇ ಸಾಯಂಕಾಲದ ಮೆಲ್ಲೆಲರಿನಲ್ಲಿ ಲೀನವಾಗಿ ಅದರ ಕಡೆಗಾಲದ ಗೋಚರಭೂತವಾದ ಮೋಹಿಯೊಳಗಿನ ಮಾಯವಾದನಂತರ ಪುನಃ ಪ್ರಾತಃಕಾಲದ ಮಂದಾನಿಲವು ಹೊಸಬಗೆಯ ವಿಶ್ವಾಸ ಮತ್ತು ಸಂತೋಷವನ್ನು ಹೊತ್ತು ಚಿರನೂತನವಾಗಿ ಜನನದ ಆಹ್ಲಾದಕರವಾದ ತಂಪುಗಳಿಂದ ಸತ್ಯವು ಕಡೆಗಾಣುವುದೆಂಬಂತೆ ಚಿರತೆಗೆ ಆಗುವಂತಾಯಿತೆಂದು ನಾವು ಸ್ವತಂತ್ರವಾದದ (Free-Thoughts) ಧ್ಯೇಯಗಳನ್ನು ಜನರಲ್ಲಿ ಪ್ರಚಾರಪಡಿಸುತ್ತಲಿರುವೆವು.*

ಆಧುನಿಕ ವಾದಗಳು ಮೂಲದಲ್ಲಿರುವ ಮಾನಸಿಕ ಸಮಾವೇಶ ಮತ್ತು ಅದನ್ನು ನಿವಾರಿಸಲು ಇರುವ ಕ್ರಮವು ನನ್ನ ನೈತಿಕವಾದದ ವೇದಿಕೆಯ ಎರಡನೆಯ ದೊಡ್ಡ ಮುಖ್ಯ ಹಲಗೆಯಾಗಿತ್ತು. ಜೀವನದ ಉತ್ಕ್ರಾಂತಿ (evolution)ಯ ಬಗ್ಗೆ ಡಾರ್ವಿನ್, ಹರ್ಬರ್ಟ್ ಸ್ಪೆನ್ಸರ್, ಹಕ್ಸ್ಲೀ, ಬುಕ್ನರ್ ಮತ್ತು ಹೆಕೆಲ್ ಇವರ ವಾದಗಳಲ್ಲಿದ್ದ ಸತ್ಯತೆ ನನಗೆ ಮನವರಿಕೆಯಾಯಿತಲ್ಲದೆ ಕ್ಲಿಫರ್ಡ್, ಲುಬಕ್, ಬ

* ಕ್ರೈಸ್ತಮತ & Free Thought ತತ್ವದ ಸೂಕ್ತಿಗಳು-1874.

ಡ್ವೆಲ್, ಟ್ರಿಕ್ಸ್ ಮತ್ತು ಇತರರ ಹೇಳಿಕೆಯ ಸಹಾಯದಿಂದ ಈ ಸಾಮಾಜಿಕ ಗುಣಗಳ ಉತ್ಕ್ರಾಂತಿಯನ್ನು ಸ್ವತಂತ್ರ ಮನೋಭಾವದ ಬೆಳವಣಿಗೆ ಮತ್ತು ಮಾನವನ ಮಾನಸಿಕ ಮತ್ತು ನೈತಿಕ ಸ್ವಭಾವಗುಣಗಳು ಹೇಗೆ ಬಲವತ್ತರವೆಂಬುದನ್ನು ನೋಡಲು ನನಗೆ ಅವಕಾಶವಾಯಿತು, ತನ್ನ ಸುತ್ತುಮುತ್ತಲಿನ ಪರಿಸ್ಥಿತಿಯನ್ನು ಅವನು ಪೂರ್ತಿ ನೋಡಿ ತಿಳಿದಿದ್ದರೆ ಬಾಹ್ಯಪರಿಸರದ ಸ್ವಭಾವಕ್ಕೆ ಮಣಿಯುವುದು ಏಕೆಂದು ಅವನು ತನ್ನ ಜ್ಞಾನಶಕ್ತಿಯಿಂದ ತಿಳಿದುದಾದರೆ ಮಾನವನು ಎಷ್ಟೋ ದೊಡ್ಡ ಕಾರ್ಯವನ್ನು ಸಾಧಿಸದಂತಾಗುವುದಿಲ್ಲವೆ? ಅವನು ಇದೇ ಮಾರ್ಗದಲ್ಲಿ ಮುಂದುವರಿದು ಇನ್ನೂ ಗಹನವಾದ ವಿಚಾರಗಳನ್ನು ತಿಳಿಯಲು ಯತ್ನಿಸಿ ಅವನ ಪೂರ್ತಿ ಬಂಧವಿಮೋಚನೆಗೆ ಏಕೆ ಪ್ರಯತ್ನಿಸಬಾರದು? ಎಲ್ಲಾ ಪ್ರಕೃತಿ ಮತ್ತು ಸಮಾಜಬಾಹಿರ ನೀತಿಗಳು ಅವನ ಅಮಾನುಷ ಪರಂಪರೆಯಿಂದ ಉಳಿಸಿದುವುಗಳಾದರೂ ಅದನ್ನು ನಿಧಾನವಾಗಿ ಕಿತ್ತು ಹಾಕಬಹುದು, ಮಂಗಿನವನ್ನು ಹುಲಿಯನ್ನು ಅವಾಗಿಯೇ ಸತ್ತುಹೋಗಲಿ ಎಂದು ಬಿಡುವುದರ ಬದಲಾಗಿ ಅವನ್ನೆಲ್ಲ ಮಾನವನು ತಾನಾಗಿಯೆ ಕೊಂದು ಹಾಕಬಹುದು. ಹೀಗೂ ಜಂತುಗಳು ಅವನ್ನೆಯಲ್ಲಿದ್ದ ತನ್ನ ಪೂರ್ವಜರಿಂದ ಮಾನವನು ಆ ಜಂತುಗಳಿಗೊಪ್ಪದ ಹಲವು ಗುಣಗಳನ್ನು ತಳೆದು ಬಂದಿದ್ದಾನೆಂದು ನೇರವಾಗಿ ಹೇಳಬಹುದಾದರೂ ಆ ಗುಣಗಳು ಇದೀಗ ಇಲ್ಲದಾಗುತ್ತಾ ಬರುತ್ತಿವೆ. ವನ್ಯಜಂತುಗಳು ಕಾದಾಡಬೇಕು ನತ್ತಿರುವುದು ಅಂಥಾ ಅಮಾನುಷ ಗುಣಗಳುಳ್ಳದ್ದಾಗಿದೆ, ಇದನ್ನು ವಿವಿಧ ಮತಗಳು ಪ್ರೋತ್ಸಾಹಿಸುವಯಲ್ಲದೆ ಕಡಿಮೆ ಮಾಡಿಲ್ಲ, ಪ್ರಾಣಿಗಳಿಗೊಪ್ಪದ ಇನ್ನೊಂದು ಮಾನವ ಗುಣವೆಂದರೆ ಪ್ರೀತಿ, ಕರ್ತವ್ಯ, ಕಾರ್ಯನಿಷ್ಠೆಯ ಕಾರ್ಯಗಳಿಗಲ್ಲದೆ ಗಂಡು ಮತ್ತು ಹೆಣ್ಣು ಮೋಹ ವಿಲಾಸದ ವೈಪರೀತ್ಯವಾಗಿದೆ. ಇದನ್ನು ಮತತತ್ವಗಳು ಪ್ರೋತ್ಸಾಹಿಸಿವೆ. ಇದಕ್ಕೆ ಆಧಾರವಾಗಿ ಯೇಹೂದ್ಯರ ಬಹುಪತ್ನಿ ನಿಯಮ ಮತ್ತು ವೇಶ್ಯಾವೃತ್ತಿಗಳಲ್ಲದೆ ಬಸ್ರಾಗಾಜಗಳ ಚಿತ್ರಕಾರರುಗಳಲ್ಲಿ ತೋರಿಸಿದುವುಗಗಳಲ್ಲದೆ ಅಬ್ರಹಾಂ, ಡೇವಿಡ್ ಮತ್ತು ಸೊಲೊಮನ್ ಇವರ ವೈಯಕ್ತಿಕ ಚರಿತ್ರೆ, ಮೂರ್ತಿಪೂಜಾ ಗುಡಿಗಳಲ್ಲಿ ಗಂಡು ಮತ್ತು ಹೆಣ್ಣು ಮೂರ್ತಿಯರ ಪಾತ್ರ, ಮಠೀಯರ ಪುನರುದ್ಧಾರ ಮತ್ತು ಪ್ರಚಾರದ ಸಲುವಾಗಿ ಲೈಂಗಿಕ ವ್ಯವಹಾರದ ಕಾತರತೆಯ ವಿಚಿತ್ರ ವಿಧಿಗಳಲ್ಲಿ ಅಂತಿಹೇ ಇವೆ. ಪ್ರಾಣಿಗಳಿಗೊಪ್ಪದ ಮತ್ತೊಂದು ಬುದ್ಧಿಯೆಂದರೆ ಲೋಭವಾಗಿದೆ. ದುರ್ಬಲರನ್ನು ಧ್ವಂಸಿಸಿ ಅವರನ್ನು ಹೀನಾಮಾನವಾಗಿ ಅಪಹರಿಸಿ ತಿನ್ನುವ ಬಲವತ್ತರವಾದ ದುರಾಶೆ! (ಪ್ರತ್ಯರ್ಥವನ್ನು ಸಂಗ್ರಹಿಸುವುದಕ್ಕಾಗಿ ನಡೆಯುತ್ತಿರುವ ಈ ಹುಚ್ಚು ಹೋರಾಟವನ್ನು ನಮ್ಮ ಇಂದಿನ ನಾಗರಿಕತೆ

ಕೌಶಲ, ಶಿಕ್ಷಣ ಮತ್ತು ಇತರರ ಹೇಳಿಕೆಯ ಸಹಾಯದಿಂದ ಈ ಸಾಮಾಜಿಕ
ಗುಣಾಮನಸಿ ಉತ್ಕ್ರಾಂತಿಯನ್ನು ಸ್ವತಂತ್ರ ಮನೋಭಾವದ ಬೆಳವಣಿಗೆ
ಮತ್ತು ಮಾನವನ ಮಾನಸಿಕ ಮತ್ತು ನೈತಿಕ ಸ್ವಭಾವಗುಣಗಳು ಹೇಗೆ
ಬಲವತ್ತಾದುವೆಂಬುದನ್ನು ನೋಡಲು ನನಗೆ ಅವಕಾಶವಾಯಿತು, ತನ್ನ
ಸುತ್ತುಮುತ್ತಲಿನ ಪರಿಸ್ಥಿತಿಯನ್ನು ಅವನು ಪೂರ್ತಿ ನೋಡಿ ತಿಳಿದಿದ್ದರೆ
ಬಾಹ್ಯವರ್ಗದ ಸ್ವಭಾವಕ್ಕೆ ಮಣಿಯುವುದು ಏಕೆಂದು ಅವನು ತನ್ನ
ಜ್ಞಾನಶಕ್ತಿಯಿಂದ ತಿಳಿದುದಾದರೆ ಮಾನವನು ಎಷ್ಟೋ ದೊಡ್ಡ ಕಾರ್ಯ
ವನ್ನು ಸಾಧಿಸದಂತಾಗುವುದಿಲ್ಲವೆ ಅವನು ಇದೇ ಮಾರ್ಗದಲ್ಲಿ ಮುಂ
ದುವರಿದು ಇನ್ನು ಗಹನವಾದ ವಿಚಾರಗಳನ್ನು ತಿಳಿಯಲು ಯತ್ನಿಸಿ ಅ
ವನ ಪೂರ್ತಿ ಬಂಧವಿಮೋಚನೆಗೆ ಏಕೆ ಪ್ರಯತ್ನಿಸಬಾರದು? ಎಲ್ಲಾ
ಪ್ರಕೃತಿ ಮತ್ತು ಸಮಾಜಬಾಹಿರ ನೀತಿಗಳು ಅವನ ಅಮಾನುಷ ಶ
ಕ್ತಿಯಿಂದ ಉದಿಸುವುವಾದರೂ ಅದನ್ನು ನಿಧಾನವಾಗಿ ಕಿತ್ತು
ಹಾಕಬಹುದು, ಮಂಗವನ್ನು ಹುಲಿಯನ್ನು ಹಾಗೆಯೇ ಸತ್ತುಕೊ
ಳ್ಳಲಿ ಎಂದು ಬಿಡುವುದರ ಬದಲಾಗಿ ಅವನ್ನೆಲ್ಲ ಮಾನವನು ತಾನಾ
ಗಿಯೇ ಕೊಂದು ಹಾಕಬಹುದು, ಹೇಗೂ ಜಂತುಗಳ ಅವಸ್ಥೆಯಲ್ಲಿದ್ದ
ತನ್ನ ಪೂರ್ವಜರಿಂದ ಮಾನವನು ಆ ಜಂತುಗಳಿಗೊಪ್ಪದ ಹಲವು
ಗುಣಗಳನ್ನು ತಳೆದು ಬಂದಿದ್ದಾನೆಂದು ನೇರವಾಗಿ ಹೇಳಬಹು
ದಾದರೂ ಆ ಗುಣಗಳು ಇದೀಗ ಇಲ್ಲದಾಗುತ್ತಾ ಬರುತ್ತಿವೆ, ವನ್ಯ
ಜಂತುಗಳು ಕಾದಾಡಿಕೊಳ್ಳುತ್ತಿರುವುದು ಅಂಥಾ ಅಮಾನುಷ ಗು
ಣಗಳುಳ್ಳದ್ದರಿಂದಾಗಿದೆ, ಇದನ್ನು ವಿವಿಧ ಮತಗಳು ಪ್ರೋತ್ಸಾಹಿಸಿವೆ
ಯಲ್ಲದೆ ಕಡಿಮೆ ಮಾಡಲಿಲ್ಲ, ಪ್ರಾಣಿಗಳಿಗೊಪ್ಪದ ಇನ್ನೊಂದು
ಮಾನವ ಗುಣವೆಂದರೆ ಪ್ರೀತಿ, ಕರ್ತವ್ಯ, ಕಾರ್ಯನಿಷ್ಠೆಯು ಕಾರ್ಯ
ಗಳಿಗಲ್ಲದೆ ಗಂಡು ಮತ್ತು ಹೆಣ್ಣು ಮೋಹ ವಿಲಾಸದ ವೈಪರೀತ್ಯ
ವಾಗಿದೆ. ಇದನ್ನು ಮತತತ್ವಗಳು ಪ್ರೋತ್ಸಾಹಿಸಿವೆ. ಇದಕ್ಕೆ ಆಧಾರ
ವಾಗಿ ಯೇಹೂದ್ಯರ ಬಹುಪತ್ನಿ ನಿಯಮ ಮತ್ತು ವೇಶ್ಯಾವೃತ್ತಿಗ
ಳಲ್ಲದೆ ಬಹ್ಮಾಗಾಜಿಗಳ ಚಿತ್ರಕಲಾನರ್ತನಗಳಲ್ಲಿ ತೋರಿಸಿದವು
ಗಳಲ್ಲದೆ ಅಬ್ರಹಾಂ, ಡೇವಿಡ್ ಮತ್ತು ಸೊಲೊಮನ್ ಇವರ ವೈ
ಯಕ್ತಿಕ ಚರಿತ್ರೆ, ಮೂರ್ತಿಪೂಜಾ ಗುಡಿಗಳಲ್ಲಿ ಗಂಡು ಮತ್ತು
ಹೆಣ್ಣು ವೇಶ್ಯೆಯರ ಪಾತ್ರ, ಮತೀಯರ ಪುನರುದ್ಧಾರ ಮತ್ತು
ಪ್ರಚಾರದ ನೆಲೆಯಾಗಿ ಲೈಂಗಿಕ ವ್ಯವಹಾರದ ಶಾಸ್ತ್ರರೀತಿಯ ವಿ
ಚಿತ್ರ ವಿಧಿಗಳೆಲ್ಲ ಅಂತೆಯೇ ಇವೆ. ಪ್ರಾಣಿಗಳಿಗೊಪ್ಪದ ಮ
ತ್ತೊಂದು ಬುದ್ಧಿಯೆಂದರೆ ಲೋಭವಾಗಿದೆ. ದಲಿತರನ್ನು ಶೋಷಿ
ಸಿ ಅವರನ್ನು ಹೀನಾಮಾನವಾಗಿ ಉಪಚರಿಸಿ ತಿನ್ನುವ ಬಲವತ್ತರ
ವಾದ ದುರಾಶೆ! (ಐಶ್ವರ್ಯವನ್ನು ಸಂಗ್ರಹಿಸಲಿಕ್ಕಾಗಿ ನಡೆಯು
ತ್ತಿರುವ ಈ ಹುಚ್ಚು ಹೋರಾಟವನ್ನು ನಮ್ಮ ಇಂದಿನ ನಾಗರಿಕತೆ

ಅತಿ ಪವಿತ್ರವಾದುದೆಂದು ಬಗೆದಾಗ ಆ ದುರಾಕ್ರಮತನ ನೀತಿಯನ್ನು
ತಡೆಗಟ್ಟಲು ಮತದ ದುರ್ವರ್ತನೆಗಳು ಹೇಗೆ ಮತ್ತು ಯಾವಾಗ ಪ್ರಯ
ತ್ನಿಸಿವೆ? ಮಾನವನು ಸಾಮಾಜಿಕ ಸಂಘಟನೆಯನ್ನು ಬೆಳೆಸಿ
ತನ್ನ ಮಾನವೀಯವಾದ ಕರ್ತವ್ಯವನ್ನು ಸಾಧಿಸಿದಾಗ ಮಾತ್ರ ಈ
ಎಲ್ಲಾ ಅಮಾನುಷ ನೀತಿಗಳನ್ನು ತೊಡೆದುಹಾಕಬಹುದು. ಮತದ
ಮರ್ಗಗಳು ಇಂತಹವುಗಳನ್ನು ಕಿತ್ತುಹಾಕಲಿಲ್ಲ. ಆದರೆ ವಿಜ್ಞಾನ
ಶಾಸ್ತ್ರವು ಈ ದುರಾಚಾರಗಳಿಗೆ ಅಂದಿನ ವನ್ಯಜಂತುಗಳಾದ ನಮ್ಮ
ಪೂರ್ವಜರೇ ಮೂಲವೆಂದು ನಿರೂಪಿಸಿ ಅದರ ಬಗೆ ವಿವರ
ಣಾತ್ಮಕವಾದ ಬೆಳಕನ್ನು ಚೆಲ್ಲಿದ್ದಾರೆ. ಸಮಾಜ ಬಾಹಿರ ನೀತಿಗಳು
ವನ್ಯಜಂತುಗಳಿಂದ ಹುಟ್ಟಿದುವೆಂಬುದನ್ನು ಪ್ರತಿಯೊಬ್ಬನೂ
ತಿಳಿದಾಗ ಅಂಥವನು ಆ ಗುಣಗಳ ಮೂಲಕವೇ ತನ್ನ ಪ್ರಗತಿಗೆ
ಸಾಧಿಸುವನು. ಆಗ ಅವನು ಆ ಕೀಳು ದುರ್ಗುಣಗಳನ್ನು ಅಡ
ಗಿಸುವುದು ತನ್ನ ಪಾಲಿನ ಕರ್ತವ್ಯವೆಂದು ಬಗೆಯುವನಲ್ಲದೆ
ಆ ಮೂಲಕ ವನ್ಯ ಜಂತುವಿನಿಂದ ಮೇಲ್ಪಟ್ಟ ಸ್ಥಾನವನ್ನು ಹೊಂದ
ಬಲ್ಲನಾಗುವನು. ನೈಸರ್ಗಿಕ ಗುಣದೊಡನೆ ಮಿಶ್ರವಾಗಿ ಮಿಳಿತ
ವಾದಾಗ ಧಾರ್ಮಿಕ ವ್ಯಕ್ತಿಯು ವೈಜ್ಞಾನಿಕನಿಂದ ಬೋಧಿಸಲ್ಪ
ಡುವಂಥ ನೀತಿಯು ಹುಟ್ಟುವುದು. ಆಗ ಅವನು ದೇವರಲ್ಲಿ ವಿ
ಶ್ವಾಸವನ್ನು ಕ್ರಮೇಣವಾಗಿ ಕಳೆದುಕೊಳ್ಳುತ್ತಾ ಕಡೆಗೆ ಮಾನವ
ಸಾಧನೆಯ ಬಗೆ ಅಚಲ ಶ್ರದ್ಧೆಯನ್ನಿಡಬಲ್ಲವನಾಗುವನು, *

ಮಾನಸಿಕ ಉತ್ಕ್ರಾಂತಿಯ ಬಗ್ಗೆ ಅದನ್ನು ಆವರಿಸಿ ಇ
ರುವ ಇತರ ಸಹಜಾತ ಶಕ್ತಿಗಳೆಂದರೆ ವೈಯಕ್ತಿಕ ಶುದ್ಧ
ತೆ ಮತ್ತು ಸಭ್ಯತೆಗಳು ಸಹಕಾರವೂ ಬರದಿಂದ ಸೇರು
ವುವು, "ಜನಾಂಗವನ್ನು ಮಾನಸಿಕವಾಗಿ ಮೇಲೆತ್ತುತ್ತಿರುವ
ಜ್ಞಾನವು ಜನರ ವ್ಯಕ್ತಿಯನ್ನು ಅಭಿವೃದ್ಧಿಗೊಳಿಸುತ್ತಿರುವ
ಒಂದೇ ದಾರಿಯೆಂದು ನಾಸ್ತಿಕನು ಯೋಚಿಸುವನಲ್ಲದೆ
ವೈಯಕ್ತಿಕ ಪರಿಶುದ್ಧತೆಗೆ ಶ್ರಮಿಸುವ ಕ್ರಮವು ಅವನ ಆ ರೀತಿ
ಯಾದ ಆಲೋಚನೆಗೆ ಮೂಲವಾಗಿದೆ. ಸ್ವಾರ್ಥವಾದಿಯು ಪರಿ
ಶುದ್ಧನಾಗಲು ಇಚ್ಛಿಸಬಹುದು, ಆದರೆ ಅವನ ಇಚ್ಛೆಯು ಸ್ವಾರ್ಥ
ದಲ್ಲಿ ಕೇಂದ್ರೀಕೃತವಾಗಿದೆ. ಪ್ರತಿಯೊಬ್ಬ ಪರಿಶುದ್ಧಾತ್ಮನು
ಅವನಷ್ಟಕ್ಕೇ ಸ್ವತಂತ್ರವಾದವನಾಗಿರಬಹುದು; ಅಂತಿದ್ದರೂ ಇತ
ರರೊಡನೆ ವ್ಯವಹರಿಸುವಾಗ ಅವನು ಅವರಿಗೆ ಸಹಾಯಕನೂ
ಪ್ರೀತಿಪಾತ್ರನೂ ಆಗಿ ತೋರುವನಾದರೂ ಅವನ ಆ ಸೌಜನ್ಯವು
ಅವನ ಒಡನಾಡಿಗಳಿಗೆ ಯಾವ ವಿಧದಲ್ಲೂ ಪ್ರಯೋಜನವಾಗದು.
ನಾಸ್ತಿಕನಾದರೋ ತನ್ನ ವೈಯಕ್ತಿಕ ಪರಿಶುದ್ಧತೆಯನ್ನು ಅ

* "ದೇವರೇ ಇಲ್ಲದ ಒಂದು ಲೋಕ" – 1885

ದರ ಸೌಂದರ್ಯ ಪೆಕ್ಷೆ ಅಷ್ಟೇ ಸಂತೋಷವನ್ನು ಹೊಂದಲಿಕ್ಕಾಗಿ ಪಡೆಯಲು ಇಚ್ಛಿಸುತ್ತಾನಲ್ಲದೆ ವಿಜ್ಞಾನವು ಅವನಿಗೆ ಜನಾಂಗದ ದುಸ್ಥಿತಿಯನ್ನು ಸರಿಯಾಗಿಯೂ ತೋರಿಸಿದೆ. ನಿಸರ್ಗದ ಅಲ್ಪ ವಿಷಯವನ್ನು ಕುರಿತಾದ ವೈಜ್ಞಾನಿಕನ ಕೃತಿಯೊಂದು ಕೋಟಿ ಶಿಶಿರೋದ್ದನಿಯು ಒಂದಕ್ಕಿಂತ ಒಂದು ಮೇಲಾಗಿ ಇದ್ದರೂ ಅವೆಲ್ಲವೂ ಎಲ್ಲಾ ಜನಕ್ಕೂ ಪ್ರಯೋಜನವಾಗುತ್ತದಲ್ಲದೆ ಒಬ್ಬನಿಗೆ ಮಾತ್ರವಲ್ಲ." *

ಇವೆಲ್ಲ ಅಲ್ಲದೆ ದುರಾಚಾರಗಳನ್ನು ನಿವಾರಿಸಲು ಹೋರಾಡುವುದು ಬರೇ ಕೆಲಕಾಲದ ಕಾರ್ಯಕ್ರಮವಲ್ಲದೆ ಅಂಥಾ ಹೋರಾಟವು ಉತ್ಕ್ರಾಂತಿ (evolution)ಯ ಜತೆಗೆ ಅದು ಅನಿವಾರ್ಯಕವಾಗಿ ಬೇಕಾದುದೇನೂ ಅಲ್ಲ, ಕೆಟ್ಟದ್ದನ್ನು ತಡೆಗಟ್ಟುವುದರಲ್ಲಿ ನಾಸ್ತಿಕವಾದವು ತುಂಬಾ ಕ್ರಾಂತಿಯ ಚಿಹ್ನೆಯನ್ನು ತೋರಿಸುತ್ತದಲ್ಲದೆ ನಿರಾಶೆಯನ್ನು ಅಲ್ಲ. ಕ್ರೈಸ್ತನಿಗೆ ಒಳ್ಳೆಯದೆಲ್ಲ ಹಿತವೋ ಕೆಟ್ಟದ್ದೂ ಅಷ್ಟೇ ಹಿತವಾಗಿದೆ, ಕೆಟ್ಟದು ದೇವರ ಅನುಮತಿಯಿಂದ ಇರುವಂಥದ್ದಾಗಿದೆ, ನಮ್ಮ ಜ್ಞಾನಾಂಗಗಳು ಭ್ರಷ್ಟತೆಯಿಂದ ಕೂಡಿದ್ದು, ಅದು ಅಹಿತವೆನ್ನಿಸಲು ಸಿದ್ಧವಾಗಿರುವುದು, ಎಲ್ಲ ಪಾಪಕೃತ್ಯ ಮತ್ತು ಕಷ್ಟಗಳನ್ನೊದಗಿಸುವ ಪ್ರಗತಿಯೂ ನಮ್ಮ ಸ್ವಭಾವವೇ ಇದೆ, ಲೋಕದ ಕೆಟ್ಟುದಕ್ಕೆ ಎದುರಾಗಿ ಮುಖವನಿಟ್ಟ ಕ್ರೈಸ್ತನಿಗೆ ಭವಿಷ್ಯದಲ್ಲಿ ಏನು ವಿಶ್ವಾಸವಿದೆ? ಪಾಪವು ಎಲ್ಲಿಂದ ಬರುವುದೆಂಬ ಪ್ರಶ್ನೆಗೆ ಉತ್ತರವೇನು? ಹೇಗೂ ನಾಸ್ತಿಕನಿಗೆ ಬಲವಾದ ಸಮಸ್ಯೆಯು ನಾಸ್ತಿಕತೆಯಲ್ಲಿಯೇ ಇದೆಯಲ್ಲದೆ ಅವನಿಗೆ ಅದರಿಂದ ನಿರಾಶೆಯನ್ನು ಹೊಂದಲು ಏನೂ ಇಲ್ಲ, ಕೆಟ್ಟದು ಅಜ್ಞಾನದಿಂದ ಉದಿಸುತ್ತದೆಂದು ನಾವು ಹೇಳುತ್ತೇವೆ; ಅಜ್ಞಾನವೆಂದರೆ ಶಾರೀರಿಕ ಮತ್ತು ನೈತಿಕ ವಿಷಯಗಳನ್ನು ಒಳಗೊಂಡಿದೆ, ಮೊದಲನೇದಾಗಿ ಶಾರೀರಿಕ ಜೀವನ ವಿಧಾನದಲ್ಲಿ ತಿಳುವಳಿಕೆ ಇಲ್ಲದಿರುವುದು; ತಂದೆ ತಾಯಿಗಳು ಅಸಹ್ಯವಾದ ಗಾಳಿ ಎಟುಕದೇ ಇರುವ ಕತ್ತಲೆ ಮಳಿಗೆಗಳಲ್ಲಿ ಜೀವಿಸುತ್ತಾ, ಮಿತಿಯಿಂದ ಸತ್ವಹೀನ ಹಾಗೂ ಅನಾರೋಗ್ಯಕರವಾದ ಆಹಾರವನ್ನು ಸೇವಿಸಲು ನಿತ್ರಾಣಿಗಳಾಗಿ ಶಕ್ತಿಯಿಲ್ಲದೆ ಬಹುಶಃ ಅವರ ನರನಾಡಿಗಳಲ್ಲಿ ರೋಗವು ಸಹ ಹುದುಗಿರುವುದು. ಅಂಥಾ ತಂದೆತಾಯಿಗಳು ಸರಿಯಾಗಿ ಪೋಷಿಸಲ್ಪಡದ ಮತ್ತು ಅನಾರೋಗ್ಯದ ಮಕ್ಕಳನ್ನು ಪ್ರಪಂಚದಲ್ಲಿ ಬಿಡುತ್ತಾರೆ. ಅಂಥಾ ಮಕ್ಕಳ ಮಿದುಳು ಅವರ ಶರೀರದ ಒಂದು ಭಾಗವಾಗಿ ಬೆಳೆದಿರುವುದಿಲ್ಲ. ಆಗ ಅವರು ಮಾನವೀಯ ಗುಣದ ಬಡ

* "ದೇವರೇ ಇಲ್ಲದ ಒಂದು ಲೋಕ" — 1885.

ಲು ಪಸ್ತ್ರ ಜೀವಿಗಳ ಗುಣ್ಣಾಪನ್ನ ಅವಲಂಬಿಸುವವರಾಗುತ್ತಾರೆ. ಹಾಗಾಗುತ್ತ ವಾಗಿ ಅವರ ಜೀವನವು ಸಮಾಜ ಜೀವನಕ್ಕೆ ಹಿಡಿಸದ ಅಮಾನತರ ರೀತಿಯಲ್ಲಿಂತಾಗುತ್ತದೆ. ಅವರು ಬೆಳೆಯುತ್ತ ಬಂದಾಗ್ಯೂ ಅವರ ವಾತಾವರಣ, ಮನೆ, ಆಹಾರ, ಇತರ ಜನರು — ಹೀಗೆ ಎಲ್ಲವೂ ಅಹಿತವಾಗಿಯೇ ಇರುತ್ತವೆ; ಅಪರಾಧಗಳನ್ನೆಸಗುವ ವಿದ್ಯೆಯನ್ನು ಕಲಿಯುವರು; ಚಿತ್ರದ ಬೀಜದಿಂದ ಅದಕ್ಕೆ ತಕ್ಕ ಹಾದಿದನ್ನು ಕಲಿಯುತ್ತಾರೆ. ದಾರಿದ್ರ್ಯ, ಶೋಷಣೆ, ಮತ್ತು ಹಸಿವು ಹೆಚ್ಚಾದಾಗ ದುಷ್ಕೃತ್ಯವೆಂಬ ಬೆಳೆಯು ಹೆಚ್ಚುತ್ತದೆ. ಇದಕ್ಕೆಲ್ಲ ಮೂಲ ಬಡತನ ಮತ್ತು ಅಜ್ಞಾನವೇ ಆಗಿದೆ. ಮಕ್ಕಳಿಗೆ ವಿದ್ಯೆಯನ್ನು ಕೊಡಿರಿ. ಅವರು ಪ್ರಾಯಕ್ಕೆ ಬಂದ ನಂತರ ಅವರ ಕೌಶಲಕ್ಕೆ ಮತ್ತು ಯೋಗ್ಯತೆಗೆ ತಕ್ಕಂತೆ ತಲಬನ್ನು ಕೊಡಿರಿ, ಹಾಗಾದರೆ ಅಪರಾಧ ಮತ್ತು ದುಷ್ಕೃತ್ಯಗಳು ಕ್ರಮೇಣ ಕಡಿಮೆಯಾಗಿ ಅದೆಂಬುದೇ ಇಲ್ಲದಾಗುತ್ತವೆ! ಮಾನವನು ದೇವರಿಂದ ನಿರ್ಮಿಸಲ್ಪಟ್ಟವನೆಂದು ಈಶ್ವರವಾದವು ಹೇಳುತ್ತದೆ, ಸಂದರ್ಭದ ಕಾರಣಗಳು ಮಾನವನನ್ನು ನಿರ್ಮಿಸಿದುವೆಂದು ನಾಸ್ತಿಕವಾದವು ಹೇಳುತ್ತದೆ. ಹೇಗೂ ತಂದೆತಾಯಿಗಳು ಹೇಗೋ ಹಾಗೆಯೇ ಮಾನವನು ಅವರ ಪ್ರತಿಕೃತಿ; ಅವನ ವಾತಾವರಣವು ಹೇಗೋ ಹಾಗೆಯೇ ಅವನು! ಅವೆಲ್ಲವೂ ಅವನನ್ನು ಹೀಗೆ ರೂಪಿಸುತ್ತವೆ ಅಂತೆಯೇ ಅವನು! ಅವನು ಭೂತಕಾಲದ ಹಿಂದು ಅಂಶವಾಗಿ ಹುಟ್ಟಿ ಅದೀಗ ಅವನ ಯಥಾಸ್ಥಿತಿಯನ್ನು ರೂಪಿಸುತ್ತಾನೆ. ಹೀಗೆ ಕರ್ಮ ಮತ್ತು ಪ್ರತಿಕರ್ಮ (action and reaction)ವು ಮುಂದುವರಿಯುವುದು; ಅವನು ಗತಕಾಲದ ಹಿಂದು ಅಂಶಮಾತ್ರವಲ್ಲದೆ ಮುಂಬರುವುದಕ್ಕೆ ಹಿಂದು ರೀತಿಯಲ್ಲಿ ಕಾರಣನೂ ಆಗಿರುವವನು. ಸಂದರ್ಭವನ್ನು ಬದಲಿಸಿರಿ! ಪರಿಣಾಮವು ಸುಳ್ಳಿಯದಾಗುತ್ತದೆ. ಆರೋಗ್ಯಕರವಾದ ದೇಹ ಮತ್ತು ಶುದ್ಧವಾದ ಮನಸ್ಸುಗಳನ್ನು ಪೋಷಿಸಿರಿ. ಹಾಗಾದರೆ ಅಪ್ರಮತ ಅವ್ಯವಸ್ಥೆಗಳ ರೋಗದಿಂದ ತುಂಬಿದ ಪರಿಸ್ಥಿತಿಯು ಮಾಯವಾಗುತ್ತದೆ. ಹೇಗೂ ಅಂಥಾ ನಮ್ಮ ಕಾರ್ಯಕ್ರಮವು ತುಂಬಾ ಆಶಾದಾಯಕವಾಗಿದೆ. ದೇವರ ಭಯಾನಕವಾದ ಇಚ್ಛಾನಿಚ್ಛೆಗಳನ್ನು ಪ್ರತಿಭಟಿಸಲಿಕ್ಕೇನೂ ಇಲ್ಲ, ನಿರಾಶಾದಾಯಕವಾದ ಭವಿಷ್ಯ ಮತ್ತು ಹೆಚ್ಚಾಗಿ ಕೆಟ್ಟದು ಸಂಭವಿಸಿ ಕಡೆಗೆ ಅವೆಲ್ಲವನ್ನೂ ದಹಿಸುವಂಥ ಸ್ಥಿತಿ ನಮ್ಮ ಮುಂದಿಲ್ಲ. ಆದರೆ ಸರಿ-ಸಮಾನವಾದ ವಿಧಿ ನಿಯಮಗಳು, ಹೆಚ್ಚು ವಿದ್ಯೆ, ಜ್ಞಾನವನ್ನು ಸಮಾನವಾಗಿ ಹಂಚುವಿಕೆ, ದಾರಿದ್ರ್ಯವನ್ನು ಕಿತ್ತುಹಾಕುವಿಕೆ, ಅಜ್ಞಾನವನ್ನು ತೊಡೆಯುವಿಕೆ, ಮತ್ತು ಸ್ವತಂತ್ರ ಭಾವನೆಯನ್ನು ಪ್ರೋತ್ಸಾಹಿಸುವಿಕೆ — ಇಂಥವುಗಳನ್ನು ನಮ್ಮ ಪರಿಶ್ರಮದಿಂದ ಸಮೃದ್ಧವಾಗುತ್ತಿರುವ ಜನಾಂಗಕ್ಕೆ ಇನ್ನಷ್ಟು ಸಮೃದ್ಧವಾಗಿ ಮಾಡಲು ನಮ್ಮ ಸಾಧಕ ಕಾರ್ಯದ

ಸಮೀಪಕ್ಕೇನೇ ಆ ಭವ್ಯ ಭವಿಷ್ಯವನ್ನು ತಂದು ಕೊಡುವಂತಾಗಬೇಕು.*

ನಿಸ್ಸಾರಸ್ವರೂಪವಾದ ಇಚ್ಛೆಯಿಂದ ಲೋಕವನ್ನು ಅಭಿವೃದ್ಧಿಪಡಿಸುವುದು ಸಂತೋಷದಿಂದ ಮತ್ತು ಆತ್ಮವಿಶ್ವಾಸದಿಂದ ಮುನ್ನಡೆಯುವುದೇ ನಮ್ಮ ಕಾಲದ ಅತಿ ಮಹತ್ವವಾದ ನಾಸ್ತಿಕವಾದದ ವಿಶಿಷ್ಟ ಗುಣಗಳಾಗಿವೆ. ಸನ್ನಡತೆ, ಆಡಂಬರ ಮತ್ತು ಆಧುನಿಕ ನಾಗರಿಕತೆಯ ಲೋಭದ ಮಧ್ಯೆ ಅದು ಮಾನವನನ್ನು ಮೇಲೆತ್ತಲು ಇರುವ ಯೋಗ್ಯ ಸಾಧನವಾಗಿದೆ. ಮತ ಸ್ಥಾಪಕರುಗಳ ಹೆಸರಿನಲ್ಲಿ ಕಾಣುತ್ತಿರುವ ದುರ್ನಯಗ್ರಸ್ತವಾದ ಮತ್ತು ಸೋಮಾರಿ ಜನಾಂಗಕ್ಕೆ ಸನ್ನಡತೆ ಮತ್ತು ಪರಿಪುಷ್ಟವಾದ ಸೌಜನ್ಯವನ್ನು ತರಬೇತುಗೊಳಿಸಲು ನಾಸ್ತಿಕವಾದದ ವೇದಿಕೆಯು ಅಮೋಘವಾದ ಶಕ್ತಿಯಾಗಿದೆ. ನ್ಯಾಯವನ್ನು ಅದು ದೈವೇಚ್ಛೆಯಿಂದು ಎಂದೆಣಿಸಿ ಪಾರಿತಕರ್ತದನ್ನು ಮಂಡಿಸಿಕೊಳ್ಳಲಾರದು. “ಯಾರಿಗೂ ದುಡಿಯಲಾಗದ ವೇಳೆಗೆ ಕತ್ತಲಾಗುವುದು,” ಎಂಬ ಹೇಳಿಕೆಯನ್ನನುಸರಿಸಿ ನಾಸ್ತಿಕವಾದವು ಕಾರ್ಯೋನ್ಮುಖವಾಗುವುದು. ವೈಯಕ್ತಿಕ ಭವಿಷ್ಯವನ್ನು ಬಿಟ್ಟು ಅದು ಅದರ ವಿಶ್ವಾಸವನ್ನೆಲ್ಲ ಜನಾಂಗದ ಆಶಾವಾದದೊಡನೆ ಲೀನವಾಗಿಸುವುದು. ಯಾವ ದೇವತೆಯಿಂದ ಯಾವ ಸಹಾಯವೂ ದೊರಕುವುದೆಂಬುದನ್ನು ನಂಬದೆ ಆ ನಾಸ್ತಿಕವಾದವು ತನ್ನ ಸ್ವಂತ ಶಕ್ತಿಯಿಂದ ಮಾನವರ ಉದ್ಧಾರವನ್ನು ಬಯಸಿ ತುಂಬಾ ಶ್ರಮಿಸುತ್ತದೆ. ಶ್ರೀಮತಿ ಕೋಬ್ಬೆ (Miss Cobbe) ಇವಳು ಭೂಮಿಯ ಶೋಕಾಚಾರಾದಿಗಳೆಲ್ಲ ಮುಂದಕ್ಕೆ ಶುಭಮಯವಾಗಿ ಮಾರ್ಪಡುತ್ತದೆಂದು ಕೊಟ್ಟ ವಚನವು ನಮಗೆ ಚಿಕ್ಕೇನೂ ಸಮಾಧಾನವನ್ನುಂಟು ಮಾಡಲಿಲ್ಲ. ಮಾನವನು ಸತ್ತರೂ ಹುಟ್ಟುವನು, ಎಂಬುದನ್ನು ನಾವು ನಂಬಿದರೂ ಮುಂಬರುವ ಜಗತ್ತು ಇದಕ್ಕಿಂತ ಉತ್ತಮವಾಗಿರುತ್ತದೆಂಬುದನ್ನು ಹೇಗೆ ತಾನೇ ಹೇಳಬಹುದು? ಈ ಲೋಕವು ಉತ್ತಮವಾಗಿದೆಯೆಂದು ಶ್ರೀಮತಿ ಕೋಬ್ಬೆ ಇವಳು ಪ್ರಮಾಣಪೂರ್ವಕವಾಗಿ ನಮಗೆ ಹೇಳುತ್ತಾಳೆ. ಮುಂದಿನ ಲೋಕವು ಸಹ ದೇವರದೇ ಅಲ್ಲದೆ ಮತ್ತಾರದಾಗಬಲ್ಲದು? ಈ ಲೋಕದಲ್ಲಿ ಅವನು ಜರುಗಿಸುವ ಹಲವು ಅಕೃತ್ಯಗಳು ಇನ್ನೊಂದು ಲೋಕದಲ್ಲಿ ಇಲ್ಲದಂತಾಗಿಸಲು ಆ ದೇವರು ಇನ್ನಷ್ಟು ಬಲಶಾಲಿಯೂ ಉತ್ತಮನೂ ಆಗುವನೋ? ಅವನು ಬೇರೊಂದು ವಿಧದಲ್ಲಿ ಆಲೋಚಿಸುವನೋ ಅಥವಾ ಇಹಲೋಕದ ಸಂಕಷ್ಟಗಳನ್ನು ಕುರಿತು ಯೋಚಿಸುತ್ತಾ ಬೇಸತ್ತು ದಣಿದಿರುವನೋ? ಈ ಜಗತ್ತು ಓರ್ವ ದೇವನ ಅಂಕಿತದಲ್ಲಿದ್ದು ಅವನ ಆದೇಶದಂತೆ ಎಲ್ಲ ಅಕೃತ್ಯಗಳೂ ನೋವುಗಳೂ ಉಂಟಾಗುತ್ತವೆಯೆಂಬುದು ಅನಿಷ್ಟ

* "ನಾಸ್ತಿಕವಾದದ ಸೂಕ್ತಿಗಳು" - 1876.

ವೂ ಹಾಗೆ ಸಂಭವಿಸಲಾರದ ಇಷ್ಟು ಪ್ರಾಚೀನ ಕಲ್ಪನೆಯೂ ಅಗಾಧವೆಂದು ನನಗೆ ತೋರುತ್ತದೆ. ಮಾನವನು ತನ್ನ ಆಲೋಚನಾ ಶಕ್ತಿ ಮತ್ತು ಯುಕ್ತಿಗಳಿಂದ ಇಷ್ಟು ಸಾಧಿಸಿರುವಾಗ ಮತ್ತು ಮಿಕ್ಕೆಲ್ಲವದನ್ನು ಇನ್ನೂ ಸಮಗ್ರಗೊಳ್ಳಬಹುದಾಗಿರುವಾಗ ಈ ಭೂಮಿಯ ಅನಾಚಾರ ಮತ್ತು ದುಃಖವನ್ನು ಅವನು ಹೋಗಲಾಡಿಸುವುದಕ್ಕೆ ಪ್ರಯತ್ನಿಸುವನೆಂಬುದರಲ್ಲಿ ನಂಬಿಕೆಯನ್ನಿಡಬಹುದು; ಆದರೆ ಅಗೋಚರ ಶಕ್ತಿಯೊಂದಕ್ಕೆ ಎದುರಾಗಿ ಅವರು ದುಡಿಯುವುದಾದರೆ ಈ ಲೋಕದ ಭವಿಷ್ಯವು ನಿಜವಾಗಿಯೂ ಅಪಾಯಕರವಾಗಿಲ್ಲ. "ಅಹಿತಗಳ ಅಂತಿಮ ಗತಿ"ಯನ್ನು ಗಮನಿಸಿ ಮತ್ತು ಅಸುರಿಯನ್ನು ಮೆಟ್ಟಲು ಪ್ರತಿಯೊಬ್ಬನೂ ಸಾಧ್ಯವಿದ್ದಷ್ಟು ಶ್ರಮಿಸಬೇಕೆಂಬುದನ್ನು ನಂಬುತ್ತಾ ನಾಸ್ತಿಕನು ಲೋಕದ ಹಿತವನ್ನು ಬಯಸುವವನು. ಅವನು ಈ ಲೋಕದ ಪ್ರಗತಿಗಾಗಿ ದುಡಿಯುವನೆಂಬುದನ್ನು ಸಂತೋಷದಿಂದ ನೆಚ್ಚುತ್ತಲೇ ಮುಂದಕ್ಕೆ ಸಾಗುವವನು. ತನ್ನ ವೈಯಕ್ತಿಕ ಲಾಭವನ್ನು ನಿರೀಕ್ಷಿಸದೆ, ಸ್ವರ್ಗೀಯ ಬಹುಮಾನದಿಂದ ತನಗೆ ದ್ರವ್ಯಲಾಭವಾಗಲೆಂದು ಅದಕ್ಕಾಗಿ ಹಾತೊರೆಯದೆ ಅವನು ಶ್ರಮಿಸುವವನು, ಮತ್ತು ಪ್ರೀತಿಸುವವನು, ಭವಿಷ್ಯವನ್ನು ಇಂದಿನದಕ್ಕಿಂತ ಚೆಲುವಾಗಿ ಕಲ್ಪಿಸುತ್ತಿರುವನೆಂಬುದಾಗಿ ತೃಪ್ತಿಪಡುವವನು, ಹೊಸ ಸುಂದರ ಭೂಮಿಯನ್ನು ಸಂತೋಷಪ್ರದವಾದ ಜನಾಂಗಕ್ಕಾಗಿ ನಿರ್ಮಿಸುತ್ತಿರುವೆನೆಂದು ಆನಂದಿಸುವವನು. *

ಕ್ರಿ. ಶ. 1874 ರಿಂದ 1886 ರ ವರೆಗೆ ನನ್ನ ಜೀವನದ ಮತ್ತು ನನ್ನ ಮನಸ್ಸಿನ ಮೇಲೆ ಪ್ರಭಾವವನ್ನು ಬೀರಿದ್ದ ಅಭಿಮತ ಮತ್ತು ನೈತಿಕ ಧರ್ಮವು ಆ ರೀತಿಯಾಗಿತ್ತು. ಅನಂತರ 1889 ರ ವರೆಗೂ ಕೆಲವು ಸಂದೇಹಗಳಿಗೊಳಗಾದೆನಾದರೂ ತನ್ನ ಇತರ ಗೊಂದಲಗಳ ಮತ್ತು ಮನೋಕ್ಷೋಭೆಗಳ ಎಡೆಯಲ್ಲಿ ನಾನು ಮಾನಸಿಕವಾಗಿ ಶಕ್ತಿಯನ್ನೂ ಸಂತೋಷವನ್ನೂ ಹೊಂದಿದೆನು, ಅಲ್ಲದೆ ಅದು ನನಗೆ ಇತ್ತ ಮಾನಸಿಕ ಮತ್ತು ನೈತಿಕ ಬೋಧನೆಗೆ, ನನ್ನನ್ನು ಪೋಷಿಸಿದ ಆತ್ಮವಿಶ್ವಾಸಕ್ಕೆ, ನನ್ನಲ್ಲಿ ಬೇರೂರಿಸಿದ ಪರೋಪಕಾರ ಬುದ್ಧಿಗೆ, ನನ್ನಲ್ಲಿ ಪ್ರೇರೇಪಿಸಿದ ಆ ಮಾನವ ಜನಾಂಗದ ಐಕ್ಯದ ಬಗ್ಗೆ ಹಾರ್ದಿಕ ಭಾವನೆಗೆ, ಮತ್ತು ಅವುಗಳಿಗಾಗಿ ಶ್ರಮಿಸಲು ಈಗಲೂ ಇತ್ತ ಸ್ಫೂರ್ತಿಗೆ ನಾನು ನಿರಂತರವೂ ಕೃತಜ್ಞಳಾಗಿದ್ದೇನೆ. ಸ್ವತಂತ್ರ ಅಭಿಪ್ರಾಯದ Free-thought ಸಂಸ್ಥೆಗೆ ಬಹುಶಃ ನಾನು ಸಲ್ಲಿಸುವ ಕೃತಜ್ಞತೆಯೆಂದರೆ ಅದು ಮನಸ್ಸನ್ನು ಹೊಸ ಸತ್ಯಾನ್ವೇಷಣೆಯ ಬಗ್ಗೆ ತೆರೆಯುತು. ನಿಸರ್ಗವನ್ನು ಕಲಿತಾಗ

---

* "ದೇವರೇ ಇಲ್ಲದ ಸುಂದರ ಲೋಕ" — 1885.

ಸ್ವಲ್ಪವೂ ಸಂಕೋಚಪಡದೆ ಕ್ರಿಶ್ಚಿಯನರನ್ನಾಗಿ ಕರೆಯಿಸುತ್ತ; ಮತ್ತು ಸಾಂಪ್ರದಾಯಿಕವಾಗಿ ಬಂದುದಕ್ಕೆ ಎಷ್ಟೇ ವಿರೋಧವಿದ್ದರೂ ಪ್ರಮಾಣಪೂರ್ವಕವಾದ ಆಧಾರದಿಂದ ಕೂಡಿದ ಹೊಸ ಸಿದ್ಧಾಂತಗಳಿಂದ ಅದು ಮಲಿನವಾಗಲಿಲ್ಲ. ಎಲ್ಲ ಸ್ವತಂತ್ರ ಮನೋಭಾವದವರು (free-thinkers) ಈ ಸಾರವನ್ನು ಕಲಿಯುತ್ತಿಲ್ಲವೆಂಬುದನ್ನು ನಾನು ಬಲ್ಲೆ! ಖೇದದಿಂದ ಹೇಳುತ್ತಾ ಒಪ್ಪುತ್ತೇನೆ. ಆದರೆ ನಾನು ಚಾರ್ಲ್ಸ್ ಬ್ರ್ಯಾಡ್ಲೋರೊಡನೆಯೇ ದುಡಿದೆನು; ಮತ್ತು ನಾವು ಯಾವ ಸ್ವತಂತ್ರ ಮನೋಭಾವ (free-thought) ವನ್ನು ಪ್ರಚಾರಪಡಿಸಲು ಶ್ರಮಿಸಿದೆವೋ ಅದು (a free-thought ಸಂಸ್ಥೆ) ವಿಸ್ತೃತವಾದ ನಿಲುವು ಮತ್ತು ವಿಶಾಲ ಹೃದಯದಿಂದಲೂ ಕೂಡಿದ್ದಾಗಿತ್ತು.

ನಾನು ವೇದಿಕೆಯ ಮೇಲೇರಿ ನನ್ನ ಚಟುವಟಿಕೆಯನ್ನು ಆರಂಭಿಸಿದೊಡನೆಯೇ ಇದೀಗ ನಾವು ನೋಡಬಹುದಾದಂತೆ ನನಗೆ ವಿರೋಧವಾಗಿ ಪ್ರತಿಭಟನೆಯ ಕಿಡಿಯು ಸ್ಫೋಟಿಸತೊಡಗಿತು. ಅದು ಜನರ ಅಜ್ಞಾನದಿಂದಲೂ ನಾನು ಕ್ರೈಸ್ತಧರ್ಮವನ್ನು ನೇರವಾಗಿ ಟೀಕಿಸಿದ್ದರಿಂದಲೂ ಹಾಗೆ ಟೀಕಿಸುವಾಗ ನಾನೇ ಒಬ್ಬ ಕಾದಾಳಿನಂತೆ ರೌದ್ರತೆಯನ್ನು ತೋರಿಸಿದ್ದರಿಂದಲೂ, ಇವೆಲ್ಲಕ್ಕೂ ಮೀರಿ ರಾಜಕೀಯದಲ್ಲಿ ನಾನು ತೀವ್ರಗಾಮಿಯಾಗಿ ಇದ್ದ ಕಾರಣದಿಂದಲೂ ಆಗಿತ್ತು. ಎಲ್ಲ ಸಾಂಪ್ರದಾಯಿಕ ನಂಬಿಕೆಗಳೂ ಪರಂಪರಾನುಗತವಾಗಿ ಬಂದ ಸಮಾಜದ ರೀತಿ ನೀತಿಗಳೆಲ್ಲವೂ ನನಗೆ ವಿರೋಧವಾಗಿದ್ದುವು, ಅವುಗಳನ್ನು ನಾನು ಟೀಕಿಸಿದೆನಾದರೂ ಉಪಹಾಸ ಕಟ್ಟಿಕೊಂಡು ತುಂಬಾ ಕ್ಷಮೆ ತೋರುತ್ತಾ ಟೀಕಿಸುತ್ತಿಲ್ಲ, ಕೇವಲ ಬುದ್ಧಿಶಕ್ತಿಯ ವಾಗ್ವಾದವನ್ನು ಬೆಳೆಸುವ ಹುಮ್ಮಸ್ಸಿನಿಂದ ಬಹು ಸಂತೋಷದಿಂದಲೂ ಉದ್ಧಟತನದಿಂದಲೂ ಅವುಗಳನ್ನು ಪ್ರತಿಭಟಿಸಿದೆನು. ಬಡಜನರ ಕಷ್ಟದ ಬಗ್ಗೆ ನಾನು ಅತೀವ ಸಂತಾಪವನ್ನು ವ್ಯಕ್ತಪಡಿಸಿದೆನು, ಇಲ್ಲಿ ಮಾತ್ರವಲ್ಲ, ಎಲ್ಲ ಕಡೆಯಲ್ಲೂ ಇರುವ ಬಡಜನರ ನಿರ್ಲಕ್ಷ್ಯತೆಯ ಬಗ್ಗೆ ನಾನು ಹಾರ್ದಿಕ ಸಂತಾಪದಿಂದಲೂ ಶ್ರಮಸಾಧ್ಯವಾಗಿ ದುಡಿಯುವ ಮತ್ತು ತಮ್ಮ ಶಕ್ತಿಯನ್ನು ಮೀರಿ ಶ್ರಮಿಸುವ ಜನರ ಮೇಲೆ ದಯೆಯಿಂದಲೂ ಸ್ವಾತಂತ್ರ್ಯ ಮತ್ತು ನ್ಯಾಯಕ್ಕೆ ಎಲ್ಲಿ ಪೆಟ್ಟು ಬಿತ್ತೋ ಅಲ್ಲಿ ನನ್ನ ಲೇಖನಿ ಅಸಿವಾ ನಾಲಗೆಯು ಆ ಮಾನವನ್ನು ಛೇದಿಸುವಂತೆ ಕಿಡಿಗೆದರಿಸುತ್ತಾ ಹೋರಾಡುತ್ತಲಾಗಿದ್ದೆನು. ಆ ಜ್ಯೋತಿರ್ಮಯವಾದ ಶಿಲುಬೆಯು ನಿರಂತರವೂ ಅಲಂಕಾರಿಕವಾಗಿ ತೋರುತ್ತಿದ್ದಿತ್ತಾದರೂ ಅನುಕೂಲತೆಯಿಂದ ಬಾಳುತ್ತಿದ್ದವರವರನ್ನು ಅವರ ವಿಶ್ರಾಂತಿಯಿಂದೆಬ್ಬಿಸಿ ಅಲುಗಾಡಿಸಿದಾಗ ಅವರು ನನಗೆ ಕೃತಜ್ಞರಾಗಲಿಲ್ಲ.

ಅಜ್ಞಾನದ ಫಲವಾಗಿ ಜನರು ನಾಸ್ತಿಕತೆಯನ್ನು ಅನೈ

ತಿಳಿಸಿ ಮತ್ತು ಮನುಷ್ಯ ಜೀವಿಗಳ ಜೀವನಕ್ಕೆ ಸಮಾನವಾದುದು ಎಂದು
ನನ್ನನ್ನು ಖಂಡಿಸಿದರು, ನನ್ನ ವರ್ತನೆಯ ಶೈಲಿಯಿಂದ ನಾನು
ನಾಸ್ತಿಕವಾದಿಯಾಗಿದ್ದುದರಿಂದ ನೈತಿಕ ನಿಯಮಗಳೇ ಇಲ್ಲದವಳೆಂದೂ
ಯಾವ ಆಧಾರವೂ ಇಲ್ಲದೆ ಅಂತೆಯೇ ಟೀಕಿಸಿದರು. ಆಸ್ಟರ್‌ನ
ಓವರ್ ಕ್ರಿಸ್ತ ವಿರೋಧಿಯು ನಾನು "ಉಚಿತಾರ್ಥವಾಗಿ ಪ್ರೀತಿ"ಯ
ನ್ನು ಬೋಧಿಸುವವಳೆಂಬುದಾಗಿ ನಾನು ಓದದೇ ಇದ್ದ ಒಂದು ಗ್ರಂ
ಥದ ಆ ನುಡಿಗಳನ್ನು ಆಧಾರವಾಗಿತ್ತು ನನ್ನನ್ನು ಜರೆದನು. ಆದ
ರೆ ನಾನು National Reformer ಪತ್ರಿಕೆಯನ್ನು ನೋಡದೇ
ಇದ್ದುದಕ್ಕಿಂತ ಹಿಂದೆ ಅದರಲ್ಲಿ ಮತ್ತು ಲಂಡನ್ನಿನ ಇತರ ಪ
ತ್ರಿಕೆಗಳಲ್ಲಿ "ಉಚಿತಾರ್ಥ ಪ್ರೀತಿ"ಯನ್ನು ಕುರಿತು ಪ್ರಸ್ತಾಪಿಸ
ದ ನಿಷಿದ್ಧಾರ್ಥವಾದ ವಾದಗಳನ್ನು ಕುರಿತು ಸ್ಪಷ್ಟವಾಗಿ ವಿಮ
ರ್ಶೆಯನ್ನು ನಡೆಸಿದ್ದೆನು, ಆ ವಾದಕ್ಕೆ ಶ್ರೀಮಾನ್ ಬ್ರಾಡ್ಲೆಯು
ಬಲವಾಗಿ ವಿರೋಧಿಸಿಯೇ ಇದ್ದನು, ಅಷ್ಟೇ ಅಲ್ಲ, ಅವರ ಟೀಕೆ
ಪ್ರತಿಭಟನೆಗಳು ನಾನು ಹೇಳದೇ ಇದ್ದ ವಿಷಯಗಳ ಮೇಲೂ
ಇದ್ದುವು, Christian Evidence Society - ಈ ಸಂಸ್ಥೆಯ
ವರು ಅವರ ಬೀದಿಯ ಬೋಧನೆಗಳ ವೇಳೆಗೆ ನಾನು ವೈಯಕ್ತಿ
ಕವಾಗಿ ಗರ್ಭಾಹೀನಳೆಂಬುದಾಗಿ ನನ್ನನ್ನು ಜರೆದರು, ಇದರ ಬಗ್ಗೆ
ಸತ್ಯವೇನೆಂಬುದಾಗಿ ಆ ಸಂಸ್ಥೆಯ ಕಾರ್ಯದರ್ಶಿ ರೆವರೆಂಡ್
ಇಂಗ್ಲಿಸ್ಟ್ರಮ್ ಎಂಬುವನಿಗೆ ಬರೆದಾಗ ಅವರಿಂದ ಅಂತಹ ಆರೋಪಣೆ
ಗಳನ್ನು ನಿಂದನೆಗಳನ್ನು ಪ್ರಕಟಪಡಿಸಿದ್ದೇ ಇಲ್ಲವೆಂಬುದಾಗಿ
ಉತ್ತರ ಬಂತು, ಆದರೂ ಪಾದ್ರಿಗಳು ಅವರ ಟೀಕೆಯನ್ನು ನಿಂ
ದನೆಯನ್ನು ನಿಲ್ಲಿಸಲಿಲ್ಲ. ಅವರು ಹಾಗೆ "ಹೇಳಿದ್ದೇ ಇಲ್ಲ" ಎಂಬು
ದಾಗಿ ಕ್ಷಮೆಯನ್ನು ಕೋರಿದರು ಸಹ ಯಾವ ಪ್ರಯೋಜನಕ್ಕೂ
ಬಾರದಾಯಿತು, ಈ ಜನರ ಪ್ರಚಾರ ಕಾರ್ಯಕ್ಕೆ ಯಾವೊಂ
ದು ಆರೋಪಣೆಯೂ ಅಸಹ್ಯವಾಗಿ ಕಾಣಲಿಲ್ಲ, ಅವರಿಗೆ ಯಾವ
ನಿಂದನೆಯೂ ನಿರಾಧಾರವಾಗಿ ತೋರಲಿಲ್ಲ, ಬಹು ಕಾಲದ ವರೆಗೂ
ಅವರ ಈ ಅಪಹೇಳನ ಮತ್ತು ಟೀಕೆಗಳು ನನ್ನ ಪ್ರತಿಷ್ಠೆಗೆ ಸಂ
ಗವನ್ನು ನನ್ನ ಯಶಸ್ಸಿಗೆ ಹಾನಿಯನ್ನು ತಂದು ನನ್ನನ್ನು ಸಂಕ
ಷ್ಟಕ್ಕೀಡಾಗಿಸುತ್ತು. ಹೇಗೂ ದಲಿತರ ಉದ್ಧಾರಕ್ಕಾಗಿ ನಾನು ಆ
ಅಪಹೇಳನಗಳನ್ನು ಲೆಕ್ಕಿಸದೆ ದಿಟ್ಟತನದಿಂದ ಎಂದಿನಂತೆ
ಕಾರ್ಯೋನ್ಮುಖಳಾಗುವ ಕಾಲವು ಬರಬೇಕಾಯಿತು. ಆ
ದರೆ ಅಂದಿನ ಆ ದಿನಗಳಲ್ಲಿ ನಾನು ಆ ರೀತಿಯಾಗಿ ಜನರ
ಟೀಕೆಗೆ ಪಾತ್ರವಾಗುವಂಥ ಯಾವೊಂದು ಕೆಲಸವನ್ನು ತೋ
ರಿಕೆಗಾದರೂ ಮಾಡಿದ್ದಿಲ್ಲ. ಹೆಚ್ಚು ತಿಳಿದಿರಬೇಕಾಗಿದ್ದ ವಿದ್ಯಾವಂ
ತ ಲೇಖಕರು ಸಹ ನಾಸ್ತಿಕವಾದಿಗಳ ಮೇಲೆ ಅವರು ಹಿಂಸಾ

ಕೃತ್ಯವನ್ನೆಸಗುವ ವಿನಾಶಕರೆಂಬ ನಿರಾಧಾರದ ನಿಂದನೆಗಳನ್ನು ಹೊ-
ರಿಸುತ್ತಿದ್ದರು. ಕುಮಾರಿ ಕಾಬ್ಬೆ (Miss Frances Power Cobbe)
ಇವಳು Contemporary Review ಪತ್ರಿಕೆಯಲ್ಲಿ "ದೇವರಲ್ಲಿ ವಿ-
ಶ್ವಾಸವನ್ನು ಹುಟ್ಟಿಸುವ ಎಲ್ಲ ಇಗರ್ಜಿಗಳೂ, ದೇವಸ್ಥಾನಗಳೂ ಮ-
ತ್ತು ಗುಡಿಗೋಪುರಗಳೂ ಕೇವಲ ಲೌಕಿಕ ಬಳಕೆಗಳಿಗಾಗಿ ವಿನಾಶ
ವಾಗುವುವು," ಎಂದು ಬರೆದಳು. ನಾನು ಅದಕ್ಕೆ ಉತ್ತರಿಸು-
ತ್ತೇನೆ, "ಏಕೆ? ಇಗರ್ಜಿಗಳನ್ನು, ದೇವಸ್ಥಾನಗಳನ್ನು ಮತ್ತು
ಗುಡಿಗೋಪುರಗಳನ್ನು ನಾಶಪಡಿಸುವುದೇಕೆ? ದೇವರಿಗಾಗಿ ಹಿಂ-
ದಿನ ಕಾಲದಲ್ಲಿ ವ್ಯಯಿಸಿದ ಆ ಸುಂದರ ಗುಡಿಗೋಪುರಗಳನ್ನು
ನಾಸ್ತಿಕವಾದಿಗಳು ಉಪಯೋಗಿಸುವರು. ಅವುಗಳನ್ನು ನಾಶಪಡಿ-
ಸಲಾರರು. ಆದರೆ ಅಲ್ಲಿ ದೇವರ ಬದಲಾಗಿ ಅದನ್ನೇ ಮಾನವನಿ-
ಗಾಗಿ ತೆರೆದಿಡುವುದು, ಸುಂದರ ಕಲಾಕೃತಿಗಳಿಂದ ಆಹ್ಲಾ-
ದಕರವಾದ ವರ್ಣಚಿತ್ರಗಳಿಂದ ಮೋಹಕ ಛಾಯೆಯಂತಿರುವ ಶಿ-
ಲ್ಪಕೃತಿಗಳಿಂದ, ಕನಸಿನಂತೆ, ನಸು ಬೆಳಕಿನ ನೆಲೆಯಲ್ಲಿ
ಆ ಆಹ್ಲಾದಕರವಾದ ಬಂದಿಯು ತಕ್ಕೊಳ್ಳುತ್ತಿರುವ ಮನಸ್ಸಿಗೆ
ಉಲ್ಲಾಸವನ್ನು ಹುಟ್ಟಿಸುವಂತೆ ಈ ಬ್ರಿಟಿಷ್ ಭೂಮಿಯಲ್ಲಿ
ವೆಸ್ಟ್‌ಮಿನಿಸ್ಟರ್ ಇಗರ್ಜಿಯು ಭವ್ಯಾಕಾರದಲ್ಲಿ ನಿಂತಿರುವಾಗ
ಅದನ್ನು ನಾಶಪಡಿಸುವುದೇ? ಇಲ್ಲ; ಅದನ್ನು ಮಾನವಗಣ-
ಕ್ಕಾಗಿ ಅಭಿಷೇಕ ಮಾಡಬೇಕು, ಸಿಪಾಯಿಗಳ ಸಮಾಧಿಯಲ್ಲಿ
ಕೋವಿ ಪತಾಕೆಗಳನ್ನು ಕಂಡು ನಲಿಯುವ ಕೊಬ್ಬಿದ ದೇವದೂ-
ತರ ಆಸನಗಳ ರೂಪುಗಳು ಆ ಇಗರ್ಜಿಯು ಕಂಬ, ತೊಲೆಗಂಬ,
ಕಮಾನುಗಳನ್ನು ಹಾಳುಗೆಡವಿ ಬೇರೊಂದು ಸ್ಥಳಕ್ಕೆ
ಸಾಗಿಸಲಾಗುವುದು. ಈಗ ಅನಾಗರಿಕ ಹಾಡುಗಳನ್ನು ಆಲಾ-
ಪಿಸುವ ಮತ್ತು ಸ್ತುತಿ ವಾದ್ಯಗಳು ಮೂಲಕ ಪಾರಸ್ಯ ತತ್ವ-
ಶಾಸ್ತ್ರ ವಿಧಿಗಳನ್ನು ಬೋಧಿಸುವ ಆ ಭವ್ಯ ಸುಂದರ ವೆಸ್ಟ್-
ಮಿನಿಸ್ಟರ್ ಇಗರ್ಜಿಯಲ್ಲಿ ಇನ್ನು ಮುಂದೆ ವೇಗ್ನರ್ ಮತ್ತು
ಬೀಥೋವನ್ ಇವರ ಇನಿದಾದ ಸಂಗೀತವು ಪ್ರತಿಧ್ವನಿಸು-
ವುದು. ಭವಿಷ್ಯತ್ಕಾಲದ ಗುರುಗಳು ಅಲ್ಲಿ ಒಟ್ಟುಸೇರಿ ಜಗ-
ತ್ತಿನ ಅದ್ಭುತವನ್ನು ಅದರ ಅಸಂಖ್ಯ ಸೌಂದರ್ಯ ಸೂಕ್ಷ್ಮ
ವಿಶೇಷಗಳನ್ನೂ ಜನರಿಗೆ ಹೇಳಿಕೊಡುವರು, ಆ ಎತ್ತರವಾದ
ಭವ್ಯಗೋಪುರಗಳನ್ನು ಅಳಿಸಲಾರೆವು; ಆದರೆ ಸ್ವರ್ಗಕ್ಕಾಗಿ ಭೂ-
ಮಿಯನ್ನೂ ದೇವರಿಗಾಗಿ ಮಾನವನನ್ನೂ ಅರ್ಪಿಸುವ ಮತ
ಧರ್ಮವೊಂದರ ಸಂಕೇತವಾಗಿ ಮಾತ್ರ ಅವು ಇರಲಾರವು. ನಾ-
ಸ್ತಿಕವಾದದ ಸಾಂಸ್ಕೃತಿಕ ಮತ್ತು ಅಸಾಂಸ್ಕೃತಿಕ ನಾಟಕೀಯತೆ-
ದ ಮಧ್ಯೆ ಕಾರ್ಡಿನಲ್ ಮ್ಯಾನಿಂಗ್ ಇವನು ಹೇಳಿದಂತೆ ಬರೀ

"ದನಗಳು" ಎಂಬ ರೀತಿಯಲ್ಲಿ ನಾವು ಬಹು ಜನರಿಗೆ ಸಾಕಷ್ಟು ಬೋಧ ಕರವಾಗಿ ಈ ಪ್ರತಿಪಾದನೆಯನ್ನೇ ಉಳಿಸಿ ಬಂದಿವೆ. *

ನಾಸ್ತಿಕವಾದದ ಬೋಧನೆಯಲ್ಲಿ ನೈತಿಕ ಪರಿಶುದ್ಧತೆ ಮತ್ತು ಮಾನಸಿಕ ಉನ್ನತಿಯನ್ನು ಸರಿಯಾಗಿ ಹೇಳುತ್ತಾ ನಾವು ಕ್ರೈಸ್ತಮತದ ತತ್ವಶಾಸ್ತ್ರವನ್ನು ಕಟುವಾಗಿ ಟೀಕಿಸಿದ್ದನ್ನು ಕೇಳಿದ ಹಲವರು ಇದನ್ನು ಮರೆತುಹೋಗಿದ್ದಾರೆ, ನಿರಂತರ ವೇದನೆ, ತಪ್ಪುಗಾಗಿ ಶಿಕ್ಷಿಸುತ್ತಾನೆ ಎನ್ನುವುದು ಮತ್ತು ಬೈಬಲ್‌ನ ಪ್ರಮಾದಾತೀತ ವಾದವನ್ನು ಎದುರಿಸಿ ನಾವು ನಮ್ಮ ವಾದಶಕ್ತಿ ಮತ್ತು ನಾಲಗೆಯ ಶಕ್ತಿಯನ್ನು ಓಡಬಿಡಿಸಿ ಕ್ರೈಸ್ತಮತದ ಚರಿತ್ರೆಯನ್ನು, ಅದರ ಹಿಂಸಾಕೃತ್ಯವನ್ನು, ಮತೀಯ ಯುದ್ಧಗಳನ್ನು, ಕ್ರೂರತನವನ್ನು, ದಬ್ಬಾಳಿಕೆಗಳನ್ನು ಸರಿಯಾಗಿ ಸ್ವಲ್ಪವೂ ಮುಚ್ಚಿಡದೆ ಜನರ ಎದುರಿಗೆ ಬಿಚ್ಚಿಟ್ಟೆವು, ನಮಗೆ ವಿಧಿಸಿದ ಅನ್ಯಾಯ ಮತ್ತು ಆರೋಪಣೆಗಳಿಂದುಂಟಾದ ಮನೋವೇದನೆಯಿಂದ ನಾವು ಕೂಡ, ನಿಮ್ಮ ಕ್ರೈಸ್ತ ಮತಾನುಯಾಯಿಗಳು Free-thinkers ಸಂಸ್ಥೆಯ ಮೇಲೆ ಕ್ರೂರ ಆಪಾದನೆಗಳನ್ನು ಹೊರಿಸುತ್ತಿದ್ದಾಗ ನಾವು ವಿಚಾರಕ್ಕೆ ಗುರಿಯಾಗುವ ಬದಲಿಕೆಯ ಮುಂದೆ ಕ್ರೈಸ್ತ ಮತ ಮತ್ತು ಕ್ರೈಸ್ತ ಸಾಮ್ರಾಜ್ಯದ ರಾಜಕೀಯ ಮತ್ತು ಸಾಮಾಜಿಕ ಹಿಂಸಾಕೃತ್ಯಗಳ ಆರೋಪಣೆಗಳನ್ನು ಹೊರಿಸುತ್ತಾ ಟೀಕಿಸಿದೆವು. ಕ್ರೈಸ್ತ ವಿಧಿಗಳಿಗೆ ವಿರುದ್ಧವಾಗಿರುವ ಚರಿತ್ರೆ, ವಿಜ್ಞಾನ, ವಿಮರ್ಶೆ, ವಿದ್ವತ್ತುಗಳೇ ಮೊದಲಾದ ಅಸ್ತ್ರಗಳನ್ನು ಕ್ರೈಸ್ತಮತದ ವಿರೋಧವಾಗಿ ಉಪಯೋಗಿಸಿದೆವು. ಪರಂಪರಾನುಗತವಾಗಿ ಬಂದ ನಂಬಿಕೆಗಳು ಮತ್ತು ಮೂರ್ಖತನದ ಅಂಧಾಭಿಮಾನಗಳ ಗೋಡೆಯನ್ನು ಮುರಿದು ಹಾಕಲು ವಾಗ್ವಾದ, ವ್ಯಂಗ್ಯನುಡಿ ಮತ್ತು ಪರಿಹಾಸ್ಯಗಳನ್ನೆಲ್ಲ ವಿಶೇಷವಾಗಿ ಬಳಸಲಾಯಿತು.

ನಿರಾಕ್ಷೇಪಣೀಯವಾದ ವಾದಗಳನ್ನು ಆಲಿಸಲು ನಾವು ಸದಾ ಸಿದ್ಧರಾಗಿರುತ್ತಿದ್ದೆವು, ಆದರೆ ಕ್ರೈಸ್ತ ಧರ್ಮವನ್ನು ಒಪ್ಪಲು ಅವರು ಬಲಾತ್ಕರಿಸಿದಾಗ ನಾವು ಅಷ್ಟೇ ಹಠಾತ್ತಾಗಿ ಅವರ ವಾದಗಳನ್ನು ಪ್ರತಿಭಟಿಸಿದೆವು, "ಒಂದು ಧರ್ಮವನ್ನು ಒಪ್ಪುವುದಿಲ್ಲವೆಂಬ ಕಾರಣದಿಂದ ಮಾನಸಿಕ ಬದ್ಧ ಮತ್ತು ಸಾಮಾಜಿಕವಾಗಿ ದಂಡವನ್ನು ವಿಧಿಸಿ ಒಪ್ಪಿಸುವ ಬೆದರಿಸುವಿಕೆಯು ಪ್ರಯೋಜನಕ್ಕೆ ಬಾರದು. ನಂಬಿಕೆಯನ್ನು ಕಾರ್ಯತಃ ತೋರಿಸಬೇಕಷ್ಟೆ, ಬಲಾತ್ಕಾರದಿಂದ ಧರ್ಮವನ್ನು ನಂಬಿಸಲು ಯತ್ನಿಸುವುದು ಪ್ರಯೋಜನವಿಲ್ಲ. ನಮ್ಮಲ್ಲಿ ಪ್ರಬಲರಾದವರ ಮೇಲೆ ದಬ್ಬಾಳಿಕೆಯು

---

*"ದೇವರೇ ಇಲ್ಲದ ಒಂದು ಲೋಕ" – 1885

ನ್ನು ತೋರಿಸಿದರೆ ಅದು ಇನ್ನಷ್ಟು ಕಹಿಯನ್ನುಂಟುಮಾಡುವುದು. ದುರ್ಬಲರನ್ನು ಕಪಟಿಗಳನ್ನಾಗಿ ಮಾಡುವುದು. ದಿಟ್ಟತನದಿಂದ ಕಾದಿರುವವರನ್ನು ಬಲಾತ್ಕಾರವಾಗಿ ಹಿಪ್ಪಿಸಲು ಎಂದೂ ಸಾಧ್ಯವಿಲ್ಲ; ಸಾಧ್ಯವಾಗಲೂ ಇಲ್ಲ.*

ಗಂಡಸರು ಮತ್ತು ಹೆಂಗಸರು ಈಗ ಬಹಿರಂಗವಾಗಿ ಮಾತಾಡುತ್ತಿದ್ದು ಆಲೋಚಿಸುತ್ತಿದ್ದು ಗುಪ್ತರಾಗಿರುವವರಲ್ಲದೆ ವಿಶಾಲವಾದ ಆತ್ಮಶಕ್ತಿಯು ಅವರಲ್ಲಿ ಗುಡಿ ಪ್ರಾರ್ಥನೆಗಳ ಮೇಲಿಗೆ ಕಂಡು ಬರುತ್ತದೆ. ಮತ ವಿರೋಧಾಭಿಪ್ರಾಯವು ನೈತಿಕವಾಗಿ ಅವಹೇಳನಕರವಾದುದರಿಂದ ಈಗ ಎಣಿಸಲ್ಪಡುತ್ತಿಲ್ಲ. ಇದಕ್ಕೆ ನಾನು ಯಾರ ಆತ್ಮೀಯರು ಮತ್ತು ವಿಶ್ವಾಸಪಾತ್ರರಾದ ಗೆಳೆಯರಾಗಿದ್ದೆನೋ ಆ ಚಾರ್ಲ್ಸ್ ಬ್ರಾಡ್ಲಾಯ್ ಮುಂದಾಳುತನದಲ್ಲಿ ನಾವು ಪ್ರಬಲ ಹಾಗೂ ಸಕ್ರಿಯ ಹೋರಾಟದ ಮೂಲಕ ಪ್ರಚಾರಕಾರ್ಯವನ್ನು ಸಾಧಿಸಿದ್ದು ಕಾರಣವಾಗಿದೆ. ನನ್ನ ಆಂದಿನ ದಿನಗಳಲ್ಲಿ ನನ್ನ ನಾಲಿಗೆಯು 'ಎಷ್ಟೋ ಮಟ್ಟಿಗೆ ಇರಬಾರದಿತ್ತೋ ಅದಕ್ಕಿಂತ ಎಷ್ಟೋ ಹರಿತವಾಗಿತ್ತೆಂಬುದನ್ನು ನಾನು ಒಪ್ಪುತ್ತೇನೆ. ಕ್ರೈಸ್ತಮತ ತಪ್ಪು ಸಲ್ಲಿಸಿದ ಸೇವೆಯನ್ನೆಲ್ಲ ನಾನು ತಿರಸ್ಕರಿಸಿ ಅದರಲ್ಲಿರುವ ಕ್ರೂರತೆಗಳ ಕಡೆಗೇನೇ ಕೈತೋರಿಸಿ ಆ ರೀತಿ ಅನ್ಯಾಯವನ್ನು ಬಗೆದೆನೆಂಬುದನ್ನು ಒಪ್ಪುತ್ತೇನೆ. ಆದರೆ ಆ ಕುಂದು ಕೊರತೆಗಳನ್ನೆಲ್ಲ ನಾನು ನಾಸ್ತಿಕ ಸಂಘವನ್ನು ತೋರಿಯುವುದಕ್ಕಿಂತ ಎಷ್ಟೋ ಹಿಂದೆ ಜುಯಸ್ ಅವುಗಳಿಂದ ಮುಕ್ತಳಾಗಿದ್ದೇನೆ. ಆ ತಪ್ಪುಗಳೆಲ್ಲ ವೈಯಕ್ತಿಕವಾಗಿ ನನ್ನದಾಗಿತ್ತಲ್ಲದೆ ಅವು ನಾಸ್ತಿಕವಾದಕ್ಕೆ ಸೇರಿದ್ದಾಗಿರಲಿಲ್ಲ. ನನ್ನ ಪ್ರಧಾನ ಹೇಳಿಕೆಗಳಲ್ಲಿ ಸತ್ಯವು ಇರುತ್ತಿತ್ತು. ಅವನ್ನೆಲ್ಲ ಜನಕ್ಕೆ ಇನ್ನೂ ತಿಳಿಸಬೇಕಾಗಿದೆ. ಸ್ವತಂತ್ರ ಮನೋಭಾವ (Free-thought)ದ ಬೋಧನೆಗಳು ಇಂದು ಹಲವು ಕ್ರೈಸ್ತ ವೇದಿಕೆಗಳಿಂದ ಪ್ರತಿಧ್ವನಿಸುತ್ತಿದೆ. ಜನರನ್ನು ಜಾಗೃತಗೊಳಿಸಲಾಗಿದೆ. ಜನತೆಯು ಜ್ಞಾನವನ್ನು ವಿಶಾಲಗೊಳಿಸಲಾಗಿದೆ. ನನ್ನ ಬಾಳಿಯಲ್ಲಿ ಅಲ್ಲಲ್ಲಿ ತೋರುವ ಅನಾವಶ್ಯಕವಾದ ಕರ್ಕಶಗತಿಯನ್ನು ನಾನೇ ಟೀಕಿಸಿದರೂ ಹಿಂದಿನ ಕಾಲದ ಕೇವಲ ಅಸಹ್ಯ ಅಂಧಾಭಿಮಾನಗಳನ್ನು ಸಮಾಜದಲ್ಲಿ ಇಲ್ಲದಂತಾಗಿಸಿದ ಮತ್ತು ಅದೇ ಮೂಢನಂಬಿಕೆಗಳ ಕ್ರೂರತನ ಮತ್ತು ಅನ್ಯಾಯಗಳಿಂದ ನಮಗಿಂತ ಹಿಂದಿದ್ದ ನಾಸ್ತಿಕರು ಸಂಕಷ್ಟಕ್ಕೊಳಗಾದ ಈ ಇಂಗ್ಲೆಂಡ್ ದೇಶಕ್ಕೆ ಸಾಕಷ್ಟು ವಿದ್ಯಾಭ್ಯಾಸವನ್ನೀಯುವುದರಲ್ಲಿ ನನ್ನ ಹಾದಿನ ಕರ್ತವ್ಯವನ್ನು

---

* ಕ್ರಿಸ್ತ ಸಂಬಂಧದ ಅಭಿಮತ — 1884.

ಮಾಡಿದ್ದೇನೆಂಬ ಸಂತೋಷಕ್ಕೆ ಒಳಗಾಗಿದ್ದೇನೆ.

ಜನರ ಆಕ್ರೋಶಕ್ಕೆ ನಾನು ಪಾತ್ರನಾಗಲು ಮತ್ತು ಆ ರೀತಿಯಾಗಿ ನನ್ನ ಬಗ್ಗೆ ಅವರು ಆಲೋಚಿಸಲು ನನ್ನ ತೀವ್ರಗಾಮೀ ರಾಜಕೀಯವೂ ಒಂದು ಕಾರಣವಾಗಿತ್ತು. ರಾಜಕೀಯವನ್ನು ಕೇವಲ ರಾಜಕೀಯದ ದೃಷ್ಟಿಯಿಂದ ನಾನು ಗಮನಿಸಿದ್ದೇ ಇಲ್ಲ; ಏಕೆಂದರೆ ಸಂದರ್ಭಸಾಧಕವಾಗಿ ನಡೆಸಲ್ಪಡುವ ರಾಜಕೀಯ ಜೀವನವು ನನಗೆ ಹಿಡಿಸಿದ್ದೇ ಇಲ್ಲ. ಆದರೆ ಯಾವಾವ ರಾಜಕೀಯವು ನೇರವಾಗಿ ಜನರಿಗೆ ಸಂಬಂಧಿಸುತ್ತಿತ್ತೋ ಆಗ ಅದು ನನಗೆ ಉತ್ಸಾಹದಾಯಕವಾದ ಚಟುವಟಿಕೆಗೆ ಕಾರಣವಾದ ವಿಷಯವಾಗಿತ್ತು. ಭೂಹಿಡುವಳಿಯ ಪ್ರಶ್ನೆ, ಕಂದಾಯ ಕಾನೂನುಗಳು, ಪರಿಹಾರದಿನ, ಆತಂಕವನ್ನುಂಟು ಮಾಡುವ ನ್ಯಾಯವಿಧಾಯಕ ಸಭೆಯ ಅಧಿಕಾರಿಗಳಿಂದಾದ ವಿಷಯಗಳತ್ತ ಕೈಹಾಕಿ ನಾನು ದುಡಿದಿದ್ದೇನೆ. ನಾನೊಬ್ಬ ಸ್ವಯಂ ಆಡಳಿತಾಧಿಕಾರವಾದಿ (Home Ruler)ಯಾಗಿದ್ದು ನಮ್ಮ ರಾಜ್ಯ (ಇಂಗ್ಲೆಂಡ್)ಕ್ಕಿಂತ ದುರ್ಬಲವಾಗಿರುವ ದೇಶಗಳಲ್ಲಿದ್ದ ಅನ್ಯಾಯಗಳನ್ನು ನಾನು ಸ್ಫೂರ್ತಿದಾಯಕವಾಗಿ ಪ್ರತಿಭಟಿಸಿದೆನು. ಹಾಗಾಗಿ ನಾನು ಯಾವಾಗಲೂ ಸರಕಾರದ ವಿರೋಧಿಯಾಗಿಯೆ ಇರುತ್ತಿದ್ದೆನು. ಐರ್ಲೆಂಡಿನ ಆಕ್ರಮಣ ಮತ್ತು ಹಿಂಸಾತ್ಮಕ ನೀತಿಗೆ ವಿರೋಧವಾಗಿ, ಟ್ರಾನ್ಸ್‌ವಾಲ್‌ನಲ್ಲಿ, ಇಂಡಿಯಾದಲ್ಲಿ, ಅಫಘಾನಿಸ್ತಾನ, ಬರ್ಮಾ, ಈಜಿಪ್ಟ್ — ಹೀಗೆ ನಮ್ಮ ಸಾಮ್ರಾಜ್ಯದ ದೊಡ್ಡ ನಗರಗಳಲ್ಲಿ ನನ್ನ ಧ್ವನಿಯನ್ನೆತ್ತಿ ಅಲ್ಲಿನ ಜನರ ಅಂತರಂಗವನ್ನು ಹೇಳಲು ಯತ್ನಿಸಿ ಆ ರೀತಿ ಅಂದಿನ ಸರಕಾರವು ನಡೆಸುತ್ತಿದ್ದ ಭೂಮಿಯ ಕಳವು, ಮತ್ತು ದರೋಡೆ ನೀತಿಗಳಲ್ಲಿದ್ದ ಅನೈತಿಕತೆಯನ್ನು ಕುರಿತಾಗಿ ಹೇಳುತ್ತಿದ್ದೆನು. ಯುದ್ಧವನ್ನು ವಿರೋಧಿಸಿ, ಅಪರಾಧಿಗಳನ್ನು ಗಲ್ಲಿಗೇರಿಸುವುದನ್ನು ಖಂಡಿಸಿ, ಚಿತ್ರಹಿಂಸೆಯನ್ನು ಪ್ರತಿಭಟಿಸಿ, ಕತ್ತಿ ಕೋವಿಗಳ ಸಂಗ್ರಹದ ಬದಲಾಗಿ ಜನಕ್ಕೆ ರಾಷ್ಟ್ರೀಯ ವಿದ್ಯೆಯನ್ನೀಯಬೇಕೆಂದು ಪ್ರತಿಪಾದಿಸಿ, ಸಮರ ನೌಕೆಗಳ ಬದಲಾಗಿ ಸಾರ್ವಜನಿಕ ಗ್ರಂಥಭಂಡಾರಗಳನ್ನು ಸ್ಥಾಪಿಸಬೇಕೆಂದು ಹೇಳುತ್ತಾ ಹಾತೊರೆಯುತ್ತಿದ್ದಾಗ ನನ್ನನ್ನು 'ಬಿವರ್' ಹೋರಾಟಗಾರ್ತಿ ಮತ್ತು ತೀವ್ರಗಾಮಿ ಎಂಬುದಾಗಿ ಖಂಡಿಸಿದರು. ಸಾಂಪ್ರದಾಯಿಕರು ನನ್ನತ್ತ ತಿರುಗಿ ತಮ್ಮ ಆದರಣೀಯ ದೃಷ್ಟಿಯನ್ನು ನನ್ನೆಡೆಗೆ ಬೀರಿ ಅಂತೆಯೇ ಬೆರಗಾಂತು ನೋಡತೊಡಗಿದರು!

ಅಧ್ಯಾಯ ೮.

ಅವಿರತ ದುಡಿಮೆ.

ಕರ್ತವ್ಯದ ಅಂತರಾಳದ ಈ ರೂಪರೇಷೆಯೊಳಗಿಂದ ಕರ್ತವ್ಯಗಳ ಕಡೆಗೇನೇ ಇಂದೀಗ ತಿರುಗಿ ಆ ವರುಷದ ಕಾಲಗಳಲ್ಲಿ ನಮ್ಮನ್ನು ಹೇಗೆ ಕಾರ್ಯತತ್ಪರರನ್ನಾಗಿ ಮಾಡಿತೆಂಬುದನ್ನು ನೋಡುವ!

ಶ್ರೀಮಾನ್ (ಚಾರ್ಲ್ಸ್) ಬ್ರ್ಯಾಡ್ಲೆ ಮತ್ತು ನನ್ನ ಸ್ನೇಹವು ನಮ್ಮ ಮೊದಲ ಭೇಟಿಯಾದಂದಿನಿಂದಲೇ ಪ್ರಾರಂಭವಾಯಿತೆಂದೂ ಅದರ ನಂತರ ಕೆಲವು ದಿನಗಳಲ್ಲಿ ಟರ್ನರ್ ರಸ್ತೆಯಲ್ಲಿ ನಾವು ನಡೆಸಿದ ಮಾತುಕತೆಯಂತೆ ಅವನು ನನ್ನನ್ನು ಕಾಲು ಸಾರ್ವಕಕ್ಕಾಗಿ ಬಂದನೆಂದೂ ನಾನು ಹಿಂದೆಯೇ ಹೇಳಿದ್ದೇನೆ. ಅವನು ನನ್ನ ಮೊದಲ ಆಮಂತ್ರಣವನ್ನು ತಿರಸ್ಕರಿಸಿದನು ಅವನ ಗುಣಾವಿಶಿಷ್ಟತೆಯಾಗಿತ್ತು. ನಾನು ಅವನನ್ನು ಮನೆಗೆ ಆಹ್ವಾನಿಸುವುದಕ್ಕಿಂತ ಮುಂಚೆ ಆ ವಿಷಯವಾಗಿ ಚೆನ್ನಾಗಿ ಆಲೋಚಿಸಬೇಕೆಂದು ನನ್ನನ್ನು ಎಚ್ಚರಿಸಿದನು, ಆಂಗ್ಲ ಸಮಾಜದ ಅವಹೇಳನಕ್ಕೆ ಅವನು ಪಾತ್ರನಾಗಿದ್ದುದರಿಂದ ಅವನೊಡನೆ ದುಡಿಯುವ ಮಿತ್ರರು ಸಹ ಅಂತೆಯೇ ನರಳಬೇಕಾದ್ದರಿಂದ ನಾನು ಅವನ ಮಿತ್ರತ್ವವನ್ನು ಬಯಸಿದ್ದರಿಂದ ಅವನಕ್ಕೇನಾದ ಜನರ ನಿಂದನೆಗೆ ಪಾತ್ರಳಾಗಲಿರುವೆನೆಂದೂ ಹೇಳಿದನು. ಹಾಗಿದ್ದರೂ ನಾನು ಅವನಿಗೆ ಆ ವಿಚಾರವನ್ನು ತಿಳಿದಿರುವೆನೆಂದೂ ಅವನು ನನ್ನಲ್ಲಿಗೆ ಬರಬಹುದೆಂದೂ ಪುನಃ ಅವನಿಗೆ ಮರುವೋಲೆಯನ್ನು ಬರೆದೆನು. ಅವನ ನುಡಿಗಳು ಹೇಗೂ ನಿಜವಾಗಿದ್ದುವು. ನಾನು ಅವನೊಡನೆ ಬೆಳೆಸಿದ ಸಖ್ಯವು ನನ್ನೊಡನೆ ದುಡಿಯುತ್ತಿದ್ದ ಹಲವು ಸ್ವತಂತ್ರ ಭಾವುಕ (freethinkers)ರನ್ನು ದೂರವಿರಿಸಿತು. ಆದರೆ ಇವರನ್ನು ಕಳೆದುಕೊಂಡುದಕ್ಕಿಂತ ಸಹಸ್ರ ಪಾಲು ಹೆಚ್ಚಾಗಿ ನನಗೆ ಬ್ರ್ಯಾಡ್ಲೆಯ ಸ್ನೇಹವು ಹಿತಕರವಾಗಿ ಪರಿಣಮಿಸಿತು. ಆ ಸ್ನೇಹಕ್ಕಾಗಿ ನಾನು ಒಮ್ಮೆಯಾದರೂ ಮರುಗಿದ್ದೇ ಇಲ್ಲ. ಹೆಂಗಸಿಗೆ ಎಂದೂ ದೊರಕದೇ ಇದ್ದಂಥ ಅತಿ ಉನ್ನತ ಗುಣದ ಮಿತ್ರನೊಬ್ಬನು ನನಗೆ ದೊರಕಿದನೆಂದು ನಾನು ಅವನ ಎರಡು ಕೈಗಳನ್ನು ಹಿಡಿದು 1874 ರಲ್ಲಿ ನಿಷ್ಠೆಯಿಂದ ಮಾತಾಡಿದೆನು. ಅವನು ಎಂದೂ ನನ್ನೊಡನೆ ಕಠಿಣವಾಗಿ ಮಾತಾಡಿದ್ದೇ ಇಲ್ಲ. ನಾವು ಭಿನ್ನಾಭಿಪ್ರಾಯಗೊಳ್ಳುವಾಗಲೂ ಅವನು ತನ್ನ ವಾದವನ್ನು ಮುಂದೊತ್ತಿಸಲಿಲ್ಲ, ಅಥವಾ ತನ್ನ ಅಭಿಪ್ರಾಯವನ್ನು ನನ್ನ ಮೇಲೆ ಬಲಾತ್ಕರಿಸಲಿಲ್ಲ. ನಾವು ಎಲ್ಲ ಅಭಿಪ್ರಾಯ ಭೇದಗಳನ್ನು ಸಮಾನ ಮಿತ್ರರಂತೆ ಮಾತಾಡಿ ತೀರ್ಮಾನಿಸಿಕೊಳ್ಳುತ್ತಿದ್ದೆವು. ಪೂರ್ವ ಮಿತ್ರನಿಗೆ ಎಚ್ಚರ

ಮನುಷ್ಯಗೆ ಸಾಧ್ಯವೋ ಅಷ್ಟರ ಮಟ್ಟಿಗೂ ಅವನು ನನಗೆ ಆಪತ್ತಿನಲ್ಲಿ ನೆರವಾದನು. ನನ್ನ ಕಷ್ಟದಲ್ಲಿ ಅವನೂ ಪಾಲುಗಾರನಾದನು. ನನ್ನ ತೀವ್ರಗಾಮಿ ವರ್ತನೆಗೆ ಅವನ ಹಾರ್ದಿಕ ಗುಣಗಳನ್ನು, ಅವನಲ್ಲಿದ್ದ ಧಾರಾಳ ದಯಾಗುಣ ಮತ್ತು ಪ್ರೀತಿ ಕರುಣೆಗಳು ಬೆಳಕು ಹರಿಯಿಸಿ ಪುಷ್ಟಿಸುತ್ತ. ನಾನು ತಿಳಿದಿದ್ದವರ ಪೈಕಿ ಅವನು ನಿಸ್ವಾರ್ಥಿಯೂ, ಅವನು ಎಷ್ಟು ಬುದ್ಧಿವಂತನೋ ಅಷ್ಟೇ ಸಹನಾಶೀಲನೂ ಆಗಿದ್ದನು. ನನ್ನ ತೀವ್ರ ಹಾಗೂ ಉತ್ಸಾಹಪೂರ್ಣ ಸ್ವಭಾವಕ್ಕೆ ಬೇಕಾಗಿದ್ದ ಪ್ರಶಾಂತಿ ಸಮ್ಮತಿ ಅವನಿಂದ ದೊರೆಯುತ್ತ, ಮತ್ತು ನನಗೆ ಇನ್ನೂ ಬೇಕಾದ ಆತ್ಮಸಂಯಮದ ರೀತಿಯನ್ನು ನಾನು ಅವನಿಂದ ಕಲಿಯುವಂತಾಯಿತು.

ಒಂದೊಂದು ಬಾರಿ ನಾವು ವಿಶ್ರಾಂತರಾಗಿದ್ದಾಗ ಅವನು ತುಂಬಾ ಹಾಸ್ಯಮಯ ಪ್ರವೃತ್ತಿಯಿಂದ ಕೂಡಿದ್ದ ಒಡನಾಡಿಯಾಗಿರುತ್ತಿದ್ದನು, ಹಲವು ವರ್ಷಗಳ ಕಾಲ ಪ್ರಾತಃಕಾಲದ ವೇಳೆಯಲ್ಲಿಯೂ ಅವನಲ್ಲಿಗೆ ಬರುತ್ತಿದ್ದ ಬಡಜನದ ಬೇಡಿಕೆಗಳನ್ನೆಲ್ಲ ತಿಳಿದು ಅವರಿಗೆ ಕಾನೂನು ವಿಧಿಗಳ ಬಗೆ ಸಲಹೆಗಳನ್ನಿತ್ತು ಅನಂತರ ಅವನು ನನ್ನ ಬಳಿಗೆ ಬರುವ ಅಭ್ಯಾಸವನ್ನಿಟ್ಟುಕೊಂಡಿದ್ದನು. ಅವನು ಅಕ್ಷರಶಃ ಬಡಜನರ ವಕೀಲನಾಗಿದ್ದನು; ಯಾವಾಗಲೂ ಅವರಿಗೆ ಸಹಕರಿಸಲು ಮತ್ತು ಸಲಹೆಯನ್ನೀಯಲು ಮುಂದಾಗುತ್ತಿದ್ದನು, ಅನಂತರ ಪತ್ರಿಕೆ ಮತ್ತು ಕಾಗದಪತ್ರಗಳನ್ನು ತಂದು ಹಲವು ಗಂಟೆಗಳ ಕಾಲ ಬರೆಯಲಿಕ್ಕೆ ಕೂರುವನು. ನಾನು ಹೇಗೂ ನನ್ನ ಕೆಲಸದಲ್ಲಿ ಮಗ್ನನಾಗಿರುತ್ತಿದ್ದೆನು, ಒಮ್ಮೊಮ್ಮೆ ಅವನು ತಿರುಗಿ ಒಂದೊಂದು ಮಾತನ್ನು ಆಡುತ್ತಿದ್ದು ಕಡೆಗೆ ಮಧ್ಯಾಹ್ನ ಮತ್ತು ಸಾಯಂಕಾಲದ ಊಟಕ್ಕೆಂದು ಏಳುತ್ತಿದ್ದೆವು. ಅದರನಂತರ ಪುನಃ ರಾತ್ರಿ ಹತ್ತು ಗಂಟೆಯ ವರೆಗೆ ಓದು ಬರಹದಲ್ಲಿ ತಲ್ಲೀನರಾಗಿರುತ್ತಿದ್ದೆವು. ಅವನು ತನ್ನ ಮನೆಯಲ್ಲಿದ್ದಾಗ ರಾತ್ರಿ ಬೇಗನೆ ಹಾಸಿಗೆ ಹಿಡಿಯುವನು, ಸುಮಾರು ಮುಕ್ಕಾಲು ಮೈಲು ದೂರವಿರುವ ಅವನ ಬೀಡಿಗೆ ಆ ಹೊತ್ತಿಗೂ ಅವನು ಎದ್ದು ಹೋಗುವನು. ಒಮ್ಮೊಮ್ಮೆ ಒಂದು ಗಂಟೆಯ ಕಾಲ ಚೀಟಿ ಆಟ (cards) ವನ್ನಾಡಲಿಕ್ಕೆಂದು ಕೂರುವನು, Euchre - ಇದು ನಮ್ಮ ಮೆಚ್ಚಿನ ಆಟವಾಗಿತ್ತು. ನಾವು ತುಂಬಾ ಕೆಲಸದಿಂದ ಕೂಡಿ ತಲೆ ಚಚ್ಚಿಕೊಳ್ಳುತ್ತಿದ್ದ ವೇಳೆಗೆ ನಾವು ದೂರದ ಸ್ಥಳಗಳಿಗೆ ರಜೆಯ ನಿಮಿತ್ತವಾಗಿ ಹೋಗುತ್ತಿದ್ದೆವು, ಅದರನಂತರ ಅವನು ಒಬ್ಬ ಹುಡುಗನಂತೆ ಉತ್ಸಾಹದಿಂದ ತುಂಬಿ ಹಲವು ಹೊಸ ಯೋಜನೆಗಳನ್ನು ಮತ್ತು ಮಾತುಕತೆಗಳಿಂದ ಉಬ್ಬಿರುತ್ತಿದ್ದನು. ಲಂಡನ್‌ನ ಸುತ್ತಮುತ್ತಲ ಊರುಗಳಲ್ಲೆಲ್ಲ ನಾವು ಸಂಚರಿಸಿದ ಸಿಹಿ ನೆನಪುಗಳು ನನ್ನಲ್ಲಿ ಉಳಿದಿವೆ. ರಿಚ್ಮಂಡಿನ

ಉದ್ಯಾನದಲ್ಲಿ ತಿರುಗಾಡಿ ಅದರ ಬಹು ದೊಡ್ಡ ಮರಗಳಡಿಯಲ್ಲಿ ವಿಶ್ರಮಿಸಿದ್ದೆವು. ರಮಣೀಯ ಆವರಣದ ಕ್ಷೇತ್ರಗಳು ವಿಂಡ್ಸರ್, ತ ಸ್ಸೀಸ್ ನದಿಯ ಬಳಿ ವಿಚಿತ್ರ ಮಳಿಗೆಯೊಂದರಲ್ಲಿ ಕುಳಿತು ಚಹಾಪಾನ ಮಾಡಿದ ಕೀವ್ ಉದ್ಯಾನ ಸ್ಥಳ, ಅಲ್ಲಿ ಒಂದೊಂದೆಡೆ ತಂಗೊಳಿಸು ತಿದ್ದ ಸುಂದರ ಹ್ಯಾಂಪ್ಟನ್ ಕೋರ್ಟ್, ನದಿಯ ಆಕರ್ಷಣೆಯಿಂದ ವಿರಾಜಿಸುತ್ತಿದ್ದ ಪೆಂಡನ್ ಹಿಲ್ ಮತ್ತು ಟಾರ್ ಲೋವೆಲ್ಲವನ್ನೂ ಮೀರಿ ಅವನು ಮೀನು ಹಿಡಿಯುವುದರಲ್ಲಿ ಆಸಕ್ತಿವಹಿಸಿ ಹೊಳೆಯ ಸ್ಕೈಲದ ಆವರಣಗಳಲ್ಲಿ ನಾವಿಬ್ಬರೂ ಓಡಾಡಿದ ಬ್ರಾಕ್ಸಬೋರ್ನ್ ಮತ್ತಿತರ ಸ್ಥಳಗಳೆಲ್ಲವೂ ನನ್ನ ಸ್ಮರಣೆಯಲ್ಲಿವೆ. ಅವನಾದರೋ ಸಿಕ್ಕಿಯ ಬೆಸ್ತನಾಗಿದ್ದನು, ಮೀನುಗಾರಿಕೆಯ ಹಲವು ತಂತ್ರಗಳನ್ನು ಅವನು ನನಗೆ ಕಲಿಸಿದ್ದನು, ಹಾಗಿರುತ್ತ ನಾನು ಮೀನುಗಳನ್ನು ಹಿಡಿದಾಗ ಸಂತೋಷ ಪಡುತ್ತಲೇ ಹಾಗೆ ಮೀನುಗಳನ್ನು ಕೊಲ್ಲುವುದರಲ್ಲಿ ನನಗಿದ್ದ ನಿರುತ್ಸಾಹವನ್ನು ಪ್ರದರ್ಶಿಸುತ್ತಿದ್ದೆನು. ಆ ಕಾಲದಲ್ಲಿ ಅವನು ತನ್ನ ಭವಿಷ್ಯದ ಆಶೆ ಆಕಾಂಕ್ಷೆಗಳನ್ನು ಕುರಿತು, ಅವನ ಕಾರ್ಯಕ್ರಮ, ಸಲಹೆಗಳನ್ನೆಲ್ಲ ನಿರೀಕ್ಷಿಸಿದ ಜನಕ್ಕೆ ಅವನ ಕರ್ತವ್ಯ, ನಾರ್ಥಂಪ್ಟನ್ ಚುನಾವಣಾ ಕ್ಷೇತ್ರದಿಂದ ವಿಧಾನ ಸಭೆ (Parliament)ಯ ಸದಸ್ಯನಾಗಿದ್ದ ಆ ಮೂಲಕ ಉತ್ತಮ ಸುಧಾರಣೆಗಳನ್ನು ವಿಧಾಯಕವಾಗಿ ಮುಂದೊತ್ತಲು ಅವನು ತನ್ನ ಲೇಖನಿ ಮತ್ತು ನಾಲಗೆಗಳೆರಡರ ಮೂಲಕವೂ ಹೋರಾಡುತ್ತಿದ್ದುದೆಲ್ಲವನ್ನೂ ಕುರಿತು ಹೇಳುತ್ತಿದ್ದನು. ಇಂಗ್ಲೆಂಡಿನಲ್ಲಿ ತನಗಿದ್ದ ಪ್ರೀತಿ, ಇಂಗ್ಲೆಂಡಿನ ಶಾಸನ ಸಭೆಗಳಲ್ಲಿ ತನಗಿದ್ದ ಮೆಚ್ಚಿಕೆ ಮತ್ತು ಇಂಗ್ಲೆಂಡಿನ ಚರಿತ್ರೆಯಲ್ಲಿ ತನಗಿದ್ದ ಹೆಮ್ಮೆಯನ್ನು ಅವನು ಹಲವು ಬಾರಿ ಹೇಳುವನು, ಅಪ್ರಮಾಣಾಕಾರಕವೂ ಶಾಪಕರವೂ ಆದ ಇಂಗ್ಲೆಂಡಿನ ವಿದೇಶೀಯ ಯುದ್ಧನೀತಿಯಿಂದ ಮತ್ತು ಅದರ ಅಂಕಿತದಲ್ಲಿದ್ದ ಜನಕ್ಕೆ ವಿಧಿಸಿದ ಹಿಂಸಾಕೃತ್ಯಗಳಿಂದ ಅದು ಪಡೆದ ಕೆಟ್ಟ ಹೆಸರನ್ನು ಅವನು ತಿಳಿದಿದ್ದನಾದರೂ ತನ್ನ ಹೃದಯಾಂತರಾಳದಲ್ಲಿ ಅವನು ಆಂಗ್ಲೇಯನಾಗಿಯೇ ಇದ್ದನು. ಎಲ್ಲದಕ್ಕಿಂತಲೂ ಹೆಚ್ಚಾಗಿ ಅವರು ಆಳುತ್ತಿದ್ದ ಜನದ ಬೇಡಿಕೆಗಳನ್ನರಿಯದೆ ಕೇವಲ ಸ್ವಂತ ಬಲಿಷ್ಠಜನಾಂಗವಾಗಿ ಅವರು ಅಧಿಕಾರವನ್ನು ಬಿಗಿಯಾಗಿ ಹಿಡಿದಿದ್ದರಿಂದ ಆಂಗ್ಲೇಯರ ಕರ್ತವ್ಯದ ಪರಿಮಿತಿಯನ್ನರಿತಿದ್ದ ಅವನು ಹೇಳುತ್ತಿದ್ದನು. ಅವನ ಜೀವನದ ಕೊನೆ ದಿನಗಳಲ್ಲಿ ಅವನು ಭಾರತಕ್ಕೆ ಸಲ್ಲಿಸಿದ ಸೇವೆಯು ಕೇವಲ ಆಕಸ್ಮಿಕವಾಗಿ ಸಾಧಿಸಿದ್ದೇನೂ ಅಲ್ಲ. ಹಲವು ವರ್ಷಗಳ ಕಾಲ ಅವನು ಹಿಂದೂಸ್ಥಾನಕ್ಕಾಗಿ ಪತ್ರಿಕೆ ಮತ್ತು ವೇದಿಕೆಗಳ ಮೂಲಕವಾಗಿ

ಮಾತಾಡಿರುವನು, ಮತ್ತು ವಾದಿಸಿರುವನು. ಅವನು ಇಂಗ್ಲೆಂಡಿನ ಶಾಸನ ಸಭಾ ಸದಸ್ಯನಾಗುವುದಕ್ಕಿಂತ ಎಷ್ಟೋ ಮುಂಚೆ ಅವನು ಭಾರತೀಯ ಚಿಳ್ಳೆಪಿಳ್ಳೆಗಾರರಿಂದ ವಿಖ್ಯಾತನಾಗಿದ್ದನು.

ನಾನು ಚಾರ್ಲ್ಸ್ ಬ್ರ್ಯಾಡ್ಲಾನನ್ನು ಮೊದಲ ಬಾರಿಗೆ ಕಂಡ ಕೆಲವು ದಿನಗಳನಂತರ ಅವನು ನನಗೆ National Reformer ಪತ್ರಿಕಾ ಸಿಬ್ಬಂದಿಯಲ್ಲಿ ಒಂದು ಸ್ಥಾನವನ್ನು ನೀಡಿದನು. ಈ "ರಾಷ್ಟ್ರೀಯ ಸೇವಕ"ದಲ್ಲಿ ಬರೆವರಾಗಿದ್ದುದರಿಂದ ವಾರಕ್ಕೆ ಒಂದು "ಗಿನಿ"ಯಂತೆ ಅಲ್ಪ ತಲಬನ್ನು ಸಂಪಾದಿಸುತ್ತಿದ್ದುದು ನಾನು ಗಳಿಸುತ್ತಿದ್ದ ಅಲ್ಪ ಉತ್ಪತ್ತಿಗೆ ಸ್ವಾಗತಾರ್ಹವಾದುದಾಗಿತ್ತು. ನನ್ನ ಮೊದಲ ಲೇಖನವು "Ajax" ಎಂಬ ಹೆಸರಿನಿಂದ ಕ್ರಿ.ಶ. 1874ರ ಆಗಸ್ಟ್ 30ರ ಪತ್ರಿಕೆಯಲ್ಲಿ ಪ್ರಕಟವಾಯಿತು, ಅಲ್ಲಿಂದ ಮೊದಲ್ಗೊಂಡು ಬ್ರ್ಯಾಡ್ಲಾಯು ಸಾಯುವವರೆಗೂ ನಾನು ಆ ಪತ್ರಿಕೆಯಲ್ಲಿ ಬರೆಯುತ್ತಿದ್ದೆನು, 1877ರಿಂದ ಅವನ ಕಡೇ ದಿನಗಳವರೆಗೂ ಅವನ ಜಿಮ್ಮೇದಾರಿಕೆ ತೊಂದರೆಗಳನ್ನು ಕಡಿಮೆ ಮಾಡಲು ಮತ್ತು ಕಠಿಣ ಕೃತಿಗಳನ್ನು ಅವನು ನೋಡುತ್ತಿದ್ದ ಕೆಲಸವನ್ನು ಕಡಿಮೆ ಮಾಡಲು ನಾನೇ ಆ ಪತ್ರಿಕೆಯ ಉಪ ಸಂಪಾದಿಕೆಯಾಗಿದ್ದುದಲ್ಲದೆ ಕೆಲಕಾಲ ನಾನು ಅದರ ಸಹ ಸಂಪಾದಿಕೆಯೂ ಆಗಿದ್ದೆನು. ಪ್ರಾರಂಭದಲ್ಲಿ ನಾನು ಗುಪ್ತನಾಮದಿಂದಲೇ ಬರೆಯುತ್ತಿದ್ದೆನೇಕೆಂದರೆ ಶ್ರೀ ಸ್ಕಾಟ್ ಇವನಿಗಾಗಿ ನಾನು ಕೆಲಸವನ್ನು ಮಾಡುತ್ತಿದ್ದುದರಿಂದ ಮತ್ತು ಅಪಾಯಕರವಾದುದೆಂದೆನಿಸಿದ್ದ National Reformer ಪತ್ರಿಕೆಯಲ್ಲಿ ನಾನು ಕೆಲಸ ಮಾಡುತ್ತಿದ್ದುದರಿಂದ ಆ ಸಿಬ್ಬಂದಿಯಲ್ಲಿ ಕೆಲಸ ಪ್ರಾರಂಭಿಸಿ ಕಡೆಗೆ ಅವನು ತಲಬನ್ನು ನೀಡಿದ ವರೆಗೂ ನಾನು ನನ್ನ ಹೆಸರನ್ನು ನನ್ನ ಲೇಖನಗಳಿಗೆ ಕೊಡಲೇ ಇಲ್ಲ. ಹೇಗೂ ಅದರನಂತರ ನಾನು ಆ ಪತ್ರಿಕೆಯಲ್ಲಿ ಬರೆದ ಲೇಖನಗಳಿಗೂ ಶ್ರೀ ಸ್ಕಾಟ್ ಇವನು ಅನಾಮಧೇಯನಾಗಿ ಬರೆಯುತ್ತಿದ್ದ ಕರಪತ್ರಗಳಿಗೂ ನಾನು ಅವನ ಪರವಾಗಿ ಸಹಿ ಹಾಕಲು ತೊಡಗಿದೆನು.

ಈ "Ajax" ಎಂಬ ಗುಪ್ತನಾಮವು ಸಿಡೆನ್ಹ್ಯಾಮಿನ "ಕ್ರಿಸ್ಟಲ್ ಪ್ಯಾಲೇಸ್" ಇದನ್ನು ಸಂದರ್ಶಿಸುವ ಯಾವನೂ ನೋಡಬಹುದಾದ ಪ್ರಸಿದ್ಧವಾದ "Ajax Crying for Light" ಎಂಬ ಪ್ರತಿಮೆಯ ಹೆಸರನ್ನು ಅನುಸರಿಸಿ ಕೊಟ್ಟುದಾಗಿದೆ. ಬೆಳಕು ಒಂದು ರೀತಿಯಲ್ಲಿ ಹಾನಿಯನ್ನು ತರಬಹುದಾದರೂ ಕತ್ತಲೆಯ ಮೂಲಕ ಬೆಳಕಿಗಾಗಿ ಎಸೆಯುವ ಮೊರೆಯು ನನ್ನ ಹೃದಯದ ವೇದನೆಯನ್ನು ಇನ್ನಷ್ಟು ಕೆರಳಿಸಿತು!-

"ಸಾಯುವುದೆ ನಮ್ಮ ವಿಧಿಯೆಂದಾದರೆ ಕರುಣಿಸು
ಬೆಳಕನು! ಮತ್ತನಂತರ ನಮ್ಮನ್ನು ಸಾಯಗೊಡು!"

ಕಣ್ಣಿದ್ದೂ ಕುರುಡರಾದವರೂ ಬುದ್ಧಿಮಾಂದ್ಯವಾದವರೂ ನೋಡಲಿಕ್ಕೆ ಮತ್ತು ತಿಳಿಯಲಿಕ್ಕೆ, ಮತ್ತು ಆ ತಿಳುವಳಿಕೆಯು ನಾವು ತುಂಬಾ ಮೆಚ್ಚಿದ್ದ ಆತ್ಮ ವಿಶ್ವಾಸವನ್ನು ಹಾಳುಗೆಡಹಿದರೂ ಪ್ರಗತಿಯನ್ನು ಸಾಧಿಸಿ ಮೇಲಕ್ಕೇರಲೆಳಸುವವನಿಗೆ ಇದು ಪ್ರೋತ್ಸಾಹಕವಾಗಿರುವುದು. ಕೆಲವರು ಇದನ್ನು ದೌರ್ಬಲ್ಯವೆಂದೂ ಬುದ್ಧಿಹೀನತೆಯೆಂದೂ ಹೇಳಿದರೂ ನಾಗರಿಕ ಜನಾಂಗದಲ್ಲಿ ರಂಧ್ರಗಳಿವೆಯೆಂದು ಖಂಡಿತವಾಗಿಯೂ ಹೇಳಬಲ್ಲೆನು. ತುಂಬಾ ದಿನದಿಂದ ಎಡೆತಡೆ ಸಾಗುತ್ತಿರುವ ಈ ಲೋಕದ ಅಜ್ಞಾನವೆಂಬ ಮೂಟೆಯ ಭಾರವನ್ನು ಕಡಿಮೆ ಮಾಡಲು ಇವರ ತುಟಿಯಿಂದ ಉರುಳಿದ ಮಾತುಗಳು ಬರೀ ಖಾಲಿ ಕತ್ತಲ ಆವರಣದೊಳಗಾಗಲು ಮಾನವನ ಹಾರ್ದಿಕವಾದ ಮೊರೆಯು "ಬೆಳಕನ್ನು ಕರುಣಿಸು" ಎಂದೇ ಕೇಳಿಸುವುದು.

ಆ ಬೆಳಕು ಮಿಂಚಿನಂತೆ ಕ್ಷಣಕಾಲ ಬೆಳಗಿ ಕತ್ತಲಿಗೆ ಸರಿದರೂ ಇದು ಹೇಗೂ ಬೆಳಕೇ ಸರಿ! ಇದನ್ನು ನಾವು ನೋಡಬಹುದು.

ಸಭಾ ಗೋಷ್ಠಿಯಲ್ಲಿ ನಾನು ಒಂದು ಕೆಂಡ ಹಿಡಿದ ಮತ್ತು ನನ್ನಲ್ಲಿ ಹುದುಗಿದ್ದ ವಾಗ್ಬಲವನ್ನು ಇಂಗ್ಲೆಂಡಿನ ಉದ್ದಗಲಕ್ಕೂ ಓಡಾಡಿ ಜನತೆಯ ಹೃದಯವನ್ನು ಕದಡಿಸಲಿಕ್ಕಾಗಿ ಉಪಯೋಗಿಸಲು ಇದೀಗ ಕಾಲವು ಸನ್ನಿಹಿತವಾಗಿತ್ತು. ಸಾಧಾರಣ 1874ರಲ್ಲಿ, ಮತ್ತು ಖಂಡಿತವಾಗಿಯೂ 1875ರಲ್ಲಿ ನಾನು ಈ ಹರಿತವಾದ (ನಾಲಗೆಯೆಂಬ) ಆಯುಧವನ್ನು ಉಪಯೋಗಿಸಲು ತೊಡಗಿದೆನು. ಒಂದು ಉದ್ಯಾನ ಚಹಾಕೂಟದ ವೇಳೆಗೆ ನಡೆದ ಸಭೆಯಲ್ಲಿ ನನ್ನ ಮೊದಲಿನ ಪ್ರಯತ್ನವು ನಡೆಯಿತು. ನನ್ನ ಮಾತುಗಳು ನಿರರ್ಗಳವಾಗಿಯೂ ಮೆತ್ತಗಾಗಿಯೂ ಉರುಳುತ್ತಿದ್ದುವು. ಎರಡನೇ ಬಾರಿಗೆ ಒಂದು ಆದಿತ್ಯವಾರ ದಿನ ಒಂದು ಪ್ರದರ್ಶನಾಲಯ ಮತ್ತು ಕಲಾಪ್ರದರ್ಶನ ಕ್ಷೇತ್ರವನ್ನು Liberal Social Union ಸಭೆಯಲ್ಲಿ ತೆರೆಯುವ ಸಂದರ್ಭದಲ್ಲಿ ನಡೆದ ವಾಗ್ವಾದದ ವೇಳೆಗೆ ಆಗಿತ್ತು. ನನ್ನ ಮೊದಲ ಭಾಷಣವು 1874ರ ಆಗಸ್ಟ್ ತಿಂಗಳ 25ರಲ್ಲಿ ಓಕ್ಸ್‌ಫರ್ಡ್ ಬೀದಿಯ 55ನೇ ಕ್ಯಾಸಲ್ ರಸ್ತೆಯ ಸಹಕಾರ ಭವನದಲ್ಲಿ ನಡೆಯಿತು. ಇದಕ್ಕೆ ನನ್ನ ನೆನಪು ಸರಿಯಿದ್ದರೆ ಶ್ರೀ ಗ್ರೀನಿಂಗ್ ಇವರು ನಾನು ಆಯ್ಕೆಗೊಳಿಸಿದ ಒಂದು ವಿಷಯದ ಮೇಲೆ ಒಂದು ಪ್ರಬಂಧವನ್ನು ಓದಲು ಅಲ್ಲಿಗೆ ಆಹ್ವಾನಿಸಿದ್ದನು. ನನ್ನ ಮೊದಲ ಸಾರ್ವಜನಿಕ ಭಾಷಣವು ನನ್ನ

ಸ್ತ್ರೀವರ್ಗವನ್ನು ಕುರಿತು ಇರಬೇಕೆಂದು ನಿರ್ಧರಿಸಿ, "ರಾಜಕೀಯ
ದಲ್ಲಿ ಸ್ತ್ರೀಯರ ಸ್ಥಾನ" ಎಂಬ ಶಿರೋನಾಮೆಯಿಂದ ನನ್ನ ಪ್ರಬಂಧ
ವನ್ನು ಬರೆದೆನು; ಆದರೆ ಆ ಆಗಸ್ಟ್ ತಿಂಗಳ ಆ ದಿನ ಸಾಯಂ
ಕಾಲ ಒಂದು ಸಹಕಾರ ಕೂಟದ ವೇದಿಕೆಯ ಮೇಲೇರಿದ್ದ ಸ್ತ್ರೀ
ಯು ತುಂಬಾ ಸಭಾಕಂಪನದಿಂದ ಕೂಡಿದ್ದವಳಾಗಿದ್ದಳು. ದಂತ
ವೈದ್ಯನನ್ನು ಸಂದರ್ಶಿಸಿದಾಗ ಓರ್ವ ಚಿಕ್ಕ ಹುಡುಗನು ಚೀತ್ಕಾರ
ಮಾಡಿ ಉಡುಗೆಯಿಂದ ಉದ್ರಿಕ್ತಗೊಂಡಿರುವನನ್ನು ನಕ್ಕಿಸಿ ಹೊ
ರಗೆ ಮೆಟ್ಟಲಿನಲ್ಲಿ ಕಾಯುತ್ತಾ ನಿಂತಿದ್ದ ನನಗೆ ಹಲ್ಲು ಕಿತ್ತನ
ಗುತ್ತಾ ಕರ್ತವ್ಯವೆಂಬ ಸೌಜನ್ಯತೆಯನ್ನು ತುಂಬಿದಂತೆ
ಕೃತಜ್ಞತೆಯನ್ನು ತೋರಿಸಿ ಆ ಮನೆಯ ಬಾಗಿಲನ್ನು ಅವನು
ತೆರೆಯುವುದಕ್ಕಿಂತ ವಿಲಂಬಿತವಾಗಿಯೇ ನಾನು ಅಲ್ಲಿಂದ ಓಡಿ
ಹೋಗಲು ಇಚ್ಛಿಸಿದಾಗ ತೋರುವ ಶಕ್ತಿಯಾಗಿಯೂ ಬಾಳು
ಕೇವಲ ಒಂದು ಪ್ರಮಾದವಾಗಿಯೂ ತೋರುವುದು. ಆದರೆ
ಅತ್ಯುತ್ತಮ ಭಾಷಣಕಾರನು ಮೊದಲ ಬಾರಿಗೆ ಸಭಿಕರ ಎದುರಿ
ಗೆ ನಿಲ್ಲಲೆಂದು ಹೋಗುವಾಗ ಎದೆಗುಂದಿ ಮೊಣಕಾಲುಗಳು
ನಡುಗುವಂತಾಗಲು ಅಂಥಾ ಭಾವನೆಗಳು ಅಲ್ಪವೂ ದು
ರ್ಬಲವೂ ಆಗಿ ಕಾಣುವುವು; ಅಷ್ಟೇ ಅಲ್ಲ, ಹಾಗೆ ಮಾತಾಡಲು
ನಿಂತಾಗ ಭಾಷಣಕಾರನೆನಿಸುವವನ ಕಣ್ಣುಗಳು ಮೇಲೇರಿ
ನಾಲಗೆಯು ಹೊರಳದೇ ಇರುವ ವಿಕಾರ ದೃಶ್ಯವು ಅವನಿಗೇ
ಕಾಣಿಸುವುದು. ಹೀಗೂ ಅಂಥಾ ಅಸಹ್ಯ ಕಾಲ್ಪನಿಕ ಭಾವನೆಗಳೆ
ಲ್ಲ ನಾನು ಮಾತಾಡಲು ನಿಂತೊಡನೆಯೇ ನನ್ನಿಂದ ಅಳಿಯು
ತ್ತೆಂಬುದು ನನಗೇ ಆಶ್ಚರ್ಯಕರವೆನ್ನಿಸಿದೆ, ಅಂತೆಯೇ ನನ್ನ
ಮುಂದಿದ್ದ ಮುಖಗಳತ್ತ ನೋಡುತ್ತಾ ನಿಂತಿರಲು ಮತ್ತು
ನನ್ನ ಮೊದಲ ನುಡಿಯಿಂದ ಕಡೆವರೆಗೂ ನನ್ನ ಮಾತಿನ
ದನಿಯೇ ನನ್ನ ಕಿವಿಗೆ ಇಂಪಾಗಿ ಕೇಳಿಸಲು, ಮತ್ತು ಸಭಿಕರು
ಅದನ್ನು ಎವೆಯಿಕ್ಕದೆ ಕೇಳುತ್ತಾ ಇರಲು, ನನಗೆ ಯಾವ ಬಗೆ
ಯ ಸಭಾಕಂಪನವೂ ಉಂಟಾಗಲಿಲ್ಲ, ನನ್ನ ವಾಕ್‌ಶಕ್ತಿ
ಮತ್ತು ಅದರಿಂದುಂಟಾದ ಸಂತೋಷವನ್ನು ನಾನು ಅನು
ಭವಿಸುತ್ತಿದ್ದೆನಲ್ಲದೆ ಭಯವನ್ನು ಅಲ್ಲ. ಅಂದಿನಿಂದ ಇಂದಿಗೂ
ನನ್ನ ಅನುಭವವು ಇದೇ ರೀತಿಯಾಗಿದೆ. ಭಾಷಣಕ್ಕಿಂತ
ಮುಂಚೆ ನಾನು ಭೂಮಿಯೇ ಸಿಡಿದು ಹೋಗಲಿ ಎಂದು ಜ
ಪಿಸುವಷ್ಟು ಕಂಪಿತಳಾಗುವೆನು; ಎದೆಯು ಡವಡವನೆ
ಬಡಿಯುವುದು; ಮತ್ತು ಒಮ್ಮೊಮ್ಮೆ ಅಸ್ವಸ್ಥಳೂ ಆಗಿರುತ್ತಿ
ದ್ದೆನು. ಆದರೆ ಒಮ್ಮೆ ಸರಿಯಾಗಿ ನಿಂತು ಭಾಷಣಕ್ಕೆ
ಪ್ರಾರಂಭಿಸಿದೆನೆಂದರೆ ಜನಸಂದಣಿಯೆಲ್ಲ ನನ್ನ ಅಧೀನದ

ಲ್ಲಿದ್ದು ನನಗೆ ನಾನೇ ಅಧಿಕತೆಯಿಂದೆನ್ನಿಸುವೆನು, ಒಮ್ಮೆ ನಾನು ಮಾತಾಡಲಿಕ್ಕೆ ನಿಂತರೆ ಎಲ್ಲವೂ ಸರಿಹೋಗುತ್ತದೆಂದು ತಿಳಿದರೂ ನಾನು ಹಲವು ಬಾರಿ ಮಾನಸಿಕವಾಗಿ ನರಳುತ್ತಾ, ಮೈಕಂಪಿಸ ಹಾಗೂ ಒಂದು ಬಗೆಯ ಹೆದರಿಕೆಯಿಂದ ಹೊರಗುವಾಗ ನಾನೇ ನನ್ನನ್ನು ಕ್ಷೋಭಿಸಿಕೊಳ್ಳುತ್ತಿದ್ದೆನು, ಹಾಗಿದ್ದರೂ ನನ್ನ ದೈಹಿಕ ಭೀತಿ ನಡುಕಗಳು ಕೇವಲ ಕಾಲ್ಪನಿಕವೆಂದು ನನಗೆ ತಿಳಿದಿದ್ದರೂ ಅವುಗಳನ್ನು ಹೋಗಲಾಡಿಸಲು ಅಸಾಧ್ಯಳಾಗಿಯೇ ಇರುವೆನು, "ನೀನು ವೇದಿಕೆಯನ್ನೇರಿ ಮಾತಾಡಲು ಶಕ್ತಳಾಗಿಲ್ಲದಂತೆ ಇರುವೆ," ಎಂಬುದಾಗಿ ಜನರು ಹಲವು ಬಾರಿ ನನಗೆ ಹೇಳಿದ್ದಿದೆ. ಆಗ ನಾನು ಸ್ವಲ್ಪ ನಗುತ್ತ, "ದೇಹಾಲಸ್ಯವೇನೂ ಇಲ್ಲ, ಚೆನ್ನಾಗಿದ್ದೇನೆ," ಎಂದು ಹೇಳುತ್ತಿದ್ದೆನು, ನಾನು ಓಲ್ಡ್ ಕೋರ್ಟಿಯಲ್ಲಿದ್ದಷ್ಟು ಕಾಲ ನನಗೆ ಮೈನಡುಕವು ಇದ್ದೇ ಇದ್ದಿತಾದುದರಿಂದ ವೇದಿಕೆಯನ್ನೇರಿ ಅದನ್ನೆಲ್ಲ ಕಳೆಚುವುದೇ ಹಿತವೆಂದು ನಾನು ಊಹಿಸಿಕೊಳ್ಳುತ್ತಿದ್ದೆನು, ನನ್ನ ಎರಡನೇ ಭಾಷಣವು ಶ್ರೀಮಾನ್ ಮಾನ್‌ಕ್ಯೂರ್ ಡಿ. ಕಾನ್‌ವೆ ಇವನ ಗುಡಿಯಲ್ಲಿ, ಕ್ಯಾವೆನ್‌ಡಿಶನ ಸೇಂಟ್ ಪಾಲ್ ರಸ್ತೆ - ಇಲ್ಲಿ ಸೆಪ್ಟೆಂಬರ್ 27ನೇ ದಿನ ನಡೆಯಿತು, ಅನಂತರ ಕೆಲವು ವಾರಗಳಲ್ಲಿ ರೆವರೆಂಡ್ ಪೀಟರ್ ಡೀನ್ ಇವರು ಗುರುವಾಗಿದ್ದ ಯೂನಿಟೇರಿಯನ್ ಗುಡಿಯಲ್ಲಿ ಅದೇ ವಿಷಯದ ಮೇಲೆ ಭಾಷಣವು ನಡೆಯಿತು, ಆ ಭಾಷಣದ ವಿಷಯವಾದರೋ, "ನೈತಿಕತೆಗೆ ನಿಜವಾದ ಮೂಲ" ಎಂದಾಗಿತ್ತು. ಇದನ್ನು ಒಂದು ಕಿರುಹೊತ್ತಿಗೆಯ ರೂಪದಲ್ಲಿ ಮುದ್ರಿಸಲಾಗಿ ಅದು ಎಲ್ಲೆಲ್ಲೂ ತುಂಬಾ ಪ್ರಚಾರವಾಯಿತು, 1874ರಲ್ಲಿ ಇದಕ್ಕೇ ಭಾಷಣಗಳನ್ನು ನಾನು ಕೊಟ್ಟಿದ್ದಾಗಿದೆ, ಆದರೆ ಚಾರ್ಲ್ಸ್ ಗಿಲ್ಪಿನ್ ಇವನು ನಿಧನವಾದುದರಿಂದ ಖಾಲಿಯಾದ ಗ್ರಾಮಸಭೆಯ ನಾರ್ಥಂಪ್ಟನ್ ಚುನಾವಣಾ ಕ್ಷೇತ್ರಕ್ಕೆ ನಡೆದ ಹೋರಾಟದಲ್ಲಿ ನಾನು ಗುಪ್ತವಾಗಿ ಭಾಗವಹಿಸಿದೆನು, ಆ ಕ್ಷೇತ್ರದಲ್ಲಿ ಶ್ರೀ ಬ್ರಾಡ್ಲೋ ಇವನು ತೀವ್ರಗಾಮಿ ರಾಜಕೀಯ ಪಕ್ಷದ ಪರಿಯಿಂದ 1868ರಲ್ಲಿ ಸ್ಪರ್ಧಿಸಿ ಜಯವನ್ನು ಪಡೆದನು, ಅವನ ನಾಲ್ಕು ವಿರೋಧಿಗಳಿಗೆ ಕೆಲವೇ ಮತಗಳು ದೊರಕಿದ್ದವು. ಬ್ರಾಡ್ಲೆಯ ಪಕ್ಷದವರು ಹಲವು ವರ್ಷಗಳ ಕಾಲ ನಿಷ್ಠೆಯಿಂದ ಅವನಿಗಾಗಿ ದುಡಿದು ಹನ್ನೆರಡು ವರ್ಷಗಳನಂತರ 1880ರ ಚುನಾವಣೆಯಲ್ಲಿ ತಮ್ಮ ಮುಂದಾಳುವನ್ನು ಶನೈಃ ಶನೈಃ ಎಂಬಂತೆ ಗ್ರಾಮಸಭೆಗೆ (English Parliament) ಜಯಪ್ರದವಾಗಿ ಆರಿಸುತ್ತಲೇ ಬಂದರು, ಜನರು "ನಮ್ಮ ಚಾರ್ಲಿ",

ಇವನಲ್ಲಿ (Charles Bradlaugh) ಇವನಲ್ಲಿ ಇಟ್ಟಿದ್ದ ತಮ್ಮ ಅಭಿಮಾನವನ್ನು ಕಡಿಮೆ ಮಾಡಲಿಲ್ಲ, ಬದಲಾಗಿ ಒಳ್ಳೆಯವು ಹಾಗೂ ಕೆಟ್ಟ ವರದಿಗಳು ಅವನ ವಿಷಯವಾಗಿ ಬಂದರೂ ಅವನನ್ನೇ ಮುಂದಕ್ಕೆ ದೂಡಿದರು. ಅವನು ಸಮಾಜಸುಧಾರಕನಾಗಿದ್ದಾಗ ಅಥವಾ ಚುನಾವಣೆಯಲ್ಲಿ ಜಯಶಾಲಿಯಾದಾಗ ಜನರು ಅವನನ್ನು ಹಾರ್ದಿಕ ಪ್ರೀತಿ ವಿಶ್ವಾಸಗಳನ್ನು ತೋರಿಸಿ ಅಭಿಮಾನಿಸಿದಾಗ ಆ ಪ್ರೀತಿಯು ಅವರಿಗೆ ಎಷ್ಟೋ ಅಷ್ಟೇ ಅಮೂಲ್ಯವಾಗಿಯೂ ಅವನಿಗೆ ತೋರಿತು, ಜನರು ಅವನಲ್ಲಿ ಪ್ರೀತಿಯನ್ನು ತೋರಿಸದಾಗ ಅವನು ಮಗುವಿನಂತೆ ಅಳುವುದನ್ನು ನಾನು ನೋಡಿದ್ದೇನೆ. ಅವನ ಧೈರ್ಯವು ಯಾವ ಅಪಾಯಕ್ಕೂ ಜಗ್ಗದೆ, ಜನರ ನಿಂದನೆಗೆ ಹಿಮ್ಮೆಟ್ಟದೆ, ಅವನ ವಿರೋಧಿಗಳ ಎದುರಿಗೆ ಸ್ವಲ್ಪವೂ ವಿಚಲಿತನಾಗದೆ ಮುಂದುವರಿದನು, ಸಮರಕ್ಕೆ ಕಲ್ಲಿನಂತೆ ಗಟ್ಟಿ ಪ್ರವೃತ್ತಿಯನ್ನು ತೋರಿಸಿದ್ದರೂ ದಯೆಗೆ ಅಬಲೆಯಂತೆ ಮೃದುವಾಗಿದ್ದನು, ಬಲಾತ್ಕಾರಕ್ಕೆ ಉಕ್ಕಿನಂತೆ ಬಗ್ಗದೆ ಇದ್ದರೂ ಪ್ರೀತಿಗೆ ಮೇಣದಂತೆ ಮೆದುವಾಗಿದ್ದನು. ಕ್ರಿ.ಶ. 1868 ರಲ್ಲಿ ಜಾನ್ ಸ್ಟುಅರ್ಟ್ ಮಿಲ್ಲ್ ಇವನಿಗೆ ಬ್ರ್ಯಾಡ್ಲೆಯು ನಿಜವಾದ ಪ್ರತಿಭೆಯನ್ನರಿಯುವಷ್ಟು ಸೂಕ್ಷ್ಮಬುದ್ಧಿಯು ಆ ಗುಣವು ಅವನಲ್ಲಿ ದಯೆಯಿಂದ ಬೆಳೆಸುವಷ್ಟು ಧೈರ್ಯವೂ ಇದ್ದಿತು. ಬ್ರ್ಯಾಡ್ಲೆಯು ಚುನಾವಣೆಯಲ್ಲಿ ಸ್ಪರ್ಧಿಸಿದಾಗ ಜಾನ್ ಮಿಲ್ಲ್ ಇವನು ಅವನಿಗೆ ಸಹಕರಿಸಿದನಲ್ಲದೆ ಚುನಾವಣೆ ಖರ್ಚಿಗೆ ಸಹಾಯಧನವನ್ನು ಕಳುಹಿಸಿಕೊಟ್ಟನು, ಮಿಲ್ಲ್ ಇವನು ತನ್ನ ಆತ್ಮಚರಿತ್ರೆ (ಪುಟ 311-312) ಯಲ್ಲಿ ಈ ರೀತಿಯಾಗಿ ಹೇಳಿದನು:—

"——— ಅವನಿಗೆ (ಚಾರ್ಲ್ಸ್ ಬ್ರ್ಯಾಡ್ಲೆಗೆ) ಕಾರ್ಮಿಕರ ಬೆಂಬಲವು ಇತ್ತು; ಅವನು ಮಾತಾಡುವುದನ್ನು ಕೇಳಿದ ನಾನು ಅವನೊಬ್ಬ ಸಮರ್ಥ ವ್ಯಕ್ತಿಯೆಂದು ತಿಳಿದಿದ್ದೆನು. Malthusianism ಮತ್ತು proportional representation ಎಂಬ ಎರಡು ಪ್ರಾಮುಖ್ಯವಾದ ವಿಷಯಗಳಲ್ಲಿ ಡೆಮೊಕ್ರೆಟಿಕ್ ಪಕ್ಷದವರಲ್ಲಿ ಆಗ ಪ್ರಚಲಿತವಿದ್ದ ಅಭಿಪ್ರಾಯಕ್ಕೆ ಅವನು ಕೆಚ್ಚೆದೆಯಿಂದ ವಿರೋಧವಾಗಿ ನಿಂತು ಅವನು ಇತರ ರಾಜಕೀಯ ಚಳುವಳಿಗಾರರಿಂದ ಬೇರ್ಪಟ್ಟು ಇದ್ದನೆಂಬುದನ್ನು ಸ್ಫುಟಪಡಿಸಿದನು, ಪ್ರಜಾಪ್ರಭುತ್ವದ ಬಗ್ಗೆ ಕಾರ್ಮಿಕರ ಅಭಿಪ್ರಾಯಗಳನ್ನು ಈ ತರಹದ ಜನರು ಒಪ್ಪಿದರೂ ರಾಜಕೀಯ ಸಮಸ್ಯೆಗಳನ್ನು ಅವರು ತಾವಾಗಿಯೇ ತಿಳಿಯಬಲ್ಲವರಾಗುತ್ತಾರೆ. ಜನರ ಪ್ರತಿಭಟನೆಯು ಜನಪ್ರಿಯವಾಗಿದ್ದರೂ ಅದಕ್ಕೆ ವಿರೋಧವಾಗಿ ತಮ್ಮ ವೈಯಕ್ತಿಕ ಉದ್ದೇಶಗಳನ್ನು ಸಮರ್ಥಿಸುವ ಧೈರ್ಯವನ್ನು ಅವರು ತಾಳಿರುತ್ತಾರೆ. ಅಂಥವರು

ಶಾಸನಸಭೆ (Parliament) ಯಲ್ಲಿ ಇರಬೇಕೆಂದು ನನಗನ್ನಿಸುತ್ತ, ಮತ ನಿರ್ಮತಕ್ಕೆ ವಿರೋಧವಾದ ಬ್ರಾಡ್ಲೊಯ ಅಭಿಪ್ರಾಯಗಳು (ಅವನು ಆ ವಿಷಯವಾಗಿ ಅತಿ ವಿಚಾರ ಹೇಳಿದ್ದರೂ) ಅವನನ್ನು ರಾಜಕೀಯದಿಂದ ದೂರವಿರಿಸಬೇಕೆಂಬುದಾಗಿ ನನಗೆ ತೋರುವುದಿಲ್ಲ."

ಜಾನ್ ಮಿಲ್ ಇವನು ಬ್ರಾಡ್ಲೊಯ ನಾರ್ತಂಪ್ಟನ್ ಚುನಾವಣೆಗೆ ಬೆಂಬಲವನ್ನಿತ್ತುದರಿಂದ ಮಿಲ್ ಇವನು ತನ್ನ ವೆಸ್ಟ್‌ಮಿನಸ್ಟರ್ ಸ್ಥಾನವನ್ನು ಕಳೆದುಕೊಳ್ಳಬೇಕಾಯಿತೆಂದು ಹೇಳಲಾಗಿದೆ. ಈ ರೀತಿಯು ಆ ಕಾಲದಲ್ಲಿ ಅತ್ಯಂತ ಕಟುವಾಗಿ ಪ್ರಚಾರವಿದ್ದುದರಿಂದ ಬಂದು ವಿಧದಲ್ಲಿ ಅದು ನಿಜವಾಗಿರಬಹುದು, ಇದನ್ನು ಕುರಿತು "ಅದು ನ್ಯಾಯವಾಗಿ ಮಾಡಬೇಕಾಗಿದ್ದುದೇ ಆಗಿತ್ತು; ಇನ್ನೊಂದು ಬಾರಿ ಚುನಾವಣೆ ನಡೆದರೂ ನಾನು ಅದೇ ರೀತಿಯಾಗಿ ಮಾಡುವೆನು," ಎಂಬುದಾಗಿ John Stewart Mill ಇವನು ತಾನಾಗಿಯೇ ಹೇಳಿದನು.

ಸಾರ್ವತ್ರಿಕ ಚುನಾವಣೆಯು 1874ರ ಫೆಬ್ರುವರಿಯಲ್ಲಿ ನಡೆದಿದ್ದರೂ ಆ ವರ್ಷ ಎರಡನೇ ಬಾರಿಗೆ ನಡೆದ ಸೆಪ್ಟಂಬರ್ ತಿಂಗಳ ಚುನಾವಣೆಯಲ್ಲಿ ಬ್ರಾಡ್ಲೊಯು ಪುನಃ ಸ್ಪರ್ಧಿಯಾಗಿದ್ದರೂ ಅವನು ಆಗ ಅಮೇರಿಕಾಕ್ಕೆ ಹೋಗಿದ್ದುದರಿಂದ ಅವನ ಗೈರುಹಾಜರಿನಲ್ಲಿ ಸೋಲಿಸಲ್ಪಟ್ಟನು. ಆ ಚುನಾವಣೆಯ ಹೋರಾಟದ ವೇಳೆಗೆ National Reformer ಪತ್ರಿಕೆಗೆ ವರದಿಯನ್ನು ಬರೆಯಲು ನಾನು ನಾರ್ತಂಪ್ಟನ್ನಿಗೆ ಹೋಗಿ ಕೆಲವು ದಿನ ಇದ್ದೆನು. ಟೋರಿ ಪಕ್ಷಕ್ಕಿಂತ ವಿಗ್ ಪಕ್ಷವು ಬ್ರಾಡ್ಲೊಗೆ ವಿರೋಧವಾಗಿ ಬಹಳ ಕಹಿಯಾಗಿತ್ತು. ಹಾಗಾಗಿ ಬ್ರಾಡ್ಲೊಯು ಆರಿಸುವಿಕೆಯನ್ನು ತಡೆಗಟ್ಟಲು ಪುನಃ "ಲಿಬರಲ್" ಹುರಿಯಾಳನ್ನು ಬಹಳ ಶ್ರಮಪಟ್ಟು ಸ್ಪರ್ಧಿಯಾಗಿಸಿದರಲ್ಲದೆ ಯಾರೂ ಅಪೇಕ್ಷಿಸದ ಪುನಃ "ರಾಡಿಕಲ್" ಪಕ್ಷದವನೆಂಬದಲಾಗಿ 'ಟೋರಿ'ಯನ್ನು ಹೂಡಲಾಯಿಸಲು ಅವರು ಲಿಬರಲ್ ಮತ್ತು 'ರಾಡಿಕಲ್' ಪಕ್ಷಗಳನ್ನು ವಿಭಜಿಸಲಿಕ್ಕೆ ಪ್ರಯತ್ನಿಸಿದರು. ಶ್ರೀಗಳಾದ ಬಿಲ್, ಜೇಮ್ಸ್ ಮತ್ತು ಡಾ. ಪಯರ್ಸ್ ಇವರು ಆ ದೃಶ್ಯದಲ್ಲಿ ಕಾಣಿಸಿಕೊಂಡು ಅನಂತರ ಸ್ಥಾಡಲ್ಲೇ ಅದೃಶ್ಯರಾದರು. ಶ್ರೀಗಳಾದ ಜೇಕಬ್ ಬ್ರೈಟ್ ಮತ್ತು ಆರ್ನಾಲ್ಡ್ ಮಾರ್ಲೆ ಇವರ ಹೆಸರುಗಳನ್ನು ವ್ಯರ್ಥವಾಗಿ ಸೂಚಿಸಲಾಯಿತು. ಶ್ರೀ ಮೈಟನ್ ಇವನ ಹೆಸರನ್ನು ಹೇಳಲಾಯಿತು. ಶ್ರೀ ಬರ್ನಲ್ ಆಸ್ಬೋರ್ನ್ ಇವನು ಮೇಜರ್ ಲಮಾಲಿ ಇವನ ಹೆಸರನ್ನು ಶಿಫಾರಸು ಮಾಡಿದನು. ವಿಗ್ ಪಕ್ಷವನ್ನು ಅದರ ಕಷ್ಟದಿಂದ ಪಾರಾಗಿಸಲಿಕ್ಕೆ ತಾನಿದ್ದೇನೆಂದು ಡಾ. ಕೆನೀಲಿ

ಹೇಳಿಕೊಂಡನು. ನಾರ್ವಿಚ್‌ನ ಶ್ರೀ ಟಿಲ್ನೆಟ್ ಮತ್ತು ಬಿಲ್ಡನ್‌ನ ಶ್ರೀ ಹಾರ್ನ್ಸ್ ಇವರನ್ನು ಸ್ಪರ್ಧಿಸಲಿಕ್ಕೆ ಆಹ್ವಾನಿಸಲಾಯಿತು, ಆದರೆ ಅವರಿಬ್ಬರೂ ನಾರ್ಥಂಪ್ಟನ್ ಚುನಾವಣೆಯಲ್ಲಿ ಹೋರಾಡಿದ, ಮತ್ತು "ರಾಡಿಕಲ್" ಪಕ್ಷದಲ್ಲಿ ಅನೇಕ ವರ್ಷಗಳಿಂದ ಮುಂದುವರಿದ್ದವರಾದುದರಿಂದ ಪಿಟ್ಟಿಯ "ರಾಡಿಕಲ್" ಪಕ್ಷದವರೊಬ್ಬನನ್ನು ವಿರೋಧಿಸಲು ಮುಂದೆ ಬರಲಿಲ್ಲ. ಕಡೆಗೆ ಪಿಟ್ ಧನಿಕ ಶ್ರೀ ವಿಲ್ಲಿಯಮ್ ಫೌಲರ್ ಇವರು ಲಿಬರಲ್ ಮತ್ತು ರಾಡಿಕಲ್ ಪಕ್ಷಗಳ ಪ್ರಾತಿನಿಧ್ಯವನ್ನು ಟೋರಿ ಪಕ್ಷಕ್ಕೆ ಕೊಡಿಸಲು ಮುಂದಾದರಲ್ಲದೆ ಆ ಸ್ಥಾನವನ್ನು ಪ್ರಸಿದ್ಧ ಟೋರಿ ವಕೀಲ ಶ್ರೀ ಮೆರ್ವಿನ್ ಇವರಿಗೆ ಕೊಡುವುದರಲ್ಲಿ ಜಯಪ್ರದರಾದರು. ಆ ವರ್ಷದ ಫೆಬ್ರುವರಿ ಚುನಾವಣೆಯಲ್ಲಿ ಚಾರ್ಲ್ಸ್ ಬ್ರಾಡ್ಲೋಗೆ ಮತವಿತ್ತವರ ಜೊತೆಗೆ 133 ಹೆಚ್ಚಿನ ಮತದಾರರನ್ನು ಸೇರಿ ಈ ಬಾರಿ ಅವನು ಒಟ್ಟಿಗೆ 1766 ಮತಗಳನ್ನು ಪಡೆದನು.

ಚುನಾವಣೆಯೆಂದರೆ ಜನರು ದೊಂಬಿ ಕೋಲಾಹಲಗಳಿಂ ಬುದನ್ನು ಆಗ ಕಂಡುದೇ ನನ್ನ ಮೊದಲ ಅನುಭವವಾಗಿತ್ತು. ವಿಗ್ ಪಕ್ಷದವರು ಬ್ರಾಡ್ಲೋಯ ಮೇಲೆ ಹೇರಿದ ಅಸಹ್ಯಕರ ಅಪವಾದಗಳು ಅವನಿಗೆ ವಿರೋಧವಾಗಿ ಹಬ್ಬಿಸಿದ ಅಲ್ಪ ಹಾಗೂ ಕ್ರೂರ ಅಪಪ್ರಚಾರದ ಮಾತುಗಳು, ಮತ್ತು ಅವನ ವೈಯಕ್ತಿಕ ಮತ್ತು ಸಾಂಸಾರಿಕ ಜೀವನದ ಬಗ್ಗೆ ಹೇಳಲಾದ ಬಿರುನುಡಿಗಳು ಅವನನ್ನು ತಿಳಿದಿದ್ದ ಮತ್ತು ಪ್ರೀತಿಸಿದ್ದ ಜನರ ಕೋಪವನ್ನು ವಿಶೇಷವಾಗಿ ಕೆರಳಿಸಿತು. ಅನ್ಯಾಯಕ್ಕೆ ಅಂಜದ ವಿಗ್ ಪಕ್ಷದವರ ಕುಹಕವ್ಯೂಹಗಳವನ್ನು ಪಡೆದು ಚುನಾವಣೆಯನ್ನು ಅವನಿಗೆದುರಾಗಿ ಕೈಕೊಂಡು ಆ ಕ್ಷೇತ್ರವನ್ನು ಒಬ್ಬ ಟೋರಿ ಪಕ್ಷದವನಿಗೆ ಕೊಟ್ಟಾಗ ಜನರು ತುಂಬಾ ಸಿಟ್ಟಿಗೆ ದಂಗೆಯೆದ್ದರು. ಅವನ ವಿಷಯವಾಗಿ ಹೇಳಲಾದ ಕ್ರೂರ ಅಪಪ್ರಚಾರದ ನುಡಿಗಳಿಗೆ ಒಂದು ಉದಾಹರಣೆಯನ್ನು ಕೊಡಬಹುದು. ಬ್ರಾಡ್ಲೋಯು ತನ್ನ ಪತ್ನಿಯಿಂದ ಬೇರ್ಪಟ್ಟಿದ್ದನೆಂದು ಎಲ್ಲರಿಗೂ ತಿಳಿದಿತ್ತು. ಅವನೊಬ್ಬ ನಾಸ್ತಿಕನಾಗಿ ವಿವಾಹವನ್ನು ಒಪ್ಪದವನಾಗಿದ್ದ ತನ್ನ ಹೆಂಡತಿ ಮಕ್ಕಳನ್ನು ತೊರೆದು ದುಡಿಯಲೆಂದು ಅವರನ್ನು ಬಿಟ್ಟಿದ್ದನೆಂದು ಜನ ಆರೋಪಿಸಿದರು. ಈ ದಾಂಪತ್ಯ ವಿಚ್ಛೇದನಕ್ಕೆ ಕಾರಣವು ಕೆಲವರಿಗೆ ಮಾತ್ರ ತಿಳಿದಿತ್ತು. ಬ್ರಾಡ್ಲೋಯು ಯಾವಾಗಲೂ ಹೆಂಗಸರನ್ನು ಅತಿ ಗೌರವದಿಂದ ಕಾಣುತ್ತಿದ್ದನು. ಹಾಗಿದ್ದಾಗ ಆಗ ಅವನ ಆ ಉತ್ತಮ ನಿಲುವನ್ನು ತನ್ನ ಹರೆಯದ ವೇಳೆಗೆ ಪತ್ನಿಯಾಗಿದ್ದ ಮತ್ತು ಅವನ ಮಕ್ಕಳ ತಾಯಿಯಾಗಿದ್ದ ಮಹಿಳೆಯ ಬಗ್ಗೆ ಕಾಣಿಸಿಕೊಳ್ಳುವಂಥವನಾಗಿರಲಿಲ್ಲ. ಹೇಗೂ ಅವನು ಕಾಲವಾದನಂತರ ಅವನ ಮಕ್ಕಳಲ್ಲಿ ಈಗ ಉಳಿದಿರುವ ಒಬ್ಬಳೇ ಪುತ್ರಿಯು

ತನ್ನ ತಂದೆಯು ಸ್ವಾರ್ಥಕ್ಕಾಗಿ ಅಂದಿನ ವಿಷಾದಪೂರ್ವಕವಾದ ಸತ್ಯ
ವನ್ನು ಹೊರಗೆಡಹಿದಳು. ಶ್ರೀಮತಿ ಬ್ರ್ಯಾಡ್ಲೆಯು ನಿಶಾಸೇವನೆಗೆ ಪ್ರಾ
ರಂಭಿಸಿದ್ದಳು. ಬ್ರ್ಯಾಡ್ಲೆಯು ಅದನ್ನು ಬಹುಕಾಲ ಸಹಿಸಿದ್ದಲ್ಲದೆ ಅದರಿಂ
ದ ಅವಳನ್ನು ಪಾರಾಗಿಸಲು ಪ್ರಯತ್ನಿಸಿದನು. ಕಡೆಗೆ ಅದು ವಿಫಲ
ವಾದುದರಿಂದ ಅವನು ತನ್ನ ಪತ್ನಿಯಿಂದ ಬೇರ್ಪಟ್ಟು ಅವಳನ್ನು ಅ
ವಳ ತಂದೆತಾಯಿಗಳ ಬಳಿಯಲ್ಲಿ ಬಿಟ್ಟನು. ಮಕ್ಕಳನ್ನು ಅವಳ ಬ
ಳಿಯಲ್ಲಿ ಬಿಟ್ಟಿದ್ದರಿಂದ ಅವರೆಲ್ಲರ ಪೋಷಣೆಗೆ ಅವನು ಹಣ ಕೊಡು
ತ್ತಲೇ ಇದ್ದನು. ಇಂಥ ಅಸಹನೀಯ ಸಂದಿಗ್ಧ ಪರಿಸ್ಥಿತಿಯಲ್ಲಿ
ಅವನಷ್ಟು ಉದಾರಗುಣದಿಂದ ಮತ್ತು ಬುದ್ಧಿವಂತಿಕೆಯಿಂದ ಬೇ
ರಾರೂ ವರ್ತಿಸುತ್ತಿರಲಿಲ್ಲ. ಆದರೆ ಈ ಸತ್ಯಸಂಗತಿಯನ್ನು ಬಚ್ಚಿಟ್ಟು
ಜನರ ಅಪವಾದಗಳಿಗೆ ಅವನು ಅವಕಾಶವಿತ್ತುದು ಅವನ ಒಂದು ಬ
ಗೆಯ ಹುಚ್ಚಿನಿಂದಲೇ ಹೇಳಬಹುದು. ನಾರ್ತಂಪ್ಟನ್ನಿನ ಅವನ ಹಿಂ
ಬಾಲಕರಿಗೆ ಆ ವಿಷಯವಾಗಿ ಪೂರ್ತಿ ತಿಳಿದಿರಲಿಲ್ಲ. ಆದರೆ ಅವ
ನು ದಿಟ್ಟತನದ ಸಭ್ಯವ್ಯಕ್ತಿಯೆಂದು ಅವರು ತಿಳಿದಿದ್ದರು. ಆ
ಕಾರಣದಿಂದ ಅವನ ಮೇಲೆ ವ್ಯಕ್ತಿಗತವಾಗಿ ಅಂಥ ಉಗ್ರ ಟೀಕೆ
ಯನ್ನು ಮಾಡಿದ್ದರಿಂದ ಜನರೆಲ್ಲ ಸಿಡಿದು ಬಿದ್ದರು. ಈ ಅಪ
ವಾದಗಳ ಸಂಬಂಧವಾಗಿ ಚುನಾವಣೆಯ ವೇಳೆಗೆ ಜನರು ತ
ಮ್ಮ ಅಪಪ್ರಚಾರವೆಂಬ ಅಸ್ತ್ರಗಳ ಮೂಲಕ ಅಲ್ಲಲ್ಲಿ ಕಾದಾಟ
ಗಳನ್ನು ನಡೆಸಿ ಕಡೆಗೆ ಸೋತು ಹೋದಾಗ ಅವರಿಗೆ ತಮ್ಮ ಉ
ದ್ರೇಕವನ್ನು ಹಿಡಿದಿಡಲಿಕ್ಕೆ ಕಷ್ಟವಾಯಿತು. ಚುನಾವಣೆಯ
ಫಲಿತಾಂಶವು ಬಹಿರಂಗವಾದ ಮೇಲೆ ಅದರ ಸಂಬಂಧವಾಗಿ
ಓಡಾಡಿ ದಣಿದ ಚಾರ್ಲ್ಸ್ ಬ್ರ್ಯಾಡ್ಲೆಯು ತನ್ನ ಹೋಟೆಲಿನಲ್ಲಿ
ಕುಳಿತಿದ್ದಾಗ ಆ ಹೋಟೆಲು ಮಾಲೀಕನು ಓಡಿಬಂದು ಬೇಗನೆ
ಬೀದಿಗೆ ಹೋಗಿ ಉದ್ರೇಕಗೊಂಡ ಜನವನ್ನು ಸಮಾಧಾನಪಡಿ
ಸದಿದ್ದರೆ ಶ್ರೀ ಫಿಲರ್ ಇವನ ಕೇಂದ್ರ ಕಚೇರಿಯಾದ ಥಾಮಸ್ಸ
ನ್ನಲ್ಲಿ ಕೊಲೆಯಾಗುವ ಸಂಭವವಿದೆಯೆಂದು ತುಂಬಾ
ಗಲಿಬಿಲಿಸುತ್ತಾ ಬ್ರ್ಯಾಡ್ಲೆಗೆ ಹೇಳಿದನು. ಅಷ್ಟರಲ್ಲಿ ಜನಸಂ
ದಣಿಯು ಆ ಹೋಟೆಲ್ ಬಾಗಿಲ ಬಳಿ ಮುಂದೊತ್ತುತಿದ್ದು
ಕಿಟಕಿ ಮತ್ತು ಮೇಲಾವರಣಗಳತ್ತ ಕಲ್ಲಿನ ಮಳೆಯನ್ನು ಸು
ರಿಸುತ್ತಿದ್ದರು. ತಾನು ತುಂಬಾ ಆಯಾಸಗೊಂಡಿದ್ದರೂ ಬ್ರ್ಯಾ
ಡ್ಲೆಯು ಒಮ್ಮೆಲೇ ಮುಂದಕ್ಕೆ ಹಾಯ್ದು ಅವನನ್ನು ಅವಹೇಳ
ನಕ್ಕೊಳಗಾಗಿಸಿ ಸೋತು ಕುದಿದಿದ್ದ ಜನರ ರಕ್ಷಣೆಗೆಂದು ಹೋ
ದನು. ಜನದ ಒತ್ತಡದಿಂದ ಒಡೆದು ಹೋಗಿದ್ದ ಆ ಹೋಟೆಲ್
ಬಾಗಿಲನ್ನು ಹಾರಿ ನಿಂತು ತುಂಬಾ ಕೋಪಾವೇಶದಿಂದ ಅಬ್ಬ
ರಿಸುತ್ತಿದ್ದ ಒಬ್ಬೊಬ್ಬರನ್ನು ಕೆಡವಿ ಜನರನ್ನೆಲ್ಲ ಅಲ್ಲಿಂದ ಓಡಿಸಿ

ನನ್ನ ನಿರೀಕ್ಷೆಯಂತೆಯೇ ಆದಾಗ ಅವರನ್ನು ಭೇಟಿ ಮಾಡಿದ ಕೂಡಲೇ ಅ-
ವರನ್ನು ಅಲ್ಲಿಂದ ಹೊರಡಿಸಿದೆನು. ಹೀಗೂ ಎಂಟು ಗಂಟೆಗೆ ಅ-
ವನು ಟ್ರಿಪ್ಪೆಲ್ ನೌಕೆಯಲ್ಲಿ ನಾರ್ಥಾಂಪ್ಟನ್‌ನಿಂದ ಅಮೇರಿಕಾದ
ಕ್ವೀನ್ಸ್ ಟೌನ್‌ಗೆ ಪ್ರಯಾಣ ಬೆಳೆಸಬೇಕಾಗಿತ್ತು. ಅವನು ಇಂಗ್ಲೆ-
ಡಿನಿಂದ ಹೊರಟುಹೋದ ಮಾರನೆಯ ಅನಂತರ ಹಬ್ಬಿತು. ಕೋ-
ರ್ಟಿಗೆ ಅವನು ಹಾಜರಾಗದ್ದು ಜನರ ದೊಂಬಿಯು ಪುನಃ ಪ್ರಾರಂ-
ಭವಾಗಲು ಅದಕ್ಕೆ ಸಂಬಂಧಿಸಿದ ಕಾನೂನನ್ನು ಓದಿ ನೋಡಬೇ-
ಕಾಯಿತು. ಶಿಸ್ತನ್ನು ಸ್ಥಾಪಿಸಲು ಸಿಪಾಯಿಗಳನ್ನು ಕರೆಸಬೇ-
ಕಾಯಿತು. ಅಷ್ಟರಲ್ಲಿ ಹಲವೆಡೆಯಿಂದ ಕಲ್ಲುಗಳು ಬೀಳು-
ತ್ತಲೇ ಇದ್ದವು ಹಲವಾರು ತಲೆಗಳು ಮತ್ತು ಕಿಟಕಿ ಬಾಗಿಲುಗಳು
ಧ್ವಂಸವಾಗುತ್ತಿದ್ದುವಾದರೂ ಜೀವನಾಶ ಹಾನಿಯು ಸಂ-
ಭವಿಸಲಿಲ್ಲ. ಶ್ರೀಮತಿ ಟ್ಯೂಸನ್ ಮತ್ತು ಮಕ್ಕೋರ್ಮಿಯಂ ಮುದ್ರಣಾ-
ಲಯದ ಮತ್ತು ಮಿಗ್ನೊಟ್ಟೆ ದವರ ಬಿಡಾರ ಕಟ್ಟಡಗಳು ಜ-
ನರ ದಾಳಿಗೆ ಸಿಲುಕಿದ ಪ್ರಧಾನ ಸ್ಥಳಗಳಾಗಿದ್ದವು. ಕೆಲವು
ಕಟ್ಟಡಗಳ ಬಾಗಿಲು ಕಿಟಕಿಗಳು ಪೂರ್ಣ ನಾಶವಾಗಿದ್ದವು.
ಚುನಾವಣೆಯ ನಂತರ ಒಂದು ದಿನದಲ್ಲಿ ನಾನು ಮನೆಗೆ ಹಿಂ-
ದಿರುಗಿದೆನು. ಕೂಡಲೇ ವಿಶ್ರಾಂತಿಯ ಬೇಸಿಗೆಗಾಗಿ ಮ-
ಲಗಿದೆನು. ನಾನು ಗುಣಮುಖವಾದ ನಂತರ ನಾರ್ಥಾಂಪ್ಟನ್ನು
ಬಿಟ್ಟು ಬೆಸ್ಟ್-ಮಾರ್ಲ ಬರೋ ವೆಸ್ಟ್‌ಬೋರ್ನ್ ಟೆರೇಸ್‌ಗೆ ಸೇರಿದ
ಒಂದು ಮನೆಯಲ್ಲಿ 1876ರ ವರೆಗೂ ವಾಸಿಸಿದ್ದೆನು.

ಮರೆಯಲಾರದ ಎಂದರೆ, 1875ರ ಜನವರಿಯಲ್ಲಿ
ನಾನು ಕೂಲಂಕಷ ಆಲೋಚಿಸಿ ಮತ್ತು ಪ್ರಮಾಣಗಳನ್ನು ವಿವೇ-
ಚಿಸಿ, ನಾನು Free-thinker ಮತ್ತು Social Reformer ಆಗಿ
ಪ್ರಚಾರ ಕಾರ್ಯವನ್ನು ಮನಃಪೂರ್ವಕವಾಗಿ ಕೈಗೊಳ್ಳಲು
ಮತ್ತು ಆ ನನ್ನ ಸಾಧನೆಗೆ ನಾಲಗೆ ಮತ್ತು ಲೇಖನಿಗಳೆರಡನ್ನೂ
ಉಪಯೋಗಿಸಲು ನಿರ್ಧರಿಸಿದೆನು. ಆದರೆ ನಾನು ಅಷ್ಟರಲ್ಲಿ
ಹಿಡಿದಿದ್ದ ಹೊಸ ಮಿತ್ರರ ಉದ್ದೇಶಕ್ಕೆ ಒಳಗಾಗುವುದು ಮಾತ್ರ-
ವಲ್ಲ, ನನ್ನ ಅಭಿಪ್ರಾಯ ಮತಗಳನ್ನು ತಿಳಿಸುವುದರ ಬಗ್ಗೆಯೂ ತೊಂ-
ದರೆ ಉಂಟಾಗುವುದರಿಂದ ಎಣಿಸಿ ನಾನು ಈ ಕಾರ್ಯಕ್ರಮ-
ವನ್ನು ಕುರಿತು ನಿರ್ಧರಿಸುವ ಮುಂಚೆಯೇ ಅದರ ಪರಿ-
ಣಾಮವೇನಾಗಬಹುದೆಂದೂ ಆಲೋಚಿಸಿದ್ದೆನು. ಸರ್ವ ನಾಸ್ತಿ-
ಕನು ಕಾನೂನಿನ ಒಳಗೆ ಅಡಗದವನೂ ವಿಧಿಸದ ದಂಡಕ್ಕೆ
ಒಳಪಡಿಸಿ ಹಾಕಲ್ಪಡುವವನಾದ ಅವನು ಕಾನೂನಿಂದ ರಕ್ಷಿಸಲ್ಪಡ-
ದವನೂ ಆದುದರಿಂದ ನಾನು ಆಲೋಚಿಸಿದ ಕಾರ್ಯಕ್ರಮದಿಂ-
ದ ಎಲ್ಲವನ್ನೂ ಕಳೆದುಕೊಳ್ಳುವ ಮತ್ತು ವನನ್ನೂ ಹಿಡಿಯದೆ

ಇರುವ ತಾರುಣ್ಯದ ಜೊತೆಗೆ ನನ್ನನ್ನು ಕೊಂಡೊಯ್ಯಬಹುದೆಂದು ಅರಿತಿದ್ದೆನು. ಹೀಗೂ ಜನಕ್ಕೆ ಸ್ವಾತಂತ್ರ್ಯ ಮತ್ತು ಸ್ವತಂತ್ರ ಮನೋಭಾವವನ್ನು ಬಿತ್ತರಿಸುವುದೂ ಮತಭ್ರಾಂತಿ ಮತ್ತು ಅಂಧಾಭಿಮಾನವನ್ನು ತೊಡೆಯಲು ಹೋರಾಡುವುದೂ ಈ ಯೋಗವನ್ನು ನಾನು ಕಂಡುದಕ್ಕಿಂತ ದಿವ್ಯವಾಗಿ ಮತ್ತು ಉತ್ತಮವಾಗಿ ಮಾಡುವುದೂ ನನ್ನ ಧ್ಯೇಯವಾಗಿದ್ದು ಅಂತೆನಿಸಲು ಯಾವೊಂದು ಶಕ್ತಿಯೂ ನನ್ನನ್ನು ಹಿಂದಕ್ಕೆ ನಿಲ್ಲಿಸಲಿಕ್ಕಿಲ್ಲ ಕಾತರತೆಯಿಂದ ತುಂಬಿದ್ದ ನಾನು ಅದಕ್ಕಾಗಿ ಪ್ರಯತ್ನಿಸುತ್ತಿದ್ದೆನು. "ಯಾರು ಹೋಗುವರು? ನನ್ನ ಪರವಾಗಿ ಯಾರು ಮಾತಾಡುವರು?" ಎಂಬ ದೈವವಾಣಿಯು ಸಮರಾಂಗಣದಲ್ಲಿ ಪ್ರತಿಧ್ವನಿಸುತ್ತಿದುದನ್ನು ನಾನು ಆಲಿಸಿದಂತಾಯಿತು. ಆಗ ನಾನು ಆವೇಶಭರಿತವಾದ ಉತ್ಸಾಹದಿಂದ "ನಾನು ಇಲ್ಲಿರುವೆನು, ನನ್ನನ್ನು ಕಳುಹಿಸು." ಎಂಬ ನಿರ್ಧಾರಪೂರ್ವಕವಾದ ಧ್ವನಿಯಿಂದ ಹಿರಿ ಮುಂದಕ್ಕೆ ಹಾರಿದೆನು. ಬಹು ಕಾತರತೆಯಿಂದ ಕಾದಿದ್ದ ಜನಸಮೂಹದೆಡೆ ಹಾದು ನನ್ನ ಮೇಧಾಶಕ್ತಿ ಹಾಗೂ ವಾಕ್ಶಕ್ತಿಯು ದಿವ್ಯ ಪ್ರಭಾವವನ್ನು ಆ ಪವಿತ್ರ ಉದ್ದೇಶಕ್ಕೆಂದು ಉಪಯೋಗಿಸಲು ಗಟ್ಟಿಯಾಗಿ ಹೊತ್ತಿದ ನನ್ನ ಆ ನಿರ್ಧಾರಕ್ಕೆ ನಾನು ಹಿಂದು ತಾಗು ಸಮಯವಾದರೂ ಬೇಸರಿಸಲಿಲ್ಲ. ಸಾರ್ವಜನಿಕ ಉಪನ್ಯಾಸಕನಾಗಿ, ವಾರ್ತಾಪತ್ರಿಕೆ ಮತ್ತು ವೇದಿಕೆಗಳಲ್ಲಿ ಪ್ರಭಾವವನ್ನು ಬೀರಿ ಪ್ರತಿವರ್ಷವೂ ಸಹಸ್ರಾರು ಓದುಗರನ್ನೂ ಕೇಳುವವರನ್ನೂ ಸ್ಫೂರ್ತಿಗೊಳಿಸುವ ಜವಾಬ್ದಾರಿಕೆಯು ನನಗೆ ಬಹು ಪವಿತ್ರವಾಗಿತ್ತು. ಅದಕ್ಕಿಂತ ಹಗುರವಾದ ಮತ್ತು ಇನ್ನು ಭಾರವಾದ ಕಾರ್ಯಭಾರವನ್ನು ಯಾರಿಗೂ ಹೊರಲಿಕ್ಕೆ ಸಾಧ್ಯವಿಲ್ಲ. ಒಬ್ಬನ ಮೆದುಳಿಂದ ಇನ್ನೊಬ್ಬನಿಗೆಂಬಂತೆ ಹೊರಳುವ, ನಮಗರಿಯದೆಯೆ ಸಹಸ್ರಾರು ಜನರ ಮೇಲೆ ಪ್ರಭಾವವನ್ನು ಬೀರುವ ಮತ್ತು ಒಳ್ಳೆಯದಕ್ಕೆ ಅಥವಾ ಕೆಟ್ಟದಕ್ಕೆ ಎಂಬಂತೆ ಕಾಲವಾಹಿನಿಯಲ್ಲಿ ತೇಲುವ ಆ ಬರೆದ ಮತ್ತು ಉಚ್ಚರಿಸಿದ ನುಡಿಗಳ ತೂಕವನ್ನು ಯಾರಿಂದಲೂ ಅಳೆಯಲಾಗದಷ್ಟು ರಭಸದಿಂದ ಅವು ಹೊರಳುತ್ತವೆ! ಈ ಸೇವೆಯ ಮಹತ್ವವನ್ನು ಮತ್ತು ಕರ್ತವ್ಯದ ಪವಿತ್ರತೆಯನ್ನು ಅರಿತು ನಾನು ಮೆಚ್ಚಿಕೊಂಡೆ ಈ ಸೇವೆಯನ್ನು ಮಾಡಲು ಅರ್ಹನಾಗುವಂತೆ ಮತ್ತು ಅದನ್ನು ಜಯಪ್ರದವಾಗಿಸುವಂತೆ ಮಾಡುವೆನೆಂದು ಪಣತೊಟ್ಟೆನು. ಅದಕ್ಕಾಗಿ ನಾನು ಓದುತ್ತಾ ಅಭ್ಯಾಸಿಸುತ್ತಾ ಇದ್ದ ನನ್ನ ಭಾಷೆಯನ್ನು ಮೆರುಗುಗೊಳಿಸಲು ಆಲೋಚನೆಯನ್ನು ಶಿಸ್ತಿನಲ್ಲಿಡಲು ಮತ್ತು ಜ್ಞಾನವನ್ನು ವಿಶಾಲವಾಗಿಸಲು ನನ್ನ

ಲ್ಲಿದ್ದ ಆಧ್ಯಾತ್ಮ ಬಲವೆಲ್ಲವನ್ನೂ ವಿಶ್ಲೇಷಿಸುತ್ತಾ ಇದ್ದೆನು, ಹಾಗೂ ಇದೊಂದನ್ನು ನಾನು ಹೇಳಬೇಕಾಗಿದೆ, ನಾನು ತುಂಬಾ ಬರೆದಿದ್ದರೂ ಓದಿದ್ದರೂ ಅದಕ್ಕಿಂತ ಹೆಚ್ಚಾಗಿ ವಿಷಯಗಳನ್ನರಿಯುತ್ತಿದ್ದೆನು, ಮತ್ತು ಅವನ್ನು ಕುರಿತು ಆಲೋಚಿಸಿದ್ದೆನು; ಆದರೆ ಇಲ್ಲ, ನನಗೆ ಯಾವ ವಿಚ್ಛಕ್ಕೂ ಅವಕಾಶವಾಗಿರದ ಆ "ಸತ್ಯ ದೇವತೆ"ಗಾದರೋ ನಾನು ಏನನ್ನೂ ಕೊಡಬೇಕಾಗಿದ್ದಿಲ್ಲ.

ಅದೇ ವರ್ಷ, ಎಂದರೆ 1875 ರಲ್ಲಿ, ನಾನು ಸ್ವತಂತ್ರ ಭಾವನೆ (Free-thought)ಯ ಬಗ್ಗೆ ಸಾರ್ವಜನಿಕ ಪ್ರತಿಪಾದಿಕೆಯಾಗಿ ಹೋಗುತ್ತಿದ್ದಂಥ ವೇದಿಕೆಯ ಮೇಲೆ ತೋರಿಸಿಕೊಳ್ಳುತ್ತಿದ್ದುದನ್ನು ಅವರು ಕಂಡರು, ನನ್ನ ಸ್ವತಂತ್ರಭಾವ ಅದೇ ರೀತಿ ನನ್ನನ್ನು ಮುಂದೊಯ್ದು ಕಡೆಗೆ ಬ್ರಹ್ಮಜ್ಞಾನ ಸಂಸ್ಥೆ (Theosophical Society)ಯನ್ನು ಸ್ಥಾಪಿಸುವುದನ್ನು ಸಹ ಕಂಡರು, ನಾನು ಇಂಗ್ಲೆಂಡಿನಲ್ಲಿ ಭಾಷಣಗಳನ್ನು ಕೊಡಲು ತೊಡಗಿದನಂತರವೇ ಹೆಚ್. ಪಿ. ಬ್ಲಾವಟ್‌ಸ್ಕಿ ಇವರು ಅಮೇರಿಕಾದಲ್ಲಿ ಬ್ರಹ್ಮಜ್ಞಾನ ಸಂಸ್ಥೆಯನ್ನು 1875 ರ ನವಂಬರ್‌ನಲ್ಲಿ ಸ್ಥಾಪಿಸಲು ತಮ್ಮ ತಳಹದಿಯನ್ನು ಹಾಕುತ್ತಿದ್ದರು, ಎಂಬುದನ್ನು ಹಲವು ಬಾರಿ ಸಂತೋಷದಿಂದ ನೆನೆಸಿದ್ದೇನೆ, ಚಾರ್ಲ್ಸ್ ಬ್ರಾಡ್ಲೊ ಮತ್ತು ನಾನು ಜನರ ಅಧಿಕಾರದಯನ್ನು ಪ್ರತಿಭಟಿಸುತ್ತಿದ್ದಂತೆಯೇ ಅವರು ತಾನೇ ಹೇಳಿದಂತೆ ಮಹತ್ವವಾದ ಕೆಲಸವನ್ನು ಅದೇ ದಿಕ್ಕಿನಲ್ಲಿ ಸಾಧಿಸುತ್ತಾ, ಉದ್ದೇಶಪೂರ್ವಕವಾದ ಜೀವನಕ್ಕೆ ತತ್ವಜ್ಞಾನ (Theosophy)ವೆಂಬ ಯಥಾರ್ಥ ವಿಧಾನವನ್ನು ಅವಶ್ಯಕವೆಂದು ಪ್ರಚಾರ ಮಾಡುತ್ತಾ ಇದ್ದುದನ್ನು ಇನ್ನಷ್ಟು ಸಂತೋಷದಿಂದ ನೆನೆಯುತ್ತಿದ್ದೇನೆ, ಹೋರಾಟವು ಕೆಲವು ವಿಲಕ್ಷಣ ಕಾದಾಟಗಳೊಡನೆಯೇ ತೀವ್ರವಾಗಿ ಆರಂಭವಾಯಿತು, ನಾನು Liberal Social Union ಇದರ ಸದಸ್ಯೆಯಾಗಿದ್ದೆನು, ಈ ಸಂಸ್ಥೆಗೆ ನಾಸ್ತಿಕರನ್ನು ಸೇರಿಸಿಕೊಳ್ಳುವ ವಿಚಾರದಲ್ಲಿ ಒಂದು ರಾತ್ರಿ ಮೇಲೆ ವಾದವಿದ್ದಿತು. ಯಥಾರ್ಥವಾಗಿ ಒಪ್ಪಿಕೊಂಡಂಥ ನಾಸ್ತಿಕರನ್ನು ಈ ಸಂಸ್ಥೆಗೆ ಸೇರಿಸಿದರೆ ತಾನು ಅದರ ಸದಸ್ಯನಾಗಿರಲಾರೆನೆಂದು ಡಾ. ಜೆಕ್ಸ್ ಇವರು ಸಾರಿದರು. ಆಗ ನಾನೂ ಒಬ್ಬ ನಾಸ್ತಿಕಳೆಂದೂ, ಸ್ವತಂತ್ರ ಅಭಿಪ್ರಾಯವೇ ಈ ಸಂಸ್ಥೆಯ ಧ್ಯೇಯವೆಂದೂ ನಾನು ನೆನಪಿಸಿ ಹೇಳಿದೆನು, ಪರಿಣಾಮವಾಗಿ ನಾನು ಮೂಲೆಗೆ ತಳ್ಳಲ್ಪಟ್ಟೆನು, ನಾನು ಬರೀ ಕ್ರೈಸ್ತ ಸಂಘವನ್ನು ಒಪ್ಪದೇ ಇದ್ದವರಿಂದ ಭಾವಿಸ ನನ್ನ ಮಿತ್ರರಾಗಿದ್ದವರಲ್ಲಿ ನನ್ನ ಸಂಶಯವಾದವು ಅವರೆಲ್ಲರ ಮತೀಯ ಭಾವನೆಯ ಮಿತಿಯನ್ನು ಮೀರಿ ಬಹಳ ಪ್ರಗತಿದಾಯಕವಾಗಿ ಬೇರೂ ಬಿಟ್ಟಿದ್ದುದನ್ನು ಕಂ

ಹು ಅವರು ನನ್ನನ್ನು ಹಿರಿಗಳಿಂದ ಸಂದೇಹಿಸಲ್ಪಡುವಾಗಿಯೇ ನೋಡಲಾರಂಭಿಸಿದರು, The Liberal Social Union ಸಂಸ್ಥೆಗೆ ನನ್ನನ್ನು ಅಂದಿನಿಂದ ತಿಳಿಯದಾಯಿತು, ಆದರೆ ನನ್ನ ಮುಂದಿದ್ದ ವಿಶಾಲ ಕಾರ್ಯಕ್ಷೇತ್ರವು ಈ ಸಂಕೋಚ ಮನೋಭಾವನೆಯು ಅಲ್ಪ ಭಿನ್ನಾಭಿಪ್ರಾಯವೂ ನನ್ನನ್ನು ಎಳ್ಳಷ್ಟು ಬಾಧಿಸಲಿಲ್ಲ,

ಕ್ರಿ.ಶ. 1879ರ ಜನವರಿಯಲ್ಲಿ ಶ್ರೀ ಮಾನ್‌ಕ್ಯೂರ್ ಕಾನ್‌ವೇ ಇವರ ಅಧ್ಯಕ್ಷತೆಯಲ್ಲಿ ನನ್ನ ಭಾಷಣದ ನಿಶ್ಚಿತ ಕಾರ್ಯಕ್ರಮವು ಪ್ರಾರಂಭವಾಯಿತು. ಜನವರಿ 17ರ National Reformer ಪತ್ರಿಕೆಯಲ್ಲಿ "ಶ್ರೀಮತಿ ಅನಿ ಬೆಸೆಂಟ್ (Ajax) ಇವರು ಫಿನ್ಸ್‌ಬರಿಯ 'ಸೌತ್ ಪ್ಲೇಸ್ ಚೇಪೆಲ್'ನಲ್ಲಿ "ನಾಗರಿಕ ಮತ್ತು ಧಾರ್ಮಿಕ ಸ್ವಾತಂತ್ರ್ಯ" ಎಂಬ ವಿಷಯದ ಮೇಲೆ ಮಾತಾಡುವರು, ಎಂಬುದಾಗಿ ಮುದ್ರಿತವಾಗಿರುವುದನ್ನು ನೋಡಿದೆನು. ಹೀಗೆ ನಾನು ನನ್ನ 'Ajax' ಎಂಬ ಗುಪ್ತನಾಮವನ್ನು ಅವರಿಗೆ ಸೂಕ್ತವಾಗಿದ್ದ ನನ್ನ ವಿನೀತ ಗುಣದ ವೇಷವನ್ನು ಕಳಚಿ ಹಾಕಿ ಸಮರ ರಂಗಕ್ಕೆ ನೆಟ್ಟನೆ ಧಾವಿಸಿ ಹೋದೆನು, ಹೀಗೆ ನನ್ನ ಹೆಸರು ಬಹಿರಂಗವಾದುದರ ಪರಿಣಾಮವಾಗಿ ಅದು ಮತ ಭ್ರಾಂತಿಯ ವಿಲಕ್ಷಣ ಪ್ರದರ್ಶನಕ್ಕೆ ಎಡೆಮಾಡಿತು. Dialectical Society — ಈ ಸಂಸ್ಥೆಯು ನನ್ನನ್ನು ಒಂದು ಪ್ರಬಂಧವನ್ನು ಓದಲು ಕರೆಸಿದಾಗ "ದೇವರ ಅಸ್ತಿತ್ವ" ಎಂಬ ವಿಷಯವನ್ನು ಆರಿಸಿದೆನು. (ಎಳೆ ವಿದ್ಯಾರ್ಥಿಗಳೂ ಮತ್ತು ಭಾಷಣಕಾರರು ತಮ್ಮ ವಾಗ್ವಾದಗಳಿಗೆ ಬಹು ತರಹದ ವಿಷಯಗಳನ್ನು ಆರಿಸಿಕೊಳ್ಳುವರೆಂಬುದಾಗಿ ಇದರ ಮುದ್ದೆ ಹೇಳಲಿಚ್ಛಿಸುತ್ತೇನೆ, ಆದರೆ ವಿನಯಗುಣ ಮತ್ತು ಜ್ಞಾನವು ಹೆಚ್ಚಿದಾಗ ಮತ್ತು ಹದಿನೆಂಟು ವರ್ಷಗಳ ಕಾಲ ವೇದಿಕೆಗಳನ್ನೇರಿ ಭಾಷಣಗಳನ್ನು ಮಾಡಿದನಂತರವೂ ಜೀವನದ ಸಮಸ್ಯೆಗಳನ್ನು ಕುರಿತು ವ್ಯಕ್ತವಾಗಿ ನಿರೂಪಿಸಲು ನನಗೆ ಸಾಧ್ಯವಿದೆಯೇ ಎಂದು ಸಂದೇಹಪಡಲು ಪ್ರಾರಂಭಿಸಿದ್ದೇನೆ.) ಈ Dialectical Society — ಯವರ ಸಭೆಗಳಿಗೆ ಆಡೆಮ್ ಬೀದಿಯಲ್ಲಿದ್ದ Social Science Association — ಇದರ ಕಟ್ಟಡದ ಒಂದು ಕೋಣೆಯನ್ನು ಕೆಲವು ವರ್ಷಗಳ ಕಾಲ ಬಾಡಿಗೆ ತೆಗೆದುಕೊಂಡಿತ್ತು. ಆ ವರ್ಷದ ಫೆಬ್ರುವರಿ 17ರಂದು ಸದಸ್ಯರು ಎಂದಿನಂತೆ ಅಲ್ಲಿ ನೆರೆದಿರಲು ಆ ಕೋಣೆಯ ಬಾಗಿಲಿಗೆ ಬೀಗ ಹಾಕಲ್ಪಟ್ಟಿದ್ದುದನ್ನು ಕಂಡರು. ಪರಿಣಾಮವಾಗಿ ಅವರು ಆ ಮನೆಯ ಮೆಟ್ಟಲಿನಲ್ಲಿಯೇ ಇರುತ್ತ ಮಾತಾಡಿದರು, ಹೆದರಿಕೆಯಿಂದ ಕಂಗೆಟ್ಟಿದ್ದ Social Science ಸಂಸ್ಥೆಗೆ 'Ajax' ಇವರು ಅಲ್ಲಿ ಮಾತಾಡುವರೆಂಬು

ದನ್ನು ತಿಳಿದರು. ಅವರು ಅಲ್ಲಿ ಮಾತಾಡುವ ಮುಂಚಿತವಾಗಿಯೇ, ಆ ಮಾ
ತುಗಳು ವಿಪರೀತವಾದುದರಿಂದಲೂ ಅವರು ಭಾವಿಸಿಕೊಂಡು ಆ ಸಭಾ
ಕೊಠಡಿಗೆ ಹೋಗುವ ಪ್ರವೇಶದ್ವಾರವನ್ನು ಮುಚ್ಚಿದ್ದರು, ಕಡೆಗೆ
ಅಲ್ಲಿ ಸೇರಿದ್ದ ಜನರು ಚ್ಯಾರಿಂಗ್ ಕ್ರಾಸ್ ಹೋಟೆಲನಲ್ಲಿ ಆಶ್ರಯ
ಪಡೆದು ಅಲ್ಲಿ ಮತೀಯ ಅಂಧಾಭಿಮಾನದ ವಿಲಕ್ಷಣ ರೀತಿನೀತಿ
ಗಳನ್ನು ಕುರಿತಾಗಿ ವಿನೋದಪೂರ್ವಕವಾಗಿ ಮಾತಾಡುತ್ತ ಕುಳಿತೆವು.

ಫೆಬ್ರುವರಿ ತಿಂಗಳ ೧೦ನೇ ದಿನ ನಾನು ನನ್ನ ಮೊ
ದಲನೇ ಪ್ರಾಂತೀಯ ಭಾಷಣ ಪ್ರವಾಸವನ್ನು ಪ್ರಾರಂಭಿಸಿದೆನು.
ಬರ್ಕನ್‌ಹೆಡ್‌ನಲ್ಲಿ ಭಾಷಣವನ್ನು ಕೊಟ್ಟು ಆ ಸಾಯಂಕಾಲ
ವೇ ರಾತ್ರಿಯ ಟಪ್ಪಾಲು ಗಾಡಿಯಲ್ಲಿ ಗ್ಲಾಸ್‌ಗೋಗೆ ಹೋದೆ
ನು. ನಾಯಿಗಳ ಗೂಡಿನಂತೆ ಒಂದೊಂದು ಬಗೆಯ ಗೂಡುಗಳನ
ಜೋಡಿಸಲ್ಪಡುತ್ತಿದ್ದವು. ಹಲವು ಪ್ರಯಾಣಿಕರು ನಿಲ್ದಾಣದಲ್ಲಿ ಕಾ
ಯುತ್ತಾ ನಿಂತಿದ್ದುದು ಅಸಮಾಧಾನಕರವಾದುದಾಗಿತ್ತು.
ಬರ್ಕನ್‌ಹೆಡ್ಡಿನ ಕೆಲವು ಮಿತ್ರರು ನನಗೆ ಗಾಡಿಯಲ್ಲಿ ಸ್ಥಳವ
ನ್ನೊದಗಿಸಿಕೊಟ್ಟು ಆ ರೈಲುಗಾಡಿಯು ಚಲಿಸುವ ವರೆಗೂ
ಅಲ್ಲಿ ನನ್ನನ್ನು ಕಾದು ನಿಂತರು. ಕಡೆಗೆ ಪ್ರಯಾಣಕ್ಕೆ ಆರಂಭ
ವಾದ ಮೇಲೆ ಒಬ್ಬ ಕಾವಲುಗಾರನು ಪಕ್ಕದ ಗಾಡಿಯ ಕದ
ವನ್ನು ತೆರೆದು ಒಬ್ಬ ವ್ಯಕ್ತಿಯನ್ನು ಒಳಕ್ಕೆ ದಬ್ಬಲು ಅವನು
ಸಿಂಹದ ಆಸನದ ಮೇಲೆ ಮಲಗಿರಿಸಿದನು, ಅನಂತರ ಅ
ವನು ನಿಧಾನವಾಗಿ ಎದ್ದು ನಿಂತಾಗ ಮತ್ತು ಅವನ ಕೈಯ್ಯಿ
ಂದ ಜಾರಿ ನೆಲಕ್ಕೆ ಬಿದ್ದ ಉರುಳೆಯು ಅವನು ಅದರತ್ತ
ನೋಡುತ್ತಾ, ಇರಲು ಅವನು ನಿಶಾಸೇವನೆಯ ಅಮಲಿಗೆ
ಒಳಗಾದವನೆಂದು ತಿಳಿದು ಭೀತನಾದೆನು, ನಾನು ಇರುತ್ತಿದ್ದ
ಗಾಡಿಯು "ಎಕ್ಸ್‌ಪ್ರೆಸ್" ಆಗಿದ್ದು ಕೆಲಕಾಲ ದಾರಿಯಲ್ಲಿ ಎಲ್ಲೂ
ನಿಲ್ಲುವಂತಿದ್ದಿಲ್ಲವಾದುದರಿಂದ ನನ್ನ ಪರಿಸ್ಥಿತಿಯು ಭಹ
ಬಿಗಡಾಗಿತ್ತು. ತನ್ನೊಡನಿದ್ದ ಆ ವಿಚಿತ್ರ ಪ್ರಯಾಣಿಕನು
ಕೆಲಕಾಲ ನೆಲದಲ್ಲಿ ಹೊರಳಾಡುತ್ತಾ ಉರುಳಿ ಹೋದ ಅವನ ಸಾ
ಮಾನುಗಳನ್ನು ಹುಡುಕುತ್ತಿದ್ದು ಕಡೆಗೆ ನಿಧಾನವಾಗಿ ಪ್ರಜ್ಞೆಗೆ
ಬಂದಾಗ ನಾನು ಅಲ್ಲಿದ್ದೇನೆಂಬುದನ್ನು ತಿಳಿದನು. ಅವನು ನನ್ನ
ನ್ನು ಸ್ವಲ್ಪ ಹೊತ್ತು ನೋಡಿ ಅನಂತರ ಗಾಡಿಯ ಕದವನ್ನು
ಮುಚ್ಚಲು ಹೇಳಿದನು, ತುಂಬಾ ಕುಡಿದು ಅಮಲಿನಿಂದ ಮ
ತ್ತನಾಗಿ ಪ್ರಜ್ಞಾಹೀನನಾಗಿರುವವನೊಡನೆ ರಾತ್ರಿಯ "ಎಕ್ಸ್‌ಪ್ರೆಸ್"
ಗಾಡಿಯಲ್ಲಿ ಚರ್ಚ ವಿಷಯಗಳ ಮೇಲೆ ಮಾತಾಡುವುದು ಅನ
ವಶ್ಯಕವೆಂದು ಬಗೆದು ಅಂತೆಯೇ, ಹೆದರಿಕೆಯಿಂದ ಅವನು
ಹೇಳಿದ್ದಕ್ಕೆ ಒಪ್ಪಿದೆನು, ನಾನು ಆ ವರೆಗೆ ಅಧ್ಯಾ ಅದರನು

ತರವೂ ಆಪ್ತರ ಮನಸ್ಸಿಗೆ ಹಿಡಿಸಿದ್ದ ಸಂದರ್ಭವೇ ಇಲ್ಲ. ಉರಿಯುತ್ತಿದ್ದ ಕಣ್ಣುಗಳಿಂದ ಮತ್ತು ಜೋಲುವ ತುಟಿಗಳಿಂದ ಕೂಡಿ ಉತ್ತರ ಎದುರಾಗುತ್ತಿದ್ದ ಅವನನ್ನು ನಾನು ಈಗ ನೋಡುತ್ತಿರುವಂತೆ ಭಾಸವಾಗುತ್ತದೆ. ಆದರೆ ತೋರಿಕೆಗೆ ಸ್ವಲ್ಪವೂ ಹೆದರದಂತೆ ಇದ್ದು ಆ ಸಮಯದ ಸಂದರ್ಭದಲ್ಲಿ ಸಾಗಲು ಮತ್ತು ಅಂಥ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳಲು ನನ್ನ ಜೇಬಿಗೆ ಕೈ ಹಾಕಿ ಅಲ್ಲಿದ್ದ ಚಿಕ್ಕ ಚೂರಿಯನ್ನು ಅಂತೆಯೇ ಬಿಗಿ ಹಿಡಿದು ಸುಮ್ಮನೆ ಕುಳಿತಿದ್ದೆನು. ಅವನಾದರೋ ಮೂರ್ಖನಂತೆ ನನ್ನನ್ನು ಓರೆಗಣ್ಣಿಂದ ನೋಡುತ್ತಾ ನನ್ನೆಡೆಗೆ ಬರುತ್ತಿದ್ದಾಗ ದೊಡ್ಡ ಕರ್ಕಶ ಧ್ವನಿಯೊಂದು ಕಿವಿಗೆ ಕೇಳಿಸಿದುದರೊಡನೆ ರೈಲು ಗಾಡಿಯ ವೇಗವು ನಿಧಾನವಾಗಲು ಆರಂಭವಾಯಿತು.

"ಅದೇನು ಶಬ್ದ?" ಎಂಬುದಾಗಿ ಕುಳಿತಿದ್ದ ಆಸನದಿಂದ ಕೂಡಿದ್ದು ನನ್ನೆಡೆಗೆ ಇದ್ದ ಆ ಪ್ರಯಾಣಿಕನು ಬಿರುಸಾಗಿ ಕೇಳಿದನು.

"ಯಾರೋ ರೈಲುಗಾಡಿಯನ್ನು ನಿಲ್ಲಿಸಲಿಕ್ಕೆ ನೋಡುತ್ತಿದ್ದಾರೆ" ಎಂಬುದಾಗಿ ನನಗೆ ಹಿಡಿಸಬಹುದಾಗಿದ್ದ ಕಷ್ಟದಿಂದ ಹಾರಾಡಿಸಿಕೊಂಡು ಸಂತೋಷದಿಂದೊಡಗೂಡಿ ಮೆಲ್ಲಗೆ ಮತ್ತು ನಿಧಾನವಾಗಿ ಬೇಕಾದಷ್ಟೇ ಶಬ್ದಗಳಿಂದ ವ್ಯಕ್ತವಾಗಿ ಅವನಿಗೆ ಹೇಳಿದೆನು.

ಆ ವ್ಯಕ್ತಿಯು ಕೇವಲ ಹುಚ್ಚ ದೃಷ್ಟಿಯಂತೆ ಅಲ್ಲಿ ಕುಳಿತು ನನ್ನೆಡೆಗೆ ನೋಡುತ್ತಾ ಇರುವಲ್ಲಿ ರೈಲುಗಾಡಿಯು ನಿಲ್ದಾಣದತ್ತ ಸಾಗಿ ಜೋರಾದ ಚಿಕ್ಕಿಯ ಗುಳ್ಳೆಯನ್ನು ಹತ್ತಿದ ಕಾರಣದಿಂದ ನಿಂತಿತು. ನನ್ನ ಸ್ವಭಾವವು ಅದರೊಡನೆಯೇ ಮಾಯವಾಯಿತು. ಕ್ಷಣಾರ್ಧದಲ್ಲಿಯೇ ಕಿಟಕಿಯ ಬಳಿ ನಿಂತು ರೈಲು ಕಾವಲಿಗನನ್ನು ಕರೆದು ತಾನೊಬ್ಬ ಹೆಂಗಸು ಇರುವ ಆ ಗಾಡಿಯಲ್ಲಿ ಕುಳಿತು ಮತ್ತನಾಗಿರುವ ಹುಚ್ಚನು ಇದ್ದಾನೆಂಬುದನ್ನು ತಿಳಿಸಿದೆನು. ಆಗ ರೈಲು ಗಾಡಿಯ ನೌಕರನೊಬ್ಬನ ಸಹಾಯವಾದ ದಯೆಯಿಂದ ನನ್ನನ್ನು ಮತ್ತು ನನ್ನ ಸಾಮಾನುಗಳನ್ನು ಆ ಗಾಡಿಯಿಂದ ಇನ್ನೊಂದಕ್ಕೆ ವರ್ಗಾಯಿಸಿ ಅದಕ್ಕೆ ಬೀಗ ಹಾಕಲಾಯಿತಲ್ಲದೆ ದಾರಿಯಲ್ಲಿ ಪ್ರತಿಯೊಂದು ನಿಲ್ದಾಣದಲ್ಲೂ ರೈಲುಗಾಡಿ ನಿಂತಾಗ ಅವನು ಸ್ನೇಹಪೂರ್ವಕ ದೃಷ್ಟಿಯಿಂದ ನನ್ನನ್ನು ನೋಡುತ್ತಿದ್ದು ಕಡೆಗೆ ಸುರಕ್ಷಿತವಾಗಿ ನನ್ನನ್ನು ಗ್ಲಾಸ್ಗೋದಲ್ಲಿ ಬಿಟ್ಟನು.

ಗ್ಲಾಸ್ಗೋದಲ್ಲಿ ಮಿತಾಹಾರ ಮತ್ತು ಮಿತಪಾನದ ಹೋಟೆಲೊಂದರಲ್ಲಿ ನನಗಾಗಿ ಒಂದು ಕೋಣೆಯನ್ನು ಗೊತ್ತು ಮಾಡಿದ್ದರು. ಹೊಸ ನಗರದಲ್ಲಿ ಹೊಸ ತರಹದ ಹೋಟೆಲೊಂದರಲ್ಲಿ ನನಗೆ ಎಲ್ಲವೂ ಹೊಸತಾಗಿ ತೋರುತ್ತಿದ್ದವೆ

ನಾನೊಬ್ಬನೇ ಅಲ್ಲಿ ಇದ್ದುದರಿಂದ ಸುಮ್ಮನೆ ಕುಳಿತುಕೊಂಡೆ ಅಲ್ಲವೇ ಎಂದು ನನಗನ್ನಿಸುತ್ತದೆ. ನನ್ನ ಈ ಮನೋಭಾವಕ್ಕೆ ನಾನು ಹಿಮ ಪಕ್ಷಿನಾದರೂ ಅದು ನಾನಿದ್ದ ಸ್ಥಳದ ಸುತ್ತಮುತ್ತಲೂ ಬೂದು ವರ್ಣದಿಂದ ಮತ್ತು ಕೊಚ್ಚೆ ಕೊಳಕಿನಿಂದ ಕೂಡಿದ್ದುದರಿಂದ ಆಗಿದ್ದಿರಬಹುದು. ಈಗ ಪರಿಸ್ಥಿತಿಯು ಎಷ್ಟೋ ಸುಧಾರಿಸಿದೆ, ಆದರೆ ಆ ಕಾಲದಲ್ಲಿ ಇಂಥ ಮಿತಾಹಾರದ ಮತ್ತು ಮಿತದರದ ಹೋಟೆಲುಗಳು ಶುಚಿತ್ವದಿಂದ ಕೂಡಿರುತ್ತಿರಲಿಲ್ಲ. ನಿಧಾನಿಸಿದ ಮತ್ತು ಆಂತ ವಸ್ತುವನ್ನು ಅದಕ್ಕೆ ತಕ್ಕಂಥ ಸ್ಥಳದಲ್ಲಿ ಉಪಯೋಗಿಸದಿರುವುದು ತೀವ್ರವಾಗಿ ಒಂದಕ್ಕೊಂದು ಸೇರಿಯೇ ಇರುವವುಗಳಾಗಿವೆ. ಹಾಗಿದ್ದರೂ ನೀರನ್ನು ಕಾಯಿಸಲಿಕ್ಕೆ ಉಪಯೋಗಿಸದೆ ಇತರ ಕೆಲಸಕ್ಕೆ ಧಾರಾಳವಾಗಿ ಉಪಯೋಗಿಸುವಂಥ ಮಿತವ್ಯಯದ ಹೋಟೆಲಿಗೆ ನಾನು ಹೋದುದ್ದೇ ಆಕಸ್ಮಿಕವಾಗಿತ್ತು. ಗ್ಲಾಸ್ಗೋದಿಂದ ನಾನು ಬಹಳ ಕುತೂಹಲ ಹಾಗೂ ವಿಮರ್ಶಾಭಾವದ ಸಂಚಾರಿಯಾಗಿ ಉತ್ತರದ ಅಬರ್ಡೀನ್‌ಗೆ ಹೋದೆನು. ನಾನು ಸಹಾಂಗನೊಬ್ಬನನ್ನು ಹೊಕ್ಕಾಗ ಮಾನವನನ್ನು ಭೇದಿಸುವ ಯಾವೊಂದು ಶಬ್ದವೂ ಕೇಳಲಿಲ್ಲ. ಅದೇ ರೀತಿ ನಾನು ಮೋಡಿಕೆಯು ಸ್ಕೇರಿ ಜನರನ್ನು ಎದುರುಗೊಳ್ಳುವವರೆಗೂ ಏನೂ ಶಬ್ದವಿಲ್ಲ. ತುಂಬಾ ಜಾಣನಾದ ಸ್ಕಾಟ್ ಜನಾಂಗದವನು ತನ್ನ ಮುಂದೆ ನಿಂತ ಅಪರಿಚಿತ ವ್ಯಕ್ತಿಯನ್ನು ಉತ್ಸಾಹದಿಂದ ಆಹ್ವಾನಿಸಿದನು. ಮೊದಲು ಅವನು ಆ ವ್ಯಕ್ತಿಯ ಹೊಗೆಬಿಂಬವನ್ನು ನೋಡುವನು. ಸ್ತಬ್ಧತೆಯ ಮೌನದಿಂದ ಜನವು ನನ್ನ ಮಾತನ್ನು ಆಲಿಸಿದರು. ಆದರೆ ಅವರ ಮನಸ್ಸನ್ನು ನನಗೆ ಕದಡಿಸಲಾಗಲಿಲ್ಲ. ಬೀದಿಗಳ ಆ ನಗರದಲ್ಲಿ ಅವರು ಕಲ್ಲಿನಂತೆಯೇ ಇದ್ದರು. ನಾನು ನನ್ನ ತಲೆಯನ್ನೆತ್ತಿಗಿದು ಎತ್ತಿ ಆ ಕಲ್ಲುಗೋಡೆಯನ್ನು ಬಿರುಕಾಗಿಸಲಿಕ್ಕಾದರೂ ಅವರತ್ತ ಎಸೆದು ಬಿಡಲೇ ಎಂದು ನನಗನ್ನಿಸುತ್ತದೆ. ಈ ಮಾರು ಇಪ್ಪತ್ತು ನಿಮಿಷಗಳನಂತರ ಸುದೀರ್ಘ ಪ್ರಸ್ತಾಪಗೆ ನನ್ನ ಒಂದು ಮಾತು ಆ ಮತಾಂಧರಾದ ಜನದ ಒಮ್ಮತ ಮನಸ್ಸಿನ ಉದ್ಧಾರಕ್ಕೆ ಪಾತ್ರವಾಯಿತು. ಆಗ ನಾನು ಸಿಕ್ಕನೆ ಹಿಂದಕ್ಕೆ ಪ್ರತ್ಯುತ್ತರವನ್ನು ಗಳಿಸಿದೆನು. ಜನರಲ್ಲಿ ಸಹಕಾರ ಕರತಾಡನವಾಗಲು ಆ ಬೀದಿಗಳಲ್ಲಿನ ಸ್ತಬ್ಧತೆಯು ಹಾರಿ ಹೋಯಿತು. ಅದರನಂತರ ಅಬರ್ಡೀನ್ ನಗರದ ತಾತ್ಪರ್ಯದ ಬಗ್ಗೆ ನಾನು ಶೋಧಿಸುತ್ತಿರಲಿಲ್ಲ. ಹೀಗೂ ಅಲ್ಲಿಂದ ಆ ಹಳ್ಳಿಗಾಡಿನಲ್ಲಿ ಮೂರನೇ ದರ್ಜೆಯ ರೈಲುಗಾಡಿಯಲ್ಲಿ ಬಹಳ ದೀರ್ಘವೂ ಆಯಾಸಕರವೂ ಆದ ಪ್ರಯಾಣವನ್ನು ಬೆಳೆಸಿ

ಹಿಂದಕ್ಕೆ ಲಂಡನ್ನಿಗೆ ಬಂದೆನು, ನನ್ನ ವೈದಿಕ ಶ್ರಮವು ನಾನು ಅಲ್ಲಿ ಪಡೆದ ಮನಸ್ಸಂತೋಷದಿಂದ ಪರಿಹಾರವಾಯಿತಲ್ಲದೆ ಅದರಿಂದ ನಾನು ಜಗತ್ತಿಗೆ ಸಲ್ಲಿಸುತ್ತಿದ್ದ ಸೇವೆಯೇನೆಂಬುದನ್ನು ಕಂಡುಕೊಂಡೆನೆಂಬ ತೃಪ್ತಿಯು ನನ್ನ ಜೀವಕ್ಕೆ ಒಂದು ಹೊಸ ಹುಮ್ಮಸ್ಸನ್ನು ಒದಗಿಸಿತು.

ಲಂಡನ್ನಿನ ಸೇಂಟ್ ಲೂಕ್ಸನಲ್ಲಿ "ಓಲ್ಡ್ ಸ್ಟ್ರೀಟ್" ಬಳಿಯಿದ್ದ Hall of Science ಇದರ ವೇದಿಕೆಯನ್ನು ಮೊದಲ ಬಾರಿಗೆ ಏರಿದೆನು. ಸರ್ವಮತ ಶೂನ್ಯವಾದಿಗಳು (Secularists) ತಮ್ಮ ಮತಕ್ಕೆ ಒಪ್ಪುವ ಮತ್ತು ದುಡಿಯುವ ಯಾವನಿಗೂ ಕೊಡುವಂಥ ಉತ್ಸಾಹಪೂರ್ವಕ ಸ್ವಾಗತವನ್ನು ನನಗೆ ನೀಡಿದರು. 'ಜಯ ಮತ್ತು ಅಪಜಯಕ್ಕೆ ಸಂಕೇತರೂಪವಾಗಿದ್ದ ಆ ಸಭಾಂಗಣವು ನನ್ನ ಮನಸ್ಸಿಗೆ ಹಲವು ಕಹಿ ಹೋರಾಟಗಳ ನೆನಪನ್ನು ತರುತ್ತಿದ್ದಿತು. ಆದರೆ ಗೆಲುವೇ ಆಗಲಿ ಸೋಲೇ ಆಗಲಿ, ಅಲ್ಲಿಗೆ ನಾನು ಯಾವಾಗಲೂ ಆಹ್ವಾನಿಸಲ್ಪಡುತ್ತಿದ್ದೆನು. ಸರ್ವಮತ ಶೂನ್ಯವಾದಿಗಳು ಪ್ರೀತಿ ಮತ್ತು ಧೈರ್ಯದಿಂದ ನನ್ನ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ನನ್ನ ಅಲ್ಪ ಸೇವೆಗೆ ಅದರ ಸಹಸ್ರಪಾಲದಷ್ಟು ತಮ್ಮ ಕೃಪೆಯನ್ನು ತೋರಿಸಿದ್ದಾರೆ. ಅವನ ಜತೆಯಲ್ಲಿ ದುಡಿಯುತ್ತಿದ್ದಾಗ ಕೆಲವರು ನನಗೆ ಸ್ನೇಹಪೂರ್ವಕವಾಗಿಲ್ಲದಿದ್ದರೂ ನಾನು ಭೌತಿಕವಾದ ಮತ್ತು ನಾಸ್ತಿಕವಾದವನ್ನು ತ್ಯಜಿಸಿದ್ದರಿಂದ ದುಃಖಾವೇಶದಿಂದ ನನ್ನಲ್ಲಿ ದಯೆ ಮತ್ತು ನ್ಯಾಯಶೀಲತೆಯನ್ನು ತೋರಿಸಿದ್ದರು. ಸ್ವಾತಂತ್ರ್ಯದ ಉದ್ದೇಶವನ್ನಿಟ್ಟು ಜನತೆಯ ಸೇವೆಯನ್ನು ಮಾಡಲು ನನಗೆ ಅವಕಾಶವು ದೊರಕಿದುದು ಸುದೈವವಾಗಿದೆ. ನನ್ನ ಆರೋಗ್ಯದ ಮಟ್ಟಿಗೆ ನನಗೆ ಆ ಉಪನ್ಯಾಸ ಕಾರ್ಯಕ್ರಮವು ನನಗೆ ದೀರ್ಘಾಯುಷ್ಯವನ್ನೀಯುವಂತಾಗಿಸಿತು. ನನ್ನ ಶ್ವಾಸಕೋಶವು ದುರ್ಬಲವಾಗಿದ್ದುದರಿಂದ ಮತ್ತು ಯಾವಾಗಲೂ ವೇದಿಕೆಯನ್ನೇರಿ ಮಾತಾಡುತ್ತಿದ್ದ ಕಾರಣದಿಂದ ಅದಕ್ಕೇನಾದರೂ ಹಾನಿಯಾದೀತೋ ಎಂದು ಒಬ್ಬ ವೈದ್ಯನನ್ನು ಕೇಳಿದಾಗ, "ಅದು ನಿನ್ನನ್ನು ಬಹುಶಃ ಕೊಲ್ಲಬಹುದು, ಅಥವಾ ಗುಣಪಡಿಸಬಹುದು," ಎಂಬುದಾಗಿ ಹೇಳಿದನು. ಹೀಗೂ ನನ್ನ ಎದೆಯ ದೌರ್ಬಲ್ಯವು ಗುಣವಾಯಿತು. ನಾನು ನಿಶ್ಶಕ್ತಳಾಗಿ ಮತ್ತು ಕ್ಷಯದೇಹಿಯಾಗಿರುವ ಬದಲಾಗಿ ಸಬಲೆಯೂ ದೃಢಕಾಯಳೂ ಆಗಿ ಅಭಿವೃದ್ಧಿಗೊಂಡೆನು.

ಹದಿನೆಂಟು ವರ್ಷಗಳ ಕಾಲದ ನನ್ನ ಪ್ರಚಾರ ಭಾ

ಧರ್ಮಗಳನ್ನು ಕುರಿತು ಪ್ರತಿಯೊಂದು ವಿಷಯವನ್ನು ಇಲ್ಲಿ ಪ್ರಸ್ತಾಪಿಸುವುದು ಅಶಕ್ಯವಾದ ಕೆಲಸವಾದುದರಿಂದ ಈ ಅವಧಿಯ ಪೂರ್ತಿ ವರದಿಯನ್ನು ಸಂಕ್ಷೇಪವಾಗಿ ಹೇಳಲು ಕೆಲವು ಘಟನೆಗಳನ್ನು ಮಾತ್ರ ಆರಿಸಿಕೊಳ್ಳುವೆನು. ನಾವು ಅದೇನೋ ನಮ್ಮ ಸ್ವಾರ್ಥ ಲಾಭಕ್ಕೆ ಈ Free-thought ತತ್ವದ ಪ್ರಚಾರವನ್ನು ಕೈಕೊಂಡಿದ್ದೆಂದು ನನ್ನ ಮೇಲೆ ಮತ್ತು ಇತರರ ಮೇಲೆ ಆಗಿಂದಾಗ್ಗೆ ಮಾಡಿದ ಟೀಕೆಗಳಲ್ಲಿದ್ದ ಸತ್ಯತೆಗೆ ವಿಲಕ್ಷಣವಾದ ಭಿನ್ನತೆಯೂ ಇದ್ದಿತೆಂದೂ ಇಲ್ಲಿ ಹೇಳಲು ಬಯಸುತ್ತೇನೆ. ಒಂದು ಸಂದರ್ಭದಲ್ಲಿ ನಾನು ನಾರ್ತಂಬರ್ಲ್ಯಾಂಡ್ ಮತ್ತು ಡರ್ಹಾಮ್‌ನಲ್ಲಿ ಎಂಟು ದಿನಗಳಿದ್ದು ಇಪ್ಪತ್ತು ಭಾಷಣಗಳನ್ನು ಕೊಟ್ಟು ಒಟ್ಟಾಗಿ ಹನ್ನೊಂದು ಶಿಲ್ಲಿಂಗ್‌ಗಳ ನಷ್ಟವನ್ನು ಅನುಭವಿಸಿದೆನು. ಆದರೆ ನಾನು ಕಷ್ಟಪಟ್ಟು ಗಳಿಸಿದ ಕೀರ್ತಿಯಿಂದಲಾಗಿ ನನ್ನ ಆನಂತರದ ದಿನಗಳಲ್ಲಿ ನನಗೆ ಅಂಥಾ ಅನುಭವವು ಉಂಟಾದುದೇ ಇಲ್ಲ. ಹೇಗೂ ಪ್ರತಿಯೊಬ್ಬ ಸರ್ವಮತತ್ಯಾಗವಾದಿ (secularist)ಯೂ ಅವನು ಕಷ್ಟಪಟ್ಟು ತನ್ನ ಕೆಲಸವನ್ನು ಸಾಧಿಸುವಾಗ ಅಂಥ ಅನುಭವಗಳನ್ನು ಪಡೆಯದೇ ಇರನೆಂಬುದನ್ನು ಅವನೇ ಹೇಳುವನು. ನಿಜವಾಗಿಯೂ ಹೇಳುವುದಿದ್ದರೆ ಚಾರ್ಲ್ಸ್ ಬ್ರಾಡ್ಲಾ ಇವನಿಂದ ತೊಡಗಿ ನಾವು ಪ್ರತಿಯೊಬ್ಬರೂ ಇಷ್ಟೇ ಕಷ್ಟದಿಂದ ಬೇರೆ ಯಾವ ವಾದದ ಕ್ಷೇತ್ರದಲ್ಲಿ ದುಡಿದಿದ್ದರೆ ನಾವು ಈ ರೀತಿ ಸಾರ್ವಜನಿಕ ನಿಂದನೆಯನ್ನು ಪಡೆಯುವ ಬದಲಾಗಿ ಜನರ ಪ್ರಶಂಸೆಯನ್ನು ನಾವು ಸಾಧಿಸಬಹುದಾಗಿದ್ದ ಕೆಲಸದಲ್ಲಿ ಹೆಚ್ಚಿನ ಕುಶಲತೆಯನ್ನು ನಿರಾಯಾಸವಾಗಿ ಹೊಂದಿ ಸಂತೃಪ್ತರಾಗಿರುತ್ತಿದ್ದೆವು. ನನ್ನ ಪ್ರಾರಂಭದ ಹಲವು ಭಾಷಣಗಳು ನಾರ್ತಂಬರ್ಲ್ಯಾಂಡು ಮತ್ತು ಡರ್ಹಾಮ್‌ನಲ್ಲಿ ಕೊಡಲಾದುವು. ಅಲ್ಲಿದ್ದ ಗಣಿ ಕೆಲಸದವರು ನ್ಯಾಯವಾಗಿ ಚತುರರೂ ಕಠೋರ ಪ್ರವೃತ್ತಿಯವರೂ ಆಗಿದ್ದರು, ಆದರೆ ಅವರು ವಿಶ್ವಾಸವನ್ನಿಟ್ಟವರನ್ನು ಮನಃಪೂರ್ವಕವಾಗಿ ಸನ್ಮಾನಿಸುವರು, ಸಿಗ್ಗಲ್ ಮತ್ತು ಬಿಶಪ್ ಆಕ್ಲೆಂಡ್‌ನಲ್ಲಿ ನಾನು ಅವರ ಕುಟೀರಗಳಲ್ಲಿ ತಂಗಿದ್ದೇನೆ, ಸಿಗ್ಗಲ್‌ನಲ್ಲಿ ಒಮ್ಮೆ ಒಂದು ಸಾಯಂಕಾಲ ಭಾಷಣವಾದ ನಂತರ ನನ್ನನ್ನು ಆಮಂತ್ರಿಸಿದ್ದ ಒಬ್ಬ ಗಣಿ ಕೆಲಸದವನು ತನ್ನ ಹತ್ತೊ ಹನ್ನೆರಡೋ ಜನ ಸಹೋದ್ಯೋಗಿಗಳನ್ನು ನನ್ನ ಗೌರವಾರ್ಥವಾಗಿ ನಡೆಸಿದ ಊಟಕ್ಕೆ ಕರೆಸಿದುದನ್ನು ನಾನು ಚೆನ್ನಾಗಿ ನೆನೆಯುತ್ತಿದ್ದೇನೆ. ರಾಜಕೀಯದಿಂದ ಹಿಡಿದು ಮಾತುಕತೆಗಳು ಪ್ರಾರಂಭವಾದಾಗ

ನನ್ನ ಜತೆಗಾರರಿಗೆ ಇಂಗ್ಲೆಂಡಿನ ರಾಜಕೀಯ ಸಮಾಚಾರವು ತುಂಬಾ ತಿಳಿದಿದ್ದುದನ್ನು ಅರಿತುಕೊಂಡೆನು. ರಾಜಕೀಯ ನೀತಿಯ ಬಗ್ಗೆ ಅವರು ಸೂಕ್ಷ್ಮ ಪರಿಶೀಲನೆ ನಡೆಸಬಲ್ಲರಾದುದರಿಂದ ನಾವು ಸಮಾಜದ ಮೇಲ್ಜನಸ್ತರದ ಮೇಳಕ್ಕೆ ಹೋಲಿಕೆಯಾಗುವ ಜನರಿಗಿಂತಲೂ ಸ್ವಪರರೊಡನೆ ಮಾತಾಡುವುದರಲ್ಲಿ ನಿಸ್ವಾರಸ್ಯವಿತ್ತು. ಸಭ್ಯರೆಂದೆನಿಸಿದವರಿಂದ ದೂರವಿರಿಸಲ್ಪಟ್ಟ ಅವಿದ್ಯಾವಂತ ವರ್ಗಕ್ಕೆ ಅವರು ಸೇರಿದ್ದರು, ಅವರಿಗೆ ಮತ ಕೊಡುವ ಅಧಿಕಾರವೂ ಆಗ ಇರಲಿಲ್ಲ. ಹಾಗಿದ್ದರೂ ಅವರು ಸಮಾಜದ ಮೇಲ್ವರ್ಗೀಯ ಜನಕ್ಕಿಂತ ಹೆಚ್ಚಾಗಿ ರಾಜಕೀಯ ಜ್ಞಾನದಿಂದ ಕೂಡಿದ್ದರು; ಮತ್ತು ಅದಕ್ಕಿಂತ ಹೆಚ್ಚಾಗಿ ನಾಗರಿಕನ ಕರ್ತವ್ಯವನ್ನು ದಕ್ಷತೆಯಿಂದ ಪಾಲಿಸಲು ಯೋಗ್ಯರಾಗಿದ್ದರು. ಓವೆನ್ ರೈಲು ಗಾಡಿಯು ಹೋಗುತ್ತಿದ್ದ ಮತ್ತು ಜಿಲ್ಲೆಯಿಂದ ದೂರವಿದ್ದ ಒಂದು ಹಳ್ಳಿಗೆ ಭಾಷಣಕ್ಕೆಂದು ಓರ್ವ ಮಾಂಸವ್ಯಾಪಾರಿಯ ಗಾಡಿಯಲ್ಲಿ ಕುಳಿತುಕೊಂಡು ಹತ್ತು ಮೈಲು ದೂರ ಹೋದುದು ನನಗೆ ಚೆನ್ನಾಗಿ ನೆನಪಿದೆ. ಹಾಗೆ ಹೋಗುವಾಗ ಅವರು ದಿನ್ನೆಗಳ ಕಲ್ಲು ರಸ್ತೆಯಲ್ಲಿ ಗಾಡಿಯು ಎತ್ತರಕ್ಕೆ ಸಾಗಲು ನನ್ನ ದೇಹದ ಮೂಳೆಗಳೆಲ್ಲವೂ ಪುಡಿಯಾದಂತಾಯಿತಲ್ಲದೆ ಆ ಮೇಲೆ ಭಾಷಣಕ್ಕೆ ನಿಂತಾಗ ಕಲ್ಲುಗಳಿಂದ ತುಂಬಿಸಲ್ಪಟ್ಟ ಚೀಲವೊಂದು ವೇದಿಕೆಯಿಂದ ದೊಪ್ಪನೆ ಬಿದ್ದ ಹಾಗೆ ಬೀಳುವೆನೋ ಎಂಬಂತೆ ತೋರುತ್ತ. ಜನವಾದರೋ ವಿನೀತ ಗುಣದಿಂದ ಕೂಡಿದ್ದು ಗಸಿ ಕೇಳಿಸಿದವರಾಗಿ ನನಗೆ ತುಂಬಾ ದಯೆಯನ್ನು ತೋರಿಸಿದರು, ನನ್ನ ಸೌಕರ್ಯದ ಬಗ್ಗೆ ಎಚ್ಚರಿಕೆ ವಹಿಸಿದರು, ಆ ಹೆಂಗಸರು ತಾಯ್ತನದ ಮಮತೆಯಿಂದ ಕೂಡಿದ್ದರು, ಆಹಾ, ನನ್ನನ್ನು ತಿಳಿಯದೇ ಇದ್ದ ನನ್ನ ವಿರೋಧಿಗಳು ನನಗೆ ಹಲವು ಬಾರಿ ಕ್ರೂರಿಗಳಾಗಿ ನನ್ನ ಮೇಲೆ ಅಪಪ್ರಚಾರವನ್ನು ಕೈಕೊಂಡರು, ದೇಶದ ಗಂಡಸರು ಮತ್ತು ಹೆಂಗಸರು ನನ್ನಲ್ಲಿ ಇಟ್ಟಿದ್ದ ಪ್ರೀತಿ ಮತ್ತು ಗೌರವವು ನನ್ನ ವಿರೋಧಿಗಳ ದ್ವೇಷಾಸೂಯೆಗಳಿಗೆ ಮಿಗಿಲಾಗಿದ್ದು ಹಲವು ಸರ್ತಿ ಅವು ನನ್ನ ಕಂಗೆಟ್ಟ ಮನಸ್ಸನ್ನೂ ನೊಂದ ಹೃದಯವನ್ನು ತಣಿಸಲು ವಿಶೇಷ ಸಹಾಯಕವಾದುವು.

ಕ್ರಿ.ಶ. 1875 ರ ಜೂನ್ ತಿಂಗಳಲ್ಲಿ ಅಸ್ಟ್ವರ್‌ನಲ್ಲಿ ಭಾಷಣವನ್ನು ಕೊಡುತ್ತಿದ್ದಾಗ ನನಗೆ ತುಂಬಾ ಮನೋವೇದನೆಗೆ ಕಾರಣವಾದ ಕಾಲ್ಪನಿಕ ವಿಚಾರವೊಂದನ್ನು ಹೇಳಲು ಅಂಜುತ್ತಿದ್ದೇನೆ. ನನ್ನ ಭಾಷಣವು ಮುಗಿದ ನಂತರ ನಡೆದ ವಾಗ್ವಾದಗಳ ಕಡೆಯಲ್ಲಿ ಕೋಪಗೊಂಡ ಕ್ರೈಸ್ತ ಪಂಥದವನೊ

ವರ್ನನು ಅವನಿಗೆ ಆಧಾರವಾಗಿ ಕಂಡ The Element of
Social Science ಎಂಬ ಪುಸ್ತಕವನ್ನು ಪ್ರಕಟಿಸಲು ನಾ
ನು ಜವಾಬ್ದಾರನೆಂಬುದನ್ನು ಸಾರಿದಲ್ಲದೆ ಅದನ್ನು ಸಮರ್ಥ
ನುತ ಪ್ರತಿನಿಧಿಗಳ ಬೈಬಲ್ ಎಂಬುದಾಗಿ ನಿರ್ಲಕ್ಷ್ಯದಿಂದ
ಹೇಳಿದನು, ಆದರೆ ನಾನು ಆ ಪುಸ್ತಕದ ವಿಷಯವಾಗಿ ಕ್ಷೀ
ಣಿಯಾಗೇ ಇರಲಿಲ್ಲ. ಅದು ವಿವಾಹವನ್ನು ರದ್ದುಗೊಳಿಸುವ
ಅಭಿಪ್ರಾಯಕ್ಕೆ ಒಪ್ಪಿದೆಯೆಂದೂ ಚಾರ್ಲ್ಸ್ ಬ್ರಾಡ್ಲೆಯೂ
ಅದಕ್ಕೆ ಸಮ್ಮತಿಸಿರುವನೆಂದೂ ಹೇಳುವಾಗ ಕೂಡಲೇ ಅವನ
ಮಾತುಗಳನ್ನು ಪ್ರತಿಭಟಿಸಿದೆನು. ಬ್ರಾಡ್ಲೆಯನ್ನು ನಾನು
ಚೆನ್ನಾಗಿ ತಿಳಿದಿದ್ದೇನೆಂದೂ, ವಿವಾಹದ ವಿಷಯದಲ್ಲಿ ಅವನು
ತೀವ್ರಗಾಮಿಯಾಗಿರುವುದರ ಬದಲಾಗಿ ಪರಂಪರೆಯನ್ನೇ
ಮಾನ್ಯತೆಯಿಂದ ಕಂಡಿದ್ದಾನೆಂದೂ ಹೇಳಿದೆನು. ಆ ಕ್ರೈಸ್ತ
ವಿರೋಧಿಯು Free love ಸಿದ್ಧಾಂತಗಳನ್ನು ಸಹ ತುಚ್ಛೀಕ
ರಿಸಿದನಲ್ಲದೆ ಅನೇಕ ವರ್ಷಗಳಿಂದ ಈ ಹೊಸ ಅಭಿಪ್ರಾ
ಯಕ್ಕೆ ಸಮ್ಮತಿಸದೆ ಅದರ ಬಗೆ ಕೀಳುಮಾತುಗಳನ್ನು ಬಳಸು
ವ ಶ್ರೀಮತಿ ಜೋಸೆಫೈನ್ ಬಟ್ಲರ್ ಇವಳ ವಾದಗಳನ್ನು
ಅವನು ಸಮರ್ಥಿಸಿದ್ದನು, ವಾಗ್ವಾದದನಂತರ ನಾನು ಲಂ
ಡನ್ನಿಗೆ ಹಿಂದಿರುಗಿದೆನು, ಅವನು ಹೇಳಿದ ಪುಸ್ತಕದ
ವಿಷಯವಾಗಿ ಸ್ವಾಭಾವಿಕವಾಗಿ ನಾನು ತಿಳಿಯುತ್ಸುಕಳಾದ
ರ ನಿಜಸ್ಥಿತಿಯನ್ನರಿಯಲು ಪ್ರಯತ್ನಿಸಿದಾಗ್ಯೆ ಅದನ್ನು
ಒಬ್ಬ ವೈದ್ಯಶಾಸ್ತ್ರಜ್ಞನು ಬರೆದನೆಂದೂ ಅದರ
ಪ್ರತಿಯನ್ನು National Reformer ಪತ್ರಿಕೆಗೆ ವಿಮ
ರ್ಶೆಗಾಗಿ ಕಳುಹಿಸಲಾಗಿತ್ತೆಂದೂ ಹಾಗೆ ಇತರ ಪತ್ರಿಕೆಗ
ಳಿಗೂ ಕಳುಹಿಸಿದ್ದರೆಂದೂ ತಿಳಿದೆನು, ಅದು ಮೂರು
ಭಾಗಗಳಿಂದ ಕೂಡಿತ್ತು, ಮೊದಲ ಭಾಗವು ವೈದ್ಯಶಾಸ್ತ್ರ
ಕುರಿತಾ ಅದನ್ನೇ ಸಾಧಾರಣವಾಗಿ Free Love ಎಂದು ಕರೆ
ಯುವರು, ಎರಡನೇ ಭಾಗವು ಪೂರ್ತಿ ವೈದ್ಯಕೀಯ ಶಾಸ್ತ್ರ
ಶಿಕ್ಷಣ ಇತ್ಯಾದಿ; ಮೂರನೇ ಭಾಗವು ರೆವರೆಂಡ್ ಮಾಲ್ತಸ್
ಇವನ ಮತ್ತು ಜಾನ್ ಸ್ಟುವರ್ಟ್ ಮಿಲ್ ಇವನು ಪ್ರತಿಪಾ
ದಿಸಿದ ಆಧಾರದ ಮೇಲೆ ಜನಸಂಖ್ಯೆಯ ನಿಯಮಾವಳಿ
ಗಳನ್ನು ಕುರಿತಾಗಿದ್ದಿತು, ತಮ್ಮ ಉತ್ಪತ್ತಿ ಎಷ್ಟೋ ಅ
ದಕ್ಕೆ ಸರಿಯಾಗಿ ಸಂಸಾರವನ್ನು ಬೆಳೆಸಿಕೊಳ್ಳುವುದು ವಿ
ವಾಹಿತರ ಕರ್ತವ್ಯವೆಂಬುದನ್ನು ಅವರು ಸ್ಪಷ್ಟ ಹೇಳಿದ್ದ
ರು. ಆ ಪುಸ್ತಕವನ್ನು ವಿಮರ್ಶಿಸುತ್ತಾ, ಮತ್ತು ಅದನ್ನು

ಹೆಚ್ಚುತ್ತಿರುವ ಜನಸಂಖ್ಯೆಯ ಬಗ್ಗೆ ಶಾಸ್ತ್ರೀಯವಾಗಿ ಅಭ್ಯಸಿಸು ವವರಿಗೆ ಶಿಫಾರಸ್ಸು ಮಾಡುತ್ತಾ, ಬ್ರ್ಯಾಡ್ಲೋಯು ಅದೊಂದು ದ್ವೇಷ ದಿಂದ ಮತ್ತು ಕೆಟ್ಟ ಉದ್ದೇಶದಿಂದ ಬರೆಯಲ್ಪಟ್ಟ ಸತ್ಯವೂ ಸುಂದರವೂ ಆದ ವಿಚಾರಗಳನ್ನೊಳಗೊಂಡ ಗ್ರಂಥವೆಂದೂ ಹೇ ಳಿದ್ದನು. ಅವನ ವಿರೋಧಿಗಳು ಈ ಅಭಿಪ್ರಾಯವನ್ನೆತ್ತಿಕೊಂ ಡು ವೈವಾಹಿಕ ಬಂಧನವು ಶಾಶ್ವತವಲ್ಲವೆಂದು ಹೇಳಿದ ಗ್ರಂಥಕರ್ತನ ಅಭಿಪ್ರಾಯವನ್ನೇ ಅವನ ಮೇಲೆ ಆರೋ ಪಿಸಿದರು, ಬ್ರ್ಯಾಡ್ಲೋಯು ಅದು ಹಾಗಲ್ಲವೆಂದು ಹೇಳಿದರೂ ಅವರು ಆ ಗ್ರಂಥದಲ್ಲಿ ವಿವಾಹಕ್ಕೆ ವಿರೋಧವಾಗಿದ್ದ ಹೇಳಿ ಕೆಯನ್ನೆಲ್ಲ ಅವನದೆಂದೇ ಹೇಳುತ್ತಲಿದ್ದರು. ಹೇಗೂ ಇಂ ತಾ ಅಪಪ್ರಚಾರದ ಪದ್ಧತಿಯನ್ನು ನಂಬಿಸುವುದು ಕಷ್ಟ ವಾದರೂ ಅವನ ಮೇಲೆ ಅವನ ಜೀವಮಾನವಿಡೀ ಕ್ರೂರರೀತಿ ಯಾಗಿ ಅಪಪ್ರಚಾರವನ್ನು ಅವನಿಗಿಂತ ಹೀನವಾಗಿದ್ದ ಎಷ್ಟೋ ಹೀನತನದಿಂದ ಬಾಳ್ವೆಯನ್ನು ನಡೆಸುತ್ತಿದ್ದವರೇ ಮಾಡಿ ದರು. ಬ್ರ್ಯಾಡ್ಲೋಯ ಸ್ವಂತ ಬರವಣಿಗೆಯಲ್ಲಿ ಅವರಿಗೆ ಏನೂ ಸಿಕ್ಕದಿದ್ದಾಗ ಅವನನ್ನು ಸ್ವತಃ ತಿಳಿಯದಿದ್ದವರು ಸಹ ಅವನನ್ನು ನಿಂದಿಸುವ ಸಲುವಾಗಿ ಆ ಪುಸ್ತಕದಲ್ಲಿ ಹೇಳಿದನ್ನು ಎತ್ತಿಕೊಂಡರು. ಆದರೆ ಅವನ ವೈರಿಗಳು ಅವ ನು ವಿವಾಹದ ಬಗ್ಗೆ ಹೇಳಿದ್ದಕ್ಕೆ ಆಕ್ಷೇಪಿಸಲಿಲ್ಲ; ನಾನು ಹಿಂ ದೆಯೇ ಹೇಳಿದಂತೆ ಅವನ ಅಭಿಪ್ರಾಯವು ಆ ವಿಷಯದ ಲ್ಲಿ ತತ್ವಬದ್ಧವಾಗಿಯೇ ಇತ್ತು; ಬದಲಾಗಿ ಅವನ ತೀವ್ರಗಾ ಮಿ ರಾಜಕೀಯ ಮತ್ತು ನಾಸ್ತಿಕತೆಯ ಬಗ್ಗೆ ಹೆದರಿ ಆ ಕ್ಷೇಪಿಸಿದರು, ರಾಜಕೀಯವಾಗಿ ಬ್ರ್ಯಾಡ್ಲೋಯ ಪ್ರತಿಷ್ಠೆಯನ್ನು ಕಡಿಮೆ ಮಾಡಲು ಸಾಮಾಜಿಕವಾಗಿ ಅವನನ್ನು ನಿಂದಿಸಿದ ರು. ಅದಕ್ಕೆ ದಾಂಪತ್ಯ ಜೀವನ ಕ್ರಮವನ್ನು ತೆಗೆದುಹಾಕ ಬೇಕೆಂದು ಬೇರಾರೋ ಹೇಳಿದ್ದನ್ನು ಅವನು ಹೇಳಿದಂ ದು ಆರೋಪಿಸಿ ಆ ರೀತಿಯಾಗಿ ಅವನಿಗೆ ಚುಚ್ಚಿದರೆ ನೋ ವಾಗುವುದೆಂದು ತಿಳಿದ ಜನರು ಆ ರೀತಿ ಅಪಪ್ರಚಾರ ನಡೆಸಿದರು, ಅವನ ಅತೀವ ತಾಪತ್ರಯಗಳಿಗೆ ಮೂಲ ಇದಾಗಿತ್ತು. Malthu- ism ಸಿದ್ಧಾಂತವನ್ನು ಅವನು ಎತ್ತಿಹಿಡಿಯುತ್ತಿದ್ದುದು ಬಹು ಬೇಗ ನೆ ಅವನನ್ನು ತುಂಬಾ ಗೊಂದಲಕ್ಕೀಡಾಗಿಸಿತ್ತು. ನನ್ನ ಮೇ ಲೂ ಇದೇ ತರಹದ ಟೀಕೆ ಇತ್ತು; ಅದೃಷ್ಟವಶಾತ್ ನಾನು ಮೆಚ್ಚಿದೇ ಇದ್ದ ವಿಷಯಗಳನ್ನೇ ಒಳ್ಳೆಯದೆಂದು ಪ್ರಚಾರ ಮಾಡುತ್ತಿದ್ದೇನೆಂಬುದಾಗಿ ಜನರು ನನ್ನನ್ನೂ ತಾತ್ಸಾರಭಾವ ದಿಂದ ಕಾಣುತ್ತಿದ್ದುದನ್ನು ನಾನು ತಿಳಿದುಕೊಂಡೆನು.

ನಾನು ಚಾರ್ಲ್ಸ್ ಬ್ರಾಡ್ಲೆಯನ್ನು ಪ್ರಶಂಸಿಸಿ ಈ ಗ್ರಂಥದಲ್ಲಿ ಬರೆದುದಕ್ಕಿಂತ ಎಷ್ಟೋ ಹೆಚ್ಚು ಅಭಿಮಾನಪೂರ್ವಕವಾದ ನುಡಿಗಳಿಂದ ಜನರ ನಿಂದನೆಗೆ ಈ ರೀತಿ ಒಳಗಾಗದ ಇತರ ಗ್ರಂಥಕರ್ತರು ಪ್ರಶಂಸಿಸಿದ್ದಾರೆಂಬುದಾಗಿಯೂ ಇಲ್ಲಿ ಹೇಳಬಯಸುತ್ತೇನೆ.

ಜಾರ್ಜ್ ಜೇಕಬ್ ಹೋಲಿಯೋಕ್ ಇವನ ಸಂಪಾದಕತ್ವದಲ್ಲಿದ್ದ "Reasoner" ಎಂಬ ಪತ್ರಿಕೆಯಲ್ಲಿ National Reformer ಪತ್ರಿಕೆಯಲ್ಲಿ ಇದ್ದುದಕ್ಕಿಂತಲೂ ಹಾರ್ದಿಕವಾದ ಪ್ರಶಂಸೆಯು ಬ್ರಾಡ್ಲೆಯನ್ನು ಕುರಿತಾಗಿ ಇದ್ದುದನ್ನು ನೋಡಿದ್ದೇನೆ. ಆ ವಿಮರ್ಶೆಯಲ್ಲಿ ಈ ಕೆಳಗಿನ ಒಂದು ವಾಕ್ಯಖಂಡವಿದೆ:—

"ಒಂದು ರೀತಿಯಲ್ಲಿ ಹೇಳುವುದಿದ್ದರೆ ಈ ತರಹದ ಪುಸ್ತಕಗಳು ಹಾನಿಕರವಾಗಿವೆ; ಆದರೆ (ಆ ಹಾನಿ) ದೌರ್ಬಲ್ಯವೂ ಅಪರಾಧವೆನಿಸುವ ಜಾತಿಯದ್ದೂ ಆಗುವುದಿಲ್ಲ. ಈ ಬಗೆಯ ಅಪರಾಧವು ಕಂಡುಬರುವುದಿಲ್ಲವಾದುದು, ವಿಮರ್ಶೆಗೊಳಗಾದ ಈ ಗ್ರಂಥವು ಅದು ಪ್ರತಿಪಾದಿಸುತ್ತಿರುವ ವಾದಾಸ್ಪದ ವಿಷಯಗಳಿಗಿಂತ ಕೆಟ್ಟದ್ದೇನೂ ಅಲ್ಲ. ಆದರೂ ಒಂದು ರೀತಿಯಲ್ಲಿ ಹೇಳುವುದಿದ್ದರೆ ಈ ಗ್ರಂಥವನ್ನು ಪ್ರಚಾರಪಡಿಸುವುದು ದಯೆಯೂ ಪ್ರಕಟಿಸುವುದು ಧೈರ್ಯವೂ ಆಗಿದೆ."

"Examiner" ಪತ್ರಿಕೆಯು ಅದೇ ಗ್ರಂಥವನ್ನು ವಿಮರ್ಶಿಸುತ್ತಾ ಈ ರೀತಿ ಹೇಳಿತು: "ಪ್ರಚಲಿತವಿರುವ ನಿಷೇಧನೀತಿಯ ರೂಢಿ ರೀತಿಯನ್ನು ಸಂಪೂರ್ಣವಾಗಿ, ಸತ್ಯವಾಗಿ ಮತ್ತು ವೈಜ್ಞಾನಿಕವಾಗಿ ಪ್ರತಿಪಾದಿಸಿದ ಗ್ರಂಥವು ಇದೊಂದೇ ಎಂದು ನಾನು ನಂಬುತ್ತೇನೆ. ಮಾನವ ಕುಲವು ಬಡತನವನ್ನು ಮತ್ತು ಅದಕ್ಕೆ ಸಂಬಂಧಿಸಿದ ಹಲವು ಪಾಪಕಾರ್ಯಗಳನ್ನು ಜಯಿಸುವುದೆಂತು, ಎಂಬುದಾಗಿಯೂ ನಿಶ್ಚಯ ಪರಿಹಾರವೇನೆಂಬುದಾಗಿಯೂ ಕಂಡುಹಿಡಿಯಲು ಈ ಬರವಣಿಗೆಯು ದಿಟ್ಟತನದಿಂದ ಪ್ರಯತ್ನಿಸಿದೆ."

"The British Journal of Homeopak" ಎಂಬ ಪತ್ರಿಕೆಯು ಈ ರೀತಿ ಬರೆಯಿತು: "ಈ ಗ್ರಂಥವು ಈ ಪತ್ರಿಕೆಯ ಕಾರ್ಯಕ್ಷೇತ್ರದೊಳಗೆ ಬಾರದೇ ಇದ್ದರೂ ನಾವು ನೋಡಿದ ಗ್ರಂಥಗಳ ಪೈಕಿ ಮತ್ತು ಇನ್ನೂ ಹಲವು ವಿಧಗಳಲ್ಲಿ ಇದು ನಿಸ್ಸಂದೇಹವಾಗಿಯೂ ಮಹತ್ವವಾದುದಾಗಿದೆಯೆಂದು ಹೇಳಬೇಕಾದ್ದಿಲ್ಲ. ಮತ ಧರ್ಮ ಮತ್ತು ನೈತಿಕ ಮನೋಭಾವಗಳ ವಿಷಯವಾಗಿ ಗ್ರಂಥಕರ್ತನ ಅಭಿಪ್ರಾಯಗಳನ್ನು ನಾವು ಒಪ್ಪದಿದ್ದರೂ ಮತ್ತು ಪರಿಸ್ಥಿತಿಯನ್ನು ಸುಧಾರಿಸಲು ಅವನು ಹೇಳಿದ ಕ್ರಮವು ಸಮಾಜವನ್ನು ಹೊಸದಾಗಿ ಕಟ್ಟುವ ಬದ

ಲಾಗಿ, ಇದರ ನಾಶಕ್ಕೆ ಅವರಾಗ್ರಹಿಯು ಬಹುದಾದರೂ ಗ್ರಂಥಕರ್ತನ ಉದ್ದೇಶ್ಯದಲ್ಲಿರುವ ಉಪಕಾರಗಳು ಮತ್ತು ಮಾನವ ಪ್ರೇಮವನ್ನು ನಾವು ಒಪ್ಪುತ್ತೇವೆ. ಈ ಗ್ರಂಥದ ಪರಿಮಿತಿಯು ರಾಜಕೀಯವಾಗಿ ಆರ್ಥಿಕ ಸ್ಥಿತಿಯ ವಿವರಣೆಯೊಳಗಡಗಿದೆಯಲ್ಲದೆ ಹೆಚ್ಚೇನೂ ಇಲ್ಲ!"

ಎರ್ನೆಸ್ಟ್ ಜೋನ್ಸ್ ಮತ್ತು ಇತರರು ಇದೇ ರೀತಿಯಾಗಿ ಉತ್ತಮವಾದ ವಿಮರ್ಶೆಗಳನ್ನು ಆ ಗ್ರಂಥದ ಮೇಲೆ ಬರೆದಿದ್ದಾರೆ. ಆದರೆ ಅವರೆಲ್ಲರ ಪೈಕಿ ಚಾರ್ಲ್ಸ್ ಬ್ರ್ಯಾಡ್ಲಾ ಇವನೊಬ್ಬನೇ ಜನರ ಟೀಕೆಗೆ ಒಳಗಾದನು; ಅಲ್ಲದೆ ಅವನು ಅನಾಮಧೇಯ ಗ್ರಂಥಕರ್ತನೆಂಬ ವಿಚಿತ್ರ ಅಭಿಪ್ರಾಯಕ್ಕೂ ಒಳಗಾದನು!

ಆ ದಿವಸಗಳಲ್ಲಿ ನನ್ನ ಭಾಷಣ ಕಾರ್ಯಕ್ರಮ ತುಂಬ ಬಿಗಿಯಾಗಿತ್ತು. 1875ರ ಜೂನ್‌ನಲ್ಲಿ ಡೆವನ್ ಮತ್ತು ಲಂಕಾಷೈರಿನಲ್ಲಿ ನಡೆದ ಭಾಷಣಗಳಲ್ಲಿ ಓರ್ವ ನಾಸ್ತಿಕವಾದಿಯಾದ ಉಪನ್ಯಾಸಕಿಯೊಡನೆ ಕಲ್ಲುಗಳನ್ನೆಸೆಯುತ್ತಾ ವಾದವೆಬ್ಬಿಸಿದರು, 1876ರ ಮಾರ್ಚ್ ತಿಂಗಳಲ್ಲಿ ಸ್ವಾನ್ಸೀಯಲ್ಲಿ ಇದೇ ರೀತಿಯಾದ ಗೊಂದಲದ ಭಯವು ಇದ್ದುದರಿಂದ ಸಭಾಂಗಣದ ಮಾಲೀಕನಿಗೆ ಇದರ ಸುರಕ್ಷಿತತೆಯ ಬಗ್ಗೆ ಸಭೆಯ ವ್ಯವಸ್ಥಾಪಕರು ಜಾಮೀನು ನೀಡಬೇಕಾಯಿತಲ್ಲದೆ ಸ್ಥಳೀಯ ಮಿತ್ರರಾರಿಗೂ ನಾನು ಭಾಷಣವನ್ನು ಕೊಡಲಿದ್ದ ಸಭೆಗೆ ಅಧ್ಯಕ್ಷರಾಗಿರಲು ಧೈರ್ಯವಾಗಲಿಲ್ಲ. 1876ರ ಸೆಪ್ಟೆಂಬರ್‌ನಲ್ಲಿ ಹಾಲ್ಯಾಂಡ್‌ನಲ್ಲಿ ಓರ್ವ Primitive Methodist ಆಗಿದ್ದ ಹೋಟೆಲ್‌ಕೀಪರ್ ಮತ್ತು ಇವರು ಪ್ರಾಟೆಸ್ಟೆಂಟ್ ಮತಪ್ರಚಾರಕರ ಪ್ರಯತ್ನಕ್ಕೆ ನಾನು ವಂದಿಸಬೇಕಾಗಿದೆಯಾದರೂ ಕಿಕ್ಕಿರಿದಿದ್ದ ಸಭಾಂಗಣದಲ್ಲಿ ನಾನು ಮಾತೆತ್ತಲಿದ್ದಂತೆಯೇ ಜನರು ನನ್ನತ್ತ ಕೂಗಿಕ್ಕಿದರು, ಜನರು ಅಲ್ಲಿ ನಿಂತು ನನ್ನೆಡೆಗೆ ತಮ್ಮ ಮುಷ್ಟಿಗಳನ್ನೆತ್ತಿ ತೋರಿಸುವುದನ್ನು ಕಂಡೆನು. ಅವರ ಗುಲ್ಲು ಸ್ವಲ್ಪ ನಿಂತಾಗ ನಾನು ಪುನಃ ಮಾತಾಡಲಿಕ್ಕೆ ತೊಡಗಿದೆನು. ಕೊನೆಗೆ ಅವರ ಪ್ರಚಂಡ ನಿನಾದವು ಕಡಿಮೆಯಾಗಿ ಅಂತೆಯೇ ಸಭೆಯು ಮುಕ್ತಾಯವಾಯಿತು. ನಾನು ಅಲ್ಲಿಂದ ಹೊರಗೆ ಹೋಗುವಾಗ ಜನರು ಪುನಃ ಆವೇಶದಿಂದ ಕೂಗಿಕ್ಕುತ್ತಾ ನನ್ನತ್ತ ಮುಷ್ಟಿಯನ್ನೆತ್ತಿ ಧಾವಿಸಿದರು, ಹಾಗಿದ್ದರೂ ನನ್ನ ಸಮೀಪದಲ್ಲಿದ್ದವರು ನನಗೆ ಅಲ್ಲಿಂದ ಸುರಕ್ಷಿತವಾಗಿ ಹೊರಟುಹೋಗಲು ಎಡೆಯನ್ನಿತ್ತರು. ಇದರನಂತರ ಹೊರಗೆ ಆ ಕತ್ತಲೆಯಲ್ಲಿ ಜನರು ಅತ್ತಿತ್ತ ಕಾಲೆತ್ತಲಾರಂಭಿಸಿದಾಗ ಒಂದು ಒದೆಯು ನನಗೂ ತಗಲಿತು. ಜನರು ನನ್ನ ಗಾಡಿಯನ್ನು ಕೊಡವಿ ಹಾಕಲು ಪ್ರಯತ್ನಿಸಿದಾಗ

ಗಾಡಿಯವನು ಕುದುರೆಗಳನ್ನು ನಾಗಾಲೋಟದಿಂದ ಓಡಿಸಿ ಅದರಿಂದ ಪಾರಾಗಿಸಿದನು. ಅದೇ ತಿಂಗಳು ಶ್ರೀ ಮತ್ತು ಶ್ರೀಮತಿ ಪ್ರಾಲ್‌ಸ್ಟನ್ ಹ್ಯೂಮ್ ಎಲಿ ಇವರ ಆಮಂತ್ರಣದಂತೆ ಬ್ರ್ಯಾಡ್ಲೆ ಮತ್ತು ನಾನು ಕಾಂಗ್ಲೆಟನ್ನನ್ನು ಸಂದರ್ಶಿಸಿದೆವು. ಮೊದಲ ದಿನ ಸಾಯಂಕಾಲ ಬ್ರ್ಯಾಡ್ಲೆಯು ಮಾತಾಡುತ್ತಿದ್ದಾಗ ಹಲವು ಕಿಟಕಿಗಳು ಕಲ್ಲಿನಿಂದ ಪ್ರಹಾರಿಸಲ್ಪಟ್ಟವು. ಶ್ರೀಮತಿ ಎಲಿಯೊಡನೆ ವೇದಿಕೆಯನ್ನು ಮುಟ್ಟಿ ಕುಳಿತಿದ್ದ ನನಗೆ ಹಜಾರದಲ್ಲಿ ಯಾರೋ ಎಸೆದ ಒಂದು ಕಲ್ಲು ನನ್ನ ಹಣೆಗೆ ಬಲವಾಗಿ ತಾಗಿತು. ಅದರ ನಂತರ ಅಲ್ಲಿಂದ ನಾವು ತಂಗಿದ್ದ ಮನೆಗೆ ಒಂದೂವರೆ ಮೈಲು ದೂರ ಹೋಗಬೇಕಿದ್ದಿತು. ಆಗ ದಾರಿ ಉದ್ದಕ್ಕೂ ನಮ್ಮನ್ನು ಉತ್ತು ಗಟ್ಟಿ ಜೋರಾಗಿ ಕೂಗಿಡುತ್ತಾ, ದೊಡ್ಡ ದನಿಯಿಂದ ಹಾಡುತ್ತ, ಮಧ್ಯೆ ಮಧ್ಯೆ ಕೆಟ್ಟ ಶಬ್ದಗಳಿಂದ ಬೈಯುತ್ತ, ಶಪಿಸುತ್ತ ಜನರು ಹಿಂಬಾಲಿಸುತ್ತಿದ್ದರು. ಮರುದಿನ ಸಾಯಂಕಾಲ ನಾನು ಭಾಷಣವನ್ನು ಮಾಡುತ್ತಿದ್ದೆನು. ಕಲ್ಲು ಎಸೆಯುತ್ತಿದ್ದ "ಮಿತ್ರರು" ನಮ್ಮನ್ನು ಹಜಾರದೊಳಗೆ ನುಗ್ಗಿಸಿದರು. ಭಾಷಣದ ಮಧ್ಯೆ ಒಬ್ಬನು "ಅವಳನ್ನು ಹೊರಹಾಕು" ಎಂದು ಅರಚಿದನು. ಬರ್ಬರಿ ಎಂಬ ಪ್ರಸಿದ್ಧ ಜಟ್ಟಿಯು ಸಭೆಯಲ್ಲಿ ಗಲಾಟೆ ಎಬ್ಬಿಸುತ್ತಿದ್ದ ಕೆಲವು ಮಿತ್ರರೊಡನೆ ಅಲ್ಲಿಗೆ ಬಂದಿದ್ದ. ಅವನು ಕುಳಿತಲ್ಲಿಂದ ಎದ್ದು ವೇದಿಕೆಯ ಮುಂದೆ ನಿಂತು ಜೋರಾಗಿ ಅರಚಿದನು. ಅಧ್ಯಕ್ಷನಾಗಿದ್ದ ಚಾರ್ಲ್ಸ್ ಬ್ರ್ಯಾಡ್ಲೆಯು ಅವನಿಗೆ ಕುಳಿತುಕೊಳ್ಳುವಂತೆ ಹೇಳಿದನು. ಆದರೆ Mr. Burbery ಇವನು ಮಧ್ಯೆ ನಿಂತು ಮಾತಾಡುತ್ತಾ ಇರಲು ಬ್ರ್ಯಾಡ್ಲೆಯು ಅವನಿಗೆ "ಕುಳಿತುಕೊಳ್ಳಬೇಕು ಅಥವಾ ಹೊರಗೆ ಹೋಗಬೇಕು" ಎಂಬುದಾಗಿ ಹೇಳಿದನು. ಆಗ ಬರ್ಬರಿಯು ಪೈಲ್ವಾನನಂತೆಯೇ ನಿಂತು "ನನ್ನನ್ನು ಹೊರಗೆ ಹಾಕಿರಿ" ಎಂಬುದಾಗಿ ಹೇಳಿದನು. ಆಗ ಬ್ರ್ಯಾಡ್ಲೆಯು ವೇದಿಕೆಯಿಂದ ಎದ್ದು ಆ ಕೋಣೆಯನ್ನು ದಾಟಿ ಅವನ ತೋಳುಗಳನ್ನು ಹಿಡಿದು ಅವನನ್ನು ಹೊರದಬ್ಬಲು ಪ್ರಯತ್ನಿಸಿದನು. ಪೈಲ್ವಾನ ಬರ್ಬರಿಯು ತನ್ನ ವಿರೋಧಿಯು ಅಷ್ಟು ಶಕ್ತಿಯುತನನ್ನು ಕಂಡುಕೊಂಡಿಂತಿರಲಿಲ್ಲ. ಹೀಗೂ ಅವರಿಬ್ಬರೊಳಗೆ ನೂಕಾಟವು ಹೆಚ್ಚಿದಾಗ ಬರ್ಬರಿಯು ಅಷ್ಟರಲ್ಲಿ ಕೆಳಗೆ ಬಿದ್ದುಹೋಗಿದ್ದನು. ಸಭಿಕರ ಉದ್ವೇಗದ ಮಧ್ಯೆಯಲ್ಲಿ ಬರ್ಬರಿಯನ್ನು ಬಾಗಿಲನ್ನು ಎತ್ತಿ ಸಾಗಿಸಿದಾಗ್ಯೂ ಅವನ ಮಿತ್ರರು ಅವನ ಸಹಾಯಕ್ಕೆ ಮುಂದೆ ಬಂದರು. ಅಪರಿಗಿದರಾಗಿ ಬರ್ಬರಿಯನ್ನು ಮೆಲ್ಲನೆ ಮೆಟ್ಟಿಲು ಇಳಿದು ಸಾಗಿಸಿ ಹೊರಗೆ ಬಿಟ್ಟನಂತರ ಅವನನ್ನು ಪೋಲೀಸರಿಗೆ ಒಪ್ಪಿಸಲಾಯಿತು. ಅದರನಂತರ ಭಾಷಣವನ್ನು ನಿಲ್ಲಿಸಿದ್ದ ನನ್ನನ್ನು ನೋಡಿ

ಅಧ್ಯಕ್ಷನು "ಮುಂದುವರಿಸು" ಎಂದು ಸೂಕ್ಷ್ಮವಾಗಿ ಹೇಳಿದನು. ನಾನು ಆ ನಂತರದ ಆ ಶಾಂತತೆಯಲ್ಲಿಯೇ ಭಾಷಣವನ್ನು ಮುಂದುವರಿಸಿ ಮುಗಿಸಿದೆನು. ಆದರೆ ಹಜಾರದ ಹೊರಗೆ ಕಲ್ಲುಗಳು ಮಳೆಯಂತೆ ಬೀಳುತ್ತಲೇ ಇದ್ದುವು. ಶ್ರೀಮತಿ ಎಲಿಯಟ್ ಕಿವಿಯ ಬಳಿ ಒಂದು ಜೋರಾದ ಕಲ್ಲು ತಾಗಿ ಗಾಯವಾಯಿತು. ಈ ಉಗ್ರ ಪರಿಸ್ಥಿತಿ ಹೀಗೂ ಕಡಿಮೆಯಾಯಿತು. ಆದರೆ ನನಗಂತೂ ಹಿಂದಿನ 'ಭಾಷಣಕಾರರ' ಅನುಭವ ಹೋಲಿಸಿ ಇಂದಿನ ಸನ್ನಿವೇಶದಲ್ಲಿ ನಾನು ಪಡೆದ ಅನುಭವವು ಅತ್ಯಲ್ಪವಾದುದಾಗಿತ್ತು. ಬ್ರ್ಯಾಡ್ಲೆಯ ಹಿಂದಿನ ಅನುಭವವೆಂದರೆ ಅವನ ಭಾಷಣಗಳು ದೊಡ್ಡ ದೊಂಬಿಯಲ್ಲಿ ಪರ್ಯವಸಾನವಾಗಿದ್ದುವು. ಬಹಳ ಧೈರ್ಯಶಾಲಿಯೂ ಸ್ವಾಭಾವಿಕವಾಗಿ ಪ್ರಬಲಳೂ ನಿರ್ಭಯಳೂ ಆದ ಮಹಿಳೆ, ಶ್ರೀಮತಿ ಹೇರ್ಯಟ್ ಲಾ ಇವಳೂ ಇದೇ ರೀತಿ ಹಿಂದೆ ಭಾಷಣಗಳನ್ನು ಕೊಡುತ್ತಿದ್ದ ವೇಳೆಗೆ ಇಂಥ ಗೊಂದಲಗಳಿಂದ ಹೊಡೆಗೊಂಡ ಹಿಂಸೆಗಳನ್ನು ಎದುರಿಸಿದ್ದಳು.

ಸೆಪ್ಟೆಂಬರ್ 1875ರಲ್ಲಿ ಬ್ರ್ಯಾಡ್ಲೆಯು ಹಣವನ್ನು ಗಳಿಸಿ ಅವನ ಸಾಲವನ್ನು ತೀರಿಸುವ ಉದ್ದೇಶದಿಂದ ಪುನಃ ಅಮೇರಿಕಾಕ್ಕೆ ಪ್ರಯಾಣವನ್ನು ಬೆಳೆಸಿದನು. ದುರದೃಷ್ಟವಶಾತ್ ಅವನು ಟೈಫಾಯಿಡ್ ಖಾಯಿಲೆಗೆ ಸಿಲುಕಿ ಆದರಿಂದ ಅವನು ಪಾರಾಗುವ ಭರವಸೆಯೇ ಇಲ್ಲದಾಯಿತು. ಅವನ ಪ್ರಾಣವು ಉಳಿದೀತೇ ಎಂದು ಭಯಪಡುವಂತಾಗಿತ್ತು. ಆದರೆ ಕಾರ್ಯದಕ್ಷ ವೈದ್ಯನೂ ದಯಾಶೀಲಳಾದ ದಾದಿಯೂ ಅವನನ್ನು ಬದುಕಿಸಿದರು. Baltimore Advertiser ಪತ್ರಿಕೆಯು ಹೀಗೆ ಹೇಳಿತು:-

"ಈ ದೀರ್ಘವಾದ ಮತ್ತು ಕಠಿಣವಾದ ಖಾಯಿಲೆಯು ಅವನು ಈ ದೇಶಕ್ಕೆ ಬಂದ ಆಶಯವನ್ನು ಭಂಗಗೊಳಿಸುತ್ತಲದೆ ಅವನ ಉದ್ದೇಶವನ್ನು ನಿಷ್ಫಲಗೊಳಿಸಿತು. ಆದರೂ ಈ ಅತಿಶಯ ದೀರ್ಘದ ಖಾಯಿಲೆಯಿಂದ ಬಿದ್ದಾಗಲೂ ಅವನು (ಬ್ರ್ಯಾಡ್ಲೆಯು) ನಿರ್ಭೀತಿಯಿಂದಲೂ ತಾಳ್ಮೆಯಿಂದಲೂ ಕೂಡಿದ್ದು ಅವನ ಚಿಕಿತ್ಸೆಯ ಬಗ್ಗೆ ಅತ್ಯಲ್ಪ ನಿಗವಿಟ್ಟುದಾದರೂ ಅವನು ತೋರಿಸುತ್ತಿದ್ದ ಕೃತಜ್ಞತಾ ಭಾವದಿಂದ ಎಲ್ಲಾ ವೈದ್ಯರ ಮತ್ತು ಇತರರ ಪ್ರೀತಿಗೆ ವಿಶೇಷ ಪಾತ್ರನಾದನು.

ತನ್ನ ಮನೆಯಿಂದ ದೂರದ ಒಂದು ಸ್ಥಳದಲ್ಲಿ ತನ್ನ ಪ್ರೀತಿಗೆ ಪಾತ್ರರಾದವರಿಂದ ಬೇರ್ಪಟ್ಟು ರೋಗಶಯ್ಯೆಯಲ್ಲಿ ಬಿದ್ದಿದ್ದನಾದರೂ ಅವನ ಧೈರ್ಯವನ್ನು ಕುರಿತಾಗಿ ತುಂಬಾ ಶ್ಲಾಘಿಸಿದರು. ಅವನು ಸಾವಿನ ನೆರಳನ್ನು ಆಶ್ರಯಿಸಿ ನಡೆದಾಗ ಒಂದಿಷ್ಟು ಹೆದರಿಕೆಯು ಸಹ ಅವನನ್ನು ತಟ್ಟಲಿಲ್ಲ. ರೆವರೆಂಡ್ ಫ್ರಾಥಿಂಗ್‌ಹ್ಯಾಮ್ ಇವನು ತನ್ನ ಗುಡಿಯಲ್ಲಿ ಬ್ರ್ಯಾಡ್ಲೆಯ ನಿರ್ಭೀತಿ

ಕರವಾದ ಮತ್ತು ಅವನ ಉದಾತ್ತ ಗ್ರಂಥಗಳನ್ನು ಕುರಿತು ಸಾರ್ವಜನಿಕವಾಗಿ ತುಂಬಾ ಗೌರವಾಭಿಮಾನಗಳಿಂದ ಪ್ರಶಂಸಿಸಿದನಲ್ಲದೆ ಈಶ್ವರವಾದಿಯಾದ ಅವನು ಆ ನಾಸ್ತಿಕವಾದಿ ಬ್ರಾಡ್ಲೋನ ಗ್ರಂಥ ಮತ್ತೊ ಬಲಕ್ಕೆ ತಾನೇ ಸಾಕ್ಷಿಯೆಂಬುದಾಗಿ ಸಾರಿದನು. ಬ್ರಾಡ್ಲೋಯು ಸೆಪ್ಟೆಂಬರ್ ತಿಂಗಳ ಅಂತ್ಯದಲ್ಲಿ ಬರೇ ತನ್ನ ದೇಹದ ನೆರಳು ಮಾತ್ರವೆಂಬಂತೆ ಕಾಣುತ್ತ, ಒಂದು ಮೇಣಗಟ್ಟಿಯಂತೆ ಕ್ಷಯವಾಗಿ ಮತ್ತು ಸಾವಿನೊಡನೆ ಹೋರಾಡಿದವರ ಚಿಹ್ನೆಯುಳ್ಳ ಹಲವು ತಿಂಗಳುಗಳ ಕಾಲವೂ ಇರುವಂತೆ ಸೊರಗುತ್ತ, ಕಡೆಗೆ ಹಿಂದಿರುಗಿ ನಮ್ಮ ಬಳಿಗೆ ಬಂದನು.

ಆ ಬೇಸಗೆಯಲ್ಲಿ ಚಾರ್ಲ್ಸ್ ಬ್ರಾಡ್ಲೋಯು ಗೈರ್ಹಾಜರಿನಲ್ಲಿ ನಾನು ನಡೆಸಬೇಕಾಗಿದ್ದ ಕೆಲಸಗಳಲ್ಲಿ ಫ್ರೆಂಚ್ ವಿಪ್ಲವದ ವಿಷಯವಾಗಿ ಅದರ ಭಾಷಣಗಳನ್ನು ಕೊಟ್ಟು ಅದರ ಪ್ರಕಟಣೆಗೆ ಸಿದ್ಧಪಡಿಸುವುದೇ ಆಗಿತ್ತು. ಆ ಉದ್ವೇಗಕಾರಕವಾದ ಸಮಯವು ನನಗೆ ತುಂಬಾ ಕುತೂಹಲವನ್ನು ಹುಟ್ಟಿಸುತ್ತ, ಆ ವಿಷಯವಾಗಿ ನಾನು ತುಂಬಾ ಆಲೋಚಿಸತೊಡಗಿದೆನು, ಕೊನೆಗೆ ಆ ವಿಪ್ಲವದ ನೀತಿಯನ್ನು ವಿವೇಚಿಸಿ ಜನತೆಯ ದೃಷ್ಟಿಯಲ್ಲಿ ಆ ಹಿನ್ನೆಲೆಯಿಂದಲೇ ನಿರೂಪಿಸಲು ಕಾದಿರಿಸಿದೆನು. ಪರಿಣಾಮವಾಗಿ ಆ ವಿಪ್ಲವದ ಕಾಲದ ಬರವಣಿಗೆಗಳನ್ನು, ಲೂಯಿ ಬ್ಲಾಂಕ್ ಇವನ ಮಹತ್ತರದ ಕೃತಿಯನ್ನು, ಮಿಶೆಲೆಟ್, ಲಾಮಾರ್ಟಿನ್ ಮುತ್ತಿತರರ ಚರಿತ್ರೆಗಳನ್ನು ಓದಿದೆನು. ಅದೃಷ್ಟವಶಾತ್ ಬ್ರಾಡ್ಲೋಯು ಬಳಿಯೂ ಆ ವಿಷಯವನ್ನು ಕುರಿತು ಅನೇಕ ಉತ್ತಮ ಕೃತಿಗಳ ಸಂಗ್ರಹವು ನನಗಾಗಿ ಕಾದಿದ್ದುವು. ನಾವು ಇಂಗ್ಲೆಂಡಿನಿಂದ ಹೋಗುವುದಕ್ಕೆ ಮುಂಚೆ ಅವನು ಎರಡು ಗಾಡಿಗಳಲ್ಲಿ ಪ್ರಭುತ್ವಕ್ಕೆ, ಧರ್ಮಕ್ಕೆ ಮತ್ತು ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿದ ಗ್ರಂಥಗಳನ್ನೆಲ್ಲ ತಂದು ಹಾಕಿದನು. ನಾನು ಅವೆಲ್ಲವನ್ನೂ ತಿರುವಿ ಹಾಕಿದೆನು. ಅವುಗಳಲ್ಲಿಯೇ ತಲ್ಲೀನಳಾದೆನು. ನನ್ನ ಹಲವು ದಿನಗಳನ್ನು ಅವುಗಳೊಡನೆ ಕಳೆದೆನು. ಫ್ರೆಂಚ್ ವಿಪ್ಲವದಲ್ಲಿ ನಾನೊರ್ವ ಪಾತ್ರಧಾರಿಯಾಗಿದ್ದು ಅದರಲ್ಲಿದ್ದ ಇತರ ಪಾತ್ರಧಾರಿಗಳು, ನನ್ನ ವೈಯಕ್ತಿಕ ಮಿತ್ರರು ಮತ್ತು ವೈರಿಗಳು ಎಂಬಂತಾಗಿದ್ದು ಒಂದು ನಾಟಕವೇ ಆದಂತೆ ಎಂದೆನಿಸುತ್ತ. ಇತರ ಹಲವು ಸಾರ್ವಜನಿಕ ಚಟುವಟಿಕೆಗಳಲ್ಲಿ ಹೇಗೋ ಹಾಗೆಯೇ ಇದ್ದರೂ ನನಗೆ ಬ್ರಾಡ್ಲೋಯಿಂದ ಮಾರ್ಗದರ್ಶನಾಗಿ ಪ್ರಭಾವವನ್ನು ಬೀರಿದ್ದಕ್ಕೆ ಅವನಿಗೆ ಋಣಿಯಾಗಿದ್ದೇನೆ; ಆ ವರೆಗೂ ನಾನು ಆ ಕುರಿತ ವಿಷಯವಾಗಿ ಬರೆಯಲು ಮತ್ತು ಮಾತಾಡಲು ಯೋಗ್ಯಳಾಗಿದ್ದಿಲ್ಲದುದಾಗಲೇ ನಾನು ಹಲವು ಬಾರಿ ಕೆಲವು ವಿಷಯಗಳನ್ನು ಕುರಿತಾಗಿ ತಿಳಿಸಿದ್ದೆನು. ಆದರೆ ಈ ಸಂದರ್ಭವು ಅದನ್ನು ಕುರಿತು

ಸಂಪೂರ್ಣವಾಗಿ ಪರಿಶೀಲಿಸಿ ತಿಳಿಯಲು ಅವಕಾಶವನ್ನೊದಗಿಸುತ್ತ,

ಕ್ರಿ.ಶ. 1875 ರಿಂದ ಮೊದಲ್ಗೊಂಡು ಆನು ರಾಷ್ಟ್ರೀಯ ನಿರ್ಧರ್ಮ ಮತ ಪ್ರತಿಪಾದಕರ ಸಂಸ್ಥೆ (National Secular Society) ಇದರ ಉಪಾಧ್ಯಕ್ಷೆಯಾಗಿದ್ದಳು, ಈ ಸಂಸ್ಥೆಯು ಸತ್ಯಾನ್ವೇಷಣೆ ಪ್ರಬಲವಾದ ಧ್ಯೇಯದಿಂದ ಸ್ಥಾಪಿತವಾಗಿತ್ತು. ಬ್ರಾಡ್ಲೆಯು ಆ ಸಂಸ್ಥೆಯ ಅಧ್ಯಕ್ಷನಾಗಿದ್ದನು, ಆನು ತತ್ವಜ್ಞಾನ (ಥಿಯೊಸೊಫಿ) ಸಂಸ್ಥೆಗೆ ಸೇರಿದ ಒಂಬತ್ತು ತಿಂಗಳನಂತರ ಎಂದರೆ 1890ರ ಫೆಬ್ರವರಿಯಲ್ಲಿ, ಅವನು ಅದಕ್ಕೆ ರಾಜೀನಾಮೆಯನ್ನು ಕೊಡುವ ವರೆಗೂ ಅವನ ನೇತೃತ್ವದಲ್ಲಿಯೇ ಮುನ್ನಡೆದಿತು, ಅವನ ಅತಿ ಜಾಣತನದ ಮತ್ತು ಹೋರಾಟದೃಷ್ಟಿಯ ಮುಂದಾಳ್ತನದಿಂದ ರಾಷ್ಟ್ರೀಯ ನಿರ್ಧರ್ಮ ಮತ ಪ್ರತಿಪಾದಿಗಳ ಸಂಸ್ಥೆಯು ತಾತ್ವಿಕವಾಗಿಯೂ ರಾಜಕೀಯವಾಗಿಯೂ ದೇಶದಲ್ಲಿ ಒಂದು ಶಕ್ತಿಯೇ ಆಗಿತ್ತು. ಅದು ಅತಿಸಂಖ್ಯೆಯಲ್ಲಿ ಸ್ವತಂತ್ರವಾದಿಗಳು (Free-thinkers) ಮತ್ತು ತೀವ್ರಗಾಮಿಗಳು (radicals) ಆದ ಗಂಡಸರನ್ನು ಮತ್ತು ಹೆಂಗಸರನ್ನು ತನ್ನೆಡೆಗೆ ಆಕರ್ಷಿಸಿತು, ಹೀಗೆ ಶ್ರದ್ಧಾವಂತರಾದ ಕೆಲಸಗಾರರ ಒಂದು ಗುಂಪು ಕಟ್ಟಿ ಅವರು ತಮ್ಮ ತಂಡಕ್ಕೆ ಬಹುಸಂಖ್ಯೆಯಲ್ಲಿ ಜನ ಸೇರಿಸಿಕೊಂಡು ಸಾರ್ವಜನಿಕ ವಿಷಯಗಳನ್ನು ಪ್ರಬಲವಾಗಿ ಸಾರುವುದರಲ್ಲಿ ಸಮರ್ಥರಾದರು, ಪಟ್ಟಣಕ್ಕೆ ಮತ್ತೆ ಈ ಸಂಸ್ಥೆಯು ದಿವ್ಯತೆಯನ್ನು ಕಾಣಿಸಿತು. ಆಗ ಬಹು ದೂರದಲ್ಲಿರುವ ಜನರೂ ಆ ಕೂಟಗಳಿಗೆ ಸೇರಿ ಅದರ ಸದಸ್ಯರೊಳಗೆ ನಿರಬಸ್ನೇಹವನ್ನು ಕಲ್ಪಿಸಿದಲ್ಲದೆ ದೊಡ್ಡ ಉದ್ದೇಶಗಳಿಗಾಗಿ "ನಮ್ಮ ಚಾರ್ಲಿ" (ಚಾರ್ಲ್ಸ್ ಬ್ರಾಡ್ಲೆ) ಇವನ ಅನುಯಾಯಿಗಳೊಳಗೆ ಆತ್ಮೀಯ ಸಂಪರ್ಕವನ್ನು ನಿರ್ಮಿಸಲು ಈ ಸಂಸ್ಥೆ ಸಹಾಯಕವಾಯಿತು. ಅವನ ಚುನಾವಣೆಯ ವೆಚ್ಚಕ್ಕೆ ಹಣ ತೆತ್ತರು. ಗಣನೀಯ ಚುನಾವಣೆಯ ಕಾಲದಲ್ಲಿ ಅವನಿಗೆ ಸಹಕರಿಸಿ, ಅವನ ಪರ ಪ್ರಚಾರ ಮಾಡಲು ಲಂಡನ್ನಿಗೆ ಬರುತ್ತಿದ್ದ ಜನರೆಲ್ಲ ಇವರೇ ಆಗಿದ್ದರು. ಹೀಗೆ ಅವನ ಸುತ್ತ ಒಂದು ರಾಜಕೀಯ ಪಕ್ಷವೇ ಬೆಳೆಯಿತು. ಪ್ರಧಾನಿ ಗ್ಲಾಡ್‌ಸ್ಟನ್ ಇವನನಂತರ ಬಹು ದೊಡ್ಡ ಅತಿ ಅನುಯಾಯಿ ವರ್ಗವನ್ನು ಹೊಂದಿದ್ದ ಬ್ರಾಡ್ಲೆಯು ತತ್ವವನ್ನು ಅವನು ಒಪ್ಪದಿದ್ದರೂ ಅವನ ನಿಲುವನ್ನು ಬಹಳ ಅಮೋಘವೆನ್ನುವಂತೆ ಒಪ್ಪಿದ ಪ್ರಭಾವಶಾಲಿ ವ್ಯಕ್ತಿಯೆಂದು ಗ್ಲಾಡ್‌ಸ್ಟನ್ ಹೇಳಿದ್ದನು. "ಚಾರ್ಲಿ"ಯನ್ನು ಕಡೆವರೆಗೂ ಹಿಂಬಾಲಿಸಿದವರಲ್ಲಿ ಗಣಿ ಕೆಲಸದವರೂ ನೆಯ್ಗೆಯವರೂ ನೂಲುವವರೂ ಹಾದರಕ್ಕೆ ಕೆಲಸಗಾರರೂ, ಎಲ್ಲಾ ಬಗೆಯ ವ್ಯಾಪಾರ ವ್ಯವಹಾರಗಳನ್ನು ಕೈಗೊಂಡಿದ್ದ ಪ್ರಬಲ, ಬಲಾಢ್ಯ ಹಾಗೂ ಆತ್ಮಾವಲಂಬನೆಯುಳ್ಳ ಕೂಡಿದ್ದ ಧನಾಢ್ಯರೂ ಇದ್ದರು.

ಅಧ್ಯಾಯ ೯.

ನಾಲ್ಟನ್ ಪ್ರಬಂಧ.

ಕ್ರಿ.ಶ. 1877ನೇ ವರ್ಷವು ಉದಿಸಿತು. ಅದರ ಮೊದಲ ದಿನಗಳಲ್ಲಿ ಪ್ರಾರಂಭವಾದ ಹೋರಾಟವು ಗೆಲುವಿನಿಂದ ಕೊನೆಗೊಂಡರೂ ಅದರೊಡನೆಯೇ ನಾನು ಇಲ್ಲಿ ಹೇಳಲಿಕ್ಕೆ ಇಚ್ಛಿಸಲಾರದಷ್ಟು ನೋವನ್ನೂ ದುಃಖವನ್ನೂ ಅನುಭವಿಸಿದೆನು. ಅಮೇರಿಕಾದ ಒಬ್ಬ ವೈದ್ಯ ಡಾ. ಚಾರ್ಲ್ಸ್ ನಾಲ್ಟನ್ ಇವನು ರೆವರೆಂಡ್ ಮಾಲ್ಥಸ್ ಇವನ ಬೋಧನೆಯಲ್ಲಿರುವ ಸತ್ಯತೆಯನ್ನು ಮನಗೆ ಮನದಟ್ಟುಗಿಸಿದನು, ಈ ಬೋಧನೆಗೆ ಸಕ್ರಿಯವಾಗಿ ಬೇಗೆಯಾಗಲೀ ವೇಶ್ಯಾವೃತ್ತಿಯು ಹೆಚ್ಚುವುದಕ್ಕೆ ಅದರಿಂದ ಅವಕಾಶವಾಗಲೀ ಇಲ್ಲವೆಂದು ಕಂಡುಬಂದರೂ ವೈವಾಹಿತ ದಂಪತಿಗಳು ತಮ್ಮ ಜೀವಮಾನದ ಉತ್ಪತ್ತಿಗೆ ತಕ್ಕಂತೆ ಸಂಸಾರವನ್ನು ಬೆಳೆಸುವಂತಾಗಲೀ ತಮ್ಮ ಕುಟುಂಬದ ಜನಸಂಖ್ಯೆಯನ್ನು ಒಂದು ಮಿತಿಯೊಳಗಡೆ ಇಡಬೇಕೆಂಬುದಾಗಿ ಒಂದು ಕಿರುಹೊತ್ತಿಗೆಯನ್ನು ಬರೆದನು. ಅದು ಸುಮಾರು 1835ರ ಕಾಲದಲ್ಲಿ ಪ್ರಕಟವಾಗಿದ್ದು ಅದರ ಪ್ರತಿಗಳು ಇಂಗ್ಲೆಂಡ್ ಮತ್ತು ಅಮೇರಿಕಾದಲ್ಲಿ ಸುಮಾರು ನಲ್ವತ್ತು ವರ್ಷಗಳ ಕಾಲ ಅವಿರೋಧವಾಗಿ ಮಾರಾಟವಾದುವು. ಬೆಂಥಾಮ್ ಪಂಥಕ್ಕೆ ಸೇರಿದ ಜಾನ್ ಸ್ಟುಯರ್ಟ್ ಮಿಲ್ಲ್ ಇವನಂಥ ತಾತ್ವಿಕನೂ ಅದರಲ್ಲಿ ಹೇಳಿದ ಬೋಧನೆಗಳನ್ನು ಒಪ್ಪಿದನು. ಬಡತನದ ಕಾರಣದಿಂದ ಜನಸಂಖ್ಯೆಯು ಹೆಚ್ಚುವುದೆಂಬುದು ಆರ್ಥಿಕ ಗ್ರಂಥಗಳಲ್ಲಿ ಹೇಳಿದ ಸಿದ್ಧಾಂತವಾಗಿದೆ. ಆದರೆ ಡಾ. ನಾಲ್ಟನ್ನನ ಬರಹವು ಮನಶ್ಶಾಸ್ತ್ರವನ್ನು ಅವಲಂಬಿಸಿದುದಾಗಿದ್ದು ಲೈಂಗಿಕ ಕರ್ತವ್ಯತೆ ಮತ್ತು ತಂದೆತಾಯಿಗಳ ಜವಾಬ್ದಾರಿಕೆಯನ್ನು ಕುರಿತು ಪ್ರತಿಪಾದಿಸುತ್ತದೆ. ಸಾಮಾಜಿಕ ಜೀವನವನ್ನು ಶುದ್ಧವಾಗಿಡಲು ಎಳೆ ಪ್ರಾಯದಲ್ಲಿಯೇ ಮದುವೆಯಾಗಬೇಕೆಂದು ಆ (ನಾಲ್ಟನ್ನಿನ) ಪ್ರಬಂಧವು ವಾದಿಸಿತು. ಆದರೆ ಅಲ್ಪ ಆದಾಯವಿರುವವರು ಎಳೆ ಪ್ರಾಯದಲ್ಲಿ ವಿವಾಹವಾದರೆ ಸಂಸಾರವು ದೊಡ್ಡದಾಗುವುದು; ಅದು ಬಡತನ, ಮಕ್ಕಳ ಆಹಾರ, ಬಟ್ಟೆ, ವಿದ್ಯೆ ಇತ್ಯಾದಿಗೆ ಭಂಗ, ಉತ್ತಮ ಜೀವನಕ್ಕೆ ತೊಂದರೆ, ಇದಕ್ಕೆಲ್ಲ ಕಾರಣವಾಗುತ್ತದೆ. ಆದುದರಿಂದ ಡಾ. ನಾಲ್ಟನ್ನನು ಅವರವರ ಜೀವನಾನುಕೂಲತೆಗೆ ತಕ್ಕಂತೆ ಸಂಸಾರವನ್ನು ಸಣ್ಣದಾಗಿಡಲು ಮತ್ತು ಒಂದು ಮಿತಿಯೊಳಗಡೆಗಿಡಲು ಇರುವ ಕ್ರಮವನ್ನು ನಿರೂಪಿಸಿದ್ದನು.

ಈ ಗ್ರಂಥವು ಯಾರ ಪ್ರತಿಭಟನೆಗೂ ಒಳಗಾಗಿರಲಿಲ್ಲ. ಆದರೆ ಬ್ರಿಸ್ಟಲ್ಲಿನ ಒಬ್ಬ ಅಪ್ರಾಮಾಣಿಕ ಪುಸ್ತಕ ವ್ಯಾಪಾರಿಯು ಅದರ ಪ್ರತಿಗಳನ್ನು ಮಾರಾಟಕ್ಕೆ ಇಟ್ಟಿದ್ದಾಗ ಅದರೊಡನೆ ಕೆಲವು ಅಸಹ್ಯ ಚಿತ್ರಗಳನ್ನು ಇಟ್ಟಿದ್ದರಿಂದ ಅವನ ಮೇಲೆ ಅಪರಾಧವನ್ನು ಹೊರಿಸಿ ಅವನನ್ನು ಶಿಕ್ಷೆಗೊಳಪಡಿಸಿದರು. ದಿ National Reformer ಪತ್ರಿಕೆಯನ್ನು ನಡೆಸುತ್ತಿದ್ದ ಚಾರ್ಲ್ಸ್ ಬ್ರಾಡ್ಲೋ ಮತ್ತು ನನ್ನ ಮತ್ತು ಇತರರ ಪುಸ್ತಕಗಳನ್ನು ಆ ವ್ಯಾಪಾರಿಯು ಡಾ. ನಾಲ್ಟನ್ನಿನ ಕೃತಿಯೊಡನೆ ಮಾರಾಟಮಾಡುತ್ತಿದ್ದನು. ಅವನನ್ನು ವಿಚಾರಣೆಗೆ ಒಳಪಡಿಸಿದಾಗ ತಾನು ಅಪರಾಧಿಯೆಂದು ಅವನು ಒಪ್ಪಿಕೊಂಡಿದ್ದನೆಂಬುದನ್ನು ತಿಳಿದಾಗ ನಮಗೆ ಆಶ್ಚರ್ಯವಾಯಿತು. ಅವನ ಅಂಗಡಿಯಿಂದ ನಮ್ಮ ಪುಸ್ತಕಗಳೆಲ್ಲವನ್ನೂ ಬೇಗನೆ ವಾಪಸು ತೆಗೆದುಕೊಂಡೆವು. ಅನಂತರ ಬಹಳ ಜಾಗರೂಕತೆಯಿಂದ ಪರಿಶೀಲಿಸಿ ಹಾಗೆ ತಪ್ಪೆಂದು ಒಪ್ಪಲಾದ ಆ ಪ್ರಬಂಧವನ್ನೇ ಅದರಲ್ಲಿ ಹೇಳಿದ ಜನಸಂಖ್ಯೆಯ ವಿಚಾರವಾಗಿ ವಾದಿಸಲು ಸಾರ್ವಜನಿಕರಿಗಿರುವ ಹಕ್ಕನ್ನು ಪರೀಕ್ಷಿಸಲೆಂದು ಪುನಃ ಮುದ್ರಿಸಿ ಪ್ರಕಟಿಸಿದೆವು. ಅದರೊಡನೆ ಮಿತಸಂತಾನದ ಬಗ್ಗೆ ವಿವರಿಸಿ ಅದನ್ನು ಹೇಗೆ ಸಾಧಿಸಬಹುದೆಂಬುದನ್ನು ಕುರಿತೂ ಹೇಳಲಾಗಿತ್ತು. ನಾವು ಚಿಕ್ಕ ಒಂದು ಮುನ್ನುಡಿಯನ್ನಿಟ್ಟು ಅದೇ ಕೃತಿಯನ್ನು ಪುನರ್ಮುದ್ರಿಸಿದೆವು. ಅನಂತರ ಅದರ ಪ್ರತಿಗಳನ್ನು ಇತರರಾರೂ ಸರಕಾರದ ಕಡೆಯಿಂದ ತೊಂದರೆಗೊಳಗಾಗದಂತೆ ನಾವೇ ಆ ಹೊತ್ತಿಗೆಯನ್ನು ಇಂತಹ ದಿನ ಇಷ್ಟು ಗಂಟೆಗೆ ಮಾರಾಟಕ್ಕಿಡುತ್ತೇವೆ ಎಂಬುದಾಗಿ ಸ್ಥಳೀಯ ಪೋಲೀಸ್ ಅಧಿಕಾರಿಗೂ ತಿಳಿಸಿದೆವು. ಆಗ ರಾಷ್ಟ್ರೀಯ ಸರ್ವಮತ ಪ್ರತಿಪಾದನಾ ಸಂಸ್ಥೆ (National Secular Society) ಇದಕ್ಕೆ ತೊಂದರೆ ಉಂಟಾಗಬಾರದೆಂದು ಬಗೆದು ನಾವು ಅದರಲ್ಲಿ ಹೊಂದಿದ್ದ ನಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟೆವು. ಆದರೆ ಆ ಸಂಸ್ಥೆಯ ಕಾರ್ಯನಿರ್ವಾಹಕ ಸಮಿತಿ ಮತ್ತು ಅದರ ಎರಡನೇ ವಾರ್ಷಿಕ ಸಮ್ಮೇಳನವು ನಮ್ಮ ರಾಜೀನಾಮೆಯನ್ನು ಸ್ವೀಕರಿಸಲು ನಿರಾಕರಿಸಿತು. ಆ ಹೊತ್ತಿಗೆಯ ಬಗೆಗೆ ನಮ್ಮ ನಿಲುವು ಸಾಮಾನ್ಯವೂ ಧೃಡನಿಶ್ಚಯವೂ ಆಗಿತ್ತು. ಅದನ್ನು ನಾವು ಪ್ರಕಟಿಸಬೇಕೆಂದು ಆಗ ಯಾರಾದರೂ ಹೇಳಿದ್ದರೆ ಆ ಕೃತಿಯು ನಿರೂಪಣೆಯಲ್ಲಿ ಅಷ್ಟೇನೂ ಯೋಗ್ಯವಲ್ಲದಿದ್ದುದರಿಂದ ಅದಕ್ಕೆ ನಾವು ಒಪ್ಪುತ್ತಿರಲಿಲ್ಲ. ಆದರೆ ಕುಟುಂಬವನ್ನು ಒಂದು ಮಿತಿಯೊಳಗೆ ಇಡಬೇಕೆಂದು ಹೇಳಿದ ಅಲ್ಪ ಕಾರಣಕ್ಕಾಗಿ ಅದು ಅನೈತಿಕ ವಿಚಾರವೆಂದು ಅದನ್ನು ಕಾನೂನುಬದ್ಧವಾಗಿ ಖಂಡಿಸಿದಾಗ ಅದು ಪ್ರಕಟಣೆಗಿರುವ ಹಕ್ಕನ್ನು ಕೂಡಲೇ ಪಡೆಯಬೇಕಾಗಿದೆ. ಹೇಗೂ ಪುನರ್ಮುದ್ರಣವಾದ ಆ ಪ್ರಕಟಣೆಗೆ ಈ ರೀತಿಯಾಗಿ

ಒಂದು ಮಾತನ್ನಿಲ್ಲಿಯೂ ನಾವು ಬರೆದೆವು:—

'ತಾತ್ವಿಕವೇ ಇರಲಿ, ರಾಜಕೀಯವೇ ಇರಲಿ, ಧಾರ್ಮಿಕ ಸಾಮಾಜಿಕವೇ ಆಗಲಿ; ಜನರು ಎಂಥ ಸಂದಿಗ್ಧ ಪರಿಸ್ಥಿತಿಗೊಳಗಾಗಿ ಬಿಟ್ಟರಾದರೂ ಅವರಿಗೆ ವಾದಿಸಿ ತಿಳಿಯಲು ಸರ್ವ ಹಕ್ಕು ಇದೆಯೆಂಬುದನ್ನು ಸ್ಥಾಪಿಸಲು ಮತ್ತು ಅದರ ಮುಖ ಸಂತೋಷವನ್ನು ತೋರಿಸುವ ಎಲ್ಲ ವಿಚಾರಗಳ ಬಗ್ಗೆ ತಿಳಿಯಲು ಈ ಪುಸ್ತಕವು ಸಹಾಯಕವಾಗುವುದೆಂದು ಬಗೆದು ಇದನ್ನು ಪುನಃ ಪ್ರಕಟಿಸಿದ್ದೇವೆ, ವೈಯಕ್ತಿಕವಾಗಿ ನಾವು ಶ್ರೀ. ನಾಲ್ವಣ್ಣನವರು ಹೇಳಿದ್ದನ್ನು ಪೂರ್ತಿ ಒಪ್ಪಲಾರೆವು; ತಾತ್ವಿಕವಾದ ಅವರ ಮೊದಲ ನುಡಿಗಳು ತಾತ್ವಿಕ ತಪ್ಪುಗಳಿಂದಲೇ ಕೂಡಿವೆ. ನಾವಾರೂ ವೈದ್ಯರಲ್ಲದ್ದರಿಂದ ಅವರು ವೈದ್ಯಕೀಯವಾಗಿ ಹೇಳಿದ ಅಭಿಪ್ರಾಯಗಳನ್ನು ಒಪ್ಪಲಿಕ್ಕೆ ನಾವು ಸಿದ್ಧರಿಲ್ಲ. ಆದರೆ ಪ್ರಗತಿಯು ವಾದವಿವಾದಗಳಿಂದಲೇ ಸಾಧಿಸಬೇಕಾದುದಾಗಿದೆ. ಹಾಗಿರುವಾಗ ಜನಕ್ಕೆ ವಿಷಯಗಳನ್ನರಿಯಲು ಮತ್ತು ಅವುಗಳ ಮೇಲೆ ತರ್ಕ ತೀರ್ಮಾನಕ್ಕೆ ಬರಲು ಸರ್ವ ವಿವರವನ್ನು ಸಂಗ್ರಹಿಸಿ ಸ್ವಸ್ಥ ಅಭಿಪ್ರಾಯಗಳನ್ನು ಆ ರೀತಿ ಕೊಡಬಾರದೆಂದು ಕಾನೂನು ಬದ್ಧವಾಗಿ ವಿಧಿಸಿದರೆ ವಾದವಿವಾದಗಳಿಗೂ ನಮ್ಮೊಳಗೆ ಅವಕಾಶವೇ ಇಲ್ಲದಂತಾಗುತ್ತದೆ.

ಅಧಿಕಾರಿಗಳನ್ನು ಬಹಿರಂಗವಾಗಿ ಪ್ರತಿಭಟಿಸುವುದರಲ್ಲಿರುವ ಅಪಾಯವನ್ನು ಕಾಣದ ಕುರುಡರು ನಾವಾಗಿಲ್ಲ. ಆದರೆ ಸೆರೆಮನೆ ಶಿಕ್ಷೆಯೊಡನೆ ನಮ್ಮ ಕೊರಳಿನಲ್ಲಿದ್ದ ಅಪಾಯವು ನಮಗೆ ವಿರಾಮವನ್ನೀಯಲಿಲ್ಲ; ಬದಲಾಗಿ ಗೌರವಾಭಿಮಾನಗಳ ಬಗ್ಗೆ ಅಸಹ್ಯ ಆರೋಪಣೆಗಳು ಮುಂದಕ್ಕೆ ಪ್ರಚಾರವಾಗಬಹುದೆಂದೇ ಆಗಿದೆ. ಬಹು ಉನ್ನತ ನೈತಿಕ ಧ್ಯೇಯವನ್ನು ಬೋಧಿಸುವ ನಾವು ಲಾಕ್ಷಣಿಕವಾಗಿ ಅಸಹ್ಯವಾದುದೆಂದು ವಿವರಿಸಲ್ಪಟ್ಟ ಪುಸ್ತಕವನ್ನು ಪ್ರಕಟಿಸಿ ವಿಚಾರಣೆಗೆ ಗುರಿಯಾಗಿ ನಮಗೆ ಆಧಾರವಾಗಿ ಇರುವ ಸಾರ್ವತ್ರಿಕ ಕೀರ್ತಿಯನ್ನು ಕಳೆದುಕೊಂಡು ನಮ್ಮ ಭವಿಷ್ಯವನ್ನು ಹಾಳು ಮಾಡಿಕೊಳ್ಳಲು ಸಾಧ್ಯವೇ? ಬ್ರ್ಯಾಡ್ಲಾಗಾದರೋ ಅಂತಾದರೆ ಅವನೇ ಉಳಿಸುವಂತೆ ಅವನ ವೈರಿಗಳು ಕೈಯ್ಯಲಿದ್ದರೆ ತನ್ನ ಪ್ರಾಣಕ್ಕೆ ಹಾನಿಯಾಗಬಹುದಾದ ಅಸ್ತ್ರವೊಂದನ್ನು ತನ್ನ ಕೈಯಿಂದಲೇ ನಿರ್ಮಿಸಿಕೊಂಡಂತೆ ಆಗುವ ರೀತಿಯಲ್ಲಿ ಅವನ ಭಾಷಣ ಸ್ವಾತಂತ್ರ್ಯ ಸಿದ್ಧತೆ ಮತ್ತು ಸಾರ್ವಜನಿಕ ಮುಂದಾಳುತನವೆಲ್ಲ ಅಳಿಯುವುದು, ನನಗಾದರೋ ನಾನು ಅಮೂಲ್ಯವೆಂದು ಭಾವಿಸಿ ಉಳಿಸಿಕೊಂಡಿದ್ದ ಆ ಪರಿಶುದ್ಧವಾದ ಕೀರ್ತಿಯನ್ನು ಕಳೆದುಕೊಂಡಂತಾಗುವುದು, ಅಪವಾದವೆಂದರೆ ಹೆಂಗಸಿಗೆ ಸಹಿಸಲಾರದಷ್ಟು ಭಯಂಕರವಾದುದಾಗಿದೆ.

ಆದರೆ ನನ್ನ ಸೋದರಿಯರು ತಮ್ಮ ಮಕ್ಕಳಿಗಾಗಿ ರೊಟ್ಟಿಯನ್ನು ಬೇಡುತ್ತಿರುವ ರವರ ಬದುಕನ್ನು, ಕಷ್ಟಗಳನ್ನು ನೋಡಿದ್ದೇನೆ. ಕೆಲಸಗಾರನಿಗೆ ಕೊಡುತ್ತಿರುವ ತಲಬಿನಿಂದ ನಾಲ್ಕು ಜನವನ್ನು ಸಾಕಬಹುದಲ್ಲದೆ ಎಂಟೋ ಹತ್ತೋ ಜನವನ್ನಲ್ಲ. ಅಂಥಾ ಜನಕ್ಕೆ ಸಹಕರಿಸದೆ ನನ್ನ ಸ್ವಸಂರಕ್ಷಣೆಯನ್ನು ನನ್ನ ಉತ್ತಮ ಯಶಸ್ಸನ್ನು ಅಂತೆಯೇ ಉಳಿಸಿಕೊಳ್ಳಲೇ? ನಾನು ಗಳಿಸಿದ ಖ್ಯಾತಿಯು ಉಳಿದರೆ ಅದು ಸಹಸ್ರಾರು ಜನರ ನಿಸ್ಸಹಾಯಕತೆಯನ್ನು ಬದುಕನ್ನು ಪಾರಾಗಿಸಲು ಸಹಾಯಕವಾಗುತ್ತದೆ ಎಂದಾದರೆ ಆ ಖ್ಯಾತಿಯು ಉಳಿದರೆ ಕಳೆದುಕೊಳ್ಳುವುದೇನು? ಪರೀಕ್ಷೆಗೆ ಕಾಲ ಬಂದಾಗ ನಾನು ಸೋತುಹೋದರೆ ನಾನು ಸ್ವಾರ್ಥತ್ಯಾಗ, ನಿಸ್ವಾರ್ಥಸೇವೆಯನ್ನು ಕುರಿತು ಆಡಿದ್ದೆಲ್ಲ ಮಾತಾಡಿದ್ದಕ್ಕೆ ಬೆಲೆಯೇನು? ಆದುದರಿಂದ ನಾನು ಕಳವಳದಿಂದ ಕೂಡಿದ್ದರೂ ದೃಢವಾದ ಒಂದು ನಿರ್ಧಾರಕ್ಕೆ ಬಂದೆನು. ಇಂದಿಗೆ ನಾನು ಮಾನಸಿಕವಾಗಿ ಮತ್ತು ಕಷ್ಟಪರಿಹಾರ ಕ್ರಮದಿಂದ ತಪ್ಪಿದ್ದೇನೆಂದು ತಿಳಿದಿದ್ದರೂ ನಾನು ಬಡವರಿಗಾಗಿ ಸರ್ವಸ್ವತ್ಯಾಗವನ್ನು ಮಾಡುತ್ತೇನೆಂಬ ದೃಢನಿರ್ಧಾರವನ್ನು ಮಾಡಿದ್ದು ನೈತಿಕವಾಗಿ ಸರಿಯಾಗಿದೆ. ಬೇರಾವುದೂ ಎಂದಿಗೂ ನನ್ನನ್ನು ಮುಟ್ಟಲಾರದಿದ್ದುದಕ್ಕಿಂತ ಪ್ರಚಂಡ ಆಂತರಿಕ ಭಯಾನಕ ವೇಗವನ್ನು ನಾನು ಎದುರಿಸಿ ಜಯಪ್ರದವಾದೆನೆಂದು ಸಂತೋಷಿಸಿದೆನು, ಹೃದಯಾಂತರಾಳದಿಂದ ಸರಿಯೆಂದು ತೋರಿಬಾರದೆ ಬರೀ ಹೊರಗಿನ ಸನ್ನಿವೇಶಗಳ ಬಲದಿಂದ ತೀರ್ಮಾನಿಸಲಾದ ವಿಚಾರಗಳನ್ನು ನಿರ್ಭಯತೆಯಿಂದ ಉಪೇಕ್ಷಿಸಬೇಕೆಂಬ ಪಾಠವನ್ನು ನಾನು ಕಲಿತೆನು. ಅದರ ನಂತರದ ಸುದೀರ್ಘ ನಿರರ್ಗಳ ವಿರೋಧಿಯಿಂದ ಕಷ್ಟಸಹಿಷ್ಣುತಾ ಭಾವದ ಪಾಠವನ್ನು ಕಲಿಸಲು ತಕ್ಕುದಾಗಿದ್ದಂಥ ಅತ್ಯುತ್ತಮವಾದ ರೀತಿಯೂ ನಮ್ಮ ಶಿಬಿರದ "ಪ್ರಪಂಚ"ವೇ ಆಗಿತ್ತು!

ಅನುಮೋದ್ಯಾರ್ಹವಾದ ಆ ಹೊತ್ತಿಗೆಯನ್ನು ಮಾರಾಟ ಮಾಡುವ ಒಂದು ದಿನಕ್ಕೆ ಮುಂಚೆ ಅದರ ಪ್ರತಿಗಳನ್ನು ನಾವಾಗಿಯೇ Guild Hall ಇಲ್ಲಿಗೆ ಹೋಗಿ ನ್ಯಾಯಾಧೀಶರಿಗೂ ನಗರದ ಪೊಲೀಸ್ ಅಧಿಕಾರಿಗಳಿಗೂ ಲಂಡನ್‌ನ ನ್ಯಾಯವಾದಿ ಮುಖ್ಯಾಧಿಕಾರಿಗೂ ಕೊಟ್ಟೆವು. ಪ್ರತಿಯೊಂದು ಪ್ರತಿಗೆ ಬೆಲೆಯೂ ಒಂದು ಶೀಟಿಯಾಗಿತ್ತು ನಾವು ಮರುದಿನ, ಎಂದರೆ ಆ ವರ್ಷದ ಮಾರ್ಚ್ ೭ ರಂದು ಮಧ್ಯಾಹ್ನ ನಾಲ್ಕು ಗಂಟೆಗೆ ಅದರ ಪ್ರತಿಗಳನ್ನು ಮಾರಾಟ ಮಾಡುತ್ತೇವೆಂದು ಬರೆದಿದ್ದೆವು. ಇದನ್ನು ನಾವು ಕ್ರಮಪ್ರಕಾರ ನಡೆಸಿದನಂತರ,

ತೊಂದರೆಯನ್ನು ಕಡಿಮೆ ಮಾಡಲು ಮತ್ತು ಅಧಿಕಾರಿಗಳು ನಮ್ಮ ಮೇಲೆ ತಪ್ಪು ಹೊರಿಸಿ ವಿಚಾರಣೆಗೆ ಗುರಿಪಡಿಸುವುದಾದರೆ, ನಮ್ಮನ್ನು ಅವರಿಗೆ ಬಂಧಿಸಲು ಅನುಕೂಲವಾಗುವಂತೆ, ನಾವು ಪ್ರತಿದಿನವೂ ಬೆಳಿಗ್ಗೆ ಹತ್ತು ಗಂಟೆಯ ವೇಳೆಗೆ ಅಂಗಡಿಯಲ್ಲಿರುತ್ತಿದ್ದೆವು. ನಮ್ಮ ಈ ಕೋರಿಕೆಯನ್ನೆಲ್ಲ ನಿರ್ಭಯವಾಗಿ ಒಪ್ಪಲಾಯಿತು. ಸ್ವಲ್ಪ ಸಮಯದನಂತರ The Christian Evidence Society ಇದರ ಪರವಾಗಿ ಬಂದು ನಿಯೋಗವು ಟೋರಿ ಪಕ್ಷದ ಸರಕಾರಕ್ಕೆ ನಮ್ಮನ್ನು ವಿಚಾರಿಸಿ ತಕ್ಕ ಕ್ರಮವನ್ನು ಕೈಗೊಳ್ಳಬೇಕೆಂದು ಕೇಳಲು ಸಂಬಂಧಿಸಿದ ಮಂತ್ರಿ ಶ್ರೀ ಕ್ರಾಸ್ ಇವನಿಗಾಗಿ ಕಾದು ಕುಳಿತಿತ್ತು. ಅದರನಂತರ ನಮ್ಮನ್ನು ಬಂಧಿಸಲಿಕ್ಕಿರುವ ಪತ್ರಗಳನ್ನು ನಮ್ಮ ಕೈಗೆ ಕೊಡಿಸದಿಲ್ಲದೆ ಏಪ್ರಿಲ್ ತಿಂಗಳ ೬ನೇ ದಿನ ನಮ್ಮನ್ನು ಪೋಲೀಸರು ಗಿರಿಮತನಿಗೆ ಒಯ್ದರು. ನಮ್ಮ ನಿಲುವನ್ನು ಒಪ್ಪಿ ಪ್ರೋತ್ಸಾಹಿಸಿ ಮತ್ತು ನಮ್ಮನ್ನು ವಂದಿಸಿ ಮತ್ತು ಆಶೀರ್ವದಿಸಿ ಪ್ರಸಿದ್ಧ ಆರ್ಯ ಶಾಸ್ತ್ರಜ್ಞ ಜನರಲ್ ಗಾರಿಬಾಲ್ಡಿ, ಪ್ರಸಿದ್ಧ ಫ್ರೆಂಚ್ ಸ್ವತಂತ್ರ ಚಿಂತನಾ ತಜ್ಞ ಮಿ. ಯುವಿಸ್ ಗುಯಾಟ್ ಎಮಿಲ ಅಕೋಲಸ್ ಮತ್ತು ಇತರ ಹಲವು ಗಂಡಸರು ಮತ್ತು ಹೆಂಗಸರು ಪತ್ರಗಳನ್ನು ಬರೆದರು. ಅವರ ಜೊತೆ ಕ್ರೈಸ್ತ ಮತ ಬೋಧಕರ ಪತ್ನಿಯರೂ ವಿವಿಧ ವರ್ಗದ ಕ್ರೈಸ್ತ ಗುರುಗಳ ಪತ್ನಿಯರೂ ಬರೆದ ಪತ್ರಗಳೂ ಗಣನೀಯವಾಗಿದ್ದುವು.

ನಮ್ಮನ್ನು ಬಂಧಿಸಿದನಂತರ ಬ್ರೈಡ್‌ವೆಲ್ ಪೋಲೀಸ್ ಠಾಣ್ಯೆಕ್ಕೆ ಆನಂತರ ಗಿಲ್ಡ್‌ಹಾಲ್‌ಗೂ ಕೊಂಡೊಯ್ದರು. ಅಲ್ಲಿ ನಾವು ಪುರಸಭಾ ಸದಸ್ಯ ಫಿಗ್ಗಿನ್ಸ್ ಇವನ ಮುಂದೆ ನಿಲ್ಲಲೆಂದು ವಿಧಿಸಲಾಯಿತು. ಅಷ್ಟರಲ್ಲಿ ಬಿಷೋರಿಯ ಹಿಂಭಾಗದಲ್ಲಿ ಒಬ್ಬ ಪೋಲೀಸ್ ಅಧಿಕಾರಿಯ ಮಾತಿನಂತೆ "ಒಂದು ಗಾಡಿ ತುಂಬಾ ಜಾಮೀನು ನಿಲ್ಲುವ ಜನವಿಂದಿನಂತೆ" ಕಾದಿದ್ದರು. ಹೀಗೂ ನಮ್ಮನ್ನು ಬೇಗನೆ ಬಿಡುಗಡೆ ಮಾಡಿದರು. ನಮ್ಮ ಮೊದಲ ವಿಚಾರಣೆಯು ಹತ್ತು ದಿನಗಳನಂತರ, ಎಂದರೆ ಏಪ್ರಿಲ್ 17ನೇ ದಿನಕ್ಕೆ ಇಡಲಾಯಿತು, ಸರ್ವರಿಗೂ ನಮ್ಮನ್ನು ತಿಳಿದಿದ್ದ ಕಾರಣದಿಂದ ಆ ದಿನ ಸಾಯಂಕಾಲ ನ್ಯಾಯಾಧೀಶನು ನಮ್ಮನ್ನು ಜಾಮೀನು ಇಲ್ಲದೆಯೇ ಬಿಡುಗಡೆ ಮಾಡಿದನು. ನಾವು ಒಂದು ತತ್ವವನ್ನು ಹಿಡಿದು ಹೋರಾಡುವುದೆಂದು ಜನಕ್ಕೆಲ್ಲ ಚೆನ್ನಾಗಿ ತಿಳಿದಿದ್ದುದರಿಂದ ನಮ್ಮ ವಿಚಾರಣೆಯ ವಿವಿಧ ಹಂತದಲ್ಲಿ ನಮ್ಮನ್ನು ಬಿಡುಗಡೆ ಮಾಡಲು ಜಾಮೀನನ್ನು ಕೊಡಬೇಕೆಂದು ಅಧಿಕಾರಿಗಳು ಕೇಳಲಿಲ್ಲ. ಎರಡು ದಿನಗಳನಂತರ ನಮ್ಮ ವಿಚಾರಣೆಯು Central Criminal Court

ನಲ್ಲಿ ನಡೆಯುವುದೆಂದು ತಿಳಿಸಿದರು. ಆದರೆ ಬ್ರ್ಯಾಡ್ಲಾಯು ಒಂದು "ರಿಟ್" ಅರ್ಜಿಯ ಮೂಲಕ ನಮ್ಮ ವಿಚಾರಣೆಯನ್ನು Court of Queen's Bench ಇದರಿಂದ ಬೇರೆಡೆಗೆ ವರ್ಗಾಯಿಸಬೇಕೆಂದು ಕೇಳಿಕೊಂಡನು. ಪ್ರಧಾನ ನ್ಯಾಯಾಧೀಶ ಕಾಕ್‌ಬರ್ನ್ ಇವನು "ಸರ್ವರ ಆಚಾರ ಹಾಗೂ ಸೂತ್ರವಾಗಬೇಕಾದ ವಿಷಯದ ಮೇಲೆ ವಿಚಾರಜ್ಞಾನವನ್ನೀಯುವುದೇ ಇದರ ಉದ್ದೇಶವೆಂದು ಆ (ನಾಲ್ಟನ್) ಹೊತ್ತಗೆಯನ್ನು ನೋಡಿದಾಗ ತಿಳಿಯುತ್ತದೆಯಾದ್ದರಿಂದ ಈ ಅರ್ಜಿಯನ್ನು ಒಪ್ಪುತ್ತೇನೆ," ಆದರೆ ಇದರ ವಿವರಣೆಗೆಳಸಿ ಬರೀ ಅಶ್ಲೀಲತೆಯನ್ನು ಮರೆಯಾಗಿಸಿ ದ್ದಿಂದಾದರೆ ಒಪ್ಪಲಾರೆನು, ಎಂಬುದಾಗಿಯೂ ಹೇಳಿದನು. ಆ ವ್ಯಕ್ತಿ ಕದಿ ಪ್ರತಿಗಳನ್ನು ತನ್ನ ಮತ್ತು ನ್ಯಾಯಾಧೀಶ ಮೆಲ್ಲರ್ ಇವನ ವಶಕ್ಕೊಪ್ಪಿಸಬೇಕೆಂದು ಹೇಳಿದನು. ಇದಾದ ೭ ದಿನದನಂತರ ಅವರು ಆ Writ ಅರ್ಜಿಯನ್ನು ಒಪ್ಪಿ ಮನ್ನಿಸಿದರು.

ಜೂನ್ ೧೮ ರಲ್ಲಿ ಇಂಗ್ಲೆಂಡಿನ ಪ್ರಧಾನ ನ್ಯಾಯಾಧೀಶ ಮತ್ತು ಇದಕ್ಕಾಗಿ ನೇಮಿತವಾದ ಒಂದು ಪ್ರತ್ಯೇಕ ಪಂಚಾಯತು ಸದಸ್ಯರ ಸಮ್ಮುಖದಲ್ಲಿ ವಿಚಾರಣೆಯು ನಡೆಯಿತು. ಬ್ರಿಟಿಷ್ ಸರಕಾರದ Solicitor-General ಇವನು ನಮಗೆ ವಿರೋಧವಾಗಿ ವಾದಿಸಿದನು. ನಮ್ಮ ಪರವಾಗಿ ನಾವೇ ವಾದಿಸಿದೆವು. ದಿನನಿತ್ಯ ಬೆಳಿಗ್ಗೆ ಪ್ರಕಟವಾಗುತ್ತಿದ್ದ ಪತ್ರಿಕೆಯೊಂದು ಹೇಳಿದಂತೆ ಪ್ರಧಾನ ನ್ಯಾಯಾಧೀಶನು ಈ ಮೊಕದ್ದಮೆಯ ಹುರುಳನ್ನು ಕೇಂದ್ರೀಕರಿಸಿ ಅದನ್ನು ಖುಲಾಸೆ ಮಾಡಬೇಕೆಂದು ಹೇಳಿದನು, "ಇದಕ್ಕಿಂತ ಅಸಮಂಜಸವೂ ಅವಿವೇಕವೂ ಆದ ವ್ಯಾಜ್ಯವನ್ನು ನ್ಯಾಯಾಲಯದಲ್ಲಿ ವಿಚಾರಣೆಗೆಂದು ಬಹುಶಃ ಕೊಂಡು ಹೋದಂತೇ ಇಲ್ಲ," ಎಂಬುದಾಗಿ ಹೇಳಿ, "ಸಮಾಜದ ಈ ವಿಶಿಷ್ಟ ಕ್ಷೇತ್ರದಲ್ಲಿ ತಮ್ಮ ಪಾಲಿನ ಸೇವೆಯನ್ನು ಸಲ್ಲಿಸಲು ನಿರತರಾದ ಇವರು ಉತ್ಸಾಹಿಗಳು" ಎಂಬುದಾಗಿ ನಮ್ಮ ಬಗ್ಗೆ ಹೇಳಿದನು. ಅದರ ನಂತರ ಜನಸಂಖ್ಯೆಯ ವಿಧಿನಿಯಮಗಳನ್ನು ಕುರಿತು ಅಮೋಘವಾದ ಹೇಳಿಕೆಯನ್ನು ಕೊಡುತ್ತಾ, ನಾಲ್ಟನಿನ ಸದುದ್ದೇಶವನ್ನು ಪ್ರತಿಷ್ಠೀಕರಿಸುತ್ತಾ ಕಟ್ಟಕಡೆಗೆ ನಮ್ಮ ದಿಟ್ಟತನದ ಕಾರ್ಯಕ್ರಮವನ್ನು ಮೆಚ್ಚಿ ಶ್ಲಾಘಿಸಿದನು. ನ್ಯಾಯಾಲಯದಲ್ಲಿದ್ದ ಪ್ರತಿಯೊಬ್ಬನೂ ನಾವು ಈ ಮೊಕದ್ದಮೆಯಲ್ಲಿ ಜಯವನ್ನು ಪಡೆಯುವೆವು ಎಂದು ಭಾವಿಸಿದ್ದನು. ಆದರೆ ನಮ್ಮ ವಿರೋಧ ಮತೀಯ ಮತ್ತು ರಾಜಕೀಯ ದ್ವೇಷವನ್ನು, The Times ಪತ್ರಿಕೆಯ ಶ್ರೀ ವಾಲ್ಟರ್ ಇವನಂಥವರು ಆ ಪಂಚಾಯತಿಯಲ್ಲಿದ್ದುದನ್ನು ಅವರು ತಿಳಿದಿರಲಿಲ್ಲ. ಸುಮಾರು ಒಂದೂವರೆ ಗಂಟೆಯ ನಂತರ ನ್ಯಾಯಾಲಯದ ತೀರ್ಮಾನವು ಬರೀ ರಾಜಿ ಒಡಂಬಡಿಕೆಯ ರೂಪದಲ್ಲಿತ್ತು. "ಈ (ನಾಲ್ಟನ್) ಹೊತ್ತಗೆಯು ಸಾರ್ವಜನಿಕ ಆಚಾರ ನೀತಿಯನ್ನು ಕೆ

ಕೆಡಿಸುವುದೆಂಬುದಾಗಿ ನಾವು ಸಮಾಧಾನದಿಂದ ನಂಬುತ್ತೇವೆ; ಹಾಗಿದ್ದರೂ ಅದನ್ನು ಪ್ರಕಟಿಸಿದ್ದರಿಂದ ಯಾವೊಂದು ಕೆಟ್ಟ ಉದ್ದೇಶವೂ ಪ್ರತಿವಾದಿಗಳಲ್ಲಿ ಇದ್ದಿಲ್ಲವಾದುದರಿಂದ ನಾವು ಅವರನ್ನು ಪೂರ್ತಿಯಾಗಿ ಖುಲಾಸು ಮಾಡುತ್ತೇವೆ," ಎಂಬುದಾಗಿ ಹೇಳಿದರು. ಪ್ರಧಾನ ನ್ಯಾಯಾಧೀಶರು ಕಳವಳಗೊಂಡವನಂತೆ ಇದ್ದರು. ಕೂಡಲೇ ಈ ತೀರ್ಮಾನವನ್ನು ನಾವು ಅಪರಾಧಿಗಳೆಂದು ಪರಿವರ್ತಿಸಬೇಕಾಗುವುದೆಂದು ಅವರು ಹೇಳಲು ಪಂಚಾಯತಿಯಲ್ಲಿದ್ದ ಕೆಲವರು ಎದ್ದು ಹೋಗಲು ಪ್ರಯತ್ನಿಸಿದರು. ಅನಂತರ ಅವರಲ್ಲಿ ಇಬ್ಬರಿಂದ ನಮಗೆ ತಿಳಿದುಬಂದುದೇನೆಂದರೆ ನ್ಯಾಯಾಲಯವು ನಮ್ಮನ್ನು ಅಪರಾಧಿಗಳೆಂದು ನಿರ್ಣಯಿಸಿದರೆ ಅವರು ಪುನ: ಕುಳಿತು ಸ್ವಂತ ಪರಿಶೀಲನೆಯನ್ನು ನಡೆಸಬೇಕೆಂದೂ ಪಂಚಾಯತುಗಳಲ್ಲಿ ಆರು ಜನ ನಮ್ಮನ್ನು ಅಪರಾಧಿಗಳೆಂದು ಪರಿಗಣಿಸಲು ವಿರೋಧವಿದ್ದಾರೆಂದೂ ತಿಳಿದುಬಂತು. ಆದರೆ ಬಹು ತೀವ್ರವಾಗಿ ನಮಗೆ ವಿರೋಧವಿದ್ದ ಪಂಚಾಯತ್ತರ ಮುಖಂಡನು ನಮ್ಮನ್ನು ಶಿಕ್ಷೆಗೊಳಪಡಿಸುವ ಮಾತು ಬಂದಾಗ ನಮಗೆ ದಂಡನೆಯನ್ನು ವಿಧಿಸಬೇಕೆಂದು ಪಕ್ಕನೆ ಎದ್ದು ಹೇಳಿದನು. ಅದಕ್ಕೆ ವ್ಯತಿರಿಕ್ತವಾಗಿ ನಮ್ಮ ಪರವಿದ್ದ ಪಂಚಾಯತಿ ಸದಸ್ಯರಿಗೆ ಆ ವೇಳೆಯಲ್ಲಿ ಮಾತಾಡಲು ಧೈರ್ಯವಿಲ್ಲದಂತಾಯಿತು. ಅಂತಾಗಲು ಆ ಪ್ರಧಾನ ಪಂಚಾಯತನು ನಮ್ಮನ್ನು ಅಪರಾಧಿಗಳೆಂಬುದಾಗಿ ಹೇಳಿದನ್ನು ಒಪ್ಪಲಾಯಿತು. ಅದರನಂತರ ಬ್ರ್ಯಾಡ್ಲೆಯ ಪರಿಚಯವು ಎಲ್ಲರಿಗೂ ಇದ್ದ ಕಾರಣದಿಂದ ನಮ್ಮನ್ನು ಒಂದು ವಾರದನಂತರ ನ್ಯಾಯಾಲಯಕ್ಕೆ ಬಂದು ತೀರ್ಮಾನವೇನಾಗುವುದೆಂದು ಕೇಳಿಕೊಳ್ಳಲೆಂದು ಹೇಳಿ ನ್ಯಾಯಾಧೀಶರು ನಮ್ಮನ್ನು ಅಲ್ಲಿಂದ ಕಳುಹಿಸಿದರು.

ಈ ತೀರ್ಮಾನವನ್ನು ಲಾಕ್ಷಣಿಕ ವಿಧಿಗನುವಾಗಿಯೂ, ದುರುದ್ದೇಶವನ್ನು ನಮಗೆ ಕಲ್ಪಿಸಿ ನಮ್ಮನ್ನು ಬಿಡುಗಡೆ ಮಾಡಿದರೂ ನ್ಯಾಯಾಲಯದ ತೀರ್ಪು ನಮಗೆ ಅನುಕೂಲವಾಗಿ ಇದೆಯಲ್ಲದೆ ವಿರೋಧವಾಗಿ ಇಲ್ಲವೆಂಬುದಾಗಿಯೂ ನಾವು ವಾದಿಸಿ ನಮ್ಮ ಮೇಲೆ ಹೊರಿಸಿದ ಆರೋಪಣೆಯನ್ನು ರದ್ದುಗೊಳಿಸಿ ಪುನ: ವಿಚಾರಣೆ ನಡೆಸಬೇಕೆಂಬುದಾಗಿ ಸೂಚಿಸಿದೆವು. ದುರುದ್ದೇಶದಿಂದ ಆರೋಪಣೆಯನ್ನು ಹೊರಿಸಿದ್ದು ಎಂದು ಹೇಳುವುದು ಅನವಶ್ಯಕವಾದ ಮಾತೆಂದು ಹೇಳುತ್ತಾ ನಮ್ಮ ಕೋರಿಕೆಯನ್ನು ಕೋರ್ಟು ಒಪ್ಪಲಿಲ್ಲ. ಅನಂತರ ಯಾವ ಶಿಕ್ಷೆಯನ್ನು ನಮಗೆ ವಿಧಿಸಬೇಕೆಂಬ ಪ್ರಶ್ನೆಯು ಬಂತು. ನಮ್ಮನ್ನು ನಿರಪರಾಧಿಗ

ಯಿಂದ ಬಿಡುಗಡೆ ಮಾಡಲು ಪ್ರಧಾನ ನ್ಯಾಯಾಧೀಶರು ತಡಬಾ ಪ್ರಯತ್ನಿಸಿದರು. ಖಾನೂನನ್ನು ಮುರಿಯುವ ಉದ್ದೇಶವು ನಮಗೆ ಇರಲಿಲ್ಲವೆಂಬ ತೀರ್ಮಾನದಿಂದ ನಮ್ಮನ್ನು ಬಿಡುಗಡೆ ಮಾಡಿದರು. ಆದರೆ ಪಂಚಾಯತ್ತರ ತೀರ್ಮಾನಂತೆ ನಾವು ಆ (ಸಾಲ್ಟನ್) ಹೊತ್ತಿಗೆಯನ್ನು ಮಾರಾಟ ಮಾಡಲಾರೆವೆಂದು ಮಾತು ಕೊಡಬೇಕೆಂದು ಹೇಳಿದರೆ ನಾವು ಒಪ್ಪುತ್ತೇವೆಯೇ? ಇಲ್ಲ, ನಾವು ಒಪ್ಪಲಾರೆವು! ಅದನ್ನು ಮಾರಾಟ ಮಾಡುವ ಹಕ್ಕು ನಮಗಿದೆಯೆಂದೂ ಆ ಹಕ್ಕನ್ನು ಚಲಾಯಿಸುತ್ತೇವೆ ಎಂದೂ ನಾವು ಹೇಳಿದೆವು. ನ್ಯಾಯಾಧೀಶರು ನಮ್ಮೊಡನೆ ಆ ವಿಷಯ ಮಾತಾಡಿದರು; ವಾದಿಸಿದರು; ನಮ್ಮಲ್ಲಿ ಕೋಪಗೊಂಡರು. ಹೇಗೂ ನಮಗೆ ಶಿಕ್ಷೆಯನ್ನು ವಿಧಿಸಬೇಕೆಂಬ ತೀರ್ಮಾನನ್ನು ಅವರು ಕೈಕೊಳ್ಳಬೇಕಾಯಿತು. ನಾವು ನಮ್ಮ ವರ್ತನೆಯ ಬಗೆ ಒಪ್ಪಿದರೆ ನಮಗೆ ಯಾವ ಶಿಕ್ಷೆಯನ್ನು ವಿಧಿಸದೆ ಹೋಗಗೊಡುವೆನೆಂದು ಅವರು ಹೇಳಿದರು. ನಾವಾದರೋ ಖಾನೂನಿಗನುವಾಗಿ ನಮ್ಮದು ಅಪರಾಧವೆಂದಾದರೆ ಆ ಖಾನೂನನ್ನು ನಾವು ವಿರೋಧಿಸುತ್ತೇವೆ, ಅದನ್ನು ಮುರಿಯುತ್ತೇವೆ, ಮತ್ತು ಪ್ರತಿಭಟಿಸುತ್ತೇವೆ, ಎಂಬುದಾಗಿ ಹೇಳಿದೆವು. ಪರಿಣಾಮವಾಗಿ ನಾವು ಪ್ರತಿಯೊಬ್ಬರನ್ನು ಆರು ತಿಂಗಳ ಸಜೆ, ೨೦೦ ಪೌಂಡುಗಳ ದಂಡ ಮತ್ತು ಎರಡು ವರ್ಷಗಳಿಗೆ ೨೦೦ ಪೌಂಡುಗಳ ಭದ್ರತಾ ಹಣವನ್ನು ಕಟ್ಟಬೇಕೆಂಬ ಪ್ರಬಲ ಶಿಕ್ಷೆಯನ್ನು ವಿಧಿಸಿದರು. ನಾವು ಖಾನೂನಿಗೆ ವ್ಯತಿರಿಕ್ತವಾಗಿ ಹೋದರೆ ಮಾತ್ರ ಈ ತೀರ್ಪು ಎಂದೂ ಪ್ರಕಟಗೊಳ್ಳಲಾಯಿತು. ನಮ್ಮನ್ನು ಹೇಗೂ ಮೊದಲನೇ ದರ್ಜೆಯ ಕೈದಿಗಳಾಗಿ ಪರಿಗಣಿಸಲು ನ್ಯಾಯಾಧೀಶರ ಆಜ್ಞೆಯಾಯಿತು. ಅದರನಂತರ ಪ್ರ್ಯಾಕ್ಟೀಸಿ ಒಂದು Writ of Error ಎಂಬ ಅರ್ಜಿಯನ್ನು ನಾವು ಒಪ್ಪಿಸಬೇಕೆಂದು ಅಭಿಪ್ರಾಯಪಟ್ಟನು, ಹೇಗೂ ನ್ಯಾಯಾಲಯವು ಶಾಲ್ಟನ್ ಪ್ರ್ಯಾಕ್ಟೀಸು ಪ್ರಭಾವವನ್ನು ಮನ್ನಿಸಿ ಮತ್ತು ನಮ್ಮ ಮೊಕದ್ದಮೆ ಮತ್ತು ವ್ಯಕ್ತಿಗತ ಗತಿಗಳ ಮೇಲೆ ವಿಲಕ್ಷಣವಾದ ದೀಕ್ಷೆಯನ್ನು ವಿಮುಂದಿಟ್ಟು ನಾವು ಪ್ರತಿಯೊಬ್ಬರಿಗೆ ನೂರು ಪೌಂಡುಗಳ ಭದ್ರತಾಹಣವನ್ನು ವಿಧಿಸಿ ತಾತ್ಕಾಲಿಕವಾಗಿ ನಮ್ಮನ್ನು ಬಿಡುಗಡೆ ಮಾಡಿದ್ದರಿಂದ ಜತೆಗೆ ನಮ್ಮ ಸೆರೆಮನೆವಾಸದ ಶಿಕ್ಷೆಯನ್ನು ಬಿಡು ನಾವು ಒಟ್ಟಾಗಿ 1400 ಪೌಂಡುಗಳನ್ನು ಕಟ್ಟಬೇಕಾಗಿದ್ದಿತು, ಹೇಗೂ ಸೆರೆಮನೆ ವಾಸ ಮತ್ತು ಹಣವನ್ನು ದಂಡವಾಗಿ ತೆರಬೇಕೆಂಬ ಶಿಕ್ಷೆಯಿಲ್ಲ ಗಾಳಿಯಲ್ಲಿ ತೇಲಿಹೋಯಿತು; ಏಕೆಂದರೆ Writ of Error ಅರ್ಜಿ

ಯನ್ನು ನ್ಯಾಯಾಲಯವು ಮನ್ನಿಸಿತು. ಅದನ್ನು ಕುರಿತು ಮಾಡಿದ ವಿಷಯಗಳು ನಮಗೆ ಅನುಕೂಲವಾಗಿ ಪರಿಣಮಿಸಿದುವು; ಅಲ್ಲದೆ ಹಿಂದೆ ಇತ್ತ ತೀರ್ಪನ್ನು ರದ್ದುಗೊಳಿಸಲಾಯಿತು.

ಇದಲ್ಲದೆ ಅದರನಂತರ ಕೆಲಕಾಲ ನಾವು ಇದೊಂದು ಬಗೆಯ ಮನೋವ್ಯಾಕುಲತೆಗೆ ಸಿಲುಕಿದೆವು; ಆ ಪುಸ್ತಕದ ಮಾರಾಟವನ್ನು ಮುಂದುವರಿಸಿದೆವು. ಆದರೆ ನಮ್ಮ ವಿರೋಧಿಗಳು ಅಷ್ಟೇ ಹಟದಿಂದ ನಮ್ಮನ್ನು ಪುನಃ ವಿಚಾರಣೆಗೆ ಗುರಿಪಡಿಸಲು ಆಲೋಚಿಸಿದ್ದರೇ? ಇದನ್ನು ನಮಗೆ ಹೇಳಲು ಸಾಧ್ಯವಿಲ್ಲ. "ಜನಸಂಖ್ಯೆಯನ್ನು ಕುರಿತಾದ ಶಾಸನ" (Law of population) ಎಂಬ ಕಿರು ಹೊತ್ತಿಗೆಯನ್ನು ಬರೆದೆನು. ಅದರಲ್ಲಿ ದೊಡ್ಡ ಸಂಸಾರವನ್ನು ಕಟ್ಟಿಕೊಂಡು ಚಿಕ್ಕ ಸ್ಥಿತಿಯಲ್ಲಿ ತಮ್ಮ ಜೀವನಕ್ಕೆ ಬೇಕಾದ್ದನ್ನು ಒದಗಿಸಲು ಅನುಕೂಲವಿಲ್ಲದೆ ಜನರು ಪಡುತ್ತಿರುವ ಕಷ್ಟಗಳನ್ನು, ಅವರ ಅವ್ಯವಸ್ಥೆಯ ಜೀವನವನ್ನು ಕುರಿತು ವಿವರಿಸಿದೆನು. ವೇಶ್ಯಾವೃತ್ತಿಯನ್ನು ಕಿತ್ತುಹಾಕಲು ಎಳೆಪ್ರಾಯದಲ್ಲಿಯೇ ವಿವಾಹವಾಗಬೇಕೆಂದೂ ಬಡತನವನ್ನು ನಿವಾರಿಸಲು ಕುಟುಂಬವು ಒಂದು ಮಿತಿಯೊಳಗೆ ಇರಬೇಕೆಂದೂ ಪ್ರತಿಪಾದಿಸಿದೆನು, ಕಡೆಗೆ ಆ ಅನಿಷ್ಟ ಪ್ರವೃತ್ತಿಗಳಿಗೆ ಎಡೆಯಿಲ್ಲದೆಯೇ ಎಳೆ ಪ್ರಾಯದಲ್ಲಿ ಮದುವೆಯಾಗುವುದರಲ್ಲಿರುವ ಸಾಧ್ಯತೆಯ ಬಗ್ಗೆ ವಿವರಗಳನ್ನಿತ್ತೆನು. ಈ ವಿಷಯಗಳು ನನ್ನ ಸ್ವಂತ ಅಭಿಪ್ರಾಯಗಳೆಂಬುದಾಗಿ ಆ ಹೊತ್ತಿಗೆಯಲ್ಲಿ ಬರೆದು ಅದನ್ನು ಮಾರಾಟಕ್ಕಿಡಲಾಯಿತು. ಅದರೊಡನೆಯೇ, ನೋಲ್ಟನ್ನಿನ ಹೊತ್ತಿಗೆಯನ್ನು ಪುನಃ ಮಾರಾಟಕ್ಕಿಟ್ಟೆವು. ಬ್ರಾಡ್ಲೊಯು ತನ್ನ ಹೋರಾಟವನ್ನು ತನ್ನ ವೈರಿಗಳತ್ತ ಸಾಗಿಸಿ ಪೋಲೀಸರು ನಮ್ಮಿಂದ ಕಿತ್ತುಕೊಂಡ ಪುಸ್ತಕಗಳನ್ನು ಮರಳಿ ಪಡೆಯಲಿಕ್ಕೆ ಪ್ರಯತ್ನಿಸಿದನು. ಅವನ ಈ ಪ್ರಯತ್ನವು ಜಯಪ್ರದವಾಯಿತು. ಆ (ನೋಲ್ಟನ್) ಹೊತ್ತಿಗೆಗಳನ್ನು ಮರಳಿ ಪಡೆದನು. ಜಯಭೇರಿ ಸಹಿತ ಅವುಗಳನ್ನು ಹೊತ್ತು ತಂದನು; ಹಾಗೆ ತಂದ ಪ್ರತಿಗಳ ಮೇಲೆ "ಪೋಲೀಸ್ ವಶದಿಂದ ಮರಳಿ ಪಡೆದುದು" ಎಂಬುದಾಗಿ ಬರೆದು ಮಾರಾಟ ಮಾಡಿದೆವು. ಕೆಲಕಾಲ ನೋಲ್ಟನ್ನನ ಪುಸ್ತಕವನ್ನು ಹೀಗೆ ಪ್ರಚಾರಪಡಿಸಿದೆವು. ಅಷ್ಟರಲ್ಲಿ ಅದರ ಮೇಲೆ ಇನ್ನು ಮುಂದಕ್ಕೆ ಕ್ರಮವನ್ನು ತೆಗೆದುಕೊಳ್ಳುವುದಿಲ್ಲವೆಂಬುದನ್ನು ತಿಳಿದಾಗ ಅದರ ಪ್ರಕಟಣೆಯನ್ನು ನಿಲ್ಲಿಸಿ ಅದರ ಬದಲಾಗಿ ನನ್ನ Law of Population – ಇದನ್ನು ಪ್ರಚಾರಪಡಿಸಿದೆವು.

ಆದರೆ ನನ್ನ ಪಾಲಿಗೆ ಈ ಹೋರಾಟವು ಇನ್ನೂ ಮುಂದುವರಿಯುವಂತಿತ್ತು. Law of Population – ಈ ಹೊತ್ತಿಗೆಯ

ಮೇಲೆ ಸರಕಾರವು ತನ್ನ ಕ್ರಮವನ್ನು ತೆಗೆದುಕೊಳ್ಳುವುದೆಂಬುದಾಗಿ ಹೆದರಿಸಿದ್ದರು. ಆದರೆ ಅದರ ವಿಚಾರಣೆಗೆ ಆರಂಭವಾಗಲಿಲ್ಲ. ನನ್ನ ವಿರೋಧವಾಗಿ ಉಪಯೋಗಿಸಲು ನಮ್ಮ ವಿರೋಧಿಗಳಿಗೆ ಹಿಂದಿನ ಅಸಹ್ಯವಾದ ಅಸ್ತ್ರವು ಇತ್ತು. 1875ರ ಆಗಸ್ಟಿನಲ್ಲಿ ನನ್ನ ಚಿಕ್ಕ ಮಗಳು ತಾನು ಪ್ರತಿ ವರ್ಷವೂ ಹೋಗುತ್ತಿದ್ದ ರೀತಿಯಲ್ಲಿ ಒಂದು ತಿಂಗಳು ಕಾಲವನ್ನು ತನ್ನ ತಂದೆಯೊಡನೆ ಕಳೆಯಲಿಕ್ಕೆಂದು ಹೋಗಿದ್ದಳು. ಆಗ ಅವಳನ್ನು ನನ್ನ ವಶದಿಂದ ತಪ್ಪಿಸಲೆಂದು ಅಡಗಿಸಿಟ್ಟಿದ್ದರು. ನಾನು Writ of habeus Corpus ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ ಅವಳನ್ನು ಮರಳಿ ಪಡೆಯುವೆನೆಂದು ಗದರಿಸಿದೆನು. ನಾಲ್ಟನ್ನನ ಪುಸ್ತಕದ ಬಗ್ಗೆ ನಡೆಸಿದ ನಿಂದನೀಯವಾದ ಆಪಾದನೆಯನ್ನೂ ಈಗ ನನಗೆ ವಿರೋಧವಾಗಿ ಉಪಯೋಗಿಸಬಹುದೆಂದು ಬಗೆದು ಕೆಲವರು ನನ್ನತ್ತ "ಎರಡು ಕೊಳ್ಳಿಗಳ ಕೋವಿ"ಯನ್ನು ತೋರಿಸುತ್ತಿದ್ದರು. ನನ್ನ ಮಗುವನ್ನು ನನ್ನ ವಶದಿಂದ ಬಿಡಿಸುವ ಬಗ್ಗೆ High Court of Chancery ಇದರಲ್ಲಿ ವಿಚಾರಣೆಗಿರಿಸಲಾಗಿದೆಯೆಂಬುದಾಗಿ ಹಿಂದು ಪತ್ರವು 1878ರ ಜನವರಿಯಲ್ಲಿ ನನ್ನ ಕೈಸೇರಿತು. ಆದರೆ ಆ ವ್ಯವಹಾರವನ್ನು ಏಪ್ರಿಲ್ ತಿಂಗಳ ವರೆಗೂ ತೆಗೆದುಕೊಳ್ಳಲಿಲ್ಲ. ನನ್ನ ಮಗಳು ಮೇಬಲ್ಲಳು ಭಯಂಕರ ಕೆಂಪು ಜ್ವರಕ್ಕೊಳಗಾಗಿ ಬಿದ್ದಿದ್ದಳು. ಈ ವಿಷಯವಾಗಿ ಅವಳ ತಂದೆಗೆ ತಿಳಿಸಲಾಯಿತಾದರೂ ಅದಕ್ಕೆ ಉತ್ತರವು ನನ್ನ ಮಗಳೊಡನೆ ನಾನು ಹಾಸಿಗೆಯಲ್ಲಿರುತ್ತಿದ್ದಾಗ ನನ್ನ ಕೈಸೇರಿತು. ಅದರಲ್ಲಿ ಹೀಗೆ ಹೇಳಲಾಗಿತ್ತು:—

"--- ಇದರಲ್ಲಿ ನಮೂದಿಸಲಾದ ಆನಿ ಬೆಸೆಂಟ್ ಇವಳು The Gospel of Atheism ಎಂಬ ಪುಸ್ತಕವನ್ನು ಪ್ರಕಟಿಸಿ ಆ ಮೂಲಕವಾಗಿ ನಾಸ್ತಿಕವಾದವನ್ನು ಪ್ರಚಾರ ಪಡಿಸುತ್ತಾ, ಭಾಷಣಗಳನ್ನು ಕೊಡುತ್ತಾ, ಲೇಖನಗಳನ್ನು ಬರೆಯುತ್ತಾ, ಇರುವಳು. ಹಿವರ ನಿರೀಶ್ವರವಾದಿ ಗ್ರಂಥಕರ್ತನೂ ಭಾಷಣಕಾರನೂ ಆದ ಚಾರ್ಲ್ಸ್ ಬ್ರಾಡ್ಲೆಯೆಂಬುವನೊಡನೆ ಸೇರಿ ಅವಳು ಉಪನ್ಯಾಸವನ್ನು ಮಾಡುತ್ತಾ, ಲೇಖನಗಳನ್ನೂ ಪುಸ್ತಕಗಳನ್ನೂ ಪ್ರಕಟಿಸುತ್ತಾ, ಕ್ರೈಸ್ತಮತದಲ್ಲಿರುವ ಸತ್ಯತೆಯನ್ನು ಕಡೆಗಣಿಸುತ್ತ, ಮತಧರ್ಮಗಳಲ್ಲಿ ಅವಿಶ್ವಾಸವನ್ನು ಮೊಳಗಿಸಲು ಯತ್ನಿಸುವಳು."

ಮುಂದುವರಿಯುತ್ತಾ, ಅದು ನಾಲ್ಟನ್ ಹೊತ್ತಗೆಯನ್ನು ಪ್ರಕಟಿಸಿದ್ದನ್ನೂ, Law of Population - ಇದನ್ನು ಕರ್ತೆಯಾಗಿ ಬರೆದುದನ್ನೂ ಆಪಾದನೆಗೊಳಗಾಗಿಸಿತು. ದುರದೃಷ್ಟವಶಾತ್ ಈ ಮೊಕದ್ದಮೆಯೂ ಯೆಹೂದ್ಯ ಮತಕ್ಕೆ ಸೇರಿದ್ದ ಅಂಧಾಭಿಮಾನಿಯಾಗಿ ಹಳೆ ಕಾಲದ ವಾದವನ್ನು ಎತ್ತಿ ಹಿಡಿಯುತ್ತಿದ್ದ ಸರ್ ಜಾರ್ಜ್ ಜೆಸ್ಸೆಲ್, Master of the Rolls - ಇವನಿಂದ ವಿಚಾರಣೆ ನಡೆಸಲ್ಪಡು

ತಾಯಿತು. ಇವನು ಪ್ರಾರಂಭಿಕ ಮಾನವನ ಸಂದರ್ಭ ಸಾಧನೆಯು ತನ್ನ ವನ್ನು ನಂಬುತ್ತಾ, ಸತ್ಯನಿಷ್ಠೆಯಿಂದ ಕೂಡಿದ ವಿಚಾರಗಳಲ್ಲಿ ಸಂಪೂರ್ಣ ಗ್ರಸ್ತನಾಗುತ್ತಾ, ಜನಕ್ಕೆ ಪ್ರಿಯವಲ್ಲದ ವಿಷಯಗಳು ಮತ್ತಿಗೆ ಪ್ರಮಾಣಬದ್ಧ ದುಡಿಯುವುದನ್ನು ತುಚ್ಛವಾಗಿ ಕಾಣುತ್ತಾ ಇದ್ದನು, ನಾನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಅವನ ಮುಂದೆ ನಿಂತಿದ್ದಾಗ ಅವನು ನನ್ನನ್ನು ಕಂಡ ರೀತಿಯಿಂದ ನಾನು ಅವನಿಂದ ಏನನ್ನು ನಿರೀಕ್ಷಿಸಬಹುದೆಂಬುದನ್ನು ಸೂಚಿಸಿತು. ಕೆಲವು ಆಂಗ್ಲ ನ್ಯಾಯಾಧೀಶರ ಅನುಭವವು ನನಗೆ ಆದಾಗಲೇ ತಿಳಿದಿತ್ತು. ಪ್ರಧಾನ ನ್ಯಾಯಾಧೀಶನ ದಯೆ, ಸಭ್ಯತೆ ಮತ್ತು Lord Justices of Appeal ಇವರ ನಿಷ್ಪಕ್ಷಪಾತ ವರ್ತನೆ ಮತ್ತು ಗಂಭೀರ ವಿನಯವನ್ನು ಅರಿತಿದ್ದೆನು. ನ್ಯಾಯಾಧೀಶ ಇನ್ನೂ ಇವನ ಹೇಳಿಕೆಗೆ ಉತ್ತರಿಸುತ್ತಾ ನಾನೇ ಸ್ವತಃ ಅಲ್ಲಿ ಹಾಜರಿರುವೆನೆಂದು ಹೇಳಿದಾಗ ಅವನು ಕಠಿಣವಾಗಿ ಉದ್ಗಾರವೆತ್ತಿ, ಅರಚಿದಾಗ ನನಗಾದ ಆಶ್ಚರ್ಯವನ್ನು ಯಾರೂ ಊಹಿಸಿಕೊಳ್ಳಬಹುದು, ಅವನು ಹೀಗೆ ಬೊಬ್ಬಿಟ್ಟನು:—

"ಸ್ವತಃ ಹಾಜರಿರುವುದೆ? ಓರ್ವ ಮಹಿಳೆಯು ತಾನಾಗಿಯೇ (ನ್ಯಾಯಾಲಯಕ್ಕೆ) ಬರುವುದೆ? ಇಂಥದ್ದನ್ನು ನಾನು ಕೇಳಿಯೇ ಇರಲ್ಲ! ಮಹಿಳೆಯೊಬ್ಬಳು ನಿಜವಾಗಿಯೂ ಸ್ವತಃ ಇಲ್ಲಿ ಹಾಜರಿರುವಳೇ?"

ಆದರೆ ಲಂಡನ್ನಿನ ಪತ್ರಿಕೆಗಳಲ್ಲಿ ನಾನೇ ಸ್ವತಃ ನ್ಯಾಯಾಲಯಗಳಿಗೆ ಹೋದುದೂ ನನ್ನ ಮೊಕದ್ದಮೆಯ ಬಗ್ಗೆ ನಾನೇ ವಾದಿಸಿದಾಗ ಪ್ರಧಾನ ನ್ಯಾಯಾಧೀಶನು ನನ್ನನ್ನು ಶ್ಲಾಘಿಸಿದ್ದೂ ಪ್ರಕಟವಾಗಿ ಎಲ್ಲರಿಗೂ ತಿಳಿದಿರುವಾಗ ಸರ್ ಜಾರ್ಜ್ ಜೆಸ್ಸೆಲನ ಆಶ್ಚರ್ಯ ಪ್ರಕಟಣೆಯು ನಟನೆಯು ಹೆಚ್ಚಾದಂತೆ ತೋರಿತು. ಹೀಗೆ ವಿವಿಧ ಟೀಕೆಗಳನ್ನು ವ್ಯಂಗ್ಯವೂ ಕರ್ಕಶವೂ ಆದ ಧ್ವನಿಯಲ್ಲಿ ಮತ್ತು ಕಠೋರ ರೀತಿಯಲ್ಲಿ ಮಾಡಿದ ನಂತರ ಸರ್ ಜಾರ್ಜ್ ಜೆಸ್ಸೆಲ್ ಇವನು ನನಗೆ ಚಿಕ್ಕನೆ ಮಂಕುಬೂದಿಯನ್ನೆರಚಿ ಅವನ ಉದ್ದೇಶವನ್ನೇ ಜಾರಿಸಿ ಬಿಟ್ಟಿಸಿದನು.

"ಇದೇ ಮಹಿಳೆಯೇ?" ಅವನೆಂದನು.

'My lord, ನಾನು ಪ್ರತಿವಾದಿ ಶ್ರೀಮತಿ ಬಿಸೆಂಟ್."

"ಹಾಗಾದರೆ ಶ್ರೀಮತಿ ಬಿಸೆಂಟ್, ನಿಮ್ಮ ಪರವಾಗಿ ವಾದಿಸಲು ನಿಮಗೆ ಸಾಧ್ಯವಾದರೆ ಓರ್ವ ವಕೀಲನನ್ನು ನೇಮಿಸುವುದು ಹಿತವೆಂದು ಹೇಳಬಯಸುತ್ತೇನೆ, ಇದು ನಿಮಗೆ ಸಾಧ್ಯವೆಂದು ನಾನು ನಂಬುತ್ತೇನೆ."

'ನ್ಯಾಯಮೂರ್ತಿಗಳ ಸನ್ನಿಧಿಯಲ್ಲಿ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ ನನ್ನ ಮೊಕದ್ದಮೆಯನ್ನು ನಾನೇ ಸ್ವತಃ ವಾದಿಸುವ ಹಕ್ಕನ್ನು ಕೋರುತ್ತಿದ್ದೇನೆ."

"ನಿಮಗೆ ಇಚ್ಛೆಯಿದ್ದರೆ ಹಾಗೆಯೇ ಮಾಡಬಹುದು. ಆದರೂ ಓರ್ವ ವಕೀಲನ ಮೂಲಕ ನೀವು ವಾದಿಸುವುದೇ ಹಿತವೆಂದು ನಾನು ಆಲೋಚಿಸುತ್ತೇನೆ, ಹಾಗಿಲ್ಲದಿದ್ದರೆ ನಿಮಗೆ

ಪ್ರತ್ಯೇಕ ರಿಯಾಯಿತಿಯನ್ನು ಕೊಡುತ್ತೇನೆಂಬುದಾಗಿ ನೀವು ನಿರೀಕ್ಷಿಸುವುದು ಬೇಡವೆಂಬ ಎಚ್ಚರಿಕೆಯನ್ನು ಕೊಡುತ್ತೇನೆ, ಈ ವಿಚಾರಣೆಗೆ ಎಷ್ಟು ಅವಶ್ಯವಿದೆಯೋ ಅಷ್ಟು ಸಮಯ ಮಾತ್ರ ನಿಮ್ಮ ವಾದವನ್ನು ಕೇಳುವೆನಲ್ಲದೆ ಹೆಚ್ಚಿಲ್ಲ; ಅಷ್ಟೇ ಅಲ್ಲ, ತಾವೀಗ ತಮ್ಮ ವಿಷಯವಾಗಿ ವಾದಿಸುವವರು ಸಾಮಾನ್ಯವಾಗಿ ಮಾಡುವಂತೆ ಅಸಂಬಂಧ ವಿಚಾರಗಳನ್ನು ಹೇಳಲಿಕ್ಕೂ ಬಿಡಲಾಗುವುದಿಲ್ಲ."

"My lord, ನಾನು ಹಾಗೆ ಮಾಡಲಾರೆನೆಂದು ನಾನು ನಂಬುತ್ತೇನೆ. ಹೇಗಿದ್ದರೂ ತಮ್ಮ ಅಂಕಿತದಲ್ಲಿ ನಾನು ವಾದಿಸುವವಳಾಗಿದ್ದೇನೆ."

ಇಂತಾ ಪ್ರೋತ್ಸಾಹಕರವಾದ ಪ್ರಾರಂಭವು ಈ ವಿಚಾರಣೆಗೆ ಒಂದು ನಿದರ್ಶನವೆನ್ನಬಹುದು, ತಜ್ಞ ವಕೀಲನಿಗೆ ವಿರೋಧವಾಗಿ, ಒರ್ವ ನ್ಯಾಯಾಧೀಶನ ಬದಲಾಗಿ ಮತ್ತೊರ್ವ ವಕೀಲನ ಸಹಾಯವನ್ನು ಪಡೆದು ನಡೆಸಿದ ದೀರ್ಘವಾದ ಹೋರಾಟವು ಇದಾಗಿತ್ತು. ಒಮ್ಮೆ ಮಾತ್ರ ನ್ಯಾಯಾಧೀಶನೂ ವಕೀಲನೂ ಭಿನ್ನಾಭಿಪ್ರಾಯಕ್ಕೊಳಗಾದರು. ನನ್ನ ನಾಸ್ತಿಕವಾದ ಮತ್ತು ಮಾಲ್ಥಸ್‌ನ ವಾದಗಳು ನನ್ನನ್ನು ನನ್ನ ಮಕ್ಕಳ ಪೋಷಕಳಾಗಿರಲು ಅಯೋಗ್ಯಳನ್ನಾಗಿಸುವವೆಂಬುದಾಗಿ ಶ್ರೀ ಇನ್ಸ್ ಮತ್ತು ಶ್ರೀ ಬಾರ್ಡ್‌ವೆಲ್ಸ್ ಇವರು ವಾದಿಸುತ್ತಿದ್ದರು. ನನ್ನಿಂದ ವಿದ್ಯಾಭ್ಯಾಸವನ್ನು ಪಡೆದ ಮೇಬಲ್ಲಳು ಲೋಕದಲ್ಲಿ ಹಿತವಾದುದನ್ನು ಪಡೆಯಲು ನಿಸ್ಸಹಾಯಕಳೂ ಈ ಜನ್ಮದಲ್ಲಿ ಇತರರಿಂದ ತಿರಸ್ಕೃತಳಾಗಿ ಮುಂದಿನ ಜನ್ಮದಲ್ಲಿ ದಂಡಿಸಲ್ಪಡಲು ಕೇವಲ ನಿಸ್ಸಂಕೋಚವಾಗಿ ಬೆಳೆಯುವಳೆಂದು Mr. Ince, ಇವನು ಸಾರಿದನು. ನಿರಂತರ ಸಂಬಂಧಗಳಂತು ಇರಲಿ; ನನ್ನ ಪೋಷಣೆಯಲ್ಲಿಯೇ ನನ್ನ ಮಗು ಇದ್ದರೆ ಸಮಾಜದಲ್ಲಿ ಆ ಮಗುವಿನ ಭವಿಷ್ಯವೇ ಹಾನಿಕರವಾಗಿ ಪರಿಣಮಿಸುವುದೆಂದು ಶ್ರೀ ಬಾರ್ಡ್ಸ್‌ವೆಲ್ (Mr. Bardswell) ಇವನು ವಾದಿಸಿದನು. ಎಡೆಯನ್ನು ಸಹಿಸುವ ಈ ವಿಷಯವು ನನಗೆ ತುಂಬಾ ಮಹತ್ವವಾದುದರಿಂದ ಅವರಿಗೆ ಅನಿಸಲಿಲ್ಲವೇ? ವೈವಾಹಿಕ ಕಟ್ಟು ಮತ್ತು ತಾಯಿಯ ಆಶ್ರಯದಿಂದ ಅವಳ ಮಗುವನ್ನು ಕಸಿಯಲಿಕ್ಕಾಗಿ ವಾದವೆಬ್ಬಿಸಿದ ಆ ನರಕ – ಇವುಗಳ ಮಿಶ್ರಣದಿಂದ ಶ್ರೀಮತಿ ಗ್ರಂಡಿ (Mrs. Grundy) ಇವಳು ನಡೆಸಿದ ವಾದಕ್ಕೆ ನಾನು ನಗಬಹುದಾಗಿತ್ತು. ಹೇಗೂ ಸರ್ ಜಾರ್ಜ್ ಜೆಸ್ಸೆಲ್ ಇವನೊರ್ವ ಯೆಹೂದ್ಯನೆಂಬುದನ್ನು ಶ್ರೀ ಬಾರ್ಡ್ಸ್‌ವೆಲ್ ಇವನು ಅಜಾಗರೂಕತೆಯಿಂದ ಮರೆತುಹೋಗಿ ಕಡೆಗೆ ಅವನು ಆಕಾಶದತ್ತ ಕಣ್ಣೆತ್ತಿ ಭಯಾನಕವಾಗಿ ಮತ್ತು ದಿಗ್ಭ್ರಾಂತಿ ಮೊರೆಯುತ್ತಲೋ ಎಂಬಂತೆ ಹೀಗೆ ಉದ್ಗಾರವೆತ್ತಿದನು:

"ನ್ಯಾಯಮೂರ್ತಿಯವರೆ, Your lordship, ನಿಜಕ್ಕೂ ಇದು ಆಗತಕ್ಕಂತಾದ್ದಲ್ಲ. ಆ ಪವಿತ್ರ ಗ್ರಂಥದ ಹಲವೆಡೆ ಒಂದು ಮಗುವು

ಓದಬಾರದ ಕೆಲವು ಭಾಗಗಳು ಇವೆಯಾದುದರಿಂದ ಅದನ್ನು ಮಗುವಿ
ನ ಕೈಯಿಂದ ತಾನು ಕಿತ್ತುಕೊಂಡೆನೆಂದು ಶ್ರೀಮತಿ ಬಿಸೆಂಟ್ ಇವರು
ಒಪ್ಪಿಸಿದ ಅರ್ಜಿಯಲ್ಲಿ ಹೇಳಿರುವರು."

ಎಹಾದ್ಯ ನಂತರ ಬರೆದ ಗ್ರಂಥವನ್ನು ಅಸಭ್ಯವಾದುದೆಂ
ದೆನ್ನುವಾಗ ಅದನ್ನು ಪ್ರತಿಭಟಿಸದೇ ಇರಲು ಸಾಧ್ಯವಾಗದೆ ಆಗ
ಒದಗಿದ ಸಂದರ್ಭವು ತಕ್ಕುದೆಂದು ತೋರಿದ್ದರಿಂದ ಸರ್ ಜಾ
ರ್ಜ್ ಜೆಸ್ಸೆಲ್ಲನು ಕಟುವಾಗಿ ಹೀಗೆ ಉತ್ತರಿಸಿದನು:—

"ಒಂದು ಮಗುವಿಗೆ ಓದಲಿಕ್ಕೆ ಯೋಗ್ಯವಲ್ಲದ ಭಾಗಗಳು
ಅದರಲ್ಲಿದೆಯೆಂದು ಹೇಳುವುದು ನಿಜವಲ್ಲ, ಏಕೆಂದರೆ ಅಂಥಾ ನು
ಡಿಗಟ್ಟುಗಳು ಅವುಗಳಲ್ಲಿ ತುಂಬಾ ಇವೆಯೆಂದು ನಾನು ಆಲೋಚಿ
ಸುತ್ತೇನೆ."

"ಆ ಗ್ರಂಥದಲ್ಲಿ ಅಸಭ್ಯವೆಂದು ಕರೆಯಲ್ಪಡುವ ಭಾಗಗ
ಳಿವೆಯೆಂಬುದೇ ನನಗೆ ಗೊತ್ತಿಲ್ಲ."

"ನನಗೆ ಅದನ್ನು ಖಾತ್ರಿ ಒಪ್ಪಲಿಕ್ಕಾಗುವುದಿಲ್ಲ."

ಈ ಟೀಕ್ಕೆ ಒಂದು ನಿಸ್ಸೀಮವಲ್ಲದೆ ನ್ಯಾಯಾಧೀಶನೂ ವ
ಕೀಲನೂ ಪರಸ್ಪರ ಹೀನಾಗಿ ನಡೆದುಕೊಂಡಿರುವ. ನಾನಾದರೋ
ವ್ಯಕ್ತವಾಗಿ ಹೀಗೆಂದೆನು: "ನಾನೊಬ್ಬ ನಾಸ್ತಿಕವಾದಿ! ನನ್ನ
ಮಗುವು ಹೋಗುವ ದಿನ-ಶಾಲೆಯಲ್ಲಿ (day-school) ಮತ
ವಿಚಾರದ ಬಗ್ಗೆ ಕಲಿಸುವ ಪಾಠದಿಂದ ಅವಳನ್ನು ಹಿಂತೆ
ಗೆದ್ದೇನೆ. ನಾನು ಕ್ರೈಸ್ತಮತಕ್ಕೆ ವಿರೋಧವಾಗಿ ಬೇರೆ ಬೇರೆ
ಪುಸ್ತಕಗಳನ್ನು ಬರೆದಿದ್ದೇನೆ, ಎಂದಿತ್ಯಾದಿಯಾಗಿ ಹೇಳಿದೆನು.
ಆದರೆ ನನ್ನ ಮಗುವು ನನ್ನ ಪೋಷಣೆಯಲ್ಲಿರಬೇಕು;
ಏಕೆಂದರೆ ನಾನು ದಾಂಪತ್ಯವಿಚ್ಛೇದನವಾಗುವಾಗ ಮಾಡಿ
ದ ಕರಾರಿನಲ್ಲಿ ಮಗುವು ನನ್ನ ವಶಕ್ಕೆ ಒಳಗಾಗಿದೆ. ಆ ಕರಾ
ರನ್ನು ನಾನು ಕ್ರೈಸ್ತ ಪಂಥವನ್ನು ಬಿಟ್ಟ ಮೇಲೆ ಮಗುವಿನ
ತಂದೆಯೇ ಬರೆದುದಾಗಿದೆ! ಅಷ್ಟೇ ಅಲ್ಲ, ನನ್ನ ಆಕ್ಷೇಪಕಾರ
ಕರಿಗೂ ಆ ಕರಾರನ್ನು ಅಕ್ರಮವಾದುದೆಂದು ಎಣಿಸಲಿಕ್ಕೆ
ಸಾಧ್ಯವಿಲ್ಲ. ಮಗುವನ್ನು ನಾನು ಮಮತೆಯಿಂದ ಪೋಷಿಸುತ್ತೇ
ನೆಂದು ನನ್ನ ವಿರೋಧಿಗಳೂ ಒಪ್ಪಿದ್ದಾರೆ, ಅಲ್ಲದೆ ನನ್ನ ವೈ
ಯಕ್ತಿಕ ಗುಣಗಳನ್ನು ಖಂಡಿಸುವ ಪ್ರಯತ್ನವು ಎಂದೂ ನ
ಡೆದಿಲ್ಲ. ನಾನು ಮಗುವನ್ನು ತುಂಬಾ ಶ್ರದ್ಧೆಯಿಂದ ಸಲಹುತ್ತೇ
ನೆಂಬುದನ್ನು ನ್ಯಾಯಾಧೀಶನು ಒಪ್ಪಿದನು, ಆದರೆ ಮಗುವಿ
ಗೆ ಧಾರ್ಮಿಕ ಧಾರ್ಮಿಕ ಶಿಕ್ಷಣವನ್ನು ಕೊಡಲು ತಿರಸ್ಕರಿಸುವ
ಒಂದೇ ಒಂದು ಕಾರಣವು ನನ್ನ ಪೋಷಣೆಯಿಂದ ಮಗುವನ್ನು
ತಪ್ಪಿಸಲು ಸಾಕಾಗುವುದೆಂದು ಅವನು ನಿಶ್ಚಯವಾಗಿ ಹೇಳಿದನು.
"ಸರ್ವಮತ ಪ್ರತಿವಾದನೆಯ ವಿದ್ಯಾಭ್ಯಾಸವು ಅಸಾಧುವೂ ಅಸ

ಶ್ಯವಾಗಿದೆ; ಆದುದರಿಂದ ಮಗುವಿನ ಮನೋಸ್ಥಿತಿ ಕೆಡುವ ಸಂ
ಭವವಿದೆ. ಇದರಿಂದಲಾಗಿ ನಾನು ಈ ಮಗುವು ತನ್ನ ತಾಯಿಯ ಆಶ್ರ
ಯದಲ್ಲಿ ಇನ್ನೊಂದು ದಿನ ಸಹ ಇರಬಾರದೆಂದು ನಿಶ್ಚಯವಾಗಿ
ಯೂ ನಿರ್ಧರಿಸುತ್ತಿದ್ದೇನೆ," ಎಂದು ತೀರ್ಪನ್ನೇ ಕೊಟ್ಟನು.

ನನ್ನ Malthusian ಅಭಿಪ್ರಾಯಗಳನ್ನು ಸರ್ ಜಾರ್ಜ್
ಜೆಸ್ಸೆಲ್ ಇವನು ಅಮಾನುಷವಾಗಿ ಮತ್ತು ಸತ್ಯಸಂಗತಿಯಿಂದ ಬೇ
ರ್ಪಡಿಸಿ ಖಂಡಿಸಿದನು. ಕೆಲವು ವರ್ಷಗಳನಂತರ ನ್ಯೂಸೌತ್‌ವೇಲ್ಸ್
ಇದರ ಪ್ರಧಾನ ನ್ಯಾಯಾಲಯದ ನ್ಯಾಯಾಧೀಶನು ಹಿಂದು ಮೊಖದ್ದ
ಮೆಯ ಬಗ್ಗೆ ತೀರ್ಪು ಕೊಡುತ್ತಾ, "Master of Rolls" ಇವನ
ಹೇಳಿಕೆಯನ್ನು ಸಮರ್ಥಿಸಿ ಲಾರ್ಡ್ ಕಾಕ್‌ಬರ್ನ್ ಇವನು ಉಪ
ಯೋಗಿಸಿದ ಭಾಷೆಯನ್ನು ಉದಾಹರಿಸುತ್ತಾ "ಆ ಭಾಷೆಯು ಅಸಹ್ಯ
ವಾಗಿದೆಯೆಂದು ಕಾಕ್‌ಬರ್ನ್ ಇವನು ಉಚ್ಚರಿಸಿದನೆಂಬುದು ಸರಿಯ
ಲ್ಲ; ಮತ್ತು ಅವನ ತೀರ್ಮಾನಕ್ಕೆ ಹಿಡಿಸಿದ್ದೇ ಇದ್ದ ವಿಷಯವು ಮೇ
ಲೆ ಅವನು ಹೇಳಿದ ಅಭಿಪ್ರಾಯಕ್ಕೆ ಬೆಲೆಕೊಡುವುದೂ ಸರಿಯಲ್ಲ."
ಎಂದು ಹೇಳಿ, ಜಾರ್ಜ್ ಜೆಸ್ಸೆಲನು ಆ ವಿಚಾರಕ್ಕೆ ಸಂಬಂಧಿಸಿದ ವಿ
ಷಯಗಳನ್ನು ಕುರಿತು ಹೇಳಿದ್ದಕ್ಕೆ ಕಟುವಾಗಿ ಟೀಕಿಸಿದನು. "ಪಕ್ಷೇ
ಅಪ್ರಿಯವಾದ ವಿಷಯವನ್ನು ಒಬ್ಬ ನ್ಯಾಯಾಧೀಶನೇ ಆಗಲಿ, ಇ
ತರರೇ ಆಗಲಿ, ನಿಂದನೀಯವಾದ ನುಡಿಗಳನ್ನು ಹೇಳಿದರೆ
ಅದು ಆಕ್ಷೇಪಯಾಗಿದೆ; ಅಂತೆಯೇ ಭಿನ್ನಾಭಿಪ್ರಾಯದ ಕಾರಣ
ದಿಂದ ವಿರೋಧಿಗಳನ್ನು ಬೈದರೆ ಅದು ಅನೈತಿಕ ಗತ್ಯರ್ಥಕ್ಕೆ
ಪ್ರಮಾಣವೆಂದೆನಿಸಿದ್ದು, ಎಂದು ಮುಂದುವರಿಯುತ್ತಾ ಹೇಳಿ
ದನು. ಹೀಗೂ ಸರ್ ಜಾರ್ಜ್ ಜೆಸ್ಸೆಲ್ ಇವನು ತನ್ನ ನ್ಯಾಯ
ಕಚೇರಿಯಲ್ಲಿ ತಾನೇ ಸರ್ವಾಧಿಕಾರಿಯಾಗಿದ್ದನು, ಅವನ ತೀ
ರ್ಪಿಗೆ ವಿರೋಧವಾಗಿ ನಾನು 'ಸಲ್ಲಿಸಿದ್ದ' ಮನವಿಯನ್ನು
ಕುರಿತು ಬೇರೊಂದು 'ಕೋರ್ಟ್' ವಿಚಾರಿಸುವ ಮೊದಲೇ ಸಹ
ಬಿಡದೆ ನನ್ನ ಮಗುವನ್ನು ನನ್ನ ಪೋಷಣೆಯಿಂದ ತೊಲಗಿ
ಸಿದನು. ಮಗುವಿನ ತಂದೆಯಿಂದ ಕಳುಹಿಸಲ್ಪಟ್ಟ ಒಬ್ಬ
ನು ನನ್ನ ಮನೆಗೆ ಬಂದನು. ಮಗುವು ಜ್ವರದಿಂದ ನರಳಿ
ಕ್ಷೀಣವಾದಾಗ್ಯೂ ಅದು ಅಚ್ಚಿತ ನೋವಿನ ಹಿಡಿತದಿಂದ ತಪ್ಪಿಸಿ
ಕೊಳ್ಳಲು ಹೆಣಗುತ್ತಾ ಅಳುತ್ತಾ ಕಿರುಚುತ್ತಾ ಇದ್ದಾಗ
ಅವನು ಮಗುವನ್ನು ಬಲಾತ್ಕಾರದಿಂದ ಕೊಂಡುಹೋದನು.
ಅವಳನ್ನು ನೋಡಲಿಕ್ಕೆ ಸಹ ನನಗೆ ಅವಕಾಶವನ್ನೀಯಲಿಲ್ಲ. ಆದು
ದರಿಂದ ನನ್ನ ಮಗುವನ್ನು ನೋಡಲಿಕ್ಕೆ ಬಿಡದಿದ್ದರೆ ನಾನು ನನ್ನ
ಮಕ್ಕಳನ್ನು ನೋಡಲೇ ಬೇಕೆಂಬ ಕಾರಣಕ್ಕಾಗಿ ನಮ್ಮ ಮಾತೃ
ವಾತ್ಸಲ್ಯ ಹಕ್ಕನ್ನು ಮರಳಿ ಕೊಡಬೇಕೆಂದು ವ್ಯಾಜ್ಯವನ್ನು

ಪ್ರಾರ್ಥನೆಯೆಂದು ಪತ್ರವನ್ನು ಬರೆದೆನು. ಆದರೆ ನನ್ನ ಮನಸ್ಸೋ
ವೇದನೆಯು ವಿಪರೀತವಾಗಿ ಏರಿ ಹುಚ್ಚಿಯಂತಾದೆನು. ಶ
ರೀರದ ಆಯಾಸದಿಂದ ಕಂಗೆಟ್ಟು ನಾನು ಹಿಂದೆ ನಡೆದುದ
ನ್ನೆಲ್ಲ ಮರೆಯುವುದಕ್ಕಾಗಿ ಖಾಲೀ ಕೋಣೆಗಳಲ್ಲಿ ತಾಸುಗಟ್ಟಲೆ
ಕಾಲ ಅತ್ತಿತ್ತ ನಡೆದಾಡುತ್ತಾ ಕಾಲವನ್ನು ಕಳೆಯುತ್ತಿದ್ದೆನು.

ಸದಾ ಚಿಳ್ಳಕು ಮತ್ತು ಸಂಗೀತದ ಧ್ವನಿಯಿಂದ
ಸಂತೋಷಮಯವಾಗಿರುತ್ತಿದ್ದ ನನ್ನ ಮನೆಯು ಮಗು ಇಲ್ಲದೆ ಆ ಮನೆ
ಯು ಮೌನದಿಂದ ಬರಿದಾಗಿರಲು ನನ್ನ ದುಃಖವು ಏನೋ
ಒಂದು ದುಃಸ್ವಪ್ನದಂತೆ ನನ್ನನ್ನು ಬಾಧಿಸುತ್ತು. ಓಡಾಡುತ್ತಿದ್ದ
ಪುಟ್ಟ ಕಾಲುಗಳ ಸಪ್ಪಳವನ್ನೂ ಉದ್ಯಾನದುದ್ದಕ್ಕೂ ಪ್ರತಿ
ಧ್ವನಿಸುತ್ತಿದ್ದ ಆಹ್ಲಾದಕರವಾದ ನಗುವನ್ನೂ ಕಿರುದನಿಯಿಂದ
ಇನಿದಾಗಿ ಕೇಳಿಸುತ್ತಿದ್ದ ಹಾಡುಗಳನ್ನೂ ರಂತೆಯೇ ಆಲಿಸಿದೆ
ನು, ನಿದ್ದೆಯಿಲ್ಲದೆ ರಾತ್ರಿಯಲ್ಲಿ ನನ್ನ ಪುಟ್ಟ ಮಗುವಿನ ಸ್ವ
ಪ್ನದ ಮೆದುವಾದ ದನಿಯನ್ನೂ ಕೇಳಿಸದಾದೆನು,
ಪ್ರತಿ ದಿನ ಬೆಳಿಗ್ಗೆ ನಾನು ಪಡೆಯುತ್ತಿದ್ದ ಸಿಹಿಯಾದ ಮುತ್ತು
ಗಳನ್ನು ನಾನು ವ್ಯರ್ಥವಾಗಿ ನಿರೀಕ್ಷಿಸಿದೆನು, ಕಡೆಗೆ ಹೀ
ಗೂ ನನ್ನ ಆರೋಗ್ಯ ಕೆಟ್ಟಿತು, ಜ್ವರದಿಂದ ಪೀಡಿತೆಯಾ
ದುದರಿಂದ ನಾನು ಆತ್ಮೀಯವಾಗಿ ನನ್ನ ಮಗುವನ್ನು ಕ
ಳೆದುಕೊಂಡ ನೋವಿನ ಬದಲಾಗಿ ದೈಹಿಕವಾದ ನೋವು
ಮತ್ತು ಸ್ಮೃತಿ ತಪ್ಪುವಿಕೆಯಿಂದ ನರಳುವಂತಾ ಸುದೈ
ವಕ್ಕೆ ಒಳಗಾದೆನು, ಅಂಥಾ ಪ್ರಬಲವಾದ ಅಸ್ವಸ್ಥತೆಯ ವೇಳೆಯ
ಲ್ಲಿ ಬ್ರ್ಯಾಡ್ಲೆಯು ಪ್ರತಿದಿನವೂ ಬಂದು ನನ್ನೊಡನೆಯೇ ಕುಳಿತು
ಬರೆಯುತ್ತಿದ್ದನು, ನೀರ್ಗಲ್ಲು (ice) ಮತ್ತು ಹಾಲನ್ನು ನನಗೆ ಆಗಿಂ
ದಾಗ್ಗೆ ಈಯುತ್ತಿದ್ದನು, ಇತರರಿಂದ ತಿರಸ್ಕೃತಳಾದರೂ ಅವನು
ಓರ್ವ ಗೆಳೆಯನಂತೆ ಇರದೆ ಅದಕ್ಕೂ ಮೀರಿ ಓರ್ವ ಮೃದು ಹೃ
ದಯದ ತಾಯಿಯಂತೆ ನನ್ನನ್ನು ಸಂತೈಸಿ ನಾನು ದುಃಖದಿಂದ
ದಿಗಿಟ್ಟು ಕೆಲವು ತಿಂಗಳುಗಳ ವರೆಗೂ ನಿರರ್ಥಕವಾದುದೆಂದೆ
ಣಿಸಿದ ನನ್ನ ಜೀವವನ್ನು ಅವನು ಉಳಿಸಿದನು, ನಾನು ಸಾಕ್ಷ್ಯ
ಚೇತನಗೊಂಡ ನಂತರ ನನಗೆ ಮಗುವಿನ ಬಳಿ ಹೋಗುವ ಅಧಿಕಾರ
ವಿಲ್ಲವೆಂದೂ ನನಗೆ ಸಲ್ಲುತ್ತಿದ್ದ ಹಣವನ್ನು ಪಾವತಿಸದೆ ನಿಲ್ಲಿಸಿದ್ದೂ
ಮತ್ತು ಕಠಿಣವಾದ ಮಾತುಗಳಿಂದ ನನ್ನನ್ನು ನಿಂದಿಸಿ ಹೀನವಾಗಿ
ನಡೆಸಿಕೊಂಡುದನ್ನೂ ನಾನು ಅರಿತುದಲ್ಲದೆ ನಾನು ಅಸ್ವಸ್ಥ
ಳಾಗಿದ್ದ ವೇಳೆಯಲ್ಲಿ (ನನ್ನ ಪತಿ) ಶ್ರೀ ಬೆಸೆಂಟ್ ಇವನಿಗೆ ವಿರೋ
ಧವಾಗಿ ಮತ್ತು Master of Rolls - ಇವರಿಗೆ ವ್ಯತಿರಿಕ್ತವಾಗಿ
ಯಾವ ವ್ಯಾಜ್ಯವನ್ನೂ ಹೂಡಬಾರದೆಂದು ಶ್ರೀ ಬೆಸೆಂಟ್ರಿ

ವನು ಹಿಡಿದುಕೊಂಡಿದ್ದ ನ್ಯಾಯಾಸ್ಥಾನದ ಪತ್ರವನ್ನು ಉಪಯೋಗಿಸಲು ತನ್ನ ಕ್ರಮವನ್ನು ಕೈಕೊಳ್ಳಲುದ್ಯುಕ್ತನಾದನು. ಅನಂತರ ನಾನು ಶ್ರೀ ಬಿಸೆಂಟ್ ಇವನಿಗೆ ವಿರೋಧವಾಗಿ ಎಂದಾದರೂ ನಮ್ಮ ಬೇರ್ಪಡುವಿಕೆಗೆ ಆಧಾರವಾ ವೈವಾಹಿಕ ಹಕ್ಕನ್ನು ಮರಳಿ ಪಡೆಯುವಲ್ಲಿ ಮೊಕದ್ದಮೆಯನ್ನು ಹೂಡಿದ್ದಾದರೆ, 1873ರಲ್ಲಿ ನಾವು ಬೇರ್ಪಟ್ಟಾಗ ಬರೆಯಿಸಿದ ಪತ್ರವು ಶ್ರೀ ಬಿಸೆಂಟ್ ಇವನಿಗೆ ಸಹಾಯಕವಾಗುತ್ತದೆಂದು ನಿರ್ಣಯಿಸಲಾಯಿತಲ್ಲದೆ ಅದೇ ಪತ್ರದಲ್ಲಿ ಮಗುವು ನನ್ನ ವಶದಲ್ಲಿರಬೇಕೆಂಬುದಾಗಿ ಹೇಳಿದ ಅಂಶವನ್ನೆಲ್ಲ ನಿರ್ಲಕ್ಷಿಸಲಾಗಿತ್ತು; ಮಗುವಿನ ಮೇಲೆ ಹಕ್ಕು ವಿವಾಹಿತ ತಾಯಿಗಿಲ್ಲದೆ ತಂದೆಗೆ ಮಾತ್ರ ಎಂಬುದಾಗಿ 1879ರ ಏಪ್ರಿಲ್‌ನಲ್ಲಿ ಉನ್ನತ ನ್ಯಾಯಾಸ್ಥಾನವು — Court of Appeal — ಇದು ಎತ್ತಿ ಹೇಳಿತು. ಈ ರೀತಿ ತಾನು ಹೆತ್ತ ಮಕ್ಕಳ ಮೇಲೆ ವಿವಾಹಿತಳಾದ ತಾಯಿಗೆ ಇರುವ ಹಕ್ಕನ್ನು ಅಲ್ಲಗಳೆಯುವುದು ಅಬಾಧಿತವೂ ಅನ್ಯಾಯವೂ ಆಗಿದೆಯಲ್ಲದೆ ಆ ನಿಯಮವನ್ನು ಈ ಶಾಸನ ಸಭೆ (Parliament) ಯು ಕಿತ್ತುಹಾಕಿದೆ. ಹಿಂದಿನ ರೀತಿಯ ಈ ಹಕ್ಕುಗಳನ್ನು ಕೊಟ್ಟು ದು:ಖಿತೆಯನ್ನಾಗಿ ಮಾಡಿಸಲು ಗಂಡನಿಗೆ ತಾಯ್ತನದ ಆತ್ಮಬಲದಿಂದ ಕೂಡಿದ ಮತ್ತು ಕೋಮಲೆಯೆನಿಸಿದ ಹೆಣ್ಣು ಇನ್ನು ಮುಂದಕ್ಕೆ ಹಿಂದಿನ ಸಾಧನವಾಗಿರಲಾರದು. ಕಾನೂನು ಬದ್ಧವಾಗಿ ನನ್ನ ಮಗುವನ್ನು ನನ್ನಿಂದ ಹೊರಗಿಸಿದ ಆ ಕಾಲದಲ್ಲಿ ಎಲ್ಲಾ ಹೆಂಗಸರಿಗೂ ಈ ರೀತಿಯಾಗಿ ತಿಳಿಸಲಾಗಿತ್ತು. "ಹೆಂಡತಿ ಮತ್ತು ತಾಯಿ ಎಂಬೀ ಎರಡೂ ಅವಸ್ಥೆಗಳಲ್ಲಿ ನೀನು ಯಾವುದನ್ನು ಪಡೆದಿರುವೆಯೆಂಬುದನ್ನು ಆರಿಸಿಕೊ. ಕಾನೂನಿಗೆ ಅನುಸಾರವಾಗಿ ನೀನು ನಿನ್ನ ಪತಿಯನ್ನು ಮದುವೆಯಾದ ಹೆಂಡತಿಯಾಗಿದ್ದರೆ ನಿನ್ನ ಮಕ್ಕಳ ಮೇಲೆ ನಿನಗೆ ಕಾನೂನು ಬದ್ಧವಾದ ಹಕ್ಕು ಇಲ್ಲ! ನೀನು ನಿನ್ನ ಪತಿಯು ಇಟ್ಟುಕೊಂಡ ಓರ್ವ ಹೆಣ್ಣು ಆಗಿದ್ದರೆ ತಾಯಿಯಾಗಿ ನಿನ್ನ ಸ್ಥಾನವು ಭದ್ರವಾಗಿರುವುದು." ಹೀಗೂ ವೈವಾಹಿಕ ಸ್ಥಾನಕ್ಕೆ ಕಲ್ಪಿಸಿದ ಈ ಕಳಂಕವನ್ನು ಈಗ ಕಿತ್ತೊಗೆಯಲಾಗಿದೆ.

ಉನ್ನತ ನ್ಯಾಯಸ್ಥಾನ — Court of Appeal — ಇಲ್ಲಿಂದ ಬಂದ ತೀರ್ಪನ್ನು ನಾನು ಪಡೆದೆನು. ಮಗುವಿನ ಬಳಿಗೆ ಹೋಗುವ ಹಕ್ಕು ನನಗಿದೆಯೆಂದೂ ಅದಕ್ಕಾಗಿ ನಾನು ಸರ್ ಜಾರ್ಜ್ ಜೆಸ್ಸೆಲ್ ಇವನಿಗೆ ಅರ್ಜಿಯನ್ನು ಬರೆಯಬಹುದೆಂದೂ ಅವನು ಅದನ್ನು ತಪ್ಪಲಾರನೆಂಬುದರ ಬಗ್ಗೆ ಸಂಶಯಪಡುವುದು ಸರಿಯಲ್ಲವೆಂದೂ ಹೇಳಿತು. ಈ ಪತ್ರದ ಆಧಾರದಿಂದ ನಾನು Master of Rolls ಇವ

ಹೀಗೆ ಮನವೊಲಿಸಲು ಪ್ರಯತ್ನಿಸಿದಾಗ ನನ್ನ ಮಕ್ಕಳನ್ನು ನನಗೆ ಬೇಕಾದಾಗ ನೋಡಿಕೊಂಡು ಬರಬಹುದೆಂದು ಹೇಳಿದರು, ಆದರೆ ನಾನು ಮಗು ಮೇಬಲ್ಳನ್ನು ಆಗಾಗ್ಗೆ ಹೋಗಿ ನೋಡುತ್ತಿದ್ದುದರಿಂದ ಅವಳು ನನಗಾಗಿಯೇ ಕಾಯುವುದೂ ನನಗಾಗಿಯೇ ಕಾತರಿಸುವುದೂ ಹೆಚ್ಚಾಗಿ ಅದೇ ಅವಳಿಗೆ ಒಂದು ಬಗೆಯ ಅಸ್ವಸ್ಥತೆಗೂ ಕಾರಣವಾದಂತೆ ತೋರಿತು, ಅದರೊಡನೆಯೇ ಕೇವಲ ಕಾಲ್ಪನಿಕವಾದ ಮತ್ತು ಅವಮಾನಕರವಾದ ಅಲ್ಪ ಮಾತುಗಳನ್ನು ಮಕ್ಕಳ ಎದುರಿಗೇ ಹೇಳುತ್ತಾ ಅವರಿಗೆ ಕಲಿಸುದುದರಿಂದ ಅದು ಅವರ ಮನಸ್ಸಿನಲ್ಲಿ ಊರಿ ಅವರಿಗೆ ನಿರಂತರ ಖೇದಕ್ಕೆ ಕಾರಣವಾಗುತ್ತಿತ್ತು, ಈ ಪರಿಸ್ಥಿತಿಯನ್ನು ಕುರಿತಾಗಿ ನಾನು ನನ್ನಷ್ಟಕ್ಕೆ ಚಿಂತಿಸಿದೆನು, ಕಠಿಣವಾಗಿ ಅವರನ್ನು ನಾನು ಆಗಾಗ್ಗೆ ನೋಡುತ್ತಿದ್ದುದನ್ನು ನಿಲ್ಲಿಸಲು ನಿರ್ಧರಿಸಿದೆನು, ಹಾಗಾದರೆ ಮಾತ್ರ ನಾನು ಅವರ ಮನಸ್ಸಿನಲ್ಲಿ ಉಳಿದ ಸಂತೋಷವನ್ನು ಉಳಿಸಿ ಚಿಂತಾಜನಕವಾದ ಮನೋತರಂಗವನ್ನು ನಿವಾರಿಸಿ ಅವರು ತಾಯಿಯನ್ನಲ್ಲವಾದರೂ ತಂದೆಯ ಮೇಲಾದರೂ ಗೌರವಾಭಿಮಾನಗಳನ್ನಿಟ್ಟು ನಡೆಯುವರೆಂದು ಭಾವಿಸಿದೆನು, ಹೀಗೆ ನಿರ್ಧರಿಸಿದ ನಾನು ನನ್ನ ಮಕ್ಕಳಿಗೆ ಬೆನ್ನು ಹಾಕಿ ನಡೆದು ಆ ರೀತಿ ಅವರ ಮನೋದ್ವೇಗವನ್ನು ಬಿಡಿಸಲು ತೊಡಗಿದೆನು, ನನ್ನ ಮಕ್ಕಳನ್ನು ನನ್ನಿಂದ ದೂರಾಗಿಸಿದರೂ ನಾನು ಹಲವು ನಿಸ್ಸಹಾಯಕ ಮಕ್ಕಳಿಗೆ ತಾಯಿಯಾಗಿ ಅವರಿಗೆ ಸಹಕರಿಸಿ ಆ ರೀತಿ ಇತರರ ದುಃಖವನ್ನು ಶಮನ ಮಾಡಲು ಪ್ರಯತ್ನಿಸುತ್ತಾ ನನ್ನ ಹೃದಯದ ವೇದನೆಯನ್ನು ಗಣನೆಗೆ ತಾರದಿರುವೆನೆಂದು ದೃಢವಾಗಿ ಸಂಕಲ್ಪಿಸಿಕೊಂಡೆನು,

ನಾಲ್ಟನ್ನನ ಹೊತ್ತಗೆಯನ್ನು ಕುರಿತಾಗಿ ಎದ್ದ ಆ ಇಡೀ ಹೋರಾಟದಲ್ಲಿ ಗೆಲುವು ನಮಗೆ ಕಟ್ಟಕಡೆಗಾದರೂ ಬಂದೇ ಬಂತು. ಹಿಂದೆಯೇ ಹೇಳಿದಂತೆ ನಮ್ಮಿಂದ ಸೆಳೆದುಕೊಂಡಿದ್ದ ಪುಸ್ತಕಗಳನ್ನೆಲ್ಲ ನಾವು ಮರಳಿ ಪಡೆದದ್ದು ಮಾತ್ರವಲ್ಲ, ನಮ್ಮ ಮೇಲಿದ್ದ ಆರೋಪಣೆ ವಿಚಾರಣೆಗಳ ಬಗ್ಗೆ ಇದ್ದ ತೊಡಕುಗಳೆಲ್ಲ ನಿವಾರಣೆಯಾಗುವ ವರೆಗೂ ನಾವು ಪ್ರತಿಗಳನ್ನೆಲ್ಲ ಮಾರುತ್ತಲೇ ಇದ್ದೆವು, ಅದರೊಡನೆ ನನ್ನ ಸ್ವಂತ ಕೃತಿಯೂ ಸಹ ಸಾವಿರಾರು ಪ್ರತಿಗಳಂತೆ ಮಾರಾಟವಾದುವು. 1891ರ ಜೂನ್ ತಿಂಗಳಲ್ಲಿ ನಾನು ಅದರ ಮಾರಾಟವನ್ನು ನಿಲ್ಲಿಸಿದಾಗ ಅದರ Copy-right ಬಗ್ಗೆ ನನಗೆ ವ್ಯಾಪಾರಿಗಳು ಬಹು ದೊಡ್ಡ ಹಣವನ್ನು ನೀಡಿದರಾದರೂ ನಾನು ಅದನ್ನು ಸ್ವೀಕರಿಸಲಿಲ್ಲ, ಅಲ್ಲಿಂದೀಚೆಗೆ ಒಂದೇ ಒಂದು ಪ್ರತಿಯಾದರೂ ನನ್ನಿಂದ

ವ್ಯಕ್ತಿಯಿಲ್ಲದೆ ಅಥವಾ ನನ್ನ ಅನುಮತಿಯಿಲ್ಲದೆ ಮಾರಲ್ಪಡುತ್ತಿಲ್ಲ, ಆದರೆ ಕೆಲವೇ ಸಮಯದಲ್ಲಿ ನನ್ನ ಪುಸ್ತಕಕ್ಕೆ ಖಾನೂನುಬದ್ಧವಾದ ಪುರಸ್ಕಾರವು ದೊರೆಯುತ್ತದೆ. ಕೆಲಕಾಲ ಅದು ಇಂಗ್ಲೆಂಡಿನಲ್ಲಿ ಯಾವ ಗೊಂದಲಕ್ಕೂ ಒಳಗಾಗದೆ ಪ್ರಚಾರವಾಯಿತು. ನ್ಯೂ ಸೌತ್ ವೇಲ್ಸ್‌ನಲ್ಲಿ ಅದರ ಮೇಲೆ ತಕ್ಷಣ ಕ್ರಮವನ್ನು ತೆಗೆಯಲು ಆಲೋಚಿಸಿದ್ದರು. ಆದರೆ ಅಲ್ಲಿಯ ಉನ್ನತ ನ್ಯಾಯಾಸ್ಥಾನದ (Supreme Court) ಹಿರಿಯ ನ್ಯಾಯಾಧೀಶ ಜಸ್ಟಿಸ್ ವಿಂಡೆಮೆಯರ್ ಇವರು 1888ರಲ್ಲಿ ಆ ಕೃತಿಯ ಉಪಯುಕ್ತತೆಯನ್ನು ಕುರಿತು ಬಹಳ ನಿರರ್ಗಳ ಹಾಗೂ ಭಾವಪ್ರಚೋದಕವಾದ ತೀರ್ಪನ್ನು ಇತ್ತು ಅದನ್ನು ಟೀಕಿಸಿದವರ ಅಭಿಪ್ರಾಯಗಳನ್ನು ಖಂಡಿಸಿದರು. ಆಸ್ಟ್ರೇಲಿಯಾ ವಸಾಹತ್ತಿನಲ್ಲಿ ಬಹಳ ಗೌರವಾನ್ವಿತ ವ್ಯಕ್ತಿಯಾಗಿದ್ದ ಈ ನ್ಯಾಯಾಧೀಶರು ಅಂಥಾ ನೈತಿಕ ಬೋಧನೆಯನ್ನು ಸಮರ್ಥಿಸಿ ನೇರವಾಗಿ ಮತ್ತು ಮುಚ್ಚುಮರೆಯಿಲ್ಲದೆ ಹೇಳಿದರು.

"ಕುಡುಕನಾದ ಬರ್ಬರ ಗಂಡನನ್ನು ಮದುವೆಯಾದ ಹೆಣ್ಣಿನ ಜೀವನವನ್ನೇ ತೆಗೆದುಕೊಳ್ಳಿರಿ," ಎಂದು Justice Windmeyer ಇವರು ಹೇಳಿದರು. "ಅಂಥಾ ಕುಡುಕನು ಕ್ರಮೇಣವಾಗಿ ತನ್ನ ದೇಹವನ್ನೇ ಕೆಡಿಸಿಕೊಳ್ಳುತ್ತಾ ಮುದಿಗೆಟ್ಟು ವಿನಾಶದತ್ತ ಸಾಗುವನು; ತನ್ನ ಉದ್ಯೋಗವನ್ನು ಕಳೆದುಕೊಳ್ಳುವನು; ತನ್ನ ಸಂಸಾರವನ್ನು ಅರ್ಧ ಉಪವಾಸಕ್ಕೊಳಿಸಿ ಕಡೆಗೆ ಅವನು ಈ ಲೋಕಕ್ಕೆ ತಂದು ಬಿಟ್ಟವರಿಗಾಗಿ ಒಂದು ಶಿಲ್ಲಿಂಗ್ ಸಹ ಉಳಿಸದೆ ಸಾಯುವನು. ಆದರೆ ವಿಧಿನಿಯಮಗಳನ್ನು ಲಕ್ಷಿಸಿ ತನ್ನ ಪತ್ನಿಯನ್ನು ಗರ್ಭ ಧರಿಸುವಂತೆ ಕಾಣುವುದು ಮತ್ತು ವೈವಾಹಿಕ ಹಕ್ಕನ್ನು ಅಮಾನುಷ ರೀತಿಯಲ್ಲಿ ಅವಳಲ್ಲಿ ಹೇರುವುದು. ಆಗಿಂದಾಗ್ಗೆ (ಮಕ್ಕಳನ್ನು) ಹೆರುತ್ತಾ, ಸ್ವಲ್ಪವೂ ಎಡೆಯಿಲ್ಲದೆ, ಆರೋಗ್ಯವನ್ನು ಕಳೆದುಕೊಂಡು ತನಗೆ ಸಲಹಲು ಕಷ್ಟವಾಗುವಂತೆ ದೊಡ್ಡ ಸಂಸಾರವನ್ನು ಕಟ್ಟಿಕೊಂಡು ದಾರಿದ್ರ್ಯವನ್ನು ಹೊಂದಿದ ಗಂಡನು ಸಂಪಾದನೆಯನ್ನು ಮಾಡಿ ಗಂಟಲು ವರೆಗೆ ಕುಡಿಯುತ್ತಾ ಇದ್ದರೆ ಅಂಥಾ ಸಂಸಾರದ ಹೆಂಗಸರು ಈ ಪುಸ್ತಕದಲ್ಲಿ ಹೇಳಿದ ವಿಷಯಗಳನ್ನು ತಿಳಿದು ತಾನು ಮದುವೆಯಾದ ಹೆಣ್ಣಿಂದು ಬಲಾತ್ಕಾರವಾಗಿ ಅವಳನ್ನು ಉಪಭೋಗಿಸುವ ಅವನ ಅಮಾನುಷ ವರ್ತನೆಗೆ ಒಳಗಾಗದೆ ಇದ್ದು ಒದಗುತ್ತಿರುವ ದುರಂತವನ್ನು ನಿವಾರಿಸುತ್ತಿನಿದರೆ ಅನೈತಿಕತೆಯು ಎಲ್ಲಿ? ಹೆಚ್ಚಾಗಿ ಸಾಕಲು ಸಾಧ್ಯವಿಲ್ಲದ ಸಂಸಾರದ ಭಾರದಲ್ಲಿ ಕುಸಿದ ಹೆಂಗಸಿಗೆ ನಾನು ತಿಳಿದ ಮಟ್ಟಿಗೆ

ಅನೈತಿಕತೆಯೆಂದರೆ ಎಷ್ಟರ ಮಟ್ಟಿಗೆ ಇದ್ದು, ಮುಂಜಾಗ್ರತೆಯೂ ಇಲ್ಲದೆ, ನಿರ್ಲಕ್ಷ್ಯದ ಪಾತಕವನ್ನೆಸಗಿದ ಪರಿಣಾಮವಾಗಿ ಹೆಣ್ಣುಮಕ್ಕಳನ್ನು ಹಡೆದು ಆಸ್ಪತ್ರೆಗಳಲ್ಲಿರಿಸಿ ಅವರ ಭವಿಷ್ಯವು ವೇಶ್ಯಾವೃತ್ತಿಯಲ್ಲಿ ಅವಸಾನವಾಗಿ, ಅಂತಹ ಗಂಡುಮಕ್ಕಳಾದರೆ ಮಾದಕ ದ್ರವ್ಯಗಳ ಸೇವನೆಗೆ ತುತ್ತಾಗಿ ಅವರು ತಮ್ಮ ಸೋದರಿಯರಿಗೂ ಈ ಕೇವಲ ಕಳಂಕಪ್ರಾಯವೂ ಮಾನಸಿಕವಾಗಿ ಮತ್ತು ನೈತಿಕವಾಗಿ ಬಹು ಕೀಳುಮಟ್ಟಕ್ಕೆ ಇಳಿದು ಹೋಗಿ ಬಂದು ಸಾಯುತ್ತಿರುವ ಮಾನವಗಣದ ಅಪಾಯಕರವಾದ ವರ್ಗವೊಂದು ದೊಡ್ಡ ನಗರಗಳ ಜನಸಂಖ್ಯೆಯನ್ನು ಹೆಚ್ಚಿಸಲು ಕಾರಣವಾಗಿದೆ. ಈ ಎಲ್ಲಾ ಪರಿಸ್ಥಿತಿಯಲ್ಲಿ ಅರ್ಥವಿಲ್ಲದ ಮತ್ತು ಅಕಾರಣೀಯ ಸ್ತ್ರೀತ್ವ ಪತನಸ್ವಾತಂತ್ರ್ಯಕ್ಕೆ ಮನ್ನಣೆಯನ್ನೀಯುವುದು; ಅದನ್ನು ತಿಳಿದುಕೊಂಡರೆ ನಮ್ಮ ಕರ್ತವ್ಯದ ಭಾವ ಎಲ್ಲಿದೆಯೆಂಬುದನ್ನು ಸ್ಪಷ್ಟವಾಗಿ ಸೂಚಿಸುವ ಈ ಧ್ವನಿಯು ಕೇಳುವುದು,

ಅಂಥ ಕಿರುಹೊತ್ತಿಗೆ (ಸಾಲ್ಟನ್ ಪ್ರಬಂಧ) ಸಮಾಜಕ್ಕೆ ತುಂಬಾ ಉಪಯುಕ್ತವಾದುದೆಂದು ಹೇಳುತ್ತಾ, ನ್ಯಾಯಾಧೀಶ Justice Windmeyer ಇವನು ಈ ಪರಿಹಾರವನ್ನು ಬಹಿಷ್ಕರಿಸುವ ಅಭಿಪ್ರಾಯಕ್ಕೆ ತೀವ್ರ ವಿರೋಧಿಸಿದನು. ಅವನು ಈ ರೀತಿಯಾಗಿ ಹೇಳಿದನು:-

"ಈ ವಿಷಯವನ್ನು ಪ್ರತಿಪಾದಿಸಲು ಹಿಂದೆ ಕೆಲವರು ಅಂಗೀಕರಿಸಿರುವ ಪ್ರವೃತ್ತಿಯು ಜಗತ್ತಿನಲ್ಲಿ ಹೆಚ್ಚಾದುದರಿಂದ ಯಾರೂ ಅದರ ಬಗ್ಗೆ ಬಹಿರಂಗವಾಗಿ ಹೇಳುವ ಧೈರ್ಯವನ್ನು ತೋರಿಸಿದ್ದಿಲ್ಲ. ಹಲವು ವಿಷಯಗಳನ್ನು ಮರೆಸಿ ಬಚ್ಚಿಡುತ್ತಿರುವ ಜ್ಞಾನಿಗಳು, ಅಂತಹ ಸಾಮಾಜಿಕ ಸಮಸ್ಯೆಗಳ ನಿಕಟ ಪರಿಚಯವಿರುವವರು ಮಾತ್ರ ಇಂಥ ವಿಷಯವನ್ನು ಪರಿಶೋಧಿಸಿ ಬರೆಯಬಹುದಲ್ಲದೆ ಎಲ್ಲರಿಗೂ ಸಾಧ್ಯವಿಲ್ಲ. ಯಾರು ವಿದ್ಯಾವಂತರಾಗಿಯೂ, ತಾವಾಗಿಯೇ ತಿಳಿಯಲು ಸಮರ್ಥರೂ, ಸೋಮಾರಿಗಳಲ್ಲದ, ಮತ್ತು ಹೊಸತನ್ನು ತಿಳಿಯಲು ತವಕಿಸದೆ ಕೇವಲ ಸಂಪ್ರದಾಯ ಪರಂಪರೆಗಳಿಗೆ ದಾಸರಾಗಿರದಂತವರೂ ಆಗಿರುವರೋ ಅವರು ಇದರ ಗಹನವನ್ನು ತಿಳಿಯಬಲ್ಲರು, ಉದಾತ್ತ ನ್ಯಾಯವಾದಿಗಳು, ಸಾಧುಗಳು, ಸಭ್ಯರು, ವಿನಯಶೀಲರು ಅವಿದ್ಯಾವಂತ ಜನಕ್ಕೆ ಇಂಥ ವಿಷಯಗಳನ್ನು ತಿಳಿಸಲು ಒಪ್ಪುವರು, ಸಂಸಾರವನ್ನು ಸಲಹುವ, ಮಕ್ಕಳನ್ನು ಪೋಷಿಸುವ ವಿಷಯಗಳಲ್ಲೆಲ್ಲ ಸರಳವಾಗಿ ಮತ್ತು ಸಭ್ಯತನದಿಂದ ಹೇಳುವವರೆಲ್ಲ ತಪ್ಪನ್ನು ಕಲ್ಪಿಸುವುದು ಸರಿಯಲ್ಲವೆಂದು ಅವರೆಲ್ಲರೂ ಹೇಳದಿರಲಾರರು. ಮಾನವೀಯ ಇಂದ್ರಿಯಾವೇಶ

ಉದ್ರೇಕಗಳನ್ನು, ಮಾನವ ಶಾಸ್ತ್ರವನ್ನು, ನಿರ್ಲಕ್ಷಿಸುವುದು ಕ್ಷು
ಲ್ಲಕ ಭಾವನೆಯಿಂದು ನೀತಿಶಾಸ್ತ್ರದ ಹೆಸರು ಹಿಡಿದು ಸೂಕ್ತಿಯು ತಿಳಿ
ಸುತ್ತದೆ, ಸತ್ಯವನ್ನು ಕೂಲಂಕಷವಾಗಿ ಶೋಧಿಸಿ ಅದನ್ನು ನಂ
ಬುವುದರಲ್ಲಿರುವ ಸಂತೃಪ್ತಿ ಕಾಣಿಸುವುದೇನೆಂದರೆ ಧಾರ್ಮಿಕ
ವಿಚಾರದಲ್ಲಿ ಹೇಗೋ ಹಾಗೆಯೇ ಮಾನವ ಜ್ಞಾನವನ್ನು ಕಾನೂನು
ಬದ್ಧವಾಗಿ ಹಿಂದು ಮಿತಿಯೊಳಗೆ ಹಿಡಿಯುವುದು ಪ್ರಯೋಜನವಿಲ್ಲ;
ಅಗತ್ಯವೇ ಇಲ್ಲ; ಅತ್ಯುಚ್ಚ ಧ್ಯೇಯದಿಂದ ಬರೆದು ಅದನ್ನು ಸಮ
ದೃಷ್ಟಿಯಿಂದ ನೋಡಿ ತಿಳಿಯುವವರ ಅವಗಾಹನೆಗೆ ತರಬೇಕು,
ಇದರಿಂದ ಆಕ್ಷೇಪಣೀಯವಾದುದನ್ನು ಕಿತ್ತುಹಾಕಬೇಕಿಲ್ಲ ಕಾನೂನು
ಬದ್ಧವಾಗಿ ಬಹಿಷ್ಕರಿಸುವುದು ಸರಿಯಲ್ಲ, ಅಂಥಾ ಕೆಲಸದಲ್ಲಿ ನಾನು ಭಾ
ಗಿಯಾಗಲಾರೆನು, ಅಶ್ಲೀಲತೆಯ ಪ್ರಕಟಣಾ ಸಂಬಂಧವಾಗಿ ಇರುವ
Obscene Publication Act- ಇದು ಹಣವನ್ನು ಸಂಪಾದಿಸಲಿ
ಕ್ಕಾಗಿ ಪ್ರಕಟಿಸುವ ಮತ್ತು ಸಿಬ್ಬಂದಿ ತಪ್ಪುವಾ ಹೇಯವಾ ಅಸಹನೀ
ಯವಾ ಎಂದು ಎಣಿಸುವ, ಶೃಂಗಾರ ಕಾದಂಬರಿಗಳು, ನಗ್ನ ಚಿತ್ರ
ಗಳು ಮತ್ತು ಅಶ್ಲೀಲ ಪ್ರದರ್ಶನ ಪತ್ರಿಕೆಗಳಿಗೆ ಅನ್ವಯವಾಗುವುದಲ್
ದೆ ಮಾನಸಿಕ ರೀತಿನೀತಿಗಳನ್ನು ಕುರಿತಾಗಿ ಹೇಳುವ ಬರಹಗಳಿ
ಗಲ್ಲವೆಂದು ನಾನು ತಿಳಿಯುತ್ತೇನೆ, ದಕ್ಷತೆಯಿಂದ ಕೂಡಿದ ಶ್ರದ್ಧಾ
ಪರರು ರಾಷ್ಟ್ರೀಯವಾಗಿ ಪ್ರಾಮುಖ್ಯವಾದ ಇಂಥಾ ನಿಗೂಢ ವಿ
ಚಾರಗಳ ಮೇಲೆ ಹೇಳತಕ್ಕದನ್ನು ಕಾನೂನು ಬದ್ಧವಾಗಿ ಹೇಳ
ಬಾರದೆಂದು ವಿಧಿಸಲಿಕ್ಕೆ ನಾನು ಇಚ್ಛಿಸಲಾರೆನು, ಮತ್ತು ಅಂಥ
ದ್ದಕ್ಕೆ ನಾನು ಎಂದೂ ಯತ್ನಿಸಲಾರೆನು, "The Queen Vs. Charles
Bradlaugh & Annie Besant" - ಎಂಬೀ ಮೊಕದ್ದಮೆಯಲ್ಲಿ
ಲಾರ್ಡ್ ಕಾಕ್‌ಬರ್ನ್ ಇವನು ಹೇಳಿದಂತೆ ಇಂಥ ವಿಷಯದ ಮೇಲೆ
ವ್ಯಾಜ್ಯವನ್ನು ಹೂಡುವವರು ತಾವು ವಿರೋಧವನ್ನು ತೋರಿಸುವ
ವಿಷಯಗಳ ಪ್ರಚಾರಕ್ಕೆ ಇನ್ನಷ್ಟು ಸಹಾಯಕರಾಗುವುದಲ್ಲದೆ
ಸಾರ್ವಜನಿಕರ ಪ್ರಯೋಜನಕ್ಕಾಗಿ ಹೇಳಲಾದ ಅಂಥಾ ಉತ್ತಮ
ಬೋಧೆಯನ್ನು ತಡೆಗಟ್ಟುವವರಿಗೆ ವಿರೋಧವಿರುವವರು ಸಹ
ಅಂಥವರನ್ನು ಕಡೆಗೀಡಿಗಳೆಂಬುದಾಗಿ ತೆಗಳಬೇಕು, ಅ
ಷ್ಟೇ ಅಲ್ಲ, ಇಂಥಾ ಉತ್ತಮ ವಿಚಾರಗಳು ಜನರ ಅವಗಾಹನೆಗೆ
ಇನ್ನೂ ಬರಬೇಕೆಂದೆನ್ನುವವರಿಗೆ ಅಭಿನಂದನೆಗಳು ಸಲ್ಲಬೇಕ
ಲ್ಲದೆ ಮತ್ತೇ ಬೇರೆ ಕಾರಣದಿಂದ ವಿಚಾರಶೀಲರಾದ ಜ್ಞಾನಿ
ಗಳಿಗೆ ಉಪದ್ರವವನ್ನು ಕೊಡುವ ಹಿಂದಿನ ಎಲ್ಲ ಪ್ರಯತ್ನ
ಗಳಂತೆ ಇದು ಸಹ ಅದರ ಉದ್ದೇಶವನ್ನು ನಿಷ್ಪ್ರಯೋಜಕವಾ
ಗಿಸುತ್ತದೆ, ಮಾತ್ರವಲ್ಲ, ರಾತ್ರಿಯಲ್ಲಿ ಹಿಡಿಯುವ ಪಂಜಿನಂತೆ,
ಹಿಡಿದು ಅದನ್ನು ಅಲುಗಾಡಿದಷ್ಟು ಪ್ರಕಾಶಮಾನವಾಗಿ ಬೆಳಗುವಂತೆ,

ಸತ್ಯವನ್ನು ಕೆದಕಿದಲ್ಲದೆ ಅದು ಇನ್ನಷ್ಟು ಸುಸ್ಪಷ್ಟವಾಗಿ ಬೆಳಗುವುದು.
Neo-Malthusian-ವಾದವನ್ನು ಸಮರ್ಥಿಸಿ ಹೇಳಿದ ನ್ಯಾಯಮೂರ್ತಿ ವಿಂಡ್‌ಹೇಯರ್ ಇವನ ನ್ಯಾಯಸೂತ್ರ ಹಾಗೂ ಅಭಿಪ್ರಾಯವನ್ನೊತ್ತಿದ ತೀರ್ಪು (ಹಿಂದೆಯೇ ಹೇಳಿದಂತೆ) ನಾನು ಹಿಂದೆಂದೂ ಓದದೇ ಇದ್ದ ಪ್ರಭಾವಿತವೂ ನಿರ್ಭಯವಾದ ಸ್ಫೂರ್ತಿಯೂ ಆದ ವರದಿಯೇ ಆಗಿದೆ. ಈ ನ್ಯಾಯತೀರ್ಪನ್ನು ಕುರಿತು ಆ ಕಾಲದಲ್ಲಿ ಆಂಗ್ಲ ಪತ್ರಿಕೆಗಳಲ್ಲಿ ಶ್ರೀಮತಿ ಬೆಸೆಂಟ್ ಇವಳಿಗೆ ಪ್ರಚಂಡ ಜಯವೆಂಬುದಾಗಿ ಶ್ಲಾಘಿಸಿ ಬರೆದುವು. ಅದು ಅಂತಾಗಿತ್ತೆಂದೇ ಈಗ ನಾನು ಊಹಿಸುತ್ತಿದ್ದೇನೆ. ಆದರೆ ದ್ವೇಷಾಸೂಯೆಗಳಿಂದ ಎಸೆಬಿಡದೆ ಅವಳ ಪ್ರಚಾರವನ್ನು ನಡೆಸಿ ಜನರ ಮನಸ್ಸನ್ನು ಕದಡಿಸಿದ್ದ ಇಂಗ್ಲೆಂಡಿನ ನ್ಯಾಯಾಲಯದ ಇಂತಹ ತೀರ್ಪು ತೀರ್ಮಾನಗಳು ಸರಿಗಟ್ಟಲಾರದಂತಿದ್ದುವು. ಈ ವಿಚಾರಕ್ಕೆ ಮತ್ತು ಅದಕ್ಕಾದ ಹಿಚ್ಚಿನಿಂದ ನಾನು ಎಷ್ಟು ಮನೋವೇದನೆಗೊಳಗಾದೆನೆಂಬುದನ್ನು ನಾನು ಮಾತ್ರ ತಿಳಿದಿದ್ದೆನು. ಆದರೆ ಇನ್ನೊಂದು ರೀತಿಯಲ್ಲಿ ಸಹಸ್ರಾರು ವಿವಾಹಿತರಾದ ಹೆಂಗಸರು, ಹಲವು ಮತಬೋಧಕರು, ಧರ್ಮಗುರುಗಳ ಪುತ್ರಿಯರು, ತಾವು ಜೀವಿಸಿದ್ದ ನರಕದದೃಶ್ಯವಾದ ನೀತಿಯಿಂದ ಪಾರಾಗುವುದೆಂತು ಎಂಬುದಾಗಿ ನನಗೆ ಬರೆಯುತ್ತಾ ನನ್ನ ಪ್ರಯತ್ನಕ್ಕೆ ತಮ್ಮ ಕೃತಜ್ಞತೆಯನ್ನು ಆಶೀರ್ವಾದವನ್ನು ನನ್ನ ಮೇಲೆ ಸುರಿಸುತ್ತಾ ಇದ್ದುದು ನನಗೆ ಸಂತೃಪ್ತಿಯನ್ನುಂಟು ಮಾಡಿತು, ಬಡವರು ಹೇಗೆ ಜೀವಿಸುತ್ತಿದ್ದಾರೆ, ಅವರು ಚಿಕ್ಕ ಕೋಣೆಗಳಲ್ಲಿ ಗುಂಪು ಕಟ್ಟಿಕೊಂಡು ವೈಯಕ್ತಿಕ ಪ್ರತಿಷ್ಠೆ, ವಿನಯ, ತೋರಿಕೆಗಾದರೂ ಸಭ್ಯತ್ವವೇನೂ ಇಲ್ಲದೆ, ಬಿಷಪ್ ಹೀಬರ್ ಇವನು ಹೇಳಿದಂತೆ, ಮಾನವ ಜೀವವು ಹಂದಿ ನಾಯಿಗಳ ಜೀವನಕ್ಕಿಂತಲೂ ಕೀಳುಮಟ್ಟಕ್ಕೆ ಇಳಿದುದನ್ನು ಮೇಲ್ದರ್ಜೆಗೆ ಸೇರಿದ ಶ್ರೀಮಂತವರ್ಗದವರಿಗೆ ತಿಳಿದೇ ಇರಲಿಲ್ಲ. ಇಂತಾ ದಲಿತರ ಬಳಿಗೆ ನಾನು ಹೋದೆನು. ಅವರನ್ನು ಕಷ್ಟದಿಂದ ಬಿಡುಗಡೆ ಮಾಡುವ ನನ್ನ ಪ್ರಯತ್ನವು ನನ್ನದೇ ಮತ: ಪ್ರಚಾರಕ್ಕೆ ಮಾರ್ಗವಾಯಿತೆಂದು ನಾನು ಭಾವಿಸಲಾರೆನು. ಹೇಗೂ ನನ್ನ ಭಾರವಾಗಿದ್ದ ಈ ಜೀವನವನ್ನು ಸ್ವಲ್ಪ ಹಗುರವಾಗಿ ಮಾಡಿದಂತಾಯಿತು, ಬಡಜನಕ್ಕೆ ಉತ್ತಮ ಭವಿಷ್ಯವನ್ನೀಯಲು ಬೇಕಾದ ಆಶೆ ಬರವಸೆಗಳನ್ನು ಅವರಿಗೆ ಇತ್ತಂತಾಯಿತು. ಅಸೂಯೆಯಿಂದ ದ್ವೇಷವಲ್ಲ, ಬದಲಾಗಿ ಪ್ರೀತಿಗೆ ಆಶ್ರಯವಾದ ಚಾರಿತ್ರ್ಯವಾದದಿಂದ ಸ್ಫೂರ್ತಿಯನ್ನು ಪಡೆದು ಉತ್ತಮ ಲೋಕ ಸಮಾಜವೊಂದರ ಕನಸನ್ನು ಕಂಡು ಅದಕ್ಕಾಗಿ ಆವೇಶಗೊಂಡು ಹೋರಾಡಲು ಪ್ರೋತ್ಸಾಹಿತ್ತ ನಾನು ಹೇಗೆ ಹಿಂದಕ್ಕೆ ನಿಲ್ಲಲಿ?

ಕ್ರಿ. ಶ. 1893 ರ ಆಗಸ್ಟಿನಲ್ಲಿ Orthodox Christian Protestantism - ಇದರ ಪರವಾಗಿ ಪ್ರಕಟವಾಗುತ್ತಿದ್ದ The

Christian World ಎಂಬ ಪತ್ರಿಕೆಯು ಕುಟುಂಬವು ತಾನಾಗಿ ಮಿತಿಯನ್ನವಲಂಬಿಸುವುದರ ಹಕ್ಕುಬಾಧ್ಯತೆಗಳನ್ನು ಕುರಿತಾಗಿ ಸಾರಿತ್ತು. ಆ ವಿಷಯವಾಗಿ ಸಂಪಾದಕನಿಗೆ ಹಲವರು ಬರೆದ ಪತ್ರಗಳನ್ನು ಪ್ರಕಟಿಸಿದನಂತರ ಸಂಪಾದಕೀಯವೊಂದು ಈ ರೀತಿ ಹೇಳಿತು:—

"ಕುಟುಂಬದಲ್ಲಿ ಜೀವನವನ್ನು ವೈಜ್ಞಾನಿಕ ಕ್ಷೇತ್ರದೊಳಗೆ ಸೆಳೆದ ಅನಂತರ ಹೀಗೆ ಕ್ರೂರ ಪರಿಸ್ಥಿತಿಗೆ ಅದ್ದುವುದು ನಿಜಕ್ಕೂ ತಪ್ಪಾಗಿದೆ. ಅಂಥಾ ದುಃಸ್ಥಿತಿಯು ಸಂಸಾರದಲ್ಲಿ ಮಕ್ಕಳ ಸಂಖ್ಯೆಯನ್ನು ಹೆಚ್ಚಿಸಲು ಕಾರಣವಾಗುತ್ತದೆ, ಕುಟುಂಬ ಮಿತಿಯೋಜನಾ ಕ್ರಮವನ್ನು ಅನುಸರಿಸುವುದು ದೈವೇಚ್ಛೆಗೆ ವಿರೋಧವಾಗಿ ಹೋದಂತಾಗುವುದರಿಂದು ಸಾಂಪ್ರದಾಯಿಕರು ಹಿಂದಿನ ಕಾಲದಲ್ಲಿ ನಂಬಿದ್ದರು. ಈಗ ನಾವು ಅಂಥ ಮೂಢ ನಂಬಿಕೆಗಳನ್ನು ಮೀರಿ ದೈವೇಚ್ಛೆಯು ನಮ್ಮ ಬುದ್ಧಿಚಮತ್ಕಾರದ ಮೂಲಕ ಸಾಗುವುದರಿಂದು ತಿಳಿಯಬಲ್ಲವರಾಗಿದ್ದೇವೆ. ಈಗ ನಾವು ಯಾವುದಾದರೊಂದು ಕಾರ್ಯವನ್ನು ಮುಂದಿಟ್ಟು ವಿವಾಹವಾಗುವ ಕಾಲವನ್ನು ಮುಂದಕ್ಕೆ ತಳ್ಳಿ ಕುಟುಂಬ ಮಿತಿಯೋಜನೆಯನ್ನು ಅನುಸರಿಸಲೆತ್ನಿಸುತ್ತೇವೆ---- ಮಿತ ಕುಟುಂಬ ಯೋಜನೆಯನ್ನು ಅನುಸರಿಸಲು ತೊಡಗಿದ ವಿಧಾನದಲ್ಲಿ ಹಲವರು ನೈತಿಕ ನಿಯಮಗಳನ್ನು ಕುರಿತು ಕಟುವಾಗಿ ಪ್ರಶ್ನಿಸಿದ್ದಾರೆ. ಈ ವಿಷಯದಲ್ಲಿ ಸುಲಭದಲ್ಲಿ ತಿಳಿಯಬಹುದಾದ ಶಾರೀರಿಕ ನಿಯಮಗಳನ್ನು ತಿಳಿಯಲು ಮತ್ತು ಅಂಥಾ ಸಂದರ್ಭಗಳಲ್ಲಿ ಗಂಡಸರು ಮತ್ತು ಹೆಂಗಸರು ಅನುಸರಿಸಬಾರದು ಯಾವುದರಿಂದು ವಿವೇಚಿಸದೇ ಇರುವುದಕ್ಕೂ ಸಾಧ್ಯವಿದೆ. ಈ ತಿಂಗಳ Forum ಪತ್ರಿಕೆಯಲ್ಲಿ ಡಾ. ಬಿಲ್ಲಿಂಗ್ಸ್ ಇವನು ಹಿಂದೆ ಇದ್ದದಕ್ಕಿಂತ ಇಂದು ಶಾರೀರಿಕ ಶಾಸ್ತ್ರವನ್ನು ಕುರಿತಾದ ಜ್ಞಾನಪ್ರಚಾರವನ್ನು ಶಾಲೆಗಳಲ್ಲಿ ಸಾಧಿಸುವುದೇ ಅಮೇರಿಕಾದ ಸಂಯುಕ್ತ ಸಂಸ್ಥಾನದಲ್ಲಿ ಮಕ್ಕಳ ಜನನದ ಸಂಖ್ಯೆಯು ಕಡಿಮೆಯಾಗಲು ಕಾರಣವೆಂದು ಹೇಳಿದ್ದನ್ನು ನೆನೆಯುವುದು ಯೋಗ್ಯವಿದೆ."

ಹೀಗೆ ಈ ಹದಿನಾರು ವರ್ಷಗಳಲ್ಲಿ ಪರಿಸ್ಥಿತಿಯು ಬದಲಾಗಿ ಹೋಗಿದೆ. ಆದರೆ ನಮ್ಮ ಮೇಲೆ ಹೊರಿಸಲ್ಪಟ್ಟ ನಿಂದೆ ಅಪವಾದಗಳೆಲ್ಲ ಬರೀ ಜನರ ಅಜ್ಞಾನ ಮತ್ತು ಅಂಧಾಭಿಮಾನದ ಪರಿಣಾಮದಿಂದಾಗಿದೆ. ನನ್ನ ಮಕ್ಕಳನ್ನು ಕುರಿತು ಹೇಳುವುದಾದರೆ ಅವರು ನನ್ನಿಂದ ಬೇರ್ಪಟ್ಟನಂತರ ಪಡೆದುದಾದರೂ ಏನು? ಅವರು ಸ್ವತಂತ್ರರಾಗುವ ಪ್ರಾಯಕ್ಕೆ ಬಂದ ಕೂಡಲೇ ಅವರು ನನ್ನ ಬಳಿಗೇನೇ ಬಂದರು. ನನ್ನ ಹಿರಿಯ ಮಗಳು ನನ್ನೊಡನೆ ಪುನಃ ಇದ್ದ ಅವಧಿಯು ಕೆಲವು ದಿನಗಳು ಅವಳ ವಿವಾಹದೊಂದಿಗೆ ಕೊನೆಗೊಂಡಿತು. ಅವಳ ಧಾರ್ಮಿಕ ಜೀವನದ ಬಗ್ಗೆ ಎಬ್ಬಿಸಲಾದ ವಾದವು ಎಷ್ಟು ಅನವಶ್ಯಕವಾಗಿ ತೋರಿತೋ

ಅದೇ ರೀತಿ ಅವಳ ಪರಲೋಕದ ಗತಿಯ ಬಗ್ಗೆ ಹೇಳುತ್ತಿದ್ದುದೆಲ್ಲ ನಿರರ್ಥಕವಾದುದೆಂದೆನಿಸುತ್ತದೆ. ಅಷ್ಟೇ ಅಲ್ಲ, ಸ್ಥಿತಿಗತಿಯನ್ನು ಸರಿಯಾಗಿ ಮತ್ತು ಮಾನವನ ಹಸ್ತೇ ಬರೆಹದ ಬಗ್ಗೆ ನಾನು ಆಲೋಚಿಸುತ್ತಿದ್ದಂತೆಯೇ ಅವರೂ ಆಲೋಚಿಸದಿರಲ್ಲದೆ, ನಾನು ಹೀಗೆ ಹಲವಾರು ಹೋರಾಟಗಳನಂತರ ನನ್ನ ದಾರಿಯನ್ನು ಕಂಡುಕೊಂಡೆನೋ ಅದೇ ರೀತಿ ಅವರು ಸಹ ತಮ್ಮ ಜೀವನದ ಎಲ್ಲ ಹಂತದಲ್ಲಿಯೂ ಬ್ರಹ್ಮಜ್ಞಾನ (Theosophy) ಸಂಸ್ಥೆಯ ಸದಸ್ಯರಾಗಿ ಸೇರಿದರು.

ಮಿತಕುಟುಂಬ ಯೋಜನೆಯನ್ನು ಸಾಧಿಸಿ ಜನಸಂಖ್ಯೆಯ ಹೆಚ್ಚುವಿಕೆಯನ್ನು ತಡೆದಿಡಬೇಕೆಂಬ ಹೋರಾಟವು ಮುಂದುವರಿಯಿತು. ರಾಬರ್ಟ ಡೇಲ್ ಓವೆನ್ (Robert Dale Owen) ಎಂಬುವನು ನೀತಿಬದ್ಧವಾದ ದೇಹಶಾಸ್ತ್ರವೆಂಬ ವಿಷಯದ ಮೇಲೆ ಬರೆದ "ವೈಯಕ್ತಿಕ, ಸಾಂಸಾರಿಕ ಮತ್ತು ರಾಷ್ಟ್ರೀಯ ಬಡತನ" ಎಂಬ ಹೆಸರಿನಿಂದ ಕಾಣಿದ ಪತ್ರಿಕವನ್ನು ಶ್ರೀ ಎಡ್ವರ್ಡ ಟ್ರುಲಾವ್ ಎಂಬುವನು ಮಾರುತ್ತಿದ್ದುದರಿಂದ ಅವನನ್ನು ವಿಚಾರಣೆಗೆ ಗುರಿಪಡಿಸಿದರು. 1878ರ ಫೆಬ್ರುವರಿಗರಲ್ಲಿ Queen's Bench ಕಚೇರಿಯಲ್ಲಿ ಪ್ರಧಾನ ನ್ಯಾಯಾಧೀಶನ ಸಮ್ಮುಖದಲ್ಲಿ ಅವನ ವಿಚಾರಣೆಯು ನಡೆಯಿತು. ಪ್ರೊ॥ ಡಬ್ಲ್ಯೂ. ಎ. ಹಂಟರ್ ಎಂಬುವನು ಪ್ರತಿವಾದಿಯ ಪರವಾಗಿ ಬಹಳ ಸಮರ್ಥವಾಗಿ ವಾದಿಸಿದನು, ಪಂಚಾಯತದಾರರು ಎರಡು ಗಂಟೆಗಳ ಕಾಲ ತಮ್ಮ ತೀರ್ಮಾನದ ಬಗ್ಗೆ ಚರ್ಚಿಸಿ ಕಡೆಗೆ ಯಾವ ತೀರ್ಮಾನಕ್ಕೂ ಬರಲು ಸಾಧ್ಯವಾಗಲಿಲ್ಲವೆಂದು ಹೇಳುತ್ತಾ, ಕಚೇರಿಗೆ ವಾಪಸು ಬಂದರು. ಶ್ರೀ ಟ್ರುಲಾವ್ ಎಂಬುವನಿಗೆ ಯಾವ ಶಿಕ್ಷೆಯನ್ನೂ ವಿಧಿಸುವುದಿಲ್ಲವೆಂದಾದರೆ ಪಂಚಾಯತಿಯ ಬಹು ಸಂಖ್ಯೆ ಸದಸ್ಯರು ಅವನಿಗೆ ದಂಡನೆಯನ್ನು ವಿಧಿಸಲೇ ಬೇಕೆಂದು ಹೇಳಿದಾಗ ಅವರಲ್ಲಿ ಒಬ್ಬನು ಕೋರ್ಟಿನಲ್ಲಿ ನಿಟ್ಟುಸಿ ಎದ್ದು ಹೀಗೆಂದನು: "ಈ ಪುಸ್ತಕವಾದರೋ ಬಹು ಸರಳ ಭಾಷೆಯಲ್ಲಿ ಸಾಮಾನ್ಯ ಜನರಿಗಾಗಿ ಬರೆಯಲ್ಪಟ್ಟುದಾಗಿದೆ, ಇನ್ನೂ ಹಲವು ಜನರು ಅದರಲ್ಲಿನ ವಿಷಯಗಳೇವೆ ಎಂಬುದಾಗಿ ನೋಡಿ ತಿಳಿಯಲೇಬೇಕೆಂದು ನಾನು ಆಲೋಚಿಸುತ್ತೇನೆ."

ಈ ಸರ್ವ ವ್ಯಕ್ತಿಯ ಕೆಚ್ಚೆದೆಯ ನುಡಿಯಿಂದಾಗಿ ಪಂಚಾಯತಿ ಮತಂತೆಯನ್ನು ವಿಸರ್ಜಿಸಲಾಯಿತು. ಆದರೆ ಶ್ರೀ ಟ್ರುಲಾವ್ ಎಂಬುವನನ್ನು ವಿಚಾರಣೆಗೊಳಪಡಿಸಿದ್ದ The Vice Society- ಈ ಸಂಸ್ಥೆಯು ಅವನನ್ನು ಅಂತೆಯೇ ಬಿಟ್ಟುಬಿಡಬಾರದೆಂದು ನಿರ್ಧರಿಸಿತು, ಅವರು ಎರಡನೇ ಬಾರಿಗೆ ವಿಚಾರಣೆಗೆ ಕರೆದರು; ಮತ್ತು ಅದಕ್ಕಾಗಿ ಬೇರೊಂದು ಪ್ರತ್ಯೇಕ ಪಂಚಾಯತಿಯನ್ನು ಬಹು ಜಾಗರೂಕತೆಯಿಂದ ನೇಮಿಸಿದರು. ಜನಸಂಖ್ಯೆಯನ್ನು

ಕಾಣುವಂತೆ ಮಾಡಲಿಕ್ಕೆಂದು ಯತ್ನಿಸಿದರೆ ಗ್ರೈಮ್ಯುವ ಜನರ ಸಂಖ್ಯೆ ಕ
ಡಿಮೆಯಾಗುವುದು ಮಾತ್ರವಲ್ಲ, ಅವರ ಕೆಲಬೂ ಹೆಚ್ಚಿನ ಸ್ಪರ್ಧಾತ್ಮಕವಾದುದು
ದರಿಂದ ಸಾಮಾನ್ಯ ಜನರ ಪರವಾಗಿ ಇರುವ ಪಂಚಾಯತಿಯ ಬದಲಾಗಿ
ಪೋಲೀಸ್ ಜ್ಯೂರಿಯು ಜನದ ಪ್ರತಿನಿಧಿಗಳ ಪಂಚಾಯತ್ತನ್ನು ನಿಯಮಿಸಿದರೆ ಕ್ವೀ
ನ್ಸ್ ತೀರ್ಪು ತಪ್ಪು ಕಡೆಗೆ ಹೋಗುವುದೆಂದು ಅವರು ನಂಬಿದ್ದರು. ಆದ
ರೆ ಇವರ ಈ ಪ್ರಯತ್ನವು ಟ್ರೂಲಾವ್ ಇವನ ವಕೀಲರಿಂದ ತಲೆಕೆಳಗಾಗಿ
ತಲ್ಲದೆ ವಿಚಾರಣೆಯನ್ನು ಹಿಂದಿನಂತೆ Old Bailey ಯಲ್ಲಿಯೇ ನಡೆಸು
ವಂತೆ ವಿಧಿಸಿದರು. ಪರಿಣಾಮವಾಗಿ ಎರಡನೇ ವಿಚಾರಣೆಯು ಬ್ಯಾರ
ನ್ ಪೊಲಕ್ (Baron Pollock) ಇವನ ಮುಂದೆ, ಹಿಂದಿನಂತೆ ಸಾಮಾ
ನ್ಯ ವರ್ಗದ ಪಂಚಾಯತ್ತರ ಸಮಕ್ಷಮದಲ್ಲಿ ನಡೆದಾಗ ಪ್ರತಿವಾದಿಯು
ಪರವಾಗಿ ಪ್ರೊ|| ಹಂಟರ್ ಮತ್ತು ಜೆ. ಎಮ್. ಡೇವಿಡ್ಸನ್ ಇವರು
ವಾದಿಸಿದರು. ಕಡೆಗೆ ಯಾವ ವಿರೋಧವೂ ಇಲ್ಲದೆ ಮಾರಾಟವಾಗುತ್ತಿ
ದ್ದ ಪುಸ್ತಕವೊಂದನ್ನು ಮಾರಿದನೆಂಬ ಕಾರಣದಿಂದ ಆ ವೃದ್ಧನಾ
ದ ಅರುವತ್ತೆಂಟು ವರ್ಷ ಪ್ರಾಯದ ಮುದುಕನಿಗೆ ಆ ಪಂಚಾಯತ್ತು
ನಾಲ್ಕು ತಿಂಗಳ ಸಜೆ ಮತ್ತು ಐವತ್ತು ಪೌಂಡುಗಳ ಜುಲ್ಮಾನೆಯ
ಶಿಕ್ಷೆಯನ್ನು ವಿಧಿಸಿತು. ಸುಮಾರು ನಲ್ವತ್ತೈದು ವರ್ಷಗಳ ಕಾಲ ಆ
ಪುಸ್ತಕವು ಜೇಕಬ್ ಹೋಲಿಯೋಕ್, ಆಸ್ಟಿನ್ ಹೋಲಿಯೋಕ್ ಮತ್ತು
ಚಾರ್ಲ್ಸ್ ವಾಟ್ಸ್ ಇವರಿಂದ ಮಾರಲ್ಪಟ್ಟಿತ್ತು. The Vice Society
ಇದರ ಪರವಾಗಿ ವಕೀಲ ಶ್ರೀ ಗ್ರೇಯಿನ್ ಇವನು ಶ್ರೀ ಟ್ರೂಲಾವ್
ಇವನಿಗೆ ಅನ್ಯಾಯವಾಗುವಂತೆ ನನ್ನ Law of Population —
ಈ ಪುಸ್ತಕದಿಂದ ಬ್ಯಾರನ್ ಪೊಲಕ್ ಹೇಳಿದ "ಈ ಅಪರಾ
ಧದ ತಲೆ ಮತ್ತು ಎದೆಯು ಬೇರೊಂದು ಮೊಕದ್ದಮೆ
(The Knolton Case) ಯಲ್ಲಿ ಇದೆ" ಎಂದು ಹೇಳಿದನ್ನು ಉ
ದಾಹರಿಸಿದನು, ಆ ವರ್ಷದ ಮೇ ತಿಂಗಳ National Reformer
ಪತ್ರಿಕೆಯಲ್ಲಿ ಈ ಅಸಹ್ಯ ಅಪ್ರಾಮಾಣಿಕತೆಗೆ ಕೋಪಗೊಂಡು ಅದ
ನ್ನು ಈ ರೀತಿಯಾಗಿ ಖಂಡಿಸಿದನು:—

"ನನ್ನ Law of Population — ಇದನ್ನು ಶ್ರೀ ಟ್ರೂಲಾವ್ ಇವ
ನಿಗೆ ವಿರೋಧವಾಗುವಂತೆ ಮತ್ತು ಅವನು ಮಾಡಿದ್ದು ಒಂದು ಮ
ಹಾ ಪ್ರಮಾದವೆಂದು ತೋರಿಸಲು, ಬಳಸಲಾಗಿದೆ. ಓರ್ವನ ಕೃತಿ
ಯು ಯಾರ ಕೈಗೂ ಸಿಗದಂತೆ ಇದ್ದಾಗ ಅಂಥಾ ಪುಸ್ತಕ
ದಲ್ಲಿ ವಿಲಕ್ಷಣ ವಿಚಾರವಿದೆಯೆಂದು ಓರ್ವ ಖೈದಿಯ ಮೇಲೆ
ಕ್ರಮವನ್ನು ತೆಗೆದುಕೊಳ್ಳುವಂಥಾ ಅಲ್ಪ ಕಾರ್ಯವು ಶ್ರೀ ಕಾಲ್ತಿಕ್ಸ
ಇವನಂಥವನಿಗೆ ಮಾತ್ರ ಸಿಕ್ಕುವಂತಾಗಿದೆ. ಶ್ರೀ ಟ್ರೂಲಾವ್ ಇವ
ನ ಮೇಲೆ ತೆಗೆದುಕೊಂಡ ಈ ಕಠಿಣ ಕ್ರಮವು Malthusian
ಸಂಘವನ್ನು ಪ್ರಚಾರ ಮಾಡುವ ನನ್ನ ಕಾರ್ಯಕ್ರಮವನ್ನು

ನಾನು ಹೆದರಿ ನಿಲ್ಲಿಸಬಹುದೆಂದು ಶ್ರೀ ಕಾಲಿನ್ಸ್ ಮತ್ತು ಇತರ ಗಣ್ಯರು ಊಹಿಸುತ್ತಿದ್ದಾರೆಯೇ? - ಆ ರೀತಿಯೇನೂ ಆಗಲಾರದೆಂದು ನಾನು ಈಗ ಪ್ರತಿಯೊಬ್ಬನಿಗೂ ಖಂಡಿತವಾಗಿಯೂ ಹೇಳುತ್ತೇನೆ, ಶ್ರೀ ಕಾಲಿನ್ಸ್ ಮತ್ತು ಅವನ The Vice Society - ಇವೆಲ್ಲ ಸತ್ತು ಹೋಗಿ ಹೂಳಲ್ಪಟ್ಟಿದ್ದಾರೆ ಎಂಬುದಾಗಿ ಭಾವಿಸಿ ನಾನು Law of Population ಹೊತ್ತಗೆಯನ್ನು ಮಾರಾಟ ಮಾಡುವುದನ್ನು ಮುಂದುವರಿಸಿ ಜನಸಂಖ್ಯೆಯನ್ನು ವೈಜ್ಞಾನಿಕವಾಗಿ ಹೇಗೆ ಮಿತವಾಗಿಡಬಹುದೆಂಬುದನ್ನು ಪ್ರತಿಪಾದಿಸುತ್ತೇನೆ. ಬದುಕಿ: ಅವರು ನನ್ನ ಮೇಲೆ ಕ್ರಮವನ್ನು ತೆಗೆದುಕೊಳ್ಳಲಿಚ್ಛಿಸುವವರು; ನನ್ನನ್ನು ವಿಚಾರಣೆಗೊಳಪಡಿಸಿ ನನಗೆ ವಿರೋಧವಾಗಿ ತೀರ್ಪನ್ನು ಹೊರಡಿಸಿ ಮತ್ತು ನನ್ನನ್ನು ಸೆರೆಮನೆಗೆ ಕಳುಹಿಸುವುದರಲ್ಲಿ ಜಯಪ್ರದರಾದರೆ ನನ್ನ ಅಪರಾಧವನ್ನು ಜನರು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಓದುವ ಕಾತರವನ್ನು ಹುಟ್ಟಿಸುವವರಲ್ಲದೆ ನನ್ನ ಅಭಿಪ್ರಾಯಗಳನ್ನು ಪ್ರತಿಭಟಿಸುವ ಅವರು ನನಗೆ ಸರ್ವಪ್ರಬಲ ಬೋಧಕರೆಂದೆನಿಸುತ್ತಾ ಗೌರವಸ್ಥಾನವನ್ನು ಕಲ್ಪಿಸಿದಂತಾಗುತ್ತದೆ.

ಈ ಟ್ರೂಲಾವ್ ಸಂಬಂಧ ಮೊಕದ್ದಮೆಯಲ್ಲಿ Writ of Error ಇದನ್ನು ಪಡೆಯಲು ತುಂಬಾ ಪ್ರಯತ್ನಿಸಲಾಯಿತು. ಬ್ರ್ಯಾಡ್ಲೆ ಮತ್ತು ನನ್ನ ಸಂಬಂಧವಾಗಿದ್ದ ವಿಚಾರಣೆಯಲ್ಲಿ ಯಾವ ಕಾರಣದಿಂದ ಅಂತಹ Writ ಅರ್ಜಿಯನ್ನು ಹಾಕಲು 'ಕೋರ್ಟ್' ಅನುಮತಿಯನ್ನಿತ್ತಿತೋ ಅದೇ ಕಾರಣದಿಂದ ಈಗಲೂ ಕೇಳಿದರಾದರೂ ಟೋರಿ ಪಕ್ಷದ ಸರಕಾರೀ ವಕೀಲನು, ಸರ್ ಜಾನ್ ಹಾಲ್ಕರ್ ಇವನು ಅದಕ್ಕೆ ನಿರಾಕರಿಸಿದನು. ಆದುದರಿಂದ ಶ್ರೀ ಟ್ರೂಲಾವ್ ಇವನು ತನಗೆ ವಿಧಿಸಲಾದ ಶಿಕ್ಷೆಯನ್ನು ಬಲಾತ್ಕಾರಿಕವಾಗಿ ಅನುಭವಿಸಲೇಬೇಕಾಯಿತು, ಆದರೆ ಅವನನ್ನು ಬಿಡುಗಡೆ ಮಾಡಬೇಕೆಂದು ದೇಶದ ಎಲ್ಲಾ ಕಡೆಗಳಿಂದ ಜನರು 11,000 ಸಹಿಗಳಿಂದ ಕೂಡಿದ ಒಂದು ಮನವಿಯನ್ನು ಗೃಹಮಂತ್ರಿಗೆ ಕಳುಹಿಸಿದರು. ಅಷ್ಟೇ ಅಲ್ಲ, ಲಂಡನ್ನಿನ ಸೇಂಟ್ ಜೇಮ್ಸ್ ಸಭಾಂಗಣದಲ್ಲಿ ಕಿಕ್ಕಿರಿದು ನೆರೆದ ಸಭೆಯೊಂದರಲ್ಲಿ ಬರೀ ಆರು ಜನ ಅಲ್ಲದೆ ಎಲ್ಲರೂ ಅವನನ್ನು ಬಿಡುಗಡೆ ಮಾಡಬೇಕೆಂದು ಒಕ್ಕೊರಲಿನ ತೀರ್ಮಾನಿಸಿದರು. ಹಾಗಿದ್ದರೂ ಈ ಎಲ್ಲಾ ಚಳವಳಿಗಳು ಟ್ರೂಲಾವ್ ಇವನ ಸೆರೆಮನೆವಾಸದ ಅವಧಿಯನ್ನು ಒಂದು ದಿನವಾದರೂ ಕಡಿಮೆ ಮಾಡಲಿಲ್ಲ, ಅಲ್ಲದೆ ಸೆಪ್ಟೆಂಬರ್ ೫ರ ವರೆಗೂ ಅವನು Coldbath Fields ಜೈಲಿನಿಂದ ಬಿಡುಗಡೆಯಾಗಲಿಲ್ಲ. ಅದೇ ತಿಂಗಳು ೧೨ನೇ ದಿನ Hall of Science - ಇದರಲ್ಲಿ ಅವನ ಗೌರವಾರ್ಥವಾಗಿ ಉತ್ಸಾಹದಿಂದ ನೆರೆದ ಅವನ ಮಿತ್ರರ ಸಭೆಯಲ್ಲಿ ಅವನಿಗೆ ಅಲಂಕಾರಿಕವಾಗಿ ಬರೆದು ಅರ್ಪಿಸಿದ ಬಿನ್ನವತ್ತಳೆಯೊಡನೆ ಚಂದಾ ಎತ್ತಿ ಸಂಗ್ರಹಿಸಿದ 177 ಪೌಂಡುಗಳ ಸಹಿತವಾದ ನಿಧಿ (ಒಟ್ಟು

ಸುಮಾರು 198 ಶಿಲಿಂಗುಗಳು) ಹಣವನ್ನು ಅವನಿಗೆ ಅರ್ಪಿಸಲಾಯಿತು.

ಈ ವ್ಯಾಜ್ಯದ ಪರಿಣಾಮವೋ ಎಂಬಂತೆ ಹೇಳುವ ಉದ್ದಗಲಕ್ಕೂ ದೊಡ್ಡ ಚಳವಳಿಯು Malthusian ವಾದದ ಪರವಾಗಿಯೂ ಅದಕ್ಕೆ ಬೇಕಾದಂಥಾ ಜನಪ್ರಿಯತವಾದ ಪ್ರಚಾರವೂ ಲಭಿಸಿತೆಂದು ಹೇಳಬೇಕಾದ ಅವಶ್ಯಕತೆಯಿಲ್ಲ. ಸ್ವತಂತ್ರ ವಾಗ್ವಾದಗಳನ್ನು ನಡೆಸಬೇಕೆಂಬ ಸಲಹೆಯ ಪರವಾಗಿ ದೊಡ್ಡ ಪ್ರತಿಭಟನಾ ಸಭೆಗಳೂ ಮೆರವಣಿಗೆಗಳೂ ನಡೆದುವು. ಒಮ್ಮೆ ಮ್ಯಾಂಚೆಸ್ಟರ್‌ನ Free Trade Hall ನಲ್ಲಿ ಜನರು ಕಿಕ್ಕಿರಿದು ನೆರೆದಿದ್ದರು. ಇನ್ನೊಮ್ಮೆ ಬ್ರ್ಯಾಡ್‌ಫರ್ಡ್‌ನ Star Music Hall ಇದು ಜನಸಂದಣಿಯು ನೂಕುನುಗ್ಗಲಾಟಕ್ಕೆ ಒಳಗಾಯಿತು. ಮತ್ತೊಮ್ಮೆ ಬರ್ಮಿಂಗ್‌ಹ್ಯಾಮಿನ ಸಭಾಂಗಣದಲ್ಲಿ ನಿಲ್ಲಲಿಕ್ಕೆ ಸಹ ಸ್ಥಳವಿಲ್ಲದಂತೆ ಜನರು ಗುಂಪುಗೂಡಿದರು. ನಾವು ಒಟ್ಟಾಗಿಯಾಗಲೀ ಬೇರೆ ಬೇರೆಯಾಗಲೀ ಹೋದೆಡೆಯಲ್ಲೆಲ್ಲ ಇದೇ ರೀತಿಯಾಗಿತ್ತು. Malthusian ವಿಷಯವಾಗಿ ಭಾಷಣಗಳನ್ನೂ ಅದಕ್ಕೆ ಸಂಬಂಧಿಸಿ ಬರಹಗಳನ್ನೂ ಅಲ್ಲದೆ ಪ್ರಗತಿಗಾಮಿ ವಾದಗಳು ಮತ್ತು Free-thought ವಿಷಯವಾಗಿ ಭಾಷಣಗಳನ್ನು ಜನರು ಮೊದಲಬಾರಿಗೆ ಸಹಸ್ರಗಟ್ಟಲೆಯಲ್ಲಿ ನೆರೆದು ಕೇಳಿದರಲ್ಲದೆ ಸರ್ವಮತ ಪ್ರತಿಪಾದನೆ (secularism) ಎಂದರೇನೆಂಬುದನ್ನು ತಿಳಿಯಲು ಹಾತೊರೆದರು.

ಲಂಡನ್ನಿನ ಮತ್ತು ಒಳಪ್ರಾಂತಗಳ ಪತ್ರಿಕೆಗಳಲ್ಲಿ ಮೇಲೆ ಹೇಳಿದ ಮೊಕದ್ದಮೆಯು ಕೇವಲ ತಿಳಿಗೇಡಿತನವೆಂಬುದಾಗಿ ಒಕ್ಕೊರಲಿನಿಂದ ಸಾರಿದುವು. ತಪ್ಪೆಂದು ಹೇಳಿ ಖಂಡಿಸಲಾದ ಪುಸ್ತಕಗಳು ಮಾರಾಟ ಮತ್ತು ಪ್ರಚಾರದಿಂದ ಮತ್ತು ಅವುಗಳ ಪ್ರಕಟಣೆಯ ಹಕ್ಕನ್ನು ಎತ್ತಿಹಿಡಿದು ಅದರ ಪರವಾಗಿ ವಾದಿಸಿದವರ ಜನಪ್ರಿಯತೆಯು ಕಾರಣದಿಂದ ಹಾಗಾಯಿತೆಂದು ಎಲ್ಲರೂ ಒಪ್ಪಿದರು. ಧಾರ್ಮಿಕ ವಿಚಾರದಲ್ಲಿ ನಮ್ಮೊಡನೆ ಒಪ್ಪದೆಯೇ ಇದ್ದವರೂ, ಕೋರ್ಟ್ ವ್ಯವಹಾರಗಳು ನಮ್ಮ ಮೇಲೆ ಇದ್ದ ಕಾರಣದಿಂದ ನಮ್ಮನ್ನು ಟೀಕಿಸಲು ಅದೇ ಒಂದು ಸುಸಂದರ್ಭವೆಂದು ತಿಳಿದುಕೊಂಡವರಿಲ್ಲ. ನಮ್ಮನ್ನು ಉಗ್ರವಾಗಿ ವಿರೋಧಿಸಿದರು. ಕಳೆದ ಕೆಲವು ವರ್ಷಗಳಿಂದ ಸಾರ್ವಜನಿಕ ಅಭಿಪ್ರಾಯವು ನಮಗೆ ಅನುಕೂಲವಾಗಿಯೇ ಇದೆ. "ಜಾತಿಹೀನರಾಗಿರುವ ಲಂಡನ್ನಿನ ಜನರ ಕಹಿಯಾದ ಮೊರೆ" ಎಂಬುದಾಗಿ 1884 ರಲ್ಲಿ ಎಬ್ಬಿಸಿದ ಗಲಾಟೆಯಿಂದ ಮತ್ತು ನಮ್ಮ ದೇಶದ ವಾಣಿಜ್ಯ ಕ್ಷೇತ್ರದಲ್ಲಿ ತುಂಬಾ ನಷ್ಟವು ಸಂಭವಿಸಿದ್ದರಿಂದ ಆದ ಆ ಬಡತನದ ಒತ್ತಡದಿಂದ Daily News ಪತ್ರಿಕೆಯ ಹಲವು ಲೇಖಕರು, ಮತ್ತು ಜಿ. ಆರ್. ಸಿಮ್ಸ್ ಇವರು ಈ ಪರಿಸ್ಥಿತಿಗೆ ಬಡತನದಿಂದ ಬಳಲುವವರ ದೊಡ್ಡ ಸಂಸಾರವೇ ಕಾ

ರಣಾವಿಂದು ನ್ಯಾಯವಾಗಿ ಘೋಷಿಸುತ್ತಾ, ನಗರಗಳಲ್ಲಿ ಕಷ್ಟಪಡುತ್ತ, ಅವರ ಶ್ರಮವನ್ನು ಹೇಗೆ ನಿವಾರಿಸಬೇಕೆಂಬುದರ ಬಗ್ಗೆ ವಿಚಾರಜ್ಞಾನವನ್ನು ಕೊಡುತ್ತಿದರೆ ನಮ್ಮ ಮೇಲೆ ಕ್ರಮವನ್ನು ತೆಗೆದುಕೊಂಡು ವಿಚಾರಣೆಗೊಳಪಡಿಸಿದರೆಂಬುದಾಗಿಯೂ ಅವನು ಹೊಗಳಿದನು,

ಜನಸಂಖ್ಯೆಯ ಸಮಸ್ಯೆಯನ್ನು ಕುರಿತು ವಾದಿಸಿದಕ್ಕೆ ವಿಚಾರಣೆ ನಡೆಸಿ ಶಿಕ್ಷಿಸುವ ನೀತಿಯನ್ನು ರದ್ದುಪಡಿಸಬೇಕೆಂಬುದಕ್ಕೆ ಬಿಟ್ಟು ಎಲ್ಲ ಮತ್ತು ಎಲ್ಲಾ ಪ್ರಾಯೋಗಿಕ ಸಾಧನೆಗಳ ಮೂಲಕ ಜನಸಂಖ್ಯಾ ನಿಯಮ, ಪರಿಣಾಮ ಮತ್ತು ಅದರಿಂದ ಮಾನವನ ವರ್ತನೆ, ಮನೋಧರ್ಮದ ಪ್ರಚಾರ - ಇವು ಈವರೆಗೆ ಹೇಳಿದ ಆ ವ್ಯಾಜ್ಯಗಳ ಪರಿಣಾಮದಿಂದಾದುವಲ್ಲದೆ Malthusian League - ಇದರ ಸ್ಥಾಪನೆಯೂ ಆಯಿತು. ಈ ಕೂಟದ ಮೊದಲನೇ ಸಭೆಯು Hall of Science - ಇದರಲ್ಲಿ 1877 ನೇ ವರ್ಷದ ಜುಲೈ 26ರಲ್ಲಿ ನಡೆಯಿತು. ಆಗ ಇಪ್ಪತ್ತು ಜನರಿಂದ ಕೂಡಿದ ಒಂದು ಸಮಿತಿಯನ್ನು ನೇಮಿಸಲಾಯಿತು. ಆ ವರ್ಷದ ಆಗಸ್ಟ್ - ೨ ರಂದು ನಡೆದ ಸಭೆಯಲ್ಲಿ ಡಾ. ಸಿ.ಆರ್. ಡ್ರಿಸ್‌ಡೇಲ್ ಇವರು ಅಧ್ಯಕ್ಷ, ಶ್ರೀ ಸ್ವಾಗ್‌ಮನ್, ಖಜಾಂಚಿ ಮತ್ತು ಶ್ರೀಮತಿ ಬೆಸೆಂಟ್ ಕಾರ್ಯದರ್ಶಿ, ಇವರಿಂದ ಕೂಡಿದ ಸಮಿತಿಯ ಚುನಾವಣೆಯಾಯಿತು. 1877 ರಿಂದ ಈ ಸಮಿತಿಯ ಅವಿಶ್ರಾಂತ ಪರಿಶ್ರಮದಿಂದ ಆ ಸಂಸ್ಥೆಯ ಉದ್ದೇಶವನ್ನು ಸಾರೋಣಿಸುವಲ್ಲದೆ ಹಲವು ಕರಪತ್ರಗಳನ್ನೂ ಕಿರುಹೊತ್ತಿಗೆಗಳನ್ನೂ ಪ್ರಚಾರಪಡಿಸಿತು. Malthusian ಎಂಬ ಮಾಸಿಕ ಪತ್ರಿಕೆಯನ್ನು ಈ ಸಂಸ್ಥೆಯು ಪ್ರಕಟಿಸುತ್ತದೆ. ಅದರ ಆಶ್ರಯದಲ್ಲಿ ನೂರಾರು ಭಾಷಣಗಳೂ ಕೊಡಲಾದುವು. ಆ ಸಂಸ್ಥೆಗೆ ತಜ್ಞರಾದ ಗಂಡಸರು ಮತ್ತು ಹೆಂಗಸರು ವೈದ್ಯರು ಅದರ ವೈದ್ಯಕೀಯ ವಿಭಾಗದಲ್ಲಿ ದುಡಿಯುತ್ತಿರುವರಲ್ಲದೆ ಇದರ ಸದಸ್ಯರು ಯೂರೋಪಿನ ಎಲ್ಲಾ ದೇಶಗಳಲ್ಲೂ ಇದ್ದಾರೆ,

ಮೇಲೆ ಹೇಳಿದ ವ್ಯಾಜ್ಯದಿಂದಾದ ಇನ್ನೊಂದು ಪರಿಣಾಮವೆಂದರೆ National Reformer ಪತ್ರಿಕೆಯು ಕಾರ್ಮಿಕ ವರ್ಗಕ್ಕೆ "D." ಇವನನ್ನು ದೊರಕಿಸಿದ್ದೇ ಆಗಿದೆ, ಸಮರ್ಥನೂ ವಿಚಾರಪರನೂ ಆದ ಈ ಲೇಖಕನ ನಮ್ಮ ವಿರೋಧವಾಗಿ ಕ್ರಮವನ್ನು ತೆಗೆದುಕೊಂಡಿದ್ದುದು ತಿಳಿದಾಗ, ನಮ್ಮ ಸಂಗತಿಕ್ಕೆ ಅವನು ಸೇರಿದನಲ್ಲದೆ ನಮ್ಮನ್ನು ಅನಿರೀಕ್ಷಿತವಾಗಿ ಬಂಧಿಸಿದಾಗ ಆ ಪತ್ರಿಕೆಯನ್ನು ನಡೆಸಲು ತಾನಾಗಿಯೇ ಮುಂದೆ ಬಂದನು, ಅಂದಿನಿಂದ ಇಂದಿನವರೆಗೂ ಈ ಹದಿನೈದು ವರ್ಷಗಳ ಅವಧಿಯಲ್ಲಿ ಅವನ ಲೇಖನಿಯಿಂದ ಬರೆದ ಲೇಖನಗಳು ಪ್ರತಿವಾರವೂ ಪ್ರಕಟವಾಗುತ್ತಲೇ ಇದ್ದುವು, ಆ ದೀರ್ಘ ಅವಧಿಯಲ್ಲಿ ಸಂಪಾದಕರಿಗೂ ಪಾಲುದಾರರಿಗೂ ಯಾವುದೇ ಒಂದು ತೊಂದರೆಯಾಗಲೀ ಉಂಟಾ

ಹುದಿಲ್ಲ, ಹೊರಗೆ ಕಾಣುವಂತೆ ವಿಶ್ವಾಸಪಾತ್ರನಾದ ಸಹೋದ್ಯೋಗಿಯಾಗಿ ಒಳಗೆ ಬಹು ಧಾರ್ಮಿಕ ಹಾಗೂ ನಿಷ್ಠಾವಂತ ಮಿತ್ರನಾಗಿ "D" ಇವನು ನಮ್ಮ ವ್ಯಾಜ್ಯದ ವೇಳೆಗೆ ನಮಗೆ ದೊರೆತ ಅಪೂರ್ವ ಕೊಡುಗೆಯೂ ನಮಗೆ ಅಗತ್ಯವಾಗಿದ್ದ ಉಪಕಾರಿಯೂ ಆಗಿದ್ದನು.

ಆದರೆ ನಮ್ಮ ವೈರಿಗಳು ನಮಗೆ "D" ಇವನನ್ನು ಮಾತ್ರ ನಮಗೆ ದೊರಕಿಸಿ ಕೊಟ್ಟಿದ್ದಲ್ಲ, ಆ ವ್ಯಾಜ್ಯದ ಕಾಲದಲ್ಲಿ ರಕ್ಷಣಾ ಸಮಿತಿಯ ಕಾರ್ಯದರ್ಶಿ ಶ್ರೀ ಟೌಜೊ ಶೇರಿಸ್ ಇವನ ಪತ್ನಿ ಆನಿ ಶೇರಿಸ್ ಇವಳ ನಿಕಟ ಸಂಪರ್ಕವು ನನಗೆ ಉಂಟಾದುದರ ನೆನಪನ್ನು ನಾನು ಮಾಡದೇ ಇದ್ದ ವಿಷಯವೇ ಇಲ್ಲ. ನಮ್ಮ ಹೋರಾಟದ ಆ ದೀರ್ಘ ಅವಧಿಯಲ್ಲಿ ಮತ್ತು ವೈಯಕ್ತಿಕವಾಗಿ ನಾನು ಅನುಭವಿಸಿದ ನನ್ನ ದುಃಖದ ದಿನಗಳಲ್ಲಿ ಮತ್ತು ಅನಂತರ ನನ್ನ ಮಗಳು ಯಾರ ವಶದಲ್ಲಿರಬೇಕೆಂಬುದಾಗಿ ಎದ್ದ ಗೊಂದಲದ ವೇಳೆಯಲ್ಲಿ ನನ್ನ ಮಿತ್ರರ ಪೈಕಿ ಅವಳು ಒಬ್ಬ ಮಮತೆಯ ಸೋದರಿಯಂತೆ ನನಗೆ ನೆರವಾದಳು. ನನ್ನ ಜೀವನದ ಕಡೇ ದಿನಗಳವರೆಗೂ ಇರುವ ಇತರ ಒಂದೆರಡು ಗೆಳೆತನಗಳೂ ನಾನು ಆಲ್ಲಿ ಕಷ್ಟಕ್ಕೀಡಾಗಿದ್ದ ಆ ಕಾಲದಲ್ಲಿಯೇ ನನಗೆ ದೊರೆತವಾಗಿವೆ. ನಾಲ್ಟನ್ ಮೊಕದ್ದಮೆ ಮತ್ತು ಇತರ ವ್ಯವಹಾರಗಳ ಕಾಲದಲ್ಲಿ ಕೋರ್ಟ್ ಖರ್ಚಿಗಾಗಿ ಸಾರ್ವಜನಿಕರಿಂದ ಎತ್ತಿದ ಹಣದ ಮೊತ್ತವು ನಮ್ಮ ಚಳವಳಿಯಲ್ಲಿ ಜನರಿಗಿದ್ದ ಅಭಿಮಾನದ ಪರಿಮಿತಿಯನ್ನು ತೋರಿಸುತ್ತದೆ, 1878 ರ ಮಾರ್ಚ್ ತಿಂಗಳಲ್ಲಿ ರಕ್ಷಣಾ ನಿಧಿ ಸಮಿತಿಯು ಹೊರಡಿಸಿದ ಲೆಕ್ಕದ ಪ್ರಕಾರ ಚಂದಾ ಎತ್ತಿದ ಹಣವು 1292 ಪೌಂಡು 5 ಶಿಲ್ಲಿಂಗ್ 4 ಪೆನ್ಸ್ ಆಗಿತ್ತು, ಅದರಲ್ಲಿ ಟ್ರುಲಾವ್ ವ್ಯಾಜ್ಯ ಮತ್ತು ಶ್ರೀ ವಾಘಾನ್ ಇವನ ಆಜ್ಞೆಯ ವಿರೋಧವಾಗಿ ಸಲ್ಲಿಸಿದ ಮನವಿಗೆ ಖರ್ಚು ಒಟ್ಟಿಗೆ 1274 ಪೌಂಡು 10 ಶಿಲ್ಲಿಂಗ್ ಆಗಲು ಉಳಿದ 17 ಪೌಂಡು 15 ಶಿಲ್ಲಿಂಗ್ 4 ಪೆನ್ಸ್‌ಗಳನ್ನು ಟ್ರುಲಾವ್ ವ್ಯವಹಾರ ಮತ್ತು ನಾಲ್ಟನ್ ಹೊತ್ತಗೆಯನ್ನು ಕಾಣೆಯಾಗಿಸಿದ್ದರ ಬಗೆ ಹೂಡಿದ ಮನವಿ ಮತ್ತು ನನ್ನ ವಿರುದ್ಧವಾಗಿ ಇದ್ದ ತಕರಾರುಗಳನ್ನು ಕುರಿತಾದ ಪತ್ರ ವ್ಯವಹಾರಗಳಿಗೆ ವೆಚ್ಚವಾಯಿತು. ಈ ಹೊಸ ನಿಧಿಯ ಆ ವರ್ಷದ ಜಮೆಯಲ್ಲಿ 196 ಪೌಂಡು 16 ಶಿಲ್ಲಿಂಗ್ 7 ಪೆನ್ಸ್‌ಗಳಾಗಿತ್ತು. ಟ್ರುಲಾವ್ ವ್ಯವಹಾರದಲ್ಲಿ ಆದ ಖರ್ಚು ಕಳೆದು ಉಳಿದಿದ್ದ 26 ಪೌಂಡು 15 ಶಿಲ್ಲಿಂಗ್ ಎರಡು ಪೆನ್ಸ್‌ಗಳನ್ನು ಮುಂದಿನ ಲೆಕ್ಕಕ್ಕೆ ಸೇರಿಸಲು ಆ ನಿಧಿಯು ಒಟ್ಟಿಗೆ 247 ಪೌಂಡು 15 ಶಿಲ್ಲಿಂಗ್ ಮೂರು ಪೆನ್ಸ್ ಆಯಿತು. ನಾಲ್ಟನ್ ವ್ಯವಹಾರದ ಬಗೆ, ಬ್ರ್ಯಾಡ್ಲೋಯ ಜಯಪ್ರದವಾದ ಮನವಿ, ಪೋಸ್ಟರ್ ಕಚೇರಿಯಲ್ಲಿ ನನ್ನ

ರುದ್ಧವಾದ ತೀರ್ಮಾನ, ಕೋರ್ಟು ಖರ್ಚುಗಳು ಮತ್ತು ಟ್ರೂಲಾವ್
ನವರ ಕಾರಣವಾಗಿ ಡೇಲ್ ಓವೆನ್ ಹೊತ್ತಗೆಯನ್ನು ಹಾಳುಮಾಡಿದ
ರೆಂಬ ವಿಚಾರದ ಮೇಲೆ ಅರ್ಜಿಸಿದ ಮನವಿ, (ಮಾದಕ್ಕವವ್ರಾತ್
ಜಯಪ್ರದವಾಗಿದ್ದರೂ) ಅವುಗಳು ಖರ್ಚಿಗೆ ಮೇಲೆ ಸೂಚಿಸಿದ
ನಿಧಿಯನ್ನು ವಿನಿಯೋಗಿಸಲಾಯಿತು. ಈ ಡೇಲ್ ಓವೆನ್ ಹೊತ್ತ
ಗೆಯನ್ನು ಕುರಿತಾದ ತೀರ್ಪು 1880ರ ಫೆಬ್ರವರಿ 2 ರಂದು ಪ್ರ
ಕಟವಾಯಿತು. ಅದರೊಡನೆಯೇ ಆ ರಕ್ಷಣಾ ನಿಧಿಯೂ ರದ್ದಾಯಿ
ತು. ಮೇಲೆ ಹೇಳಿದಂತೆ ಶ್ರೀ ಟ್ರೂಲಾವ್ ಇವನ ಬಿಡುಗಡೆಯ
ನಂತರ ಅದರ ಶೇಷಾನಿಧಿಯಾಗಿ 19.7 ಪೌಂಡು 16 ಶಿಲ್ಲಿಂಗ್
ಮೂರು ಪೆನ್ನಿಗಳನ್ನು ಅವನಿಗೆ ಚಿನ್ನವತ್ತುಳಿಯೊಡನೆ ನಿಧಿಯಾಗಿ
ಒಪ್ಪಿಸಿದ ನಂತರ ನಾವು ತೋರಿಸಿದ "ಸ್ಥೈರ್ಯ, ಸಾಮರ್ಥ್ಯ"ಗ
ಳನ್ನು ಮೆಚ್ಚಿ ಅನಾಮಧೇಯ ಮಿತ್ರನೊಬ್ಬನು ನನಗೆ ವೈಯ
ಕ್ತಿಕವಾಗಿ 200 ಪೌಂಡುಗಳನ್ನು ಕಳುಹಿಸಿಕೊಟ್ಟನು. ಇದರ ಜ
ತೆಗೆ Malthusian League- ಈ ಸಂಸ್ಥೆಯು ಅದರ ಜೀವನದ
ಮೊದಲ ವರ್ಷದಲ್ಲಿಯೇ 403 ಪೌಂಡು 11 ಶಿಲ್ಲಿಂಗ್ 9 ಪೆನ್ಸ್‌ಗ
ಳನ್ನು ಶೇಖರಿಸಿ ಅದರ ಎರಡನೇ ವರ್ಷವನ್ನು 77 ಪೌಂಡು ಏಳು
ಶಿಲ್ಲಿಂಗ್ ಎಂಟು ಪೆನ್ಸ್‌ಗಳ ಉಳಿತಾಯದಿಂದ ಪ್ರಾರಂಭಿಸಿತು.

ಸಾಧಾರಣ ಇದೇ ರೀತಿಯಾಗಿ ಅಮೇರಿಕಾದಲ್ಲಿ ಒಂದು
ವ್ಯಾಜ್ಯವು ನಡೆಯಿತು. ಶ್ರೀ ಡಿ. ಎಂ. ಬೆನ್ನೆಟ್ಟ್ ಎಂಬ ಪುಸ್ತಕ
ವ್ಯಾಪಾರಿಯು ಆಕ್ಷೇಪಣೀಯವಾದ ಒಂದು ಪುಸ್ತಕವನ್ನು
ಮಾರಿದನೆಂಬ ಕಾರಣದಿಂದ ಸೆರೆಮನೆಗೊಯ್ಯಲ್ಪಟ್ಟನು.
ಅವನ ಬಿಡುಗಡೆಯಾದನಂತರ ಮತ್ತು ಅವನು ಇಂಗ್ಲೆಂಡಿಗೆ
ಬಂದಿದ್ದಾಗ್ಯೂ ನಾವು ಅವನಿಗೆ ಹಾರ್ದಿಕ ಸ್ವಾಗತವನ್ನಿತ್ತೆವು. Hall
of Science-ನಲ್ಲಿ ಕಿಕ್ಕಿರಿದು ನೆರೆದ ಸಭೆಯೊಂದರಲ್ಲಿ ನಾ
ವು ಅವನನ್ನು ಆಹ್ವಾನಿಸಿದೆವು. ಅವನಿಗೆ ಒಂದು ಪ್ರಶಸ್ತಿ ಪತ್ರ
ವನ್ನರ್ಪಿಸುವುದಕ್ಕೆ ನನ್ನನ್ನು ನಿಯೋಗಿಸಿದ್ದರು. ನಾನು ಅಂ
ತೆಯೇ ಮಾಡಿದೆನು. ಆಗ ನನ್ನಲ್ಲಿದ್ದ ಸ್ಫೂರ್ತಿಯೆಂತಿತ್ತು ಎಂ
ಬುದಕ್ಕೆ ನಾನು ಅಂದು ಕೊಟ್ಟ ಭಾಷಣವನ್ನೇ ಇಲ್ಲಿ ಪುನಃ ಹೇಳುವೆನು.

"ಮಿತ್ರರೆ, ನಾವು ಇಂದು ಇಲ್ಲಿ ಸೇರಿದ ಉದ್ದೇಶವನ್ನು
ಶ್ರೀ ಬ್ರ್ಯಾಡ್ಲೆಯವರು ಈ ಸಾಯಂಕಾಲ ನಮಗೆ ಹೇಳಿದ್ದಾರೆ. ನಮ್ಮ
ಕಾರ್ಯಕ್ಷೇತ್ರದಲ್ಲಿ ನಾವು ನೆರವೇರಿಸಿ ಅಭ್ಯಾಸವಿಲ್ಲದ ಕರ್ತವ್ಯ
ವೆಂಬುದು ಒಂದು ಎಂಬುದಾಗಿ ಹೇಳಲು ಸಂತೋಷಿಸುತ್ತೇನೆ.
ನಮ್ಮ ಸೈನ್ಯದಲ್ಲಿ ಪ್ರೌಢಗಳ ಸಂಖ್ಯೆಗಿಂತಲೂ ಕರ್ತವ್ಯತತ್ಪ
ರಾದ ಸಿಪಾಯಿಗಳು ಹೆಚ್ಚು ಇದ್ದಾರೆ. ಅಪಾಯದ ಕಾಲದಲ್ಲಿ
ತಲೆ ತಪ್ಪಿಸಿಕೊಳ್ಳುತ್ತಿರುವವರಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ

ಸತ್ಯವನ್ನು ನುಡಿಸಿದ ಅವರ ಮೇಲೆ ಇಟ್ಟ ವಿಶ್ವಾಸವನ್ನು ದಕ್ಷತೆ
ಯಿಂದ ತೋರಿಸುವವರು ಇದ್ದಾರೆ, ಆಂಗ್ಲ ಜನರ ಪ್ರೀತಿ ವಿಶ್ವಾಸ
ಗಳನ್ನು ಇಲ್ಲಿ ಈ ಸಾಯಂಕಾಲ ಸೇರಿದ ಜನರ ಸಂಖ್ಯೆಯನ್ನು
ನೋಡಿ ತಿಳಿಯಬೇಕೆಂದು ನಾನು ಶ್ರೀ ಚರ್ಚಿಲ್ಲ ಇವರಲ್ಲಿ ಕೇಳಿ
ಕೊಳ್ಳುತ್ತೇನೆ, ಇಲ್ಲಿ ಇರುವವರು ನಮ್ಮ ದೇಶದ ಹಲವು ಸಾವಿ
ರ ಮೈಲಿ ಜನರ ಪ್ರತಿನಿಧಿಗಳಾಗಿದ್ದಾರೆ, ಮತ್ತೆ ಇರುವ ಈ
ಮೇಜವನ್ನು ನೋಡಿರಿ, ಇಂಗ್ಲೆಂಡಿನ ಸಹಸ್ರಾರು ಜನರ ಪರವಾ
ಗಿ ನಾವು ನಿಮ್ಮನ್ನು ಸ್ವಾಗತಿಸುತ್ತಿದ್ದೇವೆ, ಎಂಬುದಕ್ಕೆ ಸತ್ಯತೆ
ಯು ಇಲ್ಲದೆ ಇಲ್ಲ, ನಮ್ಮನ್ನು ಧರ್ಮನಿಂದಕರಿಂದ ಬಿಡಿಸುವಲ್ಲಿ
ರಾಜನೀತಿಯು ಬಗೆ ಕ್ರಿಶ್ಚನ್ ನಮ್ಮನ್ನು ಆಳುವವರು ಇದ್ದಾ
ರೆ, ನಮ್ಮ ಮತ್ತು ಆತ್ಮಸಾಕ್ಷಿಗನುಸಾರವಾಗಿ ನಿಷ್ಠೆಯಿಂದ ನಡೆಯು
ವ ಗಂಡಸರು ಮತ್ತು ಹೆಂಗಸರು ಯಾವ ಧರ್ಮ ಮಂದಿರದಲ್ಲಿ
ಕಾಣಸಿಕ್ಕುವರು? ಸತ್ಯವನ್ನು ನಾವು ಎಲ್ಲಿಯ ವರೆಗೆ ಪಾಲಿಸು
ತ್ತೇವೋ ಅಲ್ಲಿಯ ವರೆಗೆ ನಾವು ಧರ್ಮನಿಂದಕರಾಗಲಾರೆವು,
ರಾಷ್ಟ್ರೀಯ ಪ್ರಾತಿನಿಧ್ಯದ ಬಗ್ಗೆ ನಾನು ಹಿಂದೆ ಹೇಳಿದಂತೆ ಈ ಹ
ಜಾರದಲ್ಲಿ ಈ ಸಾಯಂಕಾಲ ಇರುವವರನ್ನು ಕುರಿತು ಹೇಳು
ವುದಿದ್ದರೆ ಕೆಲವರನ್ನು ಹಲವು ವರ್ಷಗಳಿಂದ ಮತ್ತು ಇತರ
ರನ್ನು ಇತ್ತೀಚೆಗಿನಿಂದ ನೋಡಿ ತಿಳಿದಿರುವ ನೀವು ಹೇಳಿರಿ,
ನಾನು ಸತ್ಯವನ್ನು ಹೇಳುತ್ತಿಲ್ಲವೆ? ಇವರಲ್ಲಿ ಒಬ್ಬೊಬ್ಬರನ್ನು
ನೋಡಿರಿ, ನಮ್ಮ ಇಂದಿನ ರಾಜನೀತಿಯು ಯಾವ ಪರಿಸ್ಥಿತಿಯಲ್ಲಿ
(ಅವರ ದೇಶದಲ್ಲಿ) ಇದ್ದರೋ ಅದೇ ರೀತಿಯಾಗಿ ವ್ಯಾಜ್ಯ ವ್ಯವಹಾ
ರಕ್ಕೊಳಗಾಗಿದ್ದ ನಿಮ್ಮ ಅಧ್ಯಕ್ಷರು ತನ್ನ ಮಾತೃಭೂಮಿಯು ಯಾವ
ವೇಷದಲ್ಲಿದ್ದರೂ ಅವಳನ್ನು ಮೋಹಿಸುವ ರಮಣನಂತೆ ತನ್ನ
ಸ್ವಾಭಿಮಾನವೆಂಬ ಮಾತೃಭೂಮಿಯು ಅಪಾಯದಲ್ಲಿದ್ದುದನ್ನು ಕಂ
ಡು, ಸಾಧಾರಣ ಜನವಾಗಿದ್ದರೆ ಕಂಗೆಟ್ಟು ತೊಳಲುವ ಅಪಾಯವಿ
ದ್ದಾಗ, ಅವನಾದರೋ ಅವಳ ರಕ್ಷಣೆಗೆಂದು ನಿಟ್ಟನೆ ಹಾರಿದನು,
ತನ್ನ ಕರ್ತವ್ಯವನ್ನು ಮೀರಿದ ಹಠವು ತಾನು ಕಡೆಯಬೇಕಾದ
ಸ್ವಾಭಿಮಾನ, ಸ್ವಾತಂತ್ರ್ಯದಲ್ಲಿ ಇಡಿಯೆಂದು ನಿಷ್ಠೆಯಿಂದ
ನಂಬಿರುವ ಒಬ್ಬ ಸತ್ಪ್ರವೃತ್ತಿಯ ಹೆಂಗಸೊಬ್ಬಳು ಅತ್ತ
ಲಾಗಿ ಕಾಳೆತಿರುವವಳು, ನಿಮ್ಮ ಸ್ವಾತಂತ್ರ್ಯ ಸ್ವಾಭಿಮಾನಗಳನ್ನು
ಕಳೆದುಕೊಂಡುದಕ್ಕಿಂತ ಮಿಗಿಲಾಗಿ ನಾವು ಅಪಾಯಕರ ಪರಿ
ಸ್ಥಿತಿಯಲ್ಲಿದ್ದಾಗ ಅವಳು ನಿತ್ಯವನ್ನು ಲಕ್ಷಿಸ ತನ್ನ ಒಳ್ಳೆಯ
ಕೀರ್ತಿಯನ್ನು ಉಳಿಸಿಕೊಂಡಳು, ತನ್ನ ಸ್ವಂತ ವೃತ್ತಿಯ
ಲ್ಲಿಯೇ ಗಣ್ಯಸ್ಥಾನವನ್ನು ಗಳಿಸಿ ಆ ಸ್ಥಾನಬಲದ ಭಾರವ
ನ್ನು ಮತ್ತು ಪರಸ್ವಾತಂತ್ರ್ಯದ ಹಕ್ಕನ್ನು ಹೊತ್ತು ತಕ್ಕುದಂ

ದು ಪ್ರಕೃತಿಯನ್ನಿತ್ತ ಬರ್ನ್ಸನು ಇಲ್ಲಿ ಇರುವನು. ಯಾರೂ ಮಾತಾಡದಿ
ದ್ದಾಗ, ಸ್ನೇಹಿತರಿಲ್ಲದಿದ್ದಾಗ, ಕೀರ್ತಿಯೆಂಬುದು ತನ್ನ ಹೆಸರಿಗೂ ಸ್ವಾಭಿಮಾ
ನಕ್ಕೂ ಅಪಾಯವೆಂದು ಬಗೆದಿದ್ದಾಗ, ಪ್ರಾರಂಭದಿಂದ ಇರದಿಗೂ ಕಂಜ
ರಿಯಂತೆ ಇದ್ದ ದೀರ್ಘವೂ ನಿಷ್ಕಳಂಕವೂ ಆದ ಜೀವನವನ್ನು ಸಾ
ಗಿಸಲು ಪ್ರಯಾಸಪಿದ್ದ ಆ ಕಾಲದಲ್ಲಿ ನಡೆಸಿದ ಸ್ವಾತಂತ್ರ್ಯದ
ಯೋಧನೊಬ್ಬನು ಒಂದು ಹೆಜ್ಜೆ ಆಚೆ ಇರುವನು. ಅವನನ್ನು
ನೋಡಿರಿ! ಉದಾತ್ತವಾದ ವಿಷಯಗಳನ್ನು ಕೆಚ್ಚೆದೆಯ ಮತಿ
ಗಳಿಂದ ಹೇಳಿ ಪ್ರಚಾರಪಡಿಸಲು ಇರುವ ಸ್ವಾಧಿಕಾರಕ್ಕಾಗಿ ಅವನು
ಯಾವ ಅಪರಾಧವನ್ನು ಮಾಡಿದ್ದರೂ ಹಿರಿಮೆಯ ಕಿರೀಟದಿಂದ
ಅಲಂಕರಿಸಲ್ಪಟ್ಟಿದ್ದಾನೆ. ಅವನಿಂದ ಆಚೆ ಸ್ವಾತಂತ್ರ್ಯ ಮನೋಭಾವವ
ನ್ನು ಕುರಿತಾಗಿ ಪ್ರತಿಪಾದಿಸಿದವನೊಬ್ಬನು ಇದ್ದಾನೆ. ಅವನು ಸು
ಸಂಸ್ಕೃತನಾದ ವಿದ್ಯಾವಂತನಾಗಿ ಉತ್ತಮ ಸ್ಥಾನವನ್ನು ಪಡೆದು
ಕೆಲವರು ಗೆಳೆಯರಿಂದ ಸುತ್ತುವರಿದಿರುವನಾದರೂ ಅವುಗಳೆಲ್ಲೆ
ಲ್ಲಾ ಆಸೆಯ (ಸ್ವಾತಂತ್ರ್ಯದೇವತೆಯ) ಮಮತೆಯ ಪಾದದತ್ತ
ಎಸೆದಿರುವನು. (ಬೆನ್ನೆಟ್ಟನನ್ನು ಉದ್ದೇಶಿಸಿ) ಅತಿಥಿಗಳೇ, ಗತ
ಕಾಲವು ಮಾತ್ರವಲ್ಲ, ಈ ವರ್ತಮಾನ ಕಾಲವೂ ಸಹ ಈ ಸಾಯಂ
ಕಾಲ ನಿಮ್ಮನ್ನು ಆಹ್ವಾನಿಸುತ್ತದೆ, ಭವಿಷ್ಯತ್ಕಾಲವೂ ಅದೇರೀ
ತಿ ನಿಮಗಾಗಿ ಆಶಿಸುತ್ತದೆ. ಯಾರನ್ನು ಬಹು ಪ್ರೀತಿಯಿಂದ ಕಾಣು
ವರ ಹೆಜ್ಜೆಯನ್ನನುಸರಿಸಿ ನಮ್ಮ ಅನಂತರ ನಮ್ಮ ಕೈಯಿಂ
ದ ನಾವು ಬಿಟ್ಟುಹೋಗುವ ಕೆಲಸಗಳನ್ನು ಮುಂದುವರಿಸಲು ತರ
ಬೇತಿಯನ್ನು ಹೊಂದುತ್ತಿರುವವರೂ ಇಲ್ಲಿ ನಮ್ಮ ಮಧ್ಯೆ ಇದ್ದಾರೆ.
ನಾವು ಯಾರನ್ನು ಈ ಹೊತ್ತು ಗೌರವಿಸಲು ಸಂತೋಷಗೊಂಡಿ
ದ್ದೇವೋ, ಅವನು ನಿಜವಾಗಿಯೂ ನಮ್ಮನ್ನು ಗೌರವಿಸುತ್ತಾನೆ!
ಅವನಿಗೆ ಆಹ್ವಾನವೀಯಲು ನಮಗೆ ಅನುಮತಿಯನ್ನಿತ್ತಾಗ ಅ
ದನ್ನು ಕಾಯುವುದು ನಮ್ಮ ಸ್ವಗೌರವವೂ ಪ್ರೀತಿಯೂ ಆಗಿದೆ.
ಅವನು ಧೈರ್ಯಶಾಲಿಯಾಗಿ ಕಾದಿದ್ದಾನೆ. ಕ್ರೈಸ್ತ ಸಂಘದಲ್ಲಿ ಇಂದು
ಇರುವುದಕ್ಕಿಂತಲೂ ಹೆಚ್ಚಾಗಿ ಅಂದಿನ ಆ ಪ್ರಾರಂಭದಲ್ಲಿ ಹೆಚ್ಚು
ವಿರೋಧಿಗಳೂ ಕಪಟಿಗಳೂ ಇದ್ದರು, ನಮ್ಮ ಮುಂದಾಳುಗಳಾ
ಗಿ ಯಾವ ತರಹದ ಜನ ಇದ್ದಾರೆ ಎಂಬ ಆಲೋಚನೆಗಿಂತಲೂ
ಹೆಚ್ಚಾಗಿ ನಮ್ಮ ಸೈನ್ಯದಲ್ಲಿ ಯಾವ ತರಹದ ಜನರು ಸಹಾಯಕ
ರಾಗಿ ಇದ್ದಾರೆ ಎಂಬ ಆಲೋಚನೆಯಿಂದ ನಾವು ಇಂದು ಸಂತೋ
ಷಭರಿತರಾಗಿದ್ದೇವೆ. ಏಸುವಿನ ಜತೆಯಲ್ಲಿ ಹನ್ನೆರಡು ಜನ ಶಿಷ್ಯ
ರಿದ್ದರು. ಅವರಲ್ಲೊಬ್ಬನು ಮೂವತ್ತು ಬೆಳ್ಳಿಯ ಚೂರುಗ
ಳಿಗಾಗಿ ಅವನಿಗೆ ದ್ರೋಹವನ್ನು ಬಗೆದನು; ಎರಡನೆಯವನು
ಅವನನ್ನು ತಿರಸ್ಕರಿಸಿದನು; ಅವರೆಲ್ಲರೂ ಅವನ ಕೈಬಿಟ್ಟು

ದಿಕ್ಕಾಪಾಲಾದರು; ಆದರೆ ನಮ್ಮ ಪವಿತ್ರ ಕಾರ್ಯಕ್ರಮವನ್ನು ತೊರೆದು ನಮ್ಮ ಕೈಬಿಟ್ಟು ಓಡಿಹೋಗುವಂತವರು ನಮ್ಮ ಪೈಕಿ ಯಾರೂ ಇಲ್ಲ, ನಮ್ಮ ಕೂಟದಲ್ಲಿ ಸೇರಿಮುಗಿಸಿ ಹೋದ ಹಲವರ ವಿಷಯವಾಗಿ ನಮ್ಮ ಶಿಷ್ಯನ ಶರಂಶರಿಯೇ ಹೇಳುತ್ತದೆ, ಅವರೆಲ್ಲರೂ ನಮ್ಮ ಪತ್ರಾಜ್ಞೆಯನ್ನೋ ಎಂಬಂತೆ ನಂಬಿದ್ದ ವಾಕ್‌ಸ್ವಾತಂತ್ರ್ಯವನ್ನು ಎತ್ತಿಹಿಡಿದಿದ್ದಾರೆ, ಇಂಗ್ಲೆಂಡಿನಲ್ಲಿ ನಮ್ಮ ಸಂಸ್ಥೆಯು ಪ್ರಸಿದ್ಧ ಸದಸ್ಯರಲ್ಲೊಬ್ಬರಾದ ರಿಚರ್ಡ್ ಕಾರ್ಲೈಲ್ ಇವನು ಆಗಾದನೆಗೋಸ್ಕರ ವಿಚಾರಣೆಗೆ ಗುರಿಯಾದ ನಮ್ಮ ಪುಸ್ತಕಗಳನ್ನು ಮಾರಾಟಮಾಡುವ ವ್ಯಾಪಾರಿಯಾದನು, ಇವನು ಸಹ ಕ್ರೈಸ್ತಗುರಿಗಳತ್ತ ಕಂಡುಬಂದ ಮತ ಭ್ರಾಂತಿ ಮತ್ತು ಕ್ರೂರತನಗಳನ್ನು ಕಂಡು ಕಡೆಗೆ free-thinker ಆಗಿ ಮಾರ್ಪಟ್ಟನು, ಆದರೆ ಪೋಪ್ ಇವನ ಬರೆಹವನ್ನು ಒಪ್ಪಿದ್ದಾನೆಂದು ಅಲ್ಲ; ಬದಲಾಗಿ ಪೋಪ್ ಇವನ ಪುಸ್ತಕಗಳೂ ಸರಕಾರದ ವಿಚಾರಣೆಗೆ ಗುರಿಯಾದುದರಿಂದ ಅವುಗಳನ್ನು ಮಾರಾಟಮಾಡತೊಡಗಿದನು, ಏಕೆಂದರೆ ಯಾವ ಪುಸ್ತಕವನ್ನು ಮಾರಾಟಮಾಡಬಾರದೆಂದು ವಿಧಿಸಿ ವಾಕ್‌ಸ್ವಾತಂತ್ರ್ಯದ ಕತ್ತು ಹಿಸುಕಲಾಯಿತೋ ಆ ಪುಸ್ತಕವನ್ನೇ ಸ್ವಾತಂತ್ರ್ಯವಾದಿಯು ಮಾರಾಟಮಾಡಬೇಕೆಂದು ಅವನ ಇಚ್ಛೆಯಾಗಿತ್ತು. ನಮ್ಮ ಇಂದಿನ ಅತಿಸಿಯ ಕಥೆಯು ಸಹ ಇದರಂತೆಯೇ ಇಂಗ್ಲೆಂಡ್ ಮತ್ತು ಅಮೇರಿಕಾವು ಸುಂದರೀತಿಯಾಗಿದೆಯೆಂಬುದನ್ನು ತೋರಿಸುತ್ತದೆ. ಮಿಲ್ಟನ್ ಇವನನ್ನು ಲೋಕಕ್ಕೆ ಕೊಟ್ಟ ಮತ್ತು ಆದರ್ಶ ಮಗನಾದ ಜನವನ್ನು ಬೇರೆ ಬೇರೆ ಖಂಡಗಳಲ್ಲಿ ಈ ಸಂಸ್ಥೆಯ ಮೂಲಕವಾಗಿಯೂ ಕೊಡಬಹುದು, ನಮ್ಮ ಮಿತ್ರನು ನಿಷ್ಠಾವಂತನೂ ಸತ್ಯವಂತನೂ ಆಗಿದ್ದುದರಿಂದ ಸೆರೆಮನೆ ವಾಸಕ್ಕೆ ಅವನು ಹೆದರಲಿಲ್ಲ, ಬಿಷಪ್ ಕೈದಿಯಾಗಿ ಇರುವುದಕ್ಕಿಂತಲೂ ಸತ್ಯಪಾಲನೆಗಾಗಿ ಸೆರೆಮನೆಯಲ್ಲಿ ಖೈದಿಯ ಉಡುಗೆಯಿಂದ ತೋರ್ಪಡಿಸಿಕೊಳ್ಳುವುದೇ ಹೆಚ್ಚು ಗೌರವವಾಗಿದೆ, ನಾವು ಪ್ರತಿನಿಧಿಸುವ ಸಂಸ್ಥೆಯು ಅಮೇರಿಕಾದ ಅವನ ಸಂಸ್ಥೆಯಂತೆಯೇ ಸ್ವತಂತ್ರ ಮನೋಭಾವ, ವಾಕ್‌ಸ್ವಾತಂತ್ರ್ಯ ಮತ್ತು ಏಕ್ಯಕೆಯಾಗಿದ್ದರೂ ಪ್ರತಿಯೊಬ್ಬನೂ ತನಗೆ ಸರಿಯೆಂದು ಕಂಡುದನ್ನು ಅಂತೆಯೇ ಹೇಳುವ ಮನೋಧೈರ್ಯವನ್ನು ಪಡೆದಿರಬೇಕೆಂದು ವಾದಿಸುತ್ತದೆ, ಆಲೋಚನೆಯ ಎಲ್ಲೆಯು ತಪ್ಪಿದರೂ ಇದು ಈ ರೀತಿಯಾಗಿಯೇ ಇರಬೇಕೆಂದು ಅನ್ನಿಸುತ್ತದೆ; ಹಾಗಾದರೆ ಅದರಲ್ಲಿರುವ ಕುಂದುಕೊರತೆಗಳು ಏನೆಂದು ಬೇಗನೆ ಕಂಡುಕೊಳ್ಳಬಹುದು. ಮನೋಬಲವುಳ್ಳ ಸಕಲರೆಂದಾದರೆ ಪೊಗತೊಂದು ಸತ್ಯವು ಮಾನವನ ಹೃದಯದಲ್ಲಿ

ಮೊಳೆಯುವ ಸಂತೋಷದೊಡನೆ ಉದಿಸುತ್ತದೆ, ರಾಷ್ಟ್ರೀಯ ಸರ್ವಸಮತ್ವ ಪ್ರತಿಪಾದಿಗಳ ಸಂಸ್ಥೆ (National Secular Society) ಇದರ ಮತ್ತು ಅದಕ್ಕೆ ಸೇರಿದ ಸಹಸ್ರಾರು ಸದಸ್ಯರ ಪರವಾಗಿ ನಾನು ನಿಮ್ಮನ್ನು ಉದ್ದೇಶಿಸಿ ಮಾತಾಡುತ್ತಿದ್ದೇನೆ—.

"ಬಿನ್ನವತ್ತಳೆ— ನಾವು ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿದ್ದೇವೆ,
ಶ್ರೀ ಡಿ. ಎಂ. ಬೆನ್ನೆಟ್ಟ ಇವರಿಗೆ!"

ಇಂಗ್ಲೆಂಡಿನ National Secular Society ಇದರಿಂದ ಈ ಹೃತ್ಪೂರ್ವಕವಾದ ಆದರ ಮತ್ತು ಭ್ರಾತೃಸಮಾನವಾದ ಆಹ್ವಾನದ ಸಂಕೇತವನ್ನು ಸ್ವೀಕರಿಸಬೇಕೆಂದು ಕೇಳಿಕೊಳ್ಳುವಾಗ ನಮ್ಮ ಸಂಸ್ಥೆಯ ಧ್ಯೇಯವೊಂದನ್ನು ಈಡೇರಿಸುತ್ತಿದ್ದೇವೆ, ಅಷ್ಟೆ! "ನಾವು ಸತ್ಯಕ್ಕಾಗಿ ಹಂಬಲಿಸುತ್ತಿದ್ದೇವೆ."— ಈ ಸೂಕ್ತಿಯು ನಮ್ಮ ಧ್ಯೇಯದ ದೀಕ್ಷೆಯಾಗಿದೆ. ಹೀಗೆ ಸತ್ಯಾನ್ವೇಷಕರಾಗಿ ನಾವು ನಿಮಗೆ (ಶ್ರೀ ಬೆನ್ನೆಟ್ಟ) ಗೌರವವನ್ನು ಸಲ್ಲಿಸುತ್ತಿದ್ದೇವೆ. ವಾಕ್ಸ್ವಾತಂತ್ರ್ಯವು ಇಲ್ಲದೆ ಸತ್ಯಾನ್ವೇಷಣೆಯು ಸಾಧ್ಯವಿಲ್ಲ; ವಾಕ್ಸ್ವಾತಂತ್ರ್ಯವು ಇಲ್ಲದೆ ಸತ್ಯಾನ್ವೇಷಣೆಯು ಪ್ರಯೋಜನವೂ ಇಲ್ಲ. ಸ್ವಾತಂತ್ರ್ಯವಿಲ್ಲದಿದ್ದಾಗ ಪ್ರಗತಿಯೂ ಶೂನ್ಯ! ವಾಕ್ಸ್ವಾತಂತ್ರ್ಯವಿಲ್ಲದಿದ್ದರೆ ಭವಿಷ್ಯವು ಮಾನವನಿಗಾಗಿ ವಿಧಿಸಿದ ಉನ್ನತ ಜೀವನದತ್ತ ರಾಷ್ಟ್ರಗಳು ಮುಂದುವರಿಯಲಾರವು. ವಾಕ್ಸ್ವಾತಂತ್ರ್ಯವು ಇಲ್ಲದಿರುವುದಕ್ಕಿಂತ ನಿಂದನೀಯವಾದ ಸಹಸ್ರಾರು ನಂಬಿಕೆಗಳು ಬಿಚ್ಚುಮಾತುಗಳಿಗೆ ಎಡೆಗೊಡಲಿ. ನಿಂದನೆಗಳು ಒಂದೇ ಒಂದು ದಿನದಲ್ಲಿ ಸಾಯುತ್ತವೆ; ಆದರೆ ನಿರಾಕರಣೆಯು ಜನದ ಹುರುಪನ್ನು ಕುಗ್ಗಿಸುವುದಲ್ಲದೆ ಜನಾಂಗದ ವಿಶ್ವಾಸವನ್ನು ಹಾಳುಗೆಡವಿ ಅದರ ಮೇಲೆ ಗೋರಿಯನ್ನು ನಿಲ್ಲಿಸುತ್ತದೆ.

"ನಿಮ್ಮ (ಶ್ರೀ ಬೆನ್ನೆಟ್ಟ) ಹುಟ್ಟೂರಿನಲ್ಲಿ ಕ್ರೂರವೂ ತಿರಸ್ಕರಣೀಯವೂ ಆದ ಕಾನೂನುಗಳನ್ನು ನೀವು ಪ್ರತಿಭಟಿಸಿ ವಾಕ್ಸ್ವಾತಂತ್ರ್ಯಕ್ಕಾಗಿ ಹೋರಾಡಿರುವಿರಿ. ನಿಮ್ಮ ದೇಶದ ಓರ್ವನು ಸ್ವಾಭಿಪ್ರಾಯವನ್ನು ಪ್ರಕಟಿಸಿದ ಕಾರಣದಿಂದ ಸೆರೆಮನೆಯಲ್ಲಿಡಲ್ಪಟ್ಟನು. ನೀವು (ಶ್ರೀ ಬೆನ್ನೆಟ್ಟ) ಅವನ ಅಭಿಪ್ರಾಯಕ್ಕೆ ಒಪ್ಪದೇ ಇದ್ದರೂ ಬಹಳ ಉತ್ಸಾಹದಿಂದ ನೀವು ತಾಳಿದ ಆ ವಾಕ್ಸ್ವಾತಂತ್ರ್ಯವನ್ನು ಮನ್ನಿಸಿ ಅವನ ಪರವಾಗಿಯೂ ಆ ತತ್ವಕ್ಕಾಗಿ ಹೋರಾಡಿ ಮುಂದಕ್ಕೆ ಸಾಗಿದಿರಿ. ಅವನು ಸೆರೆಮನೆಯಲ್ಲಿದ್ದಾಗಲೂ ಅವನ ಪುಸ್ತಕಗಳನ್ನು ಒಂದು ತತ್ವಪ್ರತಿಪಾದನೆಯ ದೃಷ್ಟಿಯಿಂದ ಪ್ರಚಾರಪಡಿಸಿದ್ದೀರಿ. ಇದಕ್ಕಾಗಿ ನೀವು ಸೆರೆಮನೆಗೆ ಒಯ್ಯಲ್ಪಟ್ಟಿರಿ. ಕ್ರಿ. ಶ. 18ನೇ ಶತಮಾನದಲ್ಲಿ Paine-ಇವನ ಸಹಾನುಭೂತಿಯಿಂದ ಸ್ವಾತಂತ್ರ್ಯವನ್ನು ಪಡೆದ ದೇಶವು 19ನೇ ಶತಮಾನದಲ್ಲಿ ಒಬ್ಬ ನಿರೀಶ್ವರವಾದಿಯನ್ನು ಕಾರಾಗೃಹಕ್ಕೆ ತಳ್ಳಿ

ಇನ್ನೊಂದು ಅವಮಾನಕ್ಕೊಳಗಾಯಿತು, ಸಂಯುಕ್ತ ಸಂಸ್ಥಾನಗಳ ಪ್ರಜಾಪ್ರಭುತ್ವವು ಆಲ್ಬೆನಿ ಕಾರಾಗೃಹದಲ್ಲಿ ತಾನಾಗಿಯೇ ಅವಮಾನಕ್ಕೊಳಗಾಯಿತಲ್ಲದೆ ನೀವಲ್ಲ. ನಿಮ್ಮ ದೇಶದ ಇನ್ನೂರು ಸಾವಿರ ಜನರು ನಿಮ್ಮ ಹಕ್ಕುಗಳಿಗೆ ಹೋರಾಡಿದರಾದರೂ ದೇಶದ ಜನರ ಮತೀಯ ಕಟ್ಟರತನವೇ ಬಲವತ್ತರವಾಗಿತ್ತು. ನೀವು ಸೆರೆಯಾದಾಗ ನಿಮಗೆ ಅಭಿನಂದನೆಗಳನ್ನು ಕಳುಹಿಸಿದ್ದೆವು. ನಿಮ್ಮ ಹಕ್ಕುಗಳಿಗೆ ಕಾಲ ಬಂದಾಗ ನಾವು ಸಂತೋಷಗೊಂಡೆವು. ಇಂದು ಈ ಸಾಯಂಕಾಲ ನಿಮಗೆ ನಮ್ಮ ಆಸೆ ಮತ್ತು ಬಯಕೆಗಳನ್ನು ಸಲ್ಲಿಸುತ್ತಿದ್ದೇವೆ. ಆಶೆಯೇನೆಂದರೆ ನಿಮ್ಮ ಹೋರಾಟದ ಆ ಕಾಲದಲ್ಲಿ ನಿಮ್ಮ ವೀರತನವು ಕೃತಿಗಿಳಿಯಲಿಲ್ಲ ಎಂಬ ಕಾರಣದಿಂದ; ಮತ್ತು ಬಯಕೆಗಳು ಏಕೆಂದರೆ ಶಾಂತಿಯುತವಾದ ಭವಿಷ್ಯವು ನಿಮಗೊದಗಲಿ ಎಂದೇ ಆಗಿದೆ. ಅಷ್ಟೇ ಅಲ್ಲ, ಆ ಹಿಂದಿನ ಕಹಿ ಪ್ರಸಂಗಗಳ ನೆನಪು ನಿಮಗೆ ವಿಸ್ಮೃತಿಗೆ ಕಾರಣವಾಗದೆ ಅದು ನಿರಂತರವಾಗಿ ಒದಗಿದ ಪವಿತ್ರ ಕೊಡುಗೆಯಾಗಿ ನಿಮ್ಮಲ್ಲಿರಲಿ!" — ಚಾರ್ಲ್ಸ್ ಬ್ರಾಡ್ಲಾ - ಅಧ್ಯಕ್ಷ."

"ಸ್ವಾತಂತ್ರ್ಯಕ್ಕಾಗಿ ಕಾದಿದ ಯೋಧನೆ, ನಿಮಗೆ ನಾವು ಇದನ್ನು (ಭಿನ್ನವತ್ತಳೆಯನ್ನು) ಕೊಡುತ್ತಿದ್ದೇವೆ. ಹಿಂದೆ ಮಾಡಿದ ಆ ಉತ್ತಮ ಸೇವೆಯನ್ನು ಮುಂದಕ್ಕೂ ಸಲ್ಲಿಸಿರಿ. ನಿಮ್ಮ ನಿಜವಾದ ಗೆಳೆಯರು ನಿಮಗೆ ತೋರಿಸುವ ನಿಷ್ಕಲ್ಮಶ ಪ್ರೀತಿಯೇ ನಿಮಗೆ ಅವರಿಂದ ದೊರೆಯುವ ಬಹುಮಾನವಾಗಿದೆ."

ಹೀಗೂ ಹಿತವೆಂದು ಕಂಡುದನ್ನು ಮಾಡುವೆನಲ್ಲದೆ ಯಾವ ಬಲಾತ್ಕಾರಕ್ಕೂ ಒಳಗಾಗದೇ ಇದ್ದಾಗ, ದಂಡ ಹಾಗೂ ಸೆರೆಮನೆವಾಸದ ಬೆದರಿಕೆಗಳಿಗೆ ಈಡಾಗದಿದ್ದಾಗ, ನನ್ನ ಮಕ್ಕಳಿಂದ ಬೇರ್ಪಟ್ಟಾಗ, ಸಾಮಾಜಿಕವಾಗಿ ಹೊರತಳ್ಳಲ್ಪಟ್ಟಾಗ ಮತ್ತು ಸಾವಿಗೂ ಮೀರಿದ ಅತಿ ಕಷ್ಟಕರ ನಿಂದನೆ ಮತ್ತು ಅಪಕೀರ್ತಿಗೊಳಗಾದಾಗ ನಾನು ಜಗ್ಗಲಿಲ್ಲ. ನನ್ನ ಹೋರಾಟವೆಲ್ಲ ಮುಗಿದ ಮೇಲೆ ನಾನು ಸಾವಧಾನವಾಗಿ ಹಿಂಬದಿಗೆ ಮರಳಿದೆನು, ಬ್ರಾಡ್ಲಾಗೆ ಮತ್ತು ನನಗೆ ಅದಕ್ಕೂ ನೋವು ನಿಂದನೆಗಳಿಗೆ ಮಾಡಿದ ಆ ನಮ್ಮ ವಾದಗಳನ್ನು ಇಂದು ಸಮಾಜವೂ ಸಾರ್ವಜನಿಕ ಅಭಿಪ್ರಾಯವೂ ಒಪ್ಪಿ ಎತ್ತಿ ಹಿಡಿದಿದೆ. ಈ ವಿಷಯವಾಗಿ ಪುನಃ ಹೇಳಲುವಾಗಿದಂತೆ ನಾನು ಅದನ್ನು ಈಗಲೇ ಹೇಳಿ ಕೊನೆಗೊಳಿಸುವೆನು, ನಾನು neo-Malthusianism ಹಿಂದಿನದನ್ನು 1891ರ ಏಪ್ರಿಲ್ ತಿಂಗಳಲ್ಲಿ ತೊರೆದೆನು. ಇದು ಶ್ರೀಮತಿ ಹೆಚ್. ಪಿ. ಬ್ಲಾವಟ್ಸ್ಕಿಯು ನನಗೆ ಎರಡು ವರ್ಷಗಳ ಕಾಲ ಇತ್ತ ಬೋಧನೆಯ ಪರಿಣಾಮದಿಂದಾಗಿದೆ. ದೈಹಿಕ

ಮತ್ತು ಮಾನಸಿಕವಾಗಿ ಮಾನವನು ಬೆಳೆದು ಪರಿಪಕ್ವತೆಯನ್ನು ಹೊಂದಿದಾಗ ಮಾತ್ರ neo-Malthusianism ಪ್ರಯೋಜನವಾಗುತ್ತದೆ, ಅದಕ್ಕೆ ಮುಂಚೆ ಅಲ್ಲವೆಂಬುದನ್ನು ಅವರು ತೋರಿಸಿದ್ದಾರೆ. ಮಾನವನು ಒಬ್ಬ ಸಾರ್ವಭೌಮಿಕ ಶಕ್ತಿಯಾಗಿ ಅವನ ಸ್ವಾತಂತ್ರ್ಯವು ಮತ್ತು ಅವನಲ್ಲಿ ಅವನ ಸ್ವಂತ ಮಾನಸಿಕ ಬೆಳವಣಿಗೆಯ ಪರಿಣಾಮಗಳಾಗಿರಲು Neo-Malthusianism ಸಂಬಂಧವು ಎಷ್ಟೇ ನ್ಯಾಯವೆಂದು ತೋರಿದರೂ ಈ ಪರಿಸ್ಥಿತಿಗೆ ಅದು ಸರಿಹೊಂದಲಾರದು. ಎಚ್. ಪಿ. ಬ್ಲಾವಟ್‌ಸ್ಕಿ ಇವಳನ್ನು ಒಬ್ಬ "ಗುರು"ವಾಗಿ ಸ್ವೀಕರಿಸಿ ನಾನು ಏಕೆ ಮತ್ತು ಹೇಗೆ ಬ್ರಹ್ಮಜ್ಞಾನ (Theosophy) ತತ್ವವನ್ನು ಅವಲಂಬಿಸಿದೆನೆಂಬುದು ಮುಂದಕ್ಕೆ ಯೋಗ್ಯ ಸಂದರ್ಭದಲ್ಲಿ ಹೇಳಲಾಗುವುದು. ಆದರೆ ಇಲ್ಲಿ ನಾನು ಬಹಳ ಪ್ರಯಾಸದ ಓದು ಹೋರಾಟ ಮತ್ತು ಅದಕ್ಕಾಗಿ ನರಳಿದ ಆ neo-Malthusianism ವಾದವನ್ನು ಏಕೆ ಮತ್ತು ಹೇಗೆ ತೊರೆದೆನೆಂಬುದಾಗಿ ಮಾತ್ರ ಇಲ್ಲಿ ಪ್ರಸ್ತಾಪಿಸುವೆನು.

ನಾನು ಭೌತಿಕವಾದವನ್ನು ಆಧರಿಸಿ ಬಾಳನ್ನು ನಡೆಸಿದಾಗ ನನ್ನ ಎಲ್ಲಾ ಕೆಲಸಗಳೂ ಇಹದಲ್ಲಿ ಮತ್ತು ಮುಂದಿನ ಜನ್ಮಗಳಲ್ಲಿ ಕೇವಲ ಭೌತಿಕ ಶಕ್ತಿಯೊಳಗಡೆಗೆ ಏಕ ಜೀವಿಯಾಗಿ ಭೂಮಿಯಲ್ಲಿ ಮೊಳೆಯುತ್ತದೆ; ಹಾಗೆ ಬೆಳೆದು ಕಡೆಗೆ ನಾಶವಾಗುವ ಮಾನವನ ಸಂತೃಪ್ತಿಗಾಗಿ ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಬಹುದೆಂದು ತರ್ಕಮಾಡಿ ನೋಡುತ್ತಿದ್ದೆನು. ಮಾನವ ಗುಣ ವಿಶೇಷಗಳು ಆದಿಯಿಂದಲೇ ತಾಯಿ-ತಂದೆಗಳಿಂದ ಅವರ ಮಕ್ಕಳಿಗೆಂಬಂತೆ ಪಾರಂಪರ್ಯವಾಗಿ ಹೊಂದಿ ಬರಲು ಮಾನಸಿಕ ಮತ್ತು ನೈತಿಕ ಪ್ರವೃತ್ತಿಗಳು ಕೇವಲ ವಾಸ್ತವಿಕ ಪರಿಸ್ಥಿತಿಯ ಫಲವೆಂದು ಏಕೆ ತಪ್ಪಾಗಿ ಪಾರಂಪರ್ಯವಾಗಿ ಬಂದರೂ ಗತ ಕರ್ಮದ ಬಲದಿಂದ ಶಾರೀರಿಕವಾಗಿ, ಮಾನಸಿಕವಾಗಿ ಮತ್ತು ನೈತಿಕವಾಗಿ ಬಾಳನ್ನು ಕಟ್ಟುವುದೇ ಜೀವನದ ಧ್ಯೇಯವಾಗಿದೆ. ಪ್ರೊ. ಡಬ್ಲ್ಯೂ. ಕೆ. ಕ್ಲಿಫರ್ಡ್ ಇವನು ತನ್ನ Ethics of Belief ಎಂಬ ಉತ್ತಮ ಲೇಖನದಲ್ಲಿ ವಿಸ್ತಾರಪೂರ್ವಕ ಹಾಗೂ ಮಹತ್ತಾದ ಭೌತಿಕವಾದದ ಗುಣ ವೈಶಿಷ್ಟ್ಯತೆಗಳನ್ನು ಕುರಿತಾಗಿ ಹೇಳುತ್ತಾನೆ.

ಮಾನವಕುಲದ ಉತ್ಕ್ರಾಂತಿಯಲ್ಲಿ ಮಿತಿಯನ್ನು ಸ್ವಾಭಾವಿಕವಾಗಿ ಅನುಸರಿಸಬೇಕಾದ ಅನ್ಯೋನ್ಯತೆಯ ಬಗ್ಗೆ ಮಾನವನ ಕರ್ತವ್ಯವನ್ನು ಕುರಿತು ಪರಿಶೀಲಿಸಿದಾಗ ಕೇವಲ ಅಮಾನುಷ ರೀತಿಯಲ್ಲಿ ಕಾಮೋದ್ರೇಕಕ್ಕೆ ಒಳಗಾಗಿ ಜನಸಂಖ್ಯೆಯನ್ನು ಹೆಚ್ಚಿಸುವ ಹವ್ಯಾಸವನ್ನು ತಡೆಗಟ್ಟಿ ನಕಾರಣೀ

ಯುತವಾಗಿ ಮತ್ತು ಬುದ್ಧಿಪೂರ್ವಕವಾಗಿ ತಿಳಿಗಿಯನ್ನು ಬೆಳೆಸಬೇ-
ಕಾದ ಪವಿತ್ರ ಕಾರ್ಯವನ್ನು ಇಂದಿನ ಸಾಂಸಾರಿಕ ನಿರ್ವಹಣೆ-
ಯಲ್ಲಿ ತಾಯಂದಿರಿಗಾಗಿರುವ ಪ್ರಧಾನ ಜವಾಬ್ದಾರಿಕೆಯನ್ನು ಕು-
ರಿತು ಮನದಟ್ಟುಗಿಸಬೇಕಾಗಿದೆ, ಅಷ್ಟೇ ಅಲ್ಲ, ಚಾರಿತ್ರಿಕವಾಗಿ ಹ-
ಳಿದಾಗಿರುವ ರಾಷ್ಟ್ರಗಳಲ್ಲಿ ಸಮಸ್ಯಾತ್ಮಕವಾಗಿರುವ ವಿಷಯವೆಂದರೆ
ಬಡತನವಾಗಿದೆ, ಅಲ್ಲಲ್ಲಿ ಎಂಟು ಯಾ ಹತ್ತು ಮಕ್ಕಳಿಂದ ಕೂಡಿ
ಕೊರಗಿ ಬೆಳೆಯುತ್ತ ಕುಟುಂಬಗಳಿದ್ದು ಜನರು ಪಾಪಕ್ಕೆ ಹತ್ತಿ, ಹಸಿ-
ವಿನ್ನದೇ ಕ್ರಿಮಿಗಳಂತೆ ಸಂಪಾದಿಸುತ್ತಿರುವರು, ಇವರ ಕಷ್ಟವನ್ನು
ಶೀಘ್ರವಾಗಿ ನಿವಾರಿಸಬೇಕೆಂದಾದರೆ, ಹಸಿವಿನಿಂದ ಬಳಲಿದ ಜನರ
ಜನಪ್ರಿಯವಾದ ಚಳುವಳಿಗಳಾಗದಂತೆ ನೋಡಬೇಕೆಂದಾದರೆ, ಬಡ-
ತನದಿಂದ ಕೂಡಿದ ಗಂಡಸರು, ಹೆಂಗಸರು ಮತ್ತು ಅಲ್ಪ ತಲಬನ್ನು
ಗಳಿಸುವ ಕಾರ್ಮಿಕರು ತಮ್ಮ ಜೀವನವನ್ನು ಕಷ್ಟದಿಂದ ಸಾಗಿಸಿ-
ದರೂ ಗೌರವಾನ್ವಿತರಾಗಿ ತೋರಿಸಿಕೊಳ್ಳಲು ಹೋಗುವ ಹೃದಯ-
ಭೇದಕವಾದ ತೀವ್ರ ದೀರ್ಘ ಹೋರಾಟವನ್ನು ನಡೆಸುವುದನ್ನು
ನಿಲ್ಲಿಸಬೇಕಾದರೆ ಮಧ್ಯಮ ತರಗತಿಯ ಜನರು ಬಹುಸಂಖ್ಯೆ-
ಯಲ್ಲಿ ವಿವಾಹವಾಗದೆ, ಮತ್ತು ತಮ್ಮ ಸಂಸಾರ ದೊಡ್ಡದಾಗಬಹು-
ದೆಂದು ಹೆದರಿ ತಮ್ಮ ಜೀವನದ ಇಳಿಹೊತ್ತಿನಲ್ಲಿ ಅಥವಾ ಅದರ
ನೆರಳೋ ಎಂಬಂತೆ ಮುಪ್ಪಾದ ವೇಳೆಗೆ ವಿವಾಹವಾದರೆ, ಮತ್ತು
ದುರ್ಗತನಗಳು ಹುಟ್ಟಿ ಸಹಸ್ರಾರು ಹೆಂಗಸರ ನೈತಿಕ ಮತ್ತು ಸಾಮಾ-
ಜಿಕ ಪತನವಾದರೆ - ಹೀಗೆ ಅನೇಕ ಕಾರಣಗಳಿಂದ ಕುಟುಂಬಗಳ-
ನ್ನು ಆವರವರ ಆರ್ಥಿಕ ಸ್ಥಿತಿಗನುವಾಗಿ ಮಿತವಾಗಿಡಬೇಕೆಂದು
ವೈಜ್ಞಾನಿಕ ಬೆಳವಣಿಗೆಯೊಡನೆ ಬೆರೆತು ಮತ್ತು ಕಾಲದ ಉ-
ತ್ಪತ್ತಿಯನ್ನು ತೀವ್ರವಾಗಿಸಲು ಅಥವಾ ನಿಧಾನವಾಗಿಸಲು ಲೋಕ-
ಕ್ಕೆ ನಿಯಮದ ಜ್ಞಾನವನ್ನು ಬೋಧಿಸುವುದೇ ಭೌತಿಕವಾದದ
ಸಕಾರಣೀಯವಾದ ಉದ್ದೇಶವಾಗಿದೆ, ವೈಜ್ಞಾನಿಕ ಭೌತಿಕವಾದಕ್ಕನು-
ಗುಣವಾಗಿ ಜನತೆಯ ಶಾರೀರಿಕ ಮಟ್ಟವನ್ನು ಅಭಿವೃದ್ಧಿಗೊಳಿ-
ಸಲು ದೇಹದಾರ್ಢ್ಯದಿಂದ ಕೂಡಿದ ಜನಕ್ಕೆ ಮಾತ್ರ ಪಡೆದಂತೆ-
ಯಾಗುವ ಅವಕಾಶವನ್ನೀಯಬೇಕು, ಆರೋಗ್ಯವಂತ ಚೆನ್ನಾಗಿ-
ರುವ ಹೆಂಗಸರನ್ನು ಮಾತ್ರ ತಾಯ್ತನಕ್ಕೆ ಬಾಧ್ಯಸ್ಥರನ್ನಾಗಿ
ಮಾಡಬೇಕು, ತಕ್ಕ ಆರ್ಥಿಕಾಭಿವೃದ್ಧಿಯು ಸಂತತಿಯನ್ನು
ಕಾಣಿಸದೆ ಕೂಸುಗಳನ್ನು ಈ ಸಮಗ್ರಾತ್ಮಕ ಜಗತ್ತಿಗೆ
ತಂದು ಬಿಡಬಾರದು, ಸನ್ಯಾಸವನ್ನು ಪ್ರೋತ್ಸಾಹಿಸುವುದು
ನಿಷ್ಪ್ರಯೋಜಕವೂ ತಿಳಿಗೇಡಿತನವೂ ಎಂದು ಎಂಗೆಲ್ಸ ಸಾ-
ಮಾನ್ಯ ಬ್ರಹ್ಮಚರ್ಯದ ವೈರಾಗ್ಯವೃತ್ತಿಯನ್ನು ಹೆಚ್ಚಿಸುವ
ಪ್ರಸಂಗದಿಂದ ಲೂಥರನ ಮಿತ ಸಂತಾನ ನಿಯಮಕ್ಕನುವಾಗಿ

ಲೈಂಗಿಕ ಕ್ರಿಯೆಯನ್ನು ಹಿಂದಿನ ಸ್ವಮಿತಕ್ಕೆ ತರಲು ಯತ್ನಿಸಿ ಅತಿ ಉತ್ತಮವಾದ ದೈಹಿಕ ಮತ್ತು ಮಾನಸಿಕ ಆರೋಗ್ಯದ ಸಮಾಜನಿಯಮ ಗೌರವಗಳು ಮತ್ತು ವ್ಯಕ್ತಿಯ ಸ್ವಾಭಿಮಾನವನ್ನು ಲಕ್ಷಿಸಿ ಮಾನವ ಮನೋಗತ ಸ್ವಭಾವವನ್ನು ವಿವೇಕಯುಕ್ತವಾಗಿ ಮತ್ತು ಪ್ರಮಾಣಪೂರ್ವಕವಾಗಿ ಪರಿಶೀಲಿಸಿದಾಗ, ವೈಜ್ಞಾನಿಕ ಲೌಕಿಕ ವಾದವು ಸಂತತಿಯನ್ನು ಹೆಚ್ಚಿಸುವುದನ್ನು ವಿಚಾರಪೂರ್ವಕವಾದ ಮಿತಿಯೊಳಗಡೆ ಇರಿಸಬೇಕೆಂಬುದನ್ನು ಬೋಧಿಸುತ್ತದೆ.

ಇವುಗಳಲ್ಲೆಲ್ಲ ವ್ಯಭಿಚಾರ, ಕೆಟ್ಟಿಂಗತನ ಮತ್ತು ಮಿತಿಯಿಲ್ಲದ ಕಾಮಾಭಿಲಾಷೆ ಇವುಗಳಿಗೆ ಅನುಮತಿಯಲಾಗಿದೆಯೆಂಬುದಾಗಿ ಹಿಂದಿನ ಕ್ಷಣವಾದರೂ ಯಾರೊಬ್ಬನೂ ಸೂಚಿಸುವಂತಿರಲಿಲ್ಲ. ಆದರೆ ಬದಲಾಗಿ ಎಲ್ಲ ಸ್ವಾಭಾವಿಕ ಮನೋಪ್ರಚೋದಕ ಇಂದ್ರಿಯಗಳನ್ನು ತಡೆದಿಟ್ಟು ಅವುಗಳ ಹಾನಿಗೆ ಅವಕಾಶವೀಯದೆ ಆರೋಗ್ಯಕರವಾದ ಮತ್ತು ಸ್ವಮಿತವಾಗಿದೆ ಬಹುದಾದ ಮನಸ್ಸಿಗೆ ಆಧಾರವಾಗಿ ಸತ್ಯಕರವೂ ಉತ್ತಮವೂ ಆದ ಶರೀರವನ್ನು ಬೆಳೆಸಲು ಪ್ರಯತ್ನಿಸುವುದು ಬುದ್ಧಿಪೂರ್ವಕವಾಗಿ ಒಪ್ಪಬಹುದಾದ ಮನಃಶಾಂತಿಯ ಯೋಜನೆಯಾಗಿದೆ. ಲೌಕಿಕವಾದದ ಪ್ರತಿಪಾದನೆಯೆಲ್ಲ ಸರಿಯೆಂದಾದರೆ Neo-Malthusian ಸಂಬಂಧ ಅಭಿಪ್ರಾಯಗಳಿಗೆ ಉತ್ತರವೇ ಇಲ್ಲ. ಈ ಸಂದರ್ಭದ ಪ್ರಶ್ನೆಗೆ ಬಹು ತೀವ್ರವಾಗಿ "ಬಡತನಕ್ಕೆ ನಿಜವಾದ ಕಾರಣವನ್ನು ಸರಿಯಾಗಿ ತಿಳಿಯದಂತೆ ಅವರ ಲಕ್ಷ್ಯವನ್ನು ಸೆಳೆಯುವ ಕೆಂಪು ಜಾತಿಯ ಮಾನವರು; ಭೂಮಿ ಮತ್ತು ಕಾರ್ಖಾನೆ ಸ್ವಾಧಿಕಾರವನ್ನು ಹೊತ್ತುಕೊಂಡ ವರ್ಗದ ಜನರು," ಎಂಬುದಾಗಿ ವಿರೋಧಿಸಿದ ಸಮಾಜವಾದಿಗಳು ಸಹ ಪ್ರೊಲಿಟೇರಿಯನ್‌ದ ಹೆಚ್ಚುವಿಕೆಗೆ ಅವಶ್ಯವಾಗಿ ಬೇಕಾಗಿರುವ ಮತ್ತು ಎಲ್ಲರಿಗೂ ಹೆಚ್ಚಾಗಬೇಕಾದ ಆಸ್ತಿ, ಪರಿಸ್ಥಿತಿಯ ರಚನೆಯ ಮೇಲೆ ಸಮಾಜವನ್ನು ಕಟ್ಟುವಾಗ ಜನಸಂಖ್ಯೆಯನ್ನು ಮಿತಿಯಲ್ಲಿಡಬೇಕಾದ ಕಾಲವು ಬಂದೇ ಬರುವುದು, ಎಂಬುದಾಗಿ ಒಪ್ಪುವರು. ನಾನು ಒಂದು ಹೇಗೆ ಕಾಣಲಿಲ್ಲವೋ ಅದೇ ರೀತಿ ಇಂದು ಸಹ ಲೌಕಿಕವಾದಿಯು - Neo-Malthusian - ಸಿದ್ಧಾಂತವನ್ನು ತನ್ನ ಬುದ್ಧಿಯನ್ನು ಉಪಯೋಗಿಸಿ ಹೇಗೆ ವ್ಯಾಪಿಸುವನೆಂಬುದನ್ನು ತಿಳಿಯೆನು. ಮಾನವನು ಕೇವಲ ಭೌತಿಕ ಕಾರಣಗಳಿಂದುಂಟಾದುದೆಂದು ಪರಿಗಣಿಸಿದರೆ ನಾವು ಅವನ ಭವಿಷ್ಯದ ಮುನ್ನಡೆಗೆ ಈ ದೃಷ್ಟಿಯಿಂದ ದಿಗ್ದರ್ಶಕವಾಗಬೇಕು. ಅವನು ಬರೀ ಪ್ರಾಕೃತಿಕ ಸ್ಥಿತಿಗೆ ಸಂಬಂಧಿಸಿದವನಾದರೆ ಅವನು ಈ ಭೂಮಿಯಲ್ಲಿ ಅತಿ ದೊಡ್ಡ ಪ್ರಾಣಿ ಮಾತ್ರ ಆಗುತ್ತಾನೆ. ಅವನ ಭೂತ ಭವಿಷ್ಯತ್ತುಗಳೆರಡು

ನೋಡಲು ಅಸಾಧ್ಯವಾಗಿರಲು ಅವನ ಹಿಂದಿನ ಸಂಪತ್ತುಗಳಿಗೆ ಕಾರಣವಾದ ನಿಗೂಢ ಹೇತುವನ್ನು ನೋಡಲು ನನ್ನ ಕಣ್ಣುಗಳನ್ನು ತೆರೆದಾಗಿಸಿಲ್ಲ. ಏಕೆ? ವಾಸ್ತವಿಕವಾಗಿ ಮೂಲವೆಂದು ನನಗೆ ತೋರಿದ ನನ್ನ ಬಾಯಲಿಯನ್ನು ಗತಿಗೊಳಿಸಲು ವಾಸ್ತವಿಕವಾದ ಒಂದು ಔಷಧಿಯನ್ನೇ ಕಂಡುಕೊಂಡೆನು, ಆದರೆ ವ್ಯಾಧಿಯು ಗೂಢವಾದೊಂದೆಡೆಯಿಂದ ಹುಟ್ಟುತ್ತಿರುವಾಗ ಅದಕ್ಕೆ ಕಾರಣವೂ ಅದೇ ರೀತಿ ವಾಸ್ತವಿಕ ಸ್ಥಿತಿಯಲ್ಲಿಲ್ಲ. ಹೇಗೆ? ನಿವಾರಣೋಪಾಯವೇ ಮುಂದೆ ಸಂಭವಿಸಲಿರುವ ವ್ಯಾಧಿಗೆ ಹೊಸ ಕಾರಣಗಳನ್ನುಂಟು ಮಾಡುವುದಾದರೆ, ಮತ್ತು ಆ ವ್ಯಾಧಿಯು ಕಾಣದೇ ಉಪಶಮನವಾಗಿ ಕಡೆಗೆ ಅದನ್ನು ಪುನಃ ಹೆಚ್ಚಿಸಿ ಮುಂದಕ್ಕೆ ಅಸ್ವಸ್ಥತೆಯು ಕಾಡುವುದರಿಂದ ಪ್ರವರ್ತಿಪಡಿಸಿದ್ದಾದರೆ ಹೇಗೆ? ಈ ರೀತಿ (ಹೆಲ್ಲನ್ ಪಿ. ಬ್ಲಾವಟ್ಸ್ಕಿ ಇವಳು ಒಬ್ಬನ ಕತೆಯನ್ನು ಆರಂಭಿಸಿ ಅವನ ಹುಟ್ಟು, ಮೂಲ, ವಿಧಿಯನ್ನೆಲ್ಲ ಬಿಚ್ಚಿ, ಅವನನ್ನು ಮಾನವನಾಗಿ ನಿರ್ಮಿಸಲು ಸಹಾಯಕವಾದ ಶಕ್ತಿಗಳನ್ನು ತೋರಿಸಿ ಅವನ ಭೂತ, ವರ್ತಮಾನ ಮತ್ತು ಭವಿಷ್ಯತ್ಕಾಲಗಳೊಳಗಿರುವ ನಿಜವಾದ ಸಂಬಂಧವನ್ನು ಹೇಳುತ್ತಾ ಮಹಾನಿಮಣ್ಣೆಯನ್ನೇ ನನ್ನ ಮುಂದಿಟ್ಟಳು!

ತತ್ವಜ್ಞಾನ (Theosophy)ದ ಜ್ಯೋತಿಯ ಎದುರಿಗೆ ಮಾನವನು ಯಾರು? ಅವನಾದರೋ ಒಂದು ಆತ್ಮಜ್ಞಾನ; ಅವನು ಚಿರಂತನ ಹಾಗೂ ನಿರ್ಮಾಣಕ್ಕೊಳಗಾಗದವನು; ಸಾವಿರಗಟ್ಟಲೆ ವರ್ಷಗಳಿಂದ ಪುನಃ ಸಾವಿರಗಟ್ಟಲೆ ವರ್ಷದವರೆಯಲ್ಲಿ ಅವನು ಹುಟ್ಟುತ್ತಾ ಅನಂತರ ಮರುಹುಟ್ಟುತ್ತಾ ಜೀವನಾನುಭವವೆಂಬ ವಿಶಾಲ ಚಕ್ರದ ಸರದಳಿಯಲ್ಲಿ ತಿರುಗುತ್ತಾ ಉತ್ತಮ ಮಾನವನಾಗಿ ಮಾರ್ಪಡಲು ನಿಧಾನವಾಗಿ ಯತ್ನಿಸುತ್ತಾನೆ. ಅವನು ಭೌತಿಕ ಶಕ್ತಿಯಿಂದ ಉದಿಸಿದವನಲ್ಲ, ಬದಲಾಗಿ ಅವನು ಭೌತಿಕ ಸ್ವರೂಪದೊಳಗೆ ಹುದುಗಿಸಲ್ಪಟ್ಟು ತಾನಾಗಿಯೇ ನಿರ್ಮಿಸಿಕೊಂಡ ಸ್ವರೂಪವನ್ನು ಹೊಂದಿರುವವನು. ಬುದ್ಧಿಶಕ್ತಿ ಮತ್ತು ಮನೋದಾರ್ಢ್ಯವು ನಿರ್ಮಾಣಕ ಶಕ್ತಿಗಳಾಗಿವೆ; ಚಿತ್ರಗಾರನು ಮೊದಲು ಹೇಗೆ ಸುಂದರವಾದುದನ್ನು ನಿರ್ಮಿಸುತ್ತಾನೋ ಅದೇ ರೀತಿ ಈ ಶಕ್ತಿಗಳನ್ನು ಮಾನವನು ತನ್ನ ಪ್ರತಿಯೊಂದು ಕಲಿಸಿದ ವೇಳೆಗೂ ಉಪಯೋಗಿಸುತ್ತಾನೆ. ಆ ರೀತಿ ಅವನು ಬಹು ಸೂಕ್ಷ್ಮವಾದ ವಸ್ತುವನ್ನು ಸೌಖ್ಯಕ್ಕೆ ವಶವಾಗಿ ರೂಪಿಸಿಕೊಳ್ಳುತ್ತಾನಲ್ಲದೆ ಅಂತಃಪ್ರಬಲ ಊಹನಾಶಕ್ತಿಯನ್ನು ಪಡೆದ ಅವನ ದೇಹವು ಎಷ್ಟೇ ಹಿಂದೆ ಭೂಮಿ, ಗಾಳಿ ಮತ್ತು ನೀರಿನಲ್ಲಿ ಲೀನವಾಗಿದ್ದರೂ ಅವನು ನಿರ್ಮಿಸಿ ಉಳಿಸಿದ್ದು ಸ್ಪಷ್ಟವಾಗಿ ತೋರುವ ವಾಸ್ತವಿಕಾಂಶವಾಗಿದೆ. ಈ ಭೂಮಿಯಲ್ಲಿ ಪ್ರಥಮ ಜನ್ಮವನ್ನು ಪಡೆಯಲು ಆತ್ಮಕ್ಕೆ ತಕ್ಕ ಕಾಲವು ಬಂದಾಗ ಜೀವ ಅಥವಾ ಆಲೋಚನಾ ಶಕ್ತಿಯಿಲ್ಲದ ಅದರ ಸ್ವಂತ ಸಂತತಿಗಳ

ಶಬ್ದ ಪದತ್ತವಾಗಿ ಮಾರ್ಪಡುವ ಆ ರೂಪಿಗೆ ಭೌತಿಕ ಅಂಶಗಳ ಕೊಡುಗೆಗಳು ಸೇರಲು ಅದು ಆಯಾ ಜೀವಿಯ ಶರೀರದ ರೂಪವನ್ನು ಪಡೆಯುತ್ತದೆ. ಹಿಂದಿನ ಜನ್ಮದ ಅಥವಾ ಹಿಂದಿನ ಹಲವು ಜನ್ಮಗಳ ಬುದ್ಧಿ, ಜ್ಞಾನ ಮತ್ತು ಸಂಕಲ್ಪಗಳ ನಿರೂಪಿದ ಫಲವಾಗಿ ಆತ್ಮವು ಆ ಶರೀರಿಕ ಅಂಶದಿಂದ ಕೂಡಿದ ಆ ಎಲ್ಲಾ ದೈಹಿಕ ರೂಪದಲ್ಲಿ ಸ್ಥಾನವನ್ನು ಪಡೆಯುತ್ತದೆ. ಈ ರೀತಿ ಪ್ರತಿಯೊಬ್ಬನೂ ತನ್ನಿಂದಲೇ 'ಜೀವಿತಾಂಶದ ನಿಜವಾದ ರೂಪಿಗೆ ಮಾರ್ಪಡಿಸಿಕೊಂಡು ಅಲ್ಲಿಂದ ಚೇತರಿಸಿ ತೊಡಗುತ್ತಾನೆ. ಆಗ ಅವನು ಏನಾಗಿರುವನೋ ಅದು ಅವನದೇ ಆದ ಹಿಂದಿನ ನಿರ್ಮಾಣಿಕ ಶಕ್ತಿಗಳ ಅನಿವಾರ್ಯವಾದ ಪರಿಣಾಮವಾಗಿದೆ. ಈ ವಾದವನ್ನು Neo-Malthusian ಸಂದರ್ಭಕ್ಕೆ ಅನ್ವಯಿಸಿ ಹೇಳುವುದಾದರೆ ಲೈಂಗಿಕ ಕ್ರಿಯೆಯಲ್ಲಿ ಪಶು ಜೀವಿಗಳಿಗೆ ಇರುವಂಥಾ ಕಾಮಾತುರವೇ ಮಾನವನಿಗೂ ಇರುವುದಾದರೂ ಅದು ಇಂದಿನ ಪರಿವರ್ತನಾವಸ್ಥೆಯಲ್ಲಿ ಮಾನವಗತ್ಯಾದ ಒಂದು ಅತ್ಯಾವಶ್ಯಕವಾದ ಅಂಶವಾಗಿದೆ. ಕೆಳಗಿನ ಸ್ತರದ ಬಹುದಾದ ಪ್ರಾಣಿಗಳ ರಾಗಾದಿ ಮನೋವಿಕಾರವನ್ನು ಮಾನವ ಪ್ರಗತಿಯ ಅಳತೆ ಕೋಲುಗಳಲ್ಲೊಂದಾಗಿ ಮತ್ತು ಅವನ ಬೌದ್ಧಿಕವಾಗಿಯೂ ಪರಿಣಾಮಗಳಲ್ಲೊಂದಾಗಿ ಎಣಿಸಬಹುದು. ಹೀಗೂ ಇದರ ಬದಲಾಗಿ ಪೂರ್ವದಲ್ಲಿ ಮಾನವನು ತನ್ನ ಬುದ್ಧಿಬಲವನ್ನು ತನ್ನ ಮನೋವಿಕಾರಗಳ ದಾಸನಾಗಿ ಮಾಡಿದ್ದಾನೆ. ಇತರ ಜೀವಿಗಳಲ್ಲಿರುವುದಕ್ಕಿಂತ ಎಷ್ಟೋ ಹೆಚ್ಚಾಗಿ ಮತ್ತು ನಿರಂತರವಾಗಿ ಲೈಂಗಿಕಾಸಕ್ತಿಯಲ್ಲಿ ಅವನಿಗೆ ಇರುವ ವಿಪರೀತ ಹಂಬಲ, ಲೈಂಗಿಕ ದಾಹ, ಭೋಗಾಭಿಲಾಷೆ, ಮತ್ತು ಲಾಲಸೆಗಳಲ್ಲಿ ಅವನಲ್ಲಿ ಭಾವನಾವೇಗವನ್ನು ಹುಟ್ಟಿಸಿ ಕಡೆಗೆ ಅದು ಮಾನವ ವರ್ಗದ ಒಂದು ಸ್ವಭಾವವಾಗಿ ಪರಿವರ್ತನೆಗೊಂಡು ಕಡೆಗೆ ನೈಸರ್ಗಿಕ ಮಿತಿಯನ್ನು ಮೀರಿ ಮತ್ತು ಪ್ರಾಣಿಗಳ ಸ್ವಾಭಾವಿಕ ಮನೋಧರ್ಮಕ್ಕೆ ವಿರೋಧವಾಗಿ ನಿರಂತರ ಭೋಗಾಸಕ್ತಿಗೆ ಅವಕಾಶವೀಯುತ್ತದೆ! ಆದುದರಿಂದ ಮಾನವ ಬಡತನಕ್ಕೆ ಮತ್ತು ಅವನ ಅಧೋಗತಿಗೆ ಫಲಪ್ರದವಾದ ಹೇತುವಿಗೆ, ಮತ್ತು ನಾಗರಿಕ ದೇಶಗಳಲ್ಲಿರುವ ಅಧಿಕಾರಾಭಿಮಾನಿಗಳ ಆಶಂಕೆಗಳನ್ನು ಹೆಚ್ಚಿಸಲಿಕ್ಕೆ ನಮ್ಮ ಸಾಮಾಜಿಕ ದುರಾಚಾರಗಳೇ ಕಾರಣವಾಗಿವೆ. ಈ ಮಿತಿಮೀರಿದ ದುರಾಶೆಗಳನ್ನು ತಡೆಗಟ್ಟಲು ಮನೋದ್ರೇಕವನ್ನು ಅದರ ಸ್ವಾಭಾವಿಕವಾದ ಮಿತಿಯೊಳಗಿಡಬೇಕು. ಆದರೆ ಮನೋರಾಗವನ್ನು ಭೋಗಾಸಕ್ತಿಯೊಳಗಾಗದಂತೆ ತಡೆಯಲು ವಿವಾಹವಾದವರಿಗೆ ಹೇಗೆ ಸಾಧ್ಯವಿಲ್ಲವೋ ಹಾಗೆಯೇ ವಿವಾಹವಾಗದವರಿಗೂ ತಡೆಯಲು ಸಾಧ್ಯವಿಲ್ಲ. ಮುಂದಿನ ಜನ್ಮಗಳಲ್ಲೂ ಮಾನವರಾಗಿ ಹುಟ್ಟಲು ಮತ್ತು ಅದಕ್ಕಾಗಿ ತಮ್ಮ ಮ

ಮನಸ್ಸನ್ನೂ ದೇಹವನ್ನೂ ಉನ್ನತ ಮಟ್ಟಕ್ಕೇರಿಸಲು ಗಂಡಸರು ಮತ್ತು ಹೆಂಗಸರು ಆತ್ಮಸಂಯಮವನ್ನು ಮತ್ತು ಸುಖಭೋಗ ವಿಸರ್ಜನವನ್ನು ಪಾಲಿಸಬೇಕು. ಇಂದ್ರಿಯಗಳನ್ನು ಸಂಪೂರ್ಣವಾಗಿ ತಮ್ಮ ಅಧಿಕಾರದಲ್ಲಿಟ್ಟು ಭೋಗಾಭಿಲಾಷೆಯನ್ನು ಕೋಮಲತೆ ಮತ್ತು ನಿಷ್ಕಲ್ಮಷ ಪ್ರೇಮಕ್ಕೆ ತಿರುಗಿಸಿ ಪ್ರಾಣಿಯ ಸ್ವಭಾವವನ್ನು ಮಾನವ ಸ್ವಭಾವದ ಜ್ಞಾನಬಲಕ್ಕೇರಿಸಿ ಪ್ರತಿಯೊಂದು ಮಾನಸಿಕ ಮತ್ತು ಶಾರೀರಿಕ ಸಾಮರ್ಥ್ಯವು ಆತ್ಮದ ಶ್ರೇಯಸ್ಸಿಗೆ ನೆರವಾಗುವಂತೆ ಇಡೀ ಜೀವಿಯನ್ನು ಮಾನವನ ಉನ್ನತವಾದ ಅವಸ್ಥೆಗೆ ಏರಿಸಬೇಕು. ಬ್ರಹ್ಮಜ್ಞಾನಿಗಳು (Theosophists) ದಾಂಪತ್ಯ ಜೀವನವನ್ನು ನಡೆಸುತ್ತಲಾಗಲೀ ಇಂದ್ರಿಯ ನಿಗ್ರಹಕ್ಕೆ ನಿಧಾನವಾಗಿ ಪ್ರಯತ್ನಿಸಬೇಕೆಂದು ಇದರಿಂದ ತಿಳಿಯಬಹುದು. ಆದರೆ ಜನಾಂಗಗಳ ಮುಂದಿನ ಪೀಳಿಗೆಯನ್ನು ಅವ್ಯಾಹತವಾಗಿ ಮುಂದುವರಿಸಲು ಲೈಂಗಿಕ ಕ್ರಿಯೆಯನ್ನು ಸಾಮೂಹಿಕವಾಗಿ ಬಿಟ್ಟಲೇ ಕಡಿಮೆಮಾಡಲು ಸಾಧ್ಯವಿಲ್ಲ.

Neo-Malthusian ಸಿದ್ಧಾಂತವನ್ನು ಕುರಿತಾಗಿ ತತ್ವಜ್ಞಾನ (Theosophy) ಬೋಧಿನಿಯು ಹೆಚ್. ಪಿ. ಬ್ಲಾವಟ್‌ಸ್ಕೀ. ಇವರ ಅಭಿಪ್ರಾಯದಂತೆ ಬರೆವರು ತಮ್ಮ ಬರಹವನ್ನು ಅನುಭವಿಸುವ ದುರಂತ ಸನ್ನಿವೇಶಗಳೊಡನೆಯೇ ಬರೆಯುವರು. ಅದರ ಕಾಲ ಪರಿಚಯವಿದ್ದ ನಾನು ಅದೆಷ್ಟು ಅಸಹನೀಯ ಅತ್ಯಾಚಾರ ಮತ್ತು ಬಲಾತ್ಕಾರಿಕವಾದ ಕಷ್ಟ ಸಂಕಷ್ಟಗಳ ವಿರೋಧವಾಗಿ ಬಿಡಿಸಿ ಹೆಂಗಸಿನ ಕೈಯ್ಯಲ್ಲಿ ನಿಶ್ಚಯವಾಗಿ ಇರುವ ಉಪಕಾರಕವಾದ ರಕ್ಷಣೆಯ ಪ್ರವೃತ್ತಿಯಿಂದ ನಾನು ಅವಳಿಗೆ (ಶ್ರೀಮತಿ ಬ್ಲಾವಟ್‌ಸ್ಕೀ) ಒತ್ತಿ ಹೇಳಿದೆನು. ಆಗ ಅವಳು ಕೆಲಕಾಲ ನಾವು ಹಿಂದಕ್ಕೆ ತಿರುಗಿ ನೋಡಬೇಕೆಂದೂ ಲೋಕದ ಕಷ್ಟನಷ್ಟಗಳಿಗೆ ಹೇತುವಾದ ಆ ಮೂಲವನ್ನೇ ಕಿತ್ತೊಗೆಯಲು ಯತ್ನಿಸದೇ ಇದ್ದರೆ ಬಾಳಿನ ದುರಂತಗಳು ಪ್ರತಿಯೊಂದು ಜನಾಂಗದೊಡನೆ ಶನೈ: ಶನೈ: ಬಂದೇ ಬರುವುದು ಎಂಬುದಾಗಿ ಹೇಳಿದಳು. "ತುಂಬಾ ಹಾನಿಕಾರವಾದ ಪರಿಸ್ಥಿತಿಯಲ್ಲೂ ತನ್ನ ದೌರ್ಬಲ್ಯದ ರಕ್ಷಣೆಗೆ ತಕ್ಕಂಥ ಕಾರಣಗಳ ಆಶ್ರಯವನ್ನು ಹೊಂದುವ ಮತ್ತು ತನ್ನ ದಾರಿದ್ರ್ಯಕ್ಕೆ ಮೂಲವೇನೆಂದು ತಿಳಿಯದೆ ತನ್ನ ಅಜ್ಞಾನವನ್ನೇ ಯಾವುದೇ ಬಗೆಯ ಸಹಾಯ ಸಹಾನುಭೂತಿಯನ್ನು ಹೊಂದಲು ಬಳಸುವ ಹೆಂಗಸನ್ನು ಕುರಿತಾಗಿ ನಾನು ಯಾವ ಅಭಿಪ್ರಾಯವನ್ನೂ ಕೊಡಲಾರೆನು. ಆದರೆ ದುಃಖವನ್ನು ನಿರಂತರ ಪ್ರಚೋದಿಸುವ "ವಸ್ತು" ಇದೆಯೆಂದು ತಿಳಿದಿರುವ ನೀನು ಅದಕ್ಕೆ ಪರಿಹಾರವೇನೆಂದು ಬೋಧಿಸುವ ಕೆಲಸವು ನಿನಗೆ ದಿವ್ಯ ರಹಸ್ಯಶಾಸ್ತ್ರಜ್ಞರಿಗೆ, ಹೇಳಿದ್ದಲ್ಲ" ಎಂಬುದಾಗಿ ಅವಳು ಹೇಳಿದಳು. ಅದು ನನಗೆ ಸರಿ

ಯೆಂದೇ ರಸ್ಕಿನರು, ರವರ ಆ ನಿರ್ಣಯಕ್ಕೆ ನಾನು ಒಪ್ಪದೆನಾದರೂ ಬರೆವರ ಕಣ್ಣುಗಳನ್ನರಿಯುವ ನನ್ನ ಹಂಬಲದಿಂದ ಹಿಂಜರಿಯುವೇಕೆಂದರು ನೆನೆದಾಗ ನನ್ನ ಹೃದಯವು ಜಗ್ಗುತ್ತ. ಹೀಗೂ ತಾತ್ವಿಕವಾಗಿ ಉಪಕ್ರಮಣವಿಯುವ ಅಕ್ರಮಗಳು ರವರ ಜೀವನವನ್ನು ಕಣ್ಣುಕ್ಕೀಡಾಗಿಸಿ ಬಾಳನ್ನು ದುರ್ಗತಿಗೆ ಇಳಿಸಿದರೂ, ಹಲವರು ನಿರುಹರಯಕ್ಕೆ ತಲಪುವ ಮೊದಲೇ ಸೊರಗಿ, ಕಡೆಗೆ ಸಾಯುವ್ಯೋರುವ ಮೊದಲೇ ಎಂಬಂತೆ ಮರೆಯಾಗಿಲಾದರೂ, ನನ್ನ ನಿರ್ಧಾರವು ನಿರ್ಧಾರವಾಗಿಯೇ ಇತ್ತು. ನನ್ನ ಅಂದಿನ ದೀರ್ಘವಾದ ಮತ್ತು ಕಟುವಾದ ಹೋರಾಟದ ಕಾಲದಲ್ಲಿ ತಮ್ಮ ಉದಾತ್ತಗುಣದಿಂದ ನನ್ನೊಂದಿಗೆ ಇದ್ದು ತಮಗೆ ದೊರೆತ ಗೆಲುವಿನ ಫಲಾಂಶವನ್ನು ಅಲ್ಪವೂ ಪ್ರಮಾದವೂ ಎಂದೆಣಿಸಿ ಧಿಕ್ಕರಿಸಿದ ನನ್ನ ಧೀರ ನಿಷ್ಠಾವಂತ ಮಿತ್ರರ ಮನಸ್ಸನ್ನು ನೋವಿಗೀಡಾಗಿಸದೆನೆಂದು ನಾನು ವ್ಯಸನಪೂರ್ವಕವಾಗಿ ತಿಳಿದೆನು, ಆದರೂ ನನ್ನ Law of Population-ದ ಕೃತಿಯನ್ನು ಪುನರ್ಮುದ್ರಿಸಲಿಕ್ಕೆ ಅದರ Copy-Right ಇದನ್ನು ಇತರರಿಗೆ ಮಾರಾಟಮಾಡಲಿಕ್ಕು ಒಪ್ಪದಾದೆನು. ಮನುಷ್ಯನು ತಾನು ಮಾಡುತ್ತಿರುವ ನಿರ್ಧಾರದಲ್ಲಿ ಪ್ರತಿಯೊಂದು ಹೆಜ್ಜೆಯನ್ನು ಅವನ ಹೃದಯದ ಮೇಲೆ ಮತ್ತು ಅವನು ಯಾರನ್ನು ಪ್ರೀತಿಸುವನೋ ಅವರೆಲ್ಲರ ಹೃದಯದ ಮೇಲೆ ಯಾವಾಗಲೂ ಹಾಕುತ್ತಲೇ ಇರಬೇಕಾದು ಇದೆಯೇ? — ಎಂದೆನ್ನುತ್ತಾ, ಆಶ್ಚರ್ಯಪಡುತ್ತಿದ್ದೇನೆ.

ಅಧ್ಯಾಯ ೧೦

ಸತ್ತ್ರೆಲ್ಲ ಹೋರಾಟದಲ್ಲಿ

ದೀರ್ಘವೂ ಶ್ರಮದಾಯಕವೂ ಆಗಿದ್ದ ನನ್ನ ಅನ್ವೇಷಣೆಯಿಂದ ಗತಿಸಿದ ವರ್ಷಗಳಾಗಿ ಪುನಃ ಎಂದಿನಂತೆ ನನ್ನ ಕೆಲಸಕ್ಕೆ ಪ್ರೋತ್ಸಾಹದಾಗಿ ನಾನು ಎದುರಿಸುತ್ತಿದ್ದ ಎಲ್ಲಾ ಗದ್ದಲ ನಿಶ್ಚಲವಾದ ಧೈರ್ಯದಿಂದ ನಾನು ಹಿಂದೆ ಬಿಟ್ಟಿದ್ದ ಎಲ್ಲವನ್ನೂ ಅನಂತರ ಎತ್ತಿಕೊಂಡು ನನ್ನ ಕೆಲಸಕ್ಕೆ ಪ್ರಾರಂಭಿಸಿದೆನು, 1878ರ ಡಿಸೆಂಬರಿನ National Reformer ಪತ್ರಿಕೆಯಲ್ಲಿ ನಾನು ಇತರರ ಪತ್ರಕ್ಕೆ ಉತ್ತರಿಸುತ್ತಾ, ಎಂದಿನಾಗ್ರಹಪೂರ್ವಕವಾಗಿ ಬರೆದ ಸಂಕ್ಷಿಪ್ತ ಟಿಪ್ಪಣಿಯೊಂದರಲ್ಲಿ ನಾನು 'ಹಿಂದಿನ ವರ್ಷಗಳಿಗಾಗಿ ದುಡಿಯುವ ನನ್ನ ದೃಢಸಂಕಲ್ಪವು ನನ್ನ ಅಸ್ವಸ್ಥತೆಯಿಂದಾಗಲೀ ಇತರ ತಾಪತ್ರಯಗಳಿಂದಾಗಲೀ ಒಂದಿಷ್ಟಾದರೂ ಕಡಿಮೆಯಾಗಿಲ್ಲ,' ಎಂಬುದಾಗಿ ಬರೆದಿದ್ದೆನು, ನಿಜವಾಗಿಯೂ ಹೇಳುವುದಾದರೆ ನಾನು ಇನ್ನಷ್ಟು ಚೇತನಗೊಂಡು ನನ್ನ ಕೆಲಸದಲ್ಲಿ ತೊಡಗಿದ್ದೆನು; ಏಕೆಂದರೆ ಅದೇ ನನ್ನ ಮನಸ್ಸಿಗೆ ಶಾಂತಿದಾಯಕವಾಗಿತ್ತು. ಆದರೆ ಆ ವೇಳೆಗೆ ನಾನು ಕ್ರೈಸ್ತಮತದ ವಿರೋಧವಾಗಿ ಬರೆದ ಕರಪತ್ರಗಳು ಎಲ್ಲರಿಗೂ ಕಾಣುವಂತೆ ಸಾಕಷ್ಟು ಕಡಿಮೆಯಾಗಿದ್ದುವು; ಏಕೆಂದರೆ ಕ್ರೈಸ್ತಮತವೇ ನನ್ನ ಮಗುವನ್ನು ನನ್ನಿಂದ ಕಸಿದುದಾಗಿದೆ. ಆ ಕಾರಣದಿಂದ ನಾನು ಅದರ ಮೇಲೆ ಒಂದಿಷ್ಟು ದಯದಾಕ್ಷಿಣ್ಯವನ್ನು ತೋರಿಸಿದೆನು. ಬೀಕನ್ಸ್‌ಫೀಲ್ಡ್ ಸರಕಾರವು ಪ್ರಾಬಲ್ಯದಲ್ಲಿದ್ದು ಹೊಸ ರಾಜ್ಯಗಳನ್ನು ಸೇರಿಸುವ ಮತ್ತು ಸಾಮ್ರಾಜ್ಯ ವಿಸ್ತರಿಸುವ ಅದರ ದುರಾಶೆಯಿಂದ ರಾಜಕೀಯ ಕ್ಷೋಭೆ ಕಂಡಿದ್ದಾಗ ನಾನು ನನ್ನ ನಾಲಗೆ ಮತ್ತು ಲೇಖನಿಯಿಂದ ನನ್ನ ಶಕ್ತಿಮೀರಿ ಸೇವೆಯನ್ನು ಮಾಡಿದೆನು, ಭಾರತದಲ್ಲಿ ನ್ಯಾಯವೂ ಸ್ವಾತಂತ್ರ್ಯಪ್ರಿಯವೂ ಆದ ಧೋರಣೆಯನ್ನು ಪ್ರತಿಪಾದಿಸಿ, ಮತ್ತು ಅಫಘಾನಿಸ್ಥಾನದ ಮೇಲೆ ಹೂಡಿದ ಯುದ್ಧ ಮತ್ತು ಇತರ ಅತ್ಯಾಚಾರಗಳ ಮೇಲೆ ನಾನು ಬರೆದ ಲೇಖನಗಳು ಹಲವು ಭಾರತೀಯರ ಹೃದಯದಲ್ಲಿ ಅವರು ನನ್ನ ಮೇಲಿಟ್ಟಿದ್ದ ಪ್ರೀತಿಗೆ ಅಡಿಪಾಯವನ್ನು ಕಲ್ಪಿಸಿದುವು, ಅಲ್ಲದೆ ಇಂದು ನಾನು ವಿನಿಯೋಗಿಸುತ್ತಿರುವ ಸಮಯ ಮತ್ತು ಆಲೋಚನೆಗಳು ಮುಂದೆ ಭಾರತೀಯರಿಗಾಗಿ ನಾನು ಶ್ರಮಿಸುವುದಕ್ಕೆ ಇರುವ ಸಿದ್ಧತೆಯೋ ಎಂದು ಅನ್ನಿಸುತ್ತದೆ, 1878ರ ನವೆಂಬರಿನಲ್ಲಿ ನಾನು "ಇಂಗ್ಲೆಂಡ್ ಇಂಡಿಯಾ ಮತ್ತು ಅಫಘಾನಿಸ್ಥಾನ" ಎಂಬುದಾಗಿ ಬರೆದ ಪುಸ್ತಕವು ಹಲವು ಜನರ ಪ್ರಶಂಸಾಪೂರ್ವಕ

ವಾದ ಪತ್ರಗಳನ್ನು ನನಗೆ ತಂದಿತ್ತರು, ಇದರೊಡನೆ ಒಂದೆರಡು ಹೇಳಿದಂತೆ ಶ್ರೀ ಫ್ರಾಂಕ್ ಬೆಸೆಂಟ್ (ನನ್ನ ಪತಿ) ಇವನ ಮೇಲೆ ವ್ಯಾಜ್ಯವನ್ನು ನಡೆಸುವುದು, ಪ್ರತಿ ಆದಿತ್ಯವಾರ ಎರಡೋ ಮೂರೋ ಭಾಷಣಗಳನ್ನು ಕೊಡುವುದು; National Reformer ಪತ್ರಿಕೆಯ ಸಂಪಾದಕತ್ವ; The Malthusian League - ಇದರ ಕಾರ್ಯದರ್ಶಿತ್ವ ಮತ್ತು ವಾರದ ದಿನಗಳಲ್ಲಿ ಇಲ್ಲಿಂದು ಅಲ್ಲಿಂದು ಎಂಬಂತೆ ಭಾಷಣಗಳು, ಎಂದು ಸಮಯವು ಬಿಡುವಿಲ್ಲದೆ ಸಾಗುತ್ತಿತ್ತು. ಆದರೆ ನಾನು ಓದುವಾಗ ನನ್ನ ಭಾವನೆಗಳು ಆ ವಿಷಯದಿಂದ ಬೇರೊಂದರ ಕಡೆ ಹಾಯುವಂತೆ ಒಂದು ಅಭ್ಯಾಸವನ್ನು ಬೆಳೆಸಿದೆನು, ಹಾಗಾಗಿ ನನ್ನ ಆಲೋಚನೆಯು ನಾನು ಹಿಂದೆ ಕಲಿತುಕೊಂಡಿದ್ದ ಅದೊಂದು ಅಲ್ಪ ವಿಷಯದ ಮೇಲೂ ಹರಿಯುತ್ತಿತ್ತು. ಆದುದರಿಂದ ಈ ವಿಚಾರ ತರಂಗಗಳ ಎಡೆಯನ್ನು ನನ್ನ ವೈಜ್ಞಾನಿಕ ವಿದ್ಯೆಯಿಂದ ಭರ್ತಿಮಾಡಿ ಆ ರೀತಿ ಪರೀಕ್ಷಾರ್ಥವಾಗಿ ಕೆಲವು ವಿಷಯಗಳನ್ನು ಓದುತ್ತಾ ಸಂತೃಪ್ತಿಗೊಳ್ಳುತ್ತಿದ್ದೆನು. ನನ್ನ ಈ ಅಭ್ಯಾಸವು ನನ್ನ ಇತರ ಕಾರ್ಯಕಲಾಪಗಳ ಮೇಲೆ ತುಂಬಾ ಉತ್ಸಾಹವನ್ನುಂಟುಮಾಡುವ ವಿಶ್ರಾಂತಿಯಾಗಿಯೂ ನಾನು ಗಳಿಸುವ ಜ್ಞಾನವು ಯಥಾಕ್ರಮವಾಗಿಯೂ ಇರಿಸಲು ಸಹಾಯಕವಾಯಿತಲ್ಲದೆ ನನ್ನ ಜೀವವನ್ನು ಮಾಸಲಾಗಿರಿಸದೆ ಧ್ಯೇಯವಾದಿನಿಗಾಗಿ ನನ್ನನ್ನು ಹೆಚ್ಚಿನ ಪ್ರಯೋಜನಕಾರಿಯಾದ ಪಿಪಾಸೆ ವಾಗ್ಮಿಯಾಗಿಯೂ ಮಾರ್ಪಡಿಸುವುದೆಂದು ನಾನು ಆಲೋಚಿಸಿದೆನು.

ಕ್ರಿ.ಶ. 1879ರ ಆರಂಭದಲ್ಲಿ ನನ್ನ ಅನಂತರದ ಕಾರ್ಯಭಾರದ ಇಲಾಖೆಯಲ್ಲಿ ನನಗೆ ಭಾಗಿಯಾಗಿದ್ದ ಕಾರಣದಿಂದ ನಾನು ಶಿಷ್ಯೆಯಾಗಿದ್ದ ಮತ್ತು ವೈಜ್ಞಾನಿಕ ವಿಷಯಗಳಲ್ಲಿ ನಾನು ಕಂಡವರ ಪೈಕಿ ಬಹು ಸಮರ್ಥ ಬೋಧಕನಾದ ಲಂಡನ್ ವಿಶ್ವವಿದ್ಯಾಲಯದ ಎಡ್ವರ್ಡ್ ಬಿ. ಅವೆಲಿಂಗ್ ಡಿ. ಎಸ್‌ಸಿ., ಇವನನ್ನು ಮೊದಲ ಬಾರಿಗೆ ಭೇಟಿಯಾದೆನು. ತನ್ನ ವಿದ್ವತ್ತಿನ ಸ್ಪಷ್ಟವೂ ಸಮಂಜಸವೂ ಆಗಿದ್ದ ಮನಮುಟ್ಟುವಂತೆ ವಿವರಿಸುವ ಮೇಧಾಶಕ್ತಿಯನ್ನು ಹೊಂದಿ ವಿಜ್ಞಾನದಲ್ಲಿ ಅಪಾರ ಉತ್ಸಾಹಿಯಾಗಿ ಮತ್ತು ತನ್ನ ಜ್ಞಾನವನ್ನು ಇತರರಿಗೂ ಹಂಚಿಕೊಡುವುದರಲ್ಲಿ ಸಂತೋಷಪಡುತ್ತಿದ್ದ ಅವನು ಸರ್ವ-ಆದರ್ಶ ಅಧ್ಯಾಪಕನಾಗಿದ್ದನು. 1879ರ ಜನವರಿಯಲ್ಲಿ ಈ ಯುವಕನು National Reformer ನಲ್ಲಿ ತನ್ನ ಸಹಿಯೊಡನೆ (ಲೇಖನಗಳನ್ನು) ಬರೆಯಲಾರಂಭಿಸಿದನು. ಅನಂತರ ಫೆಬ್ರುವರಿಯಲ್ಲಿ ನಾನು ಹಾಗೂ ಹುಡುಗಿಯರಿಗಾಗಿ ಕೈಗೊಂಡ ಮುಗಿಸಿದ ಲಂಡನ್ ವಿಶ್ವವಿದ್ಯಾಲಯದ Matriculation ಪರೀಕ್ಷೆಯನ್ನು ಪೂರ್ತಿಮಾಡುವ ಉದ್ದೇಶದಿಂದ ಅವನ ಶಿಷ್ಯಳಾದೆನು. ಮಾನಸಿಕ ವೇದನೆಯಿಂದ

ನಡತೆಯವರು ಯಾರಾದರೂ ಇದ್ದರೆ ಅಂತವರು ಅವರ ನಿವಾರಣೆಗೆ ಈ ರೀತಿಯಾದ ಜ್ಞಾನೋಪದೇಶನೀಯ ವಿಶ್ರಾಂತಿಯನ್ನು ಒದಗಿಸುವ ಕೆಲಸವನ್ನು ಕೈಕೊಂಡರೆ ಅದು ತುಂಬಾ ಸಹಾಯಕರವಾಗಿರುತ್ತದೆಂದು ಹೇಳಲಿಚ್ಛಿಸುತ್ತೇನೆ, ಈ ವರ್ಷದ ವಸಂತದಲ್ಲಿ ಇಂಗ್ಲೆಂಡಿನ ಉದ್ಯಾನಗಳಲ್ಲಿ ನಾನು ಜೀವಶಾಸ್ತ್ರ ಭಾಷಣಗಳನ್ನು ಕೊಡುತ್ತಿದ್ದು ಅದರ ಜೊತೆಗೆ ಬೋಧನೆ ಮತ್ತು ಸಂಪಾದಕೀಯ ಕಾರ್ಯಗಳನ್ನು ನಡೆಸುತ್ತಿದ್ದೆನು. ಜೊತೆಗೆ ನಾನು ಸಾಧಾರಣವಾಗಿ ದೊಡ್ಡದಿದ್ದ ಫ್ರೆಂಚ್ ಶಾಸ್ತ್ರವೊಂದನ್ನು ಭಾಷಾಂತರಿಸಿದೆನು. ಅದರೊಡನೆ Court of Appeal ಮತ್ತು Master of Rolls ಇವರ ಸಮಕ್ಷಮದಲ್ಲಿ ನನ್ನ ಮಗಳನ್ನು ನನ್ನ ವಶಕ್ಕೆ ಪಡೆಯುವ ಬಗ್ಗೆ ಇದ್ದ ವ್ಯಾಜ್ಯವನ್ನು ಬಹು ಜಿದ್ದಾಜಿದ್ದಿನಿಂದ ವಾದಿಸಬೇಕಾಗಿತ್ತು. ಬೀಜಗಣಿತ, ರೇಖಾಗಣಿತ ಮತ್ತು ಭೌತ ಶಾಸ್ತ್ರ ಇವು ನನಗೆ ಹಿಡಿಸಲ್ಲದೆ ಹಲವು ಗಣಿತ ಸೂತ್ರ ಸಮಸ್ಯೆಗಳಲ್ಲಿ ಮುಳುಗಿದಾಗ ನನ್ನ ಮನಸ್ಸನ್ನು ಕಾಡುತ್ತಿದ್ದ ಬಹಳ ಯಾತನಾ ಕಾಯಿದೆಗಳನ್ನು ಮರೆತುಹೋಗುವ ಸಂಭವವೂ ಇದ್ದಿತು. ಅನ್ಯಾಯಗಳನ್ನು ಪ್ರತಿಭಟಿಸುತ್ತಾ Free-thinkers ಇವರು ಹೂಡಿದ ದೀರ್ಘ ಹೋರಾಟದಲ್ಲಿ ನಾನು ನನ್ನ ಮಕ್ಕಳನ್ನು ನನಗೆ ಬೇಕಾದಾಗ ಸಂದರ್ಶಿಸಲು ಪಡೆದ ಹಕ್ಕು ಸಿಂಧು ದೊಡ್ಡ ಹೆಜ್ಜೆಯಾಗಿತ್ತು, ಏಕೆಂದರೆ ಚಾರ್ಲ್ಸ್ ಬ್ರಾಡ್ಲೆಯು National Reformer ಪತ್ರಿಕೆಯಲ್ಲಿ ಸೂಚಿಸಿದಂತೆ ಈ ವ್ಯಾಜ್ಯವನ್ನು "Free-thought" ತತ್ವವನ್ನು ಬಹು ಧೈರ್ಯದಿಂದ ಸಮರ್ಥಿಸಲು ಯಾವೊಂದು ಮೊಕದ್ದಮೆಯೂ ಹೀಗೆ ವಾದಿಸದ ರೀತಿಯಲ್ಲಿ ವಾದಿಸಿ ಪಡೆದ ಗೆಲುವೇ ಆಗಿದೆ." ಎಂದು ಹೇಳಿ ಆ ವಾದಸರಣಿಯು ಈ ಸ್ವಾತಂತ್ರ್ಯ ಮನೋಭಾವ ಪಕ್ಷದವರ ಮನಸ್ಸಿಗೆ ಪಾತ್ರವಾಗಬೇಕೆಂದು ಹೇಳುತ್ತಾ, "ಸ್ವತಂತ್ರ ಭಾವನೆಯ ಪರವಾಗಿ ಪ್ರಬಲ-ಆಧಾರಗಳಿಂದ ಕೂಡಿದ ವಾದವನ್ನು ಕೇಳುವುದು ನಾವು ಎಂದೂ ಪಡೆಯದಿದ್ದ ಸುದೈವವಾಗಿತ್ತು," ಎಂಬುದಾಗಿ ಬರೆದನು.

ಲಂಡನ್ನಿನ Daily News ಪತ್ರಿಕೆಯಲ್ಲಿ ಪ್ರಬಲವಾದ ಕೆಲವು ಪ್ರತಿಭಟನಾ ಪತ್ರಗಳು ಪ್ರಕಟವಾದವು. ಲಾರ್ಡ್ ಹಾಬರ್ಟ್ಸನ್ ಎಂಬುವವನು ನನಗೆ ಆಶ್ಚರ್ಯವಾಗಿದೆಯೆಂದಲ್ಲದೆ, "ಆ ವಿಚಾರಣೆಯು ಬೇರಾವ ತತ್ವವನ್ನೂ ಅನುಸರಿಸಲಿಲ್ಲ," ಎಂದು ಹೇಳಿದನು. ಎರಡನೇದಾಗಿ ಶ್ರೀ ಬ್ರ್ಯಾಂಡ್ ಇವನು ವ್ಯಂಗ್ಯವಾಗಿ ಹೀಗೆಂದನು, "ಕ್ರೈಸ್ತ ಪಂಥದ ಜನರು ಕೆಲ ಸಮಯದಿಂದ ನಮ್ಮ ಮಹಾರಾಣೀ ಸರಕಾರದ ನ್ಯಾಯಾಲಯಗಳನ್ನು ಆಗಿಂದಾಗ್ಗೆ ಸಂದರ್ಶಿಸುವ ಸಂತೋಷವನ್ನು ಪಡೆದರಲ್ಲದೆ ಧರ್ಮದೈವತೆಗಳು

ವಾಗಿದ್ದ ತನ್ನ ಹಿರಿಯ ಮಗುವನ್ನು ಬಿಟ್ಟುಕೊಡಲು ಧೈರ್ಯದಿಂದ ನಿರಾಕರಿ
ಸಿದ್ದರಿಂದ ಎಳೆ ತಾಯಿಯು ಶಿಕ್ಷೆಯ ಮನೋವೇದನೆ ತನ್ನ ಮಗು
ವನ್ನು ಮರಳಿ ಪಡೆಯಲು ತುಂಬಾ ಶ್ರಮವನ್ನು ಖರ್ಚುಮಾಡಿ ನಡೆಸಿದ
ದೀರ್ಘ ಹೋರಾಟಗಳಲ್ಲಿ ಈ ವರೆಗೆ ತೀವ್ರಸ್ವರೂಪವನ್ನು ಬಿಗ್ಗು
ಗೊಳಿಸಿದ ಹಿಂದಿನ ಕಾಲದ ವಿಶ್ವಾಸನೀಯ ವಿಷಯಗಳಲ್ಲಿಯೂ 'ಇಂ
ದಿನ ಮತಾಭಿಮಾನಿಗಳು ಪ್ರತಿಯೊಬ್ಬರು ವಾದಿಸುವುದರಲ್ಲಿ ಪ್ರಯೋ
ಜನವಿಲ್ಲವೆಂದು ಇಂದು ನಾಸ್ತಿಕರಾದ ತಾಯಂದಿರ ಮಕ್ಕಳಿಗೆ ಪ್ರ
ಮಾಣಪೂರ್ವಕವಾಗಿ ಹೇಳಬಹುದಾಗಿದೆ, ಶ್ರೀಮತಿ ಬೆಸೆಂಟ್ ಇವರ
ನ್ನು ಹಿಂದು ಅದೃಷ್ಟವಾಗಿ ವಾದಿಸುವುದರಿಂದ Master of Rolls ಇವರು
ಮತ್ತು Lord Justice ಜೇಮ್ಸ್ ಇವರು ಇತರ ಅಲ್ಪ ವಿಷಯಗಳಿಗೆ
ಯಲ್ಲಿ ಮತವಿರೋಧಿ ಅಭಿಪ್ರಾಯದ ತೀರ್ಪಿನ ಗೊಂದಲದ ಪ್ರಧಾನ ಅಂ
ಶಗಳಲ್ಲಿರುವ ಶಿಕ್ಷಾಮಿಂಚು ಕಳೆದು ಹೋಗದಂತೆ ಎಚ್ಚರವಹಿಸಿದ್ದರು.
ಆ ವ್ಯಾಜ್ಯದಲ್ಲಿ Malthusian ಸಂಬಂಧದ ವಿಷಯವೂ ಬಂತು; ಆದರೆ ನ್ಯಾ
ಯಾಧೀಶರು ಅದಾವ ವಿಷಯವನ್ನೂ ಎತ್ತದೆ ಬರೀ ಶ್ರೀಮತಿ ಬೆಸೆಂಟ್
ಇವರ ನಾಸ್ತಿಕ ಅಥವಾ ಅಧಾರ್ಮಿಕ ಅಭಿಪ್ರಾಯಗಳನ್ನು ಅನುಸರಿಸಿ
ಅವರ ಮಗಳನ್ನು ಅವರ ವಶದಿಂದ ತಪ್ಪಿಸಿದರು." ಗಣ್ಯ ಪ್ರಾಂತೀಯ
ವಾರ್ತಾಪತ್ರಿಕೆಗಳೂ ಸಾಧಾರಣವಾಗಿ ಇದೇ ಅಭಿಪ್ರಾಯವನ್ನು ವ್ಯಕ್ತಪಡಿ
ಸಿದವು. Manchester Examiner- ಈ ಪತ್ರಿಕೆಯು ನ್ಯಾಯಾಧೀ
ಶರ ತೀರ್ಪನ್ನು ಕುರಿತು ಇಷ್ಟರ ಮಟ್ಟಿಗೂ ಹೇಳಿತು. "ಅವರ ತೀರ್ಮಾ
ನವು ಹಾಗಿದ್ದುದು ತಪ್ಪೆಂದು ನಾವು ಹೇಳಲಾರೆವು, ಆದರೆ ಅವರ ತೀ
ರ್ಪಿನ ಫಲಿತಾಂಶವು ಕ್ರೂರವಾಗಿದೆಯೆಂದು ಮಾತ್ರ ಹೇಳುತ್ತೇವೆ.
ಒಬ್ಬ ಹೆಂಗಸಿಗೆ ಮತ್ತು ಒಬ್ಬ ತಾಯಿಗೆ ಹೊರಲಾಗದಷ್ಟು ದೊಡ್ಡ
ಹಾಗೂ ಕಠಿಣ ಶಿಕ್ಷೆಯನ್ನು ವಿಧಿಸಲಾಗಿ, ನಾವು ಈ ವರೆಗೆ ಅದಕ್ಕೆ ವಿ
ರುದ್ಧವಾಗಿ ಆಕ್ಷೇಪಿಸಿದ್ದರೂ, ಕಾನೂನಿನ ಮುಂದೆ ಜನಪ್ರಿಯವ
ಲ್ಲದ ಅಭಿಪ್ರಾಯಗಳನ್ನಿಟ್ಟವುದು ತಪ್ಪೆಂದು ಅದರಿಂದ ವ್ಯಕ್ತವಾ
ಗುತ್ತದೆ." ಈ ದೀರ್ಘ ಹೋರಾಟದ ಮಧ್ಯೆ ಒಬ್ಬ ರೋಮನ್ ಕ್ಯಾ
ಥೊಲಿಕ್ ಶ್ರೀಮತಿ ಆಗ್ನೆಸ್ ಎಲ್ಲಿಸ್ ಅವಳನ್ನು ಅವಳ ಪ್ರೊಟೆಸ್ಟಂಟ್
ಪತಿಯು ಹೂಡಿದ ವ್ಯಾಜ್ಯದ ಬಗ್ಗೆಯೂ ತಿಳಿದೆನು. ಅವಳನ್ನು ಮಕ್ಕ
ಳಿಂದ ತಪ್ಪಿಸಿದ ಇಂದಿಗೂ ಘಟನೆಯು ಫಲಿತಾಂಶವಾಗಿ ಮಕ್ಕಳು ಮೇ
ಲೆ ತಮ್ಮ ಅಧಿಕಾರ 'ತಂದೆಯರ ಮೇಲೆ ಇರಬೇಕೆಂಬ ಕಾನೂನನ್ನು
ಬದಲಾವಣೆಗೊಳಿಸುವ ಅವಶ್ಯಕತೆಯನ್ನು ಕುರಿತು ಹೇಳಲಾಗಿತ್ತು. ಹೀ
ಗೂ ಅಲ್ಲಿಂದ ನಂತರ ಮದುವೆಯಾದ ತಾಯಿಯ ಹಕ್ಕನ್ನು ಹಿಂದು
ಮಿತಿಯೊಳಗೆ ಇಟ್ಟ ಕಾನೂನನ್ನು ಆ ರೀತಿ ಮಾರ್ಪಡಿಸಲಾಯಿತು.
National Sunday League - ಈ ಸಂಸ್ಥೆಯಲ್ಲಿ ಚಿಕ್ಕ ಹಿಂದು ತ
ವಾಣೆ ನಡೆಯಿತು. ಅದರ ಅಧ್ಯಕ್ಷ ಲಾರ್ಡ್ ಹೌಟನ್ ಇವರು ಅ

ಸಂಘದ ಉಪಾಧ್ಯಕ್ಷರಲ್ಲಿ ಒಬ್ಬರಾಗಿ ನಾನು ಇರುವುದಕ್ಕೆ ಬಲವಾಗಿ ವಿರೋಧಿಸಿದನು. ಪರಿಣಾಮವಾಗಿ ಪಿ. ಎ. ಟೇಲರ್ ಮತ್ತು ಕೆಲವರು ತಮ್ಮ ಸ್ಥಾನಗಳಿಗೆ ರಾಜೀನಾಮೆಯನ್ನಿತ್ತರಲ್ಲದೆ ಆ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ಟ್ರೂಲವ್ ಎಂಬುವನನ್ನು ಉಪಾಧ್ಯಕ್ಷ ಸ್ಥಾನದಿಂದ ತೆಗೆದು ಹಾಕಲಾಯಿತು; ಅಲ್ಲದೆ ರಾಜೀನಾಮೆಯಿತ್ತಿದ್ದ ಉಪಾಧ್ಯಕ್ಷರುಗಳನ್ನು, ನನ್ನನ್ನು ಸೇರಿ, ಪುನಃ ಆ ಸ್ಥಾನಕ್ಕೆ ಆರಿಸಲಾಯಿತು. ಈ ತರಹದ ಕ್ಷುದ್ರ ವಾದಾಟ ಸನ್ನಿವೇಶಗಳು ಅಂದಿನ ನನ್ನ ಪ್ರಬಲ ಹೋರಾಟಗಳ ಜತೆಗೂಡಿಯೇ ಮುಂದುವರಿದುವು. ಈ ಸಾಹಸಗಳ ಮೂಲಕವಾಗಿ Free-Thought ಸಂಸ್ಥೆಯು ಸಂಖ್ಯಾಬಲವು ಮೇಲೇರಿತು. National Secular Society ಇದಕ್ಕೆ 1878-79 ರಲ್ಲಿ 650 ಸದಸ್ಯರುಗಳನ್ನು ಸೇರಿಸಲಾಯಿತು.

1879 ರಲ್ಲಿ ಡಾ. ಎಡ್ವರ್ಡ್ ಬಿ. ಅವೆಲಿಂಗ್ ಇವನು ನಮ್ಮ ಪಕ್ಷದವರಿಗೆ ಸಾರ್ವಜನಿಕವಾಗಿ ಸೇರಿ ತನ್ನ ಲೇಖನಿಯ ಅಪೂರ್ವ ಶಕ್ತಿಯನ್ನು ಉಪಯೋಗಿಸಿ ಸಂಸ್ಥೆಯ ವಿದ್ಯಾಪ್ರಗತಿಯ ಬಗ್ಗೆ ದುಡಿದನು. 1879 ರ ಆಗಸ್ಟನಲ್ಲಿ Hall of Science ಇಲ್ಲಿ ಅವನು ಮಾಡಿದ ಭಾಷಣದಿಂದ ನಾನು ಆಸಕ್ತಿಯನ್ನು ವಹಿಸಿದ್ದೆನು. ಪರಿಣಾಮವಾಗಿ ಅವನ ಧೈರ್ಯಕ್ಕೆ ಅವನು ದಂಡನೆಯನ್ನು ಅನುಭವಿಸಬೇಕಾಯಿತು. ಲಂಡನ್ ಆಸ್ಪತ್ರೆಯ Comparative Anatomy ಶಾಖೆಯಲ್ಲಿ ಅವನು ತನ್ನ ಕರ್ತವ್ಯವನ್ನು ನಿಯಮಿತವಾಗಿ ಮತ್ತು ದಕ್ಷತೆಯಿಂದ ಸಲ್ಲಿಸುವುದರಿಂದ ಆಡಳಿತ ಮಂಡಳಿಯು ಒಪ್ಪಿದ್ದರೂ ಅವನನ್ನು ಆ ಶಾಖೆಯ ಅಧಿಕಾರ ಸ್ಥಾನದಿಂದ ತೆಗೆದು ಹಾಕಲಾಯಿತು. ಹೀಗೂ ಅವನು ನಮ್ಮ ಸಂಸ್ಥೆಗೆ ಸೇರಿದ ಪರಿಣಾಮವಾಗಿ ಅವನು ಸೌತ್ ಕೆನ್ಸಿಂಗ್ಟನ್‌ನಲ್ಲಿ ವಿಜ್ಞಾನ ಮತ್ತು ಕಲಾ ಸಂಬಂಧ ಪಾಠಗಳನ್ನು ಬೋಧಿಸಲು ತರಗತಿಗಳನ್ನು ತೆರೆದಿದ್ದು ಅವನ ಗಣ್ಯ ಸೇವೆಗಳಲ್ಲಿ ಒಂದಾಗಿತ್ತು. ಈ ವಿದ್ಯಾಪೀಠದಲ್ಲಿ ವರ್ಷದಿಂದ ವರ್ಷಕ್ಕೆ ಹುಡುಗರ ಮತ್ತು ಹುಡುಗಿಯರ ಸಂಖ್ಯೆಯು ಹೆಚ್ಚುತ್ತಾ ಇದ್ದು ಕಡೆಗೆ 1883 ರಲ್ಲಿ ಲ್ಯಾಟಿನ್ ಭಾಷಾ ಬೋಧೆಯನ್ನು ಸೇರಿ ಲಂಡನ್ ವಿಶ್ವವಿದ್ಯಾಲಯದ matriculation ತರಗತಿಗೆ ತರಬೇತುಗೊಳಿಸಲ್ಪಡುವ ಹದಿಮೂರು ದರ್ಜೆಗಳು ತೆರೆಯಲ್ಪಟ್ಟವು. ಈ ಎಲ್ಲ ದರ್ಜೆಗಳಿಗೂ ಡಾ. ಅವೆಲಿಂಗ್ (Aveling) ಮತ್ತು ಅವನು ತರಬೇತುಗೊಳಿಸಿ ಪ್ರಶಸ್ತಿಯನ್ನು ಪಡೆದ ವಿದ್ಯಾರ್ಥಿಗಳು ಬೋಧಿಸುತ್ತಿದ್ದರು. ನಾನು ಉನ್ನತ ದರ್ಜೆಯ ವಿಶ್ವವಿದ್ಯಾಲಯ ಪ್ರಶಸ್ತಿಯನ್ನು (honours) ಪಡೆದು ಬೇರೆ ಬೇರೆ ಎಂಟು ದರ್ಜೆಗಳಿಗೆ ವಿಜ್ಞಾನ ಪಾಠಗಳ ಅಧ್ಯಾಪಕಿಯಾದೆನು. ಎಲಿಸ್ (Alice) ಮತ್ತು ಹೈಪೇಷಿಯಾ ಬ್ರಾಡ್ಲೆ (Miss Hypatia Bradlaugh)

ಇವರೂ ಇದೇ ರೀತಿಯಾಗಿ ಉನ್ನತ ವಿದ್ಯಾಭ್ಯಾಸವನ್ನು ಪಡೆದು ಪದವೀಧರೆಯರಾದರು, ಹೀಗೆ ಪ್ರತಿ ವರ್ಷವೂ ಸೆಪ್ಟೆಂಬರನಿಂದ ಮೇ ತಿಂಗಳ ವರೆಗೂ 1879 ರಿಂದ 1883 ರ ವರೆಗೆ ತರಗತಿಯನ್ನು ನಡೆಸಿದೆವು. ಇವುಗಳೆಲ್ಲದರ ಜತೆಗೆ ಕುಮಾರಿ ಬ್ರ್ಯಾಡ್ಲೆಯು ಜತೆಗೂಡಿ ಹಾಡುವವರ ಒಂದು ಕೂಟವನ್ನೇ ನಡೆಸುತ್ತಾ ಬಂದೆವು.

ಸೌತ್ ಕೆನ್ಸಿಂಗ್‌ಟನ್‌ನಲ್ಲಿ ಅಧ್ಯಾಪಕರಿಗಾಗಿ ತೆರೆದಿದ್ದ ತರಗತಿಗಳಲ್ಲಿ ವಿದ್ಯಾರ್ಥಿಯಂತೆ ಕಲಿತುಕೊಂಡು ಕಲಿಯುವುದು, ಅದರೊಡನೆಯೇ ಬೋಧಿಸುವುದು, ಲಂಡನ್ ವಿಶ್ವವಿದ್ಯಾಲಯದ ಬಿ.ಎಸ್ಸಿ. ಪರೀಕ್ಷೆಯ ಮೊದಲ ಭಾಗವನ್ನು ಜಯಪ್ರದವಾಗಿ ಮುಗಿಸಲು ಓದುವುದು, ಸೌತ್ ಕೆನ್ಸಿಂಗ್‌ಟನ್‌ನಲ್ಲಿ ಅಧ್ಯಾಪಕರಿಗಾಗಿ ನಡೆಸಲ್ಪಡುತ್ತಿದ್ದ ಮತ್ತು ಎರಡೇ ಪ್ರಯಾಸಕರವಾದ ರಸಾಯನಿಕ ಪರೀಕ್ಷೆಗಳಲ್ಲಿ ನಾನು ಸೋಲದೇ ಇದ್ದಾಗ ಲಂಡನ್ನಿನ ಬಿ.ಎಸ್ಸಿ.ಯ ರಸಾಯನಿಕ ಶಾಸ್ತ್ರ ಪರೀಕ್ಷೆಯಲ್ಲಿ ಮೂರು ಬಾರಿ ಸೋತದ್ದು ನನಗೆ ಆಶ್ಚರ್ಯವನ್ನು ಉಂಟುಮಾಡಿದರೂ ವಿಜ್ಞಾನಶಾಸ್ತ್ರದಲ್ಲಿ ಅಧಿಕ ಜ್ಞಾನವನ್ನು ಪಡೆದುದು ನನ್ನ ಸಾರ್ವಜನಿಕ ಕಾರ್ಯಕ್ಷೇತ್ರದಲ್ಲಿ ತುಂಬಾ ಪ್ರಯೋಜನವಾಯಿತು. ಹೀಗಿದ್ದರೂ ತತ್ವಜ್ಞಾನ ಮತ್ತು ಸಾಮಾಜಿಕ ದ್ವೇಷವನ್ನು ಬೆನ್ನಟ್ಟುತ್ತಲೇ ಇತ್ತು.

ವಿಶ್ವವಿದ್ಯಾಲಯದ ಕಾಲೇಜಿನಲ್ಲಿ ಸಸ್ಯಶಾಸ್ತ್ರ ತರಗತಿಯಲ್ಲಿ ಕಲಿತುಕೊಳ್ಳಲಿಕ್ಕೆಂದು ಕುಮಾರಿ ಬ್ರ್ಯಾಡ್ಲೆ ಮತ್ತು ನಾನು ಅನುಮತಿಯನ್ನು ಕೇಳಿದಾಗ ನನ್ನನ್ನು ನನ್ನ "ಪಾಪ" ಗಳಿಗೂ ಅವಳನ್ನು ತನ್ನ ತಂದೆಯ ಪಾಪಗಳಾದ ಕಾರಣದಿಂದಲೂ ತಿರಸ್ಕೃತರಾದೆವು. ನಾನು ಅಧ್ಯಾಪಕೀ ವೃತ್ತಿಗೆ ಅರ್ಹಳಾದನಂತರ ಇಲಾಖೆಯಿಂದ ಪ್ರಶಸ್ತಿ ಪತ್ರವನ್ನು ಪಡೆಯಲು ಒಂದು ವರ್ಷ ಕಾಲ ಹಿಡಿಯಿತು, ಏಕೆಂದರೆ ಬ್ರ್ಯಾಡ್ಲೆಯು ಹೆಣ್ಣುಮಕ್ಕಳಿಗೆ ಸಲ್ಲಬೇಕಿದ್ದ ಅರ್ಹತೆಯನ್ನು ಅವರು ಮುಂದೆ ಕೇಳಿದನಂತರ ನಾನು ಪ್ರಶಸ್ತಿ ಪತ್ರವನ್ನು ತೆಗೆದುಕೊಳ್ಳಲು ನಿರ್ಧರಿಸಿದೆನು. ಹೇಗೂ ವಿದ್ಯಾ ಇಲಾಖೆಯು ನನ್ನ ಅರ್ಹತೆಯನ್ನು ಅಂಗೀಕರಿಸಿದ್ದು House of Commons ಇಲ್ಲಿ ಸರ್ ಹೆನ್ರಿ ಟೈಲರ್ ಇವನು ಟೀಕಿಸಿದನು. ಅಷ್ಟೇ ಅಲ್ಲ Dr. Aveling ಇವನು, ಬ್ರ್ಯಾಡ್ಲೆಯು ಕುಮಾರಿಯರು ಮತ್ತು ನಾನು ಕ್ರೈಸ್ತಧರ್ಮವನ್ನು ನಂಬದಿರುವ ಕಾರಣದಿಂದ Hall of Science — ಈ ಕಾಲೇಜುಗಳಿಗೆ ಸರಕಾರವು ಸಹಾಯಧನವನ್ನು ಕೊಡುತ್ತಿದ್ದುದನ್ನು ತಡೆಗಟ್ಟಲಿಕ್ಕೆ ಸಹ ಪ್ರಯತ್ನಿಸಿದನು. ರೀಜೆಂಟ್ ಪಾರ್ಕನಲ್ಲಿರುವ ಸಸ್ಯಶಾಲೆ — Botanical Gardens — ಇಲ್ಲಿಗೆ ಹೋಗಲು ನಾನು ಅನುಮತಿಯನ್ನು ಕೇಳಿದಾಗ ಅದರ ಮೇಲ್ವಿಚಾರಕನು ತನ್ನ ಹೆಣ್ಣುಮಕ್ಕಳು ಅಲ್ಲಿ ಇರುವ ಶಾಲೆಯಲ್ಲಿ ಓದುತ್ತಿದ್ದಾರೆಂದೆನ್ನುತ್ತಾ ನನಗೆ ಅನುಮತಿಯನ್ನು ಕೊಡಲಿಲ್ಲ. ಹೀಗೆ ಎಲ್ಲಾ ಕಡೆಗಳಿಂದಲೂ ತಿರಸ್ಕಾರ ಮತ್ತು ಅಪಮಾನ; ಅವು

ಗಳ ವಿರುದ್ಧವಾಗಿ ಹೋರಾಡುತ್ತಿರುವ ಕಷ್ಟ! ಅವನ್ನೆಲ್ಲ ಸಹಿಸುವುದೂ ಕಷ್ಟ! ಹೀಗೆ ಎಲ್ಲಾ ಕಡೆಗಳಿಂದಲೂ ಉಂಟಾದ ತೊಂದರೆಗಳನ್ನು ಎದುರಿಸುತ್ತಾ, ವಿರೋಧಿಪಕ್ಷ ಪ್ರತಿಪಾದನೆಯು ಸಫಲವಾಗಿ ನಮ್ಮ ಪ್ರಯತ್ನದಲ್ಲಿ ತೊಡಗುತ್ತಾ ನಾವು ನಮ್ಮ ಮುಂದಿನ ದಾರಿಯನ್ನು ಕಂಡುಕೊಳ್ಳಬೇಕಾಗಿತ್ತು. ನಮ್ಮ ಕೆಲಸಗಳು ಎಷ್ಟರಮಟ್ಟಿಗೆ ಹಿತಕರವೋ ಅದು ಅಷ್ಟರಲ್ಲಿಯೇ ಇರಲಿ! ನಮ್ಮ ವಿಜ್ಞಾನ ಶಾಲೆಯಾದರೋ ಅಪೂರ್ವ ಸಂಸ್ಥೆಯಾಗಿ ಶೋಭಿಸುತ್ತು, ಅದು ಮತವಿರೋಧಿಗಳ (ನಾಸ್ತಿಕರ) ಆಗರವೆಂಬ ನಿರ್ಲಕ್ಷ್ಯ ಸಂಗತಿಯು ಸುತ್ತೆಲ್ಲ ಹಬ್ಬಿತ್ತು. ನಮ್ಮ ಮತವಿರೋಧದ ಕಡೆ ವಾತಾವರಣಕ್ಕೆ ಚಾರ್ಲ್ಸ್ ಬ್ರಾಡ್ಲೋ ಮತ್ತು ನಾನು ಕಾರಣವೆಂಬ ಆರೋಪಕ್ಕಾಗಿ ಒಳಗಾದಾಗ ನಮ್ಮ ಮೇಲೆ ಎಬ್ಬಿಸಿದ ಕಿರುಕುಳಗಳು ಮತ್ತು ಅಲ್ಪ ವಿಚಾರಣೆಗಳು ಅಂತೆಯೇ ಮುಂದುವರಿಯುತ್ತಿಂಬುದನ್ನು ಗಣಿಸಬೇಕು. ಬ್ರಾಡ್ಲೋಗಾದರೋ ಅದು ಇನ್ನು ಅಸಹನೀಯವಾಗಿತ್ತು. ತನ್ನ ಸಮರ್ಥರೂ ಉತ್ತಮ ಗತ್ಯಾಗಿಲರೂ ಆದ ಹೆಣ್ಣುಮಕ್ಕಳು ಕೇವಲ ಅವನ ಕುವರಿಯರು ಎಂಬ ಕಾರಣಕ್ಕಾಗಿ ಜನರ ನಿಂದೆಗೂ ತಿರಸ್ಕಾರಕ್ಕೂ ಈಡಾದದ್ದು ಎಲ್ಲಕ್ಕಿಂತ ಕಡೆಗಾದದ್ದು ಅವರು ತಮ್ಮ ತಂದೆಯನ್ನು ಇತರ ಎಲ್ಲದಕ್ಕಿಂತಲೂ ಹೆಚ್ಚಾಗಿ ಗೌರವಿಸುತ್ತಿದ್ದುದೂ ಅವರಿಗೆ ಒಂದು ಪ್ರತಿಕೂಲವೋ ಎಂಬಂತೆ ಅಂದಿನ ಪರಿಸ್ಥಿತಿಯಲ್ಲಿ ತೋರುತ್ತಿತ್ತು!

ಹರ್ಬರ್ಟ್ ಬ್ಯೂರೋಸ್ ಇವನ ನಿಕಟ ಪರಿಚಯವು ನಮ್ಮನ್ನು ಒಂದೇ ಸಾಮಾನ್ಯ ಕಾರ್ಯಕ್ರಮದಡಿಯಲ್ಲಿ ಹಿಡಿದು ಕೂಡಿಸಿದ 1887ರ ಸಮಾಜವಾದದ ಕೋಲಾಹಲದ ವರೆಗೂ ಇದ್ದಿಲ್ಲವಾದರೂ ಅವನನ್ನು ಮೊದಲ ಬಾರಿಗೆ 1879ರ ಒಕ್ಟೋಬರ್‌ನಲ್ಲಿ ಭೇಟಿಯಾದೆನು. ಭಾರತೀಯರಿಗೆ ಖಾನೂನನ್ನು ಚರ್ಚಿಸಲು ಸೇರಿದ ಎಲ್ಲಾ ಕಡೆಗಳಿಂದ ಪ್ರತಿನಿಧಿಗಳನ್ನು ಲಂಡನ್ ಅಧಿವೇಶನವೊಂದರಲ್ಲಿ Hall of Science ನಲ್ಲಿ ಒಕ್ಟೋಬರ್ 4ನೇ ದಿನದಂದು ಬ್ರಾಡ್ಲೋಯು ನಡೆಸಿದ. ಆ ಪ್ರಾರಂಭದ ಸಭೆಗೆ ಹರ್ಬರ್ಟ್ ಬ್ಯೂರೋ ಇವನು Tower Hamlets Radical Association ಇದರ ಪ್ರತಿನಿಧಿಯಾಗಿ ಬಂದಿದ್ದನು. ಅವನನ್ನು ಬ್ರಾಡ್ಲೋ, ಮೊಟ್ಟರ್ಸ್‌ಹೆಡ್ ಮತ್ತಿತರರೊಡನೆ ಕಾರ್ಯಕಾರಿ ಮಂಡಳಿಗೆ ಸೇರಿಸಲಾಯಿತು. ಈ ಅಧಿವೇಶನವು ಜಯಪ್ರದವಾಗಿ ನಡೆಸಲ್ಪಟ್ಟು ಭಾರತೀಯರಿಗೆ ಖಾನೂನು ಬಗ್ಗೆ ಮುಂದಕ್ಕೆ ಇನ್ನು ಚರ್ಚಿಸಬೇಕೆಂದು ತೀರ್ಮಾನಿಸಲಾಯಿತು. ಆ ಕೆಲವು ಗೊತ್ತುವಳಿಗಳನ್ನು ಬ್ರಾಡ್ಲೋಯು ಶಾಸನ ಸಭೆಯ (Parliament) ಮುಂದಿಟ್ಟು ವಾದಿಸಿದನು.

ಅಧ್ಯಾಯ ೧೧

ಬ್ರ್ಯಾಡ್ಲೋಯ ಸಾಹಸ!

ಕ್ರಿ.ಶ. ೧೮೮೦ ನೇ ವರ್ಷವು ಬಂತು. ಚಾರ್ಲ್ಸ್ ಬ್ರ್ಯಾಡ್ಲೋಯ ಶಾಸನ ಸಭಾ ಸದಸ್ಯತ್ವದ ಸಂಬಂಧೀಯ ಅಪವಾದಿಯ ಹೋರಾಟವು ಪ್ರಾರಂಭವಾದ ಹನ್ನೊಂದನೆಯ ವರ್ಷವು ಆದಾಗಿದೆ. ಬಹು ದೀರ್ಘವೂ ಕಠಿಣವೂ ಆದ ಆ ಕಾದಾಟದನಂತರ ಶ್ರೀ ಲಾಬೊಚೇರ್ (Labouchere) ಇವನೊಡನೆ ನಾರ್ಥಾಂಪ್ಟನ್‌ನ ಸದಸ್ಯನಾಗಿ ಸಾರ್ವತ್ರಿಕ ಚುನಾವಣೆಯಲ್ಲಿ ಗೆದ್ದು ಬಂದುದರ ಜತೆಗೆ ಅವನು ಆ ವರೆಗೆ ಪ್ರಯತ್ನಿಸಿದುದರ ಪ್ರತಿಫಲವನ್ನೂ ಪಡೆದನು. ಆ ಚುನಾವಣೆಯ ದಿನ ೧೮೮೦ ರ ಏಪ್ರಿಲ್ ೨ನ್ನು ಮರೆಯುವೆನೆ? ಆ ದಿನ ಸಾಯಂಕಾಲ ನಾಲ್ಕು ಗಂಟೆಯ ವೇಳೆಗೆ ಬ್ರ್ಯಾಡ್ಲೋಯ ಸಹಕಾರಿಯವರೂ ನಾನೂ ಕುಳಿತಿದ್ದ "ಜಾರ್ಜ್" ಹೊಟೆಲಿಗೆ ಅವನು ಓಡೋಡಿ ಬಂದನು "ಇನ್ನೇನೂ ಬಾಕಿ ಉಳಿದಿಲ್ಲ; ನಮ್ಮ ಪಕ್ಷದ ಕಡೇ ವ್ಯಕ್ತಿಯೂ ತನ್ನ ಮತವನ್ನಿತ್ತಿರುವನು," ಎಂದೆನ್ನುತ್ತಾ ಕುರ್ಚಿಯಲ್ಲಿ ಹಾಯಾಗಿ ಕುಳಿತನು. ಅದರನಂತರ ನಾವು ಹಲವು ಕಾತರದ ತಾಸುಗಳನ್ನು ನಿರ್ವಾಹವಿಲ್ಲದೆ ಕಳೆದ ನಂತರ ಚುನಾವಣಾ ಫಲಿತಾಂಶವನ್ನು ಜನಕ್ಕೆ ಸಾರುತ್ತಿರುವುದನ್ನು ಕೇಳಲು ಕಿಟಕಿಯ ಬಳಿ ಹೋಗಿ ಕಾಲೂರಿದೆವು. ಜನಸಂದಣಿಯ ಕರ್ಕಶ ನಿನಾದವನ್ನು ಆಲಿಸುತ್ತಲಿದ್ದ ನಾವು Town Hall ಇದರ ಮುಖ್ಯದ್ವಾರದಲ್ಲಿ ಫಲಿತಾಂಶವನ್ನು ಸಾರಲು ಆರಂಭಮಾಡುತ್ತಲೇ ಒಂದೇ ಜಯಘೋಷವು ಕೇಳಿತು, ಆದರೆ ಉದ್ವೇಗಗೊಂಡ ಜನರ ಚೀತ್ಕಾರದ ಧ್ವನಿಯನ್ನೆಲ್ಲ ಕೇಳುವ ಕಾತರತೆಯಿಂದ ಕುಳಿತೆವು. ಕೊನೆಗಲ್ಲಿ ಕ್ಷಣ ಮೌನವಾಯಿತು. ನಾವು ಚುನಾವಣೆಯ ಫಲಿತಾಂಶಕ್ಕೆ ಕಾಯುತ್ತಾ ಇದ್ದಂತೆ ಜನರ ಆರ್ಭಟ, ಸಂತೋಷದ ಆವೇಶ, ಉತ್ಸಾಹದ ಜಯಘೋಷವೆಲ್ಲ ದನಿಗೊಡುತ್ತ, ತೆರೆಗಳಂತೆ ಹಿಂದಾನಾದವನ್ನು ಮೊಳಗಿಸುತ್ತಾ ಇದ್ದು ಕಡೆಗೆ ಜನಸ್ತೋಮವು ತಾವು ಆರಿಸಿದ ತಮ್ಮ ಪ್ರತಿನಿಧಿಯನ್ನು ತಮ್ಮ ಟೋಪಿ ಕರವಸ್ತ್ರಗಳನ್ನೆಲ್ಲ ಮೇಲಕ್ಕೆ ಎಸೆಯುತ್ತಾ ಬೀಸುತ್ತಾ "ನಾರ್ಥಾಂಪ್ಟನ್ನಿಗೆ ಬ್ರ್ಯಾಡ್ಲೋ," ಎಂಬುದಾಗಿ ಪ್ರಚಂಡ ಜಯಘೋಷವನ್ನು ಗಗನವೇ ಬಿರಿಯುವಂತೆ ಮೊಳಗಿಸುತ್ತಾ ಆ ವರೆಗೂ ಅವರು ಅಂದು ಒಂದು ಗೆಲುವನ್ನು ಪಡೆಯದೆಯೇ ಇದ್ದವರಂತೆ ಸಂತೋಷದ ಹುಮ್ಮಸ್ಸಿನಿಂದ ಮೆರೆಯುತ್ತಾ ಅವನನ್ನು

ಅಲ್ಲಿಗೆ ಕರೆತಂದರು. ಅವನಾದರೋ ಸ್ತಬ್ಧನಾಗಿ ಜನರ ಪ್ರೀತಿ, ಸಂಭ್ರಮಾನಂದವನ್ನೆಲ್ಲ ಕಂಡು ಬೆಚ್ಚಿದಂತಾಗಿ ತಾನು ಪಡೆದ ಗೆಲುವಿನಿಂದಲೂ ಆದ ತನ್ನ ಸಂತೋಷಶಕ್ತಿಯಿಂದಲೂ ತನ್ನ ಮೇಲೆ ಅದಾಗಲೇ ಬಿದ್ದ ಜವಾಬ್ದಾರಿಕೆಯನ್ನು ಗಮನಿಸುತ್ತಾ ಶಾಂತ ಮೌನವಾಗಿಯೇ ಇದ್ದನು. ಮರುದಿನ ಬೆಳಿಗ್ಗೆ ಅವನು ನಗರವನ್ನು ಬಿಡುತ್ತಿದ್ದನೆ ಗಂಡಸರು ಮತ್ತು ಹೆಂಗಸರು ಗುಂಪುಗೂಡಿ ಅವನಿದ್ದ ಹೋಟೇಲ್‌ನಿಂದ ರೈಲುನಿಲ್ದಾಣಕ್ಕೆ ಜನರ ತಲೆಗಳ ಸಮುದ್ರವೇ ಎಂಬಂತೆ ನೆರೆದಿತ್ತು. ಪ್ರತಿಯೊಂದು ಕಿಟಕಿಯೂ ಜನರಿಂದ ತುಂಬಿ ಬ್ರಾಡ್ಲೋಯ ಜಯಘೋಷಣೆಯು ಬಣ್ಣಪತಾಕೆಯು ಎಲ್ಲೆಲ್ಲೂ ಕಾಣಿಸುತ್ತಿರಲು ಗಂಡಸರು ಅವನನ್ನು ಮೆರವಣಿಗೆಯಿಂದ ಮುಂದೆ ಸಾಗುತ್ತಿರಲು ಹೆಂಗಸರು ಸಂತೋಷದಿಂದ ಗದ್ಗದಿಸುತ್ತಾ "ನಮ್ಮ ಚಾರ್ಲಿ, ನಮ್ಮ ಚಾರ್ಲಿ, ನಿನ್ನನ್ನು ನಮಗೆ ದೊರಕಿತು; ನಾವು ನಿನ್ನನ್ನು ಇರಿಸಿಕೊಳ್ಳುವೆವು," ಎಂದೆನ್ನುತ್ತಾ ದನಿಗೂಡುತ್ತಿದ್ದರು. ಅವರು ಅವನನ್ನು ಎಷ್ಟು ಪ್ರೀತಿಸಿದ್ದರು; ಹನ್ನೆರಡು ವರ್ಷಗಳ ಕಾಲದ ವಾಗ್ವಾದ, ಹೋರಾಟಗಳನಂತರ ಅವನು ಪಡೆದ ಜಯಕ್ಕೆ ಅವರು ಎಷ್ಟು ಸಂತೋಷಪಟ್ಟರು! ಆಹಾ, ನಾನು!! ನಮ್ಮ ಹೋರಾಟವೆಲ್ಲ ಮುಗಿಯಿತೆಂದೇ ನಾವು ಭಾವಿಸಿದ್ದೆವು; ಆದರೆ, ಅದು ಪ್ರಾರಂಭವಾಗುವುದರಲ್ಲಿತ್ತು; ಅಕ್ಕೆ! ಜಯಶೀಲನಾದ ನಮ್ಮ ವೀರನಿಗೆ ಇನ್ನೂ ಕಟುವಾದ, ಕ್ರೂರವಾದ ಸಮರವು ಮುಂದೆ ಕಾದಿತ್ತು, ಎಂದು ನಾವು ಭಾವಿಸಿದೆವು. ನಿಜ, ಅವನು ಆ ಹೋರಾಟದಲ್ಲಿ ಜಯವನ್ನು ಪಡೆಯಬೇಕಿತ್ತು; ಆದರೆ ಅವನ ಜಯಕ್ಕೆ ಅವನ ಜೀವವೇ ಬಲಿಯಾಗುತ್ತಿತ್ತು. ಅವನಿಗೆ ಗೆಲುವು ಶಾಂತಿಯನ್ನೂ ಸಂತೃಪ್ತಿಯನ್ನೂ ತರಬೇಕಿತ್ತು; ಆದರೆ ಆ ಜಯ ಮಾತ್ರವಾದರೋ ಒಂದು ಸಮಾಧಿಯ ಮೇಲೆ ಬೀಳುವಂತಾಗಿತ್ತು.

ಮತಭ್ರಾಂತಿಗೊಳಗಾದ ಕ್ರೈಸ್ತರ ಕೋಪಾವೇಶವು ಸಂತೋಷವನ್ನು ನೊಟಿನ ಜಯಭೇರಿಯನ್ನು ಮೊಳಗಿಸಿದವರಿಗೇ ಅನಾಗರಿಕ ರೀತಿಯದ್ದಾಗಿತ್ತು. ಆದರೆ ನಾವು ಅದರ ಸ್ವಲ್ಪ ಭಾಗವನ್ನು ಪರಿಶೀಲಿಸಬೇಕಾಗಿದೆವು. ಅವನು ಜನದ ಆಸ್ಥಾನಕ್ಕೆ ಶಾಸನಬದ್ಧವಾಗಿ ತಾನಾಗಿ ಬೇಕಿಲ್ಲದ ಮತ್ತು ಜನರಿಂದ ಆರಿಸಲ್ಪಟ್ಟ ಶಾಸನ ಸಭಾಸದಸ್ಯನಲ್ಲವೇ? ಶಾಸನ ಸಭೆಯು ಆ ವರ್ಷ (1880) ಏಪ್ರಿಲ್ 29 ರಂದು ಸೇರಿತ್ತು. ಮರುದಿನ ಪ್ರಮಾಣವಚನವನ್ನು ಸ್ವೀಕರಿಸುವ ಸಮಾರಂಭವು ನಡೆದಾಗ ಬ್ರಾಡ್ಲೋಯು ಇತರ ಕೆಲವು free-thinkers ವರ್ಗದ ಸದಸ್ಯರೊಡನೆ ಸೇರಿ ಆ ರೀತಿ ದೇವರ ಹೆಸರನ್ನು ಹೇಳಿ ಪ್ರಮಾಣವ

ನನ್ನು ಮಾಡುವುದರ ಔಚಿತ್ಯವನ್ನು ಕುರಿತಾಗಿ ಪ್ರಶ್ನಿಸಿದನು. ಶಾಸನ ಸಭಾ ವಿಧಿ ೨೯ ಮತ್ತು ೩೦ ರ ಪ್ರಕಾರ, ಮತ್ತು 1869-70ರ Evidence Amendment Act ಇದರ ಪ್ರಕಾರ ದೇವರ ಹೆಸರಿನೊಡನೆ ಪ್ರಮಾಣವನ್ನು ಮಾಡುವುದರ ಬದಲು ಸತ್ಯ ಪ್ರತಿಜ್ಞಾವಚನವನ್ನು ಎಂದಿನಂತೆ ಹೇಳಲು ಅವನು ಸಿದ್ಧನಿದ್ದರೂ ಆ ವಿಧಿಯು ಐಚ್ಛಿಕವಾದುದರಿಂದ ಅವನು ದೇವರ ಹೆಸರನ್ನೆತ್ತದೆ ಪ್ರತಿಜ್ಞಾವಚನವನ್ನಿತ್ತನು. ಅವನು ಸ್ವತಃ ಶಾಸನ ಸಭಾ ಗುಮಾಸ್ತ ಸರ್ ಎರ್ಸ್ಕಿನ್ ಮೇ (Sir Erskine May) ಇವನು —ನೇ Select-Committee ಇದರ ಮುಂದೆ ಇತ್ತ ಹೇಳಿಕೆಯಂತೆ "ಮೇಜಿನ ಬಳಿ ಬಂದು ತನ್ನ ಹೇಳಿಕೆಯನ್ನು ಈ ಕೆಳಗಿನಂತೆ ಗುಮಾಸ್ತರ ಎದುರಿಗೆ ಓದಿದನು. ಶಾಸನ ಸಭಾ (House of Commons) ಇದರ ಮಾನ್ಯ ಅಧ್ಯಕ್ಷರೇ, ಕೆಳಗೆ ಸಹಿ ಹಾಕಿದ ಚಾರ್ಲ್ಸ್ ಬ್ರ್ಯಾಡ್ಲೆಯಾದ ನಾನು ದೇವರ ಹೆಸರಿನಲ್ಲಿ ಪ್ರಮಾಣವಚನವನ್ನು ಸ್ವೀಕರಿಸುವುದರ ಬದಲಾಗಿ ನಿಯಮವು ಇದೀಗ ಅವಕಾಶವಿತ್ತಿರುವಂತೆ ಸತ್ಯ ಪ್ರತಿಜ್ಞಾವಚನವನ್ನು ಸಲ್ಲಿಸಲು ಅನುಮತಿಯನ್ನೀಯಬೇಕೆಂದು ವಿನಮ್ರಪೂರ್ವಕವಾಗಿ ಕೇಳಿಕೊಳ್ಳುತ್ತೇನೆ, ಯಾವ ವಿಧಿಯನ್ನನುಸರಿಸಿ ಹೀಗೆ ಪ್ರತಿಜ್ಞಾವಚನವನ್ನು ಸಲ್ಲಿಸಬೇಕೆಂದರೆ ಎರ್ಸ್ಕಿನ್ ಮೇ ಇವನು ಕೇಳಿದ "1869-70 ರ Evidence Amendment Act ಇದರಂತೆ" ಎಂಬುದಾಗಿ ಹೇಳಿದನು. ಆಗ ಗುಮಾಸ್ತನು ಸಭಾಧ್ಯಕ್ಷನಿಗೆ ಈ ಕೋರಿಕೆಯನ್ನು ತಿಳಿಸಿದನು. ಆಗ ಅಧ್ಯಕ್ಷನು ಈ ವಿಷಯವಾಗಿ ಬ್ರ್ಯಾಡ್ಲೆಯೇ ಸಭೆಗೆ ತಿಳುಹಿಸಬಹುದೆಂದು ಹೇಳಿದನು. "ಶ್ರೀ ಬ್ರ್ಯಾಡ್ಲೆಯ ಹೇಳಿಕೆಯು ಬಹಳ ಸಂಕ್ಷಿಪ್ತವಾಗಿತ್ತು. ಅವನು 1869 ರ Evidence Further Amendment Act ಇದನ್ನು, 1870 ರ Evidence Amendment Act ಇದನ್ನು ಅನುಸರಿಸಿದ್ದೇನೆಂದು ಪುನಃ ಹೇಳುತ್ತಾ ಈ ರೀತಿ ಮುಂದುವರಿಸಿದನು. "ಕಳೆದ ಒಂಬತ್ತು ವರ್ಷಗಳ ಕಾಲ ನಾನು ಪದೇ ಪದೇ ಈ ದೇಶದ ಉನ್ನತ ನ್ಯಾಯಾಲಯಗಳಲ್ಲಿ ಇದೇ ರೀತಿ ಪ್ರತಿಜ್ಞಾವಚನವನ್ನು ಸಲ್ಲಿಸಿರುವೆನು, ನಾನು ಅದೇ ರೀತಿ ಈಗಲೂ ನನ್ನ ಪ್ರತಿಜ್ಞೆಯನ್ನು ಸಲ್ಲಿಸಲು ಸಿದ್ಧನಿರುವೆನು," ಎಂಬುದಾಗಿ ಹೇಳಿದನು. ಒಟ್ಟಾಗಿ ಅವನು ಸಭಾಧ್ಯಕ್ಷನಿಗೆ ಹೇಳಿದ ಮಾತುಗಳು ಇಷ್ಟೇ ಆಗಿವೆ. ಇದು ಶಾಸನ ಸಭೆಯಲ್ಲಿ ನಡೆದ ಸರಳವೂ ಮೌನವೂ ಗಂಭೀರವೂ ಆದ ದೃಶ್ಯವಾಗಿತ್ತು. ಹೇಗೂ ಬ್ರ್ಯಾಡ್ಲೆಯನ್ನು ಸಭೆಯಿಂದ ಹೊರಗಿರಲು ಹೇಳಲಾಯಿತು. ಅವನು ಅಂತೆಯೇ ಸಭಾತ್ಯಾಗವನ್ನು ಮಾಡಲು ಚರ್ಚೆಯು ಮುಂದುವರಿದು ಅವನು ಸತ್ಯ ಪ್ರತಿಜ್ಞಾವಚನವನ್ನು ಸಲ್ಲಿಸಬಹುದೋ ಎಂಬುದಾಗಿ ಪರ್ಯಾಲೋಚಿಸಲು ಒಂದು

Select Committee ಯನ್ನು ನೇಮಿಸಲಾಯಿತು. ಈ ಸಮಿತಿಯು ಅವನ ಕೋರಿಕೆಗೆ ವಿರೋಧವಾದ ಅಭಿಪ್ರಾಯವನ್ನು ತೀರ್ಮಾನಿಸಿ ಆ ವರದಿಯನ್ನು ಮೇ ತಿಂಗಳು ೨೦ ರ ಹೊತ್ತಿಗಾಗಿ ಸಲ್ಲಿಸಿತು. ಮರುದಿನ ಬ್ರಾಡ್ಲೆಯು ತಾನಾಗಿಯೇ ಶಾಸನ ಸಭಾ ವೇದಿಕೆಯ ಬಳಿ ಕಾನೂನು ವಿಧಿ ಪ್ರಕಾರ ಪ್ರಮಾಣ ವಚನವನ್ನು ಸ್ವೀಕರಿಸುತ್ತೇನೆಂದು ಬಂದನು. ಆಗ Sir Henry Drummond Wolfe ಇವನು ಅವನನ್ನು ವಿರೋಧಿಸಿ ಠರಾವನ್ನು ಮುಂದಿಟ್ಟು ಅವನನ್ನು ಪ್ರಮಾಣ ವಚನವನ್ನು ಶಾಸ್ತ್ರೋಕ್ತವಾದಂತೆ ಸ್ವೀಕರಿಸಲು ಬಿಡಬಾರದೆಂದು ವಾದಿಸಲು ಮತ್ತೊಂದು ಸಮಿತಿಯನ್ನು ಆ ಕಾರ್ಯದಿಂದ ರಚಿಸಲಾಯಿತು. ಆ ಸಮಿತಿಯು ಮುಂದೆ ಬ್ರಾಡ್ಲೆಯು ತನ್ನ ವಾದವನ್ನು ಮುಂದಿಟ್ಟು ಕಾನೂನು ವಿಧಿಯಲ್ಲಿ ಅವನನ್ನು ಸತ್ಯ ಪ್ರತಿಜ್ಞಾ ವಚನವನ್ನು ಸ್ವೀಕರಿಸಬೇಕೆಂಬುದಾಗಿ ಸದೆಯತ್ತೆಂದು ಹೇಳುತ್ತಾ, "ಯಾವುದೇ ರೀತಿಯನ್ನು ನಾನು ಅನುಸರಿಸಿದರೂ ಯಾವ ಬಗೆಯ ಪ್ರಮಾಣ ವಚನವನ್ನು ಸಲ್ಲಿಸಿದರೂ ಅದು ನನ್ನ ಆತ್ಮಸಾಕ್ಷಿಗೆ ಪೂರ್ತಿ ಒಪ್ಪುವಂತಾಗಬೇಕು, ನನ್ನ ಮನಸ್ಸಾಕ್ಷಿಗೆ ಸರಿಯೆಂದು ಕಂಡು ಬಾರದೇ ಇರುವ ಪ್ರಮಾಣ ವಚನವನ್ನು ನಾನು ಸಲ್ಲಿಸಲಾರೆನು."

ಇದೇ ರೀತಿ ಬ್ರಾಡ್ಲೆಯು The Times ಪತ್ರಿಕೆಯಲ್ಲಿ ಬರೆಯುತ್ತಾ, 'ಪ್ರಮಾಣ ವಚನವು ಕೇವಲ ಶಬ್ದಗಳನ್ನು ಅವಲಂಬಿಸಲಾರದು. ನಾನು ಅದನ್ನು ಅಂತಹ ಉಪಯೋಗಿಸಿದ್ದಾದರೆ ಅದು ಆ ನುಡಿಗಳ ಅಂತರಾರ್ಥವನ್ನು ಹೊಂದಿಕೊಂಡಿರುತ್ತದೆ," ಎಂದು ಹೇಳಿದನು. ಶಾಸನ ಸಭಾ ಸಮಿತಿಯು ಅವನಿಗೆ ವಿರೋಧವಾಗಿಯೇ ತನ್ನ ವರದಿಯನ್ನು ಬರೆಯಿತು, ಆ ವರ್ಷ ಜೂನ್ ತಿಂಗಳಲ್ಲಿ ಅವನನ್ನು ಶಾಸನ ಸಭಾವಿಚಾರಣಾ ಮಂಡಳಿಯ ಮುಂದೆ ನಿಲ್ಲಿಸಿದಾಗ, ಅವನು ಬಹು ಸಮಾಧಾನದಿಂದ ಉದಾತ್ತ ಹಾಗೂ ಗಂಭೀರವಾಗಿ ತನ್ನ ವಾದವನ್ನು ಮುಂದಿಟ್ಟಾಗ, ಶಾಸನ ಸಭಾ ಸದಸ್ಯರು ತಮ್ಮದೇ ವಿಧಿನಿಯಮಗಳನ್ನು ಮೀರಿ ಪುನಃ ಪುನಃ ಕರತಾಡನ ಮಾಡಿದರು, ಆ ಬಾರ್ಡ್ನಾಕ್ಕೆ ಮುಂಚೆ ನಡೆದ ಚರ್ಚೆಯಲ್ಲಿ ಸದಸ್ಯರು ತಮ್ಮ ವರ್ತನೆಯ ಬಗ್ಗೆ ಸಭಾ ನಿಯಮವನ್ನು ಮರೆತು ಕಂಡ ವಾದ ವಿವಾದಗಳಲ್ಲಿ ನಿರರ್ಥಕವಾಗಿ ನನ್ನ ಮೇಲೂ ಟೀಕೆಯನ್ನು ಹಾರಿಸಿ ಕಡೆಗೆ ಬ್ರಾಡ್ಲೆಯನ್ನು ಇನ್ನಷ್ಟು ಕಠಿಣವಾಗಿ ಖಂಡಿಸಿದಾಗ ಅವನು ಹೀಗೆಂದನು:—

"ಧೈರ್ಯವು ನನಗೆ ಇನ್ನೂ ಬೇಕಾಗಿದೆಯಾದರೂ ನಾನು ನನಗಾಗಿಯೇ ನನ್ನ ಮೇಲಿರುವ ಆರೋಪಣೆಗೆ ಉತ್ತರಿಸಬಲ್ಲೆನು. ನಾನು ನನಗಾಗಿಯೇ ನನ್ನ ವರ್ತನೆಯ ಬಗ್ಗೆ ಉತ್ತರಿಸಲು ಸಮರ್ಥನಾಗಿರುವೆನು. ನನ್ನ ಹೆಸರನ್ನು ಮಾತ್ರವಲ್ಲದೆ ಇತರರನ್ನೂ ಇಲ್ಲಿ ಹೆಸರಿಸಿ ಅವರಿಗೆ ನನ್ನಲ್ಲಿ ದ್ವೇಷವುಂಟಾಗುವಂತೆ ಮಾಡುವುದು ನ್ಯಾಯವಾಗಲಾರದು. (ಪ್ರಚಂಡ ಕರತಾಡನ- ಅನಂತರ ಕಾನೂನನ್ನು ಉದ್ದೇಶಿಸಿ); ನಾನು ಇನ್ನೂ ಉಪಯೋಗಿಸದ ಈ ಶಾಸನ ಸಭೆ (Parliament)ಯಲ್ಲಿ ನಾನು ಇಚ್ಛೆ

ಸದ ಭಿನ್ನಾಭಿಪ್ರಾಯಕ್ಕೆ ಅವಕಾಶವೀಯುವಂಥ ಒಂದೇ ಒಂದು ಶಬ್ದವ
ನ್ನಾದರೂ ನನ್ನ ಮನಸ್ಸೋದ್ರೇಕವಾಗಿ ನನ್ನ ಬಾಯಿಂದ ಬೀಳಿಸಿದು ಎಂದು
ನಾನು ನಂಬುತ್ತೇನೆ. ನಾನು ಈ ಸಭೆಯ ಉನ್ನತ ಸ್ಥಾನದ ಮಹತ್ವವನ್ನು
ಅರಿತು ಯಾವಾಗಲೂ ಹೇಳುತ್ತಾ ಇದ್ದೇನೆ; ನಂಬಿದ್ದೇನೆ ಮತ್ತು ಬೋಧಿಸಿ
ದ್ದೇನೆ. ಈಗ ಈ ಶಾಸನ ಸಭೆಯು ಒಂದು ಸಮಿತಿಯು ನನಗೆ ವಿರೋಧ
ವಾಗಿ ತೀರ್ಮಾನವನ್ನು ಕೊಟ್ಟ ಮಾತ್ರಕ್ಕೆ ನಾನು ಹಿಂದಿನಿಂದಲೇ ತಾಳಿದ್ದ ನನ್ನ ನಂ
ಬಿಕೆಯನ್ನು ಅಲ್ಲಗಳೆಯಲಾರೆನು. ಆದರೆ ನಾನು ಯಾವಾಗಲೂ ಹೇಳು
ತ್ತಾ ಇದ್ದಂತೆ ಶಾಸನ ಸಭೆಯು ಒಂದು ಸಮಿತಿಗೆ ಅಥವಾ ಅದರ ಪ್ರಬಲ
ವಾದ ಒಂದು ಪಕ್ಷಕ್ಕೆ ಕಾನೂನಿಗೆ ವ್ಯತಿರಿಕ್ತವಾಗಿ ಹೋಗುವ ಅಧಿಕಾರ
ವಿಲ್ಲವೆಂದು ನಾನು ಧೈರ್ಯದಿಂದ ಹೇಳುತ್ತಿದ್ದೇನೆ. ಆ ಪ್ರಮಾಣಪತ್ರಕ್ಕೆ
ಸಹಿ ಹಾಕಿ, ವಿಧಿಪ್ರಕಾರವಾಗಿ ಪ್ರಮಾಣವನ್ನು ಸಲ್ಲಿಸಿ ನನ್ನ ಆ ಪೀಠ
(ಸ್ಪೀಕರನ ಕುರ್ಚಿ ಕೈತೋರಿಸಿ) ದಲ್ಲಿ ಕೂರುವ ಹಕ್ಕನ್ನು ಕಾನೂನು ನನ
ಗೆ ವಿಧಿಸಿದೆ. ನಿಮ್ಮ ಸ್ವಭಾಗ್ಯವಲ್ಲದೆ ಬೇರಾವ ಕಾರಣದಿಂದಲಾದ
ರೂ ನಾನು ಈ ಸಭಾ ಭವನಕ್ಕೆ ಬಂದುದಾದರೆ ಆ ಕ್ಷಣವೇ ನೀವು ನ
ನ್ನನ್ನು ಹೊರಕಳುಹಿಸಬಹುದೆಂಬುದನ್ನು ನಾನು ಒಪ್ಪುತ್ತೇನೆ. ಅದು
ನಿಮ್ಮ ಅಧಿಕಾರವಾಗಿದೆ. ನಿಮಗೆ ನಿಮ್ಮ ಸದಸ್ಯರ ಮೇಲೆ ಸರ್ವ ಜವಾ
ಬ್ದಾರಿ ಇದೆ. ಆದರೆ ಇದೀಗ ನಾನು ನಿಮಗೆ ತೋರಿಸುವ ಕ್ರಮವನ್ನು
ಅರಿತು ನೀವು ಈ ಸಭೆಯ ಪ್ರತಿಯೊರ್ವ ಸದಸ್ಯನಿಗೂ ಯಾವಾಗಲೂ
ಇದ್ದ ಹಕ್ಕಿನಂತೆ ನ್ಯಾಯವಾದ ಸಭಾಸದರ ಮುಂದೆ ನನ್ನ ವಿಚಾರವಾಗಿ
ನನ್ನ ಸ್ಥಾನದಿಂದ ಮತ್ತು ನನ್ನಿಂದ ತಿಳಿಯದೆ ನಿಮಗೆ ನನ್ನನ್ನು ಹೊರ
ಕಳುಹಿಸಲಿಕ್ಕಾಗುವುದಿಲ್ಲ --- ಅಭಿಪ್ರಾಯವಿಲ್ಲ ತಪ್ಪು; ಅವು ಶಿಕ್ಷೆಗೆ
ಅರ್ಹವಾಗಿವೆಯೆಂದು ನೀವು ಭಾವಿಸುದಾದರೆ ಅದನ್ನು ವಾದಕ್ಕಾದ
ರೂ ಒಪ್ಪುವೆನು. ಕಾನೂನುಗಳು ಅಂತಿದ್ದರೆ ಶಿಕ್ಷಿಸಿರಿ! ಆದರೆ ಅದು
ಸಾಧ್ಯವಿಲ್ಲವೆಂದು ಕಾನೂನು ಇದ್ದರೆ, ನೀವು (Mr. Speaker) ಪೀಠ
ದ ಸ್ಥಾನಕ್ಕೆ ಅಧಿಕಾರವಿಲ್ಲವೆಂದು ನೀವು ಒಪ್ಪುವಂತಾಗುತ್ತದೆ. ಆದು
ದರಿಂದ ಕಾನೂನನ್ನು ಮೀರಿ ನ್ಯಾಯವನ್ನು ಮರೆಸಿ ಕೇವಲ ಅಹಂ
ಕಾರಕವಾದ ತೀರ್ಮಾನ ವಿರೋಧವಾಗಿ ಸಾರ್ವಜನಿಕ ಅಭಿಪ್ರಾ
ಯವೇಂತೆಂದು ತಿಳಿಯಲು ಜನಕ್ಕೆ ಅರಿಕೆ ಮಾಡುತ್ತೇನೆ. ಸ್ವಾಮಿ,
(Mr. Speaker), ಈ ಮಾಗ್ನದ ಪೀಠಿಯಲ್ಲಿ ಈ ಸಭಾನಿಯಮದ
ಶಿಸ್ತಿಗೆ ಭಂಗವುಂಟಾಗಿದ್ದರೆ ನನ್ನನ್ನು ಕ್ಷಮಿಸಿರೆಂದು ನಿಮ್ಮನ್ನು ಈ
ಸಭೆಯನ್ನು ಕೇಳಿಕೊಳ್ಳುತ್ತೇನೆ. ನಿಮ್ಮ ತೀರ್ಪು ನಿಮಗೆ ವಿರೋ
ಧವಿದ್ದರೆ ನೀವು ಅದನ್ನು ನನ್ನ ಮೇಲೆ ವಿಧಿಸುವಾಗ ನಾನು ನಿಮ್ಮ
ಸಮಕ್ಷಮಕ್ಕೆ ಬರಬೇಕಾಗುತ್ತದೆ. ಆದರೆ ಅಂದು ನಿರ್ಧಾರವನ್ನು
ನೀವು ತಾಳಿದಾಗ ನಾವಿವರರೂ ನಮ್ಮ ಗೌರವವನ್ನು ಕಳೆದುಕೊಳ್ಳು
ತ್ತೇವೆ, ಎಂಬುದಾಗಿ ನಾನು ವಿನಯದಿಂದ ಹೇಳುತ್ತಿದ್ದೇನೆ. ಆದರಿಂದ

ನನ್ನ ಮಾನಹಾನಿಯೇನೂ ಹೆಚ್ಚು ಆಗದು; ಆದರೆ ನಿಮ್ಮದು (Mr. Speaker) ಹೋದಾಗ ಇಂಗ್ಲೆಂಡಿನ ಶಾಸನ ಸಭೆ (House of Commons) ಗೆ ಕಳಂಕ ಉಂಟಾಗದಂತಾಗುತ್ತದೆ. ಆದುದರಿಂದ ಕಷ್ಟನಾದ ಚೀಲವನ್ನು ಪ್ರಾಯ ಕಾರಕವಾಗಿ ನೀವು ಎಸಗಿಯುವ ಮುಂಚೆಯೇ ನಿಮ್ಮನ್ನು ಬೇಡುತ್ತಿದ್ದೇನೆ. ಯಾವೊಂದು ಬಗೆಯ ಹೆದರಿಕೆಯಿಂದಲ್ಲ; ಯಾವೊಂದು ರೀತಿಯ ಒತ್ತಾಯದಿಂದಲೂ ಅಲ್ಲ! ಅನಾಗರಿಕ ಜನರಿಗೆ ವಿರೋಧವಾಗಿ ಇರುವ ಒಬ್ಬನಿಗೆ ಈ ಸಭಾಂಗಣದಾಚೆಯಿರುವ ನ್ಯಾಯಾಧೀಶನು ನನ್ನ ಬೇಡಿದಾಗ ನನಗೆ ಯಾವ ನ್ಯಾಯವನ್ನೀಯುವರೋ ಅದನ್ನೇ ನೀವೂ ಕೊಡಿರೆಂದು ಬೇಡುತ್ತೇನೆ.

ಆದರೆ ಯಾವ ವಾಗ್ಬಲವಾಗಲೀ ನ್ಯಾಯನಿರ್ಣಯಕ್ಕೆ ಸಲ್ಲಿಸಿದ ಕೋರಿಕೆಯಾಗಲೀ, ಕೋರಿಕೆಯುಳ್ಳವರ ಮತೀಯ ಭ್ರಾಂತಿಯ ಪ್ರವಾಹವನ್ನು ತಡೆಗಟ್ಟಲು ಸಾಧ್ಯವಾಗದೆ, ಚಾರ್ಲ್ಸ್ ಬ್ರಾಡ್ಲೋ ದೇವರ ಹೆಸರನ್ನೆತ್ತದೆ ಸಭೆಯಲ್ಲಿ ಪ್ರಮಾಣವಚನವನ್ನು ಸ್ವೀಕರಿಸಲು ಬಿಡಬಾರದೆಂದು ಸದಸ್ಯರು ತೀರ್ಮಾನಿಸಿದರು. ಆ ತೀರ್ಮಾನವನ್ನು ಕೇಳಲು ಸಭಾಧ್ಯಕ್ಷನು (Mr. Speaker) ಬ್ರಾಡ್ಲೋನನ್ನು ಸಮೀಪಕ್ಕೆ ಬರಬೇಕೆಂದು ಆಜ್ಞಾಪಿಸಿದಾಗ ಅದಕ್ಕೆ ಅವನು ನಿಶ್ಚಲವಾಗಿ ಈ ರೀತಿ ಉತ್ತರಿಸಿದನು:-

"ಈ ಆಜ್ಞೆಗೆ ವಿಧೇಯನಾಗಿ ನಡೆಯಲು ನಾನು ಬಹು ವಿನಯದಿಂದ ತಿರಸ್ಕರಿಸುತ್ತೇನೆ, ಏಕೆಂದರೆ ನಿಮ್ಮ ಈ ತೀರ್ಪು ಕಾನೂನಿಗೆ ವಿರೋಧವಾಗಿ ಇದೆ." ಆಗ ಸಭಾಧ್ಯಕ್ಷನು ಸದಸ್ಯರಿಗೆ ಮುಂದಿನ ಕ್ರಮವೇನೆಂಬುದಾಗಿ ಕೇಳಿದ ವೇಳೆಯಲ್ಲಿ ಅಧ್ಯಕ್ಷನು ಮತ್ತು ಬ್ರಾಡ್ಲೋರವರು ಪರಸ್ಪರ ಒಂದೆಡೆ ಸೇರಿದ್ದಾಗ ಸಭಾಸದಸ್ಯರು ಸಭೆಯಿಂದ ಹೊರಹೋಗುವ ಆಜ್ಞೆಯನ್ನು ಬ್ರಾಡ್ಲೋಯ ಮೇಲೆ ವಿಧಿಸಬೇಕೆಂದು ತೀರ್ಮಾನಿಸಿದರು. ಹಾಗಾಗಿ ಪುನಃ ಅವನ ಮೇಲೆ ಸಭೆಯಿಂದ ಹೋಗಬೇಕೆಂಬ ಕ್ರಮವನ್ನು ವಿಧಿಸಿದಾಗ ಅವನು ಪುನಃ ಅದನ್ನು ತಿರಸ್ಕರಿಸಿದನು. ಪರಿಣಾಮವಾಗಿ ಸಭಾಂಗಣದ ಹವಾಲ್ದಾರ (Serjeant-at-Arms) ನಿಗೆ ಅವನನ್ನು ಹೊರಹಾಕಬೇಕೆಂದು ಹೇಳಲಾಯಿತು. ಚಿಕ್ಕ ದೇಹಾಕೃತಿಯ ಕ್ಯಾಪ್ಟನ್ ಗಾಸೆಟ್ಟನು ಆ ಅಜಾನುಬಾಹು ಬ್ರಾಡ್ಲೋಯನ್ನು ಸಮೀಪಿಸಿದಾಗ ಆ ದೃಶ್ಯವು ವಿನೋದಕರವಾಗಿತ್ತಲ್ಲದೆ ಅವನನ್ನು ಹೊರಹಾಕಬೇಕೆಂದು ಅವನು ಆಜ್ಞೆಯನ್ನು ನಡೆಸುವುದೆಂತೆಂದು ಜನ ಆಶ್ಚರ್ಯದಿಂದ ನೋಡುತ್ತಿದ್ದರು. ಆದರೆ ಚಾರ್ಲ್ಸ್ ಬ್ರಾಡ್ಲೋಯು ಅಂಥ ಅನಾಹು[illegible]ಕರ ಸಂದರ್ಭಕ್ಕೆ ಅವಕಾಶವನ್ನೀಯುವಂತವನಾಗಿರಲಿಲ್ಲ. ಅವನ ಹೆಗಲಿನ ಮೇಲೆ ಮೆಲ್ಲಗೆ ಕೈಯನ್ನಿಟ್ಟರೆ ಸಾಕು; ಅದೇ ಅಧಿಕಾರ ಪ್ರಾಪ್ತಿಯ ಮುದ್ರಿಕೆಯಾಗಿತ್ತು ಎಂದು ಅವನು ಒಪ್ಪಿ ಆ ಆಜ್ಞೆಗೆ ಮಣಿದನು. ಕಡೆಗೆ ಗಂಭೀರವದನನಾಗಿ ಆ ಚಿಕ್ಕ ವ್ಯಕ್ತಿಯನ್ನು ಅನುಸರಿಸಿ ಹೊರನಡೆದನು. ಅವನ ವಿಷಯವಾಗಿ ಮುಂದೇನು ಮಾ

ಚುಟೀಕೆಯಿಂದು ತೀರ್ಮಾನಿಸುವ ವರೆಗೂ ಅವನನ್ನು House of Commons ಇದರ ಗಡಿಯಾರ ಕಂಬದ ಕೋಣೆಯಲ್ಲಿ ಸೆರೆಯಿಟ್ಟರು, ಆ ಶಾಸನ ಸಭೆಗೆ ಆ ವರೆಗೆ ಇದ್ದವರಲ್ಲಿ ಬ್ರ್ಯಾಡ್ಲೋನೇ ತುಂಬಾ ಸಂಕೋಚವನ್ನುಂಟು ಮಾಡಿದ ಸೆರೆಯಾಳಾಗಿದ್ದನು, ಹಾಗಿದ್ದರೂ ಅವನನ್ನು ಬಂಧಿಸಿದಾಗ ಶಾಸನ ಸಭೆಯು (Parliament) ಕಾನೂನನ್ನೇ ಬಂಧಿಸಿದಂತಾಯಿತು,

ಶಾಸನ ಸಭಾಸಮಿತಿಯು ವರದಿ ಮತ್ತು ಬ್ರ್ಯಾಡ್ಲೋನನ್ನು ಬಂಧಿಸಿದುದನ್ನು ಕುರಿತು ನಾನು National Reformer ಪತ್ರಿಕೆಯ ವಿಶೇಷ ಸಂಚಿಕೆಯಲ್ಲಿ ಈ ರೀತಿ ಬರೆದಿದ್ದೆನು, "ಚುನಾವಣೆಯಲ್ಲಿ ಜನರಿಂದ ಸೋಲಿಸಲ್ಪಟ್ಟ ಟೋರಿ ಪಕ್ಷವು ಈಗ ಹಿಂದು ಸ್ಥಾನಕ್ಕಾದರೂ House of Commons ಇಲ್ಲಿ ಗೆಲುವನ್ನು ಪಡೆಯಿತು, ನಾರ್ತಾಂಪ್ಟನ್ ಕ್ಷೇತ್ರದಿಂದ ತೀವ್ರಗಾಮಿಗಳು ಆರಿಸಿದ ಸದಸ್ಯನು ತನ್ನ ಮತದಾರರು ತನ್ನ ಮೇಲೆ ಹೊರಿಸಿದ ಜವಾಬ್ದಾರಿಕೆಯನ್ನು ರಾಷ್ಟ್ರದ ಕಾನೂನಿಗನುಸಾರವಾಗಿ ನಿರ್ವಹಿಸುವನೆಂದು ಹೇಳಿದ ಕಾರಣದಿಂದ ಟೋರಿ ಪಕ್ಷದ -ex-Chancellor of Exchequer ಇವನು ಮಂಡಿಸಿದ ಠರಾವನ್ನು ಅನುಸರಿಸಿ ಬ್ರ್ಯಾಡ್ಲೋಯನ್ನು ಸೆರೆಮನೆಗೆ ಒಯ್ದರು. ನನ್ನ ಲೇಖನವು ಮುದ್ರಣಕ್ಕೆ ಹೋಗುತ್ತಿದ್ದಂತೆಯೇ ನಾನು ವೆಸ್ಟ್ ಮಿನಿಸ್ಟರ್‌ಗೆ ಹೋಗಿ ಶಾಸನ ಸಭೆಯು ಎಚ್ಚರಿಕೆಯಿಲ್ಲದೆ ರಾಷ್ಟ್ರವನ್ನು ಹಿಂದು ಹೋರಾಟದತ್ತ ಒಯ್ದಿತು, ಅದಕ್ಕೆ ವಿರುದ್ಧವಾಗಿ ಕಾದಾಡುವ ಬಗೆಯೆಂತೆಂಬುದಕ್ಕೆ ಅವನ ಸಲಹೆಗಳನ್ನು ಪಡೆಯುತ್ತಿದ್ದೆನು," ದೀರ್ಘ ಕಾರಾಗೃಹವಾಸಕ್ಕೆ ಒಳಗೊಳ್ಳಿಸಿ ಸರ್ವ ಘಟನೆಗಳನ್ನು ಬರೆಸಲು ಸದಾ ನಾಗಿ ಅವನು ಅವಿಶ್ರಾಂತವಾಗಿ ಬರೆಯುತ್ತಿದ್ದುದನ್ನು ಕಂಡೆನು, ಮರುದಿನವೇ ನಾನು ಬರೆದ "ಕಾನೂನು ನಿರ್ಮಾಪಕರು ಮತ್ತು ಕಾನೂನು ಮುರಿಯುವವರು"— (Law-makers & Law-breakers) ಎಂಬ ಕರಪತ್ರವು ತುಂಬಾ ಇಡಿಸಿತು। ನಡೆದ ಘಟನೆಗಳನ್ನೆಲ್ಲ ವಿವರಿಸಿದ ನಂತರ ಕೊನೆಗೆ ಈ ರೀತಿ ಹೇಳಿಕೊಂಡಿತು; "ಜನರೇ ಈಗ ಕೇಳಲಿ; ಗ್ಲಾಡ್‌ಸ್ಟನ್ ಮತ್ತು ಬ್ರೈಟ್ ಇವರು ಸ್ವತಂತ್ರವಾದಿಗಳಾಗಿ ಇದ್ದಾರೆ, ಅವರಿಗೆ ಸಭಾಂಗಣದೊಳಗೆ ದೊರಕದ ಸಹಾಯವು ಸಭಾಂಗಣದ ಹೊರಗಿಂದ ಬರಬೇಕಾಗಿದೆ। ಇನ್ನು ಸಮಯವನ್ನು ಕಳೆಯಬಾರದು, ನಾವು ಸೋಮಾರಿಗಳಾಗಿ ಇದ್ದಾಗ ಜನಪ್ರತಿನಿಧಿಯೊರ್ವನು ಕಾನೂನಿಗೆ ವಿರೋಧವಾಗಿ ಸೆರೆಮನೆಯಲ್ಲಿರಿಸಲ್ಪಟ್ಟಿದ್ದಾನೆ। ನಾರ್ತಾಂಪ್ಟನ್ ಚುನಾವಣಾ ಕ್ಷೇತ್ರವನ್ನು ಅವಮಾನಕ್ಕೊಳಗಾಗಿಸಿದೆ. ಆ ಮಹತ್ವದ ಕ್ಷೇತ್ರದಲ್ಲಿ ನೆರೆದ ಪ್ರತಿಯೊಂದು ಚುನಾವಣಾ ಕ್ಷೇತ್ರವೂ ಅನ್ಯಾಯಕ್ಕೊಳಗಾಗಿದೆ, ನಮ್ಮ ಸ್ವಾತಂತ್ರ್ಯವು ನಮ್ಮ ಚುನಾವಣಾ ಅಧಿಕಾರವನ್ನು ಆಧರಿಸಿದೆ। ನಮ್ಮ ಪ್ರಗತಿಯು ನಮ್ಮ ಸ್ವತಂತ್ರ ಮನೋಭಾವದಲ್ಲಿದೆ.

ಟೋರಿ ಪಕ್ಷದ ಪ್ರಭುಗಳು ಮತ್ತು ಜಮೀನ್ದಾರರು ಜನತೆಯ ಅಭಿಪ್ರಾಯವನ್ನು ಪ್ರತಿಭಟಿಸಿ ತಮ್ಮ ಶಕ್ತಿಯನ್ನು ಜನತೆಗೆ ವಿರೋಧವಾಗಿ ಬಳಸಿದು ತೋರಿಸಿದ್ದಾರೆ; ಈಗ ಜನರೇ ಮಾತಾಡಲಿ!"

ಹೀಗೆ ಮನವಿಯನ್ನು ಮುಂದಿಡುವ ಅವಶ್ಯಕತೆಯಿರಲಿಲ್ಲ. ಇಂಥಾ ಅತ್ಯಾಚಾರ ನಡೆದುದು ಬರೀ ಕೋಪಾವೇಶಕ್ಕೊಳಗಾದ ಆ ಕ್ಷಣದಲ್ಲಿ ಮಾತ್ರವಾಗಿದೆ; ಏಕೆಂದರೆ ಮರುದಿನವೇ ಖೈದಿಯನ್ನು ಬಿಡುಗಡೆ ಮಾಡಿದರು. ಅಷ್ಟರಲ್ಲಿ ಶಾಸನಸಭೆಯ ಅಧಿಕಾರ ವರ್ತನೆಯನ್ನು ಖಂಡಿಸಿ ಜನರು ಪ್ರತಿಭಟಿಸಿದರು, ತನ್ನ ಬಿಡುಗಡೆಯಾದ ಮರುದಿನ ಚಾರ್ಲ್ಸ್ ಬ್ರಾಡ್ಲೋಯು House of Commons-ಇಲ್ಲಿಗೆ ಹೋದಾಗ ವೆಸ್ಟ್‌ಮಿನಿಸ್ಟರ್‌ನಲ್ಲಿ 4,000 ಜನರು ಸೇರಿದ್ದು ಅವನಿಗೆ ಜಯಘೋಷವನ್ನು ಕೂಗಿದರು. ಆ ಒಂದು ವಾರದೊಳಗಾಗಿ ದೇಶದಲ್ಲಿ ನೂರಾರು ಇನ್ನೂರು ಸಾರ್ವಜನಿಕ ಸಭೆಗಳು ಸೇರಿ ಶಾಸನ ಸಭೆಯ ವರ್ತನೆಯನ್ನು ತೀವ್ರವಾಗಿ ಖಂಡಿಸಿದುವು, ಸ್ವತಂತ್ರ ಪ್ರತಿಪಾದನಾ ಸಂಸ್ಥೆಗಳು, ವಿಚಾರ ಕೂಟಗಳು, ಸಂಘಗಳು ಎಲ್ಲಾ ಕೂಡಿಕೊಂಡು ಸರಕಾರಕ್ಕೆ ಸಂದೇಶಗಳನ್ನು ಕಳುಹಿಸಿ ನ್ಯಾಯವನ್ನು ಕೋರಿದರು. ವಾರ್ತಾಪತ್ರಿಕೆಗಳ ಪ್ರಕಾರ ಬ್ರಾಡ್ಲೋರ ಚಳವಳಿ ಮುಂದಿನ ಗುರುವಾರ ದಿನ ಎಂದೂ ಸೇರದಿದ್ದಷ್ಟು ದೊಡ್ಡ ಪ್ರತಿಭಟನಾ ಸಭೆ ಸೇರಿತ್ತಲ್ಲದೆ ಅದಕ್ಕೂ ಮುಂದಿನ ಸೋಮವಾರದಂದು ಅಲ್ಲಿಯೇ ಒಂದು ಸಾರ್ವಜನಿಕ ಸಭೆಯು ನೆರೆಯಿತು, House of Commons ಸಭೆಯು ಬ್ರಾಡ್ಲೋಯು ಪ್ರಮಾಣ ವಚನದ ಸಲುವಾಗಿದ್ದ ಠರಾವನ್ನು ಹಿಂತೆಗೆದುಕೊಂಡು ಕಡೆಗೆ ಜುಲೈ ತಿಂಗಳ ೨ನೇ ದಿನ ಅವನನ್ನು ತಾನು ಇಚ್ಛಿಸಿದಂತೆ ಪ್ರಮಾಣವಚನವನ್ನು ಸಲ್ಲಿಸಿ ಶಾಸನಸಭೆಯಲ್ಲಿ ಕುಳಿತುಕೊಳ್ಳಲು ಬಿಟ್ಟಿತು. ಆ ವೇಳೆಗೆ ನಾನು ಹೀಗೆ ಬರೆದೆನು:—

"ಕಡೆಗಾದರೂ ಈ ಕಹಿ ಹೋರಾಟವು ಮುಗಿದು ಕಾನೂನು ಕ್ರಮ ಮತ್ತು ನ್ಯಾಯವು ಜಯವನ್ನು ಪಡೆಯಿತು, ಟೋರಿಗಳು ಮತ್ತು ಇತರ ಅತಿರೇಕವಾದಿಗಳು ತಂದಿದ್ದ ಠರಾವನ್ನು ಶಾಸನ ಸಭಾ ಸದಸ್ಯರು ಹಿಂತೆಗೆದುಕೊಂಡು ಆ House of Commons ಸಭೆಯು ತನ್ನ ಗೌರವವನ್ನು ಜೋಕೆಯಿಂದ ಉಳಿಸಿಕೊಂಡಿತು, ಈ ಜಯವು ಕ್ರೈಸ್ತಮತದ ಮೇಲೆ Free-thought ತತ್ವವು ಪಡೆದುದಲ್ಲ, ಅದು ಶಾಸನ ಸಭೆಯ ಮೇಲೂ ಪಡೆದ ಜಯವಲ್ಲ, ಹಲವು ಅಭಿಪ್ರಾಯಗಳಿಂದ ಕೂಡಿದರೂ ನ್ಯಾಯವನ್ನು ನಂಬಿದ್ದ ಒಳ್ಳೆಯ ಜನರು ಟೋರಿ ಪಕ್ಷದ ಮತ್ತು ಇತರ ಅತಿರೇಕವಾದಿಗಳ ಮತಭ್ರಾಂತಿಯ ವಿರೋಧವಾಗಿ ರಾಜ್ಯಘಟನಾ ನಿಯಮವು ಪಡೆದ ಜಯ! ಬಹು ಸಂದಿಗ್ಧ ಪರಿಸ್ಥಿತಿಯಲ್ಲೂ ಆ ನಾಗರಿಕ ಮತ್ತು ಮತೀಯ ಹಕ್ಕು ಬಾಧ್ಯ

ತೀರ್ಪುಗಳು ಪುನಃ ಸಮರ್ಥಿಸಲ್ಪಟ್ಟವು. House of Commons ಸಭೆಯು ಪ್ರಸ್ತುತವು ಸಭೆಯಾಗಿದೆ, ಅದು ದೊಡ್ಡ ಪ್ರಭುವರ್ಗದವರು ಮಾತ್ರ ಕೂಡಿ ಕಟ್ಟಿತು ತಮ್ಮ ಕೈಗಳಲ್ಲಿ ದೊಣ್ಣೆಗಳನ್ನು ಹಿಡಿದು ಉತ್ತರ ಹೊಡೆದಾಡಲು ಇರುವ ರಂಗಸ್ಥಳವಲ್ಲ."

ಚಾರ್ಲ್ಸ್ ಬ್ರ್ಯಾಡ್ಲೋ ಮತ್ತು ಅವನ ವಿರೋಧಿಗಳೊಳಗಿದ್ದ ವ್ಯಾಜ್ಯವು ಇದೀಗ ನ್ಯಾಯಾಲಯಗಳಿಗೆ ಹೋಯಿತು, ಅವನು ಶಾಸನ ಸಭೆಯೊಳಗಿರುತ್ತ ಕೂಡಲೇ ಅವನು ಪ್ರಮಾಣವಚನವನ್ನು ಸ್ವೀಕರಿಸದೆ ಮತವಿತ್ತನೆಂಬ ಕಾರಣದಿಂದ ಅವನ ಮೇಲೆ "ರಿಕ್ತ ಅರ್ಜಿಯನ್ನು ಕೋರ್ಟಿನಲ್ಲಿ ಹಾಕಲಾಯಿತು. ಇದರ ವ್ಯವಹಾರವು ತುಂಬಾ ಆಯಾಸವನ್ನುಂಟು ಮಾಡುತ್ತಾ ಬಹುಕಾಲ ತೆಗೆದುಕೊಂಡಿತು. ಚುನಾವಣೆಯಲ್ಲಿ ಸೋತ ಅವನ ವೈರಿಗಳು ನಂತರ ಕೈಗೊಂಡರು ಅವನು ನಿರ್ಗತಿಕನಾಗಿ ಮತ್ತು ಅವನು ಶ್ರಮಪಟ್ಟು ಪ್ರಯಾಸದಿಂದ ಕಟ್ಟಿದ ಗೃಹವನ್ನು ತ್ಯಜಿಸುವನೆಂಬುದಾಗಿ ನಂಬಿದರು. ನ್ಯಾಶೆಗೀಟ್ ಇವನಿಂಗ್ ದಿನಕರು ಕೇವಲ ಅಗತ್ಯ ವೆಚ್ಚಕ್ಕೋಸ್ಕರವನ್ನು ಅಯೋಗ್ಯದಿಯಾಗಿ ನಿಲ್ಲಿಸಿ ಬ್ರ್ಯಾಡ್ಲೋಯ ಮೇಲೆ ವ್ಯಾಜ್ಯವನ್ನು ಹೂಡಿದರು. ಬ್ರ್ಯಾಡ್ಲೋಯಾದರೋ ತನ್ನ ಕಡೆಯಿಂದ ವ್ಯಾಜ್ಯದಲ್ಲೂ ತಾನೇ ವಾದಿಸಿ, ಮತ್ತು ತಾನು ತುಂಬಾ ದಣಿದಿದ್ದರೂ ಹಲವು ತಿಂಗಳುಗಳವರೆಗೂ ತನ್ನ ವಿರೋಧಿಗಳನ್ನೆಲ್ಲ ದೂರವಿಟ್ಟಿದ್ದನು. ಹಲವು ಬಾರಿ ಬಂದರು ನಂತರ ಬಂದಾಗಿಯೂ ಅಂತೆ ವ್ಯಾಜ್ಯದಲ್ಲಿ ಸೋತನಾದರೂ ಅವನು ಕಾದಾಡುತ್ತಲೇ ಇದ್ದನು. ಕೊನೆಗೆ ವ್ಯಾಜ್ಯವ್ಯವಹಾರಗಳನ್ನು House of Lords ಸಭೆಯ ಮುಂದೆ ತಂದಾಗ ಅಲ್ಲಿ ಅವನು ಪ್ರಚಂಡ ಜಯವನ್ನು ಪಡೆದನು. ಆದರೆ ಅದನ್ನು ತುಂಬಾ ಹಣ ವ್ಯಯವಾಗಿ ಮತ್ತು ತನ್ನ ದೇಹವನ್ನು ದಣಿಸಿ ಪಡೆದಿದ್ದನು. ಅವನ ಶರೀರ ಶಕ್ತಿಯು ಉಡುಗಿತು. ಆರ್ಥಿಕವಾಗಿಯೂ ಅವನ ಮೇಲೆ ಸಾಲದ ಹೊರೆಯು ಬಿದ್ದಿತು. ಈ ಎಲ್ಲಾ ಸಮಯದಲ್ಲೂ ಅವನು ನ್ಯಾಯಾಲಯಗಳಲ್ಲಿ ಇರಬೇಕಾಗಿದ್ದಿತಲ್ಲದೆ ತನ್ನ ಶಾಸನಸಭಾ ಸದಸ್ಯತೆಯ ಕಾರ್ಯಭಾರವನ್ನು ದಕ್ಷತೆಯಿಂದ ನಿರ್ವಹಿಸಿದನು. ಅದರೊಡನೆಯೇ ತನ್ನ ಜೀವನ ನಿರ್ವಹಣೆಗಾಗಿ ಉಪನ್ಯಾಸ, ಲೇಖನಗಳು ಎಂದು ಕಳೆಯುತ್ತಿದ್ದ. ಶಾಸನ ಸಭೆಯು ಕೂಡಿದ ದಿನಗಳಲ್ಲಿ ಅವನು ದೇಹದಲ್ಲಿ ಹುತ್ತಾಡುತ್ತ ಅವಿರತ ದುಡಿಮೆಯಲ್ಲಿ ನಿರತನಾಗಿದನು. ಚುನಾವಣೆಯಲ್ಲಿ ಸೋತ ಅವನ ವಿರೋಧಿಗಳಲ್ಲಿ ಕೆಲವರು ಅವನನ್ನು ನೋವಿಗೀಡಾಗಿಸಲು ತಮ್ಮ ಅಸ್ತ್ರಗಳನ್ನು ಸನ್ನಿಕೆಗೆ ತಿರುಗಿಸಿದರು. ವಿಗ್ಸ್‌ನ ಎಕ್ಸೆರಂ ಸಹ

ಜಾನ್‌ಹೋ ಇವರು ನನ್ನ ಬಗ್ಗೆ ಕಟುವಾದ ಮಾತುಗಳನ್ನಾಡಿದನ್ನು "Scotsman" ಮತ್ತು 'Glasgow Herald' ಪತ್ರಿಕೆಗಳು ಪ್ರಕಟಿಸಲು ತಿರಸ್ಕರಿಸಿದ್ದವು. "ಅಲ್ಲಿ ಬಳಸಿದ ಮಾತುಗಳು ಎಷ್ಟು ಅಸಹ್ಯವಾಗಿತ್ತೆಂದರೆ ಅವು ಒಂದು ಅವಿವೇಕಿ ಪಶುವಿನ ಬಾಯಿಯಿಂದಲೂ ಬರುತ್ತಿರಲಿಲ್ಲ," ಎಂಬುದಾಗಿ "Scotsman" ಪತ್ರಿಕೆಯು ಹೇಳಿತು.

ಅಂತರ್‍ರಾಷ್ಟ್ರೀಯ Free-thought- ಸದಸ್ಯರ ಪರಿಷತ್ತಿಗೆ ಇಂಗ್ಲಿಷ್ Free-thinkers ಪರವಾಗಿ ನಾನು ಕೆಲವು ಸಾರಿ ಚಾರ್ಲ್ಸ್ ಬ್ರಾಡ್ಲಾ ಇವರೊಂದಿಗೆ ಬ್ರುಸೆಲ್ಸ್‌ಗೆ ಹೋಗಿದ್ದೆನು. ಅದು ಬಹು ಸ್ವಾರಸ್ಯವಾದ ಸಮ್ಮೇಳನವಾಗಿದ್ದು ಬಹು ವಿನೀತನೂ ದಯಾಳುವೂ ಆದ ಶ್ರೀ. ಲುಡ್ವಿಗ್ ಬುಕ್ನರ್ ಇವರನ್ನು ಕೂಡಿ ಜಗತ್ತಿನ ಪ್ರಖ್ಯಾತರಾದ ಹಲವು ಜನರಿಂದ ಆ ಸಭೆ ನೆರೆದಿತ್ತು. ಅಲ್ಲಿ ಅಂತರ್‍ರಾಷ್ಟ್ರೀಯ Federation of Freethinkers ಎಂಬ ಸಂಸ್ಥೆಯು ಸ್ಥಾಪಿತವಾಯಿತು, ಆ ಸಂಸ್ಥೆಯು ವಿವಿಧ ದೇಶಗಳ Free-thinkers ಇವರನ್ನು ಜತೆಗೂಡಿಸಲು ಯತ್ನಿಸಿತಲ್ಲದೆ ಲಂಡನ್ ಮತ್ತು ಆಮ್ಸ್ಟರ್‌ಡ್ಯಾಮ್‌ನಲ್ಲಿ ಉತ್ಸಾಹಪೂರ್ಣ ಪರಿಷತ್ತುಗಳನ್ನು ನೆರೆಯಿಸಿತು, ಆ ಸಮ್ಮೇಳನಗಳಲ್ಲದೆ ಹೆಚ್ಚಿನ ಹುರುಪು ಉತ್ಸಾಹಗಳನ್ನು ಆ ಸಂಸ್ಥೆಯು ತೋರಿಸಲಿಲ್ಲ, ಅಂತರ್‍ರಾಷ್ಟ್ರೀಯ ಸಂಸ್ಥೆಗಳ ಚಟುವಟಿಕೆಗೆ ತಮ್ಮ ಸಮಯ ಮತ್ತು ಆಲೋಚನೆಯನ್ನೀಯುವರು: ಅದಕ್ಕಿಂತ ಹೆಚ್ಚಾಗಿ ಎಲ್ಲ ದೇಶಗಳಲ್ಲೂ ಆ Free-thought- ಸಂಸ್ಥೆಗಳು ತಮ್ಮ ಅಸ್ತಿತ್ವವನ್ನು ಭದ್ರಗೊಳಿಸಲು ಶ್ರಮಿಸಬೇಕಿತ್ತೆಂಬುದೂ ನಿಜವಾಗಿದೆ. ನಾನಾದರೋ ಶ್ರೀ. ಬುಕ್ನರ್ ಇವರ ಪರಿಚಯವಾದುದರ ಪರಿಣಾಮವಾಗಿ ನಮ್ಮೊಳಗೆ ಸ್ವಾರಸ್ಯವಾದ ಪತ್ರವ್ಯವಹಾರಗಳು ನಡೆದುವು. ಅವರು ಬರೆದ "ಪ್ರಾಣಿಗಳ ಮನಸ್ಸು", "ಶಕ್ತಿ ಮತ್ತು ವಸ್ತು" ಇತ್ಯಾದಿ ಹೊತ್ತಗೆಗಳ ಹದಿನಾಲ್ಕನೇ ಆವೃತ್ತಿಯನ್ನೂ ಇತರ ಕೆಲವು ಕಿರುಪತ್ರಿಕೆಗಳನ್ನೂ ಅವರ ಅನುಮತಿಯನ್ನು ಪಡೆದು ಭಾಷಾಂತರಿಸಿ ಪ್ರಕಟಿಸಿದೆನು. ಲಿಬರಲ್ ಪಕ್ಷದ ಸರಕಾರವು 1880 ರ ಬೇಸಗೆಯಲ್ಲಿ ಐರಿಶ್ ಮುಂದಾಳುಗಳಿಗೆ ವಿರೋಧವಾಗಿ ಕತ್ತಿಯನ್ನು ಬಲವಾಗಿ ಹಿಡಿದಿತ್ತು. ಇದರಿಂದ ಗೌರವಾನ್ವಿತನಾದ ಮಾನ್ಯ ಗ್ಲಾಡ್‌ಸ್ಟನ್ ಇವರ ಪ್ರತಿಭಟನೆಗೂ ವಿರೋಧವಾಗಿ ನಾನು ಐರ್ಲೆಂಡಿನ ಸ್ವಾತಂತ್ರ್ಯವನ್ನು ಸಮರ್ಥಿಸಿ ಅದರ ಪರವಾಗಿ ಆಂಗ್ಲ ಜನರ ಅಭಿಪ್ರಾಯವನ್ನು ಮೊಳಗುಗೊಳಿಸಲೆತ್ನಿಸಿದೆನು. ಆದರೆ ಅದು ಪ್ರಯಾಸಕರವಾದ ಕೆಲಸವೇ ಆಗಿತ್ತು, ಇಂಗ್ಲೆಂಡಿಗೆ ವಿರೋಧವಾಗಿ ಮತ್ತು ಆಂಗ್ಲ ಸಾಮ್ರಾಜ್ಯದ ವಿರೋಧವಾಗಿ ಐರಿಶ್ ಜನರು ಕೆರಳಿ ಮಾತುಗಳನ್ನು ಉಪಯೋಗಿಸಿದಾಗ ನಾನು ಅಂಕೆಸಂಖ್ಯೆ ಬಲದಿಂದ ಇಂಗ್ಲೆಂಡಿನಲ್ಲಿ ಇರುವುದಕ್ಕಿಂತಲೂ ಐರ್ಲೆಂಡಿನಲ್ಲಿ ಜನಜೀ

ವನೆ ಮತ್ತು ಆಸ್ತಿಪಾಸ್ತಿಗಳು ಸತತವಾಗಿ ಹೆಚ್ಚುವುದೂ ವ್ಯವಸಾಯ
ಕ ವ್ಯಾಪ್ತಿಗಳಲ್ಲಿ ಅಲ್ಲದೆ ಪ್ರತಿಯೊಂದರಲ್ಲಿ ಮಹತ್ತಾದ ಕೋಟಿ ಖೂನಿ
ಗಳು ಮತ್ತು ಗೆ ವನಾ ಬಾಧೆಯಿಲ್ಲದೆ ನಿವೃತ್ತಿಯಾಗುತ್ತಿದೆಯೆಂದೂ ಭೂ
ಮಾಲೀಕ ಮತ್ತು ಗೇಣಿದಾರರೊಳಗಿನ ಬಾಂಧವ್ಯವು ಚೆನ್ನಾಗಿ ಇದ್ದರೆ
ಎಲ್ಲಾ ಕೊರತೆಗಳು ನಿವಾರಣೆಯಾಗುವುದೆಂದೂ ಹಾನಿಕಾರಕವಾದ
ಗೇಣಿದಾರಿಕೆ ಮತ್ತು ಅಮಾನುಷ ರೀತಿಯಲ್ಲಿ ಕಾರ್ಮಿಕರನ್ನು ಕಾ
ಣುವ ಪರಿಸ್ಥಿತಿಯು ತೊಲಗಿದರೆ ನಿರಾಶೆ, ನಿರ್ಗತಿಕತೆ ಮತ್ತು
ರೋಗನನ್ನು ತೀರಿಸಿಕೊಳ್ಳಲು ಹವಣಿಸುವ ಅನ್ಯವೃತ್ತಿಯಿಂದ
ಹುಟ್ಟುವ ಅಸಹ್ಯ ಪ್ರತೀಕಾರ ಪ್ರತಿಹಿಂಸೆಗಳೆಲ್ಲಾ ಇಲ್ಲದಾಗುವು
ವು ಎಂಬುದಾಗಿಯೂ ವಾದಿಸಿದೆನು, ಗ್ಲಾಡ್‌ಸ್ಟನ್ ಇವರ ಮಾ
ತುಗಳನ್ನು ಟಿ.ಪಿ.ಓ. ಕಾನರ್ ಇವರು "ಉದಾಹರಿಸಿದನ್ನೂ
ನಾನು ಗೇಣಿದಾರರಿಂದ ಆಸ್ತಿಯನ್ನು ಬಿಡಿಸುವ ಸಂದರ್ಭದಲ್ಲಿ
15,000 ಜನರು ಆ ರೀತಿ ಹೊರಹಾಕಲ್ಪಟ್ಟು ಅವರು ಸ್ಥಾನಭ್ರಷ್ಟ
ರಾದರೆಂದು ಹೇಳಿದೆನು. ಆ ವರ್ಷದ ಬೇಸಗೆ ಕಾಲವು ವಿವಿಧ
ಚಟುವಟಿಕೆಗಳಿಂದ ಕಳೆಯಿತು, ವಿಜ್ಞಾನ ತರಗತಿಗಳಲ್ಲಿ ಬೋ
ಧನೆ, ಆಂಗ್ಲ ಕ್ರೈಸ್ತ ಹಿಂದಿನ ಧರ್ಮಗಳ ಹವಿನೊಡನೆ ಚರ್ಚೆ,
ಮತ್ತು ಮೂರು ವಾರಗಳ ಸಮಯ ನನ್ನನ್ನು ಹಾಸಿಗೆಯಲ್ಲಿರಿಸಿ
ದ ಶಸ್ತ್ರಚಿಕಿತ್ಸೆಗೊಳಗಾಗಿ ಅನಂತರ ಚೆನ್ನಾಗಿ ಹಿಂದಕ್ಕೆ ಕಳಿತಿ
ದ್ದಾಗ ಬರೆಯುವುದನ್ನು ಅಭ್ಯಾಸಿಸುತ್ತಾ ಕಡೆಗೆ "ಶಾಸನಗಳು ಮತ್ತು
ನಿಯಮಗಳು" ಎಂಬ ಹೊತ್ತಗೆಯ ಬಹುಭಾಗವನ್ನು ಭಾಷಾಂತರಿಸಿದೆನು,

ಶ್ರಮಿಕ ಚಟ್ಟು ದುಡಿಯುವುದರಲ್ಲಿರುವ ಹಿಂದು ನೀತಿ
ಪಾಠವನ್ನು ಇಲ್ಲಿ ಹೇಳಬಯಸುತ್ತೇನೆ. ಶ್ರಮಸಾಧ್ಯವಾದ ಕೆಲ
ಸವು ಯಾರನ್ನೂ ಕೊಲ್ಲದು. ಬ್ರಾಡ್ಲಾಯರು ಲೇಖನಿಯಿಂದ
1880 ರಲ್ಲಿ ಬರೆಯಲ್ಪಟ್ಟ ಬರವಣಿಗೆಯೊಂದು National
Reformer ಪತ್ರಿಕೆಯಲ್ಲಿ ಹೀಗೆ ಇತ್ತು: "ಅವಳ ಆತ್ಮ ಸ್ನೇಹಿ
ತರ ಆ ಬಿಡ್ರಾಯರಂತೆ ನಾವು ಒಂದು ಕೆಯಿಂದ ಹೇಳುವುದಾದ
ರೆ ಶ್ರೀಮತಿ ಬೆಸೆಂಟ್ ಇವರು ಕಳೆದ ಎರಡು ವರ್ಷಗಳ ಕಾಲ
ದಲ್ಲಿ ತುಂಬಾ ಶ್ರಮವಹಿಸಿಟ್ಟು ಬಿಡುವಿಲ್ಲದೆ ದುಡಿದಿರುವರು." ಇ
ನ್ನೀಗ 1893 ರಲ್ಲಿ ಮತ್ತು ಹದಿಮೂರು ವರ್ಷಗಳ ಕಾಲದ ಮಧ್ಯೆ
ನಾನು ಅವಿರತ ಕಾರ್ಯಭಾರದಲ್ಲಿ ಮುಳುಗಿದೆನು. ಆದ್ದೀ
ಅಲ್ಲ, ಅಂದಿನದಕ್ಕಿಂತಲೂ ಹೆಚ್ಚು ಶ್ರಮಿಸುತ್ತಿದ್ದೇನೆ, ಮತ್ತು
ಉತ್ತಮ ಆರೋಗ್ಯವನ್ನು ಹೊಂದಿದ್ದೇನೆ. ಇಷ್ಟು ವರ್ಷಗಳ
National Reformer ಪತ್ರಿಕೆಯನ್ನು ನೋಡಿದಾಗ ಅದು ನಿಜ
ವಾಗಿಯೂ ಉತ್ತಮ ವಿದ್ಯಾಪ್ರಚಾರ ಕೆಲಸವನ್ನು ಮಾಡುತ್ತು ಎಂದು
ನನಗೆ ಅನಿಸುತ್ತದೆ. ಬ್ರಾಡ್ಲಾಯರ ರಾಜಕೀಯ ಮತ್ತು ಧಾರ್ಮಿಕ

ವಿಚಾರಗಳ ಮೇಲೆ ಹೇಳಿದ ವಿಸ್ತೃತವಾದ ಮಾತುಗಳು, ಡಾ. ಅವರಿ
ಗೆ ಇರುವ ತೇಜೋಪೂರ್ಣವೂ ಅತಿ ಸ್ವಾರಸ್ಯವೂ ಆದ ವಿಜ್ಞಾನ
ಶಾಸ್ತ್ರ ಬೋಧೆಯೂ ಕಲ್ಪನೆ ಹಿಂದಿನಿಂದ ರಾಷ್ಟ್ರಗಳೊಡನೆ ನಾವು
ಬೆಳೆಸಿದ್ದ ವ್ಯವಹಾರದಲ್ಲಿ ರಾಜಕೀಯ ಮತ್ತು ರಾಷ್ಟ್ರೀಯ
ನೀತಿಯನ್ನು ಪ್ರತಿಪಾದಿಸುವ ವಿದ್ಯಾಪ್ರಚಾರ ಕಾರ್ಯಭಾರವು
ನನ್ನ ಪಾಲಿಗೆ ಬಿದ್ದಿತು, ನಾವು ನಮ್ಮ ಕೆಲಸವನ್ನು ಪ್ರತ್ಯ
ಕ್ಷ ಶ್ರದ್ಧೆಯಿಂದ ಮಾಡಿದೆವು. ಅಲ್ಲದೆ ನಿಷ್ಪಕ್ಷಪಾತ ಜೀ
ವನ ಮತ್ತು ಉನ್ನತ ಧ್ಯೇಯದ ಪ್ರಭಾವವನ್ನು ನಮ್ಮ
ಕಾರ್ಯಕ್ರಮವು ಪ್ರದರ್ಶಿಸಿತು.

1881 ರ ವಸಂತ ಕಾಲದಲ್ಲಿ ಉನ್ನತ ನ್ಯಾಯಾಲಯ —
Court of Appeal ಇದರ ಮುಂದೆ ಬ್ರಾಡ್ಲೆಯು ಶಾಸನ ಸಭೆಯಲ್ಲಿ
ಪ್ರಮಾಣವಚನವನ್ನು ಸ್ವೀಕರಿಸುವ ಬಗ್ಗೆ ಇದ್ದ ತಕರಾರು ಅವ
ನಿಗೆ ವಿರೋಧವಾಗಿ ತೀರ್ಮಾನವಾಗಲು ಅವನ ಸಭಾಸದಸ್ಯತ್ವವು
ರದ್ದಾಗಿ ಅವನ ಚುನಾವಣಾ ಕ್ಷೇತ್ರವು ಖಾಲಿಯಾಯಿತು. ಆದರೆ ಅವ
ನಿಗೆ ವಿರೋಧವಾಗಿ ಉಗ್ರ ಟೀಕೆ ಅಪವಾದಗಳನ್ನು ಹರಿಸುತ್ತಿ
ದ್ದರೂ ನಾರ್ಥಾಂಪ್ಟನ್ ಕ್ಷೇತ್ರವು ಅವನನ್ನು ಕೂಡಲೇ ಪುನಃ
ಸದಸ್ಯನನ್ನಾಗಿ ಆರಿಸಿತು. ತುಂಬಾ ಕಷ್ಟಪ್ರಕೃತಿಯಿಂದ ಕೂಡಿ ಕಾ
ದಾಡಿ ಗೆದ್ದ ಚುನಾವಣೆಯು ಅದಾಗಿತ್ತೆಂದು ಅವನು ನ್ಯಾಯವಾಗಿ
ಯೇ ಹೇಳಿದನು, ಅವನು ಶಾಸನ ಸಭೆಯಲ್ಲಿ ಮಾಡಿದ ಕೆಲಸ
ಗಳು ಜನಕ್ಕೆ ಅವನ ಬಗ್ಗೆ ತುಂಬಾ ಆದರವನ್ನುಂಟುಮಾಡುತ್ತಲಿ
ದೆ ಅವನು ಅಲ್ಲಿ ಸಂದು ಶಕ್ತಿಯಾಗಿ ಇದ್ದುದರಿಂದ ಎಲ್ಲರಿಗೂ ಮನ
ವರಿಕೆಯಾಗಿತ್ತು. ಹೀಗಾಗಿ ಟೋರಿ ಪಕ್ಷಕ್ಕೆ ಅವನ ಪ್ರಭಾವ
ವನ್ನು ಕಂಡು ಉಂಟಾದ ಕಳವಳವು ಅವನಲ್ಲಿ ಮತ್ತಷ್ಟಾಂ
ತೆಯ ದ್ವೇಷವನ್ನು ಹೆಚ್ಚಿಸುತ್ತಲಿದೆ ಅವನನ್ನು ಶಾಸನ ಸ
ಭಾ ಸದಸ್ಯತೆಯಿಂದ ತೆಗೆದುಹಾಕಬೇಕೆಂಬ ಅವರ ಪ್ರಯ
ತ್ನವೂ ಹೆಚ್ಚಾಯಿತು,

ಚಾರ್ಲ್ಸ್ ಬ್ರಾಡ್ಲೆಯನು, ಹೊಸ ಸದಸ್ಯನೆಂಬು
ದಾಗಿ ಸಭಿಕರಿಗೆ ಪರಿಚಯ ಮಾಡಿಸಿದ ನಂತರ ಅವನು ಶ್ರೀ ಲ
ಬೌಚೆರ್ ಮತ್ತು ಶ್ರೀ ಬರ್ಟ್ ಇವರ ಸಮೀಪದಲ್ಲಿ ಕೂರು
ವಂತೆ ಸ್ಥಳವನ್ನು ಮಂಜೂರಿಸಲಾಗಿತ್ತು. ಅಷ್ಟರಲ್ಲಿ ಸರ್ ಸ್ಟ್ಯಾ
ಫರ್ಡ್ ನಾರ್ತ್‌ಕೋಟ್ ಇವನು ಮಧ್ಯೆ ಬಾಯಿಹಾಕಿದನು,
ವಿಚಾರಕ್ಕೆ ಪುನಃ ಗುರಿಯಾದ ಬ್ರಾಡ್ಲೆಯ ಭಾಷಣದ ನಿ
ಮಿತ್ತವಾಗಿ ದೀರ್ಘ ಚರ್ಚೆಯ ನಂತರ ಮೂವತ್ತೈದು ಸದ
ಸ್ಯರ ಬಹುಮತದಿಂದ ಅವನನ್ನು ಪ್ರಮಾಣ ವಚನವನ್ನು
ಸ್ವೀಕರಿಸಲು ಬಿಡಬಾರದೆಂದು ಸಭೆಯು ತೀರ್ಮಾನಿಸಿತು.

ಪರಿಣಾಮವಾಗಿ ಬ್ರ್ಯಾಡ್ಲೆಯು ಶಾಸನ ಸಭೆಯಿಂದ ಹೊರಟುಹೋಗಲು ಒಪ್ಪಲಿಲ್ಲ. House of Commons ಅವನ ಮೇಲೆ ಬಲಾತ್ಕಾರದಿಂದ ಪ್ರಮಾಣವನ್ನು ತೆಗೆಯಲು ಹಿಂಜರಿಯಿತು. ಇಷ್ಟರಲ್ಲಿ ಇಡೀ ಸಭೆ ಅತಿ ಕೋಲಾಹಲಕ್ಕೊಳಗಾದಾಗ ಸಭಾಧ್ಯಕ್ಷನು ಸಭೆಯನ್ನು ಆ ದಿನಕ್ಕೆ ಕೊನೆಗೊಳಿಸಿದನು. ಪ್ರತಿಜ್ಞಾವಚನಕ್ಕೆ ಸಂಬಂಧಿಸಿದ ಮಸೂದೆಯನ್ನು ಸಭೆಯ ಮುಂದಿಡಲಾಗುವುದೆಂದು ಸರಕಾರವು ಮಾತುಕೊಟ್ಟಿತು. ಬ್ರ್ಯಾಡ್ಲೆಯು ತನ್ನ ಮತದಾರರ ಆಶ್ರಯವನ್ನು ಹಿಡಿದು ಆ ಮಸೂದೆಯ ತೀರ್ಮಾನವು ಹೇಗಾಗುವುದೋ ಎಂದು ಕಾಯುತ್ತೇನೆಂಬುದಾಗಿ ಹೇಳಿದನು. ಇಷ್ಟರಲ್ಲಿ ರಾಜಕೀಯ ಹಕ್ಕು ಬಾಧ್ಯತೆಗಳ ರಕ್ಷಣೆಗೆ ಒಂದು ಸಂಸ್ಥೆಯನ್ನು ಸ್ಥಾಪಿಸಲಾಗಿ ಅದರ ಮೂಲಕ ಚಳವಳವು ದೇಶದಲ್ಲಿ ಹಬ್ಬಿತು. ಬ್ರ್ಯಾಡ್ಲೆಯು ಮಾತಾಡಲಿಕ್ಕೆ ಹೋದಲ್ಲೆಲ್ಲ ಜನಸಮೂಹವು ಅವನಿಗೆ ಕಾಯುತ್ತಿತ್ತು. ಅವನಾದರೋ ದೇಶದ ಉದ್ದಗಲಕ್ಕೂ ಓಡಾಡಿದನು. ನ್ಯಾಯಕ್ಕಾಗಿ ಅವನು ಇತ್ತ ಮನವಿಯನ್ನು ಒಬ್ಬನನ್ನು ವಿನಾಯಿಸದೆ, ಜನರೆಲ್ಲಾ ಒಪ್ಪಿದರು. ಟೋರಿ ಪಕ್ಷವು ತೆರೆದಿಟ್ಟ ಕಾರಣದಿಂದ ಜುಲೈ—ನೇ ದಿನ ಶ್ರೀ ಗ್ಲಾಡ್‌ಸ್ಟನ್ ಇವನು ಸರಕಾರವು ಪ್ರತಿಜ್ಞಾಶಾಸನ ಮಸೂದೆಯನ್ನು ರದ್ದುಗೊಳಿಸುವುದೆಂದು ಬ್ರ್ಯಾಡ್ಲೆಗೆ ಸೂಚಿಸಿದನು. ಪರಿಣಾಮವಾಗಿ ಬ್ರ್ಯಾಡ್ಲೆಯು ಪುನಃ ಶಾಸನ ಸಭೆಯಲ್ಲಿ ಹೆಚ್ಚಿನ ಸಮಯವು ವಿನಿಯೋಗವಾಗಬಹುದೆಂದು ಆಲೋಚಿಸಿ ಅವನು ಐರಿಷ್ ಭೂ-ಮಸೂದೆ (Irish Land Bill) ಇದು ಬೇಗನೆ ನಿರ್ಣಯವಾಗಿ ಹೋಗಲಿಯೆಂದು ತಾನು ಆಗಸ್ಟ್ ೩ನೇ ದಿನದಂದು ಹಾಜರಿರುವೆನೆಂದು ನಿರ್ಧರಿಸಿದನು. ಆಗ ಶಾಸನ ಸಭೆಯು ಪೋಲೀಸ್ ರಕ್ಷಣೆಯೊಳಗಡೆಯಿತ್ತು. ನ್ಯಾಯಾಲಯದ ಸುತ್ತಲೂ ಆಪತ್ತಿಗಾಗಿ ಕಾದಿರುವ ಪೋಲೀಸ್ ದಳ (Reserve Police) ಇದು ಸುತ್ತುವರಿದಿತ್ತು. ಹೀಗೆ ಆ ವಠಾರವೆಲ್ಲವು ಭಾರಿ ಬಂದೋಬಸ್ತಿಗೊಳಗಾಗಿತ್ತು. ಆಗಸ್ಟ್ ತಿಂಗಳ ೩ನೇ ದಿನ ಟ್ರಫಾಲ್ಗರ್ ಚೌಕದಲ್ಲಿ ಸಾರ್ವಸಭೆಯು ಸೇರಿದ್ದು ಅದಕ್ಕೆ ಏಡಿನ್‌ಬರೋವನ್ನು ಸೇರಿ ಇಂಗ್ಲೆಂಡಿನ ಎಲ್ಲ ಭಾಗಗಳಿಂದಲೂ ಪ್ರತಿನಿಧಿಗಳು ಸೇರಿದ್ದರು. ಆಗಸ್ಟ್ ೩ನೇ ದಿನ ಬ್ರ್ಯಾಡ್ಲೆಯು ಶಾಸನ ಸಭೆಗೆ ಹೋದನು. ಅಲ್ಲಿಗೆ ಹೋಗುವ ಮುನ್ನ ಅವನು ನನ್ನೊಡನೆ ಹೇಳಿದ ಕಡೆ ಮಾತು ಹೀಗಿತ್ತು. "ನನ್ನನ್ನಾರಿಸಿದ ಜನರಿಗೆ ಇತರರನ್ನು ತಿಳಿದಿರುವುದಕ್ಕಿಂತ ಹೆಚ್ಚಾಗಿ ನಿನ್ನನ್ನು ತಿಳಿದಿದೆ. ಏನೇ ಆಗಲಿ, ಆಲೋಚಿಸಿ ಏನೇ ನಡೆಯಲಿ; ಅವರು ಹಿಂಸಾಚಾರಕ್ಕೆ ಎಡೆಗೊಡದಿರಲಿ;

ಅವರನ್ನು ಸಮಾಧಾನದಿಂದಿರಿಸಲು ನಾನು ನಿಮ್ಮನ್ನು ನಂಬಿದ್ದೇನೆ." ಹೀಗೆ ಹೇಳಿ ಬ್ರ್ಯಾಡ್ಲೆಯು ಡಾ. ಆಪ್ಲಿಂಗ್ ಇವನೊಡನೆ ಮುಂದಕ್ಕೆ ನಡೆದು ಅನಂತರ ಡಿಬಾಂಗ್ಲಾಕ್ಕೆ ಅವನೊಬ್ಬನೇ ಪ್ರವೇಶಿಸಿದನು. ಅವನ ಸವಾರಿಯವರು ಮತ್ತು ನಾನು ಬೆಟ್ಟಕ್ಕೆ ಹೋದೆವು. ನಮ್ಮನ್ನು ಅನುಸರಿಸಿ ಇತರ ನೂರಾರು ಜನರು ರಿಡ್ಜುಗಳನ್ನು ಹಿಡಿದುಕೊಂಡು ಹತ್ತುತ್ತ ಜನರ ಗುಂಪು ಒಂದೊಂದು ರಿಡ್ಜ್‌ಯನ್ನು ಎತ್ತಿಕೊಂಡು ಹೋಗುತ್ತಿರಲು ಹತ್ತುತ್ತ ಜನರಂತೆ ಬೇಗನೆ ತಲೆ ತಿಕ್ಕ ಮಾಡಿ ಒಬ್ಬನು ಮಾತ್ರ ಸಾಗಬಹುದಾಗಿದ್ದ ಇಕ್ಕಟ್ಟಾದ ದ್ವಾರದ ಮೂಲಕ ಅವರನ್ನು ಮೆಸ್ಸೆಮಿನಿಸ್ಟರ್ ಡಿಬಾಂಗ್ಲಾದೊಳಗೆ ಬಿಟ್ಟಾಗ ನಾವು ಒಳಗಡೆಗೆ ಹೋಗುವ ಮೆಟ್ಟಿಲಲ್ಲಿ ಕಾಯುತ್ತ ನಿಂತೆವು.

ಒಬ್ಬ ಪೋಲೀಸ್ ಅಧಿಕಾರಿಯು ನಮ್ಮನ್ನು ಹೊರಹೋಗೆಂದು ಹೇಳಲು ನಾನು ವಿನಯದಿಂದ ನಮ್ಮ ಹೆಸ್ರು ಎಲ್ಲೋ ಆ ಮಿತಿಯೊಳಗೆ ಅಡಗಿದ್ದೇವೆಯೆಂದು ಹೇಳಿದೆನು, ಅಷ್ಟರಲ್ಲಿ "ನಾಲ್ಕು ಜನ ಇತ್ತಲಾಗಿ ಬನ್ನಿ" ಎಂದು ಅವನು ಬಹು ಉದ್ರೇಕದಿಂದ ಆಜ್ಞಾಪಿಸಲು ನಾಲ್ವರು ಪೋಲೀಸರು ಶೀಘ್ರದಿಂದ ಬಂದು ನಮ್ಮನ್ನು ನೂಕಿದರು, ನಾವು ಅವರತ್ತ ನೋಡಿದೆವು, "ನೀವು ಬಲಾತ್ಕಾರದಿಂದ ವರ್ತಿಸುವ ಮುಂಚೆ ಇನ್ಸ್‌ಪೆಕ್ಟರ್ ಡೆನ್ನಿಂಗ್‌ನೊಡನೆ ವಿಚಾರಿಸುವುದು ಒಳಿತು" ಎಂಬುದಾಗಿ ನಾನು ವಿನಯದಿಂದ ಹೇಳಿದೆನು, ಅವರೂ ಅಂತೆಯೆ ಆಲೋಚಿಸಿರುವರೆಂದು ಹೇಳಿದರು, ಅಷ್ಟರಲ್ಲಿ ಇನ್ಸ್‌ಪೆಕ್ಟರನು ಬಂದು ನಾವು ಎಲ್ಲಿ ನಿಲ್ಲಬೇಕೋ ಆ ಮಿತಿಯೊಳಗಿನೇ ನಿಂತಿರುವಂತೆ ಮತ್ತು ಗಲಭೆಯೇನೂ ಮಾಡದಂತೆ ಸಮಾಧಾನದಿಂದಿರುವಂತೆ ಹೇಳಿ ಅವನು ತನ್ನ ಜನರೊಡನೆ ಕಾಡಿ ಶೀಘ್ರದಿಂದಲೆ ನಡೆದನು, ಇನ್ಸ್‌ಪೆಕ್ಟರ್ ಡೆನ್ನಿಂಗ್ ಇವನು ತುಂಬಾ ಚತುರನೂ ವಿವೇಚನಾ ಗುಣದಿಂದ ಕೂಡಿದ್ದವನೂ ಆಗಿದ್ದನು, ಆ ದಿನ ಸಾದಾ ದಿರಿಸಿನ ಪೋಲೀಸರ ವರ್ತನೆಯೂ ತುಂಬಾ ತೃಪ್ತಿಕರವಾಗಿತ್ತು. ಬ್ರ್ಯಾಡ್ಲೆಯು ಮೇಲೆ ಕೈಯೆತ್ತಲಾಗದಂತೆ ಬಾಗಿಲೂ ಪೋಲೀಸರು ಒಂದು ಮಿತಿಯನ್ನನುಸರಿಸಿ ನಡೆದರು, ಡಾ. ಆಪ್ಲಿಂಗ್ ಇವನು ಅಂದು ಹೇಳಿದ ಪ್ರಕಾರ ಸಮಾನರೀತಿಯಲ್ಲಿ ವರ್ತಿಸಿದವನು ಹವಾಲ್ದಾರರ ಉಪನಾಯಕ ಎರ್ಸ್ಕಿನ್ ಮತ್ತು ಅವನ ಅನುಚರರೂ ಆಗಿದ್ದರು. ಪೋಲೀಸರು ಅವರಿಸುತ್ತಿದ್ದ ಕೆಲಸವನ್ನು ಮೆಚ್ಚುತ್ತಿರಲಿಲ್ಲ. ಧೈರ್ಯಶಾಲಿಗಳಾದ ಅವರಿಗೆ ಧೈರ್ಯಶಾಲಿಯೊಬ್ಬನಲ್ಲಿ ಮಾತ್ರ ದಯೆ ಇತ್ತು. ಅವರ ಆಜ್ಞೆಯನ್ನು ಅವರು ಪಾಲಿಸಿದರು; ಅದರನಂತರ ಅವರು ದಿಯಾಳುಗಳಿಂದ ನಿಶಪ್ಪಟ್ಟರು. ಹೀಗೂ ಆ ರಿಡ್ಜುಗಳನ್ನು ಹಿಡಿದುಕೊಂಡಿರುತ್ತಿದ್ದ ಜನರು

ಗುಂಪು ದೊಡ್ಡದಾಗುತ್ತಾ ಬಂತು, ಗಟ್ಟಿಮುಟ್ಟಾಗಿಯೂ ಸ್ವತಂತ್ರ ಮನೋಭಾವದಿಂದಲೂ ಕೂಡಿದ್ದ ಉತ್ತರ ಭಾಗದ ಆ ಜನರು "ಚಾರ್ಲಿ" (ಚಾರ್ಲ್ಸ್ ಬ್ರ್ಯಾಡ್ಲೋ) ಯನ್ನು ಪ್ರೀತಿಸಿದ್ದರಿಂದ ಮತ್ತು ಸಭಾಭವನದೊಳಗಿಂದ ಯಾವುದೂ ವಾರ್ತೆಯು ಬಾರದ ಕಾರಣದಿಂದ ಅವರು ಕೋಪದಿಂದ ಗೊಣಗುಟ್ಟುವುದು ಕೇಳಿ ಬರುತ್ತಿತ್ತು. ಅವರಿಗೆ ಒಳಗೆ ಹೋಗಲು ಹಕ್ಕು ಇದೆಯೆಂದು ಅವರು ಭಾವಿಸಿದರು; ಕಡೆಗೆ ಉದ್ರೇಕಗೊಂಡ ಜನಸಂದಣಿಯು ಪಕ್ಕನೆ ಒಕ್ಕೊರಲಿನಿಂದ ಗುಲ್ಲೆಬ್ಬಿಸಿದರು; ಒಂದು ಘರ್ಜನೆಯು ಕೇಳಿ ಬಂತು. "ಅರ್ಜಿ, ಅರ್ಜಿ; ನ್ಯಾಯ, ನ್ಯಾಯ," ಎಂದು ಅಬ್ಬರಿಸುತ್ತಾ ಅವರು ಮೆಟ್ಟಿಲನ್ನೇರಿ ಬಾಗಿಲಿನ ಹತ್ತಿರ ನಿಂತಿದ್ದ ಪೋಲೀಸರ ಕಡೆಗೆ ಧಾವಿಸಿದರು. "ನಾನು ನಿಮ್ಮನ್ನು ನಂಬುತ್ತೇನೆ. ಜನರನ್ನು ಸಮಾಧಾನದಲ್ಲಿರಿಸು," ಎಂಬುದಾಗಿ ನನ್ನ ನಾಯಕನು ನನಗೆ ಹೇಳಿದ ಮಾತುಗಳೇ ನನ್ನ ಮನಸ್ಸಿಗೆ ಪಕ್ಕನೆ ಹೊಳೆದುವು, ಪೋಲೀಸರು ಜನರಿಗೆದುರಾಗಿ ಬಂದಾಗ ನಾನು ಬಹು ಅನುಕೂಲವಾದ ಸ್ಥಳವೊಂದನ್ನು ಆರಿಸಿಕೊಂಡು ಮೇಲ್ತುದಿಯಲ್ಲಿ ಅವರ ಮಧ್ಯೆ ನಿಂತೆನು, ಆದುದರಿಂದ ಆ ಜನಸಮೂಹದಲ್ಲಿ ಪ್ರತಿಯೊಬ್ಬನೂ ನನ್ನನ್ನು ನೋಡಿದನು. ಅಷ್ಟೇ ಅಲ್ಲ, ಅವನಿಗಾಗಿ (ಬ್ರ್ಯಾಡ್ಲೋಗಾಗಿ) ಅವರು ಸಮಾಧಾನದಿಂದಿರಬೇಕೆಂದು ಅವನು ನನಗೆ ವಿಧಿಸಿದ್ದ ನೀತಿಯನ್ನು ಅಹಿಂಸಾತ್ಮಕವಾಗಿ ಪಾಲಿಸಬೇಕೆಂದು ಹೇಳಲು ಜನರೆಲ್ಲ ಆಸ್ಥೆಯಿಂದ ಕೇಳಲಿಕ್ಕಾಗಿ ತಮ್ಮ ತಮ್ಮ ಸ್ಥಳದಲ್ಲಿ ತಟಸ್ಥರಾಗಿ ನಿಂತರು, ನಾನು ಯಾವಾಗ ಪೋಲೀಸರಿಗೆದುರಾಗಿ ಮುಂದಕ್ಕೆ ಹಾರಿದೆನೋ ಅವರು ನಕ್ಕರೆಂದು ನಾನು ಆ ಮೇಲೆ ತಿಳಿದೆನು. ಜನರನ್ನು ಬೆದರಿಸುತ್ತಾ ಬರುತ್ತಿರುವವರಿಗೆದುರಾಗಿ ನಾನು ಹೋದುದಕ್ಕೆ ನನ್ನನ್ನು ಅವರು ಬುದ್ಧಿಗೇಡಿಯೆಂದು ಭಾವಿಸಿದ್ದರು. ಆದರೂ ನನ್ನನ್ನು ಅವನ (ಚಾರ್ಲ್ಸ್ ಬ್ರ್ಯಾಡ್ಲೋ) ಮಿತ್ರಳು ಎಂದೂ ಕಡಿಮೆ ಕಾಲಾಂತರದಿಂದು ತಿಳಿದಿದ್ದರು. ಜನರ ಗುಂಪು ಮುಂದುವರಿದು ಹೋಗುತ್ತಿದ್ದುದನ್ನು ಯಾವಾಗ ನಿಲ್ಲಿಸಲೋ ಆಗ ನಗುವುದೂ ನಿಂತಿತಲ್ಲದೆ ಅವರಲ್ಲಿ ಹಿಂದಕ್ಕೆ ಸರಿದು ನನ್ನನ್ನು ನನ್ನ ಹಾದಿಯನ್ನು ಹಿಡಿಯುವಂತಾಗಿಸಿದರು,

ಉರಿಮೋರೆಯಿಂದ ಕೂಡಿ ಕೋಪಾವಿಷ್ಟರಾಗಿದ್ದರೂ ಜನರು ಬಹು ಪ್ರಯತ್ನಪಟ್ಟು ಅವನಿಗಾಗಿ (ಬ್ರ್ಯಾಡ್ಲೋಗಾಗಿ) ಮೌನದಿಂದ ಹಿಂದಕ್ಕೆ ಸರಿದರು, ಆಹಾ, ಒಳಗೆ ಏನು ನಡೆಯುತ್ತಿತ್ತೆಂಬುದನ್ನು ನಾನು ತಿಳಿದಿದ್ದರೆ ಅವನು ನನ್ನಲ್ಲಿಟ್ಟ ವಿಶ್ವಾಸಕ್ಕೆ ಘಾತುಕವನ್ನುಂಟುಮಾಡದೆ ಇರುತ್ತಿದ್ದೆನು, ಇಂಗ್ಲೆಂಡಿನ ಉತ್ತರದ ಜನರು ನನ್ನೆದುರಿಗೆ, "ನೀನು ನಮ್ಮನ್ನು ಒಳಹೋಗಲು ಬಿಟ್ಟಿದ್ದರೆ ನಾವು ಅವನನ್ನು (ಬ್ರ್ಯಾಡ್ಲೋಯನ್ನು) ಸಭಾಧ್ಯಕ್ಷನ ಸ್ಥಾನದವರೆಗೂ ಹೊತ್ತು ಅಲ್ಲಿ ಇರಿಸುತ್ತಿದ್ದೆವೆಂದು" ಆ ಮೇಲೆ ಹೇಳಿದರು, ಹೀಗೂ ನಾವು

ಅಲ್ಲಿ ಇದ್ದಾಗ ಒಳಗಡೆ ಏನೋ ನಡೆದ ಶಬ್ದವು ಕೇಳಿಸಿತು, ನಾವು ಅಲ್ಲಿ ಹತ್ತಿ ಇದ್ದಂತೆಯೇ ಗಾಜು ಮತ್ತು ಮರದ ಚೂರುಗಳು ತಟಪಟನೆ ಹಾರುತ್ತಿದ್ದುದರ ಶಬ್ದವನ್ನು ಕೇಳಿದೆವು. ಅಷ್ಟರಲ್ಲಿ ಒಬ್ಬ ದೂತನು ಬಂದು ಅವನು Palace Yard ಇಲ್ಲಿ ಇದ್ದಾನೆಂದು ನಮ್ಮೊಡನೆ ಹೇಳಿದನು. ನಾವು ಆ ಕಡೆಗೆ ಹೋದಾಗ ಬ್ರ್ಯಾಡ್ಲೀಯು ಅಲ್ಲಿ ನಿಂತಿದ್ದುದನ್ನು ನೋಡಿದೆವು. ಅವನಾದರೋ ಮೌನದಿಂದ ಬೆಂಗಲ್ಲು ರೂಪದಂತೆ ಹರಿದು ಹೋದ ಅಂಗಿಯಿಂದ ಅತ್ತಿತ್ತ ಕದಲದೆ ಕತ್ತಿಯ ಕಲ್ಲಿನಂತೆ ಸ್ತಬ್ಧತೆಯಿಂದ ನಿಂತು ಶಾಸನ ಸಭಾಂಗಣದ ಬಾಗಿಲಿನತ್ತ ತಿರುಗಿ ನಿಂತಿದ್ದನು. ಈಗ ನಮಗೆ ಆ ನಾಟಕೀಯ ಘಟನೆಯೆಲ್ಲವೂ ತಿಳಿಯಿತು. ಒಬ್ಬ ವ್ಯಕ್ತಿಯು ತನ್ನ ಹಕ್ಕಿಗಾಗಿ ಹಾತೊರೆಯುತ್ತಾ, ಯಾವ ಹಿಂಸೆಗೂ ಅವಕಾಶವೀಯದೆ ಒಬ್ಬನೇ ಹದಿನಾಲ್ಕು ಜನರಿಗೆದುರಾಗಿ ಮೌನದಿಂದ ಹೇಗೆ ನಿಂತಿದ್ದನೆಂಬುದಾಗಿ ಕೇಂದ್ರವಾರ್ತಾ ವರದಿಯು ಹೇಳಿತು, ಪೋಲೀಸರು ಮತ್ತು ಇತರ ಕಾವಲುಗಾರರು ಅವನತ್ತ ಹಾರಿ ಅವನನ್ನು ಅತ್ತಿತ್ತ ತಳ್ಳಿದಾಗಲೂ, ಇರಲು ಆ ಉಗ್ರವಾದ ತಾಕಲಾಟಕ್ಕೆ ಒಳ ಹಾದಿಯ ಬಾಗಿಲಿನ ಮರ ಕನ್ನಡಿಗಳನ್ನು ಚೂರುಚೂರಾಗಿ ಸಿಡಿಸಿದರೂ ಅವನು ಒಂದೇ ಒಂದು ಏಟನ್ನು ಕೊಡದೆ ಬರೀ ತನ್ನ ಆಕಾರದೇಹಬಲವನ್ನು ತನ್ನ ರಕ್ಷಣೆಗೆ ಮಾತ್ರ ಉಪಯೋಗಿಸಿಕೊಂಡನು, "ನಾನು ಕಂಡುದರಲ್ಲಿ ಹೀಗೆ ಒಬ್ಬನೇ ಒಬ್ಬ ವ್ಯಕ್ತಿಯು ಹತ್ತು ಜನರೊಡನೆ ನಿಂತು ಅವರಿಂದ ರಕ್ಷಿಸಿಕೊಳ್ಳುತ್ತ ಕಾದುತ್ತಿರುವುದನ್ನು ನಾನು ಎಂದೂ ನೋಡಿದ್ದಿಲ್ಲ," ಎಂಬುದಾಗಿ ಅವನನ್ನು (ಬ್ರ್ಯಾಡ್ಲೀಯನ್ನು) "ಪೋಲೀಸ್ ಯಾರ್ಡ್"ಗೆ ತಳ್ಳಿ ಹಾಕುವ ವರೆಗೆ ತಾನು ವಿಧಿಯಿಲ್ಲದೆ ತನ್ನ ಸೇವಕರಿಗೆ ಆಜ್ಞಾಪಿಸಿ ಆ ರೀತಿ ಅಹಿತ ವರ್ತನೆಗೆ ಕಾರಣವಾದುದನ್ನು ತಾನೇ ತುಚ್ಛವಾಗೆಣಿಸಿ ಕೋಪದಿಂದ ಒಬ್ಬ ಪೋಲೀಸ್ ಅಧಿಕಾರಿಯು ಹೇಗಂದನು, ಈ ದೃಶ್ಯವನ್ನು ಕಣ್ಣಾರೆ ಕಂಡ ಒಬ್ಬನ ಪತ್ರಿಕಾ ವರದಿಯು ಹೀಗಿತ್ತು:—

"ಬ್ರ್ಯಾಡ್ಲೀಯು ಬಲವಾದ ವಿಶಾಲವಾದ ಭಾರವಾದ ಮತ್ತು ಗಟ್ಟಿಮುಟ್ಟಾದ ದೇಹದ ಎಲ್ಲಾ ನರನಾಡಿಗಳೂ ಬಲಾತ್ಕಾರದ ಹಿಡಿತವನ್ನು ತಡೆಬಡಿಯಲು ಸಿದ್ಧಗೊಂಡು ಅಲುಗಾಡಿಸಲಿಕ್ಕೆ ತುಂಬಾ ಕಷ್ಟವಿತ್ತು. ಅದೇ ಕ್ಷಣ ಜನರ ಮಧ್ಯೆ ಬಗ್ಗುತ್ತ ಹೋಗುತ್ತ ಅವನು ಆಶ್ಚರ್ಯಕಾರಕವಾದ ದೃಢಸಂಕಲ್ಪದಿಂದ ಅವರನ್ನು ಬಿಗಿಹಿಡಿದಿದ್ದು ಕಡೆಗೆ ನಿರುಪಾಯನಾಗಿ ಪ್ರಬಲ ಶಕ್ತಿಯನ್ನೆದುರಿಸಲಾರದೆ ಶರಣಾಗಬೇಕಾಯಿತು. ಆ ದೃಶ್ಯದ ಸ್ವಲ್ಪ ಭಾಗವನ್ನು ಹೊರ ನಿಂತು ನೋಡುತ್ತಿರುವವರಿಗೆ ನಮಗೆ ಅದು ಅಸಹ್ಯವಾಗಿ ತೋರಿತು. ಅಷ್ಟು ಧೀಮಂತನೂ ಬಲಶಾಲಿಯೂ ಆದ ಅವನ ಉಸಿರುಗಟ್ಟಿತು, ಕಾದಾಟದ ಕಾವಿನಿಂದ ಉಕ್ಕೇರಿದ್ದರೂ ಅವನ ಮುಖವು

ಕಣ್ಣಿಗೆಂದಿ ನಿಷ್ಪ್ರಿಯವಾಗಿತ್ತು. ಅವನ ಅಂಗಾಂಗಗಳೂ ಬಲಹೀನವಾಗಿದ್ದುವು. ಇವನನ್ನು ಮುರಿಯಬಹುದಾದರೂ ಬಗ್ಗಿಸಲಾಗುವುದಿಲ್ಲ," ಎಂಬ ಟ್ರಾಫಾಲ್ಗರ್ ಚೌಕದ ಹೇಳಿಕೆಯು ಇದೀಗ ಅವನ ಆ ಪರಿಸ್ಥಿತಿಯನ್ನು ನೋಡಿದವರ ಮನಸ್ಸಿನಲ್ಲಿ ಸಂಶಯಾತ್ಮಕವಾದ ಸ್ತುತಿಯನ್ನು ಹುಟ್ಟಿಸುತ್ತು.

ಬ್ರ್ಯಾಡ್ಲಿಯನ್ನು ಪೋಲೀಸರು ಹೊರಗೆ ತಳ್ಳಿದರು. ಅವರ ಭರದಲ್ಲಿ ಅತ್ತಿತ್ತ ನಿರ್ಲಕ್ಷ್ಯವಾಗಿ ಮಾತುಗಳನ್ನು ಹಾರಿಸಲಾಯಿತು. "ನಾನು ಭಾರತದ ಬಗ್ಗೆ ಗಡುಸಾಗಿ ವರ್ತಿಸಿದೆನು; ನಾನು ತುಂಬಾ ಸಿಟ್ಟಾಗಿದ್ದೆನು, ನಾನು ಈ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳಲು ಹೆಚ್ಚಿನ ಶಕ್ತಿಯಿಂದ ಕೂಡಿ ಇದ್ದೇನೆ: ಬರುತ್ತೇನೆ," ಎಂದು ಇನ್ಸ್‌ಪೆಕ್ಟರ್ ಡೆನ್ನಿಂಗ್ ಇವನಿಗೆ ಹೇಳಿದೆನು, "ಯಾವಾಗ?" ಎಂದು ಅವನು ಕೇಳಿದನು, "ನಾನು ಕೈಯೆತ್ತಿದ್ದಾದರೆ ಕೆಲವೇ ನಿಮಿಷಗಳಲ್ಲಿ," ಎಂಬುದಾಗಿ ಹೇಳಿದೆನು,

ಅವನು (ಬ್ರ್ಯಾಡ್ಲಿಯು) 'ಪೋಲೀಸ್ ಯಾರ್ಡ್'ನಲ್ಲಿ ನಿಂತಿದ್ದನು. ಅಲ್ಲಿಯೇ ಹೆಚ್ಚಾಗಿ ಅನಾಥ ಇಂಗ್ಲೆಂಡಿನ ಎಲ್ಲಾ ಭಾಗಗಳಿಂದ ಅವನಲ್ಲಿ ಪ್ರೀತಿಯುಳ್ಳ ಮತ್ತು ತಮ್ಮ ಮತದಾರ ಕ್ಷೇತ್ರದಲ್ಲಿ ತಾವು ಆರಿಸಿದ ಪ್ರತಿನಿಧಿಯಾಗಿ ಅವರ ಹಕ್ಕನ್ನು ಶಾಸನ ಸಭೆಯಲ್ಲಿ ಎತ್ತಿಹಿಡಿದ ಅವನ ಪರವಾಗಿ ತಮ್ಮ ದನಿಯನ್ನೆತ್ತಲು ಬಂದ ಆ ಜನಸಂದಣಿಯೂ ಅಲ್ಲಿ ಇತ್ತು. ಆಹಾ, ಆ ಅವಮಾನಕರವಾದ ಮತ್ತು ಪೋಲೀಸರ ಕೈಗೆ ಗುರಿಯಾದ ಆ ಕ್ಷಣದಲ್ಲಿ ಅಲ್ಲದೆ ಅವನು ಎಂದೂ ಅಂಥಾ ಮಹತ್ವವನ್ನು ಪಡೆದುದೇ ಇಲ್ಲ, ತನ್ನ ಮಾನವತ್ವಕ್ಕೆ ಭಂಗವಾಗಿ, ಶಾರೀರಿಕ ನೋವಿಗೆ ಈಡಾಗಿ, ದೇಹದ ಸ್ನಾಯುಗಳು ಹಲವು ಮುಷ್ಟಿಗಳ ಕ್ರೂರ ಹೊಡೆತಕ್ಕೆ ತುತ್ತಾಗಿ ಹಲವು ವಾರಗಳ ಕಾಲ ತೋಳುಗಳಿಗೆ ಪಟ್ಟಿಯನ್ನು ಕಟ್ಟಿ ಆ ರೀತಿ ಹೊರಗಿದ್ದರೂ ಅವನು ತನ್ನ ಕೋಪಾವೇಶವನ್ನು ತಡೆದು ಹೆಮ್ಮೆಯ ಆತ್ಮಸಂಯಮದಿಂದ ವರ್ತಿಸಿದಾಗ ಅದಕ್ಕಿಂತ ಶ್ರೇಷ್ಠ ವ್ಯಕ್ತಿಯೆನಿಸಿ ಅವನು ಎಂದೂ ಇರಲಿಲ್ಲ, ತನ್ನಲ್ಲಿದ್ದ ಹೋರಾಟದ ಕಾತರತೆಯು ಧ್ವಂಸವಾಗಿ ಬಂದಿನ ಆಗಿದ್ದರೂ ಮತ್ತು ಪೆಟ್ಟಿನ ನೋವಿನಿಂದ ಆವೇಶಗೊಂಡು ನಡುಗುತ್ತಿದ್ದರೂ ಅವನ ಕಂಠಸ್ವರವು ಕೇಳುವವರಿಗೆ ದೂರದಲ್ಲಿಯೇ/ ಅವನ ಸಹಾಯಕ್ಕೆಂದು ಧಾವಿಸಲು ಸಿದ್ಧರಾಗಿದ್ದ ಸಹಸ್ರಾರು ಜನಕ್ಕೆ ಯಾವ ರೀತಿಯಲ್ಲೂ ಗಲಭೆ ಮಾಡದೆ ಮೌನವಾಗಿ ಅಲ್ಲಿಂದ ಎಲ್ಲರೂ ಚದುರಿ ಆ ದಿನ ಸಾಯಂಕಾಲ ಅವನನ್ನು ಕಾಣುವಂತೆ ಹೇಳಿ ಕಳುಹಿಸಿದನು. ಮಾನಸಿಕವಾಗಿ ಅವನು ಎಷ್ಟು ನರಳಿರಬಹುದೆಂಬುದನ್ನು ನನ್ನಿಂದ ಹೇಳಲಿಕ್ಕೆ ಸಾಧ್ಯವಿಲ್ಲ. ಅದು ಅವನ ಹೃದಯವನ್ನು ಎಷ್ಟರ ಮಟ್ಟಿಗೆ ಬಾಧಿಸಿತೆಂದು ಹೇಳಲಿಕ್ಕೆ ಸಾಧ್ಯವಿಲ್ಲ; ಇಂಗ್ಲೆಂಡಿನ ಶಾಸನ

ಸಭೆಯಲ್ಲಿ ಅಪರಿಮಿತ ಗೌರವವನ್ನು ಅವನು ಪಡೆದಿದ್ದು, ಖಾನೂನು ಕಾಯಿದೆಗಳನ್ನು ಮನ್ನಿಸಿದ್ದು, ನ್ಯಾಯಪಾಲನೆಯಲ್ಲಿ ವಿಶ್ವಾಸವನ್ನಿಟ್ಟಿದ್ದು ಇತ್ಯಾದಿ ಯಾರಿಗೆ ತಾನೇ ತಿಳಿಯದು? ರಾಷ್ಟ್ರೀಯ ಧ್ಯೇಯಗಳು ನಿರ್ನಾಮವಾಗುತ್ತಿರುವಾಗ ದೇಶದ ಮೇಲೆ ಅವನಿಗಿದ್ದ ಕಾಳಜಿ, ವೈರಿಯಾದರೂ ವಿಶ್ವಾಸವೆಂಬುದು ಆಂಗ್ಲನಾದ ನಾಗರಿಕನಲ್ಲಿ ಯಾವಾಗಲೂ ಇರುತ್ತದೆಂಬ ಅವನ ನಂಬಿಕೆಗಳಿಂದ ಕೂಡಿ ಅನೇಕ ತಪ್ಪುಗಳಿದ್ದರೂ ಗೌರವ ಮತ್ತು ವೀರತನವು ಅಮೂಲ್ಯವೆಂದೂ ಭಾವಿಸಿದವರು ಬೇರೆ ಯಾರೆ ಯಾರೆಂದು ಅವನು ಅಪೇಕ್ಷಿಸಿದ್ದನು, "ಜೈಲಿನಲ್ಲಿ ಇಂದು ರಾತ್ರಿ ನನ್ನ ಬದಿಗೆ ಮಲಗುವವರು ಯಾರೂ ಇಲ್ಲ," ಎಂದು ಒಂದು ದಿನ ಅವನು ನಿಸ್ಸೃತನೆ ಹೇಳಿದನು, "ನನ್ನ ಮಗಳು ಕೊಲ್ಲಲ್ಪಟ್ಟಿದ್ದಕ್ಕೆ ಅಥವಾ ಗಾಯಗೊಳಿಸಲ್ಪಟ್ಟಿದ್ದಕ್ಕೆ ಯಾವ ಹೆಂಗಸೂ ನನ್ನನ್ನು ನಿಂದಿಸುವಂತಿಲ್ಲ---!" ಹೀಗನ್ನುವ ಅವನ ಮನೋವೇದನೆಯು ತೆರೆಯು ಅವನ ಮುಖದಲ್ಲಿ ಎದ್ದು ಕಾಣುತ್ತಿತ್ತಲ್ಲದೆ ಆ ದುರ್ದೈವದ ದಿನದಿಂದ ಚಾರ್ಲ್ಸ್ ಬ್ರಾಡ್ಲೆಯು ಎಂದಿನಂತೆ ಇರಲಿಲ್ಲ, ಕೆಲವರು ಅವನ ಧ್ಯೇಯಗಳನ್ನು ಹಗುರವಾಗಿ ಹೊತ್ತಿರುತ್ತಾರೆ; ಆದರೆ ಅವನ ಹೃದಯದ ನಾಡಿಗಳು ಅವನ ಧ್ಯೇಯದ ಸುತ್ತಲೂ ಹಬ್ಬಿದ್ದಿತು. ಕೆಲವರು ತಮ್ಮ ದೇಶದ ಬಗ್ಗೆ ಯಾವ ರೀತಿಯ ಶ್ರದ್ಧೆಯನ್ನು ವಹಿಸುವುದಿಲ್ಲ. ಆದರೆ ಬ್ರಾಡ್ಲೆಯಾದರೋ ಇಂಗ್ಲೆಂಡಿನ ಖ್ಯಾತಿಯನ್ನು ಎತ್ತಿಹಿಡಿಯುವ ೧೭ನೇ ಶತಮಾನದ ದೇಶಾಭಿಮಾನಿಯಂತೆ ಹೃತ್ಪೂರ್ವಕವಾಗಿ ಸ್ವಾತಂತ್ರ್ಯಪ್ರಿಯನೂ ನ್ಯಾಯವಾದಿಯೂ ಆದ ಆಂಗ್ಲೇಯನಾಗಿದ್ದನು, ಅವನ ಹೃದಯವನ್ನು ಜನರ ದ್ರೋಹವು ಒಡೆಯಿತು, ತನ್ನ ವೈರಿಗಳ ಗೌರವವನ್ನು ನೀಡಿ ಅವನು ಏಕಾಂಗಿಯಾಗಿ ಬಹಿಷ್ಕಾರಕ್ಕೂ ಹಕಿಮ ನೆಮಾಸಕ್ಕೂ ಸಿದ್ಧನಾಗಿ ನಡೆದನು, ಅದರಲ್ಲೂ ಕಾರಾಗೃಹ ಶಿಕ್ಷೆಯನ್ನು ಅವನು ಹೆಚ್ಚು ನಿರೀಕ್ಷಿಸಿದ್ದನು. ಆದರೆ ಅವನ ವಿರೋಧಿಗಳೆದೆಯಲ್ಲಿ ಕಿಚ್ಚನೇ ಇದ್ದಾಗ ಅವನ ಮೇಲೆ ಅಪಮಾನವೂ ಹಾಗೂ ಹೇಡಿತನದಿಂದ ಅವರು ಆಕ್ರಮಣವನ್ನು ನಡೆಸುವರೆಂದು ಕನಸಿನಲ್ಲೂ ಎಣಿಸಿರಲಿಲ್ಲ. ಜನರಿಂದ ಚುನಾಯಿತನಾದ ಪ್ರತಿನಿಧಿಯೊಬ್ಬನ ಮೇಲೆ ಆ ರೀತಿ ಕೈಮಾಡಿದುದು ಎಲ್ಲ ಶಾಸನಸಭಾ ಪರಂಪರೆಗೂ ನಾಚಿಕೆಗೇಡಾಗಿದೆ. ಹ್ಯಾಂಪ್ಡನ್ ಮತ್ತು ವಾನ್ ಮನೆತನದ, ಮತ್ತಿತರ ಅನೇಕರ ದಬ್ಬಾಳಿಕೆಯ ಹಿಂಸಾಕೃತ್ಯವನ್ನು ತಡೆದಿಟ್ಟು ತನ್ನ ಹಕ್ಕುಬಾಧ್ಯತೆಗಳನ್ನು ಗಳಿಸಿಕೊಂಡ ದೊಡ್ಡ House of Commons ಇದರಲ್ಲಿ ನಡೆದ ಈ ಅತ್ಯಾಚಾರವು ಗಲ್ಲಿಗರಡಿಗಳಲ್ಲಿ ನಡೆಯುವ ದೃಶ್ಯವನ್ನು ಮೀರುತ್ತದೆ.

ಹೀಗೂ ಈ ಕೋಲಾಹಲದ ಘಟನೆಗಳು ಅವನಿಗೆ ಸರಕಾರದ ಸಹಾಯವನ್ನು ಪಡೆಯುವ ಭರವಸೆಯನ್ನು ತಂದಿತು. ಚಾರ್ಲ್ಸ್ ಬ್ರಾಡ್ಲೆಗೆ ಯಾವ ವಿಧದಲ್ಲೂ ಕಾಯಿದೆಗನುಸಾರವಾದ

ಪರಿಹಾರವು ದೊರೆಯದಿಲ್ಲವಾದುದರಿಂದ ಅವನು ಶಾಸನ ಸಭೆ (The House of Commons)ಯ ಆಜ್ಞೆಯಂತೆ ಹವಾಲ್ದಾರರು ಮತ್ತು ಪೋಲೀಸರು ವರ್ತಿಸಿದರೆಂಬ ಕಾರ್ಯದಿಂದ ಅವನು ವ್ಯಾಜ್ಯದಲ್ಲಿ ಸೋಲನ್ನು ನಿರೀಕ್ಷಿಸಿದ್ದನು. ಆದರೆ ಸರಕಾರವು ಶಾಸನ ಸಭೆಯ ಮುಂದಿನ ಅಧಿವೇಶನದಲ್ಲಿ ಅವನಿಗೆ ಸಲ್ಲತಕ್ಕ ಸಭಾಸದ ಸ್ವತ್ವವನ್ನು ಹಿಂದಿರುಗಿ ಅವನಿಗೆ ಕೊಡುವಂತೆ ಮಾಡಿಕೊಟ್ಟಿತು. ಆ ರೀತಿಯಾಗಿ ನಾವು ಸರಕಾರದ ವಿರೋಧವಾಗಿ ಹಲವು ವಿಷಯ ಸಹ ನಿರ್ಧರಿಸಿದ್ದನ್ನು ಅವರು ತಡೆದರು; ಸುಂಕವನ್ನು ಕಟ್ಟಬೇಕಾದ ಎಲ್ಲಾ ವಸ್ತುಗಳನ್ನು ಒಂದು ನಿಶ್ಚಿತ ತಾರೀಖಿನಂತರ ಉಪಯೋಗಿಸಬಾರದೆಂಬುದಕ್ಕೆ ಮಾತ್ರ ಕೇಳಲು ಬಹುದೆಂಬ, ಜನವನ್ನು ನಾನು ನನ್ನ ಸ್ವಂತ ಜವಾಬ್ದಾರಿಕೆಯಿಂದ ಸೇರಿಸಿದೆನು. ಆಕ್ಷೇಪ ಇಲ್ಲ, ಅವರು ಬ್ಯಾಂಕಿನಿಂದ ಹಣವನ್ನೆಲ್ಲ ವಾಪಾಸು ತೆಗೆದು ಆ ರೀತಿ ಸರಕಾರದ ಆರ್ಥಿಕ ಪರಿಸ್ಥಿತಿಗೆ ತೊಂದರೆ ನನ್ನಿಂದುಂಟುಮಾಡುವಂತೆಯೂ ನಿರ್ಧರಿಸಿದೆವು. "Stop the Supplies" ಎಂಬ ಈ ಹೋರಾಟ ಶೈಲಿಯು ನನ್ನ ಮತವಿಗೆ ಕಾಮಿಟಿ ಸೇರು ಕೊಟ್ಟ ಸಹಾನುಭೂತಿಯು ತುಂಬಾ ಹಾರ್ದಿಕವಾಗಿತ್ತು. ನಿರಾಶೆಯನ್ನು, ಮತ್ತು ಹೊಗಳಿಕೆಯನ್ನೂ ಸೇದದೇ ಇದ್ದ ಓರ್ವನು ಬಹಳ ಮಾನವನ್ನೂ ನಿಲ್ಲಿಸುವನೆಂದು ಬರೆದನು. ಇತರರು ಹೊಸ ಕೋರ್ಟ್ ಸೇರುವ ವಿಶೇಷ್ಯ ನಮ್ಮ ಶಿವಾರ್ದೀವಾದರೆ ಅದನ್ನು ನಿಲ್ಲಿಸಲು ತಯಾರಿದ್ದೇವೆ, ಎಂದು ಶ್ಲಾಘನೀಯವಾಗಿ ಬರೆದರು. ಹಾಮಾನು ರಕ್ಷಣೆಯ ಮೊದಲ ಕರ್ತವ್ಯವನ್ನು ಮಾಡಲು ಸರಕಾರವು ತಿರಸ್ಕರಿಸಿದಾಗ ಅಲ್ಲದೆ ನಾವು ಅವರನ್ನು ಆರ್ಥಿಕವಾಗಿ ಹಿಂಸಿಸಲು ಶಿಕ್ಷಿಸುವುದು ಸಮರ್ಥವಲ್ಲವಾದರಿಂದ ನಾನು ಅವರ ಹಣವಿಧಾನಕ್ಕೆ ಅನುಭವವನ್ನು ಒತ್ತಟ್ಟಿಗಿರಿಸಲು ಮನಸ್ಸಿಲ್ಲದ ಮನಸ್ಸಿನಿಂದ ಹೇಳಿದೆನು. ನ್ಯಾಯವನ್ನು ನಿರಾಕರಿಸುವುದರಿಂದ ಅವರು (ಸರಕಾರವು) ಮಾತು ಕೊಟ್ಟಿದ್ದಾರೆ; ಈಗ ನಾವು ಕಾಯಬೇಕು. ಇದರ ಮಧ್ಯೆ ಬ್ಯಾಂಕಿಯ ಮೇಲೆ ಉಂಟಾಗಿದ್ದ ಆತಂಕದ ಫಲವಾಗಿ ಅವನ ತೋಳಿನ ಮೂಳೆಗಳು ಛಿದ್ರವಿಚ್ಛಿದ್ರವಾಗಿದ್ದುದರಿಂದ ಅವನು ಹಾಸಿಗೆಯಲ್ಲಿ ಅಂಗಾತ ಮಲಗಿರಬೇಕಾಗಿತ್ತು. ಈ ಮಹಾ ಹೋರಾಟದ ಮಧ್ಯೆ ಉಂಟಾದ ತಾತ್ಕಾಲಿಕ ಶಾಂತ ಪರಿಸ್ಥಿತಿಯಲ್ಲಿ ಹಲವು ಚಿಕ್ಕ ತಕರಾರುಗಳು ನಡೆದುವು. ನಾನು ಶಾಸನ ಸಭೆಗೆ ಎರಡೋ ಮೂರೋ ಬಾರಿ ಹೋದೆನು. ಬ್ಯಾಂಕಿಯನ್ನು ಹೊರಹಾಕಿದವರಿಂದ ಮೈಯಾರೆಯಾಗಲಿಲ್ಲವಾದರೂ ಆ ಸ್ಥಳಕ್ಕೆ ಸೇರಿಸಿಕೊಳ್ಳುತ್ತಿದ್ದನು. ನನ್ನ ಒಂದು ಭಾಷಣದ ಬಗ್ಗೆ ಶ್ರೀ ರಿಚ್ಚಿ (Mr. Ritchie) ಇವನು ಅದರ 'ಔಚಿತ್ಯ

ವನ್ನು ಕುರಿತಾಗಿ ಪ್ರಶ್ನಿಸಿದನು, ಸರ್ ಹೆನ್ರಿ ಟೈಲರ್ ಇವನು ನಮ್ಮ ವಿಜ್ಞಾ-
ನ ತರಗತಿಗಳ ಮೇಲೆ ಯುದ್ಧವನ್ನೇ ಹೂಡಿದನು. ಈ ಹೋರಾಟಕ್ಕೆ
ಕಾರಣವಾಗಿ ವ್ಯಾವಹಾರಿಕ ಪ್ರಯೋಗವನ್ನು ಹೊಂದಿದ ನನ್ನ
ಹೆಸರನ್ನು ಹಲವರು ಉಪಯೋಗಿಸಿದ್ದರಿಂದ ನನ್ನ ಜೀವನಕ್ಕೆ ಮ-
ತ್ತೊಂದು ಸಂತೋಷವನ್ನು ಒದಗಿಸಿತು, ಕಾರ್ಮಿಕರುಗಳ ಲೇಖಕಿಯಾಗಿದ್ದ
ನನ್ನ ಹೆಸರಿನ ದುರುಪಯೋಗವನ್ನು ಅನ್ಯಾಯಕ್ಕೆ ಹೋಗದೇ ಇದ್ದ
ವಸಾಹತ್ತುಗಳಲ್ಲಿದ್ದ ಜನರು ಮಾಡುತ್ತಿದ್ದಾಗ ಅದು ನನಗೆ ಕೋಪಕ್ಕೆ
ಗೀಡಾಯಿತು. ದೇಶದಲ್ಲಿ ನಾನು ವಿನಾಯಕವಾಗಿ ಚಳುವಳಿಯನ್ನು ಬಲ-
ಗೊಳಿಸುತ್ತಿದ್ದಾಗ ಲಂಡನ್ನಿನಲ್ಲಿ Free-thinkers ಸಂಸ್ಥೆಯು ಉಂ
ಟುಮಾಡಿದ್ದ ಸಮ್ಮೇಳನವನ್ನು ನಡೆಸುವುದು, ವಿಜ್ಞಾನ ವಿಚಾರ
ಗಳನ್ನು ಓದುವುದು ಮತ್ತು ಬೋಧಿಸುವುದು, Hall of Science
ನಲ್ಲಿ ವೈಜ್ಞಾನಿಕ ವಿಷಯಗಳ ಮೇಲೆ ಭಾಷಣ ಕೊಡುವುದು, ಧರ್ಮನಿ-
ರಪೇಕ್ಷವಾದಿ (Secularists)ಗಳ ಮೇಲೆ ಆಪಾದನೆ ಹೊರಿಸಿದ
ಪ್ರಾಂಟಿಸ್ಟರ್‌ನ ಬಿಷಪ್ ಇವನ ಮೇಲೆ ಮಾನನಷ್ಟಕ್ಕೆ ವ್ಯಾಜ್ಯ
ಹೂಡುವುದು ಮತ್ತು ಆದರ ಕಾರಣವಾಗಿ Prof.'s View on
Marriage ಎಂಬ ಉಗ್ರ ಪ್ರತಿಭಟನಾ ಕರಪತ್ರವನ್ನು ಹೊರಡಿಸುವು-
ದಕ್ಕಾಗಿ ಹಲವು ಕಾರ್ಯಕಲಾಪಗಳೊಡನೆ ಕಳೆದ ಆ ತಿಂಗಳುಗ-
ಳು ಕಳೆದು ಹೋದುವು.

ಆ ಸಂದರ್ಭದಲ್ಲಿ ನಡೆದ ಘಟನೆಯನ್ನು ಕುರಿತು ಬೇಸರ-
ದಿಂದ ಬರೆಯುತ್ತೇನೆ, ವಿಜ್ಞಾನದ ಪ್ರಾಣಿಶಾಸ್ತ್ರ ಶಾಖೆಯಲ್ಲಿ ನಡೆ-
ಸಿದ ಜೀವಂತ ಪ್ರಯೋಗದ ವಿಷಯದಲ್ಲಿದ್ದ ಅಪ್ರತಿಭಟನೆಯ
ಕಾರಣವಾಗಿ ನಾನು ತಪ್ಪಾಗಿ ಎಣಿಸಿದ್ದೆನು, ಕುಶಲರಾದ
ವಿಜ್ಞಾನಿಗಳನ್ನು ಪ್ರಾಣಿಗಳ ಮೇಲೆ ಔಷಧಿಗಳ ಮೂಲಕ ಪ್ರಯೋ-
ಗ ಪರೀಕ್ಷೆಯನ್ನು ಮಾಡಲು ಬಿಡಲಾರದಿದ್ದರೆ ಅವರು ಅದೇ ಪ್ರ-
ಯೋಗವನ್ನು ಆಸ್ಪತ್ರೆಗಳಲ್ಲಿ ಬಡ ಖಾಯಿಲೆಗಾರರ ಮೇಲೆ
ಮಾಡಲೇಬೇಕಾಗುತ್ತದೆಂಬುದಾಗಿ Sir Eardley Wilmot ಇವನ
Total Suppression of Vivisection — ಎಂಬ ಮಸೂದೆಗೆ ವಿರೋ-
ಧವಾಗಿ ಎರಡು ಲೇಖನಗಳನ್ನು ಬರೆದು ಕರಪತ್ರಗಳ ರೂಪದಲ್ಲಿ
ಪುನಃ ಪ್ರಕಟಿಸಿದೆನು. ಮೂಲ ಸಂಶೋಧನೆಯಲ್ಲಿ ಮಗ್ನರಾದ
ಬಹು ಕುಶಲರಾದವರನ್ನು ಮಾತ್ರ ಅಂಥಾ ಪ್ರಯೋಗ ಪರೀಕ್ಷೆಗೆ
ಬಿಡಬಹುದೆಂದು ನಾನು ಸೂಚಿಸಿದ್ದೆನಲ್ಲದೆ ಆ ವರೆಗೆ ಮಾಡಿದ
ಪ್ರಯೋಗಗಳ ವಿವರವನ್ನು ಕುರಿತಾಗಿ ಕೊಟ್ಟ ಹೇಳಿಕೆಗಳನ್ನು ಒಪ್ಪಿ
ಅವು ಎಷ್ಟರಮಟ್ಟಿಗೆ ಸರಿಯೆಂಬುದನ್ನು ತಿಳಿಯಲು ಎಚ್ಚರವನ್ನು
ವಹಿಸದೇ ಇದ್ದೆನು. ನನ್ನ ಜೀವನದ ಧ್ಯೇಯ ಮತ್ತು ಸತ್ಕ್ರಮ-
ದ ವಿರುದ್ಧವಾಗಿ ನಾನು ಬರೆದು ಪ್ರಕಟಿಸಿದ್ದ ಆ ವಿಷಯವನ್ನು

ಕ್ರೂರತೆಗಾಗಿ ತುಂಬಾ ಬೇಸರವನ್ನು ನಾಚಿಕೆಯನ್ನು ಪಡುತ್ತಿದ್ದೇನೆ. ಇಷ್ಟೇ ಅಲ್ಲ; ನನ್ನ ಲೇಖನಗಳಿಗೆ Dr. Anna Kingsford ಇವರು ಉತ್ತರಿಸಿದ್ದಕ್ಕೆ ನಾನು ಅವರಿಗೆ ಋಣಿಯಾಗಿದ್ದೇನೆ, ಅವರ ಉತ್ತರಗಳನ್ನು ನನ್ನ ಅಭಿಪ್ರಾಯದೊಡನೆಯೆ ನಮ್ಮ National Reformer ಪತ್ರಿಕೆಯಲ್ಲಿ ಪ್ರಕಟಿಸಿದೆನು. ಅವರು ಆ ನಮೂನೆಯನ್ನು ಸ್ವಂತ ಸ್ಥಿತಿಗೆ ಹೊಂದಿಸಿದಾಗ ಅದು ನನ್ನನ್ನು ಕೋರ್ತೀ ಉದ್ರೇಕಗೊಳಿಸುತ್ತು, ಕಟ್ಟಕಡೆಗೆ ನಾನು ಆ ವಿಷಯವನ್ನು ಜಾಗರೂಕತೆಯಿಂದ ಪರಿಶೀಲಿಸಿದೆನು. ಆಗ ಪ್ರಾಣಿಗಳ ಮೇಲೆ ಇತರ ದೇಶಗಳಲ್ಲಿ ನಡೆಸಲ್ಪಡುತ್ತಿದ್ದ ಪ್ರಯೋಗವು ಇಂಗ್ಲೆಂಡಿನಲ್ಲಿ ನಡೆಸುತ್ತಿದ್ದುದಕ್ಕಿಂತ ಭಿನ್ನವಾಗಿ ನನಗೆ ತೋರಿತು. ಆ ತರಹದ ಪ್ರಯೋಗಕ್ಕೆ ವಿರೋಧಿಸಿದವರು ಹೇಳಿದಂತೆ ಅದು ಅಮಾನುಷವೂ ಕ್ರೂರವೂ ಆಗಿದೆಯೆಂದು ಹೇಳಿದ್ದರ ಸತ್ಯತೆಯನ್ನು ಕಂಡಿಸಲ್ಲದೆ ಅದನ್ನು ಸ್ವಲ್ಪವಾದರೂ ಮಾನವೀಯವಾಗಿ ಉಪಯೋಗಿಸಬಹುದೆಂಬುದಾಗಿ ನಾನು ಆ ಪ್ರಯೋಗ ನೀತಿಯ ಬಗ್ಗೆ ಪಡಿಸಿದ ನನ್ನ ಪಕ್ಷಪಾತ ದೃಷ್ಟಿಯನ್ನು ತೆಗೆದುಹಾಕಿತು.

ಚಾರ್ಲ್ಸ್ ಬ್ರಾಡ್ಲಾ ಮತ್ತು ಅವನೊಡನೆ ಇದ್ದವರಿಂದ ನಡೆಸಲ್ಪಡುತ್ತಿದ್ದವರ ಹೋರಾಟವು 1882ನೇ ವರ್ಷದಲ್ಲಿ ನಿಲುಗಡೆ ತೋರಲಿಲ್ಲ. ಆ ವರ್ಷದ ಫೆಬ್ರವರಿ 7ರಲ್ಲಿ ಅವನು ಮೂರನೆ ಬಾರಿಗೆ House of Commons ಇಲ್ಲಿ ವಿಚಾರಣೆಗೊಳಗಾಗಲು ಅವನು ತನ್ನ ಬಾಧ್ಯವನ್ನು ಹಿಂದು ಕೊಡುಗೆಯನ್ನೀವೆನೆಂಬುದಾಗಿ ಕೊನೆಗೊಳಿಸಿದನು, ಆ ಕೊಡುಗೆಯನ್ನು ಸ್ವೀಕರಿಸಿದ್ದರೆ ವಾದ ವಿವಾದಗಳೆಲ್ಲ ಅಲ್ಲಿಗೆ ಅಂತ್ಯವಾಗುತ್ತಿತ್ತು.

ಹಿಂಮಾರು ನಾಲ್ಕು ಯಾ ಐದು ವಾರಗಳ ಅವಧಿಯಲ್ಲಿ ಅದಿವಾ ಶಾಸನಸಭೆಯು ಅದರ ಅತ್ಯಾವಶ್ಯಕ ಕಾರ್ಯಕ್ರಮಗಳಿಗೆ ಬೇಕಾದಷ್ಟು ಸಮಯವನ್ನು ತೆಗೆದುಕೊಂಡ ನಂತರ ಪ್ರಮಾಣವಚನ ಸ್ವೀಕಾರ ಮಸೂದೆಯನ್ನು ಜಾರಿಗೆ ತರಬೇಕೋ ಬೇಡವೋ ಎಂದು ಮಾಡಿಸುವುದಾದರೆ ನಾನು ಶಾಸನ ಸಭೆಯಿಂದ ಹೊರಗೆ ನಿಲಲು ಸಿದ್ಧನಿದ್ದೇನೆ, ಖಾನೂನಿಗೆ ವಿಧೇಯನಾಗಿ ನಾನು ನಡೆಯಬೇಕಿದೆ. ನಾನು ಈ ಸಭೆಗೆ ಸಲಹೆಯನ್ನು ಕೊಡುತ್ತಿರುವೆನೆಂದು ಬಹುಶಃ ತೋರಿ ಬರುವುದಾದರೆ ನನ್ನನ್ನು ಕ್ಷಮಿಸುವುದಲ್ಲದೆ ನಾನು ಶಾಸನ ಸಭೆಯ ಮುಂದೆ ಬರಲು ಇನ್ನೂ ಹಲವು ದಿವಸಗಳನ್ನು ತೆಗೆದುಕೊಳ್ಳಲು ತಯ್ಯಾರಿದ್ದೇನೆ ಎಂಬುದಾಗಿ ಹೇಳುತ್ತಿದ್ದೇನೆ. ಈ ಮಸೂದೆಯು "ಬ್ರಾಡ್ಲಾ ನಿವಾರಣಾ ಮಸೂದೆ" (Bradlaugh Relief Bill) ಎಂದಾಗುವುದೆಂದು ಮಾನ್ಯ ಸದಸ್ಯರು ಹೇಳಿದ್ದರೆ, ಹಾಗಾದರೆ ನಿಮಗಿಂತಲೂ

ಬ್ರ್ಯಾಡ್ಲೋಯು ತುಂಬಾ ಹೆಮ್ಮೆಯಿಂದ ಕೂಡಿರುವವನಾಗಿದ್ದನು. ಹಿಂದೆ ನಡೆದ ಚುನಾವಣೆಗೆ ಅನ್ವಯಿಸಲ್ಪಡದೆ ಮತಸೂದೆಯು ಜಾರಿಗೆ ತರಲ್ಪಡುತ್ತಿದೆ; ನಾನು ನನ್ನ ಶಾಸನ ಸಭಾಸ್ಥಾನವನ್ನು ತಾತ್ಕಾಲಿಕವಾಗಿ ತ್ಯಜಿಸುವೆನು, ಮತಸೂದೆಯು ಖಾನೂನು ಆದಲ್ಲಿ ಹೊರಬಂದನಂತರ ನಾನು Chiltern Hundreds— ಚುನಾವಣಾ ಸ್ಥಾನಕ್ಕೆ ಸ್ಪರ್ಧಿಸಲು ಪ್ರಯತ್ನಿಸುವೆನು, ನನಗೆ ಭಯವಿಲ್ಲ; ನನ್ನ ಮತದಾರ ಕ್ಷೇತ್ರದ ಜನಕ್ಕೆ ನಾನು ಅರ್ಹನಲ್ಲವೆಂದು ಕಂಡುಬಂದರೆ ಅವರು ನನ್ನನ್ನು ತಿರಸ್ಕರಿಸುತ್ತಾರೆ, ಆದರೆ ನೀವು ಎಂದಿಗೂ ಹಾಗೆ ಮಾಡಲು ಸಾಧ್ಯವಿಲ್ಲ. ನೀವು ಹಿಂದೆ ನನ್ನನ್ನು ಶಿರಚ್ಛೇದನಗೊಳಿಸಬೇಕಲ್ಲದೆ ಬೇರಾವುದೂ ಇಲ್ಲ."

ಆದರೆ ಶಾಸನ ಸಭೆಯು ಏನನ್ನೂ ಮಾಡಲೊಲ್ಲದು. ಬ್ರ್ಯಾಡ್ಲೋಯು ರಾಜಕೀಯ ಘಟನಾತ್ಮಕ ಹಕ್ಕಿಗಾಗಿ (Constitutional Right) 100,000 ಜನರ ಸಹಿಗಳನ್ನು ಕೇಳಿದನು, ಹೀಗೂ ಫೆಬ್ರುವರಿ ತಿಂಗಳಲ್ಲಿ 2,41,970 ಸಹಿಗಳಿರುವ 1,008 ಅರ್ಜಿಗಳನ್ನು ಸಭೆಯ ಮುಂದಿರಿಸಲಾಯಿತು, ಸಭಾಸದಸ್ಯನಾದರೋ ಅದನ್ನು ತುಂಬಾ ತಿರಸ್ಕಾರಯುತ ಭಾವದಿಂದ ನಿರ್ಲಕ್ಷಿಸಿತಲ್ಲದೆ ಅವನ ಸ್ಥಾನವು ಖಾಲಿಯಾಗಿದೆಯೆಂದು ಸಾರಲು ನಿರಾಕರಿಸಿತು, ಅಲ್ಲದೆ ಪುನಃ ಆ ಸ್ಥಾನವನ್ನು ಪಡೆಯಲಿಕ್ಕೂ ಅವನಿಗೆ ತಿರಸ್ಕರಿಸಿತು, ಈ ರೀತಿಯಾಗಿ ಅವನಿಗೆ ಖಾನೂನನ್ನು ಅನುಸರಿಸಿ ಪರಿಹಾರವೇನೂ ದೊರೆಯದಂತೆ ಮಾಡಿದ್ದಲ್ಲದೆ ಅವನ ನಾರ್ಥಾಂಪ್ಟನ್ ಕ್ಷೇತ್ರದಲ್ಲಿ ಮತದಾನ ಹಕ್ಕಿನ ಅರ್ಧಭಾಗವನ್ನು ತೆಗೆದುಹಾಕಿತು, ಹಿಂದೆ ಹೋದರ ಸದಸ್ಯನಿಗೆ ಯಾವ ರೀತಿಯಲ್ಲಿ ಶ್ರದ್ಧೆಯಿಂದ ಸಹಕರಿಸಬಹುದೋ ಅದರಂತೆ Mr. Labouchere ಇವನು ಪ್ರತಿಜ್ಞಾಸೂಚಕ ಮತಸೂದೆ (Affirmation Bill) ಯನ್ನು ಸಭೆಯ ಮುಂದಿಟ್ಟನು ಅದನ್ನೂ ತಡೆಹಿಡಿಯಲಾಯಿತು, ತನ್ನ ಸ್ವಂತ Attorney-General ಇವನಿಂದ ಜಾರಿಗೆ ತರಲ್ಪಟ್ಟ ಖಾನೂನನ್ನು ಅನುಮೋದಿಸಿರಿ ಎಂದು ಸಭೆಯನ್ನು ಕೇಳಿಕೊಂಡ Mr. Gladstone ಇವನು ಸಹ (ಬ್ರ್ಯಾಡ್ಲೋಯ ವಿಷಯದಲ್ಲಿ) ಏನನ್ನೂ ಮಾಡಲು ಸಾಧ್ಯವಿಲ್ಲವೆಂದು ತಟಸ್ಥನಾದನು, ಈ ರೀತಿಯಾಗಿ ಯಾರಿಂದಲೂ ತಪ್ಪಿಸಲಾಗದ ಹಿಂದು ತೊಡಕಿನಲ್ಲಿ ಸಿಕ್ಕಿಬೀಳಲು ಸ್ವಾತಂತ್ರ್ಯಪ್ರಿಯರ ಶತ್ರುಗಳು ಹಿಗ್ಗಿದರು, ಇಂಥ ಪರಿಸ್ಥಿತಿಯಿಂದ "ಗ್ಲೋಬ್" ಪತ್ರಿಕೆಯು ಹೇಳಿದಂತೆ "ಮಹಾ ಸಮಾಧಿಕಾರ" ದ ಶಾಸನ ಸಭೆಯು, House of Commons- ಇದು ಹಿಂದು ವಿಸ್ತೃತನದ ಅವಿಧೇಯತೆಯನ್ನು ಅನುಭವಿಸುವ ತೊಂದರೆಗೊಳಗಾಯಿತು, ಹೇಗೂ ಶಾಸನ ಸಭೆಯು ದೂರವಿರಿಸುತ್ತಿದ್ದ ಸದಸ್ಯನೇ ಆ ಎಲ್ಲಾ ಸದಸ್ಯರ ಸಮೂಹದಲ್ಲಿ ನಿಂತು ಪ್ರಮಾಣವಚನವನ್ನು

(ಶಾಸನ ಶಿಕ್ಷಿಸಿದಂತೆ) ಸ್ವೀಕರಿಸಿ ತನ್ನ ಸ್ಥಾನದಲ್ಲಿ ಕುಳಿತು ಮುಂದೆ ಸಾಗಲಿಕ್ಕೆ ಬಿಡಬೇಕೆಂದು ಕಾದು ನೋಡಿದನು, ಕಂಡ ಉದ್ಧಟತನದಿಂದ ವರ್ತಿಸಿದ ಸದಸ್ಯನ ಬಗ್ಗೆ ಶಾಸನ ಸಭೆಗೆ ಬೇರೆ ಬಗೆ ಮಾಡಲಾಗದೆ ಆತನನ್ನು ಬಹಿಷ್ಕರಿಸಿತು. ಆಗ ಶ್ರೀ ಬ್ರಾಡ್ಲಾಫ್ ಇವನು ನ್ಯಾಯಾಲಯದಲ್ಲಿ ನಾರ್ಥಾಂಪ್ಟನ್ ಚುನಾವಣಾ ಕ್ಷೇತ್ರವು ಖಾಲಿಯಾಗಿದೆ; ಆ ಕ್ಷೇತ್ರದ ಪ್ರತಿನಿಧಿಯು ಈ ಸಭೆಯಿಂದ ಬಹಿಷ್ಕರಿಸಲ್ಪಟ್ಟ ಚಾರ್ಲ್ಸ್ ಬ್ರಾಡ್ಲೊಯೆಂಬುದಾಗಿ ಸಾರಿ ಹೊಸ ಅರ್ಜಿಯೊಂದನ್ನು ಸಲ್ಲಿಸಿದನು. ನಾರ್ಥಾಂಪ್ಟನ್ ಮತದಾರರಾದರೋ ಬ್ರಾಡ್ಲೊಯು ಮತ್ತೆ ನಿಲ್ಲಲಾಗಿದ್ದು ಆತನನ್ನೇ ಮೂರನೇ ಬಾರಿಗೂ ಆರಿಸಿದರು, ಎರಡನೆ ಉಪಚುನಾವಣೆಯಲ್ಲಿದ್ದುದಕ್ಕಿಂತ ಈ ಬಾರಿ ಆತನಿಗೆ 359 ಮತಗಳು ಹೆಚ್ಚು ದೊರೆತಿದ್ದುವು. ಈ ಗೆಲುವನ್ನು ಇಂಗ್ಲೆಂಡಿನ ಎಲ್ಲಾ ದೊಡ್ಡ ಪಟ್ಟಣಗಳಲ್ಲೂ ವಿಶೇಷ ಉತ್ಸಾಹದಿಂದ ಸ್ವಾಗತಿಸಲಾಯಿತು. ಆದರೂ 299 ಜನ ಸದಸ್ಯರಿರುವ ಶಾಸನ ಸಭೆಯಲ್ಲಿ ಸರಕಾರದ ಬೆಂಬಲತೆಯ ಪರಿಣಾಮವಾಗಿ ಮತ್ತು ಕೇವಲ ಹದಿನೈದು ಜನರ ಬಹುಮತವನ್ನು ಪಡೆದು ಪುನಃ ಆತನನ್ನು ಸಭೆಯಲ್ಲಿ ಕುಳಿತುಕೊಳ್ಳಲು ಬಿಡದಾಯಿತು, ಆದರೆ ಈ ಬಾರಿ ಎಲ್ಲಾ "ಲಿಬರಲ್" (Liberal) ವಾರ್ತಾಪತ್ರಿಕೆಗಳು ಈ ವಾದಾಸ್ಪದ ವಿಚಾರವನ್ನು ಕುರಿತು ಸರಿ ಯೋಚಿಸತೊಡಗಿದುವು. ಶಾಸನ ಸಭೆ (Parliament)ಯು ಪ್ರತಿಯೊಬ್ಬ ಚುನಾವಣಾ ಸ್ಪರ್ಧಿಗೆ ಈ ಪ್ರತಿಜ್ಞಾ ಸ್ವೀಕಾರದ ಪ್ರಶ್ನೆಯು ಒಂದು ಪರೀಕ್ಷಾ ಪ್ರಶ್ನೆಯಾಗಿ ತೋರಿಬಂತು. ಅಲ್ಲದೆ ಈ ಧೋರಣೆಯಿಂದ ತಮ್ಮ ಮಿತ್ರರನ್ನೇ ದೂರವಿರಿಸಲಾಗುತ್ತಿದೆಯೆಂದು ಸರಕಾರವನ್ನು ಎಚ್ಚರಿಸಲಾಯಿತು. Pall Mall Gazette ಪತ್ರಿಕೆಯು ಜನತೆಯ ಸಾಮಾನ್ಯ ಅಭಿಪ್ರಾಯವೆಂತೆಂಬುದನ್ನು ಈ ರೀತಿಯಾಗಿ ಹೇಳಿತು:—

"ಪ್ರತಿಜ್ಞಾ ವಚನ ಸ್ವೀಕಾರ ಮಸೂದೆಯು ಒಂದು ದೇಶದ ಸರಕಾರಕ್ಕೆ ಹಾನಿಯನ್ನುಂಟು ಮಾಡುತ್ತದೆಂಬುದಕ್ಕೆ ಸಾಕ್ಷ್ಯವೇನು? ಆ ಮಸೂದೆಯನ್ನು ಆತನು ಸಭೆಯ ಮುಂದಿಡದೆ ಸುಮ್ಮನೆ ಇದ್ದರೆ ಚುನಾವಣೆಯಲ್ಲಿ ಅವರಿಗೆ ಸೋಲುಂಟಾಗುತ್ತಿರಲಿಲ್ಲವೆಂಬುದನ್ನು ನಾವು ಖಂಡಿತವಾಗಿ ಹೇಳಬಹುದು, ಹೀಗೂ ಆ ಮಸೂದೆಯು ಒಂದು ಪರೀಕ್ಷಾರ್ಥ ಪ್ರಶ್ನೆಯಾಗುವುದೆಂದು ಯಾರೂ ಸಂದೇಹಪಡಲಾರರು, ಲಿಬರಲ್ ಪಕ್ಷದ ಯಾರೊಬ್ಬನೂ ಅಂಥಾ ಮಸೂದೆಯ ಪರವಾಗಿ ಮತನೀಡಿದ್ದರೆ ನಾರ್ಥಾಂಪ್ಟನ್ ಕ್ಷೇತ್ರದಂಥಾ ಪ್ರತಿಯೊಂದು ತೀವ್ರಗಾಮಿ ಮತದಾರ ಕ್ಷೇತ್ರದಲ್ಲೂ ಆತನು ಜನರ ಸಹಾನುಭೂತಿಯನ್ನು ಕಳೆದುಕೊಳ್ಳುತ್ತಾನೆ. ಲಿಬರಲ್ ತತ್ವವನ್ನು ಪ್ರತಿಪಾದಿಸುವ ಪತ್ರಿಕೆಗಳು ದೇಶದ ಎಲ್ಲೆಡೆಯೂ ಈ ವಿಷಯದಲ್ಲಿ ಒಮ್ಮತದಲ್ಲಿದೆ, ಆಂಗ್ಲ ಕ್ರೈಸ್ತ ಸಂಸ್ಥೆ

ದಲ್ಲಿ ಶ್ರದ್ಧೆಯುಳ್ಳ ರಾಜಕೀಯ ವಾದಿಗಳೂ ಪ್ರದರ್ಶಿಸುತ್ತಾರೆ. ಸ್ವಾರ್ಥೀಯ ಶಕ್ತಿ ಕೂಟಗಳೂ ಅಂತೆಯೇ ಇವೆ. ಈಗ ಬೇಕಾಗಿರುವುದು ಪ್ರಸಂಗದ ರೀತಿ ಕ್ರಿಯಾತ್ಮಕವಾಗಿಯೂ ಸತ್ಯವೇ ಎಲ್ಲದಕ್ಕೂ ಮೇಲು ಎಂದು ಭಾವಿಸಿ ಸರಕಾರವು ಸ್ವಲ್ಪ ನೈತಿಕ ಸ್ಥೈರ್ಯವನ್ನು ಹೊಂದಿ ವರ್ತಿಸಬೇಕಿದೆ.

ಆದರೆ ಸರಕಾರವು ಹಾಗೆ ಆಲೋಚಿಸದಿದ್ದ ಕಾರಣದಿಂದ ಅದಕ್ಕೆ ತಕ್ಕಂತೆ ದಂಡವನ್ನು ಅನುಭವಿಸುತ್ತ, ಚುನಾವಣೆಯಲ್ಲಿ ಅವನು ಪಡೆದ ಗೆಲುವಿಗೆ ಒಂದು ಕಾರಣವೆಂದರೆ ಮತದಾನ ಕ್ಷೇತ್ರಗಳ ಮತಕ್ಕೆ ಅವರು ತೋರಿದ ಬೆಂಬಲತೆ ಮತ್ತು ಅದ್ವಿತೀಯದಿಂದೊಂದಾದ ತಾತ್ಸಾರ ಭಾವನೆಯೇ ಆಗಿದೆ. ಇದನ್ನು ಕುರಿತು ನಿಜವಾಗಿಯೂ ನಾನು "ಅಹಾ! ಅನ್ಯಾಯಕ್ಕೊಳಗಾಗಿ ಬೇಸತ್ತ ಬ್ರ್ಯಾಡ್ಲೋಯು ಉದಾತ್ತ ನ್ಯಾಯಾಂಗದ ಅವತಾರಿಯೇ ಆಗಿರುವನು," ಎಂದು 1882 ರ ಮೇ ತಿಂಗಳಲ್ಲಿ ಬರೆದೆನು. ಅವನು ಕೂಡ ಸಾರ್ವತ್ರಿಕ ಚುನಾವಣೆಯಲ್ಲಿ ಗೆದ್ದು ಶಾಸನ ಸಭೆಯಲ್ಲಿ ಪ್ರತಿಜ್ಞಾವಚನವನ್ನು ಸ್ವೀಕರಿಸಿ ಸ್ಥಾನವನ್ನು ಪಡೆದು ಸಭಾಸದಸ್ಯರಿಗೆ, Members of the Parliament- ಪ್ರತಿಜ್ಞಾವಚನವನ್ನು ತಾವು ಇಚ್ಛಿಸಿದರೆ ಸ್ವೀಕರಿಸಬಹುದೆಂಬ ಮಸೂದೆಯನ್ನು ತಂದು ಅದನ್ನು ಕಾನೂನಾಗಿ ಮಾಡಿಸಿದಲ್ಲದೆ Free-thinkers ಇವರನ್ನು ಹಿಂಬಾಲಿಸುತ್ತಿದ್ದವರಾಗಿ ಇರಲು ಯೋಗ್ಯರೆಂದೂ ಆ ವರೆಗೆ ದೇವರ ಹೆಸರನ್ನೆತ್ತಿ ಪ್ರಮಾಣವಚನವನ್ನು ಸ್ವೀಕರಿಸದಿದ್ದವರ ಮೇಲೆ ಎಸಗಿದ ಅಪಮಾನಗಳನ್ನು ನಿವಾರಿಸುವಂತೆಯೂ ತೀರ್ಪು ಕ್ರಮವನ್ನು ಕೈಗೊಳ್ಳುವವರೆಗೂ ದೇಶದಲ್ಲಿ ಅವನ ನಿಲುವನ್ನು ಸಮರ್ಥಿಸಿ ಬೆಳೆವವರು ಹೆಚ್ಚುತ್ತಲೇ ಇದ್ದರು. ಈ ರೀತಿ ಅವನು ಆ ವರೆಗೂ ಇಲ್ಲದಿದ್ದ ಪ್ರಚಂಡ ಹೋರಾಟವನ್ನು ಸಂಪೂರ್ಣ ಜಯವನ್ನು ಪಡೆದು ಕೊನೆಗೊಳಿಸಿದಲ್ಲದೆ ದೇಶದ ರಾಜಕೀಯ ಚರಿತ್ರೆಯಲ್ಲಿ ಅವನ ಹೆಸರನ್ನು ಸ್ಥಿರಸ್ಥಾಯಿಗೊಳಿಸಿದನು.

ನಾಸ್ತಿಕರನ್ನು ಶಾಸನ ಸಭೆಯ ಸದಸ್ಯರನ್ನಾಗಿಸಬಾರದೆಂದು ಲಾರ್ಡ್ ರೆಡ್ಸ್‌ಡೇಲ್ ಎಂಬುವನು House of Lords ಇದರಲ್ಲಿ ಒಂದು ಮಸೂದೆಯನ್ನು ಚರ್ಚೆಗೆ ತಂದನು. ಆದರೆ ಆ ಮೇಲ್ಮನೆ ಸದಸ್ಯರು ಅದಕ್ಕೆ ತಮ್ಮ ಸಂತಾಪ ಸೂಚಕವಾದ ಬಾಕ್ಷಗಳಿಂದ ಆ ಮಸೂದೆಯನ್ನು ತಿರಸ್ಕರಿಸಿದರು. ಅಷ್ಟರಲ್ಲಿ ಬ್ರ್ಯಾಡ್ಲೋಯು ಕಾಯಿಲೆಯಾಗಿದ್ದು, ಡಾ. ಅಪ್‌ಲಿಂಗ್ ಮತ್ತು ನನ್ನ ಮೇಲೆ ನೀವು ವಿಜ್ಞಾನಿಗಳ ಬೋಧಕರೆಂಬ ಕಾರಣದಿಂದ, ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸರ್ ಹೆನ್ರಿ ಟೈಲರ್ ಎಂಬುವನು ಎತ್ತಿಹಿಡಿದ ವಾದವನ್ನು ಒಪ್ಪಿಸುತ್ತಿದ್ದಾಗಲೇ ಬ್ರ್ಯಾಡ್ಲೋಯು ಬರ್ನ್ಸನೆಂಬ ಕಾರಣದಿಂದ ಅವನನ್ನು ವಿಚಾರಣೆಗೆ ಗುರಿಪಡಿಸಬೇಕೆಂದು ಶಾಸನ ಸಭೆಯಲ್ಲಿ

ಹೇಳಿದನು. ಈ ಎಲ್ಲ ಪರಿಸ್ಥಿತಿಯನ್ನು ಕ್ರೋಢೀಕರಿಸಿ ನಾನು ಬಹು ಚುಟುಕು ನುಡಿಗಳಿಂದ 1882ರ ವಸಂತಕಾಲದಲ್ಲಿ ಹೀಗೆ ಬರೆದೆನು:—

"ಹಲವು ನ್ಯಾಯಾಲಯ ವಿಚಾರಣೆಗಳಿಗೀಡಾಗುವುದರಿಂದ ಖವಿಧ್ಯವನ್ನು ಹೊರಿಸಿದ ಕಾಮನ್ಸ್‌ಸಭೆಗಳಲ್ಲಿ ಕೆಲಕಾಲ ಮಾತ್ರವಿದ್ದ ಈ Parliamentary Declaration Bill ಇದು ಹಿಂದಾಗಿದೆ. ನಾಸ್ತಿಕರನ್ನು ಈಶ್ವರನಿಂದಕರೆಂದು ಆರೋಪಿಸಿ ವಿಚಾರಣೆಗೀಡು ಮಾಡಲು House of Commons ಇದು ನಿರಾಕಾರವನ್ನು ಬಲಾತ್ಕರಿಸುತ್ತ. Hall of Science ಇಲ್ಲಿ ನಡೆಯುತ್ತಿದ್ದ ವಿಜ್ಞಾನ ಪಾಠಗಳ ವಿರುದ್ಧವಾಗಿ ಕ್ಷುಲ್ಲಕ ಹಾಗೂ ಕ್ರೂರ ಪ್ರತಿಭಟನೆಗಳನ್ನು ನಡೆಸಿದರು, ಚಾರ್ಲ್ಸ್ ಬ್ರಾಡ್ಲೆಯನ್ನು Bankruptcy Court-ನಲ್ಲಿ ತಂದು ನಿಲ್ಲಿಸಿದರು. Mr. Newdegate ಇವನ ಹೇಯವಾದ ದುಷ್ಟತನದ ಪ್ರಯತ್ನವೆಲ್ಲ ಧಾರ್ಮಿಕ ಮತ್ತು ಮತಭ್ರಾಂತಿಯಿಂದ ಕೂಡಿದ ಕ್ರೈಸ್ತಪಂಥದವರ ವೈಶಿಷ್ಟ್ಯದ ಸ್ವೈಸ್ಯವಾಗಿ ಕೂಡಿ ಹಿಂದೆ ಅವರನ್ನು ವಾದ ವಿವಾದಗಳಲ್ಲಿ ಸೋಲಿಸಿ ಸ್ತಬ್ಧರಾಗಿಸಿದವರನ್ನು ಈಗ ಹಿಂಸಾತ್ಮಕವಾಗಿ ಅವಮಾನಕರ ರೀತಿಯಲ್ಲಿ ಅಡಗಿಸಲೆತ್ನಿಸುತ್ತಾ, ಸೇಡು ತೀರಿಸಿ ಕೊಳ್ಳಲು ಹವಣಿಸುತ್ತಿದ್ದಾರೆ, ಸರಿ; ಅವರು ಬರಲಿ. Free-Thinkers ಈ ವರ್ಗದವರು ಹಿಂದೆಂದೂ ಇಷ್ಟು ಶಕ್ತರಾಗಿರಲಿಲ್ಲ; ಎಂದೂ ಇಷ್ಟು ಒಗ್ಗಟ್ಟಿನಿಂದಿರಲಿಲ್ಲ; ಮತ್ತು ಇಂದು ಇರುವಂತೆ ಅವರು ಹಿಂದೆಂದೂ ಇಷ್ಟು ಸುವ್ಯವಸ್ಥಿತರಾಗಿದ್ದಿಲ್ಲ. ನಾವು ನಮ್ಮ ಧ್ಯೇಯದಲ್ಲಿ ಇರುವ ಶ್ರದ್ಧೆಯಲ್ಲಿ, ಸತ್ಯಕ್ಕೆ ಜಯವಾಗಲೇ ಬೇಕೆಂಬ ನಮ್ಮ ವಿಶ್ವಾಸದಲ್ಲಿ ಮತ್ತು ಪವಿತ್ರವಾದ ಸ್ವತಂತ್ರ ಮನೋಭಾವ ಮತ್ತು ವಾಕ್ ಸ್ವಾತಂತ್ರ್ಯಕ್ಕಾಗಿ ನಾವು ಪ್ರಾಮಾಣಿಕತೆಯಿಂದಲ್ಲದೆ ಬೇರೆಲ್ಲವನ್ನು ತ್ಯಜಿಸಲು ಸಿದ್ಧರಾಗಿರುವುದರಿಂದಲೇ ನಾವು ಬಲಿಷ್ಠರಾಗಿದ್ದೇವೆ. ಬ್ರೂನೋನನ್ನು ಸುಟ್ಟ, ಗೆಲಿಲಿಯೋನನ್ನು ಕಾರಾಗೃಹಕ್ಕೆ ಒಯ್ದ, ವಾನಿನಿಯನ್ನು ಚಿತ್ರಹಿಂಸೆಗೊಳಪಡಿಸಿದ, ನಜರೇತಿನ ಮಗುವಿನ ರಕ್ತದಿಂದ ತೊಯ್ದ ಕೊಂಡಿ ಕೋಲು ಬೆಗಳನ್ನು ತಮ್ಮ ಕೈಗಳಲ್ಲಿ ಹಿಡಿದ, ಮತ್ತು ಮಾನವನ ಮೇಲೆ ದ್ವೇಷವನ್ನು ದೇವರಲ್ಲಿ ಪ್ರೀತಿಯನ್ನು ತಮ್ಮ ಹೃದಯದಲ್ಲಿ ಹೊತ್ತವರ ಉತ್ತರಾಧಿಕಾರಿಗಳನ್ನು ನಾವು ದಿಟ್ಟತನದಿಂದ ಮತ್ತು ಧೈರ್ಯದಿಂದ ಕಾಯುತ್ತಿದ್ದೇವೆ."

ಅಧ್ಯಾಯ ೧೨

ಐರಿಷ್ ಹೋರಾಟದಲ್ಲಿ.

ಮತೀಯ ಕ್ಷೇತ್ರದಲ್ಲಿ ನಡೆಸಿದ ಅವಿಶ್ರಾಂತವಾದ ಈ ಎಲ್ಲ ಹೋರಾಟಗಳು ಶ್ರೀ ಫಾರ್‍ಸ್ಟರ್ (Mr. Forster) ಇವನ Coercion Act ಇದರ ಹಿಡಿತಕ್ಕೆ ಸಿಕ್ಕು ತತ್ತರಿಸುತ್ತಿದ್ದ ಐರ್ಲೆಂಡಿನ ಭೂಹಿಡುವಳಿಯು ನನಗೆ ಅತಿ ಪ್ರಿಯವಾಗಿತ್ತಾದರೂ ಅದರ ಪರ ವಹಿಸುತ್ತ ನನ್ನನ್ನು ಕುರುಡಾಗಿಸಲಿಲ್ಲ. ನಾನು Coercion in Ireland & its Results ಎಂಬುದಾಗಿ ಆ ಕಾನೂನಿನ ದುಷ್ಪರಿಣಾಮವನ್ನು ಕುರಿತಾಗಿ ಬರೆದ ಲೇಖನವು ಕಿರುಹೊತ್ತಿಗೆಯ ರೂಪದಲ್ಲಿ ಪ್ರಕಟವಾಗಿ ಎಲ್ಲೆಡೆಯೂ ಪ್ರಚಾರವಾಯಿತು.

ಭೂಹಿಡುವಳಿಯಿಂದ ಹೊರಹಾಕುವುದಕ್ಕೆ ವಿರೋಧವಾಗಿ ನಾನು ವಾದಿಸಿದೆನು. ಆ ವರ್ಷದ ಮಾರ್ಚ್ ವರೆಗಿನ ಮೊದಲ ಮೂರು ತಿಂಗಳಲ್ಲಿ 7,020 ಜನರನ್ನು ಆ ರೀತಿ ಬಲಾತ್ಕಾರವಾಗಿ ಹೊರಹಾಕಿದ್ದರು. ಬರೀ ಸಂಶಯದಿಂದ ಸೆರೆಮನೆಯಲ್ಲಿದ್ದವರ ವಿಚಾರಣೆಗಾಗಿ ಭೂಹಿಡುವಳಿ ಕಾನೂನಿಂದ ಕಷ್ಟ ನಿವಾರಣೆಯಾಗಬಹುದೆಂದು ಮತ್ತು ಆ ತೊಡಕುಗಳಿಗೆ ವಿರೋಧವಾಗಿ ಭೂಹಿಡುವಳಿ ಕಾನೂನು ಜಾರಿಗೆ ಬರುವ ಮುಂಚೆಯೇ ನಷ್ಟವನ್ನು ಭರ್ತಿಗೊಳಿಸಬೇಕೆಂದು, ಐರ್ಲೆಂಡಿನ ಎಲ್ಲ ಬಂದಿಗಳನ್ನು ಬಿಡುಗಡೆ ಮಾಡುವ ವರೆಗೆ ಮಾತ್ರವಲ್ಲ, ಧೈರ್ಯಶಾಲಿ ದೇಶಪ್ರೇಮಿ ಆ Michael Davitt ಇವನು ಸ್ವಾತಂತ್ರ್ಯವನ್ನು ಪಡೆದು ಪುನಃ ಐರ್ಲೆಂಡಿನ ಮಣ್ಣಿಗೆ ಬರುವ ವರೆಗೆ ಐರಿಷ್ ಜನರ ಅಸಮಾಧಾನವನ್ನು ನಿವಾರಿಸಲು ಯಾವೊಂದೂ ಸಂದರ್ಭವಿಲ್ಲವೆಂದು ನಾನು ಪ್ರತಿಪಾದಿಸಿದೆನು. ಹೇಗೂ ಕಡೆಗೆ ಸರಕಾರವು ಅದರ ಧೋರಣೆಯನ್ನು ಪುನಃ ಪರಿಶೀಲಿಸಿ ನ್ಯಾಯವಾದ ಕ್ರಮವನ್ನು ಕೈಕೊಳ್ಳಲು ನಿರ್ಧರಿಸಿತು. ಸರಕಾರದ ಸಂಶಯಕ್ಕೆ ಒಳಗಾಗಿ ಸೆರೆಯಲ್ಲಿದ್ದವರನ್ನು ಬಿಡುಗಡೆ ಮಾಡುವ ಆಜ್ಞೆಯನ್ನು ಹೊರಿಸಿ ಲಾರ್ಡ್ ಫ್ರೆಡರಿಕ್ ಕ್ಯಾವಂಡಿಶ್ ಇವನನ್ನು ಐರ್ಲೆಂಡಿಗೆ ಕಳುಹಿಸಿದರು. ಅವನು ಅಲ್ಲಿಗೆ ತಲುಪುವಷ್ಟರಲ್ಲಿಯೇ ಅವನು ಸಂದು ಚೂರಿಯ ಇರಿತಕ್ಕೆ ಒಳಗಾಗಿ ಸತ್ತುಬಿದ್ದು ನಿರಪರಾಧಿಯಾದ ಶಾಂತಿದೂತನೊಬ್ಬನು ಆ ರೀತಿಯಾಗಿ ಬರೀ ರಕ್ತಪಿಪಾಸು ಹಾಗೂ ಹೇಡಿತನದ ಕೊಲೆಗೆ ಆಹುತಿಯಾದನು. ನಾನು ಆಗ ಬ್ಲ್ಯಾಕ್‌ಬರ್ನ್‌ನಲ್ಲಿ ಐರಿಷ್ ಸಮಸ್ಯೆಯ ಬಗ್ಗೆ ಭಾಷಣಕ್ಕೆಂದು ಹೋಗಿದ್ದೆನು. ಶಾಂತಿಯು

ಇನ್ನು ಕ್ಷಿಪ್ರದಲ್ಲಿಯೇ ಉಂಟಾಗುವುದೆಂದು ಅತಿ ಸಂತೋಷದಿಂದ ನಾನು ವೇದಿಕೆಯತ್ತ ನಡೆಯುತ್ತಿದ್ದಾಗ ಆ ಕ್ರಾಂತಿಯನ್ನು ಕುರಿತಾದ ತಂತಿ ವಾರ್ತೆಯೊಂದನ್ನು ನನ್ನ ಕೈಗೆ ಕೊಡಿಸಲಾಯಿತು, ಆಗ ನನಗುಂಟಾದ, ಮತ್ತು ನನಗೆ ನಂಬಲಿಕ್ಕೆ ಸಾಧ್ಯವೇ ಆಗದಿದ್ದಷ್ಟು ಮನೋಪ್ರೀತಿಯನ್ನು ಮನೋದ್ವೇಗದ ತೆರೆಯ ಕಾವನ್ನು ನಾನು ಎಂದೂ ಮರೆಯಲಾರೆನು, ಅವರು ಝಾರನನ್ನು ಮಾತ್ರ ಕೊಂದುದಲ್ಲ; ಎರಡು ರಾಷ್ಟ್ರಗಳೊಳಗೆ ಬೆಳೆಯಬಹುದೆಂದು ಆಶಿಸಲಾಗಿದ್ದ ಸ್ನೇಹ ಆಶೆ ಆಕಾಂಕ್ಷೆಗಳನ್ನೇ ಕೊಲೆಮಾಡಿದರು, ಹಾಗಾಗಿ ಕೊನೆಗೊಳ್ಳಲು ಪ್ರಾರಂಭವಾಗಿದ್ದ ಆ ಪರಸ್ಪರ ದ್ವೇಷವೆಂಬ ಕಂದರವನ್ನು ಇನ್ನಷ್ಟು ವಿಶಾಲವಾಗಿಸಿದರು," ಎಂಬುದಾಗಿ ನಾನು ಹಿಂದಿರುವ ದಿನಗಳ ನಂತರ ಬರೆದೆನು, ಆಹಾ, ಆ ಕ್ರಾಂತಿಯು ಅದರ ಉದ್ದೇಶದಲ್ಲಿ ಜಯಪ್ರದವಾಗಲು ಸರಕಾರವನ್ನು ಹೊಸ ಬಗೆಯ ಅಪ್ರಮತ್ತಕ್ಕೆ ಬೇಗನೆ ಕೈಹಚ್ಚುವಂತೆ ಮಾಡಿತು, ಅಷ್ಟೇ ತ್ವರಿತವಾಗಿ ಹೊಸ ಹಿಂದು ಬಲಾತ್ಕಾರಕ ಮಸೂದೆ (Coercion Bill) ಇದನ್ನು ಶಾಸನ ಸಭೆಯಲ್ಲಿ ಚರ್ಚೆಗೆ ತಂದಿತು. ಸಾರ್ವಜನಿಕರಲ್ಲಿದ್ದ ಉದ್ವೇಗವನ್ನು ಎದುರಿಸಿ ಪರಿಹಾರವನ್ನು ಬಲಾತ್ಕಾರದಿಂದ ಹೇರಬೇಡಿ, ಎಂದು ನಾನು ವಾದಿಸಿದೆನು, ಈ ಸಂದರ್ಭದಲ್ಲಿ ಐರಿಷ್ ಸಮಸ್ಯೆಯನ್ನು ಕುರಿತು ತೀರ್ಮಾನಿಸುವುದಕ್ಕೆ ತುಂಬಾ ಕಷ್ಟವಿದೆ. ಕೆಲವರು ಮಾಡಿದ ಅಪರಾಧಕ್ಕಾಗಿ ಇಡೀ ರಾಷ್ಟ್ರದ ಮೇಲೆ ತಮ್ಮ ಸೇಡನ್ನು ತೀರಿಸಲು ಟೋರೀ ಪಕ್ಷದವರು ಕೂಗಿಟ್ಟಿಸುತ್ತಿದ್ದಾರೆ, ವಿಗ್ ಪಕ್ಷದವರು ಆ ಕೋಲಾಹಲದ ತೆರೆಯನ್ನು ಉಕ್ಕೇರಿಸುತ್ತಿದ್ದಾರೆ; ಆ ತೆರೆಯಲ್ಲಿ ಹಲವು ತೀವ್ರಗಾಮಿಗಳು ಸಿಲುಕಿ ಕೊಚ್ಚಿಹೋಗಿದ್ದಾರೆ, ತಾವು ಏನಾದರೂ ಮಾಡಲೇ ಬೇಕೆಂದು ಹಾತೊರೆದು ಹಾಗೆ ಮಾಡಬೇಕಾದ್ದು ಹಿತವೋ ಅಲ್ಲವೋ ಎಂಬುದನ್ನು ಮರೆತು ಅವರು ಸರಕಾರವು ಕೈಗೊಂಡ ಕಾರ್ಯಕ್ರಮವನ್ನು ಒಪ್ಪುತ್ತಿದ್ದಾರೆ. ಕೆಲವರು ಅದು ಸರಿಯಲ್ಲವೆಂದು ತಿಳಿದವರಾಗಿದ್ದರೂ ಆ ಬಲಾತ್ಕಾರದ ಮಸೂದೆಯನ್ನು ಖಾನೂನು ರೂಪದಲ್ಲಿ ತರುವುದನ್ನು ತಡೆದಿಡಲು ಸಮರ್ಥರಾದವರು ಅಲ್ಪ ಸಂಖ್ಯೆಯಲ್ಲಿ ಅಂತಹವರು ಇದ್ದಾರೆ, ಅಕ್ರಮದ ಕಡೆಗೆ ದನಿಯೆತ್ತಿ ಅದನ್ನು ವಿರೋಧಿಸಲು ಮತ್ತು ಅದನ್ನು ತಡೆದಿಡಲು ಆಸಕ್ತರಾಗಿರುವವರು ನಾವು ಕೆಲವರೇ ಆದರೂ ಈ ಹೊಸ ಖಾನೂನು ಅಲ್ಪ ಕಾಲ ಮಾತ್ರ ಇರುವಂತೆಯೂ ಅದನ್ನು ಬೇಗನೆ ತೆಗೆದುಹಾಕುವಂತೆಯೂ ಚಳವಳಿಯನ್ನು ಹೂಡಿದ್ದೇವೆ. ಸಾರ್ವಜನಿಕರು ಈ ಮಸೂದೆಯ ಅನ್ಯಾಯವನ್ನು ತಿಳಿದಾಗ ನಮ್ಮ ಹೋರಾಟದ ಆದರ್ಶವು ಮುಗಿದಂತಾಗುತ್ತದೆ. ಕಡೆಗೆ ಅದರ ನಿಜವಾದ ಒಳಗುಟ್ಟನ್ನು ತಿಳಿದಾಗ ಅದು ತಿರಸ್ಕೃತ

ಹಾಗುತ್ತದೆ. ಈ ಪ್ರತೀಕಾರದ ಮನೋವೃತ್ತಿಗೆ ಎಡೆಗೊಟ್ಟ ಕೊಲೆಗಳು ದೇಶವನ್ನೇ ಆಶ್ಚರ್ಯಚಕಿತ ಮಾಡಿತಲ್ಲದೆ ಅದು ಸಂತೋಷ ಬರುವಂತೆ ಗಳ ಬದಲಾಗಿ ಜನವನ್ನು ಕತ್ತಲಲ್ಲಿ ತಂಗಿಸುತ್ತಿದ್ದ ದಿಗ್ಭ್ರಮೆಗೊಳಿಸಿತು. ಈ ಹೊಸ ಸರ್ಕಾರವನ್ನು ಸಂತೋಷದಿಂದ ಸ್ವಾಗತಿಸಲಾಯಿತು; ಅದರ ಕಾರಣವೆ ಮತ್ತು ಸ್ವಾತಂತ್ರ್ಯವನ್ನು ಸಂಯೋಜಿಸಿ ಬರೆದ ಆಜ್ಞೆಗೆ ತಕ್ಕ ಹಾಗೆ ಅದರ ಕಾರ್ಯವು ಸಾಗುವ ಮೊದಲೇ ಆ ಹೊಸ ಸರ್ಕಾರವನ್ನು ತೆಗೆದು ಹೊಂದಿ ರಾಯಭಾರಿಯನ್ನು ಕೊಲೆಮಾಡಲಾಯಿತು. ಆ ಪ್ರತೀಕಾರದ ಮನೋವೃತ್ತಿಗೆ ಜನರು ಉದಾರವನ್ನು ತೋರಿದವರಲ್ಲಿ ಆಶ್ಚರ್ಯವೇನೂ ಇಲ್ಲ. ಕೆಲವು ಕೊಲೆಗಡುಕರ ಹಾನಿಕೃತ್ಯದ ಪರಿಣಾಮವನ್ನು ಎಲ್ಲಾ ಐರಿಷ್ ಜನರೂ ತಪ್ಪುತ್ತದೆ, ರಾಜಕೀಯ ಚಳವಳಿ ಮತ್ತು ಜನರ ರೀತಿ, ನೀತಿ, ಕಾಂತಿ, ಶಿಕ್ಷೆಗಳ ಬಗೆ ರಾಜಕೀಯ ಸತ್ಯಾಗ್ರಹಿಯನ್ನು ಕಾರಣಾಗಿ ಜನರಿಗಿದ್ದ ನಿರುತ್ಸಾಹ ಸ್ಥಿತಿಯನ್ನು ನಿವಾರಿಸುತ್ತಿದ್ದೆನು, ಸರ್ಕಾರದ ಈ ಹಂತಕಯು ಐರ್ಲೆಂಡಿನ ಜನರ ಬಾಯಿಯನ್ನು ಕಟ್ಟುತ್ತದಲ್ಲದೆ ನಾವು ಕಾಣುವಂತೆ ಎಲ್ಲಾ ರಾಜಕೀಯ ಪ್ರಯತ್ನಗಳು ವ್ಯರ್ಥಗಳು, ಸಾಮೂಹಿಕ ವಿಗ್ರಹದ ಮತ್ತು ಪ್ರೋತ್ಸಾಹ ದಯೆಯೊಳಗಾಗಿಸುವಂತೆ ಮಾಡುತ್ತವೆ. ತಮ್ಮ ಆಸ್ತಿಯಲ್ಲಿ ನೆಲೆಸಿದ ಜಮೀನ್ದಾರರ ಆಶ್ರಯದಲ್ಲಿ ದುಡಿಯುವವರ ಗೋಳು, ಮೊಲೆಪ್ಪೂವ ಹಾಗುವನ್ನು ಕೊಂಡು ಕಷ್ಟಪಟ್ಟು ಬದಿಯಲ್ಲಿಯೇ ಸಾಯುವರಾಯು, ಕೆಲವು ಶಿಲ್ಲಿಂಗುಗಳ ಬಾಡಿಗೆಯನ್ನು ತೆರುವ, ತಲೆಸೋವಿಗೊಳಗಾಗುವಾಗ ತನಗೆ ಪ್ರಿಯರಾದವರ ಜೀವವೂ ಅಷ್ಟು ಮೌಲ್ಯವೆಂಬುದನ್ನು ಮನಸ್ಸಿಗೆ ತೋರುವ ರೈತರ ಪಾಡನ್ನು ಅಳೆಯುತ್ತಿದ್ದನು. ಈ ಹೊಸ ಕಾನೂನನ್ನು ಟೀಕಿಸಿದನು, "ಸಂಶಯದಿಂದ ವಿಚಾರಣೆ, ಸಾರ್ವಜನಿಕ ಸಭೆಗಳನ್ನು ನಿಷೇಧಿಸುವ ಹಕ್ಕು, ಪತ್ರಿಕಾ ಸ್ವಾತಂತ್ರ್ಯ, ಮಾಡದ ಮನೆಯ ಪಾವಿತ್ರ್ಯವೆಲ್ಲವೂ ಐರ್ಲೆಂಡಿನ ಜವಾಬ್ದಾರಿ ಪ್ರಭುವರ್ಗದವರ ಇಚ್ಛೆಯಂತೆ ಇರುವಲ್ಲಿ ವೈಯಕ್ತಿಕ ಸ್ವಾತಂತ್ರ್ಯವು ಪ್ರತಿಯೊಬ್ಬ ಪೋಲೀಸರ ಮನಸ್ಸಿನ ಇಚ್ಛೆಯನ್ನವಲಂಬಿಸಿ ಇರುವುದೇ?" 1882 ರ ಕಾಲದಲ್ಲಿ ಐರ್ಲೆಂಡನ್ನು ಇಂಗ್ಲೆಂಡು ಆಳುತ್ತಿದ್ದ ಸ್ಥಿತಿಗತಿಯು ಹೀಗಿತ್ತು. ಅಲ್ಲದೆ ಅಪರಾಧ, ಅತ್ಯಾಚಾರಗಳನ್ನು ತಡೆಗಟ್ಟುವುದಕ್ಕಾಗಿ ಈ ಬಗೆಯ ಕಾನೂನು ಸಂದರ್ಭದ ಜಾರಿಗೊಳಿಸಲಾಗಿತ್ತು. ಆದರೆ ನಾನು ಇದನ್ನು ಕಟುವಾಗಿ ಹೇಳಿದೆನು. ಇದರಿಂದಲೇ ಕೊಲೆಪಾತಕರೂ ಆ ವಿಧಿಗನುಗುಣವಾಗಿ ಬಯಲಾದರೆಂಬುದೇ ನಿಜವಾದ ವಿಷಯವಾಗಿದೆ. ಈ ಹೊಸ ಸರ್ಕಾರದಿಂದ ಇಂಗ್ಲೆಂಡ್ ಮತ್ತು ಐರ್ಲೆಂಡ್ ರಾಷ್ಟ್ರಗಳು ಅನುಮೋದನವಾದಂತಾದವು.

ಈ ಸ್ನೇಹಪರ ನ್ಯಾಯವನ್ನು ಸಾಧಿಸುವುದೆಂದೂ ಈ ಎರಡು ದೇಶಗಳು ಚರಿತ್ರೆಯಲ್ಲಿ ಮೊದಲನೇ ಬಾರಿಗೆ ಕೈಗೆ ಕೈಯಿತ್ತು ಸಖ್ಯವನ್ನು ಬೆಳೆಸುವುದೆಂದೂ ಅವರು ತಿಳಿದಿದ್ದರು, ಆದರೆ ಹಾಗೆ ಆಗದಂತೆ ಅವರು ಹೊಸ ಸಂದರ್ಭವೊಂದನ್ನು ಆಗಿದರು, ಇಂಗ್ಲೆಂಡಿನ ಜನರು ಅದನ್ನು ದಾಟಿ ಹೋಗಲಾರರೆಂದು ಎಣಿಸಿದರು, ಆ ರೀತಿ ಅವರು ಕಟ್ಟಿದ ಸ್ನೇಹಸೇತುವಿಗಾಗಿ ರಕ್ತದ ಹೊಳೆಯನ್ನೇ ಹರಿಯಿಸಿದರು ಅಲ್ಲದೆ ಹೊಸದಾಗಿ ತೆರೆಯಲ್ಪಟ್ಟ ಸಮೃದ್ಧಿ ಶಾಂತಿಗಳ ಹೆಬ್ಬಾಗಿಲಿಗಾಗಿ ಎರಡು ಶವಗಳನ್ನು ಎಸೆದರು; ಹಾಗೆ ಅವರು ಜಯಶೀಲರಾದರು,

ಈ ರಾಜಕೀಯ ಮತ್ತು ಸಾಮಾಜಿಕ ವಾದಗಳು ಸಾರತ್ಯಲಿಯ ರಭಸದಲ್ಲಿ ತತ್ವಜ್ಞಾನ ಸಂಸ್ಥೆಯು ದನಿಯುಸುರು ತಾತ್ವಿಕ ಸೂತ್ರಗಳ ರೂಪದಲ್ಲಿ ನನಗೆ ಕೇಳಿಸಿದಾಗ ನಾನು ಆಗರದೆನು; "ಭಾವರೂಪ ಆವೇಶಪೂರ್ಣವೂ ವಿಷಯಪೂರ್ಣವೂ ಆದ ಗತ ಜನ್ಮದ ಪವರ್ತತ್ತಗಳ ಕಲ್ಪನೆಯು ಸ್ಪಷ್ಟವಾಗಿಯುಕ್ತಲ್ಲದೆ ಅದರ ಸದಸ್ಯತ್ವಕ್ಕೆ ನಿಶ್ಚಿತ ಆಧಾರ್ಯಗಳು ಅವಶ್ಯಕತೆಯೇನೂ ಇಲ್ಲ, 'ಸತ್ತವರ ಭೂತ (ಪ್ರೇತಾತ್ಮ)ಗಳನ್ನು ಕರೆತರುವ ಒಂದು ಬಗೆಯ ವಿಸ್ಮಯಕಾರಕ ನಿರಸತೆ ಮತ್ತು ಭೌತಿಕತೆಯ ಹೊರಗೆ ಮತ್ತು ಅದರಿಂದ ಬೇರ್ಪಟ್ಟು ಇರುವ ಒಂದು ಬಗೆಯ ಅಸ್ತಿತ್ವ"ವನ್ನು ಕುರಿತು ಕರ್ನಲ್ ಆಲ್ಕಾಟ್ ಇವರ ಹೇಳಿಯನ್ನು ಈ ತತ್ವಜ್ಞಾನ ಸಂಸ್ಥೆಯು ನಂಬುತ್ತಿಂದು ನಾನು ಊಹಿಸುತ್ತಿದ್ದೆನು, ಈ ಆಪಪಾದನೆಯು ನನಗೆ ಹಿಂದೂ ಮತದ Free-Thinkers ಇವರಿಂದ ದೊರೆಯುತ್ತಲ್ಲದೆ ಅವರು ಸಿವಸವು ಪ್ರತಿಪಾದಿಗಳು ತತ್ವಜ್ಞಾನ (Theosophy) ಸಂಸ್ಥೆಗೆ ಸೇರುವುದರ ಬಗ್ಗೆ ಮತ್ತು ತತ್ವಜ್ಞಾನಿಗಳನ್ನು ಕೇಳಿಯ 'ಭೌತಿಕ ವಾದಕ್ಕೆ ಸೇರಿಸಿಕೊಳ್ಳುವ ವಿಷಯವಾಗಿ ನನ್ನ ಅಭಿಪ್ರಾಯವನ್ನು ಕೇಳಿದರು, ತತ್ವಜ್ಞಾನಿ (Theosophist)ಗಳನ್ನು ಸೇರಿಸಿಕೊಳ್ಳಲಾಗುವುದಿಲ್ಲವೆಂದು ತಿರಸ್ಕರಿಸಲು ಭೌತಿಕವಾದಿಗಳಿಗೆ ಹಕ್ಕಿಲ್ಲವಾದರೂ ಅವರು ಇಚ್ಛಿಸಿದರೆ ಅವರ ಸದಸ್ಯರ ಪ್ರಕಾರ, ತತ್ವಜ್ಞಾನದ ರಹಸ್ಯವಾದ ಮತ್ತು ಭೌತಿಕವಾದದ ವೈಜ್ಞಾನಿಕ ವಾಸ್ತವಿಕತೆಗಳೊಳಗೆ ತೀವ್ರ ಭಿನ್ನತೆ ಇದ್ದೇ ಇದೆ. ಭೌತಿಕವಾದವನ್ನು ಅನುಸರಿಸುವುದರಿಂದ ಈ ವಿಷಯದ ಜೀವನವನ್ನು ಹೆಚ್ಚು ನೆಚ್ಚುತ್ತೇವೆ, ಅಲ್ಲದೆ ಪಾರಮಾರ್ಥಿಕತೆಯನ್ನು ನಂಬುವುದಕ್ಕೆ ಅದು ಅವಕಾಶವನ್ನೀಯುತ್ತಿರಲ್ಲ, ಅಲ್ಲದೆ ನಮ್ಮ ಸಂಸ್ಥೆಗೆ ಸೇರಿದ ಸದಸ್ಯರು ಬೇರೊಂದು ತತ್ವವನ್ನು ಪ್ರತಿಪಾದಿಸುವ ಸಂಘಕ್ಕೆ ಸೇರಲು ಸಾಧ್ಯವಿರಲಿಲ್ಲ,

ಕ್ರಿ. ಶ. 1882 ರ ಆಗಸ್ಟ್‌ನಲ್ಲಿ ಹೆಚ್. ಪಿ. ಬ್ಲಾವಟ್‌ಸ್ಕಿ ಇವರು "Theosophist" ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆ

ಬಿಟ್ಟಳು. ನನ್ನ ಹಿಂದಿನ ಜೀವನದ ವಾಕ್ಯಗಳಿಂದಲೇ ಮೇಲಿನ ಅವಳು ತನ್ನ ಉದಾರಗುಣದಿಂದಲೇ ಹೀಗೆ ಟೀಕೆಯನ್ನು ಬರೆದಳು, "ಸಮಾಜದ ಸಹಜ ಪ್ರವೃತ್ತಿಯನ್ನು ಕುರಿತಾಗಿ ಅನಿರ್ದಿಷ್ಟ ರೀತಿಯಲ್ಲಿ ತಿಳಿಯುವ ಪ್ರಯತ್ನದಲ್ಲಿದ್ದಾಗ ಅದನ್ನು ಬರೆದುದಾಗಿರಬಹುದು, ಬಹು ಮೇಧಾವಿಯೂ ಸಿದ್ಧಾಂತಗಳನ್ನು ಮತ್ತು ಅನಿಯಂತ್ರಿತ ವಿಚಾರಗಳನ್ನು ನಿರೂಪಿಸುವವರೂ ಆಗಿದ್ದು ತನ್ನ ವೈಯಕ್ತಿಕ ಪ್ರತಿಭೆ ಸ್ವಾತಂತ್ರ್ಯಗಳಿಗೆ ಜೀವನವಿಡೀ ಹೋರಾಡಿದವನಾಗಿ ಸಾಮಾಜಿಕ ದ್ವೇಷ ಮತ್ತು ಮತೀಯ ಭ್ರಾಂತಿಯಿಂದ ಅನವಶ್ಯಕ ಹಾಗೂ ಕ್ರೂರ ದಂಡನೆಗೊಳಗಾದ ಅವನು ಹೀಗೆ ಬರೆದುದು ತೀರಾ ಸಂದರ್ಭೋಚಿತ ವಿರೋಧವಾಗಿರುವಂತೆ ನನಗೆ ತೋರುತ್ತದೆ,"

ಹೀಗೆ ಹೇಳಿದನಂತರ ನನ್ನ ಬರಹವನ್ನು ಉದಾಹರಿಸುತ್ತಾ ಅವಳು (ಬ್ಲಾವಟ್‌ಸ್ಕಿ) ಈ ರೀತಿ ಹೇಳಿದ್ದಳು, "ಭೌತಿಕವಾದದ ವೈಜ್ಞಾನಿಕ ವಾಸ್ತವಿಕತೆಯ ತತ್ವಗಳಿಗೆ ನಿಷ್ಠೆಯಿಂದ ಒಪ್ಪುವುದರ ಬದಲಾಗಿ ಕಾಲ್ಪನಿಕವಾದ ವೈಯಕ್ತಿಕ ವೈರ ಸಾಧನೆಗೆ ಸ್ಫೂರ್ತಿಗೊಂಡ ಕೆಲವು ನಿರಾಧಾರ ಸಂಗತಿಗಳನ್ನು ಮದ್ರಾಸಿನ ಕೆಲವು ಕರಪತ್ರಗಳು ಶ್ರೀಮತಿ ಬೆಸೆಂಟ್ ಇವಳಿಗೆ ಮೇಲೆ ಹೇಳಿದ ರೀತಿಯಲ್ಲಿ ಉಸುರಿರಬಹುದೆಂಬುದನ್ನು ಅದಕ್ಕೆ ವ್ಯತಿರಿಕ್ತವಾದ ಸಾಕ್ಷ್ಯವು ದೊರಕುವ ವರೆಗೆ ನಾವು ಹೇಳಲಿಚ್ಛಿಸುತ್ತೇವೆ, "Theosophist" ಪತ್ರಿಕೆಯ ತೀವ್ರಗಾಮಿ ಸಂಪಾದಕೀಯದ ವಿಷಯವಾಗಿ ಅತಿ ಪ್ರಚಾರದ ಮಾತುಗಳನ್ನು ನಂಬಿ ಅವರಿಬ್ಬರೂ ವಿನಾಶಕಾರಕವಾಗಿ ಮೋಸಹೋದವರೆಂದು "National Reformer" ಇದರ ತೀವ್ರಗಾಮಿ ಸಂಪಾದಕರಿಗೆ ನಾವು ಖಂಡಿತವಾಗಿಯೂ ಹೇಳುತ್ತೇವೆ, ಅಲೌಕಿಕವಾದಿಗಳೆಂಬ ಹೆಸರು ಶ್ರೀಮತಿ ಆನಿ ಬೆಸೆಂಟ್ ಮತ್ತು ಚಾರ್ಲ್ಸ್ ಬ್ರಾಡ್ಲೆ ಇವರಿಗೆ ಒಪ್ಪುವಷ್ಟು ಅವರಿಗೆ ಒಪ್ಪಲಾರದು.

ಒಮ್ಮೊಮ್ಮೆ ಅವಳು ಹೇಳುತ್ತಿದ್ದಂತೆ ಇಂಗ್ಲೆಂಡಿನಲ್ಲಿ ನಡೆಯುತ್ತಿದ್ದ ಚಳುವಳಿಯನ್ನು ಕುರಿತಾಗಿ ಹೆಚ್. ಪಿ. ಬ್ಲಾವಟ್‌ಸ್ಕಿಯು ತನ್ನ ಅಭಿಪ್ರಾಯವನ್ನು ಹೇಳುವಾಗ ಅವಳು ವಿಶಾಲ ಹಾಗೂ ಉದಾರವಾದ ನೀತಿಯನ್ನು ಪ್ರತಿಬಿಂಬಿಸುತ್ತಿದ್ದಳು, ಬ್ರಾಡ್ಲೆಯ ಚಟುವಟಿಕೆಗಳು ಮತ್ತು ಅವನ ಶಾಸನ ಸಭಾ ಹೋರಾಟವನ್ನು ಕುರಿತು ತುಂಬಾ ಶ್ಲಾಘಿಸುತ್ತಿದ್ದಳಲ್ಲದೆ ಸ್ವತಂತ್ರ ನೀತಿಯನ್ನು ಪ್ರತಿಪಾದಿಸಿದ ಅವನು ಮಾಡಿದ ಸೇವೆಗಾಗಿ ತುಂಬಾ ಆದರದಿಂದ

ಪ್ರಸ್ತಾಪಿಸುತ್ತಿದ್ದರು, ಪುನಃ: ಆತ್ಮಸ್ಫೂರ್ತಿಗೋಸ್ಕರ ಮಾಡಿದ ಭಾಷಣಗಳ ಬಗ್ಗೆ ಮತ್ತು ಶ್ರೇಷ್ಠ ವಾಗ್ಬಲವನ್ನು ಕುರಿತಾಗಿ ಹಾಗೆ ಯಾರೂ ಹೇಳಿಕೊಳ್ಳದೇ ಇದ್ದರೂ ಅದನ್ನು ಕುರಿತು ಪ್ರಶಂಸಿಸುವಾಗ ಅವರು ನನ್ನನ್ನು ಕುರಿತು ಹೀಗೆಂದರು! *

"ನ್ಯಾಯವಾಗಿ ವಿಶೇಷ ಶಕ್ತಿಯನ್ನು ಹೊಂದಿದ ತನ್ನ ವಾಗ್ಬಲ ಮತ್ತು ವಿದ್ವತ್ತಿನಲ್ಲಿ ಪಳಗಿದ ಇನ್ನೊಬ್ಬ ಮಹಿಳಾ ವಾಗ್ಮಿಯಾದ ಆ [illegible] ಶ್ರೀಮತಿ ಆನಿ ಬೆಸೆಂಟ್ ಇವರು ಭೌತಿಕ ಶಕ್ತಿಗಳಲ್ಲಿ ವಿಶ್ವಾಸವಿರದೆ ಅದೇನಾ ನಿಜವಾಗಿ ಹೇಳುವವರಿದ್ದರೆ, ತನ್ನ ಆತ್ಮಶಕ್ತಿಯನ್ನು ಸಹ ನಂಬದೆ ಅತ್ಯಂತ ಉದ್ವೇಗಕರವೂ ಬುದ್ಧಿಪೂರ್ವಕವೂ ಆದ ವಿಚಾರಗಳನ್ನು ಬರೆಯುತ್ತಿರುವರು, ಸ್ಫೂರ್ತಿಯಿಂದ ಪ್ರೇರಿತರಾಗಿ ಪ್ರಚಂಡ ಭಾಷಣಗಳನ್ನು ತನ್ನ ಜೀವಮಾನವೆಲ್ಲಾ ಕೊಡುತ್ತಿರುವ ಇಂಗ್ಲಿಷ ಮಹಿಳೆಯು ಪ್ರತಿಪಾದಿಸಿದ ವಿಷಯಗಳಿಗಿಂತ ಪ[illegible] ಹೆಚ್ಚಾಗಿ ಮಾನವ ಜನಾಂಗಕ್ಕೆ ಹಿತಕರವಾಗಿರುವ ಹಲವು ವಿಷಯಗಳು ಅವರ ಭಾಷಣಗಳು ಮತ್ತು ಬರವಣಿಗೆಗಳಲ್ಲಿ ವಿವರಣೆಯಿಂದ ಸಾರಾಂಶವಾಗಿ ಹೇಳಬಹುದು,"

ನಾನು ಅವರನ್ನು (ಬ್ಲಾವಟ್‌ಸ್ಕಿಯವರನ್ನು) ಅಂದೇ ಕಂಡಿದ್ದರೆ, ಅಥವಾ ಅವರ ಬರಹಗಳನ್ನೇನಾದರೂ ನೋಡಿದ್ದರೆ ನಾನು ಅವರ ಶಿಷ್ಯಳಾಗಿರುತ್ತಿದ್ದೆನೆಂದು ಇತ್ತೀಚೆಗೆ ಬಹುವೇಳೆ ನಾನು ವಿಸ್ಮಯದಿಂದ ನೆನೆಯುತ್ತೇನೆ. ಹೀಗೂ ನಾನು ಹಿಂದಕ್ಕೆ ನಿಲ್ಲಲಾರೆನು, ಪಾಶ್ಚಾತ್ಯ ವೈಜ್ಞಾನಿಕ ಪ್ರಭಾವದ ಪ್ರಗತಿಯನ್ನು ಕಂಡು ಅದಕ್ಕೆ ನಾನು ವಿಶೇಷವಾಗಿ ಬೆರಗಾಗಿದ್ದೆನಲ್ಲದೆ ನಾನು ನಡೆದುದೇ ಸರಿಯೆಂಬ ಹಠವಾದನೆ, ಹಿಂದು ತತ್ವಕ್ಕಾಗಿ ಹೋರಾಟ, ಸ್ವಯಂಸ್ಫೂರ್ತಿಯುತ ಆದೇಶಕ್ಕೆ ವಿಪರೀತವಾಗಿ ಒಳಗಾಗಿರುವರೆ, ಮತ್ತು ಹೊಗಳಿಕೆ ಮತ್ತು ತೆಗಳಿಕೆಗೆ ತುಂಬಾ ಉದ್ವೇಗಗೊಳ್ಳುತ್ತಿದ್ದುದು ನನ್ನ ಸ್ವಭಾವವಾಗಿತ್ತು. ಮಾನವರ ಸಂಸ್ಕೃತಿಗಳನ್ನು ಕುರಿತಾಗಿ ಬಹಳ ಆಳವಾಗಿ ಪರಿಶೀಲಿಸ ಅದರ ಬಗೆ ಉದಾರವನ್ನೆತ್ತಲು, ತಪ್ಪುಗಳ ಆತ್ಮನಾದವನ್ನೆತ್ತಿ ಹೋರಾಡುವ ಪರರನ್ನು ಇನ್ನೂ ಜೋರಾಗಿ ಕೇಳಲು ಜನಸೇವೆಯನ್ನು ಶಿಕ್ಷಣಾತ್ಮಕವಾಗಿ ಕೈಗೊಳ್ಳಲು ಬೇಕಾಗುವ ಸ್ಪಷ್ಟವಾದ ಲಾಕ್ಷಣಿಕ ತಿಳಿವಳಿಕೆ, ಮತ್ತು ನಾನು ದೊರಕಿಸಿಕೊಂಡ ಜ್ಞಾನವು ಬಹಳ ಅಲ್ಪ

* "Theosophist" ಪತ್ರಿಕೆ - ಜೂನ್ 1882.

ವೆಂಬುದರ ತಿಳುವಳಿಕೆ ವಿವರಿಸಿರುವ ನನ್ನ ಮನೋದ್ವೇಗವನ್ನೆಲ್ಲ ತೊರೆದು ರಹಸ್ಯ ಶಾಸ್ತ್ರ (Secret- Doctrine) ಇದರ ಬೋಧನೆಯು ಶಾಂತಿಗೆ ಹಾದಿಯಿಂದ ಸೇರಿ ಆತ್ಮಜ್ಞಾನವನ್ನು ಅಭ್ಯಸಿಸಿ ಬೇಕೆಂದು ನನಗನ್ನಿಸಿತು,

ಸರ್ ಹೆನ್ರಿ ಟೈಲರ್ ಇವರು ಮತ್ತು ಇವರ ಮಿತ್ರರು ನಾವು ದೇವರನ್ನು ನಿಂದಿಸಿದವರೆಂಬ ಕಾರಣದಿಂದ ವಿಚಾರಣೆಗೆ ಗುರಿ ಪಡಿಸಲು ಬಹುಕಾಲದಿಂದ ಪ್ರಯತ್ನಿಸುತ್ತಿದ್ದುದು ಫಲಕಾರಿಯಾದಂತೆ ತೋರಿತು, 1882 ರ ಜುಲೈಯಲ್ಲಿ Freethinkers ಪತ್ರಿಕೆಯ ಸಂಪಾದಕ, ಮುದ್ರಕರನ್ನೆಲ್ಲ ಈಶ್ವರ ನಿಂದಕರೆಂದು ಆಪಾದಿಸಿ ಹೆನ್ರಿ ಟೈಲರ್ ಇವನೇ ಅವರನ್ನು ವಿಚಾರಣೆಗೆ ಒಳ ಮಾಡಿದನು, ಬ್ರ್ಯಾಡ್ಲೆಯನ್ನು ಅವರೊಡನೆ ಸೇರಿಸಲು ಪ್ರಯತ್ನಿಸಲಾಗಿತ್ತು, ಆದ್ದರಿಂದ ಬ್ರ್ಯಾಡ್ಲೆಯು ಆ ಪತ್ರಿಕೆಯ ಕೆಲವು ಪ್ರತಿಗಳನ್ನು ಮಾರಾಟಮಾಡಿದರೆ ಆ ಪತ್ರಿಕೆಯ ಸಂಪಾದಕ ಮತ್ತು ಮುದ್ರಕರ ಮೇಲಿರುವ ಆರೋಪಣೆಗಳನ್ನು ತೆಗೆದುಹಾಕಬಹುದು ಎಂದು ವಕೀಲರು ಹೇಳಿದರು, ತನ್ನ ಸ್ನೇಹಿತರನ್ನು ರಕ್ಷಿಸಲು ಅವರು ಒಪ್ಪಿಕೊಂಡರು. ಆದರೆ ಸರ್ ಹೆನ್ರಿ ಟೈಲರ್ ಇವನ ಉದ್ದೇಶವನ್ನು ಕುರಿತಾಗಿ ಬ್ರ್ಯಾಡ್ಲೆಯು ಇಂತೆಂದನು:—

"--- Hall of Science ನಲ್ಲಿ ನಡೆಯುವ ವಿಜ್ಞಾನ ತರಗತಿಯನ್ನು ಮುಚ್ಚಿಸುವ ಪ್ರಯತ್ನದಲ್ಲಿ ಹೆನ್ರಿ ಟೈಲರನು ಫಲಕಾರಿಯಾಗಿದ್ದುದೇ ಇವನು ಈ ಮೊಕದ್ದಮೆಯನ್ನು ಹೂಡಲು ಕಾರಣವಾಗಿದೆ, ನನ್ನನ್ನು ಆನಿ ಬೆಸೆಂಟ್ ಇವಳನ್ನೂ ಆ ಪತ್ರಿಕೆಯ ಸಂಪಾದಕರೂ ಪ್ರಕಾಶಕರೂ ಎಂದು ವಿಚಾರಣೆಗೆ ಗುರಿ ಪಡಿಸಲು ಸರ್ ವರ್ನನ್ ಹಾರ್ಕೋರ್ಟ್ ಇವರನ್ನು ಪ್ರೋತ್ಸಾಹಿಸಿ ಕಡೆಗೆ ಅದು ಪ್ರಯೋಜನವಾಗಿದೆ ಈಗ ನಾನು ಸಂಪಾದಿಸದ, ಪ್ರಕಟಿಸದ, ನನಗೆ ಯಾವ ಸಂಬಂಧವೂ ಇಲ್ಲದ ಪತ್ರಿಕೆಯೊಂದರಲ್ಲಿ ಬರೆದುದರ ಮೇಲೆ ವೈಯಕ್ತಿಕವಾಗಿ ನನ್ನನ್ನು ಅಪರಾಧಿಯೆಂದು ಗಣಿಸಿ ವಿಚಾರಣೆಗೆ ಗುರಿಮಾಡಲು ಇಚ್ಛಿಸುತ್ತಿದ್ದರೆ, ಸರ್ ಹೆನ್ರಿ ಟೈಲರ್ ಇವನು ನನ್ನನ್ನು ಈಶ್ವರ ನಿಂದಕನೆಂದು ಆರೋಪಿಸಿ ಬಹು ಶ್ರದ್ಧೆಯಿಂದ ವಿಚಾರಣೆಗೆ ಈಡುಪಡಿಸುವುದೇಕೆ? ಅಪರಾಧಿಯೆಂದು ಕಾನೂನು ಪ್ರಕಾರವಾಗಿ ಎರಡು ಬಾರಿ ತೀರ್ಮಾನವಾದರೆ ನಾನು ಶಾಸನ ಸಭೆಯಲ್ಲಿ ಕುಳಿತುಕೊಳ್ಳಲು ಅನರ್ಹನಾಗಲಾರೆನೆಂಬುದಕ್ಕಾಗಿಯೇ?"

The Whitehall Review ಪತ್ರಿಕೆಯು ತನ್ನ ಕಾರ್ಯ ಸಾಧನೆಗಾಗಿ ಬ್ರ್ಯಾಡ್ಲೆಯ ಮೇಲೆ ಆರೋಪಣೆಯನ್ನು ನೇರವಾಗಿ ಹೊರಿಸುತ್ತಲಿದೆ ಇವನು Freethinker ಪತ್ರಿಕೆಯಲ್ಲಿ

ನಾಸ್ತಿಕತೆಯನ್ನು ಕಾರಿತಾಗಿ ಪ್ರಚಾರಮಾಡಿದನು ಎಂದು ಆವನನ್ನು Mansion House ಕಚೇರಿಗೆ ಬರಮಾಡಲು ಕರೆಹೋಯಿತು. ಅದರಲ್ಲಿ ಸರ್ ಹೆನ್ರಿ ಟ್ಯಾಲರ್ ಇವನು ವಿಜ್ಞಾನ ಪಾಠಬೋಧಕರಾಗಿ ಸಹಾಯಧನವನ್ನು ಪಡೆಯುತಿದ್ದ "ಚಾರ್ಲ್ಸ್ ಬ್ರ್ಯಾಡ್ಲೋಯ ಪುತ್ರಿಯರಿಗೆ" ಅದು ಸಲ್ಲದಂತೆ ವಿಧಿಸಿದ್ದಲ್ಲದೆ ಬ್ರ್ಯಾಡ್ಲೋ ಮತ್ತು ನಾನು ಆ ತಕರಾರಿಗೆ ಸೇರದೇ ಇದ್ದವರಾದರೂ ನಮ್ಮ ಸ್ವಂತ ಬ್ಯಾಂಕು ಲೆಕ್ಕಗಳನ್ನು ಪರೀಕ್ಷಿಸಲು ಒಂದು ಆಜ್ಞೆಯನ್ನು ಹೊರಡಿಸಿದಾಗ ಆ ಪತ್ರವು ಕಾನೂನಿಗೆ ವ್ಯತಿರಿಕ್ತವಾಗಿದ್ದರೂ ಅದಕ್ಕನುವಾಗಿ ಚೀಫ್ ಕಾಯ್ದೆಯನ್ನು ನಿರ್ವಹಿಸಲಾಯಿತು. ಈಗ ಹಿಂತಿರುಗಿ ನೋಡಿದಾಗ "ಮತಧರ್ಮ" ವನ್ನು ರಕ್ಷಿಸುವ ನೆವವನ್ನು ಹೇಳುತ್ತಾ ಸರ್ ಹೆನ್ರಿ ಟ್ಯಾಲರನು ಅದೆಂಥಾ ಅಲ್ಪ ಹಾಗೂ ಕ್ಷುಲ್ಲಕ ಮನೋಭಾವದಿಂದ ವರ್ತಿಸಿದನೆಂಬುದಕ್ಕೆ ತಲ್ಲಣಗೊಂಡಿದ್ದೇನೆ, ದೇವರೇ ರಕ್ಷಿಸಬೇಕು! ಆವನು House of Commons ಸಭೆಯಲ್ಲಿ ತಂದ ಠರಾವು ಸೋತು ಬಿದ್ದುಹೋಯಿತು ಎಂಬುದನ್ನು ಇಲ್ಲಿ ಹೇಳಬೇಕಾಗಿದೆ. ಚಾರ್ಲ್ಸ್ ಬ್ರ್ಯಾಡ್ಲೋಯ ಪುತ್ರಿಯರು ಮತ್ತು ಸಸ್ಯಶಾಸ್ತ್ರದಲ್ಲಿ ಇಡೀ ಇಂಗ್ಲೆಂಡಿನಲ್ಲಿ ಉತ್ಕೃಷ್ಟ ದರ್ಜೆ-(honours) ಯಲ್ಲಿ ಜಯಶೀಲಳಾದ ನಾನು ನಮ್ಮ ವಿದ್ಯಾರ್ಥಿನಿಯರು ಅನೇಕರೂ ಉತ್ತಮ ಕೆಲಸಗಳನ್ನು ಮಾಡಿದ್ದನ್ನು ಶ್ಲಾಘಿಸಿ ಬರೆದ ಪ್ರಕಟಣೆಯೂ ಆದೇ ವೇಳೆಗೆ ಹೊರಟಿತು.

ನನ್ನ ಎಳೆತನದಲ್ಲಿ ನಾನು ಮತೀಯ ವಿಚಾರದಲ್ಲಿ ಮುಳುಗಿಹೋಗಿದ್ದಾಗ ನನಗೆ ಪರಿಚಯವಾದ Dr. Pusey ಇವನು ಮೃತನಾದನೆಂದು 1882ರ ಸೆಪ್ಟೆಂಬರ್‌ನಲ್ಲಿ ತಿಳಿದಾಗ ಅವನ ವಿಷಯವಾಗಿ ಪ್ರಸ್ತಾಪಿಸಲು ಈಗ ನಾನು ಸ್ವಲ್ಪ ಹೊತ್ತು ವಿರಮಿಸಬೇಕಿದೆ. ಆವನ ವಿಷಯವಾಗಿ National Reformer ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದು ಆವನ ಸಮಾಧಿಗೆ ನನ್ನ ಕಾಣಿಕೆಯನ್ನು ಹೀಗೆ ಅರ್ಪಿಸಿದೆನು:—

"ಪ್ರಬಲನೂ ಉತ್ತಮನೂ ಆದ ಮಾನವನಾಗಿದ್ದನು. ತನ್ನದೇ ಆತ್ಮ ಪ್ರಭಾವದಿಂದ ಸಂಪೂರ್ಣ ಚೈತನ್ಯವನ್ನಾಗಿ, ಕಾತರದ ಅನ್ವೇಷಣೆಯತ್ತ ಕಠೋರ ದೃಷ್ಟಿಯನ್ನು ಬೀರಿ, ನಿಸರ್ಗವನ್ನು ಆನಂದದಿಂದ ಪ್ರೀತಿಸಿ ಕಡೆಗೆ ಲೋಕದ ರಹಸ್ಯವನ್ನು ನಿಷ್ಠೆಯಿಂದ ತಿಳಿಯುವಾಗ ಅದರ ನಿರ್ಮಾಪಕ ನ್ಯಾಯದೀಕ್ಷೆ ಆಗಮನಕ್ಕೆ ಅದು ಸಹಜ ಸಾಧ್ಯವಾದಂತಾಗಿರುವುದು. ಮನೋಗತಿಯಿಂದ ನಿಶ್ಚಲತೆಯ ಅಭಿಮಾನದಿಂದ ತನ್ನ ಸ್ವಂತ ಸ್ವಾರ್ಥತನದಲ್ಲಿ ಶ್ರದ್ಧಾವಂತನಾಗಿರುವುದರಿಂದ ನಾಸ್ತಿಕರಿಗೆ ಕಠಿಣನಾಗಿ, ಮತ್ತು ತನ್ನ ಸಿದ್ಧಾಂತಗಳನ್ನು ಒಪ್ಪದ

ಮತ್ತು ಕ್ರೈಸ್ತ ಪಂಥವನ್ನು ನಂಬಿದವರಿಗೆ ಉದಾರಿಯೂ ಕರುಣೆಯೂ ಆದ ತತ್ವಜ್ಞಾನಿಯಾಗಿದ್ದನು. ಅವನನ್ನು ವಿರೋಧಿಸಿದವರನ್ನು ಎಂದಿಗೂ ಅಹಿತವಾದ ನುಡಿಗಳಿಂದ ನಿಂದಿಸುವ ಹೀನ ಕಾರ್ಯಕ್ಕೆ ಇಳಿದುದ್ದೇ ಇಲ್ಲ. ಅವನು ನಾಸ್ತಿಕತೆಯನ್ನು ಮೆಚ್ಚದೇ ಇದ್ದಿದ್ದರೂ ನಾಸ್ತಿಕರ ಸ್ವಾನುಭಾವದ ಬಗ್ಗೆ ಎಂದೂ ಟೀಕಿಸಿದ್ದೇ ಇಲ್ಲ. ಅಷ್ಟೇ ಅಲ್ಲ, ಬಿಷಪ್ ಧರ್ಮಗುರುಗಳು ಬಳಸುವ ನಿಂದನೀಯ ನುಡಿಗಳನ್ನು ಅವನು ಉಪಯೋಗಿಸಿದ್ದೇ ಇಲ್ಲ. ಆದುದರಿಂದ ಧೈರ್ಯ ಮತ್ತು ನಿಷ್ಕಪಟತೆಯನ್ನು ಎಲ್ಲಿ ಕಂಡರೂ ಅಲ್ಲಿ ಅದನ್ನು ಗೌರವದಿಂದ ಕಾಣುವ ನಾನು, ಸ್ವಾತಂತ್ರ್ಯವನ್ನು ಎಲ್ಲಿ ಕಂಡರೂ ಅದಕ್ಕೆ ಭಕ್ತಿಯನ್ನರ್ಪಿಸುವ ನಾನು, ಓರ್ವ ನಾಸ್ತಿಕಳಾದ ನಾನು, ಆಂಗ್ಲ ಕ್ಯಾಥೋಲಿಕ್ ವರ್ಗದವರಲ್ಲಿ ಅತಿ ಮಾನವೀಯ ಗುಣದಿಂದ ಕೂಡಿದ್ದ ಎಡ್ವರ್ಡ್ ಬೋವೆರೀ ಪುಸೀ ಇವನ ಸಮಾಧಿಗೆ ನನ್ನ ಈ ಅಲ್ಪ ಕಾಣಿಕೆಯನ್ನು ಭಕ್ತಿಪೂರ್ವಕವಾಗಿ ಅರ್ಪಿಸುತ್ತೇನೆ.

ನಮ್ಮನ್ನು ಅನೇಕ ಬಾರಿ ಪ್ರತಿಭಟಿಸಿದ್ದಕ್ಕೆ ಶಿಕ್ಷೆಯ ಉತ್ತರವೋ ಎಂಬಂತೆ, ಮತ್ತು ಕಿರುಕುಳವನ್ನು ಕೊಡುವುದಕ್ಕಾಗಿ ನಮ್ಮನ್ನು ವಿಚಾರಣೆಗೊಳಪಡಿಸಿದುದರಿಂದ ನಮ್ಮ ಮತೀಯ ಮತ್ತು ರಾಜಕೀಯ ಬರಹಗಳು ವಿಶೇಷವಾಗಿ ಪ್ರಚಾರವಾದುದರಿಂದ 1882 ರಲ್ಲಿ ನಮ್ಮ ಪ್ರಕಟಣಾ ಶಾಖೆಯನ್ನು ರಿಚ್ಚರ್ಡ್ ಕಾರ್ಲೈಲ್ ಇವನು ಬಹು ಕಾಲ ಅದೇ ವೃತ್ತಿಯಲ್ಲಿದ್ದವನಾದುದರಿಂದ ಮತ್ತು ಪ್ರಸಿದ್ಧನೂ ಆದುದರಿಂದ ಅವನ ಅಂಗಡಿಯ ಎದುರಿಗೆ 63 ನೇ ಫ್ಲೀಟ್ ಬೀದಿಯಲ್ಲಿ ತೆರೆದೆವು. ಇಲ್ಲಿ ಮೊದಲ ಬಾರಿಗೆ ಮಾರಾಟವಾದ ಎರಡು ಪುಸ್ತಕಗಳಲ್ಲಿ ನಾನು ನಮ್ಮ ಸರಕಾರದ, ಈಜಿಪ್ಟ್‌ಗೆ ಸಂಬಂಧಿಸಿದ ಕನಾಚಿ ಕೋಗಿಲಿನ ಧೋರಣೆಯನ್ನು ಟೀಕಿಸಿದೆನು, ತನ್ನ ಹಿತವಿಲ್ಲದ ಕಾರ್ಯಕಲಾಪಗಳ ಮಧ್ಯೆ ಬ್ರಾಡ್ಲೋನು ನಿಯಮವನ್ನು ತಿಳಿಸಿದ "Genesis" ಇದರ ಮೇಲಿನ ಬರೆದ ವಿಮರ್ಶಾತ್ಮಕ ಪುಸ್ತಕವೂ ಒಂದಾಗಿತ್ತು. ಲಂಡನ್ನಿನಲ್ಲಿದ್ದಾಗ, ಬ್ರಾಡ್ಲೋನು 1891 ರಲ್ಲಿ ಮೃತನಾಗುವ ವರೆಗೂ ನಾನು ಹೆಚ್ಚಾಗಿ ಇದೇ ಪ್ರಕಟಣಾ ಶಾಖೆಯಲ್ಲಿ ನನ್ನ ದಿನಗಳನ್ನು ಕಳೆದೆನು, ನನ್ನ ಕೆಲಸದಲ್ಲಿ ಬ್ರಾಡ್ಲೋನ ಹಿರಿಯ ಪುತ್ರಿಯು ಸಹಕರಿಸಿದಳು, ಮನೋದಾರ್ಢ್ಯತೆ ಹಾಗೂ ಗುಣಶಾಲಿಯಾಗಿದ್ದ ಅವಳು ಹಿಂದೆಯೇ, ಎಂದರೆ 1888 ರಲ್ಲಿ ಹಠ್ಠನೆ ಮರಣ ಹೊಂದಿದಳು. National Reformer ಪತ್ರಿಕೆಯ ಕೆಲಸದಲ್ಲಿ ನನಗೆ ಮೊದಲು ಡಾ. ಅವೆಲಿಂಗ್ ಇವನೂ, ಅನಂತರ ಈಗ ಸಂಪಾದಕನಾಗಿರುವ ಜಾನ್ ರಾಬರ್ಟ್‌ಸನ್ ಇವನೂ ಸಹಾಯಕರಾಗಿದ್ದರು. ಅವರಲ್ಲದೆ 1884 ರಿಂದ ಬ್ರಾಡ್ಲೋಯ ಶಿಷ್ಯರಲ್ಲೊಬ್ಬಳೂ

ರಾಷ್ಟ್ರೀಯತೆ ಖ್ಯಾತಿಕವಾದ ಸಂಸ್ಥೆಯ ಪ್ರಧಾನ ಉಪನ್ಯಾಸಕರಲ್ಲಿ ಒಬ್ಬಳೂ ಆದ ಪ್ರಾಸ್ಟರ್ಸ್ ಸ್ಟ್ರೆ ಇವಳು ನನ್ನೊಡನೆ ಕೆಲಸ ಮಾಡಿದಳು. ಜನಪ್ರಿಯಳಾಗಿದ್ದ ಇವಳು ಸಭ್ಯಳೂ ಗೌರವಿಯೂ ಉತ್ತಮ ಹೋರಾಟಗಾತಿಯೂ ಆಗಿದ್ದಳು. ನಾನು ತತ್ವಜ್ಞಾನಿ (Theosophist) ಯಾಗಿ ಪರಿವರ್ತನೆಗೊಂಡನಂತರ ನನಗೆ ವಿರೋಧವಾಗದೆ ತನ್ನ ಉದಾರಗುಣದಿಂದ ನನ್ನೊಡನೆಯೇ ಇದ್ದ Freethinkers ಇವರಲ್ಲಿ ಇವಳೂ ಒಬ್ಬಳಾಗಿದ್ದಳು. ಅಂತಹ ಸಹೃದಯರಾದ ಗೆಳೆಯರನ್ನು ಕೇವಲ ಸ್ವತಂತ್ರ ಚಿಂತಕರಲ್ಲಿಯೇ ಎಣಿಸುವಷ್ಟು ಜನ ಮಾತ್ರ ಇದ್ದರೆಂದು ಹೇಳಬಲ್ಲೆನು. ಅಂಥವರಲ್ಲಿ ತನ್ನಾ ಸಮರ್ಥ ಕೆಲಸಗಾರನೂ ಜನಪ್ರಿಯನೂ ಆದ ಜಾನ್ ರಾಬರ್ಟ್ಸನ್ ಇವನೊಬ್ಬನು. ನಮ್ಮ ಮಿತ್ರವರ್ಗದಲ್ಲಿಯಲ್ಲಿ ಇವನು ಬಹು ರಸಿಕನೂ ಉದಾರಿಯೂ ಆಗಿದ್ದ ಸಾಹಿತಿ ಹಾಗೂ ಜನಾಂಗದ ತಾತ್ವಿಕನಾಗಿದ್ದನು.

ಲಂಡನ್‌ನ ಫ್ಲೀಟ್ ಬೀದಿಯಲ್ಲಿ ದೊಡ್ಡ ಪ್ರಕಟಣಾ ಕೇಂದ್ರವನ್ನು ನಾವು ತೆರೆದನಂತರ ನಮ್ಮ ಹೊಸ ಕಾರ್ಯಕ್ಷೇತ್ರಕ್ಕೆ ಕೈಹಚ್ಚಿದೆವು. ಅದರಲ್ಲಿ ಅನೇಕ ಹೆಚ್ಚು ಕ್ರಿಯಾತ್ಮಕ ಕಿರುಹೊತ್ತಿಗೆಗಳನ್ನು ನನ್ನ ಸಂಪಾದಕತ್ವದಲ್ಲಿ ಹೊರಡಿಸತೊಡಗಿದೆವು. "Our Corner" ಎಂಬ ಹೆಸರಿನಿಂದ ಪ್ರಾರಂಭವಾದ ಪುಸ್ತಿಕ ಮಾಲಿಕೆಯ ಮೊದಲ ಪುಸ್ತಕವು 1883ರ ಜನವರಿಯದಾಗಿತ್ತು. ಅಲ್ಲಿಂದ ನಂತರ ಆ ಪ್ರಕಟಣಾ ಮಾಲಿಕೆಯು ಆರು ವರ್ಷಗಳವರೆಗೂ ಎಡೆಬಿಡದೆ ಪ್ರಕಟವಾಯಿತಲ್ಲದೆ ನನ್ನ ಸಮಾಜವಾದ ಮತ್ತು ಕಾರ್ಮಿಕ ವರ್ಗದವರ ಹಿತದ ಬಗ್ಗೆ ಪ್ರಚಾರಕಾರ್ಯಕ್ಕೆ ಪ್ರಯೋಜನಕಾರಿಯಾದ ಅಂಗವಾಯಿತು. ಇದಕ್ಕೆ ಲೇಖನಗಳನ್ನು ಬರೆಯುತ್ತಿದ್ದವರಲ್ಲಿ ಮಾನ್ಕ್ಯೂರ್ ಡಿ. ಕಾನ್ವೇ, ಪ್ರೊ. ಲುಡ್ವಿಗ್ ಬುಕ್ನರ್, ವಿವಿಸ್ ಗಯಾರ್ಟ್, ಜಾರ್ಜ್ ಬರ್ನಾರ್ಡ್ ಶಾ, ಮೊದಲಾದವರಲ್ಲದೆ ಚಾರ್ಲ್ಸ್ ಬ್ರಾಡ್ಲೋ ಮತ್ತು ನಾನು ಪ್ರತಿ ತಿಂಗಳೂ ಬರೆಯುತ್ತಿದ್ದೆವು.

ಕ್ರಿ. ಶ. 1883 ರಲ್ಲಿ ರಾಜಕೀಯ ಚಳವಳಿಯ ಭಯಂಕರ ಬಿರುಗಾಳಿಯು ಎದ್ದಿತೆಯೂ ಹಬ್ಬಿದ ಕಾರಣದಿಂದ ಸರಕಾರವು ಪ್ರಮಾಣ ಸ್ವೀಕಾರ ಮಸೂದೆ (Affirmation Bill) ಯನ್ನು ಚರ್ಚೆಗೆ ಎತ್ತಿಕೊಳ್ಳಬೇಕಾಯಿತು. ದೇಶದ ಉದ್ದಗಲಕ್ಕೂ ಇದ್ದ ಲಿಬರಲ್ ಪಕ್ಷದ ವಿವಿಧ ಸಂಸ್ಥೆಗಳಿಂದ ಠರಾವುಗಳು ಅದನ್ನು ಕುರಿತಾಗಿ ಬಂದು ಬೀಳತೊಡಗಿದವು. ಟೋರಿಪಕ್ಷದನೆಯೇ ಸರಕಾರವನ್ನು ವಿರೋಧಿಸುವ ಸದಸ್ಯರನ್ನು ಒತ್ತಿ; ಚುನಾಯಿಸದೆ ಹಾಗೆಯೇ ಮರೆತುಬಿಡಲಾಗುತ್ತಿದ್ದವು. ಸಂಸತ್ತಿನ ಸಾವಿರಕ್ಕೆ ಕಡಿಮೆಯಿಲ್ಲದೆ ಪ್ರತಿನಿಧಿಗಳನ್ನು ಸಾಮಾಜಿಕ ಕೂಟಗಳಿಂದ, ವ್ಯಾಪಾರ ಸಂಸ್ಥೆಗಳಿಂದ (Trade Unions) ಮತ್ತು ಇತರ ಸಂಸ್ಥೆ

ಗಳಿಂದ ಲಂಡನ್ನಿಗೆ ಕಳುಹಿಸಲ್ಪಟ್ಟವು. ಇವರೆಲ್ಲರೂ ಟ್ರಾಫಾಲ್ಗರ್ ಚೌಕದಲ್ಲಿ ತುಂಬಿದರಲ್ಲದೆ ವೆಸ್ಟ್‌ಮಿನಿಸ್ಟರ್ ಸಭಾಂಗಣದಲ್ಲೂ ಜನರು ಗದ್ದಲವೆಬ್ಬಿಸಿದ್ದರು. ಸಭೆಯಲ್ಲಿ ಕುಳಿತಿದ್ದ ಬ್ರಾಡ್ಲಾರ ಸುರಕ್ಷಿತತೆಯ ಬಗ್ಗೆ ಅವರು ಹೆದರಿದರೇನೋ ಎಂಬಂತೆ ಇನ್ಸ್‌ಪೆಕ್ಟರ್ ಡೆನ್ನಿಂಗ್ ಇವನು ಬ್ರಾಡ್ಲಾರು ಹೊರಗೆ ಹೋಗಿ ಜನರಿಗೆ ಕಾಣಿಸಿಕೊಳ್ಳಬೇಕೆಂದು ಸಲಹೆಯನ್ನಿತ್ತರು. ಅಂತೆಯೇ ಅವನು ಹೊರಬಂದು "ಸರಕಾರವು ಆ ಮಸೂದೆಯನ್ನು (Affirmation Bill) ಕಾನೂನು ರೂಪದಲ್ಲಿ ತರಲು ಖಂಡಿತವಾಗಿಯೂ ನಿರ್ಧರಿಸಿದೆ" ಎಂಬುದಾಗಿ ಹೇಳಲು ಆ ಜನಸ್ತೋಮವು ಹಾರಾಡುತ್ತಾ ಜಯಘೋಷವನ್ನು ಮೊಳಗಿಸಿದರು. ಆದರೆ 1883 ರ ಫೆಬ್ರುವರಿ 15 ರಂದು ಜನತೆಯು ಪಡೆದ ಪ್ರಚಂಡ ವಿಜಯವೇ ಆಗಿತ್ತು. ನ್ಯಾಯವನ್ನು ಕೋರಿದ ಪೀಡಿತ ಜನಕ್ಕೆ ಆ ಮಸೂದೆಯು ಉತ್ತರವಿತ್ತಂತಾಯಿತು. ಅಲ್ಲದೆ ಜನರ ಇಚ್ಛೆಯನ್ನು ಪೂರೈಸದ ಶಾಸನದ ಬಗೆಗೆ ಮತದಾರರು ಬೆದರಿಸಿ ಇತ್ತ ಎಚ್ಚರಿಕೆಯೂ ಆದಾಗಿತ್ತು.

ಇದಾದನಂತರವೇ ಶ್ರೀಗಳಾದ ಫೂಟ್, ರ್ಯಾಮ್ಸೇ ಮತ್ತು ಕೆಂಪ್ (Kemp) ಇವರನ್ನು ಈಶ್ವರನಿಂದಕರೆಂಬುದಾಗಿ ಆರೋಪಿಸಿ ಅವರನ್ನು ಎರಡನೇ ಬಾರಿಗೆ ವಿಚಾರಣೆಗೆ ಗುರಿಮಾಡಲಾಗಿ ಆ ವ್ಯಾಜ್ಯವನ್ನು ಕ್ಷಿಪ್ರದಲ್ಲಿಯೇ Central Criminal Court ನಲ್ಲಿ ಬಹು ಕಠಿಣ ಮತಾಂಧನೇ ಆದ ನ್ಯಾಯಾಧೀಶ ನಾರ್ತ್ ಇವನ ಮುಂದೆ ತಂದಿಡಲಾಯಿತು. ಪಂಚಾಯತ್ತು ಸದಸ್ಯರೊಬ್ಬರಿಗೆ ಬಿನ್ನಾಭಿಪ್ರಾಯವಿದ್ದ ಕಾರಣದಿಂದ ಈ ವಿಚಾರಣೆಯು ತಕ್ಷಣ ಕೊನೆಗೊಂಡಿತು. ಅದರೊಡನೆ ಶ್ರೀ ಫೂಟ್ ಇವನು ತನ್ನ ಪರವಾಗಿ ತಾನೇ ವಾದಿಸುತ್ತಾ ಅಮೋಘವಾದ ಭಾಷಣವನ್ನು ಮಾಡಿದನು. ನ್ಯಾಯಾಧೀಶನಾದರೋ ವಿಚಾರಣೆಯ ಕಾಲದಲ್ಲಿ ಕಠಿಣವಾಗಿಯೇ ಇದ್ದನು. ಅಲ್ಲದೆ ಶ್ರೀ ಫೂಟ್ ಇವನು ಮಾತಾಡುತ್ತಿದ್ದಾಗ ಆವನನ್ನು ಮಧ್ಯೆ ಬಾಯಿಹಾಕುತ್ತಲೇ ಇದ್ದನು. ಪ್ರತಿವಾದಿಗಳನ್ನು ಮೊದಲನೇ ಮತ್ತು ಎರಡನೇ ವಿಚಾರಣೆಯ ಮಧ್ಯೆ ಜಾಮೀನು ಮೇಲೆ ಸಹ ಆವನು ಬಿಡಲಿಲ್ಲ. ಅವರನ್ನು ನ್ಯೂಗೇಟ್ ಸೆರೆಮನೆಯಲ್ಲಿ ಗುರುವಾರದಿಂದ ಸೋಮವಾರದ ವರೆಗೆ ಇಟ್ಟಿದ್ದರು. ಅವರು ಸೆರೆಮನೆಯ ಅಂಗಳದಲ್ಲಿ ಬೆಳಿಗ್ಗೆ ಎಂಟೂವರೆ ಗಂಟೆಯಿಂದ ಒಂದು ತಾಸು ಕಾಲ ವ್ಯಾಯಾಮಕ್ಕೆಂದು ಬಿಡಲ್ಪಟ್ಟಿದ್ದರಾದರೂ ನಾವು ಅವರನ್ನು ಕಬ್ಬಿಣದ ಸಲಾಕೆ ಮತ್ತು ಚಿಕ್ಕ ಕಿಟಕಿಯ ಮುಖಾಂತರವೇ ನೋಡಬೇಕಾಗಿತ್ತು. ಆ ಸೋಮವಾರ ದಿನ ನಡೆದ ವಿಚಾರಣೆಯಲ್ಲಿ ಅವರಿಗೆ ಶಿಕ್ಷೆಯನ್ನು ವಿಧಿಸುವಾಗ ಶ್ರೀ ಫೂಟ್ ಇವ

ನಿಗೆ ಒಂದು ವರ್ಷ, ಶ್ರೀ ರ್‍ಯಾಮ್ಸೀ ಇವನಿಗೆ ಒಂಬತ್ತು ತಿಂಗಳು, ಮತ್ತು ಶ್ರೀ ಕೆಂಪ್ ಇವನಿಗೆ ಮೂರು ತಿಂಗಳಿನ ಸಜೆ ವಿಧಿಸಲಾಯಿತು. ಅಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಫೂಟ್ ಇವನು ಗಂಭೀರವಾಗಿಯೂ ಧೈರ್ಯಶಾಲಿಯಾಗಿಯೂ ವರ್ತಿಸಿದನು. ಆ ಕ್ರೂರ ದಂಡನೆಯನ್ನು ಸಾವಧಾನವಾಗಿಯೇ ಸ್ವೀಕರಿಸಿದನಲ್ಲದೆ ನ್ಯಾಯಾಧೀಶನಿಗೆ "My Lord," ನಿಮಗೆ ವಂದನೆಗಳು; ಇದು ನಿಮ್ಮ ಅಭಿಮತಕ್ಕೆ ತಕ್ಕಂತೆಯೇ ಇದೆ," ಎಂದು ವಿನಯದಿಂದಲೇ ನುಡಿದನು. ನಮ್ಮಲ್ಲಿ ಕೆಲವರು ರ್‍ಯಾಮ್ಸೀ ಇವನ ಅಂಗಡಿಯನ್ನು, ಫೂಟ್ ಇವನ ಸಾಹಿತ್ಯ ಸಾಮಗ್ರಿಗಳನ್ನು ಉಳಿಸಲು ಕೂಡಲೇ ಮುಂದಾದೆವು. ಡಾ. ಏವಲಿಂಗ್ ಇವನು Freethinker ಪತ್ರಿಕೆ ಮತ್ತು ಫೂಟ್ ಇವನು ನಡೆಸುತ್ತಿದ್ದ "Progress" ಎಂಬ ಪತ್ರಿಕೆಯನ್ನು ಸಂಪಾದಿಸಿ ಪ್ರಕಟಿಸಲು ಮುಂದಾದರು. ಅವರ ಕುಟುಂಬಗಳ ಆವಶ್ಯಕತೆಯ ಬಗ್ಗೆಯೂ ಎಚ್ಚರಿಕೆಯನ್ನು ವಹಿಸಿದೆವು. ಶ್ರೀ ಮತ್ತು ಶ್ರೀಮತಿ ಫೋರ್ಡರ್ ಇವರು ಪುಸ್ತಕದ ಅಂಗಡಿಯನ್ನು ನೋಡಿಕೊಂಡರು. ಹೀಗೆ ಕೆಲವೇ ದಿನಗಳಲ್ಲಿ ಎಲ್ಲವೂ ಹಿಂದಿನಂತೆಯೇ ನಡೆಯಿತು. ಪತ್ರಿಕೆಯು ತಳೆದ ನಿಲುವನ್ನು ನಾವು ಹಲವರು ಒಪ್ಪದೇ ಇದ್ದರೂ ಈಶ್ವರ ನಿಂದಕರೆಂಬ ಆರೋಪಣೆಯ ವಿಚಾರಕ್ಕೆ ಬಂದು ಅದು ತಪ್ಪೆಂದು ತೀರ್ಮಾನವಾಗಲು ಅದರ ವಿಷಯವಾಗಿ ನಾವು ಹೆಚ್ಚು ಆಲೋಚಿಸಲಿಲ್ಲ. ಆದರೆ ನಮ್ಮ ಆತ್ಮಶಕ್ತಿಗನುವಾಗಿ ಸೆರೆಮನೆಯಲ್ಲಿದ್ದಷ್ಟು ಜನರ ಪರವಾಗಿ ವಾದಿಸತೊಡಗಿದೆವು. ನಾನು 'The Christian Creed'- ಎಂಬುದಾಗಿ ಧಾರಾವಾಹಿಯಾಗಿ ಲೇಖನಗಳನ್ನು ಬರೆಯಲಾರಂಭಿಸಿದೆನು. ಕೆಲವು ತಾತ್ವಿಕ ವಿಚಾರಗಳಲ್ಲಿ ಸಂದೇಹವನ್ನು ವ್ಯಕ್ತಪಡಿಸಿದರೆ ಈಶ್ವರ ನಿಂದಕರೆಂದು ಹೀಗೆ ಹೇಳಬಹುದು, ಎಂದು ಕೇಳುತ್ತಾ, ವಿಚಾರಣೆಗೊಳಗಾಗುವ ಅಪಾಯಕ್ಕೊಳಗಾದಾಗ ಕ್ರೈಸ್ತರು ನಂಬಿಕೆಯಾದುದೇನು, ಎಂಬುದನ್ನು ಹೇಳತೊಡಗಿದೆನು. ಈಶ್ವರ ನಿಂದಕರೆಂದು ಆರೋಪಿಸಿ ದಂಡಿಸುವ ಕಾನೂನುಗಳು ಅನರ್ಥವಾದುವು ಎಂದು ಜನತೆಗೆ ತಿಳಿಯಲು Free-Thought-ಚಳವಳಕ್ಕೆ ಎಲ್ಲೆಲ್ಲೂ ಪ್ರಬಲ ಪ್ರೋತ್ಸಾಹವು ದೊರೆಯಿತು.

ಕಲಿಫೋರ್ನಿಯಾದಿಂದ (ಅಮೇರಿಕಾದಿಂದ) Theosophist- ಪತ್ರಿಕೆಯಲ್ಲಿ ಹೆಲೆನ್ ಬ್ಲಾವಟ್ಸ್ಕಿಯು ತನ್ನ ಸಂತಾಪ ಸೂಚಕ ನುಡಿಗಳನ್ನು ಪ್ರಕಟಿಸಿ ಕಳುಹಿಸಿದಳು. "ಫೂಟ್ ಇವನನ್ನು ವಿಚಾರಿಸಿದ ಆ ಕಠಿಣನಾದ ನ್ಯಾಯಾಧೀಶನಿಗಿಂತ

ಆ ಪ್ರತಿವಾದಿ, Mr. Foote ಇವನು ತಳೆದ ನಿಲುವನ್ನು ಪ್ರಶಂಸಿಸು ತ್ತೇನೆ. ನಾವು ಅದೇ ಆಶಯವನ್ನು ಹೊತ್ತಿದ್ದರೆ ನಾವು ನ್ಯಾಯ ಮೂರ್ತಿ ನಾರ್ಥ್ ಇವನ ಸ್ಥಾನದಲ್ಲಿರುವುದಕ್ಕಿಂತ ಆ ಬಡ ಸಂಪಾದ ಕನ ಇಂದಿನ ಪರಿಸ್ಥಿತಿಯಲ್ಲಿರುವುದೇ ಹೆಮ್ಮೆಯದೆಂದೆನ್ನಬೇಕಾಗಿದೆ.”

ಚಾರ್ಲ್ಸ್ ಬ್ರ್ಯಾಡ್ಲೊಯು ಶ್ರೀ ನ್ಯೂಡಿಗೇಟ್ ಇವನ ಮೇಲೆ ಹೂಡಿದ್ದ ಸುದೀರ್ಘ ವ್ಯಾಜ್ಯವು 1880 ರಿಂದ 1883 ರ ವರೆಗೂ ನಡೆದ ಕಡೆಗೆ House of Lords ಸಭೆಯು 1883 ರ ಏಪ್ರಿಲ್‌ನಲ್ಲಿ ಬ್ರ್ಯಾಡ್ಲೊಯ ಪರವಾಗಿ ತನ್ನ ತೀರ್ಮಾನವನ್ನು ಇತ್ತು ಅವನನ್ನು ವಿಜಯಶಾಲಿಯಾಗಿಸಿತಲ್ಲದೆ ಅವನು ಆ ವಿಷಯವಾಗಿ ಹೀಗೆ ಬರೆದನು :—

“ಹಿಂದಿನ ನ್ಯಾಯಾಲಯದ ನಂತರ ಇನ್ನೊಂದು ಎಂಬಂತೆ ಎಲ್ಲವೂ ನನ್ನ ವಿರೋಧವಾಗಿಯೇ ತೀರ್ಪನ್ನು ಕೊಟ್ಟವು, ವಿಗ್ ಮತ್ತು ಟೋರಿ ಪತ್ರಿಕಾಕರ್ತರು ಸಹ ಒಟ್ಟಾಗಿ ನಾನು ತಳೆದಿದ್ದ ನಿಲುವನ್ನು ಸಾಧಿಸಲು ಹೆಣಗಾಡುತ್ತಾ ಪ್ರಯತ್ನಿಸುತ್ತಿದ್ದುದನ್ನು ಕಂಡು ನನ್ನನ್ನು ಹಾಸ್ಯ ಮಾಡಿದರು, ನನ್ನ ಹೋರಾಟವು ನಿಷ್ಪ್ರಯೋಜಕವೆಂದೂ ಆ ಮತಾಂಧರು ನನ್ನನ್ನು ಮೂಲೆಯೊಳಗೆ ಬಿಗಿಯಾಗಿ ಹಿಡಿದಿದ್ದಾರೆ ಎಂದೂ ನನ್ನ ಕೆಲವು ಒಳ್ಳೆಯ ಮಿತ್ರರೇ ಹೇಳಿದರು, ಹೀಗೂ ನಾನು ಶ್ರೀ ನ್ಯೂಡಿಗೇಟ್ ಮತ್ತು ಅವನ ಸಹಾಯಕರ ಬಲೆಯಿಂದ ಬಿಡಿಸಿಕೊಂಡೆನು, House of Lords ಸಭೆಯು ನನ್ನ ಪರವಾಗಿ ತೀರ್ಪು ಕೊಟ್ಟದಾಗಿತ್ತು, ನನ್ನನ್ನು ಬಿಕಾರಿಯಾಗಿ ಮಾಡಬೇಕೆಂದು ಬಯಸಿದ ಟೋರಿಗಳ ಕಾರ್ಯಹಾನಿಯು ವ್ಯರ್ಥವಾಯಿತು, ಬಡ ಜನವು ನನ್ನ ಕಷ್ಟಕಾಲದಲ್ಲಿ ನನಗೆ ನೆರವಾಗಿ ಸಹಾನುಭೂತಿಯನ್ನು ತೋರಿಸದೇ ಹೋಗಿದ್ದರೆ ನಾನು ಅಂದೇ ದಿವಾಳಿಯಾಗಬೇಕಾಗಿತ್ತು. ನ್ಯಾಯಾಲಯಗಳಲ್ಲಿ ಹಲವಾರು ದಿವಸಗಳನ್ನು ವಾರಗಳನ್ನು ಕಳೆಯುತ್ತಾ ವ್ಯಾಜ್ಯಕ್ಕೆ ಸಂಬಂಧಿಸಿದ ಕಿರುಕುಳದ ಪತ್ರವ್ಯವಹಾರಗಳನ್ನು ನಡೆಸುತ್ತಾ ಪ್ರತಿ ವಿಚಾರಣೆಯ ವೇಳೆಗೆ ಅದಕ್ಕಾಗಿ ಸಿದ್ಧಗೊಳಿಸುತ್ತಾ ಪ್ರಾಂತಗಳಲ್ಲಿ ಪ್ರಚಾರ ಭಾಷಣಗಳನ್ನು ತೊಂದರೆಯನ್ನು ಅನುಭವಿಸುತ್ತಾ ಇದ್ದ ಬಹು ಕಾಲದ ಆ ವ್ಯಾಜ್ಯದಿಂದ ನನಗುಂಟಾದ ಮಾನಸಿಕ ಮತ್ತು ಶಾರೀರಿಕ ಬಾಧೆಯನ್ನು ಯಾರೂ ಊಹಿಸಿ ತಿಳಿಯತಕ್ಕಂತದ್ದಾಗಿರಲಿಲ್ಲ.” ಅಹಾ, ಹೀಗೂ ಆ ರೀತಿಯುಂಟಾದ ದೀರ್ಘವು ಅವನ ಅಗಾಧ ಶಕ್ತಿಯನ್ನು ಹೀರಿ ಉತ್ಸಾಹದ ಅವನ ದೇಹಬಲವನ್ನು ಕುಗ್ಗಿಸಿ ಇಟ್ಟಿತು, ವರ್ಷಗಳಿಗೆ ಮುಂಚಿತವೆ ಎಂಬಂತೆ ಅವನನ್ನು (ಬ್ರ್ಯಾಡ್ಲೊಯನ್ನು) ಕೊಂದು ಹಾಕಿತು,

ಬ್ರ್ಯಾಡ್ಲೋ, ಫೂಟ್ ಮತ್ತು ರ್ಯಾಮ್ಸೆ ಇವರ ಮೇಲೆ ಈಶ್ವರ ನಿಂದೆಯನ್ನು ಆರೋಪಿಸಿ ನಡೆಸಿದ ವಿಚಾರಣೆಯು ಈ ಬಾರಿ

Queen's Bench ನಲ್ಲಿ ಪ್ರಧಾನ ನ್ಯಾಯಾಧೀಶ ಕಾಲರಿಡ್ಜ್ ಇವನ ಸಮಕ್ಷಮದಲ್ಲಿ ನಡೆಯಿತು. ಬ್ರ್ಯಾಡ್ಲಾ ಮತ್ತು ಫೂಟ್ ಇವರ ಮೇಲೆ ನಾನು ಕೇಳಿದ್ದು ಬ್ರ್ಯಾಡ್ಲಾಗೆ ಅವನ ಪತ್ರ ವ್ಯವಹಾರಗಳನ್ನು ನಡೆಸುತ್ತಿದ್ದರೂ ಅವನು ಮಾಡಿದ ವಿಷಯಗಳನ್ನು ಬಂದ ನಂತರ ಒಂದಾಗಿ ಹೊರಡಿಸುತ್ತಿದ್ದುದು ಇತ್ಯಾದಿಗಳನ್ನು ಹೇಳುವ ಕೆಲಸವು ನನ್ನದಾಗಿತ್ತು. ಶ್ರೀಗಳಾದ ಫೂಟ್ ಮತ್ತು ರ್ಯಾಮ್ಸೇ ಇವರನ್ನು ಬ್ಲಸ್ಫೆಮಿಗಾಗಿಯೇ ಅಲ್ಲಿಗೆ ತಂದರೂ ಅವರು ಅದರಿಂದ ಕಂಗೆಡದೆ ನಿರ್ಭಯದಿಂದಲೇ ಇದ್ದರು. ಬ್ರ್ಯಾಡ್ಲಾಯು ತನ್ನ ಮೇಲಿದ್ದ ಆಕ್ಷೇಪಣೆಗೆ ಆ ಪತ್ರಿಕೆಯು ಕಾರಣವೆಂಬುದನ್ನು ನಿರಾಕರಿಸಿ ತನ್ನ ವಿಚಾರಣೆಯನ್ನು ಪ್ರತ್ಯೇಕವಾಗಿ ನಡೆಸುವಂತೆ ಕೇಳಿಕೊಂಡನು. ನ್ಯಾಯಾಧೀಶನು ಅದಕ್ಕೆ ಒಪ್ಪಿದನು. ಆ ಪತ್ರಿಕೆಯು ಪ್ರಕಟಣೆಗೆ Free Thought Publishing Company ಇದಕ್ಕೆ ಸೇರಿದ್ದು. ಬ್ರ್ಯಾಡ್ಲಾ ಮತ್ತು ನಾನು ಜವಾಬ್ದಾರರಲ್ಲವೆಂದು ಪ್ರಮಾಣಪೂರ್ವಕವಾಗಿ ತಿಳಿದುಬಂತು. 1881 ರ ನವೆಂಬರ್ ತಿಂಗಳ ವರೆಗೆ ನಾವು ಅದನ್ನು ಪ್ರಕಟಿಸಿದೆವು; ಅನಂತರ ಅದರ ಜವಾಬ್ದಾರಿಕೆಯನ್ನು ಹೊರಲು ತಿರಸ್ಕರಿಸಿದೆವು. ಅದನ್ನು ತಿರಸ್ಕರಿಸುವುದಕ್ಕೆ ಕಾರಣವಾದರೋ ಆ ಪತ್ರಿಕೆಯು ಒಂದು ಅಂಗವಾಗಿ ಬೈಬಲ್ಲಿನ ಹಾಸ್ಯಚಿತ್ರಗಳನ್ನು ತೆರೆದುದೇ ಆಗಿದೆ. ನನ್ನನ್ನು ಓರ್ವ ಸಾಕ್ಷಿಯಾಗಿ ಕರೆದಾಗ ಪ್ರಮಾಣವಚನ ಸ್ವೀಕಾರದ ಬಗೆ ತೊಂದರೆಗೆ ಸಿಕ್ಕಿ ಬಿದ್ದೆನು. ಈ ಪ್ರಮಾಣ ಸ್ವೀಕಾರವು ನನ್ನ ಆತ್ಮಸಾಕ್ಷಿಗನುಗುಣವಾಗಿ ಇದೆಯೇ ಎಂದು ನ್ಯಾಯಾಧೀಶನು ಕೇಳಿದನು. ನಾನಿತ್ತ ವಚನವು ಯಾವುದೇ ರೂಪದಲ್ಲಿದ್ದರೂ ಅದು ನನಗೆ ಅನ್ವಯಿಸುವುದೆಂದು ನಾನು ಹೇಳಿದೆನು. ಸ್ವಲ್ಪ ವಾಗ್ವಾದಗಳನಂತರ ಸತ್ಯಪ್ರತಿಜ್ಞಾ ವಚನಕ್ಕೆ ದೇವರ ಹೆಸರನ್ನು ಸೇರಿಸಿದರೆ ಅದು ಅಷ್ಟೇ ಅಧಿಕಾರಯುಕ್ತವಾಗಿರುವುದೇ ಎಂದು ಅವಹೇಳನ ಮಾಡುವ ಧ್ವನಿಯಲ್ಲಿ ನ್ಯಾಯಾಧೀಶನು ಕೇಳಿದನು. "ಹಾಗೇನಿಲ್ಲ, my lord," ಎಂಬುದಾಗಿ ಉತ್ತರಿಸಿದೆನು. ಅನಂತರ ದೇವರ ಹೆಸರನ್ನು ಎತ್ತದೆಯೇ ಪ್ರಮಾಣವನ್ನು ಮಾಡಲು ನನ್ನನ್ನು ಬಿಡಲಾಯಿತು. ನನ್ನನ್ನು ಹೇಗಾದರೂ ಸಿಕ್ಕಿಸಬೇಕೆಂದು ಸರ್ ಹಾರ್ಡಿಂಜ್ ಗಿಫರ್ಡ್ ಇವನು ಅಡ್ಡಸವಾಲು ಪ್ರಶ್ನೆಗಳನ್ನು ನನ್ನ ಮೇಲೆ ಸುರಿಸಿದನು. ಆದರೆ ನನ್ನ ಉತ್ತರಗಳು ನೇರವಾಗಿದ್ದುದರಿಂದ ಅವನ ನಯವಾದ ವ್ಯಂಗ್ಯೋಕ್ತಿಗಳ ಅಸ್ತ್ರಗಳೆಲ್ಲ ಅಲ್ಲಿಯೆ ಮುರಿದು ಬಿದ್ದುವು.

ಈ ವಿಚಾರಣೆಯ ವೇಳೆಗೆ ನಡೆದ ಕೆಲವು ಘಟನೆಗಳು ವಿನೋದಕಾರಕವಾಗಿವೆ. ಸರ್ ಹಾರ್ಡಿಂಜ್ ಗಿಫರ್ಡ್

ಜೀವನ ಪ್ರಾರಂಭ ಕಷ್ಟವೂ ಅವಮಾನಪೂರ್ಣವೂ ನಿರ್ದಾಕ್ಷಿಣ್ಯವೂ ಆಗಿತ್ತು. ಬ್ರ್ಯಾಡ್ಲೋಯು ಹೂಡಿದ್ದ ವಾದವನ್ನೆಲ್ಲ ಅವು ತನಗೆ ವ್ಯತಿರಿಕ್ತವಾಗಿ ತೆಗೆದನು; ರಭಸಾ ಅಡಗಿಸುತ್ತನು, ಅವನಿಗೆ ವಿರೋಧವಿದ್ದ ವಿಷಯವನ್ನೆಲ್ಲ ಉಪಾಯದಿಂದ ಅವನನ್ನು ಮರಳುಗೊಳಿಸುತ್ತ ಉಪಯೋಗಿಸಿದನು, ಈ ಯೋಗ್ಯ ವರ್ತನ ಸತ್ಯವನ್ನು ಬಹು ವಿಸ್ತಾರ ರೂಪದಲ್ಲಿ ಕಾಟಲೆತನಸಕ್ಕಿಳಿಸಿ ಮಾಡಿಸಿದ ಹಲವು ಸಂದರ್ಭಗಳಲ್ಲಿ ಒಂದು Freethinkers ಪತ್ರಿಕೆಯ ಪ್ರಕಾಶಕರು ಮತ್ತು ಪತ್ರಿಕೆಯ ದಾಖಲೆಯನ್ನು ಕಾರ್ಯಗತ ಮಾಡಿದ ಬದಲಾವಣೆಯಿಂದ ಅದರ ಮೇಲೆ ಕೈವಶವನ್ನು ತೆಗೆದುಕೊಂಡುದರ ಮೇಲೆ ಶಾಸನ ನಿರ್ಬಂಧ ಮುಂದಿಟ್ಟು ಒಂದು ಪ್ರಶ್ನೆಯ ನಂತರ ಎಂದು ಹೇಳಿದ್ದೇ ಆಗಿದೆ----ಹೀಗೂ ಬಹು ಚಿಕ್ಕ ವಿಷಯಗಳ ಮೇಲೂ ದೊಡ್ಡ ವಾಗ್ವಾದಗಳೇ ನಡೆದುವು, ಒಂದು ನ್ಯಾಯದ ತೀರ್ಪನ್ನು ಪಡೆಯಲು ಕೋರ್ಟಿನಿಂದ, ಸ್ವೇಚ್ಛಾಸೂಚಿಯಿಂದ, ಹತ್ತಿಪ್ಪತ್ತು ಕಷ್ಟಕರ ವಿಚಾರಗಳನ್ನು ಮುಂದಿಟ್ಟು ಆ "ಮತಾಭಿಮಾನಿಗಳ ನಾಯಕನು" Defender of the Faith—ನಾಲ್ಕನೆಯ ಜಾರ್ಜ್ ಗತಿಶೋಧ ಜೀವನ, ಬಹು ವಿಚಾರಕ್ಕಾಗಿ ಸುಳ್ಳನ್ನು ಹೇಳಿದನೆಂಬುದಕ್ಕೆ ಈ ನಿದರ್ಶನವನ್ನು ಕೊಡಲಾಗಿದೆ,

ಪ್ರಾರಂಭದ ಮಾತುಗಳ ನಂತರ ಹಲವು ಸಾಕ್ಷಿಗಳನ್ನು ಕರೆಯಲಾಯಿತು, ನಿಜ ವಿಚಾರಗಳನ್ನು ತಿಳಿದಿದ್ದ ಜನವನ್ನು ಅವನು ಕರೆದಿರಲಿಲ್ಲ. ಕಟ್ಟಾಗಿ ಬ್ರ್ಯಾಡ್ಲೋ ಮತ್ತು ನನ್ನ ವಿರೋಧವಾಗಿ ವ್ಯಾಜ್ಯವನ್ನು ನಾಲ್ಕಾರು ದಿನಗಳ ಅನವಶ್ಯಕವಾಗಿ ಮುಂದುವರಿಸಲಾಯಿತು. (ಈ ವ್ಯಾಜ್ಯದ ಬಗ್ಗೆ ವಿವರವಾತ್ಸಲ್ಯವಾಗಿ ಹೇಳಲಾದ ಆ ಒಂದೆರಡು ಪುಟಗಳು ಅನವಶ್ಯವೆಂದು ಇಲ್ಲಿ ಭಾಷಾಂತರಿಸದೆ ಬಿಟ್ಟಿದೆ: - ಅನು:)

"ಈ ಆರೋಪಗಳ ಮತ್ತು ವಿಚಾರಣೆಯು ರಾಜಕೀಯ ವಿರೋಧಿಯ ಮೇಲೆ ಸೇಡು ತೀರಿಸಿಕೊಳ್ಳಲು ಮತ್ತು ಅವನನ್ನು ನಿರ್ಮೂಲಿಸಿಬಿಡುವ ಪ್ರಯತ್ನಗಳಲ್ಲೊಂದು ಎಂಬುದಾಗಿ ಹೇಳುತ್ತಿದ್ದೇನೆ" ಎಂಬುದಾಗಿ ಬ್ರ್ಯಾಡ್ಲೋಯು ಹೇಳಿದನು, "ನಾನು 1880 ರಲ್ಲಿ ಶಾಸನ ಸಭೆಗೆ ಆರಿಸಲ್ಪಟ್ಟ ಕೂಡಲೇ ಈ ಹೋರಾಟವು ಪ್ರಾರಂಭವಾಗಿದೆ---ನನ್ನ ಮೇಲೆ ಹಲವು ಬಗೆಯ ವ್ಯಾಜ್ಯಗಳನ್ನು ನಡೆಸಲಾಯಿತು, ಕಳೆದ ವಾರ House of Lords ಸಭೆಯು ನನ್ನನ್ನು ಒಂದು ವಿಗ್ರಹದ ವ್ಯವಹಾರದಿಂದ ಪೂರ್ಣವಾಗಿ ಮುಕ್ತಗೊಳಿಸಿತು. ಮಹನೀಯರೇ, ಇದೀಗ ಇನ್ನೊಂದು ವಿಗ್ರಹದ ವ್ಯವಹಾರದಿಂದ ನಿವೃತ್ತಿಗೊಳಿಸಿರಿ ಎಂಬುದಾಗಿ ಕೇಳುತ್ತಿದ್ದೇನೆ, ನನ್ನ ಮತದಾರ

ಕ್ಷೇತ್ರದ ಜನರು ನನ್ನನ್ನು ಮೂರು ಬಾರಿ ಆರಿಸಿದ್ದಾರೆ. ಸರ್ ಹೆನ್ರಿ
ಟೈಲರನು ರಾಜಕೀಯ ಶಿಸ್ತನ್ನು ಮುರಿದುದಕ್ಕಾಗಿ ದಂಡಿಸಲ್ಪಟ್ಟ-
ವನು. ನನ್ನ ಬಗ್ಗೆ ಅಪಪ್ರಚಾರ ಮಾಡಿದವನು. ಅಂಥವರನ್ನು
ಖಂಡಿಸದೆ, ಅದರ ಬದಲಾಗಿ ನಾನು ಯಾವುದೋ ಅಪರಾಧಕ್ಕೊ-
ಳಗಾಗಿ ಶಿಕ್ಷಿಸಲ್ಪಟ್ಟವನು ಎಂಬ ಅಗೌರವವನ್ನು ನನಗೆ ಹೊರಿಸಿ,
ನಾನು ಪರಮ ಭ್ರಷ್ಟನಾಗಿದ್ದೇನೆಂಬುದನ್ನು ಸಿದ್ಧಪಡಿಸಿ, ಆ ವಿಷ-
ಯದಲ್ಲಿ ನಾನು ನಿಜ ಹೇಳುತ್ತಿಲ್ಲವೆಂದು ಆರೋಪದ ಹೊರಿಸಿ
ನನ್ನನ್ನು ಜನರು ಕಳುಹಿಸಲು ನಿಮಗೆ, ಈ ನ್ಯಾಯಾಲಯಕ್ಕೆ,
ಹೇಳುತ್ತಿದ್ದಾರೆ. ಸೆರೆಮನೆಯ ಗೋಡೆಗಳು ನನಗಾಗಿ ಮುಚ್ಚಲ್ಪ-
ಡಬೇಕಾದ ಇಚ್ಛೆಯು ನನಗಿಲ್ಲ." (ಬ್ರ್ಯಾಡ್ಲೆಯು ನ್ಯಾಯಾಲಯ-
ದಲ್ಲಿ ಹೇಳಿದ ಸುದೀರ್ಘ ಮಾತಿನ ಕೆಲಭಾಗವನ್ನು ಇಲ್ಲಿ ಭಾಷಾಂ-
ತರಿಸಿ ಕೊಡಲಾಗಿದೆ — ಲೇ:-) "ಕೆಲವು ವಿಚಾರಗಳನ್ನು
ನಾನು ನಿರರ್ಥಕವಾಗಿ ಹೇಳುತ್ತಿಲ್ಲ; ನಿರರ್ಥಕವಾಗಿ ಬರೆಯಲೂ
ಇಲ್ಲ. ನಿಷ್ಪ್ರಯೋಜಕವಾಗಿ ನನ್ನ ಕೃತಿಗಳನ್ನು ನಾನೇ ಪ್ರಕಟಿ-
ಸಲೂ ಇಲ್ಲ. ಆದರೆ ಇಲ್ಲಿ ಕಾಣುವುದೇನೆಂದರೆ ನನಗೆ ಏನೂ
ಸಂಬಂಧವಿಲ್ಲದ ಯಾವುದೋ ಸಂದು ಪ್ರಕಟಣೆಗೆ ನನ್ನನ್ನು
ಯಾಂತ್ರಿಕವಾಗಿ ಜವಾಬ್ದಾರನನ್ನಾಗಿ ಮಾಡುವ ಆ ನಿಮ್ಮ ಪ್ರಯ-
ತ್ನದಲ್ಲಿ ಜಯಶಾಲಿಗಳಾಗಿ ನನ್ನನ್ನು ಸೋಲಿಸಿರಿ, ಎಂದು ಹೇಳು-
ತ್ತಿದ್ದೇನೆ, ನಾನು ಜಯಿಸಿದ ಪ್ರತಿ ಬಾರಿಯೂ ಹೊಸ ಬಗೆಯ ಸ-
ಮಸ್ಯೆಯನ್ನು ನಾನು ಎದುರಿಸುತ್ತಿದ್ದೇನೆ. ನಾನು ಮೊದಲ ಬಾರಿಗೆ
ಚುನಾವಣೆಯಲ್ಲಿ ಸ್ಪರ್ಧಿಸಿದಾಗ ನನ್ನನ್ನು ಸೋಲಿಸಬಹುದೆಂದು
ನಂಬಿದ್ದರು, ನಾನು ಇನ್ನೊಂದು ಬಾರಿ ಆರಿಸಲ್ಪಟ್ಟಾಗ ನನ್ನ ಮೇ-
ಲೆ ತಪ್ಪು ಹೊರಿಸಿ ಬಹಳ ದೊಡ್ಡ ದಂಡ ವಿಧಿಸಿ ನನ್ನನ್ನು ದಿವಾ-
ಳಿಯಾಗಿಸಲು ಪ್ರಯತ್ನಿಸಿದರು, ಅಂಥ ಹೀನ ಮಟ್ಟದ ದಂ-
ಡನೆಯಿಂದ ನಾನು ಪಾರಾದನಂತರ ಇದೀಗ ನನ್ನನ್ನು ಬೇ-
ರೊಂದು ರೀತಿಯಲ್ಲಿ ವಿನಾಶಗೊಳಿಸಲೆತ್ನಿಸುತ್ತಿದ್ದಾರೆ. ನಾನೊ-
ಬ್ಬ ಮತ ವಿರೋಧಿಯೆಂಬುದರ ಬಗ್ಗೆ ನನ್ನನ್ನು ನಾನೇ
ರಕ್ಷಿಸಿಕೊಳ್ಳುವ ಪ್ರಶ್ನೆಯು ಇಲ್ಲಿಲ್ಲ. ಏಕೆಂದರೆ ಆ ಆರೋ-
ಪಣೆಯು ನಿಮ್ಮ ಮೇಲೆ ಹೇರಲ್ಪಟ್ಟಾಗ ಮತ್ತು ಕಾನೂನು
ಪ್ರಕಾರವಾಗಿ ಅಂಥಾ ವಾದಿಸುವ ಹುರುಳು ಇದರಲ್ಲಿದ್ದರೆ ನಾ-
ನಾಗಿಯೇ ಅದನ್ನು ಸುಳ್ಳಾಗಿಸಲು ಸಿದ್ಧನಾಗಿಲ್ಲವೆಂದಲ್ಲ. ನಾನು
ಹೇಳಿದ್ದಕ್ಕೆ ವ್ಯತಿರಿಕ್ತವಾಗಿ ನಾನು ಎಂದೂ ನಡೆದುದ್ದೇ ಇಲ್ಲ.
ನಾನು ಬರೆದ ಪತ್ರಗಳಾವುದರಿಂದಲೂ ಭಿನ್ನವಾಗಿ ನಾನು ವ-
ರ್ತಿಸಿದ್ದೇ ಇಲ್ಲ. ನಾನು ಏನೇ ಮಾಡಿರಲಿ, ಹೇಳಿರಲಿ, ಅವುಗಳ-
ನ್ನು ಹಿಂದೆಗೆದುದೇ ಇಲ್ಲ. ಬಹುಶಃ ಇಲ್ಲಿಗೆ ಬರಲಾರದವು

ತ್ತು ಮೂಲಕ: ನನ್ನನ್ನು ಎದುರುಗೊಳ್ಳಲಾರದ ಆ ಸರ್ ಜಾನ್ ಟ್ರೆಲರ್
ಇವನು ಓರ್ವ ಮನುಷ್ಯನನ್ನು ಹೇಡಿಯಂತೆ ಬೆನ್ನಿನ ಹಿಂದಿನಿಂದ ತಿ
ವಿಯಲು ಓರ್ವ ಕೊಲೆಗಾರನು ತನ್ನ ಕತ್ತಿಯನ್ನು ಉಪಯೋಗಿ
ಸುವಂತೆ ನಿಮ್ಮನ್ನು (ನ್ಯಾಯಾಧೀಶನನ್ನು) ಉಪಯೋಗಿಸಿದರು."

ಲಾರ್ಡ್ ಕೋಲರಿಡ್ಜ್ ಇವನು ಈ ವಾಕ್ಯದ ಸರ್ವ ವಿಷಯವನ್ನು ಸಂಕ್ಷೇಪವಾಗಿ ಹೇಳಿದನು. ಇವನ ವಾಕ್ಯವು ವಿಚಾರಪೂರ್ಣ, ಮತ್ತು ಮನೋವ್ಯಾಪಾರದಲ್ಲಿಯ ಸರ್ವಸಾರವಾಗಿತ್ತು. ನಿಜವಾದ ಮತ್ತೀಯ ಪ್ರೇಮ, ಅಸಹ್ಯ ಮತವಿರೋಧ ಮತ್ತು ದ್ವೇಷಗಳಿಂದಿಯಲ್ಲೂ ನ್ಯಾಯವನ್ನು ಸಾಧಿಸುವ ಬಲಕ್ಕಿಂತ ಹಾದಿಕರವಾದುದು ಬೇರಾವುದೂ ಇಲ್ಲ. ತಾನು ಪ್ರಾಟೆಸ್ಟಂಟ್ ಕ್ರೈಸ್ತನೆಂಬ ತನ್ನ (ಲಾರ್ಡ್ ಕೋಲರಿಡ್ಜ್) ಭಾವನೆಯು ಸಂಕುಚಿತತೆಯ ಮತ್ತೀಯ ಪ್ರಭಾವವನ್ನು ಬೀರದೆ ನ್ಯಾಯವನ್ನು ಪಕ್ಷಪಾತರಹಿತವಾಗಿ ಪ್ರತಿಪಾದಿಸಿದಂತೆ ಇವನು ಪ್ರಯತ್ನಿಸಿದ್ದೂ ನಿಸ್ಸಂಶಯವಿದೆ. ಹಿತವಾದುದೆಂದು ಕಂಡುಬಂದುದನ್ನೇ ಎತ್ತಿಹಿಡಿಯಲು ಮತ್ತು ಸಾಮಾನ್ಯವಾಗಿ ಜನರನ್ನು ಒಪ್ಪುವುದಿಲ್ಲವೋ ಅದನ್ನು ಮತವಿರೋಧಿಗಳು ಮತ್ತಿಗರು ಒಪ್ಪದೇ ಇರುವುದನ್ನು ಕಾರಿಕೆಗಾಗಿ ನೇರವಾಗಿ ಮಾಡಿಸುವುದು; ಇದರ ನಂತರ ಅಭಿಪ್ರಾಯಗಳು ಸಾಧುವಲ್ಲವೆಂದು ವಿಚಾರಣೆಗೊಳಪಡಿಸದೆ ಪ್ರತಿಬಂಧಿಸುವುದು. ಯೇಸೂದಕ್ಕೆ ಶಕ್ತಿಗಳಲ್ಲಿರುವ ನಿಯಮಗಳ ಬಗ್ಗೆ ಒಪ್ಪದವು, ದಿವ್ಯವಾಣಿಗಳು ಅವುಗಳು ವಿರೋಧಿಗಳು ಶಿಕ್ಷೆಗೊಳಗಾಗಬೇಕೆಂಬ ಕಠೋರವಾದ ಹಿಡಿತವಿಯೂ ಇತ್ತು. ಮಾನಸಿಕ ಶುದ್ಧಿಗೆ ಮತ್ತು ನೈತಿಕ ಉನ್ನತಿಗೆ ಬೆಳೆಯುತ್ತಿರುವ ಕುಂದರ ದನಿಯನ್ನು ಕೇಳಿದ ಇವನ (ನ್ಯಾಯಾಧೀಶನ) ಆದರ್ಶವಾದ ವಾಗ್ಧಾರಿಯು ಅದ್ವಿತೀಯವಾಗಿತ್ತು. ತಾನು ಪ್ರತ್ಯಕ್ಷವಾಗಿ ವಿರೋಧಿಸದ ತನ್ನ ಮತದ ಮರ್ಮಕ್ಕೆ ಲಾರ್ಡ್ ಕೋಲರಿಡ್ಜ್ ಇವನು ಇಂದು ಒಂದು ಸೇವೆಯನ್ನು ಸಲ್ಲಿಸಿದನು. ಕ್ರೈಸ್ತನೆಂಬುದು ನ್ಯಾಯಾಧೀಶನು ತನ್ನ ಮತವಿರೋಧಿಯೊಡನೆಯೂ ನ್ಯಾಯ ಹಾಗೂ ದಯೆಯಿಂದ ವ್ಯವಹರಿಸಬೇಕೆಂಬುದನ್ನು ಹೀಗೆ ತೋರಿಸಿದನು.

ನ್ಯಾಯಾಲಯದ ತೀರ್ಪನ್ನು ಕೇಳಬಯಸುವ ಎಲ್ಲರಿಗೆ ಬಹು ಕಾತರತೆಯ ಮನೋವೇದನೆಯುಂಟಾಯಿತು. ಜನರು ಕಾಯುತ್ತಾ ಇದ್ದರು. ಕಡೆಗೆ ತೀರ್ಪಾದ ಕಾರಣದಿಂದ "ನಿರಪರಾಧಿ" (Not guilty) ಎಂಬ ನುಡಿಯನ್ನು ಕೇಳಿದರು. ಆ ನ್ಯಾಯಾಧೀಶನೂ ತನ್ನ ತೀರ್ಪನ್ನು ತಾನೇ ಬರೆದವನಾಗಿ ಮತ್ತು ನ್ಯಾಯವಾಗಿಯೇ ಒಪ್ಪಿದನು. ಬ್ರಾಡ್ಲೆಯು ರಾಜ

ಕೀಯ ವಿರೋಧಿಗಳು ಅವನ ರಾಜಕೀಯ ಸೇವೆಗೆ ಮಸುಕು ಗೊಳಿಸಲು ಹಾಕಬೇಕೆಂಬ ದ್ವೇಷಭಾವದಿಂದ ಈ ಬಗೆಯ ವ್ಯಾಜ್ಯವನ್ನು ತಂದರೆಂಬುದಾಗಿ ತಿಳಿದಿದ್ದ ಇಡೀ ದೇಶವೇ ಈ ತೀರ್ಪಿನ ಬಗ್ಗೆ ಅಸಂತೋಷವನ್ನು ಪ್ರತಿಧ್ವನಿಸಿತು, ಆ ವಿಚಾರಣೆಯನ್ನೇ ಖಂಡಿಸಿತು. ಅಲ್ಲದೆ Pall Mall Gazette ಈ ವಿಷಯವಾಗಿ ಹೀಗೆ ಬರೆಯಿತು:—

“ಬ್ರಾಡ್ಲೋಯಿಂದ ಉದ್ರೇಕಿಸಲ್ಪಟ್ಟ ವೈಯಕ್ತಿಕ ರಾಜಕೀಯ ದ್ವೇಷ ಮತೀಯ ಅಭಿಪ್ರಾಯಗಳು ಏನೇ ಇರಲಿ, ಅವನು ನ್ಯಾಯಾಸನಗಳಲ್ಲಿ ಸುಂದರ ಸಂತರ ಒಂದಾಗಿ ಶಿಕ್ಷೆ ಗೆಲುವುಗಳು ಅವನದಾಗಿ ತೀರ್ಪನ್ನು ಅವನ ಬದ್ಧವೈರಿಗೂ ಅಲ್ಲಗಳೆಯಲಾಗುವುದಿಲ್ಲ, ಮತ ವಿರೋಧಿಯೆಂಬ ಆಪಾದನೆಯ ವ್ಯವಹಾರದಲ್ಲಿ ಅವನನ್ನು ಶನಿವಾರ ದಿನ ನಿರಪರಾಧಿಯೆಂದು ಬಿಡುಗಡೆ ಮಾಡಿದ್ದು ಅವನ ವಿರೋಧಿಗಳ ಬಾಯನ್ನು ನಿರ್ದಾಕ್ಷಿಣ್ಯವಾಗಿ ಮುಚ್ಚಿಸಲು ಕೈಗೊಂಡ ಹಲವು ಕಾದಾಟಗಳಲ್ಲಿ ಇತ್ತೀಚಿನದಾಗಿದೆ. ಇಲ್ಲಿಯ ವರೆಗೂ ಬ್ರಾಡ್ಲೆಯನ್ನು ನಿಷ್ಠೆಯಿಂದ ಬೆಂಬತ್ತಿ ಕಾಡಿಸಿದ ದೋಷಾರೋಪಣೆಯು ಬರೀ ಅಲ್ಪವಾದ ಮತ್ತು ಅಸಹ್ಯಕರವಾದ 'ಹಿಂಸಾಕೃತ್ಯ'ವೆಂಬುದಾಗಿ ಪ್ರಬಲವಾಗಿ ನಿರ್ಧಾರಗೊಳಿಸಲ್ಪಟ್ಟಿದೆ. ಇಂಥಾ ವ್ಯಾಜ್ಯವನ್ನು ಹೂಡುವವರು ನಿಜಕ್ಕೂ ಅವರು ಅನುಭವಿಸುವ ನಿರಾಶೆಯು ಕಹಿಯನ್ನನುಭವಿಸುವಂತಾಗಬೇಕು. ಪ್ರಧಾನ ನ್ಯಾಯಮೂರ್ತಿಯು ಸಂಕ್ಷೇಪವಾಗಿ ಆ ವ್ಯವಹಾರವನ್ನು ಕುರಿತು ಸೂಕ್ತವಾದ ಮತ್ತು ತೂಕದ ಮಾತುಗಳಿಂದ ಹೇಳಿದನ್ನು ಕೃತಜ್ಞತಾಪೂರ್ವಕವಾಗಿ ಗಮನಿಸಬೇಕಿದೆ. ಹಳೆಯ ಉದ್ದೇಶದಿಂದಾದರೂ ಕಾನೂನನ್ನು ಧಿಕ್ಕರಿಸುವವರನ್ನು ಮತ್ತು (ಸಮ್ಮ ಸಂತರು) ಹೇಳಿದಂತೆ ದುರ್ಗತಿಯೇ ಸರಿಯೆಂದು ಬಗೆದು ಕಡೆಗೆ ಅದರಿಂದ ಬಿಳಿಯದಾಗಬಹುದೆಂದು ರಕ್ತಗಳನ್ನು ಮಾಡುವವರೇ ಅಂಥವರನ್ನು ದ್ವೇಷದಿಂದ ವಿರೋಧಿಸಬೇಕು. ಪೂರ್ವದ ಸಂತರು ಹೇಳುವಂತೆ ಕಠಿಣವಾಗಿ ಇರದೆ ಇಂಥಾ ದೋಷಾರೋಪಕ ವ್ಯಾಜ್ಯಗಳನ್ನು ಹೂಡುವವರ ಮೇಲೆ ಅದಕ್ಕಾಗುವ ಖರ್ಚು ಇತ್ಯಾದಿಗಳಿಗೆ ಜವಾಬ್ದಾರರನ್ನಾಗಿ ಮಾಡಿ ಅವರನ್ನು ಖಂಡಿಸಿದಾದರೆ ಸಾಕಷ್ಟು ಸರಿ ಹೋಗಿದೀತೆಂದು ನಾವು ಹೇಳಬಹುದಾಗಿದೆ.

ಶ್ರೀಗಳಾದ ಫೂಟ್ ಮತ್ತು ರ್ಯಾಮ್ಸೀ ಇವರ ವಿಚಾರಣೆಯು ಪ್ರತ್ಯೇಕವಾಗಿ ನಡೆದಾಗ ಫೂಟ್ (Mr. Foote) ಇವನು ತನ್ನ ಬಗ್ಗೆ ತಾನಾಗಿಯೇ ಶ್ರೀನ: ಬಹು ಸಾಮರ್ಥ್ಯದಿಂದ ವಾದಿಸಲು ನ್ಯಾಯಾಧೀಶನು ಅದನ್ನು ತುಂಬಾ ಮನನೀಯವಾಗಿದೆ,

ಎಂಬುದಾಗಿ ಪ್ರಶಂಸಿಸಿದನು, ಪಂಚಾಯತ ಸದಸ್ಯರತ್ತ ಗಂಭೀರವಾಗಿ
ನೋಡಿ ಲಾರ್ಡ್ ಕೋಲರಿಡ್ಜ್ ಇವನು ಇಂಥಾ ಜನಪ್ರಿಯವಲ್ಲದ ಅ
ಭಿಪ್ರಾಯಗಳನ್ನಿಟ್ಟುಗೊಂಡು ವ್ಯವಹಾರಗಳನ್ನು ಬಲವಾಗಿ ಖಂಡಿಸ
ದನಲ್ಲದೆ ಪೂರ್ತಿ ನಿರ್ಮೂಲವಾಗುವಂತಿಲ್ಲದ ವ್ಯಾಜ್ಯಗಳು
ಜಯಪ್ರದವಾಗಲಾರವು, ಎಂಬುದಾಗಿ ಹೇಳುತ್ತಾ, ಇಂಥಾ ಕೋರ್ಟು
ವ್ಯವಹಾರಗಳಲ್ಲಿ ನಿರತರಾಗುವವರ ಸರಳ ರೀತಿಯ ಸೌಜನ್ಯದ
ಬಗೆಯೆಂತು ಎಂಬುದಾಗಿ ತೀವ್ರವಾಗಿ ಟೀಕಿಸಿ ಹೇಳಿದನು, "ಸಾ
ಮಾನ್ಯವಾಗಿ ಹೇಳುವುದಾದರೆ", ಎಂಬುದಾಗಿ ಪ್ರಾರಂಭಿಸುತ್ತಾ, ಆ
ನ್ಯಾಯಾಧೀಶನು ಈ ರೀತಿ ಹೇಳಿದನು:—

"೧೯ನೇ ಶತಮಾನದ ಇಂಗ್ಲೆಂಡಿನಲ್ಲಿ ಸಾಧ್ಯವಾದುದಕ್ಕಿಂತ ಇ
ನ್ನೂ ಹೆಚ್ಚು ಕಠಿಣವಾಗಿಲ್ಲದಿದ್ದರೆ ಆ ಉಪದ್ರವಕಾರಕ ಸ್ಥಿತಿಯು
ನಿಜಕ್ಕೂ ವ್ಯಸನವೇ ಸರಿ! ಹಾಗೆಂದರೆ ಇದು ಬಹು ಸುಲಭ ರೀ
ತಿಯ ಸೌಜನ್ಯದ ಒಂದು ಮಾದರಿಯೆಂಬುದನ್ನು ನಾನು ಒಪ್ಪ
ದಿರಲಿಕ್ಕೆ ಸಾಧ್ಯವಿಲ್ಲ, ದೇವರ ದಯೆಯು ನಮ್ಮ ಬಾಳನ್ನು
ನಡೆಸುತ್ತದೆಂದು ನಂಬಿ ಮನಸಿನಿಂದ ಆಡಂಬರವಿಲ್ಲದೆ ಅನು
ಸರಿಸುವ ಅತಿ ಕ್ರಿಯಾಸಾಧಕವಾದ ಗುಣವು ಅದಾಗಿದೆ, ಇದನ್ನು ಸಾ
ಧಿಸಲು ಸುಲಭವೇನೂ ಇಲ್ಲ; ಅಲ್ಲದೆ ಇದು ಹೆಚ್ಚು ಗುಲ್ಲನ್ನು ಮಾಡ
ಲಾರದು, ನಮ್ಮ ಅಭಿಪ್ರಾಯಕ್ಕೆ ಒಪ್ಪದವರನ್ನು ತಳ್ಳಿ ಹಾಕು
ವುದು ಸುಲಭವೇ ಸರಿ! ಯಾರ ಜೀವನವು ದೇವರಿಗೆ ಹೆಚ್ಚು
ಪ್ರಿಯವಾಗಿರಬಹುದೋ, ಮತ್ತು ನಮ್ಮದಕ್ಕಿಂತ ಆ ಪರಮಾತ್ಮನ
ಗೌರವಕ್ಕೆ ಹೆಚ್ಚು ಪಾತ್ರವಾಗಬಹುದೋ ಅಂತವನನ್ನು ಭಿನ್ನಾಭಿಪ್ರಾ
ಯವನ್ನು ತಳೆದಿರುವನೆಂಬ ಕಾರಣದಿಂದ ದೇವರನ್ನು ನಂಬ
ದಂತವರೆಂಬ ಉತ್ಸಾಹದ ಸೋಗಿನಿಂದ ಕೂಡಿದವರು ಅವನನ್ನು
ವಿರೋಧಿಸುವುದು ಸರಿ! ಯಾರ ಜೀವನವು ನಿಷ್ಕಳಂಕವಾಗಿಲ್ಲ
ವೋ, ಮತ್ತು ಯಾರು ಶಾಸನ ವಿರುದ್ಧ ಬಾಸೂನುಗಳನ್ನು ಬಲಾ
ತ್ಕಾರದಿಂದ ಇತರರ ಮೇಲೆ ಹೇರುವ ಒಂದು ಬಗೆಯ ವಿಶೇ
ಷ ಭಕ್ತಿಯನ್ನು ದೇವರಲ್ಲಿ ತಳೆಯುವರೋ ಅಂಥವರು ಇತರರ
ಮೇಲೆ ಆರೋಪಣೆಯನ್ನು ಹೊರಿಸಿದಾಗ ಆ ರೀತಿ ಆರೋಪಿ
ಸದವರಿಗಿಂತ ಹೆಚ್ಚಾಗಿ ಆರೋಪಣೆಗೆ ಒಳಗಾದ ಪ್ರತಿವಾದಿಯು
ಮೇಲೆ ಹೆಚ್ಚು ಕರುಣೆಯನ್ನು ತೋರಿಸುವ ಸಹಿಷ್ಣುತೆಯನ್ನು
ನಿಸ್ಸಂದೇಹವಾಗಿಯೂ ಪ್ರತ್ಯಕ್ಷಿಸುವರು, ವಾಲ್ಟೈರ್ ಇವನ
ರಸಿಕತೆಗೆ ಸಂತೋಷಿಸಿದ ಗಿಬ್ಬನ್ ಇವನ ಪರಿಹಾಸ್ಯಕ್ಕೆ ಬೆನ್ನು
ತಿರುಗಿಸುವ ಮತ್ತು ಹ್ಯೂಮ್ ಇವನ ವ್ಯಂಗ್ಯಮಾತುಗಳನ್ನು
ಬಹುಶಃ ಅರಗಿಸಿಕೊಳ್ಳುವಂತವರು ಅಂಥಾ ವ್ಯವಹಾರ ಹೂ
ಡಿದರೆ ಅಂಥವರಲ್ಲಿ ನಮ್ಮ ಸಂತಾಪವು ಉದಿಸುವ ಬದಲಾಗಿ

ಇದು ಪ್ರತಿವಾದಿಗಳಿಗೇನೇ ಹೆಚ್ಚು ಅನ್ವಯಿಸುವುದು. ಅಂತಹ ವ್ಯವಹಾರಕ್ಕೆ ಬಿಷಪರು ಕೈಹಚ್ಚಿದ್ದಾದರೆ ಅದು ಇನ್ನೂ ಅತ್ತ ಅನುಚಿತವೇಕೆಂದರೆ, ದೇವರಿಗೆ ತನ್ನಿಂದ ಸಹಾಯವು ಅಗತ್ಯವೆಂಬ ಭಾವನೆಯಿಂದ ಅಲ್ಲ, ಮತ್ತು ತನ್ನ ಸಾಮರ್ಥ್ಯದಿಂದ ತಾನಾಗಿಯೇ ದೇವರನ್ನು ಒಲಿಸಲಾರದೆ ಇತರರಿಗೆ ಉಚಿತವಾದವನನ್ನು ದೇವರ ನೆರವಿಂದ ಕೊಟ್ಟು ಆ ರೀತಿ ದೇವರನ್ನು ಒಲಿಸಬಹುದೆನ್ನುವುದು ಕೇವಲ ಪಕ್ಷಪಾತ ದೃಷ್ಟಿ ಮತ್ತು ರಾಜಕೀಯ ಮಿತ್ರತ್ವದ ನೀತಿಯಾಗಿದೆ. ಹಾಗಾದರೆ ಮಾನವ ಗುಣಕ್ಕೆ ವಿಶಾಲದೃಷ್ಟಿ ಧಾರ್ಮಿಕ ಭಾವನೆ ಇತ್ಯಾದಿ ಅವಶ್ಯವಾಗಿ ಬೇಕು ---."

ಹೀಗೂ ನ್ಯಾಯಾಲಯದ ಪಂಚಾಯತರು ಈ ತೀರ್ಪಿಗೆ ಒಪ್ಪಲಿಲ್ಲವಾದರೂ ವ್ಯವಹಾರವು ಬಂದು ತೀರ್ಮಾನದೊಳಗಾಯಿತು. ಈ ವಿಚಾರಣೆಯಿಂದಾದ ಲಾಭವೆಂದರೆ ರಾಷ್ಟ್ರೀಯ ಭೌತಿಕವಾದ ಸಂಸ್ಥೆಯ ಸದಸ್ಯತೆಯ ಸಂಖ್ಯೆಯು ತುಂಬಾ ಏರಿತು. Freethought-ಪ್ರಸಾರಪತ್ರಿಕೆಗಳ ಪ್ರಚಾರವು ಹೆಚ್ಚಾಯಿತು. ಕೆಲಕಾಲ ಶ್ರೀ ಫೂಟ್ ಇವನು ಬಹು ಪ್ರತಿಭಾವಂತನೂ ಜನಪ್ರಿಯನೂ ಎಂಬುದಾಗಿ, ಮತ್ತು ವಾಕ್ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಹುತಾತ್ಮನೆಂದೂ ಚರಿತ್ರೆಯಲ್ಲಿ ತನ್ನ ಹೆಸರನ್ನು ಇರಿಸಿದನು. ಉತ್ತಮ ವಿಚಾರಗಳ ಬಗ್ಗೆ ತಪ್ಪುಕಲ್ಪಿಸಿದ್ದು ಮುಂದಕ್ಕೆ ಮರೆತುಹೋಗುವುದು; ದೃಢನಂಬಿಕೆ ಮತ್ತು ಧೈರ್ಯಗಳು ನಿಷ್ಠೆಯಿಂದ ಮುಂದಕ್ಕೂ ಉಳಿಯುವುದು. ಮತ ವಿರೋಧಿಗಳೆಂಬ ಕಾರಣದಿಂದ ನರಳಿದವರು ಕಷ್ಟನಷ್ಟಗಳನ್ನು ಎಂದಾದರೂ ಪ್ರಚಾರಪಡಿಸಿದ್ದಿದೆಯೇ ಎಂದು ಚರಿತ್ರೆಯು ಕೇಳಲಾರದು. ಇದು ಹೀಗೆ ಪ್ರಶ್ನಿಸುವುದು; ಅವರು ತಮ್ಮ ನಿಷ್ಕಲತೆಯಲ್ಲಿ ಧೈರ್ಯದಿಂದ ಇದ್ದರೇ? ತಾವು ಕಂಡ ಸತ್ಯವನ್ನು ನಿಷ್ಠೆಯಿಂದ ಪಾಲಿಸಿದರೇ? ಹೀಗೂ ಈಶ್ವರನಿಂದೆಗಾಗಿ ಫೂಟ್ ಇವನಿಗೆ ವಿಧಿಸಿದ ಶಿಕ್ಷೆಯನ್ನು ದಾಖಲೆಗಳಲ್ಲಿ ಕಾಣಬಹುದು. ___ ತಿಂಗಳುಗಳಲ್ಲಿ ___ ವಾರಗಳ ಕಾಲ ಒಬ್ಬನೇ ತನ್ನ ಕಾರಾಗೃಹದಲ್ಲಿ ಕಳೆದನು. ಅವನಿಗೆ ಕೂರಲಿಕ್ಕೆ ಇದ್ದುದು ಒಂದು ಚಿಕ್ಕ ಮಣೆ ಮಾತ್ರ! ಅವನಿಗೆ ವಿಧಿಸಿದ ಕೆಲಸವಾದ ಕೋರ್ ಹಾಕಿ ಹೆಣೆಯುವುದು; ಮಲಗಲಿಕ್ಕೆ ಮರದ ಹಲಗೆ! ಅವನ ಸೆರೆಮನೆವಾಸದ ಕಡೇ ಅವಧಿಯಲ್ಲಿ ಅವನಿಗೆ ಕೆಲವು ಪುಸ್ತಕಗಳನ್ನು ಓದಲಿಕ್ಕೆ ಕೊಟ್ಟಿದ್ದರು.

ಅಧ್ಯಾಯ ೧೨

ಸಮಾಜ ವಾದ.

ಕ್ರಿ.ಶ. 1883 ರ ಮಧ್ಯಕ್ಕಿಳಿದ ದಿನಗಳು ಹಿತವಿಲ್ಲದ ಕಾರ್ಯಭಾರದೊಡನೆ ಎಂದಿನಂತೆ ಕಳೆದು ಹೋದುವು. ಪ್ರಮಾಣ ಸ್ವೀಕಾರ ಮಸೂದೆ — Affirmation Bill — ಇದು ತಿರಸ್ಕೃತವಾಯಿತು. ಭಾವನಾತ್ಮಕವಾದ ಹಕ್ಕು ಬಾಧ್ಯತೆಗಳಿಗಾಗಿ ಚಳುವಳಿಯು ಹೆಚ್ಚುತ್ತಾ ಬಂತು. ನಮ್ಮ ಅಭಿಪ್ರಾಯಗಳು ಲಿಬರಲ್ ಪಕ್ಷದ ಮಾರ್ಗಗಾಮಿಗಳನ್ನು ನಮ್ಮ ಕಡೆಗೆ ತಂದಿತು, ಮತ್ತು ಬ್ರಾಡ್ಲೆಯವರ ತನ್ನ ಧೈರ್ಯ, ಸಾಹಸ ಮತ್ತು ಆತ್ಮಸಂಯಮತನಕ್ಕೆ ನಿರ್ಭೀತಿಯಿಂದಲೂ ಚಿನ್ನದಂಥಾ ಅಭಿಮಾನ ಜನಾಭಿಪ್ರಾಯವನ್ನು ಗಳಿಸಲು ಆರಂಭಿಸಿದನು. ಆಮ್‌ಸ್ಟರ್‌ಡಾಮಿನಲ್ಲಿ ಜಯಪ್ರದವಾಗಿ ನಡೆದ ಅಂತರ್ರಾಷ್ಟ್ರೀಯ ಪರಿಷತ್ತು ನಮ್ಮಲ್ಲಿ ಕೆಲವರನ್ನು ಮತ್ತೊಂದು ಜಯಪ್ರದವಾದ ಸಮ್ಮೇಳನಕ್ಕೆ ಉತ್ತರ ಎಡಿನ್‌ಬರ್ಗಿಗೆ ಕೊಂಡೊಯ್ದಿತು. ನನಗಾದರೋ ಆ ವರ್ಷವು ಹೆಚ್ಚು ಪ್ರಾಮುಖ್ಯವಾದುದು ಏಕೆಂದರೆ ಸಮಾಜವಾದ ಚಳುವಳಿಯು ಪ್ರಾರಂಭದಲ್ಲಿದ್ದರೂ ಸ್ವಲ್ಪ ಮಟ್ಟಿಗಾದರೂ ನನ್ನನ್ನು ಆಕರ್ಷಿಸಿತು. ಆ ವರ್ಷದ ವಸಂತ ಮಾಸದಲ್ಲಿ ನಾನು ಲೂಯಿ ಮೆಕ್ಕೆಲ್ಲನ ಭಾಷಣವನ್ನು ಕೇಳಿದ್ದೆನು. National Reformer ಪತ್ರಿಕೆಯಲ್ಲಿ ಎದ್ದ ಸಂವಾದವು ನನಗೆ ಸ್ವಾರಸ್ಯವಾಗಿ ತೋರಿತು. ಆದರೆ ಸಮಾಜವಾದ — Socialism — ಇದರ ಆರ್ಥಿಕ ತಳಹದಿಯೆಂತೆಂದು ನಾನು ಆಲೋಚಿಸಲು ಪ್ರಾರಂಭಿಸಿರಲಿಲ್ಲ. ಕೆಲವು ಸಾರ್ವಜನಿಕ ಅನ್ಯಾಯಗಳಿರಬೇಕೆಂಬುದನ್ನು ನಾನು ಊಹಿಸಿದ್ದೆನು. ಆದರೆ ಹೃದಯವನ್ನೂ ಮೆದುಳನ್ನೂ ಹೆಚ್ಚಾಗಿ ಸಿಡಿಸುತ್ತಿರುವ ಬಡತನಕ್ಕೆ ಆರ್ಥಿಕ ಕಾರಣಗಳೇನೆಂಬುದರ ಬಗ್ಗೆ ಚಿಂತಿಸಿರಲಿಲ್ಲ. ನನ್ನ ಎಳೆತನದಲ್ಲಿ ಹಳೆ ಆಂಗ್ಲ ಅರ್ಥಶಾಸ್ತ್ರವನ್ನು ಮಾತ್ರ ನಾನು ಓದಿದ್ದರಿಂದ ಸಮಾಜವಾದಿ ತತ್ವಗಳ ಬಗ್ಗೆ ನಾನು ಏನೂ ತಿಳಿದಿರಲಿಲ್ಲ. 1884 ರಲ್ಲಿ ಈ ತತ್ವಗಳನ್ನು ಕುರಿತು ಒಂದು ನಿಶ್ಚಿತ ಕಾರ್ಯಕ್ರಮವನ್ನು ಆಲೋಚಿಸುವ ಕಾಲವು ಬಂತು. ಆ ವರ್ಷದ "Reformer" ಪತ್ರಿಕೆಯ ಮೊದಲ ಸಂಚಿಕೆಯಲ್ಲಿ ನಮ್ಮ ಓದುಗರಿಗೆ ಇದರ ಬಗ್ಗೆ ನಾನಿತ್ತ ಕರೆಯು ಹೀಗಿತ್ತು:—

"ನಮ್ಮ ಧ್ಯೇಯಕ್ಕೆ 1884 ನೇ ವರ್ಷದಲ್ಲಿ ಯಾವ ಪರೀಕ್ಷೆ ಇದೆ! ನಮ್ಮ ನಿಜ ಶಕ್ತಿ ಪ್ರಭಾವಕ್ಕೆ ಯಾವ ಪರಿಶ್ರಮವಿದೆ! ನಮ್ಮ ಕರ್ತವ್ಯ ನಿಷ್ಠೆಗೆ ಯಾವ ಪ್ರಯೋಗವಿದೆ, ಎಂಬುದಾಗಿ

ಯಾರಿಗೂ ಹೇಳಲು ಸಾಧ್ಯವಿಲ್ಲ. ಧೈರ್ಯದ ಪ್ರತಿಯೊಂದು ಶಿಕ್ಷೆ
ಯನ್ನೂ ಜಯಪ್ರದವಾಗಿ ಎದುರಿಸಿ ಸಹಿಷ್ಣುತೆಯ ಪ್ರತಿ
ಯೊಂದು ಕೃತ್ಯವನ್ನೂ ಸಾವಧಾನದಿಂದ ಹೋರಾಟ ಮತ್ತು
ಕರ್ತವ್ಯ ನಿಷ್ಠೆಯ ಪ್ರತಿಯೊಂದು ಪ್ರಯೋಗವನ್ನೂ ವಿಸ್ತೃತನ
ದಿಂದ ಜಯಶೀಲದಾಗಿ ಅವೆಲ್ಲವೂ ಹಿಂದೆ ಇದ್ದುದಕ್ಕಿಂತ ಹೆ
ಚ್ಚಾಗಿ 'ಹೋರಾಟದಲ್ಲಿ ಧೈರ್ಯವು ಇನ್ನಷ್ಟು ಎದೆಗಾರಿಕೆಯಿಂ
ದಲೂ ಸಹಿಷ್ಣುತೆ ಭಾವವು ಇನ್ನಷ್ಟು ಬಲವತ್ತಾಗಿಯೂ ಕ
ರ್ತವ್ಯ ನಿಷ್ಠೆಯು ಮತ್ತಷ್ಟು ವಿಸ್ತೃತನದಿಂದಲೂ ಕಾಣಿಸಿಕೊ
ಳ್ಳುವುದು ನಮಗೆ ಗೊತ್ತಿದೆ. ಆದುದರಿಂದ ನಮಗಾಗಿ
ಮತ್ತು ನಮ್ಮ ಉದ್ದೇಶದ ಸಲುವಾಗಿ ಈ 1884ನೇ ವರ್ಷದಲ್ಲಿ
ಶತ್ರುವೂ ಇಲ್ಲ, ಹೋರಾಟವೂ ಇಲ್ಲ, ಎಂಬುದಾಗಿ, ಮಿತ್ರ
ರೇ, ನಾನು ಹಾರೈಸಲಾರೆನು, ಆದರೆ ಮುಂದಿನ ವರ್ಷದಲ್ಲಿ
ಉದ್ದೇಶದ ಉದ್ಧಾರದ ಹೋರಾಟಕ್ಕೆ ಶಕ್ತಿಯನ್ನೀಯಲು ನಾವು
ಪ್ರತಿಯೊಬ್ಬರಿಗೂ ವೀರ ಸ್ಫೂರ್ತಿಯನ್ನು ಮಿತ್ರರಿಗೆ ತಕ್ಕಂತೆ
ಸಹನೆಯನ್ನು ಒದಗಿಸಲಿ ಎಂದು ಆಶಿಸುತ್ತಿದ್ದೇನೆ.

ಆ ವರ್ಷದ ಫೆಬ್ರವರಿಯಲ್ಲಿ JUSTICE ಎಂಬ ಪತ್ರಿ
ಕೆಯನ್ನು ನಾನು ಮೊದಲ ಬಾರಿಗೆ ನೋಡಿದೆನು, ಅದರಲ್ಲಿ
ಭಾಷಣವನ್ನು ಪ್ರಕಟಿಸಲಾಗಿತ್ತಲ್ಲದೆ ಇನ್ನೂ Social Democra-
tic ಅಲ್ಲದ Democratic Federation ಸಂಸ್ಥೆಯು
ಒಂದು ಕೊಟ್ಟದ ವರದಿಯನ್ನೂ ಆ ಪತ್ರಿಕೆಯು ಪ್ರಕಟಿಸಿತ್ತು.
ಅದರಲ್ಲಿ ಒಬ್ಬನು ಕಾರ್ಮಿಕರ ಕಷ್ಟ ಪರಿಹಾರಕ್ಕಾಗಿ ಮತ್ತು ಅ
ದರ ಸಾಧನೆಗೆ ಯಾವುದೇ ಬಗೆಯ ಶ್ರಮವೂ ನ್ಯಾಯವಾದು
ದೇ ಎಂಬುದಾಗಿ ಸ್ವಲ್ಪವೂ ಅಂಜದೆ ನೇರವಾಗಿ ಹೇಳಿದನು. ಹಿಂಸಾ
ತ್ಮಕವಾದ ಈ ನೀತಿಯನ್ನು ನಾನು ಬಲವಾಗಿ ಟೀಕಿಸಿದೆನು, ತಮ್ಮ
ಕಾರ್ಯಸಾಧನೆಗೆ ಆ ರೀತಿಯಾಗಿ ಪ್ರಯತ್ನಿಸುವವರು ಸಾಮಾಜಿ
ಕ ಪ್ರಗತಿಯೇನೆಂದು ತಿಳಿಯದವರೆಂದು ಹೇಳಿದೆನು, ಕೆಲವು
ವಾರಗಳನಂತರ "ECHO" ಎಂಬ ಪತ್ರಿಕೆಯು ಶ್ರೀ ಹೈಂಡ್‌ಮನ್
ಇವನ ಭಾಷಣವೊಂದನ್ನು ಪ್ರಕಟಿಸಿತು, ಅದರಲ್ಲಿ ಫ್ರಾನ್ಸ್‌ನಲ್ಲಿ
ನಡೆದುದಕ್ಕಿಂತ ದೊಡ್ಡ ಒಂದು ಕ್ಷಿಪ್ರ ಕ್ರಾಂತಿಯಾಗ
ಬಹುದೆಂದು ಭವಿಷ್ಯ ನುಡಿದಿತ್ತು. ಶಸ್ತ್ರ ಬಲದ ಮೂಲಕ
ವಿಚಾರಗಳನ್ನು ಹರಿಯಬಿಡುವುದು ನಿಲ್ಲಿಸುವುದು, ಎಂಬ ಅಭಿಪ್ರಾಯವನ್ನು
ಸಮಾಜವಾದದ ಗೆಲುವಿನೊಡನೆ ಬೆರೆಸಿ ಹೇಳಿದ್ದುದನ್ನು ನಾನು
ಟೀಕಿಸಿದೆನು, ಅಲ್ಲಿಂದ ಒಂದು ವಾರದನಂತರ 'Justice'
ಪತ್ರಿಕೆಯಲ್ಲಿ ಸ್ವತಂತ್ರ ಚಳವಳಿಯು ಮುಂದುವರಿಯುವಂತಾ
ಗುವವರೆಗೆ ಹಿಂಸಾತ್ಮಕವಾದ ಅಗತ್ಯವಿಲ್ಲವೆಂಬುದಾಗಿ ನಿಶ್ಚಿತ
ವಾಗಿ ಪ್ರತಿಪಾದಿಸಿದ ವಿವೇಕಯುಕ್ತವಾದ ಬರಹವೊಂದಿತ್ತು

ನನ್ನು ನೋಡಿ ಸಂತೋಷಿಸಿದನು.

ಅದೇ ವೇಳೆಗೆ ನನಗೆ ಇಲ್ಲಿ ನಿರೂಪಿಸಲು ಸಮಯವಾಗಲೀ ಸಾಕಷ್ಟು ಸ್ಥಳವಾಗಲೀ ಇಲ್ಲದ ಎರಡು ಘಟನೆಗಳು ನಡೆದುವು, ಶಾಸನ ಸಭೆಯು ಒಂದು ಠರಾವನ್ನು ಅನುಸರಿಸಿ ಚಾರ್ಲ್ಸ್ ಬ್ರಾಡ್ಲೆಯು ತನ್ನ ಸ್ಥಾನಕ್ಕೆ ರಾಜೀನಾಮೆಯನ್ನಿತ್ತುದೂ ಅನಂತರ ನಡೆದ ಚುನಾವಣೆಯಲ್ಲಿ ಹಿಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಪಡೆದುದಕ್ಕಿಂತ 4,032 ಹೆಚ್ಚಿನ ಓಟುಗಳನ್ನು ಪಡೆದು ನಾಲ್ಕನೇ ಬಾರಿಗೆ ಪ್ರಚಂಡ ಜಯಭೇರಿ ಸಹಿತವಾಗಿ ಗೆದ್ದು ಬಂದುದೂ ಒಂದಾಗಿದೆ, ಫೆಬ್ರವರಿ ೨೫ರಂದು ಹೋಲೋವೇ ಸೆರೆಮನೆಯಿಂದ ಶ್ರೀ ಫೂಟ್ ಇವನನ್ನು ಬಿಡುಗಡೆ ಮಾಡಿದಾಗ ಸುಮಾರು ೭೦೦ ಗಜ ಉದ್ದಕ್ಕೂ ಇದ್ದ ಮೆರವಣಿಗೆಯಿಂದ ಅವನನ್ನು ಸ್ವಾಗತಿಸಲಾಯಿತು. ಮಾರ್ಚ್ ೧೭ರಂದು ಅವನಿಗೆ ಮತ್ತು ಅವನೊಡನಿದ್ದ ಖೈದಿಗಳಿಗೆ ಅಭೂತಪೂರ್ವಕ ಸನ್ಮಾನ ಕೊಡಲ್ಪಟ್ಟಿತಲ್ಲದೆ Hall of Science ನಲ್ಲಿ ಬಿನ್ನವತ್ತಳೆಗಳೂ ಅವರಿಗೆ ಕೊಡಲ್ಪಟ್ಟವು.

ಸಮಾಜವಾದದ ಎಳೆಯನ್ನು ಪುನಃ ಎತ್ತಿಕೊಂಡು ಬ್ರಾಡ್ಲೆ ಮತ್ತು ಹಿಂಡ್ಮನ್ ಇವರೊಳಗೆ ಏಪ್ರಿಲ್ ೧೭ರಂದು ಲಂಡನ್ನಿನ ಸೇಂಟ್ ಜೇಮ್ಸ್ ಹಜಾರದಲ್ಲಿ ನಡೆದ ಚರ್ಚೆಯ ವೇಳೆಗೆ ಎತ್ತಿದ ಪ್ರಶ್ನೆಯು ಬಗ್ಗೆ ನನ್ನನ್ನು ತುಂಬಾ ಆಲೋಚಿಸುವಂತೆ ಮಾಡಿತು, ಇಂಗ್ಲೆಂಡಿನಲ್ಲಿ ಸಮಾಜವಾದವನ್ನು ನಿಷ್ಠೆಯಿಂದ ಮತ್ತು ಸ್ವಾರ್ಥತ್ಯಾಗದಿಂದ ಪ್ರತಿಪಾದಿಸುತ್ತಿದ್ದ ಹಿಂಡ್ಮನ್ನನಂತೆ ಇನ್ನೊಬ್ಬನಿರಲಿಲ್ಲ, ಬಹುಕಾಲವಾಗಿ ಮತ್ತು ತುಂಬಾ ಓದಿದ, ವಿಶೇಷ ಸಮರ್ಥನಾಗಿ ಹಣವನ್ನು ಗಳಿಸುವ ಲೇಖನಿಯಿಂದ ಅವನು ಶ್ರೀಮಂತನಾದರೂ ವೃತ್ತಿಯನ್ನು ಅವಲಂಬಿಸಿದ್ದರೆ ಅದ್ವಿತೀಯ ಸಂಪನ್ನನಾಗಬಹುದಾಗಿದ್ದ ಅವನು ಒಂದಿಷ್ಟು ಹಿಂದಕ್ಕೆ ನಿಲ್ಲದೆ ಜನತೆಯ ಸೇವೆಗೆಂದು ಮುಂದಾದನು, ಜನರ ನಿಂದನೆಯನ್ನೂ ತಾನು ಯಾರ ಸೇವೆಗಾಗಿ ಶ್ರಮಿಸಿದನೋ ಅವರ ಸಂಶಯ ಮತ್ತು ನಿರ್ದಯತೆಯನ್ನು ಸಹಿಸಿದನು. ಜನಕ್ಕೆ ದ್ರೋಹವನ್ನು ಬಗೆಯಬಹುದಾದ ಆಕರ್ಷಕ ವಿಚಾರಗಳಿಂದ ಸುತ್ತುವರೆದಿದ್ದರೂ ಅವನು ಎಂದೂ ತನ್ನ ಪ್ರಾಮಾಣಿಕತೆಯನ್ನು ಮೀರಿ ನಡೆದುದೇ ಇಲ್ಲ, ಅವನು ಅವಿಚಾರದ ಮಾತುಗಳನ್ನಾಡಿದಾನೆ; ಆವೇಶಭರಿತ ಉದ್ಗಾರಗಳಿಂದ, ಅಜಾಗ್ರತೆಯ ನಡೆಗಳಿಂದ ಜನವನ್ನು ಕೆರಳಿಸಿದ್ದಾನೆ, ಆದರೂ ಜನಕ್ಕೆ ಅವನ ಮೇಲಿದ್ದ ಪ್ರೀತಿ ಮತ್ತು ದೀನರ ಮೇಲೆ ಅವನು ತೋರಿಸಿದ ಸಂತಾಪವು ಅವನ ಕರ್ಕಶವಾದ ನಡೆನುಡಿಗಳಿಗೆ

ಮೂಲವಾಗಿತ್ತು. ಅವನ ನಿಷ್ಠೆಯ ಸೇವೆಯ ಮುಂದೆ ಅವನ ಮಾತು ಅಲಕ್ಷ್ಯವಾದುದಾಗಿತ್ತು. ವೈಯಕ್ತಿಕವಾಗಿ ನಾನು ಅವನಿಗೆ ಋಣಿಯಾಗಿರಬೇಕಾದುದಕ್ಕೆ ಹೆಚ್ಚು ಕಾರಣವಿರಲಿಲ್ಲ, ಬ್ರ್ಯಾಡ್ಲೆಯ ಮೇಲೆ ಅವನು ಕಟ್ಟಿಕೊಂಡ ಭಕ್ತಿಶ್ರದ್ಧೆಯಾದ ಮತ್ತು ಅನ್ಯಾಯವಾದ ವಿರೋಧವು ಕೆಲಕಾಲ ನನ್ನನ್ನು ಸಮಾಜವಾದದಿಂದ ದೂರವಿರಿಸಿತು. ಅವರ ಸೇಂಟ್ ಜೇಮ್ಸ್ ಹಜಾರದಲ್ಲಿ ನಡೆದ ಆ ಚರ್ಚೆಯ ವೇಳೆಗೆ ಅವನ ಅನ್ಯಾಯದ ವರ್ತನೆಯನ್ನು ನಾನು ಕೋಪದಿಂದಲೇ ಅರಗಿಸಿಕೊಂಡೆನು. ನಿಶ್ಚಯ ಸಮಾಜವಾದದಲ್ಲಿ ನಾನು ಭಾವಿಸಿದ್ದಕ್ಕಿಂತ ಇನ್ನೂ ಸ್ವಲ್ಪ ಹೆಚ್ಚು ಇದೆಯೆಂದು ಆ ಮೇಲೆ ನಾನು ಬ್ರ್ಯಾಡ್ಲೆಯ ಪ್ರಭಾವಿತವಾಗಲು ಮತ್ತು ವೈಯಕ್ತಿಕ ಆಕರ್ಷಣೆಯಿಂದ ದೂರ ಸರಿದು ಹೋದಾಗ ನನಗೆ ತಿಳಿದು ಬಂತು. ಆಂಗ್ಲ ಸಮಾಜವಾದಿಗಳು ಪ್ರಾರಂಭದಿಂದಲೇ ಬ್ರ್ಯಾಡ್ಲೆಯನ್ನು ಚೆನ್ನಾಗಿ ಕಾಣದೇ ಇದ್ದುದು ವ್ಯಸನಕಾರವಾದ ವಿಷಯವಾಗಿದೆ, ಆದುದರಿಂದ ಅವನ ಮಿತ್ರರು ತಮ್ಮ ವಾದವಿವಾದಗಳನ್ನು ನಿರೀಕ್ಷಿಸುವ ಮೊದಲೇ ಸಮಾಜವಾದಿಗಳಿಗೆ ವಿರೋಧವಾಗಿ ಎದ್ದರು. ನಾನು ಅವನ ಮೇಲೆ ಇಟ್ಟಿದ್ದ ನಿಕಟ ಅಭಿಮಾನದ ಫಲವಾಗಿ ನನ್ನ ಆಂದಿನ ದಿನಗಳಲ್ಲಿ ಸಮಾಜವಾದಿಗಳ ಬಗ್ಗೆ ಅನ್ಯಾಯದಿಂದ ವರ್ತಿಸಿದೆನೆಂಬುದನ್ನು ಒಪ್ಪುತ್ತೇನೆ, ಅಲ್ಲದೆ ಅವಿಚಾರದಿಂದ ಮತ್ತು ಪಕ್ಷಪಾತ ದೃಷ್ಟಿಯಿಂದ ನನ್ನ ಅಭಿಪ್ರಾಯವನ್ನು ಹೇಳಿಕೊಳ್ಳುವ ಮೊದಲೇ ನಾನು ಅವರಿಗೆದುರಾಗಿ ಕೆಲವು ಬಾರಿ ಉದ್ವೇಗ ಪೂರ್ವಕವಾಗಿ ಅಪಮಾನಕರವಾದ ಮಾತುಗಳನ್ನು ಆಡಿದ್ದೇನೆ. ಅಷ್ಟೇ ಅಲ್ಲ, ಅವರ ವಾಗ್ವಾದಗಳಲ್ಲಿ ಅಸಹನೀಯ ಹಿಂಸೆ, ಅವರ ವಿರೋಧಿಗಳು ಮಾತಾಡುವಾಗ ಆಗಿಂದಾಗ್ಯೆ ಮಧ್ಯೆ ಬಾಯಿಹಾಕಿ ಗಲಭೆಯೆಬ್ಬಿಸುವುದು, ಇತ್ಯಾದಿಗಳಿಂದ ವಾಸ್ತವಿಕ ವಿಚಾರಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಅಸಮರ್ಥರಾಗಿದ್ದವರಂತೆ ವರ್ತಿಸಿದರು. ಅವರ ಕಾರ್ಯಕಾರರಲ್ಲಿ ಸಾಕಷ್ಟು ಕೆಲಸವನ್ನು ಶಕ್ತಿ ಮೀರಿ ಮಾಡುವ, ಅಲ್ಪ ತಲಬನ್ನು ಪಡೆಯುವ, ತಮ್ಮ ಅಲ್ಪ ವಿರಾಮಕಾಲವನ್ನು ತಮ್ಮ ಓದುವಿಕೆಗೆ ಉಪಯೋಗಿಸಿ ವಿದ್ಯೆಯನ್ನು ಪಡೆಯುವ, ಮತ್ತು ತಮ್ಮ ಶಿಷ್ಯರಿಗೆ ವಿವಿಧ ತರಬೇತುಗಳನ್ನು ಹೊಂದುತ್ತಿದ್ದ ಯುವಕರೂ ಅವರಾಗಿದ್ದರು. ನನ್ನ ಅವಿವೇಚನೆಯ ಕಾರ್ಯದಿಂದ ನಿಮ್ಮ ಗುಣಾನೀತಿಗಳು ಇನ್ನೂ ನಮ್ಮಲ್ಲಿ ಬಲಗೊಳ್ಳದ್ದರಿಂದ, ನಾನು ತಪ್ಪಾಗಿ ಕಲ್ಪಿಸಿಕೊಂಡ ಅವರ ಕುಂದು ಕೊರತೆಗಳನ್ನು ಕ್ಷಮಿಸಲು ಕೇಳುತ್ತೇನೆ, ತಮ್ಮ ಮನಸ್ಸಿನ ಸ್ವಾಮಿತ್ವವನ್ನು ಕಳೆದುಕೊಳ್ಳದೆ ಮತ್ತು ನಿಷ್ಪಕ್ಷಪಾತ ದೃಷ್ಟಿಯಿಂದ ನಮ್ಮನ್ನು ಕಂಗೆಡಿಸುತ್ತಿರುವ

ಅನ್ಯಾಯಗಳನ್ನೆಲ್ಲ ಸಹಿಸುವವರು ಮಾನಸಿಕವಾಗಿ ಬಲಿಷ್ಠರಾಗಿರು
ವವರು ನಮ್ಮಲ್ಲಿ ಎಷ್ಟು ಜನ ಇದ್ದಾರೆ! ಸಮಾಜವಾದೀ ಪ್ರಜಾತಂತ್ರ
(social Democracy) ಗಳಲ್ಲಿ ನಿಜವಾದ ಸ್ವಾತಂತ್ರ್ಯವೂ ದೊರೆ
ಯುವುದು ಆತ್ಮತ್ಯಾಗವೂ ನಿರಂತರ ನಿಸ್ವಾರ್ಥತೆಯೂ ಸೋದರ
ಭಾವವೂ ಎಲ್ಲರ ಮನಸ್ಸಿಗೆ ಇದೆಯೆಂಬುದನ್ನು ಅವರೊಡನೆ
ಬೆರೆತವರಿಗೆ ಮಾತ್ರ ತಿಳಿದಿದೆಯಲ್ಲದೆ ಬೇರಾರಿಗೂ ಇಲ್ಲ.

ಈ ಸಮಯದಲ್ಲಿ ಸಮಾಜವಾದೀ ಲೇಖಕರಲ್ಲಿ ಬಹು
ಮೇಧಾವಿಯೂ ತರುಣ ಉದ್ರೇಕವನ್ನುಂಟುಮಾಡುವವನೂ
ಹೃದಯಪೂರ್ವಕವಾಗಿ ಉತ್ಸಾಹಿಗಳಾಗಿರುವವರನ್ನು ಹುರುಪು
ಗೊಳಿಸುವವನೂ ಅತಿ ಚತುರನೂ ಮತ್ತು ತಾನಾಗಿಯೇ
ಒಬ್ಬ ಪೋಕರಿ (scoundrel) ಎಂಬುದಾಗಿ ತೋರ್ಪಡಿಸಿಕೊ
ಳ್ಳುವುದರಲ್ಲಿ ಉತ್ಸಾಹಿಯೂ ಆದ ಜಾರ್ಜ್ ಬರ್ನಾರ್ಡ್ ಷಾ ಇವ
ನನ್ನು ಕಂಡೆನು, "ಸೀತ್ ಸ್ಟೋರ್" ಕಟ್ಟಡದ ಮೇಲಿಗೆಯಲ್ಲಿ
ಅವನು ತಾನೊಬ್ಬ ತಿರುಬೊಂಬುವವನು (loafer) ಎಂಬುದಾಗಿ
ಇತರರಿಗೆ ತನ್ನ ಪರಿಚಯವನ್ನು ತಾನೇ ಮಾಡಿಕೊಂಡದ್ದು
ನನಗೆ ಅವನ ಮೊದಲ ಅನುಭವವಾಗಿದೆ. ಅದಕ್ಕೆ ನಾನು
"Reformer" ಪತ್ರಿಕೆಯಲ್ಲಿ ಕೋಪದಿಂದ ಸಿಡಿದು ಉತ್ತರಿ
ಸುತ್ತಾ "ಅಂಥ ತಿರುಬೊಂಬೆ ತಿರುಕನನ್ನು ತಿರಸ್ಕಾರದಿಂದ ಕಾ
ಣುವೆನು, ಇಗೋ ನೋಡು," ಎಂದು ಹೇಳಿದೆನು. ಹಿಂದು
ದೇಶೀಯವನನ್ನು ಸಾಧಿಸಲು ಬರೆಯುತ್ತಿದ್ದವನಾದುದರಿಂದ ಅವನು
ಬಹು ಬಡತನದಿಂದ ಇದ್ದುದನ್ನು ಕಂಡೆನಲ್ಲದೆ ಅವನು ತನ್ನ
ಸ್ವಂತ ಆತ್ಮಶ್ಲಾಘನೆಯನ್ನು ಹಸಿವಿಗೀಡು ಮಾಡುವುದರ
ಬದಲಾಗಿ ತನ್ನ ದೇಹವನ್ನೇ ಹಸಿವಿಗೊಳಪಡಿಸಿದ್ದನು. ಸ
ಮಾಜವಾದವನ್ನು ಹಬ್ಬಿಸಲು ಅವನು ತನ್ನ ಜೀವಿತವ
ನ್ನು ಮತ್ತು ಪರಿಶ್ರಮವನ್ನು ನಿಷ್ಠೆಯಿಂದ ಉಪಯೋಗಿಸುತ್ತಾ
ಕಾರ್ಮಿಕರ ಕೂಟದಲ್ಲಿ ಪ್ರತಿದಿನ ರಾತ್ರಿಯನ್ನು ಕಳೆಯು
ತ್ತಾ ಇದ್ದ ಅವನು ಯಾವೊಂದು ಗೌರವಪಟ್ಟಿಯನ್ನು ಹೊ
ರದಿದ್ದ ಕಾರಣದಿಂದ ಅವನು loafer ಎಂಬುದಾಗಿ
ತಮಾಷೆಯಿಂದ ಕರೆದುಕೊಂಡದ್ದು ತಕ್ಕುದಾಗಿಯೇ
ಇತ್ತು. ಹೀಗೂ ನಾನು ಅವನನ್ನು ಕಟುವಾಗಿ ಟೀಕಿಸಿ
ಅವನಿಗೆ ಆ ರೀತಿ ದೊಡ್ಡ ಅನ್ಯಾಯವನ್ನು ಬಗೆಯುವ
ಬಲೆಗೆ ಬಿದ್ದುದರಿಂದ ಅವನ ಕ್ಷಮೆಯನ್ನು ನಾನು
ಕೋರಿದೆನು. ಇಷ್ಟರಲ್ಲಿ ನಾನು ರಾಜಕೀಯದಿಂದ
ಕ್ರಮೇಣವಾಗಿ ಹಿಂಜರಿದು ಜನತೆಯ ಸಾಮಾಜಿಕ ಪ
ರಿಸ್ಥಿತಿಯನ್ನು ಸುಧಾರಿಸಲು ಸಮಯವೆಲ್ಲವನ್ನೂ ವಿನಿ
ಯೋಗಿಸಿದೆನು, ಎಳೆ ಬಾಲಬಾಲಿಕೆಯರ ದಿನಕ್ಕೆ ಹನ್ನೆ

ರಡು ತಾಸುಗಳ ಕಾಲ ದುಡಿಯಬೇಕೆಂದು ಸರ್ ಜಾನ್ ಲುಬ್ಬಕ್ ಇವರು ಶಾಸನ ಸಭೆಯಲ್ಲಿ ತಂದ ಮಸೂದೆಯನ್ನು ನಾನು ಆ ವರ್ಷದ ಜೂನ್ ತಿಂಗಳಲ್ಲಿ ಪ್ರತಿಭಟಿಸುತ್ತಿದ್ದೆನೆಂದು ನಾನಾಗಿಯೇ ತಿಳಿಸಿದೆನು. "ಹನ್ನೆರಡು ತಾಸುಗಳ ಕೆಲಸದ ದಿನವೆಂದರೆ ಅಮಾನುಷವಾದುದು. ಖಾನೂನು ದಿನಕ್ಕೆ ಹನ್ನೆರಡು ತಾಸುಗಳಂತೆ ಕೆಲಸವನ್ನು ನಿರ್ಧರಿಸ್ತು ದುಡಿಯುವುದಕ್ಕೆ ಕಾಲಾವಧಿಯೆಂದು ಬಗೆದರೆ ಅಂಥಾ ಖಾನೂನು ಕ್ರಮೇಣ ವ್ಯವಹಾರಕ್ಕೆ ಬರುವುದು. ಖಾನೂನಿಗನುವಾದ ದಿನವು ದಿನಕ್ಕೆ ಎಂಟು ತಾಸುಗಳ ಕೆಲಸವಾಗಿ ವಾರಕ್ಕೆ (ಐದು ದಿನಗಳು ಮಾತ್ರ ದುಡಿಯಬೇಕಾಗಿ ಬರುತ್ತದೆ; ಮತ್ತು ಆರನೇ ದಿನದ ಕೆಲಸವು (ಐದು ತಾಸುಗಳ ಅವಧಿಯನ್ನು ಮೀರಬಾರದು. ಅವರು ಮಾಡುವ ಕೆಲಸವು ತುಂಬಾ ಆಯಾಸಕರವಾದುದಾದರೆ ದಿನಕ್ಕೆ ಎಂಟು ತಾಸುಗಳ ಕಾಲಾವಧಿಯೂ ಸಹ ದೀರ್ಘವಾದುದೇ ಆಗುತ್ತದೆ," ಎಂಬುದಾಗಿ ನಾನು ಬರೆದೆನು. ಈಗವೆಲ್ಲಾ ಕಡೆಗಳಿಂದಲೂ ಸಮಾಜವಾದವನ್ನು ಕುರಿತಾಗಿ ವಾದವಿವಾದಗಳು ಹೆಚ್ಚಿದುವು. ನಾನು ಅದನ್ನೆಲ್ಲ ಕೇಳುತ್ತಾ ಇದ್ದೆನು, ಓದಿದೆನು, ಮತ್ತು ತುಂಬಾ ಆಲೋಚಿಸಿದೆನು, ಆದರೆ ಹೆಚ್ಚು ಮಾತಾಡದೆಯೇ ಇರುತ್ತಿದ್ದೆನು. ಜಾನ್ ರಾಬರ್ಟ್‌ಸನ್ ಇವರನ್ನು Reformer ಪತ್ರಿಕಾ ಕಛೇರಿಯಲ್ಲಿ ನೇಮಿಸಿದ್ದರಿಂದ ನಮಗೆ ಸರಿಕ ಮೇಧಾವಿಯಾದ ಓರ್ವ ಸಮಾಜವಾದಿಯು ದೊರಕಿದಂತಾಯಿತು. ಹಾಗಾಗಿ ಕ್ರಮೇಣ ಸಮಾಜವಾದವು ಮಾನಸಿಕವಾಗಿ ಸಂಪೂರ್ಣವೂ ನೈತಿಕವಾಗಿ ಸುಂದರವೂ ಆಗಿ ತೋರಿತು, ನನ್ನ ಆತ್ಮಪ್ರಜ್ಞೆಯು ಹೇಗೆ ಹರಿಯುತ್ತೆಂಬುದು ವಿದ್ಯೆ ಮತ್ತು ಹಣವು ಇವುಗಳ ಭಾರದಿಂದ ಸೊರಗಿ ಬೆಂಡಾಗಿದ್ದ ಬೋರ್ಡನ್ ಜಾತಿಯ ಮಕ್ಕಳನ್ನು ಪ್ರತಿಫಲಾಯಿಸಿ ಕೊಲ್ಲಿಸುತ್ತಿದ್ದುದರಲ್ಲಿ ಕಾಣುತ್ತಿತ್ತು. "ಇಂತಿಷ್ಟೇ ಬೆಲೆಯ ಊಟವನ್ನು ಉಣ್ಣಬೇಕೆಂದು ಜನರಿಗೆ ವಿಧಿಸಿ ಅವರನ್ನು ತಿರಸ್ಕರಿಸನ್ನಾಗಿ ಮಾಡುವ ಬದಲಾಗಿ ಅವರಿಗೆ ಪ್ರೀಡಾಂಗಣ ರಕ್ಷಣೆ, ನೀರು ಒದಗಿಸುವಿಕೆ, ಉತ್ತಮ ರಸ್ತೆ, ಬೀದಿ ಬೆಳಕು ಇತ್ಯಾದಿಗಳನ್ನು ಸರಕಾರವು ಏತಕ್ಕೆ ಕೊಡಬಾರದೇಕೆ?" ಎಂಬುದಾಗಿ ನಾನು ಕೇಳಿದೆನು. ಒಳ್ಳೆಯ ಉದ್ದೇಶದಿಂದ ಕೂಡಿದ ಸಮಾಜವಾದವು ನನಗೆ ಹತ್ತಿರವಾಗಿ ಮೆಚ್ಚಿಕೆಯಾಯಿತಲ್ಲದೆ ಅದರ ಆರ್ಥಿಕ ಪರಿಣಾಮಗಳ ಮೂಲ ತತ್ವವು ಮಾನಸಿಕವಾಗಿ ಒಪ್ಪಿತು, ಅಲ್ಲಿಂದನಂತರ ನನ್ನ ಜೀವನವಿಡೀ ಜನರ ಪ್ರಗತಿಗೆ, ಜನರ ಸೇವೆಗೆ ಮೀಸಲಾಯಿತಲ್ಲದೆ ಅನಂತರ ಅದು ಇನ್ನೂ ಬಲವತ್ತಾದ ಕಡೆಗೆ, ಸಾಮಾಜಿಕವಾಗಿ ಸೋದರಭಾವವನ್ನು ಕಲ್ಪಿಸುವ ಧ್ಯೇಯಕ್ಕೆ ಮತ್ತು ಎಲ್ಲಾ ಸ್ವತಂತ್ರ

ಜೀವಿಗಳಿಗೆ ಸಾಧ್ಯವಾದಷ್ಟು ಹಿತವನ್ನು ಮಾಡುವ ಪ್ರಯತ್ನಕ್ಕೆ ಆಕಾಂಕ್ಷಿಸಿ ಎತ್ತ ಹಾರುತ್ತ, ಆ ವರೆಗೆ ಹಿಂದಿನ ದಾರಿಯನ್ನು ಹಿಡಿದು ನಡೆಯುತ್ತಿದ್ದೆನು, ಈಗ ನಾನು ಎಂದೋ ಆಕಾಂಕ್ಷಿಸಿದ್ದ ಗುರಿಯನ್ನು ಮುಟ್ಟಲು ಹೊಸ ಹಾದಿಯೊಂದು ತೆರೆಯಲ್ಪಟ್ಟಿತು, ಆಗ ನಾನು ಎಷ್ಟು ಸಂತೋಷಗೊಂಡೆನು, ಮತ್ತು ಅದರಿಂದ ನನ್ನ ಹೃದಯವು ಎಷ್ಟು ಪುಲಕಿತಗೊಂಡಿತು ಎಂಬುದನ್ನು 1885ರ ಜನವರಿಯಲ್ಲಿ ನಾನು ಬರೆದ ಲೇಖನದ ಒಂದು ಭಾಗವನ್ನು ಇಲ್ಲಿ ಕೊಡುತ್ತೇನೆ:—

"ಕ್ರೈಸ್ತ ಧರ್ಮದ ಜೀವಾಳ? ಅದೇನು ಎಲ್ಲಿರುತ್ತದೆಯೆಂದು ನನಗೆ ಗೊತ್ತಿದೆ! ಕ್ರೈಸ್ತ ಧರ್ಮ ನ್ಯಾಯವು ಈಗ ಒಂದು ಕುಟುಂಬದ ಪ್ರಮುಖನೊಬ್ಬನು ಮಾಡುವ ಕೆಲಸಕ್ಕೆ ತಕ್ಕಂತೆ ತಲಬನ್ನು ವಿಧಿಸಿದರೆ ಪ್ರತಿಯೊಂದು ಕುಟುಂಬವೂ ಪ್ರತಿ ವರ್ಷವೂ ಈಗ ಪಡೆಯುತ್ತಿರುವ ಒಂದು "ಹಂಡ್ರೆಡ್‌ವೈಟ್" ಭಾರದಷ್ಟು ಮಸಿ ಮತ್ತು ಐದು ಪೌಂಡು ದನದ ಮಾಂಸಕ್ಕಿಂತ ಅಧಿಕ ನೂರು ಪಾಲು ಹೆಚ್ಚು ಆಹಾರ ಸಂಚಯವನ್ನು ಅವನು ಸಂಪಾದಿಸಬಲ್ಲನು, ಈಗ ಇರುವ ಶ್ರಮವು ಕಾರ್ಮಿಕರು ಸಂಪಾದಿಸಬಹುದಾದ ಸಂಪತ್ತನ್ನು ಸುತಲಿಗೆ ಮಾಡಿ ಅನಂತರ ಆ ಸುತಲಿಗೆಯ ಒಂದು ಸಾವಿರದಲ್ಲಿ ಒಂದು ಪಾಲನ್ನು ಅವರಿಗೆ ಹಿಂದಕ್ಕೆ "ದಾನ"ವಾಗಿ ಎಸೆದು ಕೊಡುತ್ತದೆ, ಹಾಗೆ ಸುತಲಿಗೆ ಮಾಡಿದ ಹಣದಿಂದಲೇ ಅವರ ಜಾವಳಿಗೆಗಳು ಮತ್ತು ಗಲ್ಲಿಗಳು ಹೊಲಸುಗಳಲ್ಲಿ ವಿಷವನ್ನುಣಬೋಗಿಸುವ ಬಡಬಗ್ಗರಿಗೆ ಔಷಧಾಲಯಗಳನ್ನು ಮತ್ತು ದೈಹಿಕ ಶಕ್ತಿ ಆಸ್ತಿ ಬರುವವರಿಗೆಲ್ಲ ಹೀರಲ್ಪಟ್ಟು ಕೃಶಗೊಂಡ ಪತಿತರಿಗೆ ದುಡಿದು ಸಂಪಾದಿಸಲು ಅಲ್ಲಲ್ಲಿ ಕಾರ್ಖಾನೆಗಳನ್ನು ಕಟ್ಟಿಸುತ್ತಾರೆ, ಕ್ರೈಸ್ತ ಜನಾಂಗದ ನಾಗರಿಕತೆಯನ್ನು ನೋಡಿ ಬೆರಗುಗೊಳ್ಳಲು ಶ್ರೀಮತಿ ಕೋಬ್ಬೆ (Miss Cobbe) ಇವಳು ನಮ್ಮನ್ನು ಆಹ್ವಾನಿಸುತ್ತಿದ್ದಾಳೆ. ಆದರೆ ಕಾರ್ಮಿಕರು ಹೆಣೆದು ನಿರ್ಮಿಸಿದ ನಿಲುವಂಗಿಗಳನ್ನುಟ್ಟು ಅಟ್ಟಹಾಸದಿಂದ ವರ್ತಿಸುವ ಸೋಮಾರಿಗಳನ್ನು, ಮತ್ತು ಕಣ್ಣೀರಿಂದ ತೊಯ್ದು ಬಳಲಿ ಮುಪ್ಪಿಗೆ ನಿರಾಶೆಯಿಂದ ತತ್ತರಿಸುವ ಬಡಜನವು ವರಿಸಿದ ಬಂಗಾರದಿಂದ ಮಿನುಗುವ ಮೇಲುಪ್ಪರಿಗೆಯಲ್ಲಿ ಜೀವಿಸುವವರನ್ನು ಮಾತ್ರ ನಾವು ನೋಡುತ್ತಿದ್ದೇವೆ."

1885ರ ಜನವರಿಯಲ್ಲಿ ಡಬ್ಲ್ಯೂ. ಪಿ. ಬಾಲ್ ಇವನ ಬರೆವಣಿಗೆಯು ನನ್ನ ಸಮಾಜವಾದೀ ಪ್ರವೃತ್ತಿಯನ್ನು ಮೊದಲ ಬಾರಿಗೆ ಪ್ರತಿಭಟಿಸಿತು, ಬೋರ್ಡ್ ಶಾಲೆ ಮಕ್ಕಳಿಗೆ ಒಂದು ಪ್ರಮಾಣವನ್ನನುಸರಿಸಿ ಊಟವನ್ನು ಬಡಿಸಬೇಕೆಂದು ನಾನು ವಾದಿಸಿದ್ದುದರ ಮೇಲೆ ಅವನು Reformer-ಪತ್ರಿಕೆಯಲ್ಲಿ ಟೀಕಿಸಿದನು, ಆದುದರಿಂದ ಕೆಲಕಾಲ ಚಿಕ್ಕದೊಂದು ವಾಗ್ವಾದವೆದ್ದಿ

ತು. ನಾನು ಪ್ರಜ್ಞಾಪೂರ್ವಕವಾಗಿ ಸಮಾಜವಾದಿಯೆಂದು ವಾದಿಸದಿದ್ದ ಬಗ್ಗೆ
ನನ್ನ ಅಭಿಪ್ರಾಯವೇನೆಂಬುದಾಗಿ ಕೇಳಿದಿರಿ. ಸಮಾಜವಾದಿಗಳು ಚಾರ್ಲ್ಸ್
ಬ್ರ್ಯಾಡ್ಲೆಗೆ ವಿರೋಧವಾಗಿ ಬದ್ಧವೈರವನ್ನು ಕಟ್ಟಿಕೊಂಡಿದ್ದುದರಿಂದ
ನಾನು ಸಾರ್ವಜನಿಕವಾಗಿ ಅವರೊಡನೆ ಸಹಕರಿಸಿ ದುಡಿಯಲು ನಿಜ
ವಾಗಿಯೂ ಅಂಜಿದೆನು, ಆತ್ಮವಿಶ್ವಾಸದಿಂದ ತುಂಬಿದ ಬ್ರ್ಯಾಡ್ಲೆಯ
ವೈಯಕ್ತಿಕ ಪ್ರತಿಭೆ ಮತ್ತು ತೀಕ್ಷ್ಣ ಪ್ರಕೃತಿಗೆ ಎಳೆ ಜನಾಂಗದ ವಾದ
ಪ್ರತಿವಾದಗಳು ಯಾವ ಪರಿಣಾಮವನ್ನೂ ಬೀರಲಿಲ್ಲ, ತಿರುವಿಕೆಗೆ
ಎಂಬಂತೆ ಹಿಂದು ಪಾಳೆಯದ ಉದಯವಾಗುತ್ತಲಿದ್ದುದರಿಂದ
ಅವನಿಗೆ ತನ್ನದೇ ಆದ ರೀತಿ ನೀತಿಗಳನ್ನು ಬದಲಾಯಿಸಲಾಗಲಿಲ್ಲ,
ನಮ್ಮ ಕಾಲದ ಸಮಾಜವಾದವು ಹಿಂದಿನ ಕಾಲದ ಸಮಾಜವಾದದ
ಕನಸುಗಳಿಂದ ಎಷ್ಟು ಬೇರ್ಪಟ್ಟಿದೆಯೆಂಬುದನ್ನು ಅವನು ನೋ-
ಡಲಿಲ್ಲ, ಭವಿಷ್ಯದ ಉತ್ತಮ ಉದ್ದೇಶಗಳನ್ನು ನಿಜವಾಗಿಯೂ
ಬೇಗನೆ ಕಾರ್ಯಗೊಳಿಸತಕ್ಕಾಗುವುದಿಲ್ಲ. ಅವುಗಳನ್ನು ದಿನದಿಂದ ದಿ-
ನಕ್ಕೆ ಎಂಬಂತೆ ಪ್ರಯತ್ನಿಸಿ ಮುಂದಕ್ಕೆ ಸಾಧ್ಯವಾಗಿಸಬೇಕು. ಬ-
ಲವಾದ ಮತ್ತು ಇನಿದಾದ ಸ್ನೇಹ ವಿಶ್ವಾಸವು ನಮ್ಮಿಬ್ಬರೊಳಗೆ
ಇದ್ದಷ್ಟು ವರ್ಷಗಳಿಂದ ಇರುವಾಗ ಅಂಥ ಹಿರಿಯ ನಿಷ್ಠನ ಮಿತ್ರನನ್ನು
ಎದುರಿಸಿ ಸಾರ್ವಜನಿಕವಾಗಿ ಅವನಿಗೆ ನಾನು ಕಹಿಯನ್ನುಂಟುಮಾ-
ಡಲೇ? ಅವನಿಗೆ ವಿರೋಧವಿದ್ದವರೊಡನೆ ಈಗ ನಾನು ಸೇರಿ ದುಡಿ-
ಯುವ ಅಭಿಪ್ರಾಯವನ್ನು ನನಗೆ ಅವನಲ್ಲಿ ಇರುವ ಪ್ರೀತಿ ಕೃತ-
ಜ್ಞತೆಗಳೆಲ್ಲವೂ ಪ್ರತಿಭಟಿಸುತ್ತವೆ. ಆದರೆ ಹಸಿದು ಬಳಲುವ
ಕೂಸುಗಳ ಕರೆಯು ನನ್ನ ಕಿವಿಯ ಮೇಲೆ ನಿತ್ಯವೂ ಬೀಳುತ್ತಿತ್ತು.
ನೀರಸದ ಕೆಲಸಗಳನ್ನು ಮಾಡಿ ವಿಷದಿಂದ ತೊಯ್ದು, ಮೊಳೆಗ-
ಳನ್ನು ಬಡಿಯುವ ಕೆಲಸದಿಂದ ಆಯಾಸಹೊಂದಿ ಅನ್ನಕ್ಕೆ ಗತಿ
ಯಿಲ್ಲದೆ ವೇಶ್ಯಾವೃತ್ತಿಯನ್ನವಲಂಬಿಸಿ, ಎಡೆಬಿಡದೆ ಶ್ರಮಿಸಿ
ಪ್ರಾಯವೇರುವ ಮೊದಲೇ ಸೊರಗಿ ನರಳುವ ಹೆಂಗಸರ ಅಳು-
ವನ್ನು ಕೇಳುತ್ತಿದ್ದೆನು, ಅವರ ದಾರಿದ್ರ್ಯವು ಖಾಸಗೀ ಜನರ
ಬಂಡವಾಳಗಾರಿಕೆಯೂ ಪ್ರಸ್ತುತಯುಗದ ಉತ್ಪಾದನೆಗೆ ಬೇಕಾದ ಎಲ್ಲಾ
ಸಲಕರಣೆಗಳೂ ಒಟ್ಟುಗೂಡಿ ಇರುವ ಒಂದು ಅಕ್ರಮ ನೀತಿ
ಯಿಂದ ಹುಟ್ಟಿದ್ದೆಂದು ತಿಳಿದುಕೊಂಡೆನು, ಇಲ್ಲಿ ಕಾರ್ಮಿಕನೇ
ಬಂಡವಾಳಗಾರನ ಒಂದು ಸಲಕರಣೆಯಾದರೂ ಅವನು ತನ್ನ
ಪರಿಶ್ರಮವನ್ನು ಪರಿಸ್ಥಿತಿಗೆ ತಕ್ಕಂತೆ ವಿನಿಯೋಗಿಸಲೇ ಬೇಕಾ-
ದ್ದರಿಂದ ಅವನು ಬಂಡವಾಳಗಾರರ ಮುಷ್ಟಿಯಲ್ಲಿ ನಿಸ್ಸಹಾ-
ಯಕನಾಗಿ ಇರಬೇಕಾಗುತ್ತದೆ. ವ್ಯಾಪಾರಿಗಳು ಒಟ್ಟುಗೂಡಿ
ಉತ್ಪಾದನೆಯನ್ನು ಹೆಚ್ಚಿಸಲು ಕಾರಣವಾದಾಗ ಅದರ ಪರಿ-
ಣಾಮವು, ಉದಾಹರಣೆಗೆ, ದೇಶದ ರಕ್ಷಣೆಯ ಹೆಸರಿನಲ್ಲಿ
ಹೆಚ್ಚು ಅಸ್ತ್ರಗಳ ಉತ್ಪಾದನೆಗೆ ಅವಕಾಶವಿತ್ತಂತಾಗುತ್ತದೆ.

ಹಾಗಾದರೆ ಇದು ಎಲ್ಲಾ ಜನರ ಹಿತಕ್ಕಾಗಿ ಎಲ್ಲರೂ ಸೋದರ ಭಾವದಿಂದ ಪರಸ್ಪರ ಸಹಕರಿಸುವ ಕ್ರಮವಾಗಲಾರದು. ಮೇಲು ಹೋದರೆ ಎಲ್ಲವೂ ಕಲ್ಪಿತ ಹಾಕಲ್ಪಟ್ಟ ಮನೋಸಂಘರ್ಷಣೆ, ಮತ್ತು ವೈಯಕ್ತಿಕ ಸಂಬಂಧ, ಕರ್ತವ್ಯದ ಕರೆ—ಇವುಗಳೊಳಗೆ ಇರುವ ಸೆಳೆತವು ಬಹುಕಾಲ ನಿಲ್ಲಲಾರದು. ಹೇಗೂ ಕಡೆಗೆ ನಾನು ತುಂಬಾ ದುಃಖದಿಂದ ಬಹಿರಂಗವಾಗಿ ಮತ್ತು ನನ್ನ ಸರ್ವಶಕ್ತಿಯನ್ನು ಉಪಯೋಗಿಸಿ ಸಮಾಜವಾದದ ಧ್ಯೇಯಗಳನ್ನು ಘೋಷಿಸಲು ಇಳಿದೆನು. ಬ್ರ್ಯಾಡ್ಲಿಯಾದರೋ ಎತ್ತರ ಮನೋದಾರ್ಢ್ಯದಿಂದ ಕೂಡಿದವನೋ "ಆಕ್ಷೇಪಿಸಹಸಾರ್ಹನು" ಎಂಬುದೇ ಸಂತೋಷದ ವಿಷಯವಾಗಿತ್ತು. ನಮ್ಮಿಬ್ಬರೊಳಗೆ ಇದ್ದ ವೈಯಕ್ತಿಕ ಸ್ನೇಹದ ಎಳೆಯು ತುಂಡಾಗದೆ ಎಂದಿನಂತೇ ಮುಂದುವರಿಯಿತು. ಆದರೆ ಅವನು ನನ್ನ ಅಭಿಪ್ರಾಯಗಳ ಮೇಲಿಂದ ಇಡುತ್ತಿದ್ದ ವಿಶ್ವಾಸವನ್ನು ಇತ್ತೀಚೆಗೆ ಇಟ್ಟಿದ್ದಿಲ್ಲ. ನಾವು ಮೊದಲ ಬಾರಿಗೆ ಜತೆ ಸೇರಿ ಒಟ್ಟಾಗಿ ದುಡಿಯತೊಡಗಿದಂದಿನಿಂದ ಮಾಡುತ್ತಿದ್ದ ರೀತಿಯಲ್ಲಿ ತನ್ನ ಸ್ವಂತ ಕಾರ್ಯಕ್ರಮಗಳ ಬಗ್ಗೆ ಇತ್ತೀಚೆಗೆ ನನಗೆ ಹೇಳಿದ್ದೂ ಇಲ್ಲ.

"Our Corner" ಪತ್ರಿಕೆಯಲ್ಲಿ ನಾನು "ರಾಜಕೀಯ ಅಧಿಕಾರವನ್ನು ಪುನಃ ಹಂಚುವಿಕೆ," (Redistribution of Political Power), "ಸಮಾಜದ ಉತ್ಕ್ರಾಂತಿ," (Evolution of Society), "ಆಧುನಿಕ ಸಮಾಜವಾದ" (Modern Socialism) ಎಂಬ ವಿಷಯಗಳ ಬಗ್ಗೆ ಧಾರಾವಾಹಿಯಾಗಿ ಪ್ರಕಟಿಸಿದ ಲೇಖನಗಳು ನನ್ನ ನಿಲುವನ್ನು ಜನಕ್ಕೆ ತಿಳಿಸಿದುವು.

ಅನ್ಯಾಯದಿಂದ ಐಶ್ವರ್ಯವಂತರಾದವರು ಇದ್ದರೆ ಅದೇ ರೀತಿ ಅನ್ಯಾಯದಿಂದ ಬಡವರಾದವರೂ ಬಹಳ ಮನೆಗಳೊಂದಿಗೆ ಇರಲು ಗಳಿಗೆಗಳು ಇನ್ನೊಂದೆಡೆಯೂ ಎಲ್ಲ ದೇಶಗಳೂ ತರತರದ ಆಗಿರುವ ಇಂದಿನ ಸಮಾಜದ ಪರಿಸ್ಥಿತಿಗಿಂತ ಮೇಲಾಗಿ ಬಡವರನ್ನು ಕೂಡಿಸಲು ಪ್ರತಿಕ್ರಿಯೆ ನಡೆಸಿ ಮೇಲೇರುವುದಕ್ಕೆ ಮತ್ತು ಬಹುಜನತ್ವವಾಗಿ ಚಿನ್ನಭರಣಗಳ ಸಂಗ್ರಹಕ್ಕೆ ಹಾತೊರೆಯುವುದಕ್ಕಿಂತ ಎಲ್ಲರಿಗೂ ಮಿಗಿಲಾಗಿ ಜೀವನದಲ್ಲಿ ಉನ್ನತ ಧ್ಯೇಯವೊಂದು ಇದೆಯೆಂಬುದನ್ನು ಸಾರುವುದೇ ನಮ್ಮ ಕರ್ತವ್ಯವಾಗಬೇಕು. ಲೋಭದಿಂದ ಉಸಿರುಕಟ್ಟಿಕೊಂಡು ಜೀವನಕ್ಕೆ ಹೋರಾಡುವುದು, ಪ್ರಬಲರು ದುರ್ಬಲರನ್ನು ಇನ್ನಷ್ಟು ಅಧೋಗತಿಗೆ ತಳ್ಳುವುದು, ಇತರರು ಗೆದ್ದುದನ್ನು ಇಟ್ಟುದನ್ನು, ಅಪಾರ ಐಶ್ವರ್ಯವನ್ನು ಸಂಗ್ರಹಿಸಿ ಕಡೆಗೆ ಅದಕ್ಕಾಗಿ ಶ್ರಮಿಸಬೇಕಾಗಿಲ್ಲದ ತಮ್ಮ

ಮುಂದಿನ ಪೀಳಿಗೆಗಾಗಿ ಅದನ್ನು ಕೂಡಿಡುವುದೇ ಮೊದಲಾದುವುಗಳಿಗಿಂತ ಆರೋಗ್ಯ, ಜೀವನ ನಿರ್ವಹಣೆ, ಸಾಕಷ್ಟು ವಿಶ್ರಾಂತಿ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಪ್ರತಿಯೊಬ್ಬನಿಗೂ ತುಂಬಾ ಪ್ರಮುಖವೆಂಬುದಾಗಿ ಖಂಡಾತುಂಡವಾಗಿ ತಿಳಿಸುವುದು ನಮ್ಮ ಕರ್ತವ್ಯವಾಗಬೇಕು! ಒಂದು ದೇಶದ ಘನತೆಯು ಅದರ ದೊಡ್ಡ ಕಾರ್ಖಾನೆಗಳ ಸಂಖ್ಯೆಯಿಂದಲ್ಲ; ಉನ್ನತ ಶ್ರೀಮಂತ ವರ್ಗದ ಜನರ ವೈಭವ ಪ್ರದರ್ಶನದಿಂದಲ್ಲ; ಬಂಡವಾಳಗಾರರ ಐಶ್ವರ್ಯವಾದ ಆಧಿಪತ್ಯದಿಂದಲ್ಲ, ಬದಲಾಗಿ ಅದು ಆ ದೇಶದ ಸುಭಿಕ್ಷೆ, ವಿದ್ಯೆ, ಸಂಸ್ಕೃತಿಗಳ ಜತೆಗೆ ಸಾರ್ವತ್ರಿಕವಾಗಿ ಸಿ- ದೊರೆಯುವ ಉತ್ತಮ ಜೀವನವನ್ನು ಆಧರಿಸಿದೆ. ಪ್ರತಿಯೊಬ್ಬನಿಗೂ ಬೇಕಾದಷ್ಟು ದುಡಿಮೆ, ವಿಶ್ರಾಂತಿ ಮತ್ತು ಸಂತೋಷವು ಲಭಿಸುವುದಾದರೆ ಅದು ಸಾಕು. ಇವು ಕೇವಲ ಸ್ವಲ್ಪವಾಗಿ ಯಾರಿಗೂ ಇರಕೂಡದು. ಇದೇ ಸಮಾಜವಾದದ ಉದ್ದೇಶವಾಗಿದೆ. ಈ ಉದ್ದೇಶ ಸಾಧನೆಗಾಗಿ ಶ್ರಮಿಸದೆ ಸಾಯುವುದಕ್ಕಿಂತ ಅದಕ್ಕಾಗಿ ದುಡಿದು ಸಾಯುವುದೇ ಮೇಲು!

ಸಮಾಜವಾದಿಗಳು ಮತ್ತು ತೀವ್ರಗಾಮಿಗಳು ಅನುಸರಿಸುತ್ತಿದ್ದ ಕ್ರಮವನ್ನು ನಾನು ಪ್ರತ್ಯೇಕಿಸಿದೆನು. ಅದರ ನಂತರ ಕಾರ್ಮಿಕರ ಸೇನೆಯ ವಿವಿಧ ಗುಂಪುಗಳು ಒಟ್ಟುಗೂಡಬೇಕೆಂದೂ ಸೋಮಾರಿಗಳಿಗೆದುರಾಗಿ ಕಾರ್ಮಿಕರ ಸಂಘವು ಒಂದಾಗಬೇಕೆಂದೂ ನಾನು ವಾದಿಸಿದೆನು. ತಮ್ಮನ್ನು ತುಳಿಯುತ್ತಿದ್ದ ಐಶ್ವರ್ಯವಂತ ವರ್ಗವನ್ನು ಒಟ್ಟಾಗಿ ಪ್ರತಿಭಟಿಸುವುದರ ಬದಲಾಗಿ ಕಾರ್ಮಿಕರ ವಿವಿಧ ಪಕ್ಷಗಳು ಯಾವಾಗಲೂ ತಮ್ಮೊಳಗೇ ಕಾದಾಡುವ ದೌರ್ಬಲ್ಯವನ್ನೇ ಕಾಣುತ್ತಿತ್ತು. ಐಶ್ವರ್ಯವಂತರಾದರೋ ತಮ್ಮೊಳಗಿನ ಭೇದವನ್ನು ಮರೆತು ತಮ್ಮ ವಿರೋಧಿಗಳೆದುರಾಗಿ ಒಗ್ಗಟ್ಟಾಗುತ್ತಿದ್ದರು. ಜನಸಾಮಾನ್ಯರಾದರೋ ಅಂತಹ ಸಂದರ್ಭಗಳಲ್ಲಿ ತಮ್ಮ ಭಿನ್ನಾಭಿಪ್ರಾಯವನ್ನೇ ಮೇಲೆತ್ತಿ ತೋರ್ಪಡಿಸಿಕೊಳ್ಳುವರು.

ಇತರ ಹಲವರು ಪ್ರಯತ್ನಿಸುತ್ತಿದ್ದಂತೆ ನಾನು ಸಹ ಬಡ ಜನರ ದುಃಖ ದಾರಿದ್ರ್ಯವನ್ನು ಕುರಿತಾಗಿ ಮನಸ್ಸೂ ಯೋಚಿಸದ ಮತ್ತು ಯಾವುದರ ಅರಿವೆಯೂ ಇಲ್ಲದ ಜನರ ಕಿವಿಗೆ ಬೀಳಿಸಲು ಸ್ಪಷ್ಟವಾಗಿ ವಿವರಿಸಲೆತ್ನಿಸಿದೆನು. ಎಡಿನ್‌ಬರೋದ ಗಲ್ಲಿಗಳನ್ನು ಕುರಿತು ಬಣ್ಣನೆಯಾಗಿ ಈ ಕೆಳಗಿನ ಮಾತುಗಳು ಹೊರಕ್ಕೆ ಬಂದುವು:—

“ನಾನು ಕಂಡ ಒಂದು 'ಮನೆ'ಯು ಒಂದು ಕೊಠಡಿಯೊಳಗಾಗಿ ಹಾದು ಹೋಗುವ ದಾರಿಯ ಒಂದು ಭಾಗವಾಗಿತ್ತು. ಆ ಕತ್ತಲ ಮಳಿಗೆಗೆ ಕಿಟಿಕಿಯೇನೂ ಇರಲಿಲ್ಲ.

ಹಗಲೆಲ್ಲ ಎಣ್ಣೆದೀಪ ಹೊತ್ತುತ್ತಿದ್ದು ಅದು ಅವರು ತೆರುತ್ತಿದ್ದ ಬಾಡಿಗೆಯು ಜೊತೆಗೆ ಇನ್ನೊಂದು ಖರ್ಚು ಆಗಿತ್ತು. ತಮ್ಮ ಬಡತನಕ್ಕೆ ತಾವೇ ಕಾರಣರಾಗಿದಿದ್ದರೂ ಅಲ್ಲಿ ಒಬ್ಬ ಗಂಡು, ಹೆಂಡತಿ ಮತ್ತು ಮಗುವಿನಿಂದ ಕೂಡಿದ ಸಂಸಾರವು ವಾಸಿಸುತ್ತಿತ್ತು. ಆ ಗಂಡು ಕಂಚು ವರ್ಣದ ಎತ್ತರದ ವ್ಯಕ್ತಿಯಾಗಿದ್ದು ಹೃದಯರೋಗದಿಂದ ಸಾಯಲಿಕ್ಕಾಗಿದ್ದನು. ಅವನಿಗೆ ಶ್ರಮದಾಯಕವಾದ ಕೆಲಸವನ್ನು ಮಾಡಲಿಕ್ಕಾಗುತ್ತಿರಲಿಲ್ಲ. ಚಿಕ್ಕ ಕೆಲಸಕ್ಕೂ ಅವನು ಯಾವೊಂದು ಕುಶಲತೆಯನ್ನು ಹೊಂದಿದ್ದವನಾಗಿರಲಿಲ್ಲ. ಹೀಗಾಗಿ ಅವನು ಅಲ್ಲಿಯೇ ಕುಳಿತಿದ್ದನು. ಎರಡು ದಿನ ತಿರಿದಾಡಿ ಕಡೆಗೆ ಅವನು ಬಾಧೆಯಿಂದ ಹಿಂಡಿ ಬೆಂಡಾಗಿದ್ದ ತನ್ನ ಮಗುವನ್ನು ಮೆಲ್ಲಗೆ ಉಣ್ಣಿಸುತ್ತಾ ಆ ನಸು ಬೆಳಕಿನ ಇಕ್ಕಟ್ಟಿನೆಡೆಯಲ್ಲಿ ಅವನು ತಂಗಿದ್ದನು. ಒಮ್ಮೊಮ್ಮೆ ಅವರ ನಿರಾಶಾದಾಯಕ ಕಣ್ಣು ನಿಟ್ಟುಸಿರುಗಳು ಹೃದಯವನ್ನು ಭೇದಿಸುತ್ತಿದ್ದವು. ಒಂದು ಕೋಣೆಯಲ್ಲಿ ಸಾಕಷ್ಟು ಅನ್ನ ನೀರಿಲ್ಲದೆ ಜ್ವರದಿಂದ ಸೊರಗಿ ಮಗುವೊಂದು ಸಾಯುತ್ತಿತ್ತು. ಅದರ ತಾಯಿಯು ಅಳುತ್ತಾ ಆ ಮಗುವಿಗೆ ತಂದೆ ಇಲ್ಲ ಎಂದು ಹೇಳಿದಳು. ಕಾನೂನನ್ನು ಮೀರಿ ತಂದೆಯು ಎಲ್ಲಾ ಭಾರವನ್ನು ಆ ರೀತಿಯಾಗಿ ತಾಯಿಯ ಮೇಲೆ ಹೇರಿ ಹೋಗಿಬಿಟ್ಟಿದ್ದಾನೆಂಬುದು ನನಗೆ ತಿಳಿಯಲಾಗಲಿಲ್ಲ. ಇನ್ನೊಂದೆಡೆಯಲ್ಲಿ ತನ್ನ ಮಕ್ಕಳಿಂದ ಸುತ್ತುವರಿದ ಒಂದು ತಾಯಿಯ ಶವವು ಇತ್ತು. ಗಂಭೀರ ಮುಖಮುದ್ರೆಯಿಂದ ಮತ್ತು ನಿಸ್ಪೃಹತೆಯಿಂದ ಕೂಡಿದ ಹೆಂಗಸರು ತಾಯಿಯನ್ನು ಕಳೆದುಕೊಂಡ ಆ ಮಕ್ಕಳನ್ನು ಇತರ ಕೋಣೆಗಳಿಂದ ತುಂಬಿದ ಹಾಸಿಗೆಯಲ್ಲಿರಿಸಲೆಂದು ಕೊಂಡು ಹೋಗಲು ಬಂದರು. ಮತ್ತೊಂದೆಡೆ ಒಬ್ಬಳು ಕಾಮಾಲೆಯಿಂದ ಕೃಶಳಾಗಿ ಬೆಂಕಿಗೆ ಮೆತ್ತಗಾಗಿ ಕುಳ್ಳಿರಿಸಿದ್ದಳು. ನಿರ್ಗತಿಕರು ವಿಧಿಯಿಲ್ಲದೆ ತಮ್ಮ ದುರ್ವಿಧಿಗೆ ಶರಣಾಗುವಂತೆ ಅವಳು Cancer ಬಾಧೆಯಿಂದ ನರಳುತ್ತಿದ್ದಳೆಂಬುದನ್ನು ತಿಳಿಸಿದಳು. ಕೆಲವು ನಿಮಿಷಗಳ ಕಾಲ ನಾನು ಅವರೊಡನೆ ಮಾತಾಡುತ್ತಾ ಕುಳಿತೆನು. ನಾನು ಅಲ್ಲಿಂದ ಹೋಗಲು ಎದ್ದಾಗ ಅವಳು, "ಪ್ರಿಯಳೇ, ಪುನಃ ಬಂದು ಹೋಗು; ದಿನವಿಡೀ ಇಲ್ಲಿ ಕುಳಿತುಕೊಳ್ಳುವುದು ತೀರಾ ಬೇಸರಕರವೇ ಸರಿ," ಎಂಬುದಾಗಿ ಹೇಳಿದಳು.

ಹೀಗೆ ಇನ್ನೂ ಹಲವು ವಿವರಣೆಗಳಿದ್ದ ಮೇಲಿನ ಲೇಖನವು ಈ ರೀತಿಯಾಗಿ ಕೊನೆಗೊಂಡಿತು:- "ಭೀಕರ ಯಾತನೆಯ ದೃಶ್ಯ ಒಂದೆಡೆ ಮತ್ತು ಅಮಿತ ಸೌಂದರ್ಯವು ಇನ್ನೊಂದೆಡೆ; ಇವನ್ನು ಪ್ರತ್ಯೇಕಿಸಲು ಕೆಲವೇ ಹೆಜ್ಜೆಗಳು ನಡೆಯಬೇಕಾದ ಹಟ್ಟದ ಬೀದಿಗಳ ಗಲ್ಲಿಗಳೆಡೆಗಾಗಿ ಹೋಗುವಾಗ ಹಿಂದೆಂದೂ

ಉರಿಯುತ್ತಿದ್ದ ಆ ಪರಿಸ್ಥಿತಿಯ ಅರಿವು ನನಗಾಯಿತಲ್ಲದೆ, ಜನತೆಯ ಸ್ಥಿತಿಯಲ್ಲಿದ್ದ ಭಯಾನಕ ಏರುತಗ್ಗುಗಳ ಸಮಸ್ಯೆಯನ್ನು ಕುರಿತು "ಇದನ್ನು ಬಗೆಹರಿಸಲು ಉಪಾಯವಿಲ್ಲವೆ? ಐಶ್ವರ್ಯವಂತರು ಮತ್ತು ಬಡವರು ಎಂಬುದಾಗಿ ಯಾವಾಗಲೂ ಇರಬೇಕೇ?" ಎಂಬ ಪ್ರಶ್ನೆಯು ನನ್ನ ಕಿವಿಯನ್ನು ಕೊರೆಯುತ್ತಿತ್ತು. ಕೆಲವರು ಹಾಗೆ ಇರಬೇಕೆಂದು ಹೇಳುತ್ತಾರೆ. ಬೆಳಕು ಮತ್ತು ಛಾಯೆ ಯಾವಾಗಲೂ ಇರುವಂತೆ ಅರಮನೆ ಮತ್ತು ಗಲ್ಲಿಗಳೂ ಇರುತ್ತವೆ. ಆದರೆ ಹಾಗೆ ಇರಬೇಕಾಗಿಲ್ಲವೆಂದೂ ನಾನು ನಂಬುತ್ತೇನೆ. ಬಡತನವು ಅಜ್ಞಾನ ಮತ್ತು ಅಕ್ರಮ ಸಮಾಜ ವ್ಯವಸ್ಥೆಗಳ ಕಾರಣಗಳಿಂದ ಎಂದು ನಾನು ತಿಳಿಯುತ್ತೇನೆ. ಆದುದರಿಂದ ಜ್ಞಾನ ಮತ್ತು ಸಾಮಾಜಿಕ ಸುಧಾರಣೆಗಳಿಂದ ಪರಿಸ್ಥಿತಿಯನ್ನು ಬಗೆಹರಿಸಬಹುದು. ಹಾಗಿದ್ದರೂ ವಯಸ್ಕರಾದ ಹಲವು ಗಲ್ಲಿವಾಸಿಗಳಿಗೆ ಭವಿಷ್ಯವು ಆಶಾದಾಯಕವಾಗಿಲ್ಲವೆಂಬುದನ್ನು ಒಪ್ಪುತ್ತೇನೆ. ಸಂಸ್ಕೃತಿ ಸಭ್ಯತೆಗಳ ಹೆಸರಿನಿಂದ ಪೈಶಾಚಿಕತೆಯನ್ನು ಅಡಗಿಸಿರುವ ಇಂದಿನ ನಾಗರಿಕತೆಗೆ ತುತ್ತಾದ ಬಡಜನರಿಗೆ ವೈಯಕ್ತಿಕವಾಗಿ ಯಾವ ಭವಿಷ್ಯವೂ ಇಲ್ಲ. ಆದರೆ ಅವರ ಮಕ್ಕಳಿಗಾದರೋ, ಹೀಗೂ ಇದೆ. ಉತ್ತಮ ವಾತಾವರಣ, ಒಳ್ಳೆಯ ಆಹಾರ, ಮಾನಸಿಕ ಮತ್ತು ಶಾರೀರಿಕ ವ್ಯಾಯಾಮ, ಆರೋಗ್ಯ ಮತ್ತು ಜಾಗರೂಕತೆಯಿಂದ ಆರಿಸಲ್ಪಡಲಾದ ಶಾಲೆಗಳಿಂದ ಎಳೆ ಮಕ್ಕಳನ್ನು ರಕ್ಷಿಸಿ ಅವರನ್ನು ಮುಂದಿನ ಜೀವನಕ್ಕೆ ತರಬೇತುಗೊಳಿಸಬಹುದು. ಆದರೆ ಅವರನ್ನು ಅವರ ತಂದೆತಾಯಿಗಳು ಜೀವಿಸುತ್ತಿದ್ದ ದುಃಸ್ಥಿತಿಯಲ್ಲಿಯೇ ಬಿಡಲಾಗಿದೆ. ಕೆಲವು ತಾಸುಗಳ ಶಾಲಾ ಜೀವನದಿಂದ ಪಡೆಯುವ ಉತ್ತಮ ಸನ್ನಿವೇಶವನ್ನು ಅವರ ಗೃಹ ಜೀವನವು ತೆಗೆದುಹಾಕುತ್ತದೆ. ಅವರಿಗೆ ಕೊಡಲ್ಪಡುವ ಅತಿ ಅಲ್ಪ ಸಹಾಯವೂ ಬಹಳ ಕಷ್ಟದಿಂದ ಕೊಡುವುದೋ ಎಂಬಂತಿದೆ. ಅವರಿಗೆ ದೊರೆಯುವ ಪ್ರಾಥಮಿಕ ವಿದ್ಯೆಯು ಸಹ ಬರೀ ಹಿಂದಿನದ್ದು, ಧರ್ಮಕ್ಕೆ ಕೊಟ್ಟಂತಾಗಿದೆ. ಆದರೂ ಭವಿಷ್ಯದಲ್ಲಿ ವಿಶ್ವಾಸ ಹಾಗೂ ಹೆದರಿಕೆ, ನಿದ್ರೆ ಇಲ್ಲದ ರಾತ್ರಿಗಳು, ಮೊಳಗಿಯ ಬಹುದಾದ ಆಪತ್ತುಗಳು, ಮತ್ತು ಜೀವನವನ್ನು ಉತ್ತಮವಾಗಿ ಕಟ್ಟುವ ಅವಕಾಶ ವಿಸ್ತರಿಸಿಕೊಳ್ಳುವುದರ ಬಗ್ಗೆ ಕಳವಳವು ಆ ಮಕ್ಕಳಲ್ಲಿ ಪ್ರತಿಯೊಬ್ಬರಲ್ಲೂ ಇರುವುದು.

೬. ಸೇನಾನಿಗಳ ಮತ್ತು ಉಚ್ಚ ವರ್ಗದ ಪ್ರಭುತ್ವಗಳ ಸೇವೆಯಕ್ಕೆ ನಾವು ಹಣವನ್ನು ತೆರಿಯುತ್ತೇವೆ. ದೊಡ್ಡ ಪ್ರಮಾಣದಲ್ಲಿ ಉಳಿಸಿದ ದರಿದ್ರರು ರಾಷ್ಟ್ರೀಯ ದಾನದಿಂದ ಜೀವಿಸುವ ಅನುವನ್ನಿತ್ತಿದ್ದೇವೆ. ಭೂಸೇನೆ, ಜಲಸೇನೆ, ಗಡಿಗೋಪುರಗಳು

ಅರಮನೆಗಳು ಎಂದು ಎರಡು ಶಕ್ತಿಗಳಿಂದಲೂ ಹಣವನ್ನು ಶೋಷಣೆ
ಮಾಡುತ್ತಿದ್ದೇವೆ. ಆದರೆ ವಿದ್ಯಾ ಸಂಸ್ಥೆಯನ್ನಾಗಿ ಕೇವಲ ಪ್ರತಿಯೊಂದು
ಆದರ್ಶ ಶಿಸ್ತಿಯ ವೆಚ್ಚಕ್ಕೆ ಅನುಯಾಯಿ ಮಾಡುತ್ತಿದ್ದೇವೆ. ಬಡವರಿಗಾಗಿ
ಉತ್ತಮ ಮನೆಗಳನ್ನು ಕಟ್ಟುತ್ತಿಂದು ಮುಂದಿರುವ ಎಲ್ಲಾ ಸಾಧನೆ
ಗಳನ್ನು ಮಾಡಿಕೊಡುತ್ತಿದ್ದೇವೆ. ಬಡ ಜನರ ಸ್ವತಂತ್ರ ಜೀವನವನ್ನು
ಹಿಂಡುತ್ತಾ, ಅವರ ಸ್ವಾಭಿಮಾನವನ್ನು ನಿರ್ಮೂಲಗೊಳಿಸುತ್ತಾ ನಾವು
ದೊಡ್ಡ ಮಾತುಗಳನ್ನು ಹೇಳಿಕೊಂಡು ನಮ್ಮ ನಿರ್ದಯತೆ ಮತ್ತು ನಿರಭಿ
ಮಾನಗಳನ್ನು ಮರೆಸಿಕೊಳ್ಳುತ್ತಿದ್ದೇವೆ. ಹಳೆ ಅರಮನೆಯೊಂದನ್ನು
ದುರಸ್ತಿ ಮಾಡಿಸಿ ಬಡತನದಲ್ಲಿರುವವನಿಗಿತ್ತು ಆ ರೀತಿ ನಮ್ಮ ಔದಾರ್ಯ
ಕರುಣೆಯನ್ನು ತೋರಿಸುತ್ತೇವೆ. ಹಾಗೆ ಅವನು ಸ್ವಾರ್ಥಕ್ಕೆ
ಸಿಕ್ಕಿದ ಮನೆಯಲ್ಲಿ ಜೀವಿಸುತ್ತಿದ್ದರಲ್ಲಿ ಅವನಿಗೆ ಇರುವ ಮಾನ
ಗೌರವನ್ನು ನಾವು ಕಿತ್ತುಹಾಕಿ ಅವನನ್ನು ಆ ಮನೆಯಲ್ಲಿ ಬಾಡಿಗೆದಾ
ರನೆಂದೇ ಪರಿಗಣಿಸುತ್ತೇವೆ. ಕಾರ್ಮಿಕನಿಗೆ ಮಾಡಿಸಲು
ತಕ್ಕಂತಹ ಮನೆಗಳನ್ನು ಕಟ್ಟಿ ಅವನ ಬಡತನವನ್ನು ನಿವಾರಿಸಲು
ನಾವು ಹಿಂಜರಿಯುತ್ತಿರುವಾಗ ರಾಜಕುಮಾರನು ಬಾಡಿಗೆಯನ್ನೇ
ನೂ ತೆರದೆ ವೈಭವದಿಂದ ಜೀವಿಸುವಂತಾಗಿದೆ ಮತ್ತು ಮನೆ
ಕಟ್ಟಿದ್ದಕ್ಕಾಗಿ ವ್ಯಾಪಾರಿಗೆ ವರ್ಷಂಪ್ರತಿ ಲಾಭವನ್ನೀಯುವ ಬದಲಾ
ಗಿ ಒಂದು ಮನೆಯನ್ನು ಕಟ್ಟಲು ಮತ್ತು ಅದರ ಉಸ್ತುವಾರಿಗೆ
ತಗಲುವ ಹಣವನ್ನೆಲ್ಲ ಬಾಡಿಗೆ ರೂಪದಲ್ಲಿಯೇ ಸಲ್ಲಿಸುತ್ತಿದ್ದೇ
ವೆ. ಹೀಗಾಗಿ ವರ್ಷದಿಂದ ವರ್ಷಕ್ಕೆ ಬಡತನವು ಹೆಚ್ಚುತ್ತಿದೆ.
ಪ್ರತಿ ದೊಡ್ಡ ನಗರದಲ್ಲೂ ಅದರ ಸತ್ವವನ್ನು ಹೀರುವ ಮತ್ತು ಜೀ
ವನಾಡಿಗಳನ್ನು ವಿಷಮಯಗೊಳಿಸುವ Cancer ಖಾಯಿಲೆ
ಯು ಇದೆ. ನನ್ನ ಪಟ್ಟಣದ ಕ್ರೂರತನವನ್ನು ಮೀರಿದ ಬಡ ಅಮಾ
ನುಷ ಹಾಗೂ ಅನಾರೋಗ್ಯಕರ ಪರಿಸ್ಥಿತಿಯು ಮತ್ತು ಹಿಂದಿನ ಅನಾಗರಿಕ
ಯುಗದ ಪಿಶಾಚಿಕ ಯುಗಕ್ಕೆ ಹಿಂದಿರುಗುತ್ತಿರುವ ಜನಾಂ
ಗವೊಂದು ಇಂದಿನ ಪ್ರತಿಯೊಂದು ಗಲ್ಲಿಯಲ್ಲಿಯೂ ನಿರ್ಮಾಣವಾ
ಗುತ್ತಾ ಇದೆ. ಪ್ರೀತಿಗೆ ಅಲ್ಲವಾದರೂ ಹೆದರಿಕೆಗಾಗಿ, ನ್ಯಾಯ
ಅಥವಾ ಮಾನವೀಯ ಕರುಣೆಗಾಗಿ ಅಲ್ಲವಾದರೂ ಕೇವಲ ತನ್ನ
ಆತ್ಮತೃಪ್ತಿಯನ್ನು ಪಡೆಯುವ ಹಂಬಲಕ್ಕಾಗಿ ನಾನು ಸಾಮಾ
ಜಿಕ ಅಕ್ರಮಗಳನ್ನು ನಿವಾರಿಸಲು ಬುದ್ಧಿವಂತರೂ ವಿದ್ಯಾ
ವಂತರೂ ಬದ್ಧಕಂಕಣರಾಗಬೇಕೆಂದು ಕೇಳಿಕೊಳ್ಳುತ್ತೇನೆ.
ಮಹಾತ್ಮರು ಆವೇಶಕ್ಕೊಳಗಾಗುವ ಮುಂಚೆ ಮತ್ತು ಅವಿವೇ
ಕದ ಸಹನೆಯು ಉಗ್ರಸ್ವರೂಪದಲ್ಲಿ ಮಾಯವಾಗುವ
ಮುಂಚೆ ಅವರು, “ಕಡೆಗಾದರೂ ಒಂದು ಅನಿಷ್ಟಕಾರಿ ಸನ್ನಿವೇಶ
ದಲ್ಲಿ ನಿರ್ಭಾಗ್ಯಶಾಲಿಯಾದವನು ನಿಜ ಎದೆಗುಂದದೆ ಮುಂದೆ ಹಾ
ಯ ಬಲ್ಲನೆಂಬುದನ್ನು ಅರಿಯುವರು.”

ಇತರ ಎರಡು ಸಾಮಾಜಿಕ ಸಂಸ್ಥೆಗಳಿಗಿಂತ ಸ್ವಾಭಾವಿಕವಾಗಿ ಅಭಿವೃದ್ಧಿಯು ಸುಧಾರಕ ಪ್ರವೃತ್ತಿಯಿಂದೆನ್ನುವ Radicals ಇವರಿಗೆ ಈ ನಿಲುವು ಸ್ವಲ್ಪಮಟ್ಟಿಗೆ ವಿರೋಧವಾಗಿ ತೋರಿದುದರಿಂದ ನಾನು ಬಹು ಎಚ್ಚರಿಕೆಯಿಂದ ತಮ್ಮ ನಿಲುವನ್ನು ಸಾಧಿಸುವವರ ಸಂಸ್ಥೆಗೆ (Fabian Society) ಸೇರಿ ಅಲ್ಲಿ ಉಪನ್ಯಾಸಗಳನ್ನು ಕೊಡುತ್ತಾ ತುಂಬಾ ಕ್ರಮವಾಗಿ ದುಡಿದೆನು. ಸಮಾಜವಾದವನ್ನು ಜನಪ್ರಿಯವಾಗಿಸಲಿಕ್ಕೂ ಉತ್ತಮ ಆರ್ಥಿಕ ಕ್ರಮವನ್ನು ಪ್ರಚಾರ ಮಾಡಲಿಕ್ಕೂ ಮತ್ತು ಕಾರ್ಮಿಕರ ಹಿತವನ್ನು ಬರೀ ರಾಜಕೀಯದಿಂದ ಸಾಮಾಜಿಕ ಸುಧಾರಣೆಗಳತ್ತ ತಿರುಗಿಸಲಿಕ್ಕೂ ಸಿಡ್ನೀ ವೆಬ್, ಬರ್ನಾರ್ಡ್ ಶಾ, ಹ್ಯೂಬರ್ಟ್ ಮತ್ತು ಶ್ರೀಮತಿ ಬ್ಲಾಂಡ್ ಗ್ರಹಾಂ ವಲ್ಲಾಸ್ ಇವರು ತಮ್ಮ ಸಮಯ, ಜ್ಞಾನ ಮತ್ತು ನಿರಂತರ ದುಡಿಮೆಯಿಂದ ಶ್ರಮಿಸಿದರು. ಲಂಡನ್ನಿನ Radicalism ಇದನ್ನು ಸಮಾಜವಾದ — Socialism — ಇದರೊಡನೆ ಬೆರೆಸಬಲ್ಲುದು. ಸ್ವಾಭಾವಿಕವಾದಿಯು (Radicalist) ಸಮಾಜವಾದದ ವಿರೋಧಿಯಾಗುವುದರ ಬದಲಾಗಿ ಅವನು ಇನ್ನೂ ಹೆಚ್ಚಿನ ಶಕ್ತಿಯನ್ನು ಹೊಂದಿರುವ ಸಮಾಜವಾದಿಯೆಂದು ನಾವು ಅವನನ್ನು ಪ್ರವರ್ತನವಾಗಿ ಸಮಾಜವಾದಿಯಂತಾಗಿಸುವ ವರೆಗೆ ನಮ್ಮ ಭಾಷಣಗಳನ್ನು ಕೇಳಲು ಎಲ್ಲೆಲ್ಲಿ ಜನರು ಸೇರುತ್ತಿದ್ದರೋ ಅಂಥಾ ಕಾರ್ಮಿಕರ ಕೂಟಗಳಿಗೆ ಹೋಗಿ ನಾವು ಮಾತಾಡುತ್ತಿದ್ದೆವು. ಶಾಸನ ಸಭೆಗೆ ಮತ್ತು ಇತರ ಅಧಿಕಾರ ಸ್ಥಾನಗಳಿಗೆ ಸ್ಪರ್ಧಿಸುವವರಿಗೆ ನಾವು ನಮ್ಮ ನಿಲುವಿನ ಬಗ್ಗೆ ಪ್ರಶ್ನಾವಳಿಗಳನ್ನು ಕಳುಹಿಸಿ ಸ್ಥಳೀಯ ಚುನಾವಣೆಗಳಲ್ಲಿ ಜನಕ್ಕೆ ಅರಿವುಂಟಾಗುವಂತೆ ಮಾಡಿದೆವು, ಬಡತನಕ್ಕೆ ಕಾರಣವೇನೆಂಬುದರ ಬಗ್ಗೆ ಹೆಂಗಸರಿಗೂ ಗಂಡಸರಿಗೂ ತಿಳಿಸಿದೆವು, ಮಧ್ಯಮ ವರ್ಗಕ್ಕೆ ಸೇರಿದ ಎಳೆ ಜನರ ಒಂದು ಸೇನೆಯನ್ನು ಪ್ರಚಾರ ಕಾರ್ಯಕ್ಕಾಗಿ ನಿರ್ಮಿಸಿದೆವು. ಹೀಗೂ Fabian Society ಇದು ಕೆಲವು ವರ್ಷಗಳ ಕಾಲ ದುಡಿದುದರಿಂದ Social Democratic Federation — ಸಂಸ್ಥೆಯ ಸದಸ್ಯರು ಹಿಮ್ಮೆಟ್ಟಿ ಉಗ್ರಗಾಮಿಗಳಾಗಿದ್ದರೂ ಅವರ ಉತ್ತಮ ಸೇವೆಯ ಪರಿಣಾಮವಾಗಿ ಮತ್ತು ವಿಲಿಯಮ್ ಮಾರಿಸ್ ಇವನಂಥಾ ಉದಾತ್ತನೂ ಉದಾರಿಯೂ ಬುದ್ಧಿವಂತನೂ ಆದ ಅವನ ಕರ್ತವ್ಯದಕ್ಷತೆಯೂ ಲಂಡನ್ನಿನ ಕಾರ್ಮಿಕರನ್ನು ಇಂದು ಇಷ್ಟರ ಮಟ್ಟಿಗೆ ಸಮಾಜವಾದಿಗಳಾಗಿ ಮಾಡಲು ಸಹಾಯಕವಾಯಿತು.

ಅದೇ ವರ್ಷ, ಎಂದರೆ 1884 ರಲ್ಲಿ ರಷ್ಯಾದ ರಾಜಕೀಯ ಕ್ರಾಂತಿಗಳು ಅನುಭವಿಸುತ್ತಿದ್ದ ಭಯಂಕರ ಕಷ್ಟವನ್ನು ಜನಕ್ಕೆ ಅರುಹಲು ಇಂಗ್ಲೆಂಡಿನಲ್ಲಿ ಒಂದು ಚಳುವಳ

ಆರಂಭವಾಯಿತು. ಅಂದಿನ ರಷ್ಯಾದ ನಿಜವಾದ ಪರಿಸ್ಥಿತಿಯನ್ನು
ಕುರಿತು ಬಹಳ ಎಚ್ಚರಿಕೆಯಿಂದ ಮಾತುಗಳನ್ನು ಸಂಗ್ರಹಿಸಲಿ
ಕ್ಕಾಗಿ ಮತ್ತು ರಷ್ಯಾದ ಮಿತ್ರರ ಒಂದು ಸಂಘವನ್ನು ಸ್ಥಾಪಿಸಲು
ಒಂದು ಸಭೆಯು ನನ್ನ ಮನೆಯಲ್ಲಿ ಸೇರಿತು. ಆ ಸಭೆಯಲ್ಲಿ
ಚಾರ್ಲ್ಸ್ ಬ್ರ್ಯಾಡ್ಲೋ ಮತ್ತಿತರರೂ ಇದ್ದರು, E. R. Peas ಇವನು
ತಾತ್ಕಾಲಿಕ ಗೌರವ ಕಾರ್ಯದರ್ಶಿಯಾಗಿ ಇದ್ದನು, ಆದರೆ ರಷ್ಯ
ದಿಂದ ಓಡಿಬಂದ Kroptokin ಇವನಂಥ ಪ್ರಮುಖನು ಸಹ
ಆ ದೇಶದಲ್ಲಾಗುತ್ತಿದ್ದ ಪರಿಸ್ಥಿತಿಯು Tsar ಇವನಿಗೂ ತಿಳಿಯು
ತ್ತಿಲ್ಲವೆಂದೂ ಆ ಚಕ್ರವರ್ತಿಯು ನೌಕರಶಾಹಿಯ ದಬ್ಬಾಳಿಕೆ
ಯಿಂದ ಸುತ್ತುವರಿಯಲ್ಪಟ್ಟಿದ್ದಾನೆಂದೂ ಆ ಕೂಟದಲ್ಲಿ ಹೇಳಿದನು.

ಮತ್ತೊಂದು ವಿಷಯವೆಂದರೆ ಕೆಲವು ತಿಂಗಳು ನಂತರ
ಸಮಾಜವಾದಕ್ಕೆ ಸಂಬಂಧಿಸಿದ ಭಾಷಣಗಳನ್ನು ಹೊರಗೆ ಮೈದಾ
ನಗಳಲ್ಲಿ ಕೊಡುವ ಹಕ್ಕನ್ನು ಪೋಲೀಸರು ತಡೆಗಟ್ಟುತ್ತಿದ್ದ
ದ್ದೇ ಆಗಿದೆ. ಕ್ರೈಸ್ತರು, ಸ್ವತಂತ್ರವಾದಿಗಳು (Free-thinkers), ಉ
ದ್ಧಾರಕರು (Salvationists) ಮತ್ತು ಇತರ ಎಲ್ಲಾ ತರಹದ
ಭಾಷಣಕಾರರು ಆ ಕಾರ್ಯದಿಂದ ಮೌನದಿಂದ ಇರಬೇಕಾಯಿತು,
ಹಾಗಿದ್ದರೂ ಸಮಾಜವಾದಿಗಳಿಗೆ ವಿರೋಧವಾಗಿ ನಿರಂತರ ಪ್ರತಿಬಂಧ
ನೆಯು ಇದ್ದೇ ಇತ್ತು. ಆ ವರ್ಷದ ಸೆಪ್ಟಂಬರ್ ತಿಂಗಳಲ್ಲಿ ಡಾಡ್
ಬೀದಿ (Dod street) ಯಲ್ಲಿ ನಡೆದ ಸಮಾಜವಾದೀ ಸಭೆಯು
ವಿರೋಧವಾಗಿ ಗೊಂದಲವೆಬ್ಬಿಸಿದುದರ ಬಗ್ಗೆ ಲಿಬರಲ್ ಮತ್ತು
ಟೋರೀ ಪತ್ರಿಕೆಗಳು ಒಟ್ಟಾಗಿ ಖಂಡಿಸಿದುವು, Social Demo-
cratic Federation ಇದರ ಸದಸ್ಯರು ಮೌನದಿಂದಲೇ ತಮ್ಮ
ವಾದಗಳನ್ನು ಮುಂದೊತ್ತಿದರು, ಅವರಿಗೆ ಸಮಾಜವಾದಿಗಳು
ಮತ್ತು ಪ್ರಗತಿಗಾಮಿ ಕೂಟಗಳೂ ತುಂಬಾ ಬೆಂಬಲವಿತ್ತರು. ಒಂದು
ಸಭೆಯಲ್ಲಿ ಭಾಷಣವನ್ನು ಕೊಡಲು ನಾನಾಗಿಯೇ ಒಪ್ಪಿದೆನು, ಆದರೆ
ಹಿಂದಿನ ವಾರದ ಸಭೆಯಲ್ಲಿ ಜನರ ನಿಲುವನ್ನು ನೋಡಿದ್ದ ಪೋಲೀಸ್
ದಳವು ಸಭೆಯು ನಡೆಯುವಾಗ ರಕ್ಷಣೆಯ ಕಾರ್ಯಕ್ರಮವ
ವು ಮುಂದುವರಿಯದಂತೆ ತಡೆಗಟ್ಟಿದರು.

ಕೈಗಾರಿಕಾ ವಿದ್ಯೆಯನ್ನು ಜಾರಿಗೆ ತರಬೇಕೆಂದು ಆಶಿ
ಸಿದ್ದವರ ಪೈಕಿ ಮೊದಲನೇ ಪ್ರಮುಖನಾದ ಹರ್ಬರ್ಟ್ ಬರ್ರೋ
ಸ್ ಇವನು ಆ ವರ್ಷದ ನವಂಬರ್‌ನಲ್ಲಿ ಶಾಲಾ ಬೋರ್ಡಿನ ಸ
ದಸ್ಯನಾಗಿ Tower Hamlets ಮತದಾರ ಕ್ಷೇತ್ರದಿಂದ ಚುನಾವಣೆ
ಗೆ ನಿಂತಾಗ "Reformer" ಪತ್ರಿಕೆಯಲ್ಲಿ ನಾನು ಅವನಿಗೆ ಜಯವಾ
ಗಲಿ ಎಂದು ಮನಃಪೂರ್ವಕವಾಗಿ ಆಶಿಸಿ ಬರೆದಿದೆನು. ಕೆಲ
ವಾರು ಸಂಸ್ಥೆಯ ಯೋಜನೆಗಳಲ್ಲಿ ಹೇಗೋ ಹಾಗೆಯೇ ಇದರ
ಲ್ಲೂ ಸಮಾಜವಾದಿಗಳೇ ಮಾರ್ಗದರ್ಶಕರಾದರು, Herbert

ವರ್ಷದ ಜನವರಿಯಲ್ಲಿ ಅವನು ಪ್ರಮಾಣವಚನವನ್ನು ಸ್ವೀಕರಿಸಿದ ಕೂಡಲೇ Oaths Bill ಎಂಬ ಪ್ರಮಾಣ ಮಸೂದೆಯನ್ನು ಎಲ್ಲಾ ಸಂದರ್ಭಗಳಲ್ಲೂ ಎಲ್ಲರಿಗೂ ಅನ್ವಯಿಸುವಂತೆ ಮಾಡಬೇಕೆಂದು ಹೇಳಿದನು. ಚುನಾವಣೆಗಳಲ್ಲಿ ಅವನು ಆ ವರೆಗೂ ಪಡೆಯುತ್ತಿದ್ದ 4,315 ಮತಗಳನ್ನು ಪಡೆದು ಕಡೆಗೆ ಅವನು ಸರ್ವ ಹೋರಾಟಗಾರನೆಂಬ ಖ್ಯಾತಿಯನ್ನು ಹೊತ್ತು ಶಾಸನ ಸಭೆ (House of Commons)ಯನ್ನು ಸೇರಿ ಅನಂತರ ಆ ಸಭೆಯ ಒಂದು ಅಂಗೀಕೃತವಾದ ಮಹಾಶಕ್ತಿಯಂತೆ ತೋರ್ಪಡಿಸಿಕೊಂಡನು, ಸಭಾನಿಯಮವನ್ನು ಮುರಿಯುವ ಸಂದರ್ಭವು ಕಂಡುಬಂದಾಗ ಸಭಾಧ್ಯಕ್ಷ (Mr. Speaker)ನಾದ ಪೀಲ್ ಇವನು ತತ್‌ಕ್ಷಣವೇ ತನ್ನ ಅಧಿಕಾರವನ್ನು ಉಪಯೋಗಿಸಿದನು, ಸಭೆಯ ಕೆಲವು ಸದಸ್ಯರು ಸಭಾಧ್ಯಕ್ಷರನ್ನು, ತನ್ನ ಅಧಿಕಾರವನ್ನು ಉಪಯೋಗಿಸಬೇಕೆಂದು ಕೇಳಿಕೊಂಡರು, ಆದರೆ ಅವನಾದರೋ ಆರಿಸಲ್ಪಟ್ಟ ಸದಸ್ಯನ ಮತ್ತು ನಿಯಮಪ್ರಕಾರ ಪ್ರಮಾಣವಚನವನ್ನು ಸ್ವೀಕಾರ ಮಾಡುವವನ ಮಧ್ಯೆ ಬರುವ ಅಧಿಕಾರವು ತನಗಿಲ್ಲವೆಂದು ಹೇಳಿದನು. ಆ ರೀತಿ ಆರು ವರ್ಷಗಳ ಕಾಲದ ಸಹನ ಬದ್ಧತೆಯನ್ನು ಕುರಿತಾದ ಬಲವನ್ನು ಕೊನೆಗೊಂಡಿತು. ಆ ಹೋರಾಟದಲ್ಲಿ ವಿಜೇತನಾದವನು ತನ್ನ ದೇಹಸ್ಥಿತಿ ಮತ್ತು ಆರ್ಥಿಕ ಸ್ಥಿತಿಗಳೆರಡರಲ್ಲೂ ಕಂಗಾಲಾಗಿದ್ದನಲ್ಲದೆ ಅವನು ತನ್ನ ಶ್ರೇಯಸ್ಸಿಗೆರುವ ಮೊದಲಿನ ಸಮಾಧಿಯನ್ನು ಹಾಗಬೇಕಾಯಿತು, ಹೀಗೂ ತನ್ನ ಚುನಾವಣೆಯಲ್ಲಿ ಲಭಿಸಿದ ನ್ಯಾಯವನ್ನು ಸಾಧಿಸಲಿಕ್ಕೆ ಮತ್ತು ದೇಶಕ್ಕೆ ಅವನ ಸೇವೆಯು ಅಗತ್ಯವೆಂದು ರುಜುವಾತುಪಡಿಸಲು ಬೇಕಾದಷ್ಟು ಕಾಲ ಅವನು ಬದುಕಿದನು. ಆದರೆ ಅವನಲ್ಲಿ ಸ್ಪಷ್ಟವಾಗಿ ಪ್ರತಿಬಿಂಬಿತವಾಗಿದ್ದ ಅವನ ದೀರ್ಘಾನುಭವ, ಬಹು ವ್ಯಾಪಕವಾದ ಜ್ಞಾನ, ಧೈರ್ಯ ಮತ್ತು ಸತ್ಯದಿಂದ ಇಡೀ ಇಂಗ್ಲೆಂಡಿಗೆ ಸೇವೆಯನ್ನು ಸಲ್ಲಿಸಲು ಬಹುಕಾಲ ಬದುಕಲಿಲ್ಲ,

"Our Corner" ಪತ್ರಿಕೆಯು ಸಮಾಜವಾದದ ಪ್ರಚಾರಕ್ಕೆ ಅಮೂಲ್ಯ ಸಾಧನವಾಯಿತು. ಅದರ Socialist Notes- ಎಂಬ ಮಾಸಿಕವು ಎಲ್ಲಾ ದೇಶಗಳಲ್ಲಿ ಸಮಾಜವಾದದ ಬೆಳವಣಿಗೆಯನ್ನು ಕುರಿತಾದ ದಾಖಲೆಯನ್ನೊಳಗೊಂಡಿತ್ತು. "ಇಂದಿನ ವಾಣಿಜ್ಯ ವ್ಯವಸ್ಥೆ ಮತ್ತು ಸಮಾಜದ ಹಿತಕ್ಕೆ ರಾಷ್ಟ್ರೀಯ ಸಂಪತ್ತಿನ ಉತ್ತಮ ಪ್ರಯೋಗ," ಎಂಬ ವಿಚಾರದ ಮೇಲೆ ಒಂದು ಸಮ್ಮೇಳನವನ್ನು ನಡೆಸಲು ಆ ವರ್ಷದ ವಸಂತಕಾಲದಲ್ಲಿ ಅವಿಶ್ರಾಂತರಾಗಿ ದುಡಿದಳು. ಆ ಸಭೆಯು "ಸೌತ್ ಪ್ಲೇಸ್" ಕಟ್ಟಡ

ಇಳಿಸಲ್ಪಟ್ಟುದನ್ನು ಕಂಡರುತ್ತಾಗಿ, ಮತ್ತು ವ್ಯಾಪಾರ ಕಡಿಮೆಯಾದುದರಿಂದ ಕೆಲಸಗಾರರ ಸಂಖ್ಯೆ ಇಳಿಸಲಾಗಿದೆಯೆಂಬ ಬಗೆಯ ವಾರ್ತೆಗಳು ತುಂಬಿದ್ದ ನೋಡಲಿಕ್ಕೆ ಬೇಸರ ಹುಟ್ಟಿಸುತ್ತಿದ್ದುವು. ಬೇಸಗೆಯು ಕಳೆದಂತೆ ನಾವು ಎದೆಗುಂದಿದೆವು. ಬರಲಿದ್ದ ಚಳಿಗಾಲವು ಭೀಕರ ಚಳಿಯ ಜತೆಗೆ ದುರ್ಭಿಕ್ಷದ ಬೆದರಿಕೆಯನ್ನೂ ಭಯಂಕರವಾಗಿ ತೋರಿಸುತ್ತಿತ್ತು. ಪ್ರತಿವಾರವೂ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಾ ಬಂದಾಗ ದಿನಕ್ಕೆ ಎಂಟು ತಾಸುಗಳ ಕಾಲಮಾತ್ರ ಕೆಲಸವನ್ನು ವಿಧಿಸಬೇಕು ಎಂಬುದರ ಬಗ್ಗೆ ಕಳವಳವು ಹೆಚ್ಚಾಯಿತು. ಹಿಂದಿನ ವರ್ಷದ ಚಳಿಗಾಲದಲ್ಲಿ "ನಮಗೆ ಸಹಿಸಲಿಕ್ಕಾಗುವುದಿಲ್ಲ" ಎಂಬುದಾಗಿ ದೊಡ್ಡ ದೇಹದ ಮೆತ್ತನಸ್ವಭಾವದವನೊಬ್ಬನು ಹೇಳಿದನು. "ಮಾಂಸ ಮತ್ತು ರಕ್ತವು ಈ ಎರಡು ತಿಂಗಳು ಪ್ರಖರ ಚಳಿಯನ್ನು ಸಹಿಸದು; ಕೆಲಸ ಮಾಡುತ್ತಾ ಹಸಿದು ಇರುವುದರ ಬದಲಾಗಿ ನಾವು ಸೋಮಾರಿತನದಿಂದಲೂ ಹಸಿದುಕೊಂಡೇ ಬಿದ್ದಿರಬಹುದಲ್ಲ" ಎಂಬುದಾಗಿ ಇನ್ನೊಬ್ಬನು ಕಹಿನಗುವಿನಿಂದ ಹೇಳಿದನು. ಹೀಗೆ ವಾಸ್ತವಿಕ ಕಾರಣಗಳಿಂದ ಉದಿಸಿದ ನ್ಯಾಯವಾದ ಅತೃಪ್ತಿಯು ಎಲ್ಲೆಡೆಯೂ ವ್ಯಾಪಿಸುತ್ತಾ ಇತ್ತು. ಆಹಾ, ಅವರು ಎಷ್ಟು ತಾಳ್ಮೆಯಿಂದ ಇರುವರು, ಎಷ್ಟು ದುಃಖದಿಂದ ಇತರರಿಗೆ ಕನಿಕರ ಹುಟ್ಟಿಸುವಂಥಾ ತಾಳ್ಮೆ! ಆ ಅತೃಪ್ತಿಯೇ ವಸ್ತುವನ್ನು, ವರ್ಗ, ಮಾನವಗಳನ್ನು ಕಲಬೆಗೆ ಹಾಕಿತು, ನನ್ನ ಹೃದಯವನ್ನೂ ನಾಲಗೆಯನ್ನೂ ದಹಿಸುವಂತೆ ಅತಿವಾದಿಗಳೆಲ್ಲ ನಿತ್ಯದ ವ್ಯವಹಾರಗಳಾಗಿ ತಳ್ಳಹಾಕಲಾಗುತ್ತಿದೆ. ತುಳಿಯಲ್ಪಟ್ಟು, ನಿಂದಿಸಲ್ಪಟ್ಟು ಅನಿವಾರ್ಯ ಕಷ್ಟಗಳಿಗೆ ಒಳಪಟ್ಟು, ಅಷ್ಟೆಲ್ಲ ಬೇಕಾಗಿದ್ದರೂ ಬಂದಿದ್ದನ್ನು ಮಾತ್ರ ಕೇಳುವ, ಅಲ್ಪ ಸೇವೆಗೆ ವಿಶೇಷ ಕೃತಜ್ಞತೆಯನ್ನು ತೋರುವ, ಮತ್ತು ನಮಗಾಗಿ ಅವರ ಭಕ್ತಿ ಸೇವೆ ಮತ್ತು ನಿಸ್ಸಹಾಯಕ ಪ್ರೀತಿಯನ್ನಲ್ಲದೆ ಉಳಿದುದನ್ನು ಇತ್ತುದಕ್ಕೆ ಅವರಲ್ಲಿ ಆ ಶಕ್ತ ಪ್ರೀತಿ ಮತ್ತು ಅಭಿಮಾನವನ್ನು ತೋರಿಸುವ, ಹೋ, ಅಜ್ಞಾನದಿಂದ ಕತ್ತಲಾಗಿದ್ದರೂ ಧೀರ ಜನವೆ, ನನ್ನ ಹೃದಯವು ನಿಮ್ಮತ್ತ ನೆಗೆಯುತ್ತಲಿದೆ, ಇತರರಿಗೆ ನೆರವಾಗಲಿಕ್ಕೆ, ಇತರರಿಗಾಗಿ ಶ್ರಮಿಸಲಿಕ್ಕೆ ಮತ್ತು ಇತರರನ್ನು ರಕ್ಷಿಸಲಿಕ್ಕೆ ನನ್ನಲ್ಲಿ ಹೆಚ್ಚುತ್ತಿರುವ ಕಾತರತೆಯನ್ನು, ತನ್ನ ಅಂತರ್ಯದ ಅಭಿಲಾಷೆಯು ಅತಿ ಆಳಕ್ಕೆ ಕೊರೆದಿತ್ತು. ನನ್ನ ಸಾಮಾಜಿಕ ಸ್ಥಾನವನ್ನು ನಾನು ಹಿಂದೆಯೇ ತ್ಯಜಿಸಿದ್ದೇನೆ. ಇದೀಗ ನಾನು ವಿರಾಮ, ಸೌಕರ್ಯ ಮತ್ತು ಸಮಯವನ್ನೆಲ್ಲ ನನ್ನಲ್ಲಿ ಹೆಚ್ಚುತ್ತಾ ಇರುವ ಕರಗೀವಾ ಕಾರ್ಯಕ್ಕೆ ಒಪ್ಪಿಸಿದ್ದೇ/

ಯಿತು. ಈ ಬಗ್ಗೆ ನಡೆದ ಆ ಎರಡು ಚರ್ಚೆಗಳ ವಿವರವನ್ನು ಚಿಕ್ಕ ಹೊತ್ತಿಗೆಗಳ ರೂಪದಲ್ಲಿ ಎಲ್ಲೆಲ್ಲೂ ಹಂಚಿ ಪ್ರಚಾರ ಮಾಡಲಾಯಿತು. ವಿವಿಧ ಸಂಸ್ಥೆಗಳನ್ನು "ಫೌರ್ತ್ ಸ್ಟೇಟ್"ನಲ್ಲಿ ವರ್ಣಿಸಲಾಗಿತ್ತು. ಕೌರೀ ಗ್ರಾಂಟ್ ಮತ್ತು ನನ್ನೊಳಗೆ ಹಾಸ್ಯ ಪ್ರಮೋದಕರವಾದ ಒಂದು ಚರ್ಚೆಯು ನಡೆಯಿತು. "ತಾವು ದುಡಿದು ಸಂಪಾದಿಸಿದ ಹಣದಿಂದ ಬದುಕುವಂಥ ಜನರ ಏಳಿಗೆಯು ಸಮಾಜದ ಹಿತಕ್ಕೆ ಹಾನಿಕಾರವಾಗಿದೆ. ಶಾಸನ ಸಭಾ ಮಸೂದೆಯ ಮೂಲಕವಾಗಿ ಆ ಪರಿಸ್ಥಿತಿಯು ಕೊನೆಗೊಳ್ಳಬೇಕು" ಎಂಬ ವಿಷಯವನ್ನು ನಾನು ಪ್ರತಿಪಾದಿಸಿದೆನು. ಕಾದಾಟಕ್ಕೆ ಕಾರಣವಾದ ಈ 1887ರ ವಸಂತ ಕಾಲದಲ್ಲಿ ರೆವರೆಂಡ್ ಹೆಡ್‌ಲಾಮ್ ಮತ್ತು ನಾನು ನಡೆಸಿದ ಮತ್ತೊಂದು ಚರ್ಚೆಯನ್ನು Reformer ಪತ್ರಿಕೆಯಲ್ಲಿ ಪ್ರಚಾರ ಮಾಡಲಾಗಿತ್ತು. "ಶಾಸ್ತ್ರೀಯವಾಗಿ ನಾಸ್ತಿಕವಾದವು ಸಮರ್ಥನೀಯವೇ? ಮಾನವತ್ವವನ್ನು ಮೇಲುಗಾಣಿಸಲು ತೃಪ್ತಿಕರವಾದ ನೈತಿಕವಾದ ತತ್ವವೊಂದು ಅದರಲ್ಲಿದೆಯೇ?" ಎಂಬ ವಾದವನ್ನು ನಾನು ಮುಂದಿಟ್ಟೆನು. ಹೀಗೆಯೇ ದಿವಸಗಳು ಕಳೆದುವು. ಆದರೆ ಜನರ ತಾಪತ್ರಯಗಳು ಹೆಚ್ಚುತ್ತಲೇ ಇದ್ದುವು. ಆ ವರ್ಷದ ಸೆಪ್ಟೆಂಬರಿನಲ್ಲಿ ನಾನು ಹೀಗೆ ಬರೆದೆನು, "ಈ ಒಂದು ವಿಷಯವು ಸ್ಪಷ್ಟವಿದೆ. ಸಮಾಜವು ನಿರುದ್ಯೋಗಿಗಳನ್ನು ಗಮನಿಸಬೇಕು. ಅಂತಲ್ಲವಾದರೆ ನಿರುದ್ಯೋಗಿಗಳು ಸಮಾಜದೊಡನೆ ವ್ಯವಹರಿಸುವರು. ಸಾಮಾಜಿಕ ಪರಿಸ್ಥಿತಿಯು ಉಗ್ರವಾಗುತ್ತಾ ಬರುವುದು; ಅಸಮಾಧಾನದಿಂದ ಕೂಡಿದ ಜನತೆಯು ಸಮಾಜದ ವೈರಿಗಳೇನೂ ಅಲ್ಲ."

ನಾವು ಅಂದು ದಿನದಿಂದ ದಿನಕ್ಕೆ ಮೊಳೆಯುತ್ತಿದ್ದ ಪರಿಸ್ಥಿತಿಗಳ ಬಗ್ಗೆ ಚರ್ಚಿಸುತ್ತಾ ಇರುವ ಕಡೆಗೆ ಅದು "ಚ್ಯಾರಿಂಗ್ ಕ್ರಾಸ್ ಪಾರ್ಲಿಮೆಂಟ್" ಎಂಬ ವಿನೋದಕರವಾದ ಚರ್ಚಾಕೂಟವಾಗಿ ಮಾರ್ಪಟ್ಟಿತು. ನಾವು ಒಂದು ಸಮಾಜವಾದ ಪಕ್ಷವನ್ನು ನಿರ್ಮಿಸಿ "ಲಿಬರಲ್" ಸರಕಾರವನ್ನು ಸೋಲಿಸಿ ಅನಂತರ "ಅಧಿಕಾರ"ವನ್ನು ವಹಿಸಿದೆವು. ಓರ್ವ "ರಾಣಿ"ಯು ಉದ್ಘಾಟನಾ ಭಾಷಣವನ್ನು ಸರಳ ರೀತಿಯಲ್ಲಿ ಮಾಡಿದಳು. "ಸಭಾಸದರು" ಅದನ್ನು ನಿಷ್ಠೆಯಿಂದ ಕೇಳಿದರು. ಬಹು ಮಹತ್ವದ "ಮಸೂದೆ"ಗಳನ್ನು ಸಭೆಯಲ್ಲಿ ಮಂಡಿಸಿದೆವು. ಜಾರ್ಜ್ ಬರ್ನಾರ್ಡ್ ಷಾ ಇವನು ಸ್ಥಳೀಯ ಸಂಸ್ಥೆಗಳ "ಅಧ್ಯಕ್ಷ"ನಾಗಿದ್ದನು. "ಗೃಹಮಂತ್ರಿ"ಯಾಗಿದ್ದ ನಾನು ಕೆಲವು ಕ್ರಾಂತಿಕಾರಕ ಮಸೂದೆಗಳನ್ನು ಮುಂದಿಟ್ಟ ಕಾರಣದಿಂದ ತುಂಬಾ ಟೀಕೆಗಳಿಗೆ ಒಳಗಾದೆನು. ಲಂಡನ್ನಿನಲ್ಲಿ ನಡೆದ ಒಂದು

ಅಂತರಾಷ್ಟ್ರೀಯ Free-thought ಸಮ್ಮೇಳನವು ನನಗೆ ತುಂಬಾ ಕೆಲಸವನ್ನಿತ್ತಿತು. ಅಲ್ಲದೆ ನನ್ನ ವಿಜ್ಞಾನ ಶಾಲೆ ಬೋಧನೆಯೂ ಮುಂದುವರಿದಿತ್ತು. ಆ ವರ್ಷದ ಡಿಸೆಂಬರಿನಲ್ಲಿ Teachings of Christianity - ಈ ವಿಷಯದ ಮೇಲೆ ನಡೆಸಿದ ಚರ್ಚೆಯು ನಾನು ಆ ವರ್ಷ ನಡೆಸಿದವುಗಳಲ್ಲಿ ಕಡೆಯದಾಗಿತ್ತು. ಅದೇ ತಿಂಗಳಲ್ಲಿ ಬಹು ದುಃಖದಾಯಕ ಪ್ರಸಂಗವೊಂದು ನಡೆಯಿತು. ನನ್ನ ವೈಯಕ್ತಿಕ ಪ್ರಭಾವಕ್ಕೆ ಕಾರಣವಾಗಿದ್ದ Reformer - ಪತ್ರಿಕೆಯ ಸಹ-ಸಂಪಾದಿಕೆ ಸ್ಥಾನಕ್ಕೆ ನಾನು ರಾಜೀನಾಮೆಯನ್ನಿತ್ತೆನು. ಅದರ ಅಕ್ಟೋಬರ್ ೨೩ನೇ ತಾರೀಖಿನ ಸಂಚಿಕೆಯು ಬ್ರಾಡ್ಲೆಯ ಹೆಸರಿನಲ್ಲಿ ಮಾತ್ರ ಪ್ರಕಟವಾಯಿತು. ಈ ಬದಲಾವಣೆಯು ನಾನು ಪತ್ರಿಕೆಯ ಬಗ್ಗೆ ಸಲ್ಲಿಸುತ್ತಿದ್ದ ಕರ್ತವ್ಯಕ್ಕೆ ಭಂಗವನ್ನುಂಟು ಮಾಡಲಿಲ್ಲ. ನಾನು ಪತ್ರಿಕಾ ಬರಹಗಾರಳಾಗಿ ಜಂಟಿ ಮಾಲೀಕಳಾದರೂ ಪತ್ರಿಕೆಯ ವಿಷಯದಲ್ಲಿ ಅಧಿಕಾರವನ್ನು ಬಿಟ್ಟುಕೊಟ್ಟೆನು. ಇದಕ್ಕೇನು ಕಾರಣವೆಂದು ಆಗ ನಾನು ಬರೆದ ವರದಿಯಿಂದಲೇ ಸ್ಪಷ್ಟವಾಗುವುದು.

“ಈ ಹಿಂದೆ ಕೆಲಕಾಲದಿಂದ ಮತ್ತು ಇತ್ತೀಚಿಗೆ ಇನ್ನೂ ಹೆಚ್ಚಾಗಿ ಸಮಾಜವನ್ನು ಕುರಿತು ಈ ಪತ್ರಿಕೆಯು ತಳೆದ ದ್ವಂದ್ವ ಧೋರಣೆಯ ಬಗ್ಗೆ ಉಂಟಾದ ಅನುಮಾನ ಮತ್ತು ಅನಿಶ್ಚಿತತೆಯನ್ನು ಕುರಿತು ಅಸಮಾಧಾನದ ಮಾತುಗಳು ನನ್ನ ಕಿವಿಗೆ ಬಿದ್ದಿವೆ. ಕೆಲವು ತಿಂಗಳುಗಳಿಗೆ ಹಿಂದೆ ಸಂಪಾದಕೀಯ ಕಾರ್ಯದಲ್ಲಿ ನನ್ನ ಪಾಲಿನ ಜವಾಬ್ದಾರಿಕೆಯಿಂದ ಹಿಂದಕ್ಕೆ ಸರಿಯಲು ನಾನು ಸೂಚಿಸಿದ್ದೆನು. ಆದರೆ ತನ್ನ ಸಹಜವಾದ ಔದಾರ್ಯದಿಂದ ನನ್ನ ಸಹೋದ್ಯೋಗಿಯು ಆ ನನ್ನ ಸೂಚನೆಯು ಹಾಗೆಯೇ ಇರಲಿ, ಹೇಗೂ ನಮ್ಮ ಕೆಲಸವನ್ನು ಸರಿ ಹೊಂದಿಸಿಕೊಂಡು ಹೋಗಲು ಪ್ರಯತ್ನಿಸಬಹುದೆಂದು ಹೇಳಿದ್ದನು. ಆದರೆ ಆದಿನದಿಂದ ತೊಂದರೆಯು ಕಡಿಮೆಯಾಗುವುದರ ಬದಲು ಹೆಚ್ಚು ಬಿಗಡಾಗಿ ಕಂಡುಬರುತ್ತಿದೆಯಾದ್ದರಿಂದ ನಾವಿಬ್ಬರೂ ಆ ಸಮಸ್ಯೆಯು ಪರಿಹಾರವಾಗಬೇಕಾದ ಆವಶ್ಯಕತೆಯುದೆಯೆಂದು ನಿರ್ಧರಿಸಿದೆವು.

“ಇತ್ತೀಚಿನ ವರ್ಷಗಳಲ್ಲಿವರಿಗೆ National Reformer ಪತ್ರಿಕೆಯಲ್ಲಿ ಪ್ರತಿಪಾದಿಸಿದ Radicalism ಇದರ ತಾರ್ಕಿಕಯುತವಾದ ಫಲಿತಾಂಶವು Socialism ಅಥವಾ ಸಮಾಜವಾದವೆಂಬುದಾಗಿ ನಾನು ಭಾವಿಸಿದ್ದರೂ ಆ ಪತ್ರಿಕೆಯ ಸಹ ಸಂಪಾದಿಕೆಯಾಗಿ ನಾನು ಸೇರಿದಾಗ ಇಂದಿನ ನಾನು ಸಮಾಜವಾದಿಯಾಗಿರಲಿಲ್ಲ. ಹಾಗಿದ್ದರೂ ನಾನು ಸಮಾಜವಾದಿಯೆಂಬುದಾಗಿ ಪ್ರತಿಜ್ಞೆಯನ್ನು ತೆಗೆದಾಗ ನಾನು ಒಂದು ನಿರ್ದಿಷ್ಟ ಧ್ಯೇಯವನ್ನು

ತಾಳಿದ್ದೇನೆ. ಕಾರ್ಮಿಕರ ಸಮಿತಿಗಳಲ್ಲಿ ನಾನು ತಳೆದ ಧೋರಣೆಯಿಂದ ನಾನು ನನ್ನ ಸಹೋದ್ಯೋಗಿಯಿಂದ ಸ್ವಲ್ಪಮಟ್ಟಿಗೆ ಬೇರ್ಪಟ್ಟಿದ್ದಕ್ಕೆ ನಾನೇ ಜವಾಬ್ದಾರಳಲ್ಲದೆ ಅವನಲ್ಲ. ಆದುದರಿಂದ ಈಗ ನಾನಾಗಿಯೇ ಹೋಗಬೇಕಾಗಿದೆ. ನಮ್ಮಿಬ್ಬರ ಕಾರ್ಯಕ್ಷೇತ್ರದ ವಿವಿಧ ವಿಷಯಗಳಲ್ಲಿ ನಾವು ಪರಸ್ಪರ ಒಪ್ಪುತ್ತಾ ಇನ್ನೂ ಒಂದಾಗಿ ದುಡಿಯುತ್ತಿದ್ದೇವೆ. ಅದೇ ರೀತಿ ಮುಂದಕ್ಕೂ ಇರುವಂತೆ ತೋರುತ್ತದೆ. ಆದರೆ ಸಮಾಜವಾದವು ಹೆಚ್ಚಾಗಿ ಸಕ್ರಿಯ ರಾಜಕೀಯವಾಗಿ ತೋರ್ಪಡಿಸಿಕೊಳ್ಳಬೇಕಾಗಿರುವುದರಿಂದ ನಮ್ಮ ಧ್ಯೇಯಗಳಲ್ಲಿರುವ ಭಿನ್ನಾಭಿಪ್ರಾಯವು ನಮ್ಮ ವರ್ತನೆಯಲ್ಲೂ ತೋರ್ಪಡಿಸಿಕೊಳ್ಳುತ್ತದೆ. ರಾಜಕೀಯ ಪತ್ರಿಕೆಯು ಒಂದೇ ಒಂದು ಬಗೆಯ ಸಕ್ರಿಯಾತ್ಮಕವಾದ ಸಂಪಾದಕೀಯ ಕಾರ್ಯಕ್ರಮವನ್ನು ಅನುಸರಿಸಬೇಕಾಗಿರುವುದರಿಂದ ನಾನು ಸಹ-ಸಂಪಾದಿಕೆಯ ಸ್ಥಾನವನ್ನು ಅದರಲ್ಲಿ ಉಳಿಸಿಕೊಳ್ಳುವುದು ತುಂಬಾ ಅಸಮಾಧಾನಕ್ಕೆ ಅವಕಾಶವೀಯುವುದೆಂಬುದು ಸ್ಪಷ್ಟವಾಗಿದೆ. ಆ ಕಾರಣದಿಂದ ನಾನು ಹಿಂದೆ ಇದ್ದಂತೆ ಲೇಖನಗಳನ್ನು ಮಾತ್ರ ಬರೆಯುತ್ತಾ ಆ ರೀತಿ ಅದರಲ್ಲಿ ಭಾಗಿಯಾಗುವೆನಲ್ಲದೆ ನನ್ನ ಧ್ಯೇಯಗಳ ಪಾಲಿಗೆ National Reformer ಪತ್ರಿಕೆಯು ಯಾವ ರೀತಿಯಲ್ಲೂ ಹೊಣೆಯಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತೇನೆ!"

ಹೀಗೆ ನಾನು ಬರೆದುದರ ಜತೆಗೆ ಶ್ರೀ ಬ್ರಾಡ್ಲಾ ಇವನು ಈ ಕೆಳಗಿನಂತೆ ಕೆಲವು ಪಂಕ್ತಿಗಳನ್ನು ಬರೆದು ಸೇರಿಸಿದನು:

"ಶ್ರೀಮತಿ ಬೆಸೆಂಟ್ ಇವಳು ಈ ಪತ್ರಿಕೆಯ ಸಹ-ಸಂಪಾದಿಕೆ ಸ್ಥಾನದಿಂದ ನಿವೃತ್ತಳಾಗುವುದರ ಬಗೆ ನಾನು ಎಷ್ಟು ವಿಷಾದಿಸುತ್ತೇನೆಂದು ಇಲ್ಲಿ ಹೇಳುವ ಅವಶ್ಯಕತೆಯಿಲ್ಲ. Free-thought ಮತ್ತು Radical ತತ್ವಗಳ ಪ್ರಚಾರಕ್ಕಾಗಿ ಅವಳು ಸಲ್ಲಿಸಿದ ಘನವಾದ ಸೇವೆಯ ಮತ್ತೆ ಅವಳು ನನ್ನಿಂದ ಬೇರ್ಪಡುವ ಕೋರಿಕೆಯನ್ನು ನಾನು ಒಪ್ಪುವುದು ನನಗೆ ಇನ್ನಷ್ಟು ವ್ಯಸನಕ್ಕೆ ಕಾರಣವಾಗಿದೆ. ಕುಶಲ ಲೇಖಕಿಯಾದ ಅವಳ ಮೇಧಾಶಕ್ತಿ ಮತ್ತು ಲೇಖನಿ ಶಕ್ತಿಯ ಯೋಗ್ಯ ಸಹಕಾರವು National Reformer ಪತ್ರಿಕೆಯು ಮುಂದಕ್ಕೂ ಪಡೆಯುವುದೆಂದು ನಾನು ನಂಬುತ್ತೇನೆ. ಹದಿಮೂರು ವರ್ಷಗಳ ಕಾಲ ಅವಳು ಬಿಡುವಿಲ್ಲದೆ ಶ್ರಮಿಸಿ ಅಮೂಲ್ಯ ಸೇವೆಯನ್ನೀಡಿದ ಕಾರಣದಿಂದ ಈ ಪತ್ರಿಕೆಯ ಪ್ರಚಾರವನ್ನು ಹೆಚ್ಚಿಸಿತು. ಒಂದು ಪತ್ರಿಕೆಗೆ ಒಂದು ನಿರ್ದಿಷ್ಟವಾದ ಸಂಪಾದಕೀಯ ಧೋರಣೆಯು ಬೇಕೆಂದು ಅವಳು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಪ್ರತಿಯೊಬ್ಬ ಲೇಖಕನಿಗೂ ತುಂಬಾ ವಾಕ್ ಸ್ವಾತಂತ್ರ್ಯವಿರಬೇಕೆಂಬುದನ್ನೂ ಒಪ್ಪುತ್ತೇನೆ. ಶ್ರೀಮತಿ ಬೆಸೆಂಟ್ ಇವಳ ಹೇಳಿಕೆ

ಯಲ್ಲಿ ಕಾಣುವ ಆ ನಿಸ್ವಾರ್ಥ ತ್ಯಾಗಕ್ಕೆ ನಾನು ಸಂಪೂರ್ಣವಾಗಿ ಋಣಿಯಾಗಿದ್ದೇನಲ್ಲದೆ ಅವರ ಆ ಶಕ್ತಿಗಳಿಗೆ ನನ್ನ ಈ ಕೆಲವು ನುಡಿಗಳನ್ನು ಸೇರಿಸುತ್ತಿದ್ದೇನೆ. (ಸಹಿ.) ಚಾರ್ಲ್ಸ್ ಬ್ರ್ಯಾಡ್ಲೆ."

ಹದಿಮೂರು ವರ್ಷಕ್ಕೆ ಹಿಂದೆ ಬಹು ದೊಡ್ಡ ಉದ್ದೇಶದಿಂದ ಸೇರಿದ್ದ ಆ ಕೂಟದಿಂದ ಈಗ ಬೇರ್ಪಡುತ್ತಿರುವ ಹಿಂದು ರೀತಿಯಲ್ಲಿ ನ್ಯಾಯವೆನಿಸುತ್ತದೆ. ಯಾರೇ ಆಗಲಿ, ಗೌರವದಿಂದ ಮತ್ತು ಕರ್ತವ್ಯಪಾಲನೆಗಾಗಿ ಹೀಗೆ ಮನೋವೇದನೆಯ ನಿರ್ಣಯವನ್ನು ಮಾಡುವಾಗ ಅಂಥಾ ವೇದನೆಯನ್ನು ತನ್ನಷ್ಟಕ್ಕೇ ಅನುಭವಿಸಬೇಕಾಗಿದೆ. ಆ ತನ್ನ ತ್ಯಾಗವನ್ನು ಇತರರ ಮೇಲೆ ಆರೋಪಿಸುವುದಾಗಲೀ ಅಥವಾ ಅವರ ಸಹಾಯವನ್ನು ಹಿಡಿದು ತನ್ನ ಹಿತಗಳಿಗೆ ಯತ್ನಿಸುವುದಾಗಲೀ ಮಾಡಕೂಡದು. ಹಿಂದಿನ ಉನ್ನತ ಧ್ಯೇಯವನ್ನು ಸಾಧಿಸುವಂತಾ ಗೌರವವನ್ನು ಜೀವನದಲ್ಲಿ ಉಳಿಸಿಕೊಳ್ಳಬೇಕು, ಏಕೆಂದರೆ ವಿಶ್ವಾಸಘಾತುಕತನವೇ ನಿಜವಾದ ದೇವನಿಂದೆಯಾಗಿದೆ.

ಪತ್ರಿಕಾ ಮಂಡಳಿಯಲ್ಲಿ ಆದ ಈ ಬದಲಾವಣೆಗೆ ನಾನು ಇನ್ನೊಬ್ಬನ ಮೇಲೆ ಆರೋಪಿಸಲು ಹಿಂಜರಿಯುತ್ತಿಲ್ಲ. ಇನ್ನೊಂದು ಕಾರ್ಯವೂ ಇತ್ತು. ಅವನು (ಚಾರ್ಲ್ಸ್ ಬ್ರ್ಯಾಡ್ಲೆ) ನನ್ನಲ್ಲಿಟ್ಟಿದ್ದ ನಿಷ್ಠೆಯ ವಿಶ್ವಾಸದ ಪರಿಣಾಮವಾಗಿ ಅವನು ನನ್ನ ಜೀವನದಲ್ಲಿ ಈ ಬದಲಾವಣೆಗೆ ಹೋರಾಡದೆ ನನ್ನನ್ನು ಬಿಟ್ಟಿರಲು ಬಹುಶಃ ತಡೆಗಟ್ಟುತ್ತಿದ್ದನು. ಸಾರ್ವಜನಿಕ ([illegible]) ಯುವ ಈಗ ಶಿಷ್ಯನೆ ಬದಲಾಗುತ್ತಿರುವುದನ್ನು ನೋಡಿದೆನು, ಆ ವರೆಗೂ ಹಿಂದೆಯೇ ಸೇರಿದ್ದು ಇದ್ದ ಲಿಬರಲ್ ಪಕ್ಷದ ಕೆಲವರೂ ಅವನನ್ನು ತಿಳಿದರು, ಅವರೆಲ್ಲಾ ನನ್ನನ್ನು ಅವರ ಕಾರ್ಯಕ್ಕೆ ಮತ್ತೆ ಅಡ್ಡಿಯನ್ನುಂಟುಮಾಡುವವಳೆಂದು ಬಗೆದರು. ನಾನು ಅವನೊಡನೆ ಹೆಚ್ಚು ಪ್ರಾಮುಖ್ಯತೆಯಿಂದ ತೋರ್ಪಡಿಸಿಕೊಂಡಿದ್ದಿಲ್ಲವಾಗಿದ್ದರೆ ಅವನ ಹಾದಿಯನ್ನು ಅನುಸರಿಸುವುದೇ ಸುಲಭವಾಗಿತ್ತು. ನಾನು ಹೇಗೂ ಹಿಂದಕ್ಕೆ ಸರಿದೆನು; ಅವನ ಸಭೆಗಳಲ್ಲಿ ಭಾಗವಹಿಸಲೂ ಇಲ್ಲ. ಸಾರ್ವಜನಿಕವಾಗಿ ಅವನಿಗೆ ನನ್ನಿಂದ ಏನೂ ಆಗಬೇಕಾಗಿರಲಿಲ್ಲ. ಏಕೆಂದರೆ ನಾನು ಅವನಿಗೆ ಸಹಾಯಕಳಾಗುವುದರ ಬದಲು ಆತಂಕವನ್ನುಂಟುಮಾಡುವವಳಾಗಿದ್ದೆನು. ಅವನನ್ನು ಸಮಾಜ ಬಾಹಿರನನ್ನಾಗಿ ಮಾಡಿ ಜನವು ನಿಂದಿಸುತ್ತಿದ್ದಾಗ ನಾನು ಅವನೊಡನೆಯೇ ಇರುವ ಗೌರವವು ನನಗಿತ್ತು. ಸಂದರ್ಭಸಾಧಕರಾದ ಅವನ ಮಿತ್ರರು ಅವನನ್ನು ಸುತ್ತುಗಟ್ಟುತ್ತಿದ್ದಾಗ, ನಾನು ಅವನೊಡನೆ ನಿಂತು ಅವನ ಧ್ಯೇಯಗಳನ್ನೇ ಹೇರಿಸಿದೆನು. ಇಂದಿಗೆ ನಾನು ಅವನಿಂದ ದೂರ ನಿಂತಾಗ ಅವನಲ್ಲಿ ನನಗೆ ಇರುವ ವಿಶ್ವಾಸ ಪ್ರೀತಿಗಳು ಹಿಂದೆಂದೂ ಇರಲಿಲ್ಲ. "ನನ್ನ ಲೇಖನ ವ್ಯವಸಾಯವನ್ನು ಯಾವೊಂದು ರೀತಿಯಲ್ಲಿ ಮಾರ್ಪ

ಹಿಡಿದು ಮುಂದುವರಿಸಿದೆನು. ನನ್ನ ಅಭಿಪ್ರಾಯವು ಅವನಿಗೆ ನನ್ನಲ್ಲಿದ್ದ ದಯೆಯನ್ನು ಕಡಿಮೆ ಮಾಡಲಿಲ್ಲ. ಹಾಗಿದ್ದರೂ ಸ್ವಲ್ಪ ಸಮಯದ ನಂತರ ನಾನು ತತ್ವಜ್ಞಾನ (Theosophy) ಸಂಸ್ಥೆಗೆ ಸೇರಿದ ಮೇಲೆ ಅವನು ನನ್ನ ವಿಚಾರಧಾರೆಯಲ್ಲಿ ಮತ್ತು ಅಭಿಪ್ರಾಯಗಳಲ್ಲಿದ್ದ ನಂಬಿಕೆಯನ್ನೂ, ಅನಂತರ ಕಳೆದನು.

ಅದೇ ಸೆಪ್ಟೆಂಬರ್ ತಿಂಗಳಲ್ಲಿ ನಿರುದ್ಯೋಗಿಗಳು ಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾ ಹೋಗಲು ತೊಡಗಿದರು. ಪೋಲೀಸರು ಬಹು ಕಠಿಣರಾಗಿದ್ದುದರಿಂದ ಅದು ದೊಂಬಿಗೆ ಕಾರಣವಾಯಿತು. ಸರ್ ಚಾರ್ಲ್ಸ್ ವಾರೆನ್ ಇವನು ಯೂರೋಪಿನ ಇತರ ದೇಶಗಳಲ್ಲಿರುವಂತೆ ಲಂಡನ್ ಬೀದಿಗಳನ್ನೂ ಶಿಸ್ತಿನಲ್ಲಿಡಲು ಕುದುರೆ ರಾಹುತರನ್ನು ಉಪಯೋಗಿಸಿದ ಕಾರಣದಿಂದ ಅನಿವಾರ್ಯವಾಗಿ ಪೋಲೀಸರಿಗೂ ದ್ವೇಷವು ಮೊಳೆತು ಹೆಚ್ಚಾಗಲನುವಾಯಿತು.

ಕಡೆಗೆ ನಾವು ಬಡ ಕಾರ್ಮಿಕರನ್ನು ಬರೀ ಪೋಲೀಸ್ ಸಾಕ್ಷ್ಯದಿಂದ ಮಾತ್ರ ಶಿಕ್ಷೆಗೆ ಒಳಗಾಗಿಸಿ ಕಾನೂನು ಪ್ರಕಾರವಾಗಿ ಅವರ ರಕ್ಷಣೆಗೆ ಅನುವೀಯದೇ ಇರಲು ಅಂಥವರ ರಕ್ಷಣೆಗಾಗಿ Socialist Defence Association ಅನ್ನುವ ಸಮಾಜವಾದೀ ರಕ್ಷಣಾ ಸಂಸ್ಥೆಯೊಂದನ್ನು ಕಟ್ಟಿದೆವು. ಯಾರಾದರೊಬ್ಬನು ಮೆರವಣಿಗೆ ಹೋಗಿ ಅನಂತರ ಭಾಷಣವನ್ನು ಮಾಡುವಂಥಾ ಪ್ರಾಚೀನ ಹಕ್ಕನ್ನು ಸಾಧಿಸಿದಕ್ಕೆ ಅವನನ್ನು ಸೆರೆಮನೆಗೆ ಒಯ್ದರೆ ಅಂಥವನನ್ನು ಜಾಮೀನಿನಲ್ಲಿ ಬಿಡಿಸುವ ಬಗ್ಗೆ ದುಡಿಯಲು ಮತ್ತು ತಂತಿ ಮೂಲಕ ಕರೆದಕೂಡಲೆ ಆದೇಶವನ್ನು ಪಾಲಿಸುವಂಥಾ ಗಂಡಸರು ಮತ್ತು ಹೆಂಗಸರ ಒಂದು ದಳವನ್ನೇ ಸ್ಥಾಪಿಸಿದೆನು. ಒಂದು ಉದಾಹರಣೆಯೆಂದರೆ ಪ್ರಸಿದ್ಧ ಯುದ್ಧವಾರ್ತಾ ವರದಿಗಾರ ಶ್ರೀ ಬರ್ಲೀ (Mr. Burleigh) ಮತ್ತು ಶ್ರೀ ವಿಂಕ್ಸ್ (Mr. Winks) ಇವರನ್ನು ಇನ್ನೊಬ್ಬ ಕಾರ್ಮಿಕ Mr. J. Knight ಇವನೊಡನೆ ಸರಕಾರದ ವಿರುದ್ಧ ಚಳವಳಿಯೆಬ್ಬಿಸಿದರೆಂಬ ಅಪಾದನೆಯ ಮೇಲೆ ಸೆರೆಮನೆಗೊಯ್ಯಲಾಯಿತು. ನಾನು ಪೋಲೀಸ್ ಠಾಣ್ಯಕ್ಕೆ ಹೋಗಿ ಆ ಕಾರ್ಮಿಕನನ್ನು ಜಾಮೀನು ಮೇಲೆ ಬಿಡಿಸಲು ಯತ್ನಿಸಿದಾಗ ಪ್ರಧಾನ ಪೋಲೀಸ್ ಹೋವರ್ಡ್ ಇವನು ಬರ್ಲೀ ಮತ್ತು ವಿಂಕ್ಸ್ ಇವರನ್ನು ಬಿಟ್ಟು Mr. Knight ಇವನನ್ನು ಬಿಡಲು ಒಪ್ಪಿದನು. ಮರುದಿನ ಪೋಲೀಸ್ ನ್ಯಾಯಾಲಯದಲ್ಲಿ Mr. Knight ಇವನ ಬಿಡುಗಡೆಗಾಗಿ ನನ್ನ ವಿಶ್ವಾಸಪಾತ್ರವಾದ ರಕ್ಷಣಾ ದಳದ ಸದಸ್ಯರು ಸರಕಾರವು ವಿಧಿಸಿದ್ದ ನಾನೂರು ಪೌಂಡುಗಳನ್ನು ಜಾಮೀನು ಹಣವಾಗಿ ಕಟ್ಟಿದರು. ಮುಂದಿನ ವಿಚಾರಣೆಯ ದಿನ ಸರಕಾರೀ ವಕೀಲನಾದ ಶ್ರೀ ಪೋಲೆಂಡ್ ಇವನು ಈ ಮೊಕದ್ದಮೆಯನ್ನು ಅದರಲ್ಲಿ

ಅದರಲ್ಲಿ ಏನೂ ಹುರುಳಿಲ್ಲವೆಂಬ ಕಾರಣದಿಂದ ವಾಪಸು ತೆಗೆದುಕೊಂಡನು.

ಅದರನಂತರ ಟ್ರಾಫಾಲ್ಗರ್ ಚೌಕವನ್ನು ಮುಚ್ಚಿದ್ದೂ ಅದರ ಬೆನ್ನಿಯೇ ಅನಿರೀಕ್ಷಣೀಯವಾದ ನಿಷ್ಠುರತೆಯ ಆಜ್ಞೆಯ ಪರಿಣಾಮವಾಗಿ ಹಲವು ಜನ ತಮ್ಮ ಪ್ರಾಣವನ್ನು ಕಳೆದುಕೊಂಡುದೂ ಹಲವರು ತಮ್ಮ ಸ್ಥಾನಮಾನವನ್ನೂ ಮತ್ತು ಇನ್ನೂ ನೂರಾರು ಜನರು ಬಹು ರೀತಿಯ ಆಘಾತಕ್ಕೆ ಒಳಗಾಗಿದ್ದುದರ ಘಟನೆಯೂ ನಡೆಯಿತು. ಮಿ| ಮ್ಯಾಥ್ಯೂಸ್ ಇವನು ಹೌಸಿನ ಸಭೆಯಲ್ಲಿ ತನ್ನ ಸ್ಥಾನದಿಂದ ಹೇಳಿದಂತೆ ಕಾನೂನುಬದ್ಧವಾದ ರಾಜಕೀಯ ಕೂಟಗಳಿಗೆ ಅಡ್ಡಿಮಾಡುವುದಿಲ್ಲವೆಂದೂ ಹೇಳಿದ್ದರ ಮೇರೆ ಶ್ರೀ ಓಬ್ರಿಯನ್ (Mr. O'Brien) ಇವನನ್ನು ಸೆರೆಹಿಡಿದುದಕ್ಕೆ Metropolitan Radical Federation - ಇದರ ಸದಸ್ಯರು ಆ ವರ್ಷದ ನವೆಂಬರ್ ೧೩ನೇ ದಿನ ಒಂದು ಪ್ರತಿಭಟನಾ ಸಭೆಯನ್ನು ಕರೆಯಿತು. ಸರ್ ಚಾರ್ಲ್ಸ್ ವಾರನ್ ಇವನು ಟ್ರಾಫಾಲ್ಗರ್ ಚೌಕದಲ್ಲಿ ಯಾವ ಸಭೆಯೂ ಜರಗಿಸ ಕೂಡದೆಂದು ಆಜ್ಞೆಯಿತ್ತಾಗ ಇತರ ಸಾರ್ವಜನಿಕ ಕೂಟಗಳಿಗೆ ಗೃಹಮಂತ್ರಿಯು ಕೊಟ್ಟ ಭರವಸೆಯನ್ನು ನಂಬಿದರು. ಹೀಗೂ ನವೆಂಬರ್ ೧೩ನೇ ದಿನ ಸಾಯಂಕಾಲ ಸರ್ವ ಸಿದ್ಧತೆಗಳನ್ನು ನಡೆಸಿದನಂತರವೇ ಅವನು ಕೆಲವು ನಿರ್ದಿಷ್ಟ ಸ್ಥಳಗಳಲ್ಲಿ ಮೆರವಣಿಗೆಯನ್ನು ನಿಷೇಧಿಸಿ ಆಜ್ಞೆಯನ್ನು ಹೊರಡಿಸಿದನು. ಹೀಗೆ ಅವರ ಕಡೆಗೆ ಪಕ್ಕನೆ ಒಂದು ಬಲೆಯನ್ನು ಎಸೆಯಲಾಗಿ Fabian Society, Social Democratic Federation ಮತ್ತು Socialist League - ಈ ಕೂಟಗಳ ಪ್ರತಿನಿಧಿಗಳು ಅದೇ ಶನಿವಾರ ದಿನ ಸಭೆ ಸೇರಿ ನಿರ್ಲಕ್ಷ್ಯ ವಿಚಾರವೇನಾದರೂ ಅವರಿಗೆ ಮನಸ್ಸಿಗೆ ಬಾರದೆ ಬಿಟ್ಟುಕೊಡಲಾಗದೆಯೋ ಎಂದು ನಿರ್ಧರಿಸಲು ಕೂಡಿದರು. ಅನಂತರ ಏರ್ಪಡಿಸಲಾದ ಮೆರವಣಿಗೆಯನ್ನು ಬರಕಾಸ್ತು ಮಾಡಿ ಸೇರಿದ ಜನವೆಲ್ಲ ಟ್ರಾಫಾಲ್ಗರ್ ಚೌಕದತ್ತ ತಾವಾಗಿಯೆ ಸೇರುವಂತೆ ಹೇಳುತ್ತ ಪತ್ರದಲ್ಲಿಯಂತೆ ತಾವು ಹಿಂದೆಯೇ ನಿರ್ಣಯಿಸಿದಂತೆ ಎಲ್ಲರೂ ಒಟ್ಟುಸೇರಿ ಆ ಚೌಕದಲ್ಲಿ ಕೂಡುವಂತೆಯೂ ಕ್ರೋಢೀಕರಿಸಿದರು. ತಡೆದರೆ ಅವರು ಕಾನೂನುಬಾಹಿರವಾಗಿ ನಮ್ಮನ್ನು ತೊಂದರೆಗೊಳಪಡಿಸಿದ ಕಾರಣದಿಂದ ಸಾಂಪ್ರದಾಯಿಕ ವಿರೋಧವನ್ನು ವ್ಯಕ್ತಗೊಳಿಸಬೇಕೆಂದೂ ನಿಶ್ಚಯಿಸಲಾಯಿತು. ಅಷ್ಟೇ ಅಲ್ಲ, ಸಾರ್ವಜನಿಕ ಸಭೆಯನ್ನು ನಡೆಸುವ ಹಕ್ಕನ್ನು ಸರಕಾರವು ಸ್ಥಾಪಿಸುವವರೆಗೂ ಆ ರೀತಿ ಚೌಕದಲ್ಲಿ ಪ್ರತಿ ಆದಿತ್ಯವಾರ ಸಭೆಯೊಳಿಲ್ಲ ಸೇರುವಂತೆ ನಿರ್ಣಯಿಸಲಾಯಿತು.

ನಾನೂ ಸೇರಿದ್ದ ಆ ಮೆರವಣಿಗೆಯು ಸ್ವಜನವನ್ನು ಮುಂದೆ

ಹಿಡಿದುಕೊಂಡು ನನ್ನೊಂದಿಗೆ ಹೋಗುತ್ತಿದ್ದ ಇತರ ಆರಿಸಲ್ಪಟ್ಟ ವಾಲಂಟೀರರು ಆ ಧ್ವಜದೊಡನೆಯೇ ಹಿಂದೆ ನಡೆಯುತ್ತಾ, ಕ್ಲರ್ಕನ್‌ವೆಲ್ ಗ್ರೀನ್‌ನಿಂದ ಹೊರಟೆವು, ನಾವು ನಿಧಾನವಾಗಿ ಮುಂದಕ್ಕೆ ನಡೆಯುತ್ತಿರಲು. ಟ್ರಾಫಾಲ್ಗರ್ ಚೌಕದ ಬಳಿ ಬಂದು ಚಿಕ್ಕ ರಸ್ತೆಗಾಗಿ ತಿರುಗಿದೆವು, ನಮ್ಮನ್ನು ಪೋಲೀಸರು ತಡೆದು ಹಾಕುವರೋ ಎಂದು ಆಲೋಚಿಸುತ್ತಿರುವಷ್ಟರಲ್ಲಿ ಥಟ್ಟನೆ ಯಾವೊಂದೂ ಎಚ್ಚರಿಕೆಯನ್ನೀಯದೆ ತಮ್ಮ ದೊಣ್ಣೆಗಳನ್ನು ಮೇಲೆತ್ತಿ ಅವರು ನಮ್ಮತ್ತ ಧಾವಿಸಿದರು, ನಮ್ಮ ಧ್ವಜವನ್ನು ಕೆಳಗೆ ಬೀಳಿಸಲಾಯಿತಲ್ಲದೆ ಹೆಂಗಸರು ಮತ್ತು ಗಂಡಸರು ಪೋಲೀಸ್ ಜನರ ಹಿಟ್ಟಿನ ಘಾತಕ್ಕೆ ತುತ್ತಾಗಿ ಕೆಳಗೆ ಬಿದ್ದರು, ಅನಿರೀಕ್ಷಣೀಯವಾದ ಈ ಆಕ್ರಮಣಕ್ಕೆ ಸಿದ್ಧರಾಗಿಲ್ಲದ ಜನರು ಆಶ್ಚರ್ಯಕ್ಕೊಳಗಾದರಲ್ಲದೆ ಬೇರಾವ ವಿಧದಲ್ಲೂ ಅವರು ಆ ಅತ್ಯಾಚಾರವನ್ನು ತಡೆಗಟ್ಟಲು ಪ್ರಯತ್ನಿಸಲಿಲ್ಲ, ಗಾಯಗೊಂಡ ಕೆಲವರನ್ನು ಅಲ್ಲಿಯೇ ನೆಲದಲ್ಲಿ ಬಿಟ್ಟು, ಉಳಿದವರು ಅತ್ತಿತ್ತ ಚದರಿ ಇವರು ಆದಷ್ಟು ವಿಜಯವರಾಗಿ ಜತೆಸೇರಿ ನಡೆದು ಕಡೆಗೆ ಟ್ರಾಫಲ್ಗರ್ ಚೌಕದಲ್ಲಿ ಸೇರಿದರು, ಆ ಚೌಕವಾದರೋ ಸಾಲುಗಟ್ಟಿ ನಿಂತ ಪೋಲೀಸ್ ದಳದಿಂದ ಸುತ್ತುವರಿದಿದ್ದುದರಿಂದ ಅದನ್ನು ಜನರು ಉದ್ರೇಕಿತರಾಗಿ ಹಾಯ್ದುದ್ದಾರೆ ಮಾತ್ರ ಮುರಿಯಬಹುದಾಗಿತ್ತು. ಆದರೆ ಹಿಂಸೆಯನ್ನು ಉಪಯೋಗಿಸಕೂಡದೆಂದು ಜವಕ್ಕೆ ನಾವು ನಿರ್ಧರಿಸಿದ್ದೆವು, ಅಂತೆಯೇ ಯಾವ ಬಲಪ್ರಯೋಗವನ್ನು ಯಾರೂ ನಡೆಸಲಿಲ್ಲ, ಇವರು ಯುವಕರು ಕೈ-ಕೈ ಹಿಡಿದುಕೊಂಡು ಪೋಲೀಸ್ ದಳದೊಳಗಾಗಿ ಮುಂದಕ್ಕೆ ಹೋಗಲು ಪ್ರಯತ್ನಿಸಿದಾಗ ಅವರ ತಲೆಗೆ ಕ್ರೂರವಾಗಿ ದೊಣ್ಣೆಗಳಿಂದ ಬಡಿದು ಅವರನ್ನು ಸೆರೆಮನೆಗೆ ಒಯ್ದರು, ಇದನಂತರ ನನಗನ್ನಿಸಬೇಕಾದ ಒಂದು ದೃಶ್ಯವು ನಡೆಯಿತು. ಪೋಲೀಸ್ ಕುದುರೆ ದಳವು ಥಟ್ಟನೆ ಧಾವಿಸಿದಾಗ ಗಂಡಸರು ಮತ್ತು ಹೆಂಗಸರು ಅಂತೆಯೇ ನೆಲಕ್ಕುರುಳಿ ಬಿದ್ದರು, ಕಾಲಾಳು ದಳವು ದೊಣ್ಣೆಯನ್ನು ಬೀಸುತ್ತಾ ಅಲ್ಲಿಯೇ ಅವನ ಬಳಿ ಇದ್ದ ಜನಸಮೂಹದ ಮಧ್ಯೆ ನುಗ್ಗಿದು ಅವರನ್ನು ಚದರಿಸ ಬೀಸಿತು. ನಾನು ಒಂದು ಚಿಕ್ಕ ಗಾಡಿಯನ್ನು ಹತ್ತಿ ಅದನ್ನು ಒಂದು ರಸ್ತೆಯತ್ತ ಓಡಿಸಲು ಅದರ ಚಾಲಕನಿಗೆ ಹೇಳಿದೆನು. ಅಂತಾದರೆ ಜನರು ಅದನ್ನು ಅನುಸರಿಸಿ ಕುದುರೆ ದಳದ ಮಧ್ಯೆ ಹಾದು ಅದನ್ನು ಮುರಿದು ಹಾಕಲು ಸಾಧ್ಯವಾಗಬಹುದೆಂದು ಯೋಚಿಸಿದೆನು, ಆದರೆ ಗಾಡಿಯವನು ಹೆದರಿ ಗಾಡಿಯನ್ನು ನಿರೀಕ್ಷಿಸಿರದ ಕಡೆಗೆ ಓಡಿಸಿದನು, ನಾನು ಅದರಿಂದ ಕೆಳಹಾರಿ ಹಿಂದಕ್ಕೆ ಚೌಕಕ್ಕೆ ಓಡಿದೆನು, ಅಷ್ಟರಲ್ಲಿ ಕುದುರೆ ದಳವು ಇತರ ಪೋಲೀಸ್ ಪಡೆಯೊಡಗೂಡಿ ಯಾರನ್ನೂ ಬಾಧಿಸದೆ ತಮ್ಮ ಕುದುರೆಗಳನ್ನು ಮೆಲ್ಲನೆ ನಡೆ

ಸುತ್ತ ಇದರ ಸಪ್ಪಳದ ಧ್ವನಿಯಿಂದ ಜನವನ್ನು ಎಚ್ಚರಿಸುತ್ತ ಬೆದರಿಸುತ್ತ.
ಶಹರದ ಉತ್ತರ ಭಾಗದಲ್ಲಿ Scots' Guards ಎಂಬ ದಳವು ತಮ್ಮ
ಬಂದೂಕುಗಳ ಸಮೇತವಾಗಿ ಇನ್ನೊಂದೆಡೆ ಸರಿಯುತ್ತ, ಇಷ್ಟರಲ್ಲಿ ಜನಕ್ಕೆ
"ಮನೆಗೆ ಹೋಗಿ, ಮನೆಗೆ ಹೋಗಿ" ಎಂದು ನಾವು ಅರಚಿ ಹೇಳಿದೆವು. ಈ
ಸಂದರ್ಭದಲ್ಲಿ ನಿರಾಯುಧರಾದ ಜನರ ಮೇಲೆ ಗುಂಡು ಹಾರಿಸಿದ್ದರೆ ಅ
ದೊಂದು ಭಯಂಕರ ಕೊಲೆ, ಅತ್ಯಾಚಾರವೇ ಆಗುತ್ತಿತ್ತು. ಹೇಗೂ ಟ್ರಾ
ಫಾಲ್ಗರ್ ಚೌಕವು ನಿಧಾನವಾಗಿ ಖಾಲಿಯಾಯಿತು. ಇತರ ಮೆರವಣಿಗೆ
ಗಳನ್ನು ಈ ರೀತಿ ಸರಕಾರವು ನಿರೋಧಿಸಿದಾಗ ಹಲವು ಜನರು ಗಾಯಗೊಂ
ಡು ಬಿದ್ದರು. ಅಂಥಾ ಸಭೆಗಳಲ್ಲಿ ಭಾಗವಹಿಸ ಬೇಕೆಂದು ಹೊರಟು ಕನ
ಸಿನಲ್ಲೂ ಎಣಿಸದ ಪೆಟ್ಟು ತಿಂದು ಶಾಂತಿಯುತ ನಿಯತಕಾಲಿಕರೂ ಆದ
ಕಾರ್ಮಿಕರು ಸಹ ತಮ್ಮ ಕಾಲುಗಳನ್ನು ಮುರಿದು, ತೋಳುಗಳ
ನ್ನು ಮುರಿದು ಮತ್ತಿತರ ರೀತಿಯಲ್ಲಿ ಗಾಯಗೊಂಡು ಆಸ್ಪತ್ರೆ
ಶುಶ್ರೂಷಕ್ಕೆ ಬಿದ್ದು ನರಳಿದರು. ಅನ್ನೆಲ್ ಎಂಬುವನು ಕೂ
ಡಲೇ ಅಲ್ಲಿ ಮೃತನಾದನು; ಇತರರು ಕೆಲವು ದಿವಸಗಳ ಕಾ
ಲ ನರಳಿ ಆನಂತರ ಮಡಿದರು.

ಮರುದಿನ 'ಬೋ ಸ್ಟ್ರೀಟ್' ಪೋಲೀಸ್ ನ್ಯಾಯಾಲಯದ
ಲ್ಲಿ ವಿಚಾರಣೆ ನಡೆಯಿತು. ಸಾಕ್ಷಿಗಳನ್ನು ಪೋಲೀಸರು ಹಾಜರುಪ
ಡಿಸಿದರು. ಜನರು ತಮ್ಮ ಗಾಯಗಳನ್ನು ಹೊತ್ತುಕೊಂಡು
ಬೆರಗಾಗಿ ನೋಡಿದರು. ಪೋಲೀಸ್ ನ್ಯಾಯಾಲಯದಲ್ಲಿ ಹಿಂದೆಂ
ದೂ ಹೀಗೆ ವಿಚಾರಣೆಗೊಳಗಾಗದ ಸಭ್ಯ ಹಾಗೂ ಉತ್ತಮ ಗುಣದ
ಕಾರ್ಮಿಕರನ್ನು ತಮ್ಮ ರಕ್ಷಣೆಗೆ ಏನೂ ಇಲ್ಲದೆಯೇ ಶಿಕ್ಷೆಗೆ ಒಳ
ಪಡಿಸಿದರು. ಆದರೆ ವೀರರ ತಂಡವೊಂದು ಅವರನ್ನು ಪಾ
ರಾಗಿಸಲು ಸಿದ್ಧವಾಯಿತು. ವೀರ ಪತ್ರಿಕೋದ್ಯಮಿ, ವಿಲಿಯಂ
ಸ್ಟೀಡ್ ಇವರಿತ್ತ ರಕ್ಷಣಾನಿಧಿಯೊಂದನ್ನು ಸ್ಥಾಪಿಸಿದಾಗ ಹಣ
ವು ಆ ನಿಧಿಗೆ ಹರಿಯಲಾಯಿತು. ಸೆರೆಯಲ್ಲಿದ್ದವರ ಬಿಡು
ಗಡೆಗೆ ನಾನು ಜಾಮೀನು ನಿಲ್ಲುವೆನೆಂದು ಮಾತುಕೊಡಲು
ಇತರ ಹತ್ತಾರು ಜನರೂ ಇದೇ ರೀತಿ ಮುಂದಾದರು. ಪರಿ
ಣಾಮವಾಗಿ ಜೈಲಿನಲ್ಲಿದ್ದವರು ಹೊರಬಂದರು. ಕೇವಲ
ದಿಟ್ಟತನಕ್ಕಾಗಿ ನಾನು ಆ ಪೋಲೀಸ್ ನ್ಯಾಯಾಲಯದೊ
ಳ ಹೊಕ್ಕು ನ್ಯಾಯಾಧೀಶನನ್ನು ಬಹು ವಿನಯದಿಂದ ಕಂ
ಡಾಗ ಅವನು ನನ್ನ ವರ್ತನೆಗೆ ಮಾರುಹೋದನು. ನಾನು
ಬಹು ದಿಟ್ಟತನದಿಂದ ಹಾಗೂ ಪ್ರಶಾಂತ ಧೈರ್ಯದಿಂದ ನನಗೆ ಅಲ್ಲಿ
(ನ್ಯಾಯಾಸ್ಥಾನದೊಳಗೆ) ಇರಲು ಅಧಿಕಾರವಿಲ್ಲವೆಂದು ಆ ಸೆರೆ
ಯಲ್ಲಿದ್ದವರ ಬಿಡುಗಡೆಗಾಗಿ ಅನೇಕ ಪ್ರಭಾವಿತರೂ, ಗೌರ
ವಾನ್ವಿತರೂ ಸಲ್ಲಿಸಿದ ಜಾಮೀನು ಪತ್ರಗಳನ್ನೆಲ್ಲಾ ಅವನ
ಮುಂದೆ ಇಟ್ಟಾಗ ಯಾವ ನ್ಯಾಯಾಧೀಶನೂ ಅದನ್ನು ತಿರಸ್ಕ

ರಿಸುವಂತಿರಲಿಲ್ಲ. ಹಾಗೆ ಸ್ವಲ್ಪ ಸಲುಗೆಯನ್ನು ಪಡೆಯಲು ಪೀ
ಲ ಥಾಂಸನ್ ಇವನು ಹೃತ್ಪೂರ್ವಕವಾದ ಕ್ರೌರ್ಯದಿಂದ ಕಾನೂನು
ಬದ್ಧ ರಕ್ಷಕರಿಗೆ ಹಲವು ದಿನಗಳವರೆಗೂ ತಡೆದಿದ್ದನು. ನಾವು ಜಾ
ಮೀನು ಹಣವನ್ನು ತೆತ್ತೆವು. ಶ್ರೀಮತಿ ಮಾರ್ಗರೆಟ್ ಲಿಂಗ್ ಇ
ವರು ಈ ಸಂದರ್ಭದಲ್ಲಿ ಧೈರ್ಯದಿಂದ ತನ್ನ ಸೇವೆಯನ್ನು ಸಲ್ಲಿ
ಸಿದರು. ದಂಡವನ್ನು ತೆತ್ತ ನಂತರ 'ಮಿಲ್‌ಬ್ಯಾಂಕ್' ಜೈಲಿನಿಂದ
ಗಾಯಗಳಿಂದ ನೊರಗಿದ್ದ ಹರಕು ಬಟ್ಟೆಯನ್ನುಟ್ಟ, ಬರಿದಲೆ
ಯಿಂದ ಕೂಡಿದ ಮತ್ತು ನಾವೆಲ್ಲರೂ ಕೇವಲ ಅಪಮಾನಕ್ಕೊ
ಳಗಾದವರಂತೆ ಕಾಣುತ್ತಿರಲು ಅಂಥ ಸಂದರ್ಭ ಜನರ ತಂಡ
ವನ್ನೇ ನಾನು ಹೆಮ್ಮೆಯಿಂದ ಬರಮಾಡಿದೆನು. ಬೀದಿಯಲ್ಲಿ
ಅವರನ್ನು ಸಾಲಾಗಿ ನಿಲ್ಲಿಸಿ ಅವರು ಗೌರವಾನ್ವಿತರಾಗಿ ಕಾಣು
ವಂತೆ ಅವರಿಗೆ ಟೋಪಿ (hat)ಗಳನ್ನು ತೆಗೆದು ಕೊಟ್ಟೆವಲ್ಲ
ದೆ ಕೈಲುಗಾಡಿ ಮತ್ತು ಕುದುರೆಗಾಡಿಗಳಲ್ಲಿ ಅವರನ್ನು ಕೂ
ರಿಸಿ ಅವರ ಮನೆಗೆ ಕಳುಹಿಸುವ ವರೆಗೂ ನಾವು ಅವರೊ
ಡನೆಯೇ ಇದ್ದೆವು. ಏಕೆಂದರೆ ಪುನಃ ಇನ್ನಾವುದಾದರೊಂ
ದು ರೀತಿಯಲ್ಲಿ ಕಳ ಪ್ರಸಂಗವು ಹುಟ್ಟಿ ಕೊಲೆಹಕ್ಕೆಡೆಗೊ
ಡಬಹುದೆಂದು ಭಾವಿಸಿದ್ದೆವು. ಪೊಲೀಸರ ಅತ್ಯಾಚಾರ
ವನ್ನು ತಡೆಗಟ್ಟಲು ನಾವು Law and Liberty League
ಎಂಬೊಂದು ಸಂಸ್ಥೆಯನ್ನು ಸ್ಥಾಪಿಸಿ ಆ ರೀತಿಯಾಗಿ ಸೆರೆ
ಮನೆಗೆ ಹೋಗಿ ಬಿಡುಗಡೆಯಾಗಿದ್ದ ಅನೇಕರನ್ನು ರಕ್ಷಿಸಿದೆವು.
ಟ್ರಾಫಲ್ಗರ್ ಚೌಕದಲ್ಲಿ ನಡೆದ ವಿವಾದದ ಆ ಲಿನ್ನೆಲ್ (Mr.
Linnell) ಇವನಿಗೆ ಸಾರ್ವಜನಿಕ ಶವಸಂಸ್ಕಾರವನ್ನಿತ್ತೆವು.
ವಾಟರ್‌ಲೂ ಸೇತುವೆಯ ಶಿಲ್ಪವಂತಕ್ಕೆ ಇರುವ ಪ್ರಮುಖ
ದಾರಿಗಳಿಗಾಗಿ ಆ ಶವದ ಮೆರವಣಿಗೆಯು ಹೋಗಕೂಡ
ದೆಂದು ಸರ್ ಚಾರ್ಲ್ಸ್ ವಾರನ್ ಇವನು ವಿಧಿಸಿದ್ದರಿಂದ ಆ
ಜನಸಂದಣಿಯು ಆ ಸೇತುವೆಯ ಬಳಿ ನಿಂತಿತು. ವಿಲ್ಲಿಯಂ
ಸ್ಟೀಡ್, ಸಿ. ಗ್ರಹಾಂ, ಹಬ್. ಬ್ಯೂರೋಸ್ ಮತ್ತು ನಾನು
ಶವದ ಪೆಟ್ಟಿಗೆಯ ಸಂದು ಕಡೆಯೂ, ವಿಲಿಯಂ ಮಾ
ರಿಸ್, ಎಫ್. ಸ್ಮಿತ್, ಆರ್. ರೌಲಿಂಗ್ ಮತ್ತು ಜೆ. ಸಿಡ್ಡನ್
ಇವರು ಹಿಂದಿನಿಂದ ಕಡೆಯಂಬಂತೆಯೂ ನಡೆದೆವು. ಪ್ರತ್ಯೇ
ಕವಾಗಿ ಹಮ್ಮಿಗಿರುವ ಸ್ಥಾನದಲ್ಲಿದ್ದ ರೆವರೆಂಡ್. ಎಸ್.
ಹೆಡ್ಲಮ್ ಇವನು ಮುಂದೆ ನಡೆದನು. (ಮತ್ತು ಜನರು
ಉದ್ದವಾದ ಕೋಲುಗಳನ್ನು ಹಿಡಿದು ಕೊಂಡು ಶವದ ಪೆಟ್ಟಿ
ಗೆಗೆ ಕಾವಲೋ ಎಂಬಂತೆ ಅದರ ಹಿಂದೆ ಮತ್ತು ಮುಂದೆ
ನಡೆದರು. ಕೊಲೆಯಾದ ವ್ಯಕ್ತಿಯನ ನ್ಯಾಯದೆಡೆಗೆ ಸಾಗುತ್ತಾ
ಇದ್ದಂತೆ ವೆಲ್ಲಿಂಗ್ಟನ್ ಬೀದಿಯಿಂದ "ಲೋ" ಸ್ಮಶಾನದ

ವರೆಗಿನ ರಕ್ತಪಾತವಿಲ್ಲದ ದುಃಖ ಹಾಗೂ ಗೌರವ ಸೂಚಕವಾದ ಪ್ರಶಾಂತ ಜನಸ್ತೋಮದಿಂದ ತುಂಬಿತ್ತು. ಆಲ್ಡರ್‌ಗೇಟ್ ಬಳಿ ಒಂದು ಇಕ್ಕಟ್ಟಿನಲ್ಲಿ ಮೆರವಣಿಗೆಯು ಮುಂದುವರಿಯಲು ಮುಕ್ಕಾಲು ಗಂಟೆ ಕಾಲ ಹಿಡಿಯಿತು. ಹೀಗೆ ಕ್ರೂರ ಅಕೃತ್ಯದ ಸಂಕೇತವಾಗಿದ್ದ ಲಿನ್ಲಿಯನ್ನು ಅವನ ಸಮಾಧಿಗೆ ಒಯ್ಯುವಾಗ ಆ ಜನಸ್ತೋಮವು ತುಂಬಾ ಶಿಸ್ತಿನಿಂದ, ಮೌನವಾಗಿ ಬರಿದಲೆಯಲ್ಲಿ ನಡೆಯುತ್ತಾ ಅಂದಿನ (ಸರಕಾರದ) ಅತ್ಯಾಚಾರವನ್ನು ನಿಶ್ಶಬ್ದವಾಗಿಯೇ ಪ್ರತಿಭಟಿಸಿತು.

ಪೊಲೀಸ್ ನ್ಯಾಯಾಲಯಗಳಲ್ಲಿ ನಾನು ಸಾಧಿಸಿದ ಅವಿಶ್ರಾಂತ ದುಡಿಮೆಯನ್ನು ಚಾರ್ಲ್ಸ್ ಬ್ರಾಡ್ಲೆಯು ಪರಿಗಣಿಸಿ ಅವನ ನೀತಿಯನ್ನು ಅನುಸರಿಸದೇ ಇದ್ದರೂ ಒಳ್ಳೆಯ ಕೆಲಸವನ್ನು ಮೆಚ್ಚುವ ಔದಾರ್ಯವನ್ನು ಅವನು ಹೇಗೆ ತೋರಿಸಬಲ್ಲನೆಂಬುದಕ್ಕೆ ಈ ಕೆಳಗಿನ ವಾಕ್ಯಬೃಂದವನ್ನು ಇಲ್ಲಿ ಉದಾಹರಿಸಲು ನಾನು ಸಂತೋಷಪಡುತ್ತೇನೆ:—

"ವಿಚಾರಪೂರ್ಣವಾದ ತಾತ್ವಿಕ ಕಾರ್ಯಗಳಿಂದಾಗಿ ವೈಯಕ್ತಿಕವಾಗಿಯೂ ನಿಷ್ಠಾವಂತಳೂ ಆದ ನನ್ನ ಸಹೋದ್ಯೋಗಿ (ಶ್ರೀಮತಿ ಅನಿ ಬೆಸೆಂಟ್)ಯಿಂದ ನಾನು ಇತ್ತೀಚೆಗೆ ಬೇರೆ ಸರಿದಿರುವೆನಾದರೂ ಮತ್ತು ಈ ಪತ್ರಿಕೆ (Reformer)ಯ ಸಂಪಾದಕೀಯ ಕೆಲಸಗಳಿಂದ ನಿವೃತ್ತಿಹೊಂದಿ ಆ ರೀತಿಯಾಗಿ ನಮ್ಮ ಭಿನ್ನಾಭಿಪ್ರಾಯವನ್ನು ವಿಷಾದಕರ ರೀತಿಯಲ್ಲಿ ಅವಳು ಸಮರ್ಥಿಸಿದರೂ ನಾನು ಅವಳ ಕರ್ತವ್ಯದಕ್ಷತೆಗೆ ಮತ್ತು ಅವಳು ಪೊಲೀಸರ ಕೈಯಲ್ಲಿದ್ದ ನಿಸ್ಸಹಾಯಕ ಜನಕ್ಕೆ ವಕಾಲತ್ತು, ಸಹಾಯವನ್ನು ಒದಗಿಸಿ ಅವರನ್ನು ಜಾಮೀನು ಮೇರೆಗೆ ಸೆರೆಯಿಂದ ಬಿಡಿಸಿದ್ದಕ್ಕೆ ನಾನು ಎಷ್ಟು ಕೃತಜ್ಞನಾಗಿರುವೆನೆಂದೂ ಅವಳು ಪ್ರತಿದಿನವೂ ಸ್ವತಃ ನ್ಯಾಯಾಲಯದಲ್ಲಿದ್ದು ಪೊಲೀಸ್ ಠಾಣ್ಯ ಮತ್ತು ಕಚೇರಿಯಲ್ಲಿ ಘನತೆಯಿಂದ ವರ್ತಿಸುತ್ತಾ ಒಂದೆಡೆ ಜನವು ಕಠಿಣ ರೀತಿಯಲ್ಲಿ ನಡೆಯದಂತೆಯೂ ಇನ್ನೊಂದೆಡೆ ತಿಳಿಗೇಡಿತನದ ತಪ್ಪುಗಳು ಆಗದಂತೆಯೂ ಯತ್ನಿಸಿದ್ದರ ಬಗ್ಗೆ ನಾನು ಎಷ್ಟು ಮನಃಪೂರ್ವಕವಾಗಿ ಒಪ್ಪುತ್ತೇನೆಂದು ಇಲ್ಲಿ ಒತ್ತಿ ಹೇಳುವುದು ಅವಶ್ಯವಿದೆ. ಕಾಮನ್ಸ್‌ನ ಕೆವಿದ ಈ ವಾತಾವರಣದಲ್ಲಿ ಇದು ಒಬ್ಬ ಸ್ತ್ರೀಯು ನಡೆಸಬಹುದಾದ ಯೋಗ್ಯವಾದ ಕೆಲಸವೆಂದು ನಾನು ಪ್ರತ್ಯೇಕವಾಗಿ ಹೇಳಲಾರೆನಾದರೂ ಸಲ್ಲಿಸಿದ ಈ ಸೇವೆಯಾದರೋ ಬಹು ಧೈರ್ಯದಿಂದ, ಸಮರ್ಪಕವಾಗಿ ಮತ್ತು ಪ್ರಯೋಜನಕಾರಿಯಾಗಿ ನಡೆಸಲ್ಪಟ್ಟಿತ್ತೆಂದು ಹೇಳಲು ಸಂತೋಷಪಡುತ್ತೇನೆ. ಈ ಅಭಿಪ್ರಾಯವು ನನ್ನದೇ ಎಂಬುದಾಗಿ ನಾನು ಸಮರ್ಥನೀಯವಾಗಿ ಹೇಳಲು ಇಚ್ಛಿಸುತ್ತೇನೆ; ಆದರೆ ಶ್ರೀಮತಿ

ಆನಿ ಬಿಸೆಂಟ್ ಇವರು ದಾದರ್ಲೇ ಪ್ರತಿದಿನವೂ ಹೆಚ್ಚುತ್ತಿರುವ ಪ್ರಖರ ಹೋರಾಟದಲ್ಲಿ ಎದುರಾಗುವ ಹಲವು ವಿಷಯಗಳಿಗೆ ಉತ್ತರವೀಯುವಂತಾದ್ದಾಗಿದೆಯೆಂದು ನಾನು ಪೂರ್ಣಹೃದಯ ದಾದರದಿಂದ ಎಲ್ಲೋ ಬೇರೆ ಇರುವುದು ಇದೆಯೆಂದು ಹೇಳುತ್ತಿದ್ದೇನೆ."

ಹೀಗೆ ಅಭಿಪ್ರಾಯ ಭೇದವಿದ್ದರೂ ಚಾರ್ಲ್ಸ್ ಬ್ರಾಡ್ಲೆಯವರು ಅತ್ಯಂತ ತಾಳ್ಮೆಯಿಂದ ಕೂಡಿದುದನ್ನು ಕಂಡು ಅವನು ಬಿಟ್ಟುಹೋದ ಇದ್ದ ಹೋರಾಟಗಳ ಬಗ್ಗೆ ತಕ್ಕಷ್ಟು ಕಲಿಸಿಗಳನ್ನೂ ಅವನು ಸರಿಯೆಂದು ತಿಳಿದಾಗ ನಾನು ಅದನ್ನು ಉದಾರತೆಯಿಂದಲೇ ಒಪ್ಪಲು ತುಂಬಾ ಉತ್ಸುಕಳಾಗಿದ್ದೇನೆ, ಇದರ ಜೊತೆಯಲ್ಲಿ ಜನರನ್ನು ಸರಕಾರವನ್ನು ಎಂಬಂತೆ ದ್ವೇಷವು ಹೆಚ್ಚುತ್ತಾ ಬಂತು, ಪೋಲೀಸರನ್ನು ಮಾನದಿಂದ ದೂರವಿರಿಸಲಾಯಿತು, ಜನರು ಯಾವ ತೊಂದರೆಗಳನ್ನೂ ಲಕ್ಷಿಸದೆ ಮತ್ತು ಹಿಂಸಾಕೃತ್ಯಕ್ಕೆ ತೊಡಗದೆ ಎಚ್ಚರದಿಂದಲೇ ಇದ್ದರು. ಪೋಲೀಸ್ ದಳದ ಮೇಲೆ ಹೊರಿಸಿದ ಭಾರವು ಹೆಚ್ಚಾಗಿದೆಯೆಂದು ಕಂಡುಬರುವ ವರೆಗೂ ಪರಿಸ್ಥಿತಿ ಹಾಗಿದ್ದಿತ್ತಲ್ಲದೆ ಲಂಡನ್ ನಗರವು ಸಂಪೂರ್ಣವಾಗಿ ಪರಾಧೀನವಾಗುತ್ತಿದೆಯೆಂಬುದಾಗಿ ಟೋರಿ ಪಕ್ಷದ ಸರಕಾರವು ಭಾವಿಸಿತು. ಇದರಲ್ಲಿ ಹೇಗೂ ಸರ್ ಚಾರ್ಲ್ಸ್ ವಾರನ್ ಇವನು ನಿವೃತ್ತನಾಗಲು ಹೆಚ್ಚಿನ ಬುದ್ಧಿವಂತಿಕೆಯಿಂದ ಕೂಡಿದ ಮೇಲೆ ಅವನ ಸ್ಥಾನದ ಜವಾಬ್ದಾರಿಕೆಯಲು ಬಿತ್ತು!

ಅಧ್ಯಾಯ ೧೪.

ಚಂಡಮಾರುತದ ಮೂಲಕ ಶಾಂತಿ!

ಈ ಎಲ್ಲಾ ಗೊಂದಲ ಮತ್ತು ಗದ್ದಲದೆಡೆಯಲ್ಲಿ ಮುಂದಿನ ಸುದಿನಗಳಿಗೆ ಆಶಾದಾಯಕವಾಗಿ ಕಂಡ ಒಂದು ಸೋದರ ಭಾವದ ಸಖ್ಯವು ಮೊಳೆಯಿತು. ಶ್ರೀ ಸ್ಟೀಡ್ (Mr. Stead) ಇವನು ಮತ್ತು ನಾನು ಆತ್ಮಮಿತ್ರರಾದೆವು. ಅವನು ಕ್ರೈಸ್ತನು. ನಾನು ನಾಸ್ತಿಕಳು; ಹಾಗಿದ್ದರೂ ನಾವಿಬ್ಬರೂ ಸಹಜಪ್ರೇಮವನ್ನು ಮಾನವರೆಲ್ಲರಲ್ಲಿಟ್ಟು, ಅತ್ಯಾಚಾರದ ವಿರುದ್ಧವಾಗಿ ಸಹಜವಾಗಿ ಪ್ರತಿಭಟಿಸುವ ಸ್ವಭಾವವನ್ನು ತಳೆದಿದ್ದವರಾಗಿದ್ದೆವು. ಕ್ರಿ.ಶ. 1888ರ Our Corner ಪತ್ರಿಕೆಯಲ್ಲಿ ಈ ರೀತಿಯಾಗಿ ಬರೆದೆನು!—

"ಧರ್ಮಶಾಸ್ತ್ರ ಸಂಬಂಧವಾಗಿರುವ ಪ್ರಶ್ನೆಗಳಲ್ಲದೆ, ಹಿಂದಿನ ಕಾಲದಲ್ಲಿ ದೇವರಿಗೆ ಸಲ್ಲಿಸಲ್ಪಡುತ್ತಿದ್ದ ಸೇವೆಯು ಈಗ ಮಾನವ ಸೇವೆಗೆ ಮಾಡಲಾಗಬೇಕಾದ ಹೊಸ ಭ್ರಾತೃಭಾವವನ್ನು ಸ್ಥಾಪಿಸುವ ಅಭಿಪ್ರಾಯ, ಸೇವೆಯೇ ಪೂಜೆ, ಪ್ರೀತಿಯೇ ಕ್ರೈಸ್ತದೀಕ್ಷೆಯೆಂಬುದಾಗಿ ಗಣಿಸಿ, ಮಾನವ ಕಲ್ಯಾಣಕ್ಕಾಗಿ ಶ್ರಮಿಸಲು ಮುಂದಾಗುವ ಯಾರೊಬ್ಬನನ್ನೂ ಕರದೀಕ್ಷೆಯೆಂಬುದಾಗಿ ಎಣಿಸಿಕೊಳ್ಳುವೆಂಬ ಸೋದರ ಭಾವವು ಇತ್ತೀಚೆಗೆ ಜನರ ಮನಸ್ಸಿನಲ್ಲಿ ಉದ್ಭವಿಸಿದೆ. ಒಂದು ದಿನ ನಾನು ರೆವರೆಂಡ್ ಎಸ್. ಹೆಡ್ಲಮ್ ಇವನೊಡನೆ ಒಬ್ಬ ಖೈದಿಯನ್ನು ಬಿಡಿಸಲು ಮಿಲ್‌ಬ್ಯಾಂಕ್ ಜೈಲಿಗೆ ಹೋಗುತ್ತಿದ್ದಾಗ, ಅವನಿಗೆ ಈ ರೀತಿ ಹೇಳಿದೆನು:- ಶ್ರೀ ಹೆಡ್ಲಮ್, ಮಾನವನಲ್ಲಿ ವಿಶ್ವಾಸ ಮತ್ತು ಮಾನವನಿಗಾಗಿ ಪ್ರೀತಿಯನ್ನಿರಿಸುವ ಧ್ಯೇಯವನ್ನು ಪ್ರತಿಪಾದಿಸಲು ನಮಗೆ ಹೊಸ ಒಂದು ಸಂಘವು (Church) ಆಗಬೇಕಾಗಿದೆ. ಸ್ವಲ್ಪ ಸಮಯದ ನಂತರ ನನ್ನ ಮಿತ್ರನೂ Pall Mall Gazette ಇದರ ಸಂಪಾದಕನೂ ಆದ ವಿಲ್ಯಮ್ ಸ್ಟೀಡ್ ಇವನು ಸಹ ಅದೇ ಅಭಿಪ್ರಾಯವನ್ನು ಕುರಿತಾಗಿ ಚಿಂತಿಸುತ್ತಾ ಮಾನವನು ತಮ್ಮ ಆತ್ಮವನ್ನು ಉಳಿಸಿಕೊಳ್ಳಲು ಹೋಗುವ ಪ್ರಯತ್ನದಷ್ಟೇ ನಿಷ್ಠೆಯಿಂದ ಈ ಲೋಕವನ್ನು ಸಂತೋಷದಲ್ಲಿರಿಸಲು ಅವರನ್ನು ಬಲಾತ್ಕರಿಸಬಹುದೇ ಎಂಬುದಾಗಿ ಊಹಿಸುತ್ತಿದ್ದನು. ಸಾಮಾಜಿಕ ಕರ್ತವ್ಯದ ಬಗ್ಗೆ ಬೋಧಿಸಿ, ಸಾಮಾಜಿಕ ನ್ಯಾಯಶೀಲತೆಯನ್ನು ಎತ್ತಿ ಹಿಡಿಯುವಿಕೆ, ನಿಜವಾದ ವಿಶ್ವಬಾಂಧವ್ಯವನ್ನು ಕಟ್ಟು

ವಿಶ್ವ ಇತ್ಯಾದಿಗಳು ಮುಂದೆ ನಿರ್ಮಾಣವಾಗಲಿರುವ ಶಾಂತಿಯ ಉಪದೇಶಗಳಿಗಾಗಿ ಕಾದಿರುವವು. ಈ ಆಸೆಯು ಈಡೇರಿಸಲ್ಪಡಲು ನ್ಯಾಯಸಮ್ಮತವಾದುದಲ್ಲವೇ? ಇಂಥಾ ಪರಮಾನಂದಕರವಾದ ನೆನಸನ್ನು ಕಾರ್ಯತಃ ಸಾಧಿಸುವುದು 'ಶಿವರ್ಗ ಉತ್ಸಾಹಿಯ ಬರೀ ಮತಿಭ್ರಮೆಯೋ' ಕನಸೇ? 'ಪತಿತರ ಉದ್ಧಾರಕ್ಕೆ ಕಳೆದ ನೂರು ವರುಷಗಳಿಂದ ದುಡಿಯುತ್ತಿರುವವರು ಧರ್ಮಗ್ರಂಥಗಳ ವಿವಿಧ ನೀತಿಗಳಲ್ಲಿ ಆಳವಾದ ಭಿನ್ನಾಭಿಪ್ರಾಯಗಳಿಂದ ಕೂಡಿದ್ದರೂ ಅವರೆಲ್ಲರೂ ಒಂದು ಧ್ಯೇಯ ಸಾಧನೆಗಾಗಿ ಒಟ್ಟುಗೂಡಿ ಸೇವೆ ಸಲ್ಲಿಸಬಹುದಾಗಿದೆಯೆಂಬುದು ನಿಜವಾಗಿದೆ. ನಮ್ಮಲ್ಲಿರುವ ಪರಸ್ಪರ ದ್ವೇಷವನ್ನು ಮೀರಿದ ಒಂದು ಹಾರ್ದಿಕ ಶಕ್ತಿ, ಮತ್ತು ನಮ್ಮನ್ನು ಪ್ರತ್ಯೇಕಿಸುತ್ತಿರುವ ಊಹಾಪೋಹವಾದ ವಿಚಾರಗಳಿಗಿಂತಲೂ ಆಳದಲ್ಲಿರುವ ಪ್ರಕೃತಿ - ಇವು ನಿಜಕ್ಕೂ ಆದರ್ಶ (ಧ್ಯೇಯ ಸಾಧನೆ) ಸಾಧ್ಯವಿದೆಯೆಂಬುದನ್ನು ದೃಢೀಕರಿಸುತ್ತವೆ."

ನಾನು ಯಾರ ಪಾದಗಳಿಗೆ ನಾನಾಗಿಯೇ ಕೂಡಲೇ ಸಾಷ್ಟಾಂಗವಾಗಿ ಬೀಳಲಿದ್ದೇನೋ ಅಂಥಾ ನಮ್ಮ ಜನಾಂಗದ ಹಿರಿಯ ಸೋದರರು ನಿಶ್ಚಯವಾಗಿಯೂ ಯೋಜಿಸಿದ ಮತ್ತು ನಾನು ಮೆಚ್ಚಿದ ಆ ಸೋದರ ಭಾವದ ಕತ್ತಲ ದಾರಿಯಲ್ಲಿಯೇ ಎಡಹುತ್ತಾ ತಡಹುತ್ತಾ ನನ್ನ ಜೀವನದ ಸರ್ವಸ್ವವಾಗಲಿದ್ದ ಆ ಬ್ರಹ್ಮವಿದ್ಯೆ (Theosophy) ಯಲ್ಲಿಯೇ ನಾನು ಮೈಮರೆತು ನಡೆಯುತ್ತಿದ್ದೆನು, ನನ್ನ ಜೀವನದಲ್ಲಿ ನಿರೀಕ್ಷಿಸುದುದಕ್ಕಿಂತ ಎಷ್ಟೋ ಉನ್ನತವಾದುದಕ್ಕೆ ನಾನು ಎಷ್ಟು ಹೃತ್ಪೂರ್ವಕವಾಗಿ ನಿರೀಕ್ಷಿಸಿದೆನು, ಮತ್ತು ಜನಸೇವೆಯೇ ಮಾರ್ಗವಾಗಿರುವ ಆ ಯಾವುದೋ ಸೇವೆಯನ್ನು ಹೊಂದಬೇಕೆಂಬ ದೃಢನಂಬಿಕೆಯು ನನ್ನಲ್ಲಿ ಎಷ್ಟು ಬಲವತ್ತರವಾಗಿ ಬೆಳೆಯುತ್ತಿತ್ತು, ಎಂಬುದನ್ನು ಅದೇ ಲೇಖನದಲ್ಲಿ ಬರೆದ ಈ ವಾಕ್ಯವೃಂದದಿಂದ ವ್ಯಕ್ತವಾಗುವುದು:—

"ಇಂದಿನ ಕಾರ್ಖಾನೆಗಳು, ಗ್ರಾಮ ಕಾಡುಗಳು, ಅಸಹ್ಯತೆ ಮತ್ತಿತರ ಮಿಶ್ರಣಗಳು ಕಾಲದತ್ತ ಜೀವನವೆಲ್ಲಾ ನಡೆಯುವ ಕಡೆ ದಟ್ಟವಾದ ನಾದಕ್ಕೆ ನಿಶ್ಚಿತವಾಗಿ ಇರಬೇಕೆಂದೂ ಉನ್ನತ ಧ್ಯೇಯದಿಂದ ಬೆಳಗುವ ಅದ್ಭುತನಿಜ ದಿಗಂತದ ಭೂಷಣವಾದ ಕಾಂತಿಯನ್ನು ಮೀರಿ ಬೆಳಗಲಾರದೆಂದೂ ಭಾವಿಸದಂತಿದೆ, ಆದರೆ ಹಿಂದಿನ ಹಿರಿತನದ ಉಸಿರು ಜನದ ಎದೆಯನ್ನು ಮಿಡಿಯುವ ಚಿಹ್ನೆಯು ತೋರುತ್ತಿದೆ. ಹಿಂದಿನ ಕಾಲದಲ್ಲಿ ಲೋಕದ ಪ್ರಸಿದ್ಧ ವೀರರ ನರನಾಡಿಗಳಲ್ಲಿ ಹರಿದು ನಮ್ಮನ್ನು ಸಚೇತನಗೊಳಿಸಿದ ಆ ನ್ಯಾಯ ಮತ್ತು ಸ್ವಾತಂತ್ರ್ಯದ ಹುರುಪು ಹುಮ್ಮಸ್ಸುಗಳು ಜನದ ಹೃದಯದಿಂದ ಇನ್ನೂ ಅಳಿಯುತ್ತಿಲ್ಲ. ಇನ್ನೂ Holy Grail ಇದನ್ನು ಪಡೆಯುವ ಕಾತರತೆಯು ಚಿರಂತನವಾದ

ಒಳ್ಳೆಯದನ್ನುಂಟುಮಾಡುತ್ತಿತ್ತು ಇದೆ. ಆದರೆ ಅನ್ವೇಷಕರು ಇನ್ನೇನೂ ಸ್ವ
ರ್ಗದತ್ತ ಕಣ್ಣೆತ್ತಿ ನೋಡಲಾರರು; ಅಥವಾ ಭೂಮಿ ಮತ್ತು ಸಾಗರವೆಲ್ಲಾ
ಹುಡುಕಲಾರರು, ಏಕೆಂದರೆ ಬಾಗಿಲಲ್ಲಿ ನಿಂತು ನರಳುವವರ ಮೂಲಕ
ಅದು ಅವರಿಗಾಗಿ ಕಾಯುತ್ತಿದೆಯೆಂದೂ ಬಹು ಪವಿತ್ರನಾದವನ ಅಗ್ನಿ
ಧೀರವು ನೋವು ಬೇಗೆಗಳಿಂದ ಬೆಂದ ಬಡತನದಲ್ಲಿ ಮತ್ತು ಎದೆ
ಗುಂದಿದ ಜನನಿಬಿಡದಲ್ಲಿ ಇದೆಯೆಂದೂ, — ಬಿಟ್ಟಿಲು —

"ಜನರ, ಬಹು ವೃದ್ಧ ಹಾಗೂ ಮಾತಾಡದೆಯೆ ಇರುವ ದೇವರ-
ರಕ್ತದಿಂದ ಅತಿ ಕೆಂಪಾಗಿದೆಯೆಂದೂ ಅವರಿಗೆ ಗೊತ್ತಿದೆ----ಬೆಟ್ಟ
ದಷ್ಟು ಎತ್ತರವಾದ ಅಜ್ಞಾನ ಮತ್ತು ಅಸತ್ಯವನ್ನು ಹೋಗಲಾಡಿಸಬ
ಹುದೆಂಬ ವಿಶ್ವಾಸವಿದ್ದರೆ ಆ ವಿಶ್ವಾಸವೇ ಸತ್ಯದ ಗೆಲುವಿನೊಡನೆ
ಮತ್ತು ನ್ಯಾಯದ ಅಂತಿಮ ಆರೋಹಣದೊಡನೆ ಬಾಳನ್ನು ಹ
ಸನುಗೊಳಿಸುವುದು, ಅಲ್ಲದೆ ಕಪ್ಪುನೆಪ್ಪರಗಳ ಅತಿ ಕಪ್ಪು ಮೋಡ
ವನ್ನು ಸಹ ಚಿರಂತನ ಆತ್ಮಿಯೆಂಬ ಸಾಮಾನ ಬಿಳಿ ರಂಗುಗ
ಳು ಸೇರಿಂದರ ಸಮಾನಾಕೃತಿಯ ಜೋಡಿಯು ಬೆಳಗಿಸುವುದು.

ಈ ದೃಷ್ಟಿಯಿಂದ ಜನಸೇವೆಗೆ ಮುಂದಾಗುವವರನ್ನು ಸಂ
ಘಟಿಸಲು ಮೊದಲ ಹೆಜ್ಜೆಯಾಗಿ ಶ್ರೀ ಸ್ವೀಡ್ ಮತ್ತು ನಾನು ಸೇರಿ
LINK ಎಂಬುದಾಗಿ ಪ್ರತಿಯೊಂದಕ್ಕೆ ಅರ್ಧ ಪೆನ್ನಿಯ ವಾರಪತ್ರಿಕೆ
ಯನ್ನು ಹೊರಡಿಸಿದೆವು. ಇದರ ಧ್ಯೇಯವನ್ನು ವಿಕ್ಟರ್ ಹ್ಯೂಗೋ
ವಿವನ ಮಾತಿನಂತೆ, "ಜನರು ಮೌನವಿದ್ದಾರೆ; ನಾನು ಮೌನತೆ
ಯ ವಕೀಲತ್ವವನ್ನು ವಹಿಸುವೆನು, ನಾನು ಮೂಕರಿಗಾಗಿ ಮಾತಾ
ಡುವೆನು. ನಾನು ಚಿಕ್ಕವರನ್ನು ಕುರಿತು ದೊಡ್ಡವರೊಡನೆಯೂ
ಬಲಹೀನರ ಪರವಾಗಿ ಬಲಿಷ್ಠರೊಡನೆಯೂ ಮಾತಾಡುವೆ
ನು----ನಾನು ನಿರಾಶೆಯಲ್ಲಿ ಮೂಕಗೊಂಡು ಮೌನವಾಗಿರುವ
ವರಿಗಾಗಿ ಮಾತಾಡುವೆನು, ನನ್ನ ತೊದಲನುಡಿಯನ್ನು ವಿವ
ರಿಸುವೆನು, ನನ್ನ ಈ ಗೊಣಗಾಟಗಳನ್ನು ಬಯಲಿಗಿಡು
ವೆನು; ಈ ಇನಿದನಿಯ ನುಡಿಗಳು, ಜನಸಂದಣಿಗಳ
ಕೂಗುಗಳು, ಸ್ಪಷ್ಟವಾಗಿ ಹೇಳಲ್ಪಡದ ಶಾಪಗಳು, ಮತ್ತು
ಕ್ರೋಧಗಳು ಈ ಎಲ್ಲಾ ಮೊರೆಯನ್ನು ಅಜ್ಞಾನದಿಂದ ಮತ್ತು
ನರಳುವಿಕೆಯ ಕಾರಣದಿಂದ ಮನುಷ್ಯನನ್ನು ಬಲಾತ್ಕಾರ
ವಾಗಿ ಹಾತೊರೆಯುವಂತೆ ಮಾಡುವುದು----ನಾನು
ಮಾನವರ "ನುಡಿ" ಆಗುವೆನು; ಬಾಯಿಯನ್ನು ಬಿಗಿದಿಟ್ಟ
ಮುಚ್ಚನ್ನು ತೆಗೆದಾಗ ನಾನೇ ರಕ್ತವು ಸೋರುತ್ತಿರುವ ಬಾಯಿಯಾ
ಗುತ್ತೇನೆ; ಆಗ ನಾನು ಎಲ್ಲವನ್ನೂ ಹೇಳುತ್ತೇನೆ."

ಆ ಬಯಕೆಯು ಹೊಸ ಚರ್ಚ (New Church) ವನ್ನು
ಮಾನವ ಸೇವೆಯ ನಿಮಿತ್ತವಾಗಿ "ಕಟ್ಟುವ" ಉದ್ದೇಶವನ್ನು
ತಾಳಿತು. ಅದೇ ರೀತಿ ತಮ್ಮ ಸಮಯ ಮತ್ತು ಸೇವೆಯನ್ನು

ನಿಯಮಾನುಸಾರವಾಗಿ ಮತ್ತು ಸಂತೋಷದಿಂದ ವಿನಿಯೋಗಿಸುತ್ತಾ ನೈತಿಕವಾಗಿ ಜನವನ್ನು ಮೇಲೆತ್ತುವ ಕೆಲಸವನ್ನು ದೇವರ ಕೆಲಸವೆಂದು ಭಾವಿಸಿ ದುಡಿಯುವ ಗಂಡಸು ಮತ್ತು ಹೆಂಗಸರಿಂದ ಕೂಡಿದ ಸಂಸ್ಥೆಗಳನ್ನು ಪ್ರತಿಯೊಂದು ಗ್ರಾಮ ಮತ್ತು ಪ್ರತಿಯೊಂದು ಬೀದಿಯಲ್ಲೂ ನಾವು ಸ್ಥಾಪಿಸಬೇಕಾಗಿದೆ. ಪ್ರತಿವಾರವೂ ನಾವು ಈ ಚಿಕ್ಕ ಪತ್ರಿಕೆ - LINK ಯನ್ನು ಸ್ಥಾಪಿಸಿದೆವು. ಅದು ಕತ್ತಲಿಗೆ ಬೆಳಕನ್ನೀಯುವ ಜ್ಯೋತಿಯಾಯಿತು, ಬಡಜನರ ಮೇಲೆ ಹೊರಿಸಿದ ತಪ್ಪು ಅನ್ಯಾಯಗಳೆಲ್ಲ ಅದರಲ್ಲಿ ಹೇಳಲ್ಪಟ್ಟಿತು. ಹಸಿದು ತೊಳಲುವ ಹೆಂಗಸರಿಗೆ ಅಲ್ಪ ಭತ್ಯೆಯನಿತ್ತು ಪೀಡಿಸುತ್ತಿದ್ದುದು ಅದರಲ್ಲಿ ಬಯಲಿಗೆ ತರಲಾಯಿತು. ಈ ಅವರ ನಿರಂತರ ಪರಿಶ್ರಮವು ಸಾರ್ವಜನಿಕರ ಅವಗಾಹನೆಗೆ ತರಲಾಯಿತು. ಸಾದರಕ್ಷೆಯನ್ನು ಹೊಲಿಯುವವನಿಗೆ ಒಂದು ಡಜನ್ನಿಗೆ ಎರಡೂವರೆ ಶಿಲ್ಲಿಂಗ್ ಕೊಟ್ಟರೆ ಅದಕ್ಕೆ ಬೇಕಾದ ಪಾಲಿಶ್ ಮತ್ತು ನೂಲನ್ನು ಮಾತ್ರ ಅವನೇ ಕೊಂಡುಕೊಳ್ಳಬೇಕು. ದಿನಕ್ಕೆ ಹತ್ತೂವರೆ ತಾಸುಗಳ ಗುಂಡಿಗಳನ್ನು ಹೊಲಿಯುವ ಹೆಂಗಸಿಗೆ ಡಜನ್ನಿಗೆ ಹತ್ತು ಪೆನ್ನಿಗಳಿಂದ ಮೂರು ಶಿಲ್ಲಿಂಗ್ ವರೆಗೆ ಕೊಡಲ್ಪಟ್ಟಾಗ ಅದಕ್ಕೆ ಬೇಕಾದ ಹತ್ತಿ ಮತ್ತು ಸೂಜಿಗಳನ್ನು ಅವಳೇ ಕೊಂಡುಕೊಳ್ಳಬೇಕು, ಬಿರಡೆಗೆ ಇದ್ದಲು, ಕೈವಸ್ತ್ರ ಇತ್ಯಾದಿಗಳನ್ನು ಅವಳೇ ಕೊಂಡುಕೊಳ್ಳಬೇಕು. ಅವಳ ಸಂಪಾದನೆಯು ವಾರಕ್ಕೆ ನಾಲ್ಕು ಶಿಲ್ಲಿಂಗ್ ಹತ್ತು ಪೆನ್ನಿಗಳಾಗುತ್ತದೆ. ಬತ್ತಿ ಬಿಗಿಯಲಿಕ್ಕೆ ಒಂದು ವಾರಕ್ಕೆ ಎರಡು ಶಿಲ್ಲಿಂಗ್ ಎರಡು ಪೆನ್ನಿಗಳಾಗುತ್ತದೆ. ಆರು ಪೆನ್ನಿಗಳು ಇತರ ವಸ್ತುಗಳ ಬಗೆಗೆ ಖರ್ಚಾಗುವುದು. ಕಷ್ಟಪಟ್ಟು ದುಡಿಯುವ ಗೌರವಾನ್ವಿತರಾದ ಹೆಂಗಸರು ಜೀವನಕ್ಕೆ ಸಾಕಷ್ಟು ಇಲ್ಲದ ಕಾರಣದಿಂದ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿರುವುದನ್ನು; ನಮ್ಮ ಕೆಲಸದ ಮತ್ತೊಂದು ಕಾರ್ಯಕ್ರಮವೆಂದರೆ ಅನ್ಯಾಯದ ಭೂಮಾಲೀಕರ ಕಿರುಕುಳದಿಂದ ಜನವನ್ನು ರಕ್ಷಿಸುವುದು. ಕಾರ್ಖಾನೆಗಳಲ್ಲಿ ನಡೆಯುವ ಅತ್ಯಾಚಾರಗಳನ್ನು ಬಯಲಿಗೆ ತರುವುದು; ಕೆಲಸಗಾರರ ಹಕ್ಕನ್ನು ಕುರಿತಾದ ಕಾನೂನು, ಶಾಲ್ಸ್ ಬ್ರ್ಯಾಡ್ಲೆಯ Truck Act - ಇವುಗಳನ್ನು ಜಾರಿಗೆ ತರುವುದು, ಮತ್ತು ಮಕ್ಕಳಿಗೆ ಚಿತ್ರಹಿಂಸೆ, ಕಾರ್ಖಾನೆಗಳಲ್ಲಿ ಅಪಘಾತ, ಬೆವರಿಳಿಯುವಂತೆ ದುಡಿಸುವುದೇ ಮೊದಲಾದುವನ್ನೆಲ್ಲ ಪ್ರತಿಯೊಂದು ಜಿಲ್ಲೆಯಲ್ಲೂ ಆಸ್ಥೆಯಿಂದ ನನ್ನ ಗಮನಕ್ಕೆ ತರಲು ಗೂಢಚಾರರ ವ್ಯೂಹ (Vigilance Circle)ಗಳನ್ನು ನಿರ್ಮಿಸಲಾಯಿತು. ಈ ಕೆಲಸಗಳಲ್ಲಿ ನನಗೆ ಹರ್ಬರ್ಟ್ ಬರೋಸ್ ಇವರು ಸೇರಿ (ತ್ರಾ) ಕಾಲರ್ ಜೊತೆದ ಚಳವಳಿಯಲ್ಲೂ ಭಾಗವಹಿಸಿದ್ದಲ್ಲದೆ LINK ಪತ್ರಿಕೆಯಲ್ಲಿ ಕೆಲವು ಉತ್ತಮ ಲೇಖನಗಳನ್ನು ಬರೆದನು, ತನಗೆ ಪರಿಹರಿಸಲಾಗದಿದ್ದ ಅನ್ಯಾಯಗಳ ಬಗ್ಗೆ ಎದೆಗುಂದಿ, ತಾಂಬಾ

ಹಾರ್ದಿಕವಾಗಿ ಜನದ ಸುಖವನ್ನು ಬಯಸಿ ಅನ್ಯಾಯಗಳನ್ನೆಲ್ಲ ತದೇಕ ರೀತಿಯಲ್ಲಿ ಖಂಡಿಸಿ ತನ್ನ ನೈತಿಕ ಸತ್ವ ಶಕ್ತಿಯನ್ನೆಲ್ಲ ಸರ್ವ ಸೇವೆಗೆಂದೇ ಮೀಸಲಾಗಿಟ್ಟಿದ್ದನು. ಅವನು ಚಿತ್ತಭ್ರಮಣೆಗೊಳಗಾಗಿ ತಾನಿನ್ನು ಸಾಯುವೆನೆಂದು ಭಾವಿಸಿಕೊಂಡಿದ್ದಾಗ, "ನಾನು ಯಾವಾಗಲೂ ಜನರನ್ನು ಪ್ರೀತಿಸುತ್ತಿದ್ದೆನೆಂಬುದಾಗಿ ಅವರಿಗೆ ಹೇಳು," ಎಂಬುದಾಗಿ ಹೇಳಿದ ಈ ಒಂದು ವಾಕ್ಯದಿಂದ ಅವನ ಸೌಜನ್ಯವು ವ್ಯಕ್ತವಾಗುತ್ತದೆ.

ನಾವು ಬಡ ಜನರಿಗಾಗಿ ಕಳವಳವೆಬ್ಬಿಸಿದಾಗ ಬಂದರಿನ ಕೆಲಸಗಾರರ ನಿಮಿತ್ತವಾಗಿಯೂ ಹೋಗಿದೆವು. "ನಾಳೆ ಬೆಳಿಗ್ಗೆ ಲಂಡನ್ನಿನಲ್ಲಿ ಇಪ್ಪತ್ತು ಸಾವಿರಕ್ಕಿಂತ ಹೆಚ್ಚು ವಯಸ್ಕರು ತಾಸಿಗೆ ನಾಲ್ಕು ಪೆನ್ಸ್‌ಗಳಂತೆ ಬಂದರಿನಲ್ಲಿ ಕೆಲಸ ಪಡೆಯಲು ಅನಾಗರಿಕರಂತೆ ಹೋರಾಡುವರು; ಅವರಲ್ಲಿ ಮೂರರಲ್ಲಿ ಒಂದು ಭಾಗದಷ್ಟು ಜನರು ನಿರುದ್ಯೋಗಿಗಳಾಗಿರುವುದರಿಂದ ಅವರು ಸಹ 'ನಿರರ್ಥಕವಾಗಿ ಕಾದಬೇಕಾಗುತ್ತದೆ," ಎಂಬುದಾಗಿ ಸಿಡ್ನೀ ವೆಬ್ಬ್ ಇವನು ಹೇಳಿದನು. ನಾವು ಮಕ್ಕಳ ಊಟದ ಬಗ್ಗೆ ವ್ಯವಹರಿಸಿದೆವು, "ನಾವು ಈ ಮಕ್ಕಳಿಗೆ ವಿದ್ಯೆಯನ್ನು ಕೊಡಬೇಕೆಂದು ಬಲಾತ್ಕರಿಸಿದರೆ ಅವರನ್ನು ಅದಕ್ಕೆ ತಕ್ಕಂತೆ ಪೋಷಿಸುವುದೂ ಅಗತ್ಯವಲ್ಲವೆ? ಹಾಗಿಲ್ಲದಿದ್ದರೆ ಅವರಿಗೆ ಅರಗಿಸಲಾಗದ ಜ್ಞಾನವನ್ನು ಅವರ ಮೇಲೆ ಹೇರುತ್ತೇವೆ; ಮತ್ತು ಹಲವು ಮಕ್ಕಳನ್ನು ಪೀಡಿಸಿ ಕೊಲ್ಲುತ್ತೇವೆ. ಮಾನವ ತಿರುಕರಂತಿರುವ ಅವರನ್ನು ನಾವು ಶಾಲೆಗೆ ಓಡಿಸಿ ಓದು ಬರೆಹ ಕಲಿಯಲು ಬಲಾತ್ಕರಿಸುತ್ತೇವೆ. ಕಡೆಗೆ ನಾವೇಕೆ ಅವರನ್ನು ಈ ಹೊಸ ಬಗೆಯ ಹಿಂಸೆಯಿಂದ ತಮ್ಮ ಮಬ್ಬಾದ ಭವಿಷ್ಯಕ್ಕೆ ಹೀಗೆ ಹೊಸ ರೀತಿಯಲ್ಲಿ ನೋವನ್ನುಂಟುಮಾಡುವೆವೋ ಎಂದು ಅವರು ತಮ್ಮ ಕಣ್ಣುಗಳನ್ನೆತ್ತಿ ನಿಷ್ಠೆಯಿಂದ ಪ್ರಶ್ನಿಸುತ್ತಾರೆ. "ನಮ್ಮನ್ನು ನಮ್ಮಷ್ಟಕ್ಕೆ ಬಿಡಲಿಕ್ಕೆ ನೆ," ಎಂಬುದಾಗಿ ಬಹು ಮರುಕದಿಂದ ಪುನಃ ಸಹನೆಯಿಂದ ಆ ಸತ್ತ ಮಕ್ಕಳು ಹೇಳುತ್ತವೆ. ಸರಿ, ಏಕೆ ಹಾಗೆಯೇ ಬಿಡಬಾರದು? ಗಳಿಗಳೆಲ್ಲರೂ ಆ ಶಿಶು ಹುತಾತ್ಮ—(Child martyrs)ರಿಗೆ ಸಮಾಜವು ಬರೀ ಯೋಜನೆಗಳನ್ನಲ್ಲದೆ ಆಹಾರವನ್ನು ಒದಗಿಸದು. ಕಡೆಮೆ ಬೆಲೆಯ ವಸತಿಗಳಿಗೆ ವಿರೋಧವಾಗಿ ನಾವು ಬೊಬ್ಬಿಡುತ್ತೇವೆ, ಅವು ಶ್ರಮಜೀವಿಗಳಿಂದ ನಿರ್ಮಿಸಲ್ಪಟ್ಟವುಗಳಾದುದರಿಂದ ಅವು ಸಮಿತಿಯಿಂದ ಯೋಗ್ಯ ಬೆಲೆಯನ್ನು ಕೊಡದೆ ನಿತಲಬದಲ್ಲಿ ಹಡೆದ "ಕೈದಿ ಸಿಡವೆ"ಗಳಾಗುತ್ತವೆ. ಸಾಮಾನುಗಳನ್ನು ಕೊಂಡುಕೊಳ್ಳುವ ತತ್ವವು ಸಾಮಾನ್ಯವಾದುದೇ ಆಗಿದೆ. ನಮಗೆ ಅಗತ್ಯ ಬೇಕಾದ್ದನ್ನು ನಾವು ಬೇರೆ ಅಗ್ಗವಾ ಕದ್ದು ಪಡೆಯಲು ಇಚ್ಛಿಸಲಾರೆವು. ಆದರೆ ಅದನ್ನು ವ್ಯವಹರಿಸಿಕೊಂಡಾಗ ಅದನ್ನು ಬೇಡದೆ ಅಗ್ಗ ಕನಿಯದೆ ಅದರ ಬೆಲೆಗೆ ತಕ್ಕಷ್ಟು ಹಣವನ್ನು ಒಂದಕ್ಕೆ ಅವರಿಗೆ ಕೊಟ್ಟು ಪಡೆಯುತ್ತೇವೆ. ನಮ್ಮ ನೆರೆಮನೆಯವನು

ಆ ವಸ್ತುವಿನ ಬೆಲೆಗೆ ತಕ್ಕಷ್ಟು ಶ್ರಮವನ್ನು ಅದರ ಮೇಲೆ ವಿನಿಯೋಗಿಸಿದ್ದಾನೆ. ಹಾಗಿದ್ದರೂ ಅವನ ಒಡವೆಯನ್ನು ತೆಗೆಯುವಾಗ ನಾವು ಅವನನ್ನು ಮೋಸಪಡಿಸುತ್ತೇವೆ. ನಾವು ಅವರ ಶ್ರಮಕ್ಕೆ ತಕ್ಕಷ್ಟು ಮೌಲ್ಯವನ್ನು ಅವರಿಗೆ ಪಾವತಿಸದೇ ಇದ್ದರೆ ಅವರು ಉತ್ಪಾದಿಸಿದ ವಸ್ತುಗಳನ್ನು ಪಡೆಯುವ ಹಕ್ಕು ನಮಗೆ ಇಲ್ಲ!

ನಮ್ಮ ಕಾಲದ ಈ ವಿಭಾಗವನ್ನು ಕುರಿತಾದ ಸಮಸ್ಯೆಯು ಮೊದ್ದು ಪಾಪಪ್ರಜ್ಞೆಯಿಂದಲ್ಲ ಕಾಣಿಕೆ ಸಂತೋಷದಿಂದಲೇ ಅದು ಕಾಣಿಸಿಕೊಂಡಿತು, Fabian Society ಇದರ ಒಂದು ಶಾಖೆಯಲ್ಲಿ ಕುಮಾರಿ ಕ್ಲೆಮೆಂಟೈನ್ ಬ್ಲ್ಯಾಕ್ ಇವಳು ಶ್ರಮಜೀವಿ ಸ್ತ್ರೀಯರನ್ನು ಕುರಿತು ಒಂದು ಪುಸ್ತಕವನ್ನು ಬರೆದಳು. Consumers' League - ಒಂದನ್ನು ನಿರ್ಮಿಸಿ ವಸ್ತುಗಳಿಗೆ ಬೆಲೆಯೇರದಂತೆ ತಡೆಗಟ್ಟಿ, ಆ ರೀತಿ ಅಧಿಕೃತವಾಗಿ ಬಿಟ್ಟಿದ್ದ ಅಂಗಡಿಗಳಿಂದ ಅಧಿಕೃತ ಬೆಲೆಗೆ ಮಾತ್ರ ಪಡೆಯಬೇಕೆಂದು ಹೇಳಿದಳು, ಆಗ ನಡೆದ ಚರ್ಚೆಯಲ್ಲಿ "ಬ್ರ್ಯಾಂಟ್ ಮತ್ತು ಮೇ ಕಂಪೆನಿ" ಇವರು ಪಾಲುಗಾರರಿಗೆ ದೊಡ್ಡ ಹಣವನ್ನು ಲಾಭವಾಗಿ ಹಂಚಿದಾಗ ಪ್ರಾರಂಭದಲ್ಲಿ ಪಾಲು ಒಂದಕ್ಕೆ ಐದು ಪೌಂಡು ಇದ್ದುದು ಈಗ ಹದಿನೆಂಟು ಪೌಂಡು ವರೆಗೂ ಶಿಲ್ಲಿಂಗ್ ಆದುದನ್ನು ಕುರಿತು ಹೆಚ್-ಮಾಂಹ್ಯಾನ್ ಇವನು ಹೇಳಿದನು, ಹಬಾರ್ಟ್ ಬ್ಯಾರೋಸ್ ಮತ್ತು ನಾನು ಕೆಲವು ಹುಡುಗಿಯರನ್ನು ಭೇಟಿಮಾಡಿ ಮಾತುಕತೆ ನಡೆಸಿ ಅವರಿಗೆ ದೊರೆಯುತ್ತಿದ್ದ ದಿನಗೂಲಿ, ದಂಡ ಇತ್ಯಾದಿಗಳ ಬಗ್ಗೆ ವರದಿಗಳನ್ನು ಪಡೆದೆವು, ಒಂದು ನಿರ್ದಿಷ್ಟ ನಿದರ್ಶನವೆಂದರೆ ಎನ್ನಕ್ಕೆ ಸ್ವಲ್ಪ ಸಮಯ ಮಾತ್ರ ಗೆಯ್ಯುವ ಹದಿನಾರು ವಯಸ್ಸಿನ ಹುಡುಗಿಯು ವಾರಕ್ಕೆ ನಾಲ್ಕು ಶಿಲ್ಲಿಂಗುಗಳಂತೆ ಒಂದು ಕಾರ್ಖಾನೆಯಲ್ಲಿ ಸಂಪಾದಿಸುತ್ತಿರುವಳು. ಅವಳೊಡನೆಯೇ ವಾಸಿಸುವ ಅವಳ ಸಹೋದರಿಯು ಅದೇ ಸಂಸ್ಥೆಯಲ್ಲಿ ವಾರಕ್ಕೆ ಎಂಟು ಶಿಲ್ಲಿಂಗ್ ಒಂಬತ್ತು ಪೆನ್ಸ್‌ಗಳಂತೆ ("ಒಳ್ಳೆಯ" ಸಂಪಾದನೆಯನ್ನು ಮಾಡುತ್ತಿರುವಳು. ಅವರ ವಾಸದ ಕೋಣೆಯ ಬಾಡಿಗೆಗೆ ಎಂದು ವಾರಕ್ಕೆ ಎರಡು ಶಿಲ್ಲಿಂಗ್ ವೆಚ್ಚವಾಗುತ್ತದೆ. ಬೆಳಿಗ್ಗೆ ಫಲಾಹಾರಕ್ಕೆ, ಊಟಕ್ಕೆ ಎಂಬುದಾಗಿ ಯಾವಾಗಲೂ ರೊಟ್ಟಿ, ಬೆಣ್ಣೆ, ಮತ್ತು ಟೀ-ವನ್ನು ಆ ಹುಡುಗಿಯು ಸೇವಿಸುತ್ತಿದ್ದಳು. ಆದರೆ ತಿಂಗಳಿಗೊಂದು ಬಾರಿ ಕಾಫಿ, ರೊಟ್ಟಿ, ಬೆಣ್ಣೆ, ಹಣ್ಣುಜೆಲ್ಲಿ (jam) ಮತ್ತು ಕಿತ್ತಳೆಜೆಲ್ಲಿ ಇತ್ಯಾದಿಗಳು ದೊರೆಯುವ ಹೋಟೇಲಿಗೆ ಹೋಗುವೆನೆಂದು ತನ್ನ ಮಿಂಚುಕಣ್ಣುಗಳನ್ನು ತೇಲಿಸುತ್ತಾ ಹೇಳಿದಳು. "ಲಂಡನ್ನಿನಲ್ಲಿ ಬಿಳಿ ಗುಲಾಮಗಿರಿ" ಎಂಬುದಾಗಿ ಲೇಖನಗಳನ್ನು ಬರೆಯುತ್ತಾ "ಬ್ರ್ಯಾಂಟ್ ಮತ್ತು ಮೇ ಕಂಪೆನಿ"- ಈ ಬೆಂಕಿಪೆಟ್ಟಿಗೆ ಉತ್ಪಾದಿಸುವ ಸಂಸ್ಥೆಯನ್ನು ಬಹಿಷ್ಕರಿಸಬೇಕೆಂದು ಹೇಳಿದೆವು. "ಯಾರಾದರೊಬ್ಬರೂ ನಮ್ಮ ಸಹಾಯಕ್ಕೆ ಬರಲು ಕಾಲವು ಬಂದ್ರೆ

ಬಂದಿದೆ", ಎಂಬುದಾಗಿ ಜೋಲುಮುಖದ ಎರಡು ಹುಡುಗಿಯರು ನನ್ನೊಡನೆ ಹೇಳಿದರು. "ಯಾರು ಸಹಕರಿಸುತ್ತಾರೆ?" ಎಂದು ನಾನು ಕೇಳಿದೆನು. ಒಂದು ಒಳ್ಳೆಯ ಕೆಲಸವು ಪ್ರಬುದ್ಧವಾಗಲಿ, ಎಂದು ಹಾರೈಸುವವರು ಹಲವರು ಇದ್ದಾರೆ. ಆದರೆ ಅದಕ್ಕೆ ಸಹಕರಿಸುವವರು ಮಾತ್ರ ಕಡಿಮೆ; ಅಷ್ಟೇ ಅಲ್ಲ, ಅದಕ್ಕೆ ಕಾರ್ಯತಃ ಸ್ವೀಕರಿಸುವವರು ಇನ್ನೂ ಕಡಿಮೆ! "ಯಾರಾದರೊಬ್ಬರು ಮಾಡಲೇ ಬೇಕು, ಆದರೆ ನಾನೇಕೆ ಮಾಡಲಿ?" ಎಂಬ ದೌರ್ಬಲ್ಯದ ಉದ್ಗಾರವೇ ಎಲ್ಲೆಲ್ಲೂ ಪ್ರತಿಧ್ವನಿಸುತ್ತದೆ. "ಯಾರಾದರೊಬ್ಬರು ಮಾಡಲೇ ಬೇಕು; ಆದರೆ ನಾನೇಕೆ ಮಾಡಬಾರದು?" ಎಂಬುದಾಗಿ ಧೈರ್ಯವಂತರಾದ ಕೆಲವರು ಎಂಥ ಅಪಾಯದ ಕೆಲಸವಾದರೂ ಸರಿಯೆಂಬಂತೆ ಮುಂದೆ ಹಾಯುತ್ತಾರೆ. ಹೀಗೂ ನೈತಿಕ ಪ್ರಗತಿಯ ವರ್ತಮಾನಗಳೇ ಈ ಎರಡು ವಾಕ್ಯಗಳ ನಡುವೆ ಅಡಗಿವೆ!

ಮಾನಹಾನಿಕರವಾದ ಲೇಖನವನ್ನು ಬರೆದನೆಂಬ ಕಾರಣದಿಂದ ನನ್ನ ಮೇಲೆ ವ್ಯಾಜ್ಯವನ್ನು ಹೂಡುವ ಬೆದರಿಕೆಯನ್ನು ಒಮ್ಮೆ ಹಾಕಿದ್ದರಾದರೂ ಏನೂ ನಡೆಯಲಿಲ್ಲ. ಹುಡುಗಿಯರ ಮೇಲೆ ಸೇಡನ್ನು ತೆಗೆದುಕೊಳ್ಳುವುದು ಸುಲಭವಾಗಿದೆ. ಕೆಲವು ದಿನಗಳ ನಂತರ ಬೆಂಕಿಕಡ್ಡಿಗೆ ಕಾರ್ಖಾನೆಯ ಹುಡುಗಿಯರ ತಂಡವೊಂದು ಆನಿ ಬೆಸೆಂಟರನ್ನು ಕೇಳುತ್ತಾ ಫ್ಲೀಟ್ ಬೀದಿಯಲ್ಲಿ ಗುತ್ತಿಬ್ಬುತ್ತಾ ಹೋದರು. ನಾನು ಆ ಹುಡುಗಿಯರೊಡನೆ ಬೀದಿಯಲ್ಲಿ ಮಾತಾಡಲು ಸಾಧ್ಯವಾಗದ್ದರಿಂದ ಒಂದು ನಿಯೋಗವು ಬಂದು ನನ್ನಿಂದ ಆಗಬೇಕಾದ್ದೇನು, ಎಂದು ಹೇಳಲು ಅವರಿಗೆ ಹೇಳಿಕಳುಹಿಸಿದೆನು. ಒಮ್ಮೆಲೇ ಮೂವರು ಹೆಂಗಸರು ಬಂದು ತಮ್ಮ ಕತೆಯನ್ನು ಹೇಳಿದರು. ಅವರನ್ನು (ಕಂಪೆನಿಯವರು) ಚೆನ್ನಾಗಿ ಸತ್ಕರಿಸಿರುವರೆಂದೂ ಅವರು ತೃಪ್ತಿಯಲ್ಲಿರುವರೆಂದೂ ನಾನು ಅವರ ಪರಿಸ್ಥಿತಿ ಚೆನ್ನಾಗಿಲ್ಲವೆಂದು ಹೇಳಿದ್ದು ತಪ್ಪೆಂದೂ ಬರೆದಿದ್ದ ಒಂದು ಪತ್ರಕ್ಕೆ ಸಹಿ ಹಾಕಲು ತಿರಸ್ಕರಿಸಿದ್ದರು. "ನೀನು ನಮಗಾಗಿ ಮಾತಾಡಿರುವೆ; ನಾವು ನಿನ್ನನ್ನು ಅನುಸರಿಸದೆ ಹೋಗಲಾರೆವು," ಎಂಬುದಾಗಿ ಒಬ್ಬಳು ಹೇಳಿದಳು. ಅವರ ಮುಂದಾಳು ಎಂಬುದಾಗಿದ್ದ ಒಬ್ಬ ಹುಡುಗಿಯನ್ನು ಕೆಲಸದಿಂದ ತೆಗೆದುಹಾಕಲಾಗುವುದೆಂಬುದಾಗಿ ಗದರಿಸಿದ್ದರು. ಆದರೆ ಅವಳು ಹೆದರಲಿಲ್ಲ. ಮರು ದಿನ ಬರೀ ಅಲ್ಪಕಾರಣಗಳಿಗಾಗಿ ಅವಳನ್ನು ಕೆಲಸದಿಂದ ತೆಗೆದು ಹಾಕಿದರು. ಆಗ ಇತರ 1400 ಕೆಲಸಗಾರರು ತಮ್ಮ ಕೆಲಸವನ್ನು ಅತ್ತ ಒಗೆದು ದೊಡ್ಡ ಒಂದು ಗುಂಪಾಗಿ ನನ್ನ ಬಳಿಗೆ ಬಂದು ಏನು ಮಾಡಬೇಕೆಂದು ಕೇಳಿದರು. ನಾವು ನಮ್ಮ ಜೀವನದಲ್ಲಿ ಎಂದಾದರೂ ಕೆಲಸಮಾಡಿದ್ದರೆ ಅದು ಹರ್ಬರ್ಟ್ ಬರೋಸ್ ಮತ್ತು ನಾನು ಆ ಹದಿನೈದು ದಿನಗಳ ಅವಧಿಯಲ್ಲಿ ದುಡಿದುದೇ ಆಗಿದೆ. ನಾವು ಸ್ವಲ್ಪ ಗಲಾಟೆಯನ್ನು ಎಬ್ಬಿಸಿದೆವು. ನಮ್ಮ ಸಂಸ್ಥೆಗೆ ಜನರಿಂದ ಹಣವನ್ನು ಕೇಳಿದಾಗ ಅದು

ದಾರಾಳವಾಗಿ ದೊರೆಯುತ್ತಿತ್ತು, ಮುದ್ರಣದ ಮಳಿಗೆಯಲ್ಲಿ ತಲೆಬನ್ನು ಹಿಡಿಯುತ್ತಿರುವ ಹುಡುಗಿಯರ ಹೆಸರುಗಳನ್ನು ಬರೆದುಕೊಂಡೆವು. (ಪತ್ರಿಕೆಗಳಲ್ಲಿ) ಲೇಖನಗಳನ್ನು ಬರೆದೆವು; ಇತರ ಸಂಸ್ಥೆಗಳನ್ನೆಲ್ಲ ಎಚ್ಚರಿಸಿದೆವು; ಸಾರ್ವಜನಿಕ ಸಭೆಗಳನ್ನು ನಡೆಸಿದೆವು. ಶ್ರೀ ಬ್ರಾಡ್ಲೆಯ ಮೂಲಕವಾಗಿ ಶಾಸನ ಸಭೆಯಲ್ಲಿ ಪ್ರಶ್ನೆಗಳನ್ನು ಕೇಳಿಸಿದೆವು; ಕಾರ್ಖಾನೆಯಲ್ಲಿ ಪಾಲುದಾರರಾಗಿ ಅನಂತರ ಶಾಸನ ಸಭೆಯ ಸದಸ್ಯರೂ ಆಗಿರುವವರ ಮತದಾರ ಕ್ಷೇತ್ರದ ಜನವನ್ನು ಇದಿರ ದೀಗ್ರವೇ ಆ ವಿಷಯವನ್ನು ಚಳವಳಿ ಎಬ್ಬಿಸುವವರೆಗೂ ಕೆರಳಿಸಿದೆವು. ಫ್ರೆಡ್ರಿಕ್ ಹ್ಯಾರಿಂಗ್‌ಟನ್ ಇವರು ನಮಗೆ (ಸಭೆಗೆ) ಸಹಾಯವಿತ್ತರು. ಸಿಡ್ನೀ ವೆಬ್ ಮತ್ತಿತರರು National Liberal Club ಇದನ್ನು ಸಕ್ರಿಯವಾಗಿ ಹೋರಾಡಲು ಅಣಿಗೊಳಿಸಿದರು. ನಾವು ಹುಡುಗಿಯರ ಒಂದು ಮೆರವಣಿಗೆ ಸಹಿತವಾಗಿ ಶಾಸನ ಸಭೆ - House of Commons - ಇದಕ್ಕೆ ಹೋಗಿ ಅಲ್ಲಿ ನಮ್ಮನ್ನು ಎಲ್ಲಾ ವಿಷಯಗಳ ಬಗೆ ಪ್ರಶ್ನಿಸಿದ ಸಭಾಸದಸ್ಯರ ಪ್ರತಿನಿಧಿಗಳನ್ನು ಭೇಟಿಯಾದೆವು. ಹುಡುಗಿಯರು ಒಗ್ಗಟ್ಟಾಗಿ ನಿಂತು ಕಡೆವರೆಗೂ ಧೈರ್ಯದಿಂದಲೂ ಉತ್ಸಾಹದಿಂದಲೂ ಹೋರಾಡಿದರು. Social Democratic Federation - ಇದಕ್ಕೆ ಸೇರಿದ್ದ ಶ್ರೀ ಹರ್ಬರ್ಟ್, ಬರ್ನಾರ್ಡ್ ಷಾ, ಬ್ಲಾಂಡ್ ಮತ್ತು ಒಲಿವರ್, ಇವರೂ The Fabian Society ಇದರ ಹೆಡ್‌ಲಾಮ್, ಕ್ಲೆಮೆಂಟಿನಾ ಬ್ಲಾಕ್ ಮತ್ತು ಹಲವರು ಈ ಕೆಲಸದಲ್ಲಿ ನಮಗೆ ಸಹಕಾರವನ್ನಿತ್ತರು. ಲಂಡನ್ನಿನ Trades Council ಇದರ ನಿರ್ವಾಹಕರು ಹಂಚುಯುತ್ತರಾಗಿರಲು ಒಪ್ಪಿ ಕಡೆಗೆ ತೃಪ್ತಿಕರವಾದ ಒಂದು ತೀರ್ಮಾನಕ್ಕೆ ಬರಲಾಯಿತು. ಹುಡುಗಿಯರು ತಮ್ಮ ಕೆಲಸಗಳಿಗೆ ಹಿಂದಿರುಗಿದರು. ದಂಡಗಳು ಮತ್ತು ತಲೆಬಿನ ವಜಾಬಾಕಿಯಿಲ್ಲವನ್ನು ತೆಗೆದು ಹಾಕಲಾಯಿತು. ಉತ್ತಮ ವೇತನವನ್ನು ಕೊಡಲಾಯಿತು. ಬೆಂಕಿಕಡ್ಡಿಗೆ ಕೆಲಸಗಾರರ ಸಂಘವನ್ನು ಸ್ಥಾಪಿಸಲಾಯಿತು. ಅದು ಇನ್ನೂ ಇಂಗ್ಲೆಂಡಿನ ಪ್ರಬಲ ವ್ಯವಹಾರ ಸಂಸ್ಥೆ (Trades' Union) ಆಗಿದೆ. ನಾನು ಇತರ ಕೆಲಸಗಳ ನಿಮಿತ್ತವಾಗಿ ಅದರಿಂದ ಬಿಡುವವರೆಗೂ ಅದರ ಕಾರ್ಯದರ್ಶಿಯಾಗಿ ಹಲವು ವರ್ಷವಿದ್ದು ಕಡೆಗೆ ರಾಜೀನಾಮೆಯಿತ್ತೆನು. ನನ್ನ ಬದಲಿಗೆ ಆ ಕೆಲಸವನ್ನು ಶ್ರೀಮತಿ ದಾಸ್ಟರ್ ಸ್ಮಿತ್ ಇವರಿಗೆ ಹುಡುಗಿಯರು ಒಪ್ಪಿಸಿದರು. ಹರ್ಬರ್ಟ್ ಬರೋಸ್ ಇವರು ಖಜಾಂಚಿಯಾಗಿ ನೇಮಕಗೊಂಡು ಇಂದೂ ಅಂತೆಯೇ ಇರುವರು. ಕೆಲಕಾಲದ ವರೆಗೂ ಕಂಪನಿಗೂ ಕೆಲಸಗಾರರ ಸಂಸ್ಥೆಗೂ ತಿಕ್ಕಾಟವಿದ್ದೇ ಇದ್ದಿತು, ಕ್ರಮೇಣ ಅದು ಸಹ ಉಭಯ ಕಡೆಯ ಸೌಹಾರ್ದತೆಯ ಪರಿಣಾಮವಾಗಿ

ಆ ಭಿನ್ನಾಭಿಪ್ರಾಯವೂ ತೊಲಗಿತು. ನ್ಯಾಯವಾದ ಬೇಡಿಕೆಗಳನ್ನೆಲ್ಲ ಕಂಪೆನಿಯವರು ಪರಿಶೀಲಿಸಿ ಬಗೆಹರಿಸುತ್ತಿರುವಂತೆ ತೋರಿಬಂತು. 'ಬೋ ಸ್ಟ್ರೀಟ್' ಬೀದಿಯಲ್ಲಿ ಹೆಲನ್ ಬ್ಲಾವಟ್‌ಸ್ಕಿ ಇವಳಿಂದ ಸ್ಥಾಪಿತವಾದ ಕೆಲಸಗಾರ್ತಿ ಹೆಂಗಸರ ಸಂಸ್ಥೆಯು (ಬೆಂಕಿಕಡ್ಡಿಗೆ) ಕಾರ್ಖಾನೆಯಿಂದ ಉದಾರ ಪ್ರೋತ್ಸಾಹವನ್ನು ಆ ವೇಳೆಗೆ ಪಡೆದಿತ್ತು.

ಮುಖ್ಯತರದ ಕಾರಣದಿಂದ ಹೊರಕೆಲಸಕ್ಕೆ ಹಾಕಲಾದ ಬೆಂಕಿಕಡ್ಡಿಗೆ ಕೆಲಸಗಾರರ ಪರಿಸ್ಥಿತಿಯು ಇತರ ಎಲ್ಲರಿಗಿಂತಲೂ ದುರಂತವಾಗಿದ್ದಿತು, ಆದರೆ ಅಂಥವರನ್ನು ಗುರುತು ಹಚ್ಚಲಿಕ್ಕೆ ಕಷ್ಟವಿತ್ತು. ಹನ್ನೆರಡು ಡಜನ್ ಬೆಂಕಿಕಡ್ಡಿಗೆಗೆ ಎರಡು ಪೆನ್ಸ್-ಫಾರ್ದಿಂಗ್ ಬೆಲೆಯಿದ್ದಾಗ ಅದನ್ನು ಕಟ್ಟಲು ನೂಲು ಇತ್ಯಾದಿಗಳನ್ನೆಲ್ಲ ಕೆಲಸಗಾರರೇ ಕೊಂಡುಕೊಳ್ಳಬೇಕೆಂದಾದರೆ ಅದು ಸಂಪಾದನೆಯಾಗದು. ಹೀಗೆ ಕೆಲಸವು ಹೆಚ್ಚಾಗುತ್ತಾ ಬಂದಂತೆ ಕೆಲಸಗಾರರಲ್ಲಿ ಹೊಟ್ಟೆ ಹಸಿವು ಏರಿತು. ಓಹ್, ಬೆತ್ನಲ್ ಗ್ರೀನ್ ಭಾಗದ ಸುತ್ತಲೂ ರಾತ್ರಿ ಬೀದಿಗಲ್ಲಿಗಳಿಗಾಗಿ ನಮ್ಮ ದಿನದ ಕೆಲಸವೆಲ್ಲ ಮುಗಿಸಿ ಬೀಸುತ್ತ ನಡೆಯುತ್ತಿದ್ದುದು, ಚಿಕ್ಕ ಮಕ್ಕಳು ಬರಿ ನೆಲದಲ್ಲಿ ಹರಕು ಚಿಂದಿ ಅಷ್ಟು ಮನಾದರೊಂದರ ಮೇಲೆ ಮಲಗುವುದು, ಮಕ್ಕಳ ಮುಖದಲ್ಲಿ, ಹೆಂಗಸರ ಕಣ್ಣುಗಳಲ್ಲಿ ಮತ್ತು ಗಂಡಸರ ನಡುಗುವ ಕೈಗಳಲ್ಲಿ ಕ್ಷಾಮವು ಎದ್ದು ಕಾಣುವುದು, ಹೃದಯವು ಅಸ್ವಸ್ಥತೆಗೊಳಗಾಗಲು, ಕಣ್ಣುಗಳು ಮಬ್ಬಾಗಲು ಎಲ್ಲೆಡೆ ಎಲ್ಲಿಲ್ಲಿ (ಕೇಳುತ್ತಿದ್ದ ಪ್ರಶ್ನೆಯೆಂದರೆ ದುಃಖಕ್ಕೆ ಪರಿಹಾರವೇನು? ತೋರಿಸುವವನು (ಕೃಷ್ಣದಿಂದ) ಕಾಗಿರುವ ಬಗೆಯೇನು, ಎಂಬುದೇ ಆಗಿದೆ.

ಆ ವರ್ಷದ ಆಗಸ್ಟ್ ತಿಂಗಳಲ್ಲಿ ನಾನು ಬೆಂಕಿಕಡ್ಡಿಗೆ ಕೆಲಸಗಾರ್ತಿ ಹುಡುಗಿಯರಿಗೆ ಒಂದು ಕೋಣೆಯು ಬೇಕೆಂಬುದಾಗಿ ಕೇಳಿದೆನು, ಅದರಲ್ಲಿ ಒಂದು ಪಿಯಾನೊ, ವಾರ್ತಾಪತ್ರಿಕೆಗಳನ್ನಿಡಲು ಒಂದು ಮೇಜು, ಆಡಲಿಕ್ಕೆ ಸೌಕರ್ಯ ಮತ್ತು ವಿಶ್ರಾಂತಿ ವೇಳೆಗೆ ಓದುವ ಪುಸ್ತಕಗಳಿಗೂ ಕೇಳಿದೆನು, ಸ್ವಂತ ಮನೆಗಳಿಲ್ಲದ ಮತ್ತು ಬೀದಿಗಳಲ್ಲದೆ ತಿರುಗಾಡಲು ಮೈದಾನವೇನೂ ಇಲ್ಲದ ಹುಡುಗಿಯರಿಗೆ ವಿಶ್ರಮಿಸಲು ಆಕರ್ಷಕವಾದ ತಮ್ಮದೇ ಒಂದು ವಿಶ್ರಾಂತಿ ಸ್ಥಳವಾಗಿ ಇರಿಸಲು ಯತ್ನಿಸಲಾಗಿತ್ತು. ಬಹುಕಠಿಣ ಶ್ರಮದಿಂದ, ಕ್ರಮವಾದ ಕಟ್ಟುನಿಟ್ಟುಗಳಿಂದ ಹುಡುಗಿಯರನ್ನು ಇರಿಸಲು, ಒಂದು ಕಟ್ಟಡವನ್ನೇ ಕಟ್ಟಲು ಸಾಧಿಸದೆ ಅದರ ಬದಲಾಗಿ ಅವರು ಕೇವಲ ಸ್ನೇಹದ ಭಾವದಿಂದ ಪರಸ್ಪರ ಮಿಲನವಾಗಿ ಸಿಗುವ ಸ್ವಾಭಿಮಾನಗಳನ್ನುಳಿಸಿಕೊಂಡು ಸಂತೋಷಕರವಾದ ಗೃಹಜೀವನವು ಎಂತಿರುವುದೋ ಅದೇ ರೀತಿಯಲ್ಲಿ ಇರಿಸುವ ಪ್ರಯತ್ನಿಸಿದ್ದರೆ ಆ ವರೆಗೂ ಇಲ್ಲದಿದ್ದ ಮತ್ತು ಪೂರ್ವ ಲಂಡನ್ನಿನ ಹುಡುಗಿಯರಿಗಾಗಿ ಎರಡು ವರ್ಷಗಳ ನಂತರ ಅದೇ ಆಗಸ್ಟ್

ತಿಂಗಳಲ್ಲಿ ಶ್ರೀಮತಿ ಬ್ಲಾವಟ್‌ಸ್ಕಿಯವರು ಅಂದು ಬಂದು ಸತ್ಸಂಗದ ಭವನವನ್ನು ಉದ್ಘಾಟಿಸಿದರು.

ಅದರ ನಂತರ ಅನ್ಯಾಯವಾಗಿ ದಂಡಕ್ಕೆ ಒಳಗಾದ ದಕ್ಷಿಣ ಲಂಡನ್ನಿನ ಟಿನ್ ಪೆಟ್ಟಿಗೆ ಕೆಲಸಗಾರರ ಕಥೆಯೂ ಕೇಳಿಸುತ್ತ; ಸಾಹಿತ್ಯ ಸಲಕರಣೆಗಳನ್ನು ಆ ಕಾರ್ಖಾನೆಯಲ್ಲಿ ಭದ್ರವಾಗಿಡದ ಕಾರಣದಿಂದ ಅವೆಲ್ಲವೂ ಛಿದ್ರಛಿದ್ರವಾಗಿದ್ದುವು. ಪುನಃ ಕಾನೂನು ಬಾಹಿರವಾಗಿ ದಂಡವು ವಿಧಿಸಲ್ಪಟ್ಟು ಹತ್ತಿಕ್ಕಲ್ಪಟ್ಟಿತ್ತು. ಜನಕ್ಕೆ ಕೋರ್ಟ್ ವಕಾಲತ್ತನ್ನು ವರ್ಣಿಸಲಿಕ್ಕೂ ಮಕ್ಕಳಿಗೆ ಉಚಿತ ಊಟವನ್ನು ಕೊಡಬೇಕೆಂಬುದಾಗಿ ತೀವ್ರ ಚಳುವಳಿಯೂ, ಎಲ್ಲಾ ಸಾರ್ವಜನಿಕ ಸಂಸ್ಥೆಗಳಿಗೆ ನ್ಯಾಯವಾದ ಕೂಲಿಯನ್ನು ಸಲ್ಲಿಸಲ್ಪಡಬೇಕೆಂದೂ, ಬಂದರು ಕೆಲಸಗಾರರಿಗೆ ಕೆಲಸವೂ ಅವರ ತಪ್ಪುಗಳನ್ನು ಬಹಿರಂಗಪಡಿಸಬೇಕೆಂದು ಕೋರಿಕೆಯೂ, ಕ್ಯಾಸಲ್ಲಿ ಶಿಲ್ಲಿಂಗಿನಲ್ಲಿ ಸರಬರಾಜು ಮಾಡುವ ನಿಬಂಧನೆಗಳಿಗೆ ಬೇಡಿಯುತ್ತ ಅವರಿಗೆ ಉಪನ್ಯಾಸಗಳನ್ನು ಕೊಡುತ್ತಿದ್ದೂ, ಅವರ ಕೋರಿಕೆಗಳನ್ನೆಲ್ಲಾ ಲೇಖನಗಳ ರೂಪದಲ್ಲಿ ಬರೆದುದೂ, Tower Hamlets ಮತದಾರ ಕ್ಷೇತ್ರದಲ್ಲಿ ಶಾಲಾ ಬೋರ್ಡ್ ಚುನಾವಣೆಯಲ್ಲಿ ಸ್ಪರ್ಧಿಸಿ ಎಲ್ಲರಿಗಿಂತಲೂ ಹೆಚ್ಚಿನ ಮತದಿಂದ ಆರಿಸಲ್ಪಟ್ಟು ಆ ರೀತಿ ಪ್ರಚಂಡ ಗೆಲುವನ್ನು ಪಡೆದುದೂ ಇಂದಿನ ಘಟನಾವಳಿಗಳಾಗಿದ್ದುವು, ಬೇಸಿಗೆಯ ನಂತರ ಕೆಲವು ದಿನ ಹೀಗೆ ಕಳೆಯಲಾಯಿತು, ಅದರೊಡನೆಯೇ ಅದೆಷ್ಟೋ ಭಾಷಣಗಳು, Secularist, Labour, Socialist ಎಂಬೀ ವಿಚಾರಗಳ ಮೇಲೆ ನಿತ್ಯವೂ ಬೇಕಾದ ರಾಷ್ಟ್ರೀಯ ಸಂಪಾದನೆಗಾಗಿ ಲೇಖನಗಳನ್ನು ಬರೆಯುತ್ತಲೇ ಇದ್ದೆನು, ಯಾವಾಗ ಶಾಲಾ ಬೋರ್ಡು ಚುನಾವಣೆಯಲ್ಲಿ ಜಯವನ್ನು ಪಡೆದೆನೋ ಆಗ ಬಡ ಹೆಂಗಸರಿಗೆ ಏನಾದರೂ ಮಾಡಲು ಸಾಧ್ಯವಿದೆಯೋ ಅದನ್ನು ನನಗೂ ಮಾಡಲಿಕ್ಕಿತ್ತೆಂದು ಆಗ ನನ್ನ ಮನಸ್ಸಿಗೆ ಹೊಳೆಯಿತು.

ಹೀಗೆ ನಾನು ಎಂದೂ ಮರೆಯದ 1889ನೇ ವರ್ಷಕ್ಕೆ ನನ್ನನ್ನು ದಬ್ಬಲಾಯಿತು. ನಾನು ನನ್ನ ಮುಂದಿನ "ವಿಕಸನ"ಕ್ಕೆ ದಾರಿಯನ್ನು ಕಂಡುಕೊಂಡೆನಲ್ಲದೆ ನಾನು ಹೆಚ್.ಪಿ. ಬ್ಲಾವಟ್‌ಸ್ಕಿಯವರನ್ನು ಭೇಟಿಯಾಗುವ ಮತ್ತು ಅವಳ ಶಿಷ್ಯಳಾಗುವ ಅಮೂಲ್ಯ ಸಂದರ್ಭವು ದೈವದತ್ತವಾಗಿ ಲಭಿಸಿತು, ಸಾಮಾಜಿಕ ದೋಷಗಳನ್ನು ಸರಿಗಟ್ಟಲು ನಾನು ತಿಳಿದುದಕ್ಕಿಂತ ಇನ್ನೂ ಹೆಚ್ಚು ಸಬಲ ಸನ್ನಿವೇಶಗಳು ಒದಗಬೇಕೆಂಬ ಅಭಿಪ್ರಾಯವು ನನ್ನಲ್ಲಿ ಬೇರೆ ದಿನದಿನಕ್ಕೂ ಹೆಚ್ಚುತ್ತಿತ್ತು. ಆರ್ಥಿಕ ವಿಷಯದಲ್ಲಿ ಪ್ರಗತಿಗೆ ಸಮಾಜವಾದದ ತತ್ತ್ವಗಳು ಸಾಕಾಗಿದ್ದುವು. ಆದರೆ ಮಾನವರಲ್ಲಿ ಸೋದರಭಾವವನ್ನು ಮೊಳಗಿಸಬೇಕಾದ ಸ್ಫೂರ್ತಿ ಮತ್ತು ಉದ್ದೇಶವನ್ನು ಎಲ್ಲಿಂದ ತಾನೇ ಪಡೆಯಬಹುದು? 'ನಿಸ್ವಾರ್ಥ ಜನಸೇವಕರ ತಂಡವೊಂದನ್ನು ಕಾಡಿಡುವ ನಮ್ಮ ಪ್ರಯ

ತ್ತವು ಫಲಕಾರಿಯಾಗಲಿಲ್ಲ. ಎಷ್ಟೋ ಸಾಧಿಸಲ್ಪಟ್ಟಿದೆ, ಆದರೆ ಜನತೆ ಯು ಸ್ವೀಕಾರಾಕಾಂಕ್ಷೆಯಿಂದ, ಇತರರಿಂದ ಪಡೆಯದೆ ತಾವೇ ಕೊಡುವ, ಮತ್ತು ಶ್ರದ್ಧಾಪೂರ್ವಕವಾದ ಆತ್ಮತ್ಯಾಗದ ನಿಜವಾದ ಉತ್ಕ್ರಾಂತಿಯೊಂದು ಇನ್ನೂ ನಡೆಯುತ್ತಿಲ್ಲ. ಉದಾತ್ತವಾದ ಸಾಮಾಜಿಕ ವ್ಯವಸ್ಥೆಗೆ ಸನ್ನಿವೇಶವಾದರೂ ಎಲ್ಲಿ ಇದೆ? ಮಾನವ ದೇಗುಲವೊಂದನ್ನು ಕಟ್ಟಲು ಕೆತ್ತಿದ ಕಲ್ಲುಗಳು ಎಲ್ಲಿ ಇವೆ? ಅಂಥಾ ಸಂದು ಕ್ರಾಂತಿಕಾರಕ ಸಾಧನೆಗೆ ನಾನು ಆಲೋಚಿಸಿದಾಗ ನನಗೆ ದಾರಿ ತೋರದೆ ಕಡೆಗೆ ಅದು ನನ್ನನ್ನು ಮನೋದ್ವೇಗದಲ್ಲಿ ಬಿಟ್ಟಿತು.

ಅಷ್ಟೇ ಅಲ್ಲ; ನಾನು ನಂಬಿದ್ದ ತತ್ವವು ಸಾಲದು ಎಂಬುದಾಗಿಯೂ ಜೀವನವು ಮತ್ತು ಮನಸ್ಸು ಇವುಗಳು ಬೇರೆಲ್ಲವುಗಳಿಗಿಂತ ಮತ್ತು ನಾನು ಎಣಿಸಿದುದಕ್ಕಿಂತ ಹೆಚ್ಚಿನದೆಂದು ನನ್ನ ಮನಸ್ಸಿಗೆ 1886 ರಿಂದೀಚೆಗೆ ನಿಧಾನವಾಗಿ ಹೊಳೆಯಲು ಪ್ರಾರಂಭವಾಯಿತು. ಮನಃಶಾಸ್ತ್ರವು ಬಹು ತ್ವರಿತಗತಿಯಲ್ಲಿ ಮುಂದುವರಿಯುತ್ತದೆ. ಮನುಷ್ಯನನ್ನು ಸುಚಾರಿತ್ರ್ಯಸ್ಥಿತಿಗೆ ತರುವ ವಿಧೇಯ ಪ್ರಯೋಗ ಪರೀಕ್ಷೆಯು ಮಾನವ ಜೀವನದಲ್ಲಿ ಈವರೆಗೆ ಉದಿಸದಿದ್ದ ಮತ್ತು ಕೌತುಕವನ್ನುಂಟುಮಾಡುವ ಹಲವು ಬಗೆಯ ವ್ಯಕ್ತಿತ್ವಗಳಿಂದ ತೋರ್ಪಡಿಸಿಕೊಂಡು ಬರಲಾಗಿದೆ. ಎಲ್ಲಕ್ಕಿಂತಲೂ ಆಶ್ಚರ್ಯಕರವಾದುದೆಂದರೆ, ಆಲೋಚನಾ ಶಕ್ತಿಯನ್ನು ಉತ್ಪಾದಿಸುವ ಮಿದುಳು ಮಾನಸಿಕ ಕ್ರಿಯೆಯ ಹೊರತು ಪ್ರವೃತ್ತಿಯನ್ನು ಬೇರೆ ಇತರ ಹಲವು ಕ್ರಿಯೆಗಳ ಜತೆಗೆ ಇನ್ನೊಂದು ಎಂಬಂತೆ ಸೂಚಿಸುತ್ತ, ಇದನ್ನು ಕುರಿತು ಹಲವು ಹೇಳಿಕೆಗಳನ್ನು ನಾನು ವಿವರಿಸಲು ಯೋಗ್ಯಳಲ್ಲವಾಗಿದ್ದರೂ ನನ್ನ ವಿವರಣೆಗಾಗಿ ವಿಷಯಗಳನ್ನು ನನ್ನ ಮುಂದಿಡಲಾದುವು. ಆತ್ಮಚೇತನ, ಸ್ವಪ್ನ, ಭ್ರಮೆ, ಮೋಹ ಮತ್ತು ಉನ್ಮಾದಗಳನ್ನು ಕುರಿತಾದ ಅವ್ಯಕ್ತ ವಿಚಾರಗಳನ್ನು ನಾನು ಓದಿದ್ದೆನು, ಹಾಗಿರಲು ಅಲೌಕಿಕ ವಿಚಾರಗಳನ್ನು ಬಿಟ್ಟು ವಾಸ್ತವಿಕವಾದುವುಗಳನ್ನೇ ನನಗೆ ಎಟುಕಲಾರದಷ್ಟು ಸ್ಪಷ್ಟವಾಗಿ ಪ್ರತಿಪಾದಿಸಿದ ಎ.ಪಿ. ಸಿನ್ನೆಟ್ಟನವರ "ರಹಸ್ಯ ಲೋಕ" (Occult World), ಅದರ ಬಹು ವಿಸ್ಮಯಕರವಾದ ಬೋಧನಾಶಾಸ್ತ್ರಗಳ ಸಹಿತವಾಗಿ ಪ್ರಕಟವಾದುದು ನನ್ನ ಅಜ್ಞಾನದ ಕತ್ತಲೆಗೆ ಒಂದು ಜ್ಯೋತಿಕಿರಣವಾಗಿ ಬೆಳಗಿತು. ನನ್ನ ಓದುವಿಕೆಗೆ ನಾನು ಸ್ವಂತವಾಗಿ ಅಭ್ಯಾಸಿಸುತ್ತಿದ್ದ ಆಧ್ಯಾತ್ಮಿಕತೆಯನ್ನು ಬೆರೆಸಿದಾಗ ಅದ್ಭುತವಾಗಿ ಕಾಣುವುದೆಲ್ಲಾ ನಿಜವಾಗಿ ತೋರಿದರೂ ಅದರ ಸಾರಮಾಧುರ್ಯ ವಿಚಾರವು ಆಶ್ಚರ್ಯಕರವಾಗಿಯೇ ಇದೆ. ದೃಗಿಂದ್ರಿಯಕ್ಕೆ ಗೋಚರವಾಗದವುಗಳನ್ನು ಕಾಣುವ ವಿದ್ಯೆ, ಜ್ಞಾನದೃಷ್ಟಿಗೆ ಮಾತ್ರ ತೋರುವ ಜನ, ಇತರರ ಮನಸ್ಸಿನಲ್ಲಿ ಏನಿದೆಯೆಂದು

ತಿಳಿಯುವ ಶಕ್ತಿಯಿಲ್ಲ ನಿಜವಾದುದರಿಂದು ಎಣಿಸಲ್ಪಟ್ಟಿದೆ, ಈ ಮೊದಲೇ ಹೇಳಲಾದ ಬಾಹ್ಯ ಜೀವನದ ಬಹು ವಿಧದ ಚಟುವಟಿಕೆಗಳೆಡೆಯಲ್ಲಿ ನನ್ನ ಮನಸ್ಸು ಈ ಪ್ರಶ್ನೆಗಳ ಬಗ್ಗೆ ಚಿಂತಿಸುತ್ತಿತ್ತಲ್ಲದೆ ಅವಕ್ಕೆ ಉತ್ತರಗಳೇನೆಂಬುದನ್ನು ಅರಿಯಲು ಬಹು ಶ್ರದ್ಧೆಯಿಂದ ಯತ್ನಿಸಲಾಗುತ್ತಿತ್ತು. ವಿವಿಧ ಬಗೆಯ ಗ್ರಂಥಗಳನ್ನು ನಾನು ಓದಿದ್ದೆನಾದರೂ ನನಗೆ ಆತ್ಮತೃಪ್ತಿಯನ್ನುಂಟು ಮಾಡುವ ವಿಚಾರಗಳು ಅವುಗಳಿಂದ ದೊರೆಯುತ್ತಿಲ್ಲ, ಅವುಗಳಲ್ಲಿ ಹೇಳಿದ ಸಲಹೆಗಳ ಬಗ್ಗೆ ಪ್ರಯೋಗವನ್ನು ನಡೆಸಿದಾಗ ನನಗೆ ದೊರಕಿದ ಫಲಿತಾಂಶವು ವಿಸ್ಮಯಕಾರಕವಾಗಿತ್ತು, ಅಂತೂ ಸಹ ಯಾವುದೋ ಬಗೆಯ ರಹಸ್ಯವು, ರಹಸ್ಯ ಶಕ್ತಿಯು ಇದೆಯೆಂದು ನನಗೆ ಖಚಿತವಾಗಲು ಆ ಗೂಢವನ್ನು ನಾನೇ ಎದುರು ತೊಡರುಗಳಿದ್ದರೂ ಕಂಡುಹಿಡಿಯಲೇ ಬೇಕೆಂದು 1889ರ ವಸಂತ ಕಾಲದೊಳಗಾಗಿ ನಿರ್ಧರಿಸಿದೆನು, ಒಂದು ದಿನ ನಾನು ಎಂದಿನಂತೆ ಸೂರ್ಯಾಸ್ತಮಾನದನಂತರ ಧ್ಯಾನಕ್ಕಾಗಿ ಕುಳಿತಿದ್ದಾಗ, ಈ ಜೀವನ ಮತ್ತು ಮನಸ್ಸಿಗೆ ಸಂಬಂಧಿಸಿದ ಗಹನವನ್ನರಿಯಲೇ ಬೇಕೆಂದು ಬಹು ಸಮಯದಿಂದ ಕೈಗೊಂಡು ನಿರ್ಧರಿಸಿದಾಗ ಲೋಕದಲ್ಲಿ ಬಹು ಪವಿತ್ರವಾದುದೆಂದು ನನಗೆ ತೋರಿದ ಅಶರೀರವಾಣಿಯೊಂದು, "ಎದೆಗುಂದದಿರು, ಜ್ಞಾನಪ್ರಕಾಶವು ಬೆಳಗಲಿದೆ" ಎಂಬುದಾಗಿ ಹೇಳಿದ್ದನ್ನು ಕೇಳಿದೆನು, ಹದಿನೈದು ದಿನಗಳು ಕಳೆದುವು. ಶ್ರೀ ಸ್ಟೇಡ್ ಇವನು ನನಗೆ ಎರಡು ದೊಡ್ಡ ಗ್ರಂಥಗಳನ್ನು ನನ್ನ ಕೈಗೆ ಕೊಡುತ್ತಾ, "ನೀನು ಇವುಗಳನ್ನು ವಿಮರ್ಶಿಸುವೆಯೋ ? ನನ್ನ ತರುಣ ಮಿತ್ರರೆಲ್ಲ ಈ ವಿಷಯದಲ್ಲಿ ನಾಚುಗೆಗೊಂಡಿದ್ದಾರೆ. ಆದರೆ ನೀನು ಅವುಗಳಿಂದ ಪ್ರಯೋಜನವನ್ನು ಹೊಂದಬಹುದಾದಷ್ಟು ಮಟ್ಟಿಗೆ ಆ ವಿಷಯಗಳಲ್ಲಿ ತಲ್ಲೀನನಾಗಿರುವೆ," ಎಂದು ಹೇಳಿದನು, ನಾನು ಆ ಗ್ರಂಥಗಳನ್ನು ತೆಗೆದುಕೊಂಡೆನು, ಅವು ಎರಡೂ ಹೆಚ್. ಪಿ. ಬ್ಲಾವಟ್‌ಸ್ಕಿ ಇವಳು ಬರೆದ "ರಹಸ್ಯ ಸಿದ್ಧಾಂತ", (The Secret Doctrine) ಎಂಬ ಪುಸ್ತಕಗಳಾಗಿದ್ದುವು.

ನಾನು ಆ ಗಂಟನ್ನು ಮನೆಗೆ ಹೊತ್ತು ತಂದು ಆ ಪುಸ್ತಕಗಳನ್ನು ಓದತೊಡಗಿದೆನು. ಪುಟಗಳನ್ನು ಮಗುಚಿದಂತೆ ನನ್ನನ್ನು ಆ ಬರೆಹವು ಆಕರ್ಷಿಸಿತು. ಅಲ್ಲಿ ಹೇಳಿದ ವಿಷಯಗಳೆಲ್ಲ ನನಗೆ ಹಿಂದೆಯೇ ತಿಳಿಸಿದಂತೆ ಭಾಸವಾಯಿತು. ಮುಂದಕ್ಕೆ ಎಂತಾಗುವುದು, ಏನಾಗುವುದು ಎಂದು ನಾನೇ ಊಹಿಸಿ ನಿರ್ಣಯಿಸುವಂತೆ ನನ್ನ ಮನಸ್ಸು ಮುಂದಕ್ಕೆ ಹಾರಿತು, ಅದು ಎಷ್ಟು ಸ್ವಾಭಾವಿಕವಾಗಿ ಎಷ್ಟು ಸುವ್ಯಕ್ತವಾಗಿ, ಎಷ್ಟು ವಾಸ್ತವಿಕವಾಗಿ ಮತ್ತು ಎಷ್ಟು ವಿಚಾರಪೂರ್ಣವಾಗಿ ಹೇಳ

ಕಲ್ಪಿಸುತ್ತಿದೆ! ಅಸ್ತವ್ಯಸ್ತವಾಗಿ ಉಕ್ತವಾದ ವಿಷಯವೆಲ್ಲ ಒಂದು ವಿರಳ ಜ್ಞಾತೆಯನ್ನು ಕಂಡ ವಿವಿಧ ಭಾಗವೆಲ್ಲವನ್ನು ಓದಲು ನನ್ನ ಮನಸ್ಸಿನ ಮೇಲೆ ಹಚ್ಚಿದಂತಾಗಿ ಜ್ಞಾನಪ್ರಕಾಶವನ್ನಿತ್ತಿತಲ್ಲದೆ, ನನ್ನ ಸಂದೇಹಗಳು ಒಗಟುಗಳು ಸಮಸ್ಯೆಗಳು ನಿವಾರಣೆಯಾಗುವಂತೆ ತೋರಿದುವು. ಒಂದು ಬಗೆಯ ಭ್ರಮೆ ಇದಾಗಿತ್ತಾದರೂ ಕ್ರಮೇಣವಾಗಿ ಸುಸ್ಪಷ್ಟವಾದುವುಗಳೆಲ್ಲ ಬಯಲಿಗೆಳೆಯಲ್ಪಟ್ಟವು. ಅದೇನೋ ಅಂತರ್ಜ್ಞಾನವು ಸತ್ಯವೆಂದು ಬೇಗನೆ ಆವಿಷ್ಕರಿಸುವುದನ್ನು ನನ್ನ ಮೆದುಳು ಕ್ರಮೇಣ ತುಲನಾತ್ಮಕವಾಗಿ ಪರಿಶೀಲಿಸುತ್ತ ಬೆಳಕನ್ನು ಬೀಗೂ ಕಾಣಲಾಯಿತು. ಆದರೆ ಆ ಪ್ರಕಾಶದ ಕಾಂತಿಯೊಡನೆ ತನ್ನ ಕ್ರಮದಾಯಕವಾದ ಹುಡುಕಾಟವನ್ನು [illegible] ಕೊನೆಗೊಂಡು ಕಡೆಗೆ ಸತ್ಯವನ್ನು ಕಂಡು ಹಿಡಿದೆನೆಂಬುದಾಗಿ ತಿಳಿದುಕೊಂಡೆನು.

ನಾನು (ಹೆಚ್. ಪಿ. ಬ್ಲಾವಟ್‌ಸ್ಕಿ) ಅವಳ ಗ್ರಂಥಗಳ ಮೇಲಿನ ವಿಮರ್ಶೆಯನ್ನು ಬರೆದು ಕಡೆಗೆ ಅವಳನ್ನು ಕಾಣಲು ಒಂದು ಪರಿಚಯ ಪತ್ರವನ್ನು ಕೊಡಬೇಕೆಂದು ಶ್ರೀ ಸ್ಟೀಡ್ ಇವನಿಗೆ ಹೇಳಿದಾಗ ಅವನು ಅತಿಯೇ ಕಳುಹಿಸಿ ಕೊಟ್ಟನು. ಆದರನಂತರ ನನಗೆ ಅವಳಿಂದ ನಾನು ಹೋಗಿ ಕಾಣಬೇಕೆಂತೆ ಒಂದು ಚೀಟಿ ಬಂತು. ಪರಿಣಾಮವಾಗಿ ನನ್ನಂತೆಯೇ ಆತ್ರ ಆಕಾಂಕ್ಷೆಗಳಿಂದ ಕೂಡಿದ ಹರ್ಬರ್ಟ್ ಬ್ಯಾರೋಸ್ ಇವನೊಡನೆ ನಾಟಿಂಗ್‌ಹಿಲ್ ಸ್ಟೇಷನ್ ನಿಲ್ದಾಣದಿಂದತ್ತ ನಡೆಯುತ್ತಾ ಲಾನ್ಸ್‌ಡೌನ್ ರಸ್ತೆಯ 17ನೇ ಮನೆ ಬಾಗಿಲಿನತ್ತ ಹೋದೆವು; ಸ್ವಲ್ಪ ಕಾಲ ನಿಂತೆವು; ಪಕ್ಕನೆ ಹಜಾರವನ್ನು ಹೊಕ್ಕು ಮುಂದೆ ಹೋದು ಮುಚ್ಚಿದ್ದ ಹಲಗೆಯ ಬಾಗಿಲುಗಳನ್ನು ಬೇಗನೆ ಒಂದಕ್ಕೆ ತಳ್ಳಿ ಮುಂದುವರಿಯಲು ಒಂದು ಮೇಜಿನ ಬಳಿ ಇದ್ದ ಒಂದು ದೊಡ್ಡ ಕುರ್ಚಿಯಲ್ಲಿ ಕುಳಿತಿದ್ದ ಒಂದು ಮೂರ್ತಿಯು ನಸುನಕ್ಕ ಧ್ವನಿಯಿಂದ ಮತ್ತು ಉತ್ಸಾಹದಿಂದ "ಹೋ, ನನ್ನ ಪ್ರೀತಿಯ ಶ್ರೀಮತಿ ಬೆಸೆಂಟ್; ನಾನು ಇಷ್ಟು ಸಮಯ ನಿಮ್ಮನ್ನು ಕಾಣಲು ಆಕಾಂಕ್ಷಿಸಿದ್ದೆನು" ಎಂದು ಹೇಳಿದಾಗ ನಾನು ನಿಂತಲ್ಲಿಯೇ ನಿಂತಿರಲು ಅವಳು ನನ್ನ ಅಂಗೈಯನ್ನು ಬಿಗಿಯಾಗಿ ಹಿಡಿದಿದ್ದಳು. ನಾನು ನನ್ನ ಜೀವನದಲ್ಲಿ ಮೊದಲ ಬಾರಿಗೆ ನೇರವಾಗಿ ಹೆಚ್. ಪಿ. ಬಿ. ಇವಳ ಕಣ್ಣುಗಳೊಳಗೆ ನೋಡುತ್ತಾ ನಿಂತೆನು. ನನ್ನ ಹೃದಯವಾದರೋ ಪುಲಕಿತಗೊಂಡಿತ್ತು. ಆದರೆ ಏದೇಕೆ, ಮೊದಲ ಬಾರಿಗೆ ಕಂಡುದರಿಂದಲೇ? ನಾ ಹೇಗೂ ಹೇಳಲಿಕ್ಕೆ ಸಂಕೋಚವಾಗುವಷ್ಟು ಮನಸ್ಸಿನಲ್ಲಿಯೇ ಒಂದು ಭೀಕರ ಉದ್ವೇಗ, ನನ್ನ ಜೀವಿ ತನ್ನನ್ನು ಹಿಡಿಯುತ್ತಿರುವವನು ಮುಟ್ಟಿದಾಗ ಸ್ವಲ್ಪ ಹಿಂದಕ್ಕೆ ಸರಿಯುವಂತೆ

ನಾನೂ ಅಂಜಿದೆನು. ನನಗೆ ಅರ್ಥವಾಗದಿದ್ದ ಕೆಲವು ಪರಿಚಯಾ
ತ್ಮಕ ಮಾತುಗಳನಂತರ ನಾನು ಕುಳಿತುಕೊಂಡು ಅವಳು ಹೇಳು
ವುದನ್ನು ಕೇಳಿದೆನು. ಅವಳು ತನ್ನ ಪ್ರಯಾಣವನ್ನು ಮತ್ತು
ವಿವಿಧ ದೇಶಗಳನ್ನು ಕುರಿತಾಗಿ ಮಾತಾಡಿದಳು; ನುಡಿಗಳು
ನಿರರ್ಗಳವಾಗಿ ಹರಿಯುತ್ತಿದ್ದುವು. ಅವಳ ಕಣ್ಣುಗಳು ತೆರೆಯು
ಮುಚ್ಚುತ್ತ. ಸುಂದರವಾಗಿ ರೂಪಿತವಾದ ಅವಳ ಬೆರಳು
ಗಳು ಸಿಗರೇಟನ್ನು ಹಿಡಿದು ಆಗಿಂದಾಗ್ಯೆ ಉರುಳಿಸುತ್ತಲಿತ್ತು.
ಖಚಿಯುವಲ್ಲಿತ್ತು ವಿಶೇಷವಾದುದೇನೂ ನಡೆಯಲಿಲ್ಲ. ರಹಸ್ಯ
ಗೂಢವಾದ ಪ್ರಸ್ತಾಪವೇ ಇಲ್ಲ. ಅದ್ಭುತವಾಗಿ ಎನಿಸಬಲ್ಲ ಕೃತ್ಯವೊಂದೂ
ನಡೆಯಲಿಲ್ಲ. ಬರೀ ವ್ಯವಹಾರ ಕುಶಲತೆಯಾದ ಒಬ್ಬ
ಸ್ತ್ರೀಯೊಡನೆ ಸಾಯಂಕಾಲ ವೇಳೆಯಲ್ಲಿ ಅವಳನ್ನು ಕಾಣಲು ಹೋ
ದವರೊಡನೆ ಹರಟೆ ಸಮಯವನ್ನು ಕಳೆಯುತ್ತಿದ್ದದ್ದೇ ಆಗಿದೆ.
ನಾವು ಇನ್ನು ಹಿಂದಿರುಗಲೆಂದು ಎದ್ದೆವು. ಅಷ್ಟರಲ್ಲಿ ಸರದಿಯು
ಎತ್ತಲ್ಪಟ್ಟಿತು. ಎರಡು ತೇಜೋಮಯ ತೀಕ್ಷ್ಣ ಕಣ್ಣುಗಳು ನನ್ನ
ಕಣ್ಣುಗಳನ್ನು ಎದುರುಗೊಂಡವು. ಅವಳು ದ್ವೇಷವಾಣಿಯಿಂದ
"ಓ, ನನ್ನ ಪ್ರಿಯ ಆನಿ ಬಿಸೆಂಟ್, ನೀನೂ ನಮ್ಮೊಡನೆ ಸೇರು
ವುದಾದರೆ—". ಎಂದಷ್ಟೇ ಉಚ್ಚರಿಸಿದಳು. ನನಗಾದರೋ ಅವ
ಳ ಆ ಲವಲವಿಕೆಯ ನುಡಿಗಳು ಒಪ್ಪಿದವು. ಅವಳ ಆ ನಿಬ್ಬೆರ
ಗದ ಕಣ್ಣುಗಳೆಡೆಯಲ್ಲಿ ಬಗ್ಗಿ ಅವಳಿಗೊಂದು ಮುತ್ತನ್ನು
ಕೊಡಲು ಆಕಾಂಕ್ಷೆ ಹುಟ್ಟಿತ್ತಾದರೂ ನನ್ನಲ್ಲಿ ಜಾಗರಂತೆ ಹಿಂ
ದಿದ್ದ ಹೆಮ್ಮೆಯ ತಿರಸ್ಕಾರದಿಂದ ಮತ್ತು ನನ್ನ ಅವಿಧೇಯತೆಗೆ ಸಾ
ನೇ ಅನುಕೂಲವಾದುದು, ಬುದ್ಧಿಯುಳ್ಳದ ವಿನಯದಿಂದ ಮತ್ತು
ಯಾವುದೋ ನೋವಿನಿಂದ ಬೇರೇನೋ ಹೇಳಿ ಎಂದಿನಂತೆ ಎಲ್ಲಿ
ಡಿಯೂ ಮಾಡುವಂತೆ ಅವಳಿಗೆ ನಮಸ್ಕರಿಸಿ ಅಲ್ಲಿಂದ ಹೊರ
ಡಲು ಅನುಮಾಡಿದೆನು. ಅದರನಂತರ ಅವಳು, "ಮಗಳೇ, ನಿನ್ನ
ಸ್ವಾತಂತ್ರ್ಯ ಶಕ್ತಿಯಾದರೋ ದೊಡ್ಡದೇ ಆಗಿದೆ. ನೀನು ಹೆಮ್ಮೆ
ಯ Lucifer ಇವನೇ ಆಗಿರುವೆ." ಎಂದು ಹೇಳಿದಳು. ಎಲ್ಲಾ
ಟೀಕೆಗಳೂ ಕೇವಲ ನಿರ್ಲಕ್ಷ್ಯ ಮತ್ತು ನಿರರ್ಥಕವಾದುವೆಂದೂ
ಅಜ್ಞಾನಿಗಳನ್ನು ಕಂಡಾಗ ತಕ್ಷಣ ಕೆರಳಿಸದೆ ಅವರ
ನ್ನು ತಿರಸ್ಕರಿಸುವುದು ಸರಿಯಲ್ಲವೆಂದೂ ನಾನು ಕಲಿಯು
ವವರೆಗೆ ನಾನು ಅವಳ ಸರಿಯಾಗಿ ಪಾಲಿಸುತ್ತಿದ್ದಾಗ ನನ್ನ ಪ್ರ
ತಿಕ್ರಿಯೆ ಕೋಪಾವೇಶದಿಂದ ನನ್ನಲ್ಲಿ ಉದಯಿಸುತ್ತಾ ಇದ್ದರೂ
ಅಂದಿನ ಆ ಮೊದಲ ಸಾಯಂಕಾಲದಿಂದ ನಾನೂ ಅವಳ
ಎದುರಿಗೆ ಆ ರೀತಿ ವರ್ತಿಸಿದ್ದೇ ಇಲ್ಲ.

ಬ್ರಹ್ಮಜ್ಞಾನ ಸಂಘ – Theosophical Society –
ಇದಕ್ಕೆ ಸೇರುವ ಇಚ್ಛೆಯುಂಟಾದ ಕಾರಣ: ಅವಳ ಬಳಿಗೆ ಹೋ

ದೆನು. ಆದರೂ ಆ ನನ್ನ ಆಶೆಯನ್ನು ನಾನೇ ಪ್ರತಿಭಟಿಸುತ್ತಲೂ ಇದ್ದೆನು,
ಏಕೆಂದರೆ ಅದಕ್ಕೆ ಸೇರುವುದೆಂದರೆ ಅದೆಷ್ಟು ಪ್ರಾಮುಖ್ಯ ಮನೋ
ವೇದನೆಯ ಬದಲಾವಣೆಯೆಂಬುದನ್ನು ನಾನು ಸುವ್ಯಕ್ತವಾಗಿ ಮತ್ತು
ಹಲಬಗೆಯಲ್ಲಿ ತಿಳಿದಿದ್ದೆನು. ನನ್ನ ವಿರೋಧವಿದ್ದ ಸಾರ್ವಜನಿಕ ವಾತ್ಸಲ್ಯ
ಭಾವವನ್ನು ನಾನು ಲಂಡನ್ ಶಾಲಾ ಬೋರ್ಡ್‌ನಲ್ಲಿ ದುಡಿಯುತ್ತಿದ್ದಾಗ
ಸಾಕಷ್ಟು ಜಯಿಸಿದ್ದರಿಂದ ಮುಂದಕ್ಕೆ ಜನಸೇವೆಗೆಂದು ಪ್ರಯ
ತ್ನಿಸಿದಾಗ ಅದನ್ನು ಪ್ರಶಂಸಿಸಬೇಕಲ್ಲದೆ ನಿಂದಿಸಬಾರದೆಂಬ
ತತ್ವದ ನಯವಾದ ಮಾರ್ಗವನ್ನು ನನ್ನ ಮುಂದೆ ಇರಿಸುತ್ತ,
ನಾನು ಹಿಂದು ಹೊಸ ಆಂದೋಲನದತ್ತ ಹತಮುಖ ದ್ವೇಷವನ್ನು
ಮೀರಿದ ಪರಿಹಾಸ್ಯಕ್ಕೆ ತುತ್ತಾಗಿ ಕಡೆಗೆ ಕಡೆಗೆ ಪುನಃ ಜನ
ಪ್ರಿಯವಲ್ಲದ ಸತ್ಯಕ್ಕಾಗಿ ಮತ್ತೊಮ್ಮೆಯೂ ಹೋರಾಡಲೇ? ಸ್ವಾ
ತ್ತಿಕವಾದುದನ್ನು ವಿರೋಧಿಸಿ ನಾನು ಮೇಧಾವಿಗಳ ಮಾತುಗ
ಳಿಗೆ ಬಲಿ ಬಿದ್ದು ಜೀವಾತ್ಮನನ್ನು ತ್ಯಾಗೀಕರಿಸಿ ತಪ್ಪಿದೆನೆಂದು
ಹೇಳುತ್ತಾ, ಸಾರ್ವಜನಿಕವಾಗಿ ಪಶ್ಚಾತ್ತಾಪವನ್ನು ಸಲ್ಲಿಸುವ
ನಾಚಿಕೆಗೆ ಎದೆಗೊಡಲೆ? ನನಗಾಗಿ ಅಷ್ಟು ಧೈರ್ಯದಿಂದ
ಕಾದಾಡಿದ ಸೇನೆಯನ್ನು, ಸಮಾಜವು ಅವಮಾನಕರ ರೀತಿಯಲ್ಲಿ
ನನ್ನನ್ನು ಧಿಕ್ಕರಿಸಿದಾಗ ಪ್ರೀತಿಯಿಂದ ತಮ್ಮವಳೆಂದೇ ನನ್ನನ್ನು
ಕಂಡ ನನ್ನ ಮಿತ್ರರನ್ನು ತ್ಯಜಿಸಲೇ? ನನ್ನ ಸಮಾಜವಾ
ದ ತತ್ವದಿಂದ ನಾನು ಯಾರ ನಂಬಿಕೆಯನ್ನು ಕಳೆದುಕೊಂಡೆ
ನೋ, ಯಾರ ಸಹೋದ್ಯೋಗಿಯಾಗಿ ಮತ್ತು ಯಾರ ಜತೆಯಲ್ಲಿಯೇ
ನಾನೂ ಹೋರಾಟವನ್ನು ನಡೆಸಿದವಳೆಂಬ ಹೆಮ್ಮೆಯಿಂದ ಯಾರು
ಕೂಡಿದ್ದನೋ, ಯಾರು ನನ್ನನ್ನು ತುಂಬಾ ಗೌರವದಿಂದ ಕಂಡಿದ್ದನೋ
ಮತ್ತು ಎಲ್ಲರಿಗಿಂತಲೂ ಪ್ರಬಲ ಮತ್ತು ನೆಚ್ಚಿನ ನನ್ನ ಮಿತ್ರ
ನಾದ ಅವನಿಗೆ (ಚಾರ್ಲ್ಸ್ ಬ್ರಾಡ್ಲಾ) ಇದೀಗ ನಾನು ಭೌತಿಕ
ವಾದಿಗಳ ಪಕ್ಷವನ್ನು ಬಿಟ್ಟು ಬೇರೊಂದು ವಿರೋಧಿ ಪಂಗ
ಡಕ್ಕೆ ಹೋಗುವುದನ್ನು ನೋಡುವ ಮನೋವೇದನೆಯನ್ನು
ಉಂಟುಮಾಡಲೇ? ಈಗ ನಾನು ಬ್ರಹ್ಮಜ್ಞಾನ (Theosophy)
ಸಂಸ್ಥೆಗೆ ಸೇರಿದ್ದೇನೆಂದು ಚಾರ್ಲ್ಸ್ ಬ್ರಾಡ್ಲಾ ಅವನಿಗೆ ಹೇಳಿ
ದರೆ! ಅವನ ಕಣ್ಣುಗಳಿಂದ ಮಿಂಚುವ ನೋವಿನ ನೋಟವು ಎಂತು ಇರ
ಬಹುದು? ಹೀಗೆ ನನ್ನ ಮನಸ್ಸಿನ ಉದ್ವೇಗವು ಹಿಂದಿನ ಯಾ
ವೊಂದು ನೋವು ಬೇನೆಗಳಿಲ್ಲದಿದ್ದರೂ ಬಹು ತೀವ್ರವಾಗಿಯೇ
ಇತ್ತು, ಇಷ್ಟರಲ್ಲಿ ಈ ಹಲವು ಕಾದಾಟಗಳನ್ನು ನಡೆಸಿದ ಮತ್ತು
ಹಲವು ನೋವು ಬೇವುಗಳನ್ನು ಅನುಭವಿಸಿದ ಈ ಕದನಗಾತಿ
ಯು ಗಾಯವು ಹಿರಿದಾಗಿಯೇ ಇದ್ದಿತು, ಹೀಗಾಗಿ ನಾನು ಪುನಃ
ಲಾನ್ಸ್‌ಡೌನ್ ರಸ್ತೆಯ 17 ಮನೆಗೆ Theosophical Society
ಇದರ ಬಗ್ಗೆ ತಿಳಿಯಲೆಂದು ಹೋದೆನು, ಹೆಚ್. ಪಿ. ಬ್ಲಾವಟ್ಸ್ಕಿ

ಇವರು ಕ್ಷಣಕಾಲ ನನ್ನನ್ನು ತನ್ನ ಚುಚ್ಚುಗಣ್ಣುಗಳಿಂದ ನೋಡಿದರು. Physical Research ಸಂಸ್ಥೆಯು ನನ್ನ ಬಗ್ಗೆ ಬರೆದ ವರದಿಯನ್ನು ನೋಡಿರುವಿರೋ?, ಎಂಬುದಾಗಿ ಅವರು ಕೇಳಿದರು, "ಇಲ್ಲ, ನಾನು ಅದರ ವಿಚಾರವಾಗಿ ಏನೂ ತಿಳಿದುದ್ದೇ ಇಲ್ಲ," ಎಂದು ಹೇಳಿದೆನು, "ಹಾಗಾದರೆ ಹೋಗಿ ಅದನ್ನು ಓದು. ಓದಿ ಅನಂತರ ನನ್ನ ಬಳಿಗೆ ಬಾ," ಎಂದು ಹೇಳಿದರು. ಆ ವಿಷಯವಾಗಿ ಅವರು ಹೆಚ್ಚೇನೂ ಹೇಳಲಿಲ್ಲ; ಬದಲಾಗಿ ವಿವಿಧ ದೇಶಗಳಲ್ಲಿ ಅವರು ಪಡೆದ ಅನುಭವಗಳನ್ನು ಕುರಿತು ಪ್ರತಿಪಾದಿಸತೊಡಗಿದರು.

ನಾನು ಆ ವರದಿಯ ಒಂದು ಪ್ರತಿಯನ್ನು ಎರವಾಗಿ ತೆಗೆದುಕೊಂಡು ಓದಿದೆನು. ಅದರನಂತರ ಪುನಃ ಓದಿದೆನು. ಶೀಘ್ರವಾಗಿ ನಿಲ್ಲಿಸಲ್ಪಟ್ಟ ಕಟ್ಟುಕಥೆಯಂತು ಅದೆಷ್ಟು ಅಭದ್ರವಾಗಿತ್ತೆಂದು ನಾನು ಬೇಗನೆ ಕಂಡುಕೊಂಡೆನು. ದಿನದಿನಕ್ಕೂ ಹೇಳಲ್ಪಡುವ ಸಿದ್ಧಾಂತಗಳಿಗೆ ನಂಬಲಾಗದ ಹೇಳಿಕೆಗಳಲ್ಲಿರುವ ಹುರುಳಿಗೆ ಮತ್ತು ಎಲ್ಲದಕ್ಕಿಂತಲೂ ಖಂಡಸಾಹಸವಾಗಿ ಅವೆಲ್ಲವನ್ನೂ ಆಧಾರಗಳನ್ನು ಹಿಡಿಯುವ ಕೇವಲ ಊಹಾಪೋಹದ ಮೂಲಕ್ಕೆ ಕಲ್ಪನೆಯೇ ಆಧಾರವಾಗಿದೆ. ಪ್ರತಿಯೊಂದನ್ನು ವಿದ್ಯುತ್ ಪ್ರಮಾಣದ ಅಳತೆಯ ಮಟ್ಟಕ್ಕೆ ತಿರುಗಿಸಲ್ಪಟ್ಟಿತ್ತು. ಕಡೆಗೆ ಆಪಾದನೆ ಅಕ್ರಮವಾದ ವ್ಯವಹಾರಕ್ಕೆ ಪಾಲುಗಾರರಾಗಿ ಅದಕ್ಕೆ ತಮ್ಮ ಒಪ್ಪಿಗೆಯ ಮುದ್ರೆಯನ್ನು ಒತ್ತಿದ್ದಾರೆ, ಯಾರ ದರ್ಶನವನ್ನು ಕ್ಷಣಮಾತ್ರ ಪಡೆದೆನೋ ಆ ಸ್ತ್ರೀಯ ದಿಟ್ಟತನ, ನಿಷ್ಕಪಟ ಸ್ವಭಾವವನ್ನೂ ನನ್ನತ್ತ ಮಿಂಚಿದ ಆ ಜ್ಯೋತಿರ್ಮಯ ಸತ್ಯವನ್ನು, ನಿರ್ಭಯ ನಿಷ್ಕಲ್ಮಷ ಹೃದಯದ ಮಗುವಿನಲ್ಲಿರುವ ವಿರಳ ತಿಳಿ ನೀಲಿಗಣ್ಣುಗಳ ನೋಟವನ್ನು ಇದಿರಿಗೆ ನಾನು ವಂಚನೆಯ ಕುಯುಕ್ತಿಗಳನ್ನು ಸಾಧಿಸುವಳು ಸಹಕಾರಿ, ಅಸಹ್ಯ ಹಾಗೂ 'ತಿರಸ್ಕಾರ ಕಳ್ಳಿಯ ಮೋಸಗಾತಿ ಮತ್ತು ಇತರರನ್ನು ಬಲಿಯೊಡ್ಡುವ ಮತ್ತು ತಾಂತ್ರಿಕ ಸೂತ್ರಗಳನ್ನು ಸೆರೆಹಿಡಿದ ಮಾಟಗಾತಿ ಎಂದು ಹೇಳಬಹುದಾದಂಥಾ ಆ Secret Doctrine - ಗ್ರಂಥಗಳನ್ನು ಬರೆದ ಲೇಖಕಿಯು 'ಓರ್ವ ಅಶ್ಲೀಲ ವಂಚಕಳೇ? ಹೀಗೆ ಯೋಚಿಸುತ್ತ ನಾನು ಆ ತಿಳಿಗೇಡಿತನದ ಬರಹಕ್ಕೆ ನನ್ನಲ್ಲಿಯೇ ನಕ್ಕು ತನ್ನ ಸ್ವಂತ ಬಂಧುವನ್ನು ಪುನಃ ಭೇಟಿಯಾದಾಗ ಎಷ್ಟು ಆದರವನ್ನು ತೋರುವೆವೋ ಅಷ್ಟೇ ನ್ಯಾಯವಾದ ತಿರಸ್ಕಾರದಿಂದ ಅವರು ಬರೆದ ವರದಿಯನ್ನು ಒಂದೆಡೆ ಎಸೆದು 'ಆ ಅಸಹ್ಯ ಹಾಗೂ ನಿರಾಧಾರದ ಸುಳ್ಳಿನ ಕಂತೆಯನ್ನು ಒಂದೆಡೆ ಇಟ್ಟೆನು. ಹೇಗೂ ಮರುದಿನವೇ ಎಳ್ಳು ಗಂಟೆಗೆ ಅಡೋಲ್ಫಿಯ ಡ್ಯೂಕ್ ಬೀದಿಯ ಥಿಯೋಸಫಿ ಪ್ರಕಟಣಾ ಕಚೇರಿಯತ್ತ ಇದ್ದೆನು, ಹೆಚ್. ಪಿ. ಬ್ಲಾವಟ್ಸ್ಕಿಯ ಆಪ್ತ ಗೆಳತಿ ಕೌಂಟೆಸ್ ವಾಕ್ಟ್ಮೀಸ್ಟರ್ ಇವರು ಅಲ್ಲಿ ಕೆಲಸದಲ್ಲಿ ನಿರತರಾಗಿದ್ದರು. ನಾನು Theosophical Society

ಇದರ ಕರಾರಿಗೆ ಸಹಿ ಹಾಕಿ ಅದರ ಸದಸ್ಯೆಯಾಗಿ ಸೇರಿದೆನು.

ನನ್ನ ಪ್ರಶಸ್ತಿಪತ್ರ (diploma) ವನ್ನು ಪಡೆದನಂತರ ನಾನು ಲಾನ್ಸಡೌನ್ ರಸ್ತೆಯ ಮನೆಗೆ ಹೋದಾಗ ಅಲ್ಲಿ ಬ್ಲಾವಟ್ಸ್ಕೀ ಒಬ್ಬಳೇ ಇದ್ದುದನ್ನು ಕಂಡೆನು. ನಾನು ನೆಟ್ಟನೆ ಅವಳನ್ನು ಸಮೀಪಿಸಿ ಮೊಣಕಾಲೂರಿ ಮಡಿತ್ತಿಕ್ಕೆನು. ಆದರೆ ಯಾವೊಂದು ನುಡಿಯನ್ನಾಡಲಿಲ್ಲ. "ನೀನು (ಥಿಯಾಸಫಿಕಲ್) ಸಂಘಕ್ಕೆ ಸೇರಿದೆಯೋ" ಎಂದು ಕೇಳಿದಳು. "ಹೌದು" ಎಂದು ಉತ್ತರಿಸಿದೆನು. "ನೀನು ಆ ವರದಿಯನ್ನು ಓದಿದೆಯಾ?" ಎಂದು ಕೇಳಿದಳು. "ಹೌದು", ಎಂದಂದೆನು. "ಸರಿ" ಎಂದು ಅವಳು ಉದ್ಗರಿಸಿದಳು. ನಾನು ಅಂತೆಯೇ ಮೊಣಕಾಲೂರಿ ಅವಳ ಕೈಗಳನ್ನು ನನ್ನ ಕೈಗಳಲ್ಲಿ ಬಿಗಿ ಹಿಡಿಯುತ್ತ ನೆಟ್ಟನೆ ಅವಳ ಕಣ್ಣುಗಳನ್ನು ನೋಡಿದೆನು. 'ನನ್ನ ಉತ್ತರವೇನೆಂದರೆ ನೀನು ನನ್ನನ್ನು ಶಿಷ್ಯಳಾಗಿ ಸ್ವೀಕರಿಸಿ, ಲೋಕದಲ್ಲಿ ನೀನು ನನ್ನ ಗುರುವೆಂದು ಸಾರುವ ಗೌರವವನ್ನು ನನಗೀಯುವಿಯೋ?" ಎಂದು ಕೇಳಿದೆನು. ಅವಳ ಗಂಭೀರ ಮುಖಮುದ್ರೆಯು ಸ್ವಲ್ಪ ಇಳಿಯಿತು, ಅಲ್ಲದೆ ಅವಳಲ್ಲಿ ಸಾಮಾನ್ಯವಾಗಿ ತೋರದ ಮಿಡಿಗಂಬನಿಯನ್ನು ಅವಳು ಉದುರಿಸಿದಳು; ಅನಂತರ ರಾಜಠೀವಿಯನ್ನು ಮೀರಿದ ಗಾಂಭೀರ್ಯದಿಂದ ಅವಳು ತನ್ನ ಕೈಯನ್ನು ನನ್ನ ತಲೆಯ ಮೇಲೆ ಇಟ್ಟಳು, "ನೀನು ಓರ್ವ ಕುಲೀನ ಮಹಿಳೆಯಾಗಿರುವೆ! ಆ ನಿಯಾಮಕ ಗುರುವು ನಿನ್ನನ್ನು ಆಶೀರ್ವದಿಸಲಿ" ಎಂದಳು.

ಅಂದಿನಿಂದ, ಎಂದರೆ 1889ರ ಮೇ 10ರಿಂದ ಇಂದಿನವರೆಗೆ, ಮತ್ತು ಅವಳು 1891ರ ಮೇ ೮ನೇ ದಿನ ಇಹವನ್ನು ತ್ಯಜಿಸಿದನಂತರ ಎರಡೂಕಾಲು ವರ್ಷಗಳ ವರೆಗೂ ನಾನು ಅವಳಲ್ಲಿಟ್ಟ ಶ್ರದ್ಧೆಯು ಸ್ವಲ್ಪವೂ ಕದಲಲಿಲ್ಲ; ಅವಳಲ್ಲಿಟ್ಟ ನನ್ನ ವಿಶ್ವಾಸವು ಸ್ವಲ್ಪವೂ ಅಲುಗಲಿಲ್ಲ. ನಾನು ಹೀನವಾದ ನನ್ನ ಆತ್ಮಸಾಕ್ಷಿಯನ್ನನುಸರಿಸಿ ಅವಳಲ್ಲಿ ಶ್ರದ್ಧೆಯನ್ನು ತಾಳಿದೆನು. ಅವಳೊಡನೆ ಹಗಲಿರುಳು ನಿಕಟವಾಗಿದ್ದು ಅವಳಲ್ಲಿ ಆದರಾಭಿಮಾನದಿಂದ ವರ್ತಿಸಿದೆನು. ವಿಧೇಯತೆಯಿಂದ ಓರ್ವ ಶಿಷ್ಯಳು ತನ್ನ ಗುರುವನ್ನು ಎಷ್ಟು ಆದರದಿಂದ ಕಾಣುವಳೋ ಅಷ್ಟೇ ನಿಷ್ಠೆಯಿಂದ ಅವಳನ್ನು ಕಂಡಿದ್ದೇನೆ. ನಮ್ಮ ಸಂಸ್ಥೆಯಲ್ಲಿ ಸಂಶಯವನ್ನಿಟ್ಟು ಯಾವ ಅದರ ಮೇಲೆ ಹೊರಿಸಲಾಗುವವೋ ಅಂತಹ ಪರಸ್ಪರ ಮಲಿನ್ಯಗಳು ಅದೊಂದು ವಿಘ್ನಕರವಾಗಬಲ್ಲದೇ? ಎಂದು ಪ್ರಶ್ನಿಸಿಕೊಂಡೆನು. "ಬರೀ ಅವಿವೇಕ, ಮತಾಂಧತೆ," ಎಂದು ಇಂದಿನ ಆಂಗ ಜನ ಪರಿಹಾಸ್ಯ ಮಾಡುವರು, ಹಾಗೆಯೇ ಆಗಲಿ; ನಾನು ಹಾಗಿದ್ದು ನೋಡಿದ್ದೇನೆ, ಇನ್ನು ನನಗೆ ಕಾಯಲಿಕ್ಕೆ ಸಾಧ್ಯವಿಲ್ಲ!

ನಾನು ಬ್ರಹ್ಮಜ್ಞಾನ (Theosophy) ಮತಕ್ಕೆ ತಲೆ ಕೆಳಗೆ ಮಾಡಿ ಸಮ್ಮುಖಿದೆನೆಂದೂ ನನ್ನ ಉತ್ಸಾಹವು ನನ್ನನ್ನು ಕೊಂಡು ಹೋದ ಕಡೆಯೆಲ್ಲಾ ನಾನು ಹೋದೆನೆಂದೂ ಜನರು ಹೇಳಿದರು.

ನಾನು ಅಂತಿಮಗೊಳಿಸಲು ಅಷ್ಟು ಬೇಗನೆ ನಿರ್ಧರಿಸಿದ್ದನ್ನು ನೋಡಿದಾಗ ಆ ಆರೋಪಣೆಯು ನಿಜವೇ ಇರಬಹುದು. ಆದರೆ ಅದು ಅತಿ ಉನ್ನತ ಮನೋಜ್ಞಾನ ಮಟ್ಟದ ಪ್ರೀತ್ಸವನ್ನು ಸರಿಯಾಗಿ ಸ್ವೀಕೃತವಾವಸ್ಥೆಯಲ್ಲಿ ಚೋ ಕಂಡ ಕನಸನ್ನು ಬಹು ಹಿಂದಿನಿಂದಲೇ ಓಯ್ಯೋರಂಗವಾದ ಒಂದು ಸಾಧನೆಯ ಪರಿಣಾಮವಾಗಿತ್ತು. ಹೇಗೂ ನಾನು ನಿರೀಕ್ಷಿಸಿದುದಕ್ಕಿಂತ ಹೆಚ್ಚಾಗಿ ನಾನು ಮೊದಲ ಬಾರಿಗೆ ಸನ್ಮುಖಿಸಿದಂದಿನಿಂದ (ಮಾನಸಿಕ ಪರಿಸ್ಥಿತಿಯನ್ನು) ಹೆಚ್ಚಿರುವೆನೆಂಬುದನ್ನು ಇಲ್ಲಿ ಹೇಳುತ್ತಿದ್ದೇನೆ, ಕ್ಷಣಕಾಲ ಮಿಂಚಿ ಮಾಯವಾಗುವಂತೆ ಸತ್ಯವೆಂದು ತೋರಿದ ಸಿದ್ಧಾಂತಗಳನ್ನು ಸರಿಯಾದ ಜ್ಞಾನವನ್ನು ನಿಜಕ್ಕೂ ಪಡೆದೆನು, ವೈಯಕ್ತಿಕ ಪ್ರಯೋಗಶೀಲತೆಯಿಂದಲೇ ನಾನು ಜೀವಾತ್ಮನು ಇದ್ದಾನೆಂಬುದನ್ನು ತಿಳಿಯುವೆನು, ನನ್ನ ಆತ್ಮವು ನಾನಲ್ಲದೆ ನನ್ನ ದೇಹವು ಅಲ್ಲ. ಆ ಆತ್ಮವು ತನಗೆ ಬೇಕಾದಾಗ ಆ ದೇಹವನ್ನು ಬಿಟ್ಟು ಹೋಗಬಹುದು. ಅಶರೀರವಾಗಿಯೂ ಇರಬಹುದು, ಮತ್ತು ಗುರುಗಳಿಂದ ಉತ್ತಮವಾದುವನ್ನು ಕಲಿತು ಕಡೆಗೆ ಆ ರೀತಿ ಕಲಿತುದನ್ನು ಪುನಃ ಒಂದಕ್ಕೆ ದೈಹಿಕ ಮೆದುಳಿನೊಳಗೆ ಅದ್ದಲೂಬಹುದು. ಹೀಗೆ ಸ್ವಪ್ರಜ್ಞತೆಯನ್ನು ಒಂದು ಸ್ಥಿತಿಯಿಂದ ಇನ್ನೊಂದಕ್ಕೆ ಎಂಬಂತೆ ವರ್ಗಾಯಿಸುವುದು ನಿಧಾನವಾಗಿ ನಡೆಯುತ್ತಿರುವುದು. ದೇಹ ಮತ್ತು ಮೆದುಳು ಕ್ರಮೇಣವಾಗಿ ಈ ಸ್ಥಿತಿಯಲ್ಲಿ ಒಂದಕ್ಕೊಂದು ಸಂಬಂಧವನ್ನು ಬೆಳೆಸಲು ಅದೇ ಕಟ್ಟಕಡೆಗೆ "ಜೀವಾತ್ಮದ ಸಾಕ್ಷಾತ್ರೂಪ" ಎಂದೆನಿಸುವುದು, ಅದರ ಬಗ್ಗೆ ನನ್ನ ಸ್ವಂತ ಅನುಭವವು ಇತರರ ಪ್ರಭಾವಿತರ ಅನುಭವದೊಡನೆ ಹೋಲಿಸಿದಾಗ ಎಷ್ಟೇ ಅಪೂರ್ಣವಾಗಿ ಛಿದ್ರಛಿದ್ರವಾಗಿದ್ದರೂ ಅದು ಕುತೂಹಲಕಾರಿ ಸರ್ವವಾಗಿಯೂ ನನ್ನ ಬಿಟ್ಟಿತ್ತು. ಮೊದಲ ಬಾರಿಗೆ ಮಾತಾಡಲು ಕಲಿಯುವ ಒಂದು ಮಗುವಿನ ಪ್ರಯತ್ನದಂತೆ ತೋರುವುದು, ಸ್ವಪ್ರಜ್ಞತೆಯು ಮೆದುಳನ್ನು ಆಕ್ರಮಿಸಿದ್ದರೂ ಅದು ಒಂದು ಆವರಣದೊಳಕ್ಕೆ ಹುದುಗಿದ ಸ್ಥಿತಿಯಿಂದ ಬಿಡಿಸಿಕೊಂಡು ಸ್ಥೂಲಾಕಾರವನ್ನು ಹೊಂದಿದಾಗ ಅದು ಹೆಚ್ಚಿನ ಚಟುವಟಿಕೆಯಿಂದ ಕೂಡಿರುತ್ತದೆ. ಹೆಚ್.ಪಿ. ಬ್ಲಾವಟ್ಸ್ಕಿಯು ಹೆಸರಿಸಿದ ಮಹಾತ್ಮರು ಇನ್ನೂ ಇರುವರೆಂದು ಹೇಳಲಾಗಿದೆ. ಅವರು ನಮ್ಮ ಮೇಲೆ ಪ್ರಭಾವವನ್ನು ಬೀರುತ್ತಲೇ ಇದ್ದಾರೆ; ಜ್ಞಾನವನ್ನು ಹೊಂದಿದ್ದಾರೆ, ಆದರೆ ಆ ಸ್ವಾಭಾವಿಕ ಶಕ್ತಿಯು ಎದುರಿಗೆ ನಮ್ಮ ಗರ್ವಮನ ಜ್ಞಾನವೆಲ್ಲವೂ ಬರೀ ಒಂದು ಶಿಶುವಿನ ಆಟದಂತೆ ಎಂದೆನಿಸಬೇಕಾಗಿದೆ, ಇವೆಲ್ಲವನ್ನೂ ಇತರ ಹಲವು ವಿಚಾರಗಳೊಡನೆಯೇ ನಾನು ಕಲಿತೆನು, ಆದರೂ ನಾನು ಕೇವಲ ರಹಸ್ಯಶಾಸ್ತ್ರ ಶಾಲೆಯಲ್ಲಿ ಕೆಳದರ್ಜೆಯ ಪೂರ್ವ ವಿದ್ಯಾರ್ಥಿನಿಯಾಗಿರುವೆನು, ಆ ಕಾರಣದಿಂದ ನಾನು ಮೊದಲ ಬಾರಿಗೆ ಇದಕ್ಕೆ ಅಂದು ಹಾರಿ ಧುಮುಕಿದುದು ಸಾರ್ಥಕವಾಗಿದೆ, ಮಾತ್ರವಲ್ಲ, ನನ್ನ ಅಂತರ್ಜ್ಞಾನವೂ ನನಗೆ ಸತ್ಯವನ್ನೆ ತೋರಿಸಿತು!

ನಾನು ನಡೆಯುತ್ತಿರುವ ಜ್ಞಾನಾನ್ವೇಷಣೆಯ ಹಾದಿಯು ಅದರ ಹೆಜ್ಜೆಗಳನ್ನು ಅನುಸರಿಸಲು ಮಾಡುತ್ತಿರುವ ಮೌಲ್ಯವನ್ನು ಯಾರಾರಿಗೆ ಕಟ್ಟಲು ಸಾಧ್ಯವಿದೆಯೋ ಅವರೆಲ್ಲರಿಗೂ ತಿಳಿಯಲು ತೆರೆಯಲ್ಪಟ್ಟಿದೆ. ಪಾರಮಾರ್ಥಿಕ ಸತ್ಯಾರ್ಜನೆಗಾಗಿ ಸರ್ವವನ್ನೂ ತ್ಯಾಗಮಾಡಲು ಸಿದ್ಧರಾಗಿದ್ದು ಹಾಗೆ ಗಳಿಸಲಾದ ಅದ್ವೈತ ಜ್ಞಾನದ ಸತ್ಯವನ್ನು ತನ್ನ ಸ್ವಾರ್ಥಕ್ಕಾಗಿ ಇಟ್ಟುಕೊಳ್ಳದೆ ಮಾನವ ಸೇವೆಗಾಗಿ ಅಲ್ಲಿ ಅವರು ತೆರಬೇಕಾದ ಮೌಲ್ಯವಾಗಿದೆ.

ಆ ವರ್ಷದ ಜೂನ್ 23ರ Reformer ಪತ್ರಿಕೆಯಲ್ಲಿ The Secret-Doctrine-ಗ್ರಂಥದ ಮೇಲೆ ಒಂದು ವಿಮರ್ಶೆ ಈ ಕೆಳಗಿನಂತೆ ಇತ್ತು. ಅದರಲ್ಲಿ ಹೇಳಿದ ಸೂಕ್ತಿಗಳ ಪ್ರಧಾನ ಅಂಶಗಳನ್ನು ಎತ್ತಿ ತೋರಿಸಿ ಅರಗಿಸಿಕೊಳ್ಳಲಾಯಿತೆಂಬುದು ಆ ಪ್ರತಿಪಾದನೆಯಿಂದಲೇ ವ್ಯಕ್ತವಾಗುತ್ತದೆ. (ಏಳು ರೂಪಾಂತರಗಳಲ್ಲಿ ವಾಸ್ತವಿಕ ವಿಜ್ಞಾನಕ್ಕೆ ನಾಲ್ಕು ಮಾತ್ರ ತಿಳಿದಿತ್ತೆಂದೂ ಇತ್ತೀಚೆಗೂ ಅದಕ್ಕೆ ಮೂರು ಮಾತ್ರ ತಿಳಿದಿತ್ತೆಂದೂ ಹೇಳಿದ್ದರಲ್ಲಿ ಒಂದು ತಪ್ಪು ಇದೆ. ಆ ನಾಲ್ಕು ರೂಪಾಂತರಗಳು ಕೆಳಗಿನ ಮಟ್ಟದ ವಾಸ್ತವಿಕ ಜ್ಞಾನದ ವಿವಿಧ ವಿಭಾಗಗಳ ರೂಪಾಂತರಗಳಾಗಿವೆ.)

೧೯ನೇ ಶತಮಾನದ ಆಂಗ್ಲರು ಆ ಗ್ರಂಥವನ್ನು (Secret Doctrine) ಬರೇ ಮೇಲಿಂದ ಮೇಲೆ ನೋಡಿದರೆ ಅವರು ಬಹುಶಃ ಏನೂ ತಿಳಿಯದೆ ಹಿಂದಕ್ಕೆ ನೂಕಲಿಕ್ಕೆ ಸಾಕು, ಎಂದು ನಾನು ವಿಮರ್ಶಿಸುತ್ತಾ ಹೇಳಿದೆನು, "ದೂರದರ್ಶಕ, ಸೂಕ್ಷ್ಮದರ್ಶಕ ಯಂತ್ರಗಳು ಮತ್ತು ಅರಂಗಿಗಳಿಂದ ಪಾಶ್ಚಾತ್ಯ ವಿಜ್ಞಾನವು ಹೆಜ್ಜೆ ಹೆಜ್ಜೆಗೂ ಅನುಭವಗಳನ್ನು ಮೇಲಿಂದ ಮೇಲೆ ಕೂಡಿಡುತ್ತಾ ಪ್ರಕೃತಿಯನ್ನೇ ಪ್ರಶ್ನಿಸುತ್ತಿರುವದೆ, ಎಂದರೆ ನೀರಳತೆ ಗುಂಡಿಗೆ ಅಳೆಯಲಾಗದ ಆಳಕ್ಕೆ ಮತ್ತು ಏಣಿಯಿಂದ ಅಳೆಯಲಾಗದ ಎತ್ತರಕ್ಕೆ ಅನ್ವೇಷಿಸುತ್ತಲಿದೆ. "ಹೇಗೆ" ಮತ್ತು "ಏಕೆ" ಎಂಬ ಪ್ರಶ್ನೆಗಳಿಗೆ ಉತ್ತರವು ವ್ಯಾಪಕವೂ ವಿವರಣೆಯುಳ್ಳವೂ ಆಗಿದ್ದರೂ ಅವಕ್ಕೆ ಕೊಟ್ಟ ಕಾರಣಗಳು ಇನ್ನೂ ಕತ್ತಲೆಯಲ್ಲಿಯೇ ಹುದುಗಿದ್ದು ನಮ್ಮ ತಿಳುವಳಿಕೆಗೆ ಎಟುಕದೆಯೇ ಇವೆ. ಪೌರಸ್ತ್ಯ ವಿಜ್ಞಾನವು ಮನಸ್ಸಿನ ಅಗಾಧ ಶಕ್ತಿ ವಿದ್ಯುತ್ತುಗಳನ್ನು ಮಾತ್ರ ಅಂತಹ ಅನ್ವೇಷಣೆಗೆ ವೈಜ್ಞಾನಿಕ ಸಲಕರಣೆಯಾಗಿ ಉಪಯೋಗಿಸುತ್ತದೆ. ವ್ಯಾವಹಾರಿಕ ಮಟ್ಟದಲ್ಲಿ ಮಾಯೆಯು ಮನಸ್ಸಿಗೆ ಮಬ್ಬು ಕವಿಸುವಂತೆ ಮಾನಸಿಕ ಮತ್ತು ಪಾರಮಾರ್ಥಿಕ ಅಂತಸ್ಸಿನಲ್ಲಿ ಅದು ಭೌತಿಕ ಸಾಧನೆಗಳಿಗೆ ಕಾರಣವಾಗಿ ಸುತ್ತುತ್ತಿರುತ್ತದೆ. ಅಲ್ಲಿಯೂ ನಿಗೂಢತೆ ಮಾತ್ರ ಎದುರು ತೋರುತ್ತದೆ. ಅಲ್ಲಿ ಇರುವ ನಿಜವಾದ ಅಸ್ತಿತ್ವಕ್ಕೆ ಈ ದೃಗ್ಗೋಚರ ವಿಶ್ವವು ಬರೇ ಒಂದು ಛಾಯೆಯಾಗಿದೆ.

ಇಂಥಾ ತಾತ್ವಿಕ ಸಂಶೋಧನೆಗೆ ಸಾಮಾನ್ಯವಾಗಿ ಈ ಮಾ

ನಮ್ಮ ಶರೀರವು ಸಿದಗಿಸುವದಕ್ಕಿಂತ ಹೆಚ್ಚಿನ ಮಾನಸಿಕ ಪರಿಶಕ್ತಿ
ಯು ಅವಶ್ಯವಾಗಿ ಬೇಕಿದೆ. ಪಾಶ್ಚಾತ್ಯ ಮತ್ತು ಪೌರಸ್ತ್ಯ ತತ್ವಶಾ
ಸ್ತ್ರಗಳಲ್ಲಿರುವ ವ್ಯತ್ಯಾಸವು ಇಲ್ಲಿಂದ ಪ್ರಾರಂಭವಾಗುತ್ತದೆ. ವಿಶ್ವದ
ಭೌತಿಕ ಜ್ಞಾನವನ್ನು ಗಳಿಸಲು ವಿಜ್ಞಾನವು ಪರಿಶೋಧಿಸಿ ಮಾಡಿದ
ಸಲಕರಣೆಗಳ ಸಹಾಯವನ್ನು ಪಡೆದ ಪಂಚೇಂದ್ರಿಯಗಳಿಗೆ ಸಾಕಾ
ಗಬಹುದು. ಹಲವು ಬಾರಿ ನಾವು ತಪ್ಪುತ್ತೇವಾದರೂ ನಮ್ಮ ಕೇ
ಳಿಸುವ, ನೋಡಿಸುವ, ರುಚಿಸುವ, ಘ್ರಾಣಿಸುವ ಮತ್ತು ಸ್ಪರ್ಶಿಸುವ
ಈ ನಿತ್ಯ ನಿರತವಿಹ ಇಂದ್ರಿಯಗಳು ಜ್ಞಾನಾರ್ಜನೆಗೆ ಇರತಕ್ಕಂ
ಥ ಉತ್ತಮ ತತ್ವದರ್ಶಕಗಳಾಗಿವೆ. ನಮ್ಮ ಜ್ಞಾನಕ್ಕೆ ಹಿಡಿಸದ
ಮತ್ತು ಈ ಅಸ್ತಿತ್ವಕ್ಕೆ ಸಂಬಂಧಿಸಿದ ಅವರ ಪರಿಶೋಧನೆಯು
ಸಾಗಿರುವ ಉತ್ಪತ್ತಿಗನುಗುಣವಾಗಿ ತೀರಾ ನಿಷ್ಪ್ರಯೋಜಕವಾಗಿ ತೋರು
ತ್ತದೆ. ಉದಾಹರಣೆಗೆ ಹೇಳುತ್ತೇವಾದರೆ, ಬಣ್ಣವೆಂದು ನಮಗೆ
ತಿಳಿದಿರುವುದು ಕಣ್ಣಿನ ಕಲಿಯ ಹಿಂದಿನ ನರಗಳ ಪರದೆ-retina
ತಾಗುವ ಸೂಕ್ಷ್ಮ ಪದರುಗಳು ತೆರೆಯು ಸ್ಪಂದನದ ಪುನರಾವರ್ತ
ನೆಯು ಹೆಚ್ಚೆಂದರೆ 759 trillions, ಮತ್ತು ಕಡಿಮೆಯೆಂದ
ರೆ 436 trillions ಸ್ವರ ಕಂಪಗಳಂತೆ ಬಡಿಯಲು ಆ ಅಲೆ
ಗಳನ್ನು ಮೆದುಳು ಆಯಾ ಬಣ್ಣವಾಗಿ ಪರಿವರ್ತನ ಕಾರ್ಯ ಅದ
ನ್ನು ಮನಸ್ಸಿಗೆ ತಿಳಿಸುತ್ತದೆ. (436 trillions ಬಾರಿ ಸ್ಪಂದಿಸು
ವ ಆ ನರದ ಒಂದು ತುದಿಯಲ್ಲಿ ಕೆಂಪಾಗಿ ಪರಿವರ್ತನಗೊಳ್ಳು
ವುದು; ಇನ್ನೊಂದು ತುದಿಯಲ್ಲಿ ಆ ರೀತಿ ಏಕೆ ಆಗುವುದಿಲ್ಲ
ವೆಂದು ಹೇಗೆಂದು ನಮಗೆ ತಿಳಿಯದು. ನಾವು ಈ ವಿಷಯ ಬರೆಯು
ಬಹುದಲ್ಲದೆ ವಿವರಿಸಲಿಕ್ಕೆ ಸಾಧ್ಯವಿಲ್ಲ.) ಆ ಸ್ಪಂದನ-vibration-
ಇದಕ್ಕೆ ಹೊಂದಿಕೊಳ್ಳುವ ನಮ್ಮ ಶಕ್ತಿಯು ಆ ಆಕಾಶದ್ರವ್ಯ,
ether ಇದರ ಸ್ವರಸ್ಪಂದನ ನಿಯಮವನ್ನು ಕಡಿಮೆ ಮಾಡ
ಲಾಗುವುದಿಲ್ಲ. ನಮಗೆ ಹೆಚ್ಚು ಮತ್ತು ಕಡಿಮೆ ಸ್ವರಸ್ಪಂದನ
ಗಳ ಸಂಬಂಧವೇ ಇಲ್ಲ; ಆದರೆ ನಮ್ಮ ನಯನೇಂದ್ರಿಯವು
ತುಂಬಾ ತೀಕ್ಷ್ಣವಾಗಿದ್ದರೆ ಮಾತ್ರ ನಾವು ಕುರುಡರಾಗಿ ಕಾಣಲಾ
ರದೆ ಇರುವುದನ್ನೆಲ್ಲ ಕಾಣಲು ಶಕ್ತರಾಗುತ್ತೇವೆ. ಇದೇ ಭಾವ
ನೆಯನ್ನು ಅನುಸರಿಸಿದರೆ ವಸ್ತುಗಳು ನಮಗೆ ತಿಳಿಯು
ಹೇ ಇರುವ ರೀತಿಯಲ್ಲಿಲ್ಲ ಇರಬಹುದು; ಆದರೆ ನಮ್ಮ ಜ್ಞಾನೇಂ
ದ್ರಿಯಗಳು ಅವುಗಳ ವಿವಿಧ ರೂಪ ಆಕಾರವನ್ನರಿಯಲು ಸ
ಮರ್ಥವಾಗಿಲ್ಲ. ಈ ಸಂದರ್ಭದಲ್ಲಿ ಪೌರಸ್ತ್ಯ ಸಂತನೊಬ್ಬನು
ಮುಂದೆ ಬಂದು ಏನನ್ನುವನೆಂದು ನೋಡುವುದು ಸೂಕ್ತವಿದೆ:—

"ನೀನು ಇರ 'ಬಹುದು' ಎಂದು ಹೇಳುತ್ತಿರುವುದು
ಇದಾಗಿದೆ. ಮೀನಿನ ಕಣ್ಣುಗಳನ್ನು ಮೀರಿ ಇರುವ ನಿನ್ನ ಕಣ್ಣು
ಗಳು ಎಷ್ಟು ಉತ್ತಮವಾಗಿವೆಯೋ ಅದೇ ಪ್ರಮಾಣದಲ್ಲಿ ನಾವು

"ನಮ್ಮ ಇಂದ್ರಿಯಗಳನ್ನು ಪೂರ್ಣ ಸ್ಥಿತಿಗೆ ತಂದು ಬೆಳೆಸಿ ಕೊಳ್ಳಬಲ್ಲೆ
ವೆ. ನೀನು ಭೌತಿಕ ಮಟ್ಟದಲ್ಲಿ ಅದೆಷ್ಟು ಖಚಿತವಾಗಿ ನಿನ್ನ ಪಂಚೇಂ
ದ್ರಿಯನ್ನುಪಯೋಗಿಸುವೆಯೋ ಅದೇ ರೀತಿಯಲ್ಲಿ ಪಾರಮಾರ್ಥಿಕ ವಿಚಾರಗಳ
ಅನ್ವೇಷಣೆಗೆ ನಾವು ಮಾನಸಿಕ ಮತ್ತು ಆಧ್ಯಾತ್ಮಿಕ ಶಕ್ತಿಯನ್ನು ಬೆಳೆಸಿ
ಕೊಂಡಿದ್ದೇವೆ. ಈ ವಿಚಾರದಲ್ಲಿ ನಿನ್ನ ಜ್ಞಾನವು ಹೇಗೆ ಅಲೌಕಿಕವ
ಲ್ಲವೋ ಅದೇ ರೀತಿ ಇಂಥ ಸಾಧನೆಗಳೂ ಅಲೌಕಿಕವಲ್ಲ. ಮಾನಿಗೆ ಉನ್ನ
ತಾವಸ್ಥೆಯಲ್ಲಿರತಕ್ಕದ್ದೆಲ್ಲ ಬಳಕೆಯಬಹುದಾದರೂ ನಾವು ಈ ಅದ್ಭು
ತ ರೀತಿಯ ಪರಿಸ್ಥಿತಿಯ ಬಗೆ ಆಳವಾಗಿ ಪರ್ಯಾಲೋಚಿಸಲಾರೆವು!
ನಿಮಗೆ ಹೇಗೆ ಲೌಕಿಕ ಗತಿವಿಧಿಗಳು ವಿಶದವಾಗಿ ತಿಳಿದಿವೆಯೋ
ಅದೇ ರೀತಿ ಪಾರಮಾರ್ಥಿಕ ವಿಚಾರಗಳ ಬಗ್ಗೆ ಸ್ವಾನುಭವದಿಂದ ತಿಳಿ
ದಿದ್ದೇವೆ; ನಾವು ಹೊಂದಿರುವ ಶಕ್ತಿಯು ಅಲೌಕಿಕವಾದುದಲ್ಲ; ಅದು
ಎಲ್ಲ ಮಾನವ ಜೀವಿಯಲ್ಲೂ ಹುದುಗಿದ್ದು ಜನಾಂಗವು ಪ್ರಗತಿಯನ್ನು ಸಾಧಿ
ದಂತೆಯೇ ಆ ಚಿತ್ಶಕ್ತಿಯು ವಿಕಾಸಗೊಳ್ಳುತ್ತದೆ. ನಾವು ಮಾಡಬೇ
ಕಾದ್ದೇನೆಂದರೆ ನಿಮಗೆ ಹೇಗೋ ಹಾಗೆಯೇ ನಮಗೂ ಸ್ಪಷ್ಟವಿರುವ
ಒಂದು ವಿಧಾನದಿಂದ ನಮ್ಮ ನೆರೆಯವರಿಗಿಂತಲೂ ತ್ವರಿತವಾಗಿ ನಾ
ವು ಆ ಶಕ್ತಿಗೆ ಉತ್ತೇಜನವನ್ನೀಯಬೇಕು. ವಸ್ತುವು ಎಲ್ಲೆಲ್ಲೂ
ಇದೆ. ಆದರೆ ಅದು ಹಲವು ರೀತಿಗಳಲ್ಲಿ ವಿವಿಧ ರೂಪವನ್ನು ಹೊಂದಿ
ಇದೆ! ಅವುಗಳಲ್ಲಿ ನಿನಗೆ ನಾಲ್ಕು ಮಾತ್ರ ತಿಳಿದಿದೆ; ಇತ್ತೀಚಿನ ವರೆ
ಗೂ ಮೂರು ಮಾತ್ರ ತಿಳಿದಿತ್ತು. ಅದರ ಉನ್ನತ ಸ್ಥಿತಿಗಳಲ್ಲಿ ಕಾರ್ಯ
ಗಳು ನಡೆಯುವೆ; ಅವುಗಳ ಪರಿಣಾಮವನ್ನು ಕೆಳಗಿನ ಸ್ಥಿತಿಗಳಲ್ಲಿ
ನೀನು ನೋಡುತ್ತಿ! ಈ ಕಾರ್ಯಕಾರಣಗಳನ್ನು ತಿಳಿಯಲು ನೀನು
ಉನ್ನತ ಅಂತಸ್ತುಗಳ ವಿಶದವಾಗಿ ಜ್ಞಾನವನ್ನು ಪಡೆಯಲು
ತಕ್ಕ ಸಾಮರ್ಥ್ಯವನ್ನು ಬೆಳೆಸಬೇಕು---."

ಆದರ್ಶನರತರ ಜಗತ್ತಿನ ಉತ್ಕ್ರಾಂತಿಯ ಸುರುಳಿಯು ಎಂ
ತೆಂಬುದರ ಸೂಕ್ಷ್ಮ ವಿವರಣೆಯನ್ನು ನಾನು ಈ ರೀತಿಯಾಗಿ ಕೊ
ಟ್ಟೆನು: "ಈ ವಿಶ್ವದ ವಿಶಾಲ ನಾಟಕದಲ್ಲಿ ಮಾನವನ ಪಾತ್ರ
ವೇನು? ಈ ವ್ಯವಸ್ಥಿತ ಜಗತ್ತಿನ ಬಹುಭಾಗವು ಮಾನವ
ನಿಂದ ನೆಲೆಸಲ್ಪಟ್ಟಿದ್ದರೂ ಅದರಲ್ಲಿ ಅವನು ಮಾತ್ರ ಜೀವಿ
ಸುವುದಿಲ್ಲವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ವಾಸ್ತವಿಕ
ಮಟ್ಟದಲ್ಲಿ ಎಲ್ಲೆಲ್ಲೂ ಇರುವ ಜೀವಿಗಳ ಬಗೆ ವಿಜ್ಞಾನವು ತೋ
ರಿಸುವಂತೆ ಪ್ರತಿಯೊಂದು ಹನಿಯಲ್ಲೂ ಜೀವಿಗಳು ಮತ್ತು ಪ್ರತಿ
ಎಲೆ ಮತ್ತು ಹುಲ್ಲಿನ ಕಡ್ಡಿಯಲ್ಲೂ ಜೀವಿಯ ಅಂಶವು ಸ್ಪಂದಿ
ಸುವುದು. ಅಂತೆಯೇ The Secret-Doctrine- ಎಂಬ
ಗ್ರಂಥವು ಈ ಅಸ್ತಿತ್ವದ ಉನ್ನತ ಮಟ್ಟದಲ್ಲಿರುವ ಜೀವಿಗಳನ್ನು
ಕುರಿತಾಗಿ ಮತ್ತು ಪ್ರತಿಯೊಂದು ಜೀವಿಯೂ ಅದರ ಆವರಣಕ್ಕೆ
ತಕ್ಕಂತೆ ಎಲ್ಲಾ ಸ್ಥಳಗಳ ಜೀವಾಂಶದಿಂದ ಪುಲಕಿತಗೊಂಡು

ಮತ್ತು ಎಲ್ಲಿಲ್ಲಿ ಬದಲಾವಣೆಯಾಗುವ ಪರಿಸ್ಥಿತಿ ಮಾತ್ರವಲ್ಲದೆ ಸ್ಥಾ ವ್ಯಾ ಇಲ್ಲವೆಂಬುದನ್ನು ನಿವೇದಿಸಿದೆ! ಈ ಆರಂಭ ಜೀವಿಗಳಲ್ಲಿ ಕೆಲವು ಮನುಷ್ಯ ಜಾತಿಯನ್ನು ಹೊಂದುವಂತೆ ವಿಕಾಸಗೊಳ್ಳಲು ಕೆಲವು ಅವುಗಳ ಸ್ಥಳಗಳಿಂದ ಬೇರ್ಪಟ್ಟು ಮಾನವ ರೂಪದಿಂದ ಬೇರೆ ಜಾತಿಯ ರೂಪವನ್ನು ಹೊಂದುವುದು. ಮಾನವನು ವಸ್ತು ಕಾಲು ಹೆಚ್ಚಿನ ಜೀವಕಳೆಯನ್ನು ಹೊತ್ತವನಿದ್ದು ಉಳಿಸಲಾಗಿದೆ, ಅವುಗಳಲ್ಲಿ ನಾಲ್ಕು ಬಹು ಬೇಗನೆ ಅಳಿವಾ ಅವನು ಶಿಕ್ಷಣಾಂತರ ನಾಶವಾಗುವುದಾದರೆ ಉಳಿದ ಮೂರು ತನ್ನ ಉನ್ನತ ಅಸ್ತಿತ್ವ ಮತ್ತು ನಿಜವಾದ ವ್ಯಕ್ತಿತ್ವವನ್ನು ತೋರಿಸಲು ಅವು ಅಂತೆಯೇ ನಿರ್ನಾಮವಾಗದೇ ಉಳಿದು ಚಿರಂಜೀವಿಯಾಗಿಂದು ಎಳೆಸಲ್ಪಡುವುದು. ಇದು ಅಹಂಕಾರವನ್ನು ಒಳಗೊಂಡಿರುವುದು, ಈ ಅಹಂಭಾವವು ಹಲವು ಜನ್ಮಗಳ ಮೂಲಕ ಹಾದು ಕಡೆಗೆ ಹಾಗೆ ಹಾಯುವಾಗ ಜೀವನದ ವಿಚಾರವಾಗಿ ತಿಳಿಯುತ್ತಾ, ಕರ್ಮ ವಿಧಿನಿಯಮವು ಹೊಳಗಡೆಗೆ ಅದರ ಮುಕ್ತಿಗೆ ಅದಾಗಿಯೇ ತೆರಗುತ್ತಾ, ಕಾಯ್ಯಾಲಿರುವ ಬಿಳಿಯನ್ನು ಬಿತ್ತಲು ಬೀಜವನ್ನು ಅದಾಗಿಯೇ ಬಿತ್ತುತ್ತಾ, ಅದರ ಅವಿಶ್ರಾಂತ ಚಿಂತನೆಗಳಿಂದ ಅದರ ಹಣೆಬರಹವನ್ನು ಅದಾಗಿಯೇ ಬರೆಯುತ್ತಾ, ಮತ್ತು ಅದು ನಿರ್ಮಿಸಿದ ಬಂದು ಭಾರವನ್ನು ಎತ್ತಲು, ಅದು ಸಂಗ್ರಹಿಸಿದ ಬಂದು ಗಂಟನ್ನು ಹೊರಲು, ಅದು ತಿರುಗುವುದಕ್ಕಾಗಿ ನೆತ್ತಿದ ಕಾಲ್ಕನ್ನು ಹಿಟ್ಟಲು, ಮತ್ತು ಅದು ಅಗಿದ ಬಂದು ಕಟ್ಟೆಯನ್ನು ಮುಟ್ಟಲು ಅಲ್ಲಿತೆಯೇ ಇಲ್ಲದ ಕಾಲಮಾನದಲ್ಲಿ ಮತ್ತು ವಿಶಾಲ ವ್ಯಾಕಾಶದಲ್ಲಿ ಯಾರಿಂಬನನ್ನು ಎಲ್ಲೂ ದೊರೆಯದಾಯಿತು,"

ಇದರನಂತರ ಪಾಶ್ಚಾತ್ಯ ವಿಜ್ಞಾನವು ಪೌರಾತ್ಯ ಜ್ಞಾನದ ಮೇಲೆ ಬೀರಿದ ಪ್ರಭಾವವನ್ನು ಕುರಿತಾಗಿ ಹೇಳಿದ ಕಡೆಯ ಮಾತುಗಳು ಈರೀತಿಯಿದ್ದವು: "ವಿಜ್ಞಾನವು ಈಗ ಜ್ಞಾನದ ಎಲ್ಲಾ ಅಂಗಗಳನ್ನು ಆವರಿಸಿ ಹಿಂದಿನ ಸಾಧನೆಗಳನ್ನೆಲ್ಲ ಚಿಕ್ಕದಾಗಿ ಮಾಡುತ್ತಲೇ ಇದೆಯೆಂಬಂತೆ ಇತ್ತೀಚೆಗಿನ ಕೆಲವು ಪ್ರಯೋಗ ಪರೀಕ್ಷೆಗಳು ರಹಸ್ಯ ಶಾಸ್ತ್ರ ಸೂತ್ರಗಳನ್ನು ಅಲ್ಲಿಲ್ಲಿ ಸಾಬೀತುಪಡಿಸಿದೆಯೆಂಬುದು ಕುತೂಹಲದಾಯಕವಾದ ವಿಷಯವಾಗಿದೆ, ವಿಜ್ಞಾನದ ಅಧೀನದಲ್ಲಿ ಅಡಗಿದ ಶಕ್ತಿಯೆಲ್ಲ ಈಗ ಹೆಚ್ಚೇನಿಲ್ಲವಾದರೂ ಅದು ಭೌತಿಕ ಶಕ್ತಿಯನ್ನು ಇದಾಗಲೇ ಹಿಡಿಯಲೆತ್ನಿಸಿ ಅದರ ಕೈಗೆಳತು ನಡೆಯುತ್ತಾ ಇದೆ, ಈ ವಿಜ್ಞಾನವು ಭೌತಿಕ ಶಕ್ತಿಗಳನ್ನು ತನ್ನ ಹಿಡಿತಕ್ಕೊಳಪಡಿಸಿ ಅದೆಷ್ಟು ಬೇಗನೆ ಅವುಗಳನ್ನು ಬಿಗಿಹಿಡಿಯುತ್ತದೆ? ಇಂದಿನ ಸಾಮಾಜಿಕ ಕ್ರಮವು ಬದಲಾವಣೆಯಾಗುವ ಪರಿಸ್ಥಿ ಹಾಗಾಗಲಾರದೆಂದು ನಿರೀಕ್ಷಿಸುವ; ಏಕೆಂದರೆ ಆ ಭೌತಿಕ ಶಕ್ತಿಗಳು ಹೆಚ್ಚು ಇರುವ ಪರಿಗೆ ಇನ್ನೂ ಕೊಡುತ್ತಾ, ಇಲ್ಲದವ

ರಿಗೆ ಇಷ್ಟಾದ್ರೂ ಇಲ್ಲದೆ ಹೋದ ಅವರನ್ನು ಇನ್ನೂ ಕತ್ತಲದಲ್ಲಿ ಇಡಲಿಕ್ಕೆ
ಬಾರದು. ಸ್ವಾರ್ಥಕ್ಕಾಗಿ ವಿನಿಯೋಗಿಸಿದ ಜ್ಞಾನವು ಮಾನವರ
ನ್ನು ಜನಾಂಗಗಳನ್ನು ವಿಭಜಿಸಿ ಅವ್ಯವಸ್ಥೆಗೆ ಈಡಾಗಿಸಲು
ಉಪಯೋಗಿಸಿದಾಗ ಲೋಕದಲ್ಲಿ ಬಿನ್ನಭೇದಗಳು ಇನ್ನೂ ಹೆ
ಚ್ಚುತ್ತವೆ. ಹಾಗಾದರೆ ನಾವು ನಿಸರ್ಗದ ಗೂಢ ಶಕ್ತಿ (ಗಳೆಂಬ
ಕತ್ತರಿಗಳನ್ನು) ಸ್ವಾರ್ಥ ಲೋಭಗಳೆಂಬ ರಸದ (ರೋಗಕ್ಕೆ)
ಶಕ್ತಿ ಎಳೆಯುವ ಆ ರೀತಿ ಧ್ವಂಸಿಸುವ ಉದ್ದೇಶದಿಂದ ನಾವು
ಹಿಂಜರಿಯುತ್ತೇವೆ. ಆದುದರಿಂದ ಶ್ರೀಮತಿ ಬ್ಲಾವಟ್‌ಸ್ಕಿ ಇವರು
ಯಾರ ಹೆಸರಿನಲ್ಲಿ ಮಾತಾಡುತ್ತಾರೋ ಆ ಹಿಂದಿನ ಗುರುಗಳು
ಸೂಕ್ತಿಗಳು ಹೇಳಿದ 'ಪ್ರೀತಿ' ಎಂಬ ನೀತಿಯನ್ನು ಕಲಿಯುವ
ವರೆಗೆ ಜ್ಞಾನವೇ ಶಕ್ತಿಯೆಂಬುದನ್ನು ಎಂದೂ ಹೇಳಗೊಡು
ಇಲ್ಲ. ಆ ನಿಸರ್ಗ ಶಕ್ತಿಗಳನ್ನು ತಡೆಗಟ್ಟುವ ಅಧಿಕಾರವನ್ನು
ನಿಸ್ವಾರ್ಥಿಗಳಿಗೆ ಮಾತ್ರ ಕೊಡಲಾಗಿದೆಯಲ್ಲದೆ ಆ ಅಧಿಕಾರದ
ದುರುಪಯೋಗವಾದುದಾದರೆ ಮಾನವ ಸಮಾಜವೇ ನಾಶವಾಗುವುದು.

ನಾನು ಬರೆದ ಈ ವಿವರಣೆ ಮತ್ತು ನನ್ನ ಬಹಿರಂಗ
ಹೇಳಿಕೆಗಳು ನಾನು Theosophical Society ಇದಕ್ಕೆ ಸೇರಿ
ದೆನೆಂಬುದನ್ನು ಸಾರಿದಾಗ ಸ್ವಾಭಾವಿಕವಾಗಿ ಬಂದು ಬಗೆಯು
ಟೀಕೆಯು ಸಂದರ್ಭಗಳಿಗೆಯೂ ಇಳಿಸಿತು, ಆ ವರ್ಷದ ಜೂನ್
30ರ National Reformer ಪತ್ರಿಕೆಯಲ್ಲಿ ಈ ರೀತಿ
ಯಾಗಿ ಬರೆಯಲ್ಪಟ್ಟಿತು:—

"ಕಳೆದ ಹಿಂದಿನ ಸಂಚಿಕೆಯ Reformer ಪತ್ರಿಕೆಯಲ್ಲಿ
" ಶ್ರೀಮತಿ ಬ್ಲಾವಟ್‌ಸ್ಕಿ ಇವರ ಗ್ರಂಥದ ವಿಮರ್ಶೆ, ಮತ್ತು
" 'STAR' ಪತ್ರಿಕೆಯಲ್ಲಿ ಕೊಟ್ಟ ಹೇಳಿಕೆಗಳು ನನಗೆ ಈ ತತ್ತ್ವ
" ಜ್ಞಾನ (Theosophy) ಇದರ ಬಗ್ಗೆ ಹಲವು ಪತ್ರಗಳನ್ನು ತಂ
" ದಿವೆ. ನನ್ನ ಸ್ವಂತ ಅಭಿಪ್ರಾಯದಂತೆ Theosophy ಎಂಬ ಶ
" ಬ್ದವು ಬಹು ಹಿಂದಿನದಾಗಿದೆ. ಪ್ಲೇಟೋ ಇವನ ತತ್ತ್ವವನ್ನನು
" ಸರಿಸಿದ Neo-Platonists - ಇವರು ಉಪಯೋಗಿಸಿದ್ದರು.
" ಅರ್ಥಕೋಶದಲ್ಲಿ ಇದಕ್ಕೆ "ದೇವರ ವಿಷಯವಾಗಿ ತಿಳಿದವ
" ನು, ಅಥವಾ ನಿಸರ್ಗ ನಿಯಮಗಳನ್ನು ತನ್ನ ಅಂತಃಸ್ಫೂರ್ತಿ
" ಯಿಂದ ನೋಡಿ ತಿಳಿಯುವವನು" ಎಂಬುದಾಗಿ ಅರ್ಥ ಹೇಳಿದೆ.
" ನಾಸ್ತಿಕನು ನಿಜಕ್ಕೂ Theosophist ಆಗಲಾರನು. ಆಸ್ತಿಕವಾದಿ
" ಯು ಅಥವಾ ಅದ್ವೈತವಾದಿಯು Theosophist ಆಗಬಹು
" ದು, ವಸ್ತುತತ್ತ್ವವಾದಿ ಅಥವಾ ಅಜ್ಞೇಯತಿಯು Theosophist
" ಆಗಲಾರನು. Theosophy ಇದರಲ್ಲಿ ಸ್ವಾತಂತ್ರ್ಯವಾದವು ಅಡಕ
" ವಾಗಿರುತ್ತದೆ. ಕಳೆದ ಸಂಚಿಕೆಯಲ್ಲಿ ಹೇಳಿದಂತೆ ಶ್ರೀಮತಿ
" ಬ್ಲಾವಟ್‌ಸ್ಕಿ ಇವರು Theosophy ಅಥವಾ ಅಧ್ಯಾತ್ಮ ತತ್ತ್ವಶಾಸ್ತ್ರವು

ನಾವು ನಂಬದೇ ಇರುವ ಕೆಲವು ವಿಷಯಗಳನ್ನು ಪ್ರತಿಪಾದಿಸುತ್ತವೆ, ಎಂದು ಹೇಳಿದ್ದಾದರೂ ನಮಗೆ ಅಸ್ವಾಯಿಸುತ್ತವೆಂದು ಹೇಳಿದ ಕೆಲವು ವಿಚಾರಗಳು ನಿಜಕ್ಕೂ ಸರಿಯಲ್ಲ, ಶ್ರೀಮತಿ ಬ್ಲಾವಟ್‌ಸ್ಕಿಯು ಎರಡು ಸಂಪುಟಗಳ ಗ್ರಂಥವನ್ನು ಓದುವ ಅವಕಾಶವು ನನಗೆ ದೊರೆಯುತ್ತಿಲ್ಲ; ಆದರೆ ಕಳೆದ ಹತ್ತು ವರ್ಷಗಳ ಕಾಲದಲ್ಲಿ ಕರ್ನಲ್ ಆಲ್ಕಾಟ್ ಮತ್ತು ಇತರ ತತ್ವಜ್ಞಾನಿಗಳು ಬರೆದುದನ್ನು ಓದಿರುವೆನು, ಪಾಶ್ಚಾತ್ಯ ರೀತಿಯಲ್ಲಿ Spiritualism ಎನ್ನುವ ಆಧ್ಯಾತ್ಮಿಕ ಜ್ಞಾನವನ್ನು ಜನರಲ್ಲಿ ಬೇರೂರಿಸಲು ಅವರು ಪ್ರಯತ್ನಿಸುವಂತೆ ನನಗೆ ತೋರುತ್ತದೆ, ಅವರ ಕೆಲವು ಊಹೆಗಳು ಕೇವಲ ತರ್ಕದಿಂದ, ಅವರ ವಾದಗಳು ಬರೀ ಆಲಂಕಾರಿಕವಾದುವೆಂದು, ನಾನು ಯೋಚಿಸುತ್ತಿದ್ದೇನೆ, ಆದುದರಿಂದ ಬರೀ ಕಲ್ಪಿತವೆಯಂತೆ ಇರುವ ಮತ್ತು ಅನಿಶ್ಚಿತವಾಗಿ ತೋರುವ ವಿಚಾರಗಳನ್ನು ನಿಜವಾದುದೆಂದು ಪ್ರತಿಪಾದಿಸುತ್ತಿರಲು ಅದನ್ನು ಕುರಿತಾಗಿ ನನ್ನದೇ ಅಭಿಪ್ರಾಯಗಳನ್ನು ವಿನಿಮಯಗೊಳಿಸದೆ ನನ್ನ ಗೆಳತಿಯೂ ಸಹೋದ್ಯೋಗಿಯೂ ಪಕ್ಷನೆ ಅದನ್ನು ಒಪ್ಪಿ ಅವಲಂಬಿಸಿದುದಕ್ಕೆ ನಾನು ತುಂಬಾ ವಿಷಾದಿಸುತ್ತೇನೆ, ಶ್ರೀಮತಿ ಬೆಸೆಂಟ್ ಇವಳು ಯಾವುದೇ ಒಂದನ್ನು ದಿಟವೆಂದು ತಿಳಿದರೆ ಅದನ್ನು ನಿಷ್ಠೆಯಿಂದ ಪಾಲಿಸಲು ಮುನ್ನುಗ್ಗುವುದರಿಂದ ನನ್ನ ಬೇಸರವು ಇನ್ನೂ ಹೆಚ್ಚಾಗಿದೆ, ಅವಳು ಆ ರೀತಿ ಒಪ್ಪಿದ್ದನ್ನು ಶ್ರದ್ಧೆಯಿಂದ ಪ್ರತಿಪಾದಿಸುವಳೆಂದೂ ನನಗೆ ಗೊತ್ತಿದೆ, ಆದರೆ ಅವಳ ಈ Theosophic ಅಭಿಪ್ರಾಯಗಳ ಪರಿಣಾಮವೇನಾಗುವುದೆಂಬುದನ್ನು ಬಹು ಸಂದೇಹದಿಂದ ನೋಡುತ್ತಿದ್ದೇನೆ, ಈ ಪತ್ರಿಕೆಯ ಸಂಪಾದಕೀಯ ನೀತಿಯಲ್ಲಿ ಬದಲಾವಣೆಯಾಗದೆ ಹಿಂದಿನಂತೆಯೇ ಇದೆ, ಅಲ್ಲದೆ ಅದು Theosophy ಇದಕ್ಕೆ ಸಂಬಂಧಿಸಿದ ಯಾವುದೇ ನೀತಿಯನ್ನು ಒಪ್ಪಲಾರದು, ಈ ವಿಷಯದಲ್ಲಿ ನಾನು ಮೌನದಿಂದಿರಲು ಇಚ್ಛಿಸುತ್ತೇನೆ, ಏಕೆಂದರೆ ಶ್ರೀಮತಿ ಬೆಸೆಂಟ್ ಇವಳು ಸಮಾಜವಾದವನ್ನು ಅವಲಂಬಿಸಿದ್ದಕ್ಕೆ ಸಾರ್ವಜನಿಕರು ಒಪ್ಪದ ಕಾರಣದಿಂದ ಉಂಟಾದ ನಮ್ಮೀರ್ವರಿಗೂ ದುಃಖಕ್ಕೆ ಕಾರಣವಾಗಿದೆ, ಈಗ ಅವಳ ಲೇಖನವನ್ನು ಓದಿದ ನಂತರ ಮತ್ತು ಅವಳು ತತ್ವಜ್ಞಾನ ಸಂಘಕ್ಕೆ ಸೇರಿದ್ದನ್ನು ಕುರಿತು ಬಹಿರಂಗ ಹೇಳಿಕೆಯನ್ನಿತ್ತನಂತರ ನನ್ನ ಅಭಿಪ್ರಾಯಗಳನ್ನರಿಯಲು ಇಚ್ಛಿಸುವವರಿಗೆ ನಾನು ಇಂತಿಷ್ಟನ್ನು ಸ್ಪಷ್ಟವಾಗಿ ಹೇಳಬೇಕಿದೆ." ಸಹಿ] ಚಾರ್ಲ್ಸ್ ಬ್ರಾಡ್ಲಾ."

"ನಾನು ಬ್ರಹ್ಮಜ್ಞಾನ (Theosophy) ಸಂಘಕ್ಕೆ ಸೇರಲು ಕಾರಣಗಳೇನೆಂಬುದನ್ನು ಪೂರ್ತಿಯಾಗಿ ಇಲ್ಲಿ ಹೇಳಲು ಸಾಧ್ಯವಿಲ್ಲವಾದರೂ ಆ ನನ್ನ ನಿರ್ಧಾರಕ್ಕಿದ್ದ ಮೂರು ಉದ್ದೇಶಗಳನ್ನು ಇಲ್ಲಿ ಹೇಳುವೆನು, ಅವುಗಳಾವುವೆಂದರೆ - ಜ್ಞಾನಾಂಗ

" ಭೇದ ಮತ್ತು ಮತಭೇದಗಳಾವುವೂ ಇಲ್ಲದೆ ವಿಶ್ವಬಾಂಧವ್ಯವನ್ನು
" ಸ್ಥಾಪಿಸುವುದು; ಆರ್ಯ ಭಾಷಾ ಸಾಹಿತ್ಯ ಮತ್ತು ತತ್ತ್ವಶಾಸ್ತ್ರಗಳನ್ನು
" ಅಭ್ಯಸಿಸಿ ಪ್ರಚಾರಪಡಿಸುವುದು ಮತ್ತು ಇನ್ನೂ ವಿವರಿಸಲ್ಪಡದ ನಿ
" ಸರ್ಗ ನಿಯಮಗಳನ್ನೂ ಮಾನವನಲ್ಲಿ ಅಡಗಿದ ಭೌತಿಕ ಶಕ್ತಿಯ
" ನ್ನೂ ಅನ್ವೇಷಿಸುವುದು! ಮತೀಯ ವಿಚಾರಗಳಲ್ಲಿ ಸದಸ್ಯರಿಗೆ
" ಪೂರ್ತಿ ಸ್ವಾತಂತ್ರ್ಯವಿದೆ. ಮಾನವರೂಪಿ ದೇವರನ್ನಾಗಲಿ ಸಂ
" ಸ್ಥೆಯು ಸ್ವೀಕರಿಸದು ಒಪ್ಪಲಾರರು. ಅದ್ವೈತವಾದ ಅಥವಾ ವಿಶ್ವ
" ದೇವತ್ವವಾದ ಒಂದು ಸೂತ್ರವನ್ನು ಈ Theosophy ಮತತತ್ತ್ವ
" ವೆಂದು ಬೋಧಿಸಿದ್ದರೂ ಆ ಅಭಿಪ್ರಾಯವನ್ನು ಸಭಾಸದಸ್ಯರ
" ಮೇಲೆ ಕಡ್ಡಾಯವಾಗಿ ಹೇರುತ್ತಿಲ್ಲ. ಈ ತರಹದ ವಿಶ್ವದೇವತ್ವ ತತ್ತ್ವ
" ಗಳು ಹಲವು ಸಮಸ್ಯೆಗಳು, ಅದರಲ್ಲೂ ನಾಸ್ತಿಕವಾದವು ಇನ್ನೂ
" ಅನ್ವೇಷಿಸದೇ ಇರುವ ಮನುಷ್ಯತ್ವದ ಬಗ್ಗೆ ಇರುವ ಸಮಸ್ಯೆಗ
" ಳ ಪರಿಹಾರಕ್ಕೆ ಸಹಾಯಕವಾಗುತ್ತದೆಂಬ ನನ್ನ ಮೆಚ್ಚಿಕೆಯ
" ನ್ನು ಸಾರಲು ನಾನು ಹಿಂಜರಿಯಲಾರೆನು" - ಡಾ| ಆನಿ ಬೆಸೆಂಟ್."

Theosophy ಅಥವಾ ಬ್ರಹ್ಮಜ್ಞಾನ ತತ್ತ್ವವನ್ನು ಅಭ್ಯಸಿಸುವವರಿಗೆ ಚೆನ್ನಾಗಿ ತಿಳಿದಿರುವಂತೆ ಅದು ದ್ವೈತ ಭಾವದ ಬದಲಾಗಿ ಏಕ ಭಾವದ ಮೇಲೆ ಆಧರಿಸಿದೆ. "ಒಂದು" ವ್ಯಕ್ತವಾಗುವಾಗ "ಎರಡು" ಎಂಬುದಾಗಿ ತೋರಿದರೂ ನಾಸ್ತಿಕವಾದವು ಶಕ್ತಿ ಮತ್ತು ಇವೆರಡರಲ್ಲಿರುವ ಒಂದೇ ಅಸ್ತಿತ್ವವನ್ನು ಸಮರ್ಥಿಸುವಂತೆ, ಜನಪ್ರಿಯವಲ್ಲದಿದ್ದರೂ ತಾತ್ವಿಕವಾಗಿ ಒಪ್ಪಿದ Theism ಯಾ ಆಸ್ತಿಕ್ಯ ಅಥವಾ ಆಸ್ತಿಕವಾದವು ಆತ್ಮ ಮತ್ತು ವಸ್ತುವಿನಿಂದ ಅಡಗಿದ ಒಂದೇ ದೇವತೆಯನ್ನು ಕುರಿತಾಗಿ ಬೋಧಿಸುತ್ತಲಿದೆ. ಅದನ್ನು ಕುರಿತು ಚಾರ್ಲ್ಸ್ ಬ್ರಾಡ್ಲೆಯು ಸೌಮ್ಯವಾಗಿ ಪ್ರಕಟಿಸಿದ ಅಭಿಪ್ರಾಯವನ್ನು ಇತರ ಕೆಲವು Free-Thought ಮುಂದಾಳುಗಳು ಅಷ್ಟೇ ಶಾಂತರಾಗಿ ಒಪ್ಪುತ್ತಿಲ್ಲ. ಹಾಗೆ ಕಟುವಾಗಿ ಟೀಕಿಸಿದವರ ಪೈಕಿ ಶ್ರೀ ಫೂಟ್ (Mr. Foote) ಇವನು ಎಲ್ಲರಿಗಿಂತಲೂ ಗಣ್ಯನು. ಈ ವಾಗ್ವಾದದ ಮಧ್ಯೆ ಜುಲೈ ತಿಂಗಳಲ್ಲಿ ಪ್ಯಾರಿಸ್‌ನಲ್ಲಿ ನಡೆದ ಕಾರ್ಮಿಕ ಸಮ್ಮೇಳನ (Labour Congress) ಇದಕ್ಕೆ ಹರ್ಬರ್ಟ್ ಬ್ರರೋಸ್ ಇವರೊಡನೆ ನನ್ನನ್ನೂ ಅಲ್ಲಿಗೆ ಕೊಂಡೊಯ್ಯಿತು. ಆಗ ಅಲ್ಲಿಗೆ ಒಂದು ವಾರದ ವಿಶ್ರಾಂತಿಗೆಂದು ಹೋಗಿ ಅಲ್ಲಿಯೇ ತಂಗಿದ್ದ ಹೆಚ್.ಪಿ. ಬ್ಲಾವಟ್ಸ್ಕಿ ಇವರೊಡನೆ ಒಂದು ದಿನವನ್ನು ಕಳೆದೆವು. ಅಲ್ಲಿ ಅವರು, The Voice of Silence ಎಂಬ ಪ್ರಸಿದ್ಧವಾದ The Book of Golden Precepts ಎಂಬ ಹೆಸರಿನ ಗ್ರಂಥದ ಅತಿ ಸುಂದರವಾದ ಭಾಗಗಳನ್ನು ಭಾಷಾಂತರಿಸು

ವುದನ್ನು ಕಂಡೆನು, ಅವರು ಅದನ್ನು ಇತರ ಯಾವುದೇ ಆಧಾರಗ್ರಂಥಗಳಿಲ್ಲದೆ ಬಹು ಶೀಘ್ರವಾಗಿಯೇ ಬರೆದಿದ್ದರು, ಸಾಯಂಕಾಲ ಅವರು ತನ್ನ ಬರವಣಿಗೆ ಮತ್ತು ಭಾಷೆಯು ಸರಿಯಿದೆಯೋ ಎಂದು ನೋಡಲು ಅದನ್ನು ನನ್ನಿಂದ ಓದಿಸಿದರು. ಹರ್ಬರ್ಟ್ ಸ್ಪೆನ್ಸರ್ ಇವನು ಮತ್ತು ಅಮೇರಿಕಾದ ನಿಷ್ಠಾವಂತ ತತ್ವಜ್ಞಾನಿ ಶ್ರೀಮತಿ ಕಾಂಡ್ಲರ್ ಇವರೂ ಭಾವಪ್ರಸ್ತುತಿಯ ಹೊತ್ತಿಗೆಗಳ್ಳು ಕಳುಹಿಸಿದ್ದರು, ನಾನು ಅವರ ಬರಹವನ್ನು ಓದಿದೆನು, ಆ ಭಾಷಾಂತರಕಾರರ ಶಕ್ತಿ ಸುಂದರವಾದ ಇಂಗ್ಲಿಷ್ ಭಾಷೆಯಲ್ಲಿದ್ದು ಅದರ ಸ್ಥಾಯಿಯು ನಿರರ್ಗಳವೂ ನಾದಮಯವೂ ಆಗಿತ್ತು, ಅಲ್ಲಲ್ಲಿ ಸುಂದರ ಶಬ್ದಗಳು ಮಾತ್ರ ಬದಲಾಯಿಸಲ್ಪಟ್ಟಿದ್ದುವು. ನಾವು ಅವರ ಅದ್ಭುತ ಕಾರ್ಯಶೈಲಿಯ ಮಾಧುರ್ಯವನ್ನು ಕಂಡು ಇತರ ಯಾವುದೇ ಬಗೆಯ ಸಾಹಿತ್ಯದ ಅಂತಹ ಬರವಣಿಗೆಯನ್ನು ಕಂಡಾಗ ಹೊಗಳುವಂತೆ ನಾವು ಸಹ ಅವರನ್ನು ಶ್ಲಾಘಿಸಿದಾಗ ಅವರು ಆಶ್ಚರ್ಯಚಕಿತಳಾದ ಹುಡುಗಿಯಂತೆ ನಮ್ಮೆಡೆಗೆ ಕಣ್ಣರಳಿಸಿ ನೋಡುತ್ತಿದ್ದರು.

ಅದಕ್ಕಿಂತ ಸ್ವಲ್ಪ ಮುಂಚೆ, ಒಂದು ದಿನ, ನಾನು ಅವರನ್ನು ಅದಾವುದೋ ಸುಂದರ ಪಾರಮಾರ್ಥಿಕ ಶಕ್ತಿಯು ಅಗೋಚರವಾಗಿ ಹೊರಡಿಸುವ ಧ್ವನಿಯನ್ನು ಕೇಳಿದೆನು, ಆಗ ಅವರು "ಅಂತಹ ಧ್ವನಿಯನ್ನುಂಟುಮಾಡಲು ನೀನು ಭೌತಿಕ ಶಕ್ತಿಗಳನ್ನು ನಿರ್ಮಿಸಲಾರೆ; ಇಲ್ಲಿ ನೋಡು," ಎಂದೆನ್ನುತ್ತಾ ಅವರು ತನ್ನ ಕೈಯನ್ನು ನನ್ನ ತಲೆಯನ್ನು ಮುಟ್ಟದೆಯೇ ಸ್ವಲ್ಪ ಮೇಲಕ್ಕೆ ಎತ್ತಿ ಹಿಡಿದರು. ಆಗ ನನ್ನ ತಲೆಬುರುಡೆಯ ಮೂಳೆಯಲ್ಲಿ ಚಿಕ್ಕ ಧ್ವನಿಯು ಮೊಳಗಿದಂತಾಗಿ ಆ ಕಂಪನವು ನನ್ನ ಬೆನ್ನುಮೂಳೆಗೂ ತಲುಪುತ್ತಿತ್ತು. ಅಂತಹ ಕಂಪನವನ್ನು ಮಾನವನ ನರತಂತ್ರದ ಸ್ಪರ್ಶದ ಮೂಲಕ ಮಾತ್ರವಲ್ಲದೆ ದೇಹದ ಯಾವುದೇ ಭಾಗದಲ್ಲೂ ಆ ಧ್ವನಿಯ ತರಂಗಗಳನ್ನು ಎತ್ತಿ ಯಾರೂ ಹುಟ್ಟಿಸಬಹುದೆಂದು ಅವರು ಬಹು ಜಾಗ್ರತೆಯಿಂದ ನನಗೆ ವಿವರಿಸಿದರು, ಈ ಅತ್ಯದ್ಭುತ ಮನದಿಂದ ಅವರು ತನ್ನ ಬೋಧನೆಗಳನ್ನು ಸರಳವಾಗಿ ಮತ್ತು ಅವ್ಯಕ್ತ ಶಕ್ತಿಯನ್ನೂ ಹೇಗೆ ಹತೋಟಿಗೆ ತರಬಹುದೆಂಬುದನ್ನು ಪ್ರತ್ಯಕ್ಷವಾಗಿ ಹೇಳುತ್ತಿದ್ದರು, ಈ ಎಲ್ಲ ಚಮತ್ಕಾರದ ಬೋಧನೆಯು ವೈಜ್ಞಾನಿಕ ಹಾದಿಯನ್ನು ಹಿಡಿದಿತ್ತು, ಆ ತತ್ವಸಿದ್ಧಾಂತವೆಲ್ಲ ತನ್ನದೆಂದೂ ತಾನೊಬ್ಬ ಮಾರ್ಗಗಾರ್ತಿಯೆಂದೂ ಅವರು ಹೇಳಿಕೊಳ್ಳುವ ತಿಳಿಗೇಡಿತನವನ್ನು ಎಂದೂ ತೋರಿಸಿದ್ದಿಲ್ಲ. "ಪವಾಡ"ವೆಂಬುದು ಇಲ್ಲವೇ ಇಲ್ಲವೆಂದೂ ಅದ್ಭುತವಾದುದೆನ್ನು ಅವರು ಸಾಧಿಸಿದರೂ ಅದೆಲ್ಲ ಸಾಮಾನ್ಯ ವ್ಯಕ್ತಿಗಳಲ್ಲಿ ಕಾಣುವುದಕ್ಕಿಂತ ಹೆಚ್ಚಿನ ತನ್ನ ಜ್ಞಾನಬಲದಿಂದ ಮತ್ತು ಶಿಸ್ತಿನಿಂದ ಹೊರಗೆಸೆದ ಮನಸ್ಸು ಮತ್ತು

ಚಿತ್ರಶಕ್ತಿಯಿಂದ ಎಂದೂ ಅವಳು ನನಗೆ ಆಗಿಂದಾಗ್ಗೆ ಹೇಳುತ್ತಲೇ ಇದ್ದಳು. ಅವುಗಳಲ್ಲಿ ಕೆಲವು ಮನಃಶಾಸ್ತ್ರದ ತಂತ್ರಗಳು ಎಂದು ಅವಳು ವರ್ಣಿಸುತ್ತಿದ್ದಳು, ಕೇವಲ ಊಹಾಬಲದಿಂದಲೇ ಮಾಯೆಯನ್ನು ನಿರ್ಮಿಸುತ್ತಿದ್ದು, ಅದನ್ನೇ ಇತರರ ಮೇಲೆ ಬಲಾತ್ಕರಿಸಿದಾಗ ಅದು ಸಾಮೂಹಿಕ ಭ್ರಮೆಯುಂಟಾಗುವುದು. ಗಟ್ಟಿಯಾದ ವಸ್ತುವನ್ನು ಸೂಕ್ಷ್ಮ ಅದೃಶ್ಯ ಆತ್ಮೀಯರ ಶಕ್ತಿಗಳಿಂದ ತನ್ನೆಡೆಗೆ ಎಳೆಯುವುದು, ಅದೃಶ್ಯ ಭೌತಿಕ ಶಕ್ತಿಯ ಮೂಲಕ ಸೆಳೆಯುವುದು, ಮತ್ತು ನಕ್ಷತ್ರಗಳ ಬೆಳಕಿನಿಂದ ಓದುವುದು, ಇತ್ಯಾದಿಗಳನ್ನು ಮಾಡುತ್ತಿದ್ದಳು. ಆದರೆ ಅವಳು ತನ್ನ ಗುರುಗಳ ಆದೇಶದಂತೆ ಮಾತಾಡುತ್ತಿರುವುದು ಎಂದು ಹೇಳುತ್ತಿದ್ದ. ಆ ತತ್ವಜ್ಞಾನ ಪ್ರಚಾರದ ನಿಜಸ್ಥಿತಿಗೆ ಸಾಕ್ಷಿಯು ತೌಲನಿಕವಾಗಿ ಬಹು ಚಿಕ್ಕದಾಗಿರುವ ಭೌತಿಕ ಮಾತ್ರವಿಕ ಮತ್ತು ಮಾನಸಿಕ ಪ್ರಯೋಗ ಪ್ರದರ್ಶನಗಳಲ್ಲಿ ಅಡಗಿರಲಿಲ್ಲ. ಬದಲಾಗಿ ಅದು ತನ್ನ ಸ್ನೇಹ ಸಹಿಷ್ಣುತಾ ಗುಣದ ಶ್ರೇಷ್ಠತೆಯಲ್ಲಿ, ತನ್ನ ಜ್ಞಾನದ ಆಧಿಕ್ಯದಲ್ಲಿ, ತನ್ನ ಗುಣಾ ಮನಸ್ಸಿನ ನಿಷ್ಕಾರ್ಪಣೆಯಲ್ಲಿ, ತನ್ನ ಬೋಧನೆಯ ಅಗಾಧ ಸಾಮರ್ಥ್ಯಶಕ್ತಿಯಲ್ಲಿ, ತನ್ನ ಸೇವಾ ನಿಷ್ಠೆಯಲ್ಲಿ, ತನಗಿರುವ ಅವಿಶ್ರಾಂತ ಉತ್ಸಾಹದಲ್ಲಿ ಮತ್ತು ಜನಮನವನ್ನು ವಿಕಾಸಗೊಳಿಸಲಿಕ್ಕಾಗಿ ನಿರಂತರ ಶ್ರಮಿಸುತ್ತಿದ್ದ ಅವಳ ಉತ್ಸಾಹದಲ್ಲಿ ಅಡಗಿದ್ದಿತು. ಶ್ರೀಮತಿ ಬ್ಲಾವಟ್‌ಸ್ಕಿಯನ್ನು ನಮ್ಮ ವಿಶ್ವಾಸ ಮತ್ತು ಆದರಗಳಿಗೆ ಪಾತ್ರಳಾಗಿ ಮಾಡಿದ್ದು ಈ ಗುಣಗಳಲ್ಲದೆ ಅವಳು ತೋರಿಸುತ್ತಿದ್ದ ಅದ್ಭುತ ಚಮತ್ಕಾರಗಳಲ್ಲ. ತನ್ನ ಹೇಳಿಕೆಗೆ ತಾನೇ ಅದ್ವಿತೀಯ ಆಧಾರವೆಂದು ಅವಳು ಹೇಳುತ್ತಿದ್ದರೂ ಆತ್ಮದ ಶಕ್ತಿಗಳ ಅಸ್ತಿತ್ವವನ್ನು ಪ್ರಮಾಣಪೂರ್ವಕವಾಗಿ ತೋರಿಸಿ ಅವು ನಮ್ಮ ತತ್ವಯೊ ಇರಬಹುದೆಂಬುದಾಗಿ ಕನಸಿನಲ್ಲೂ ಎಣಿಸದ ನಮ್ಮನ್ನು ಜಾಗೃತರಾಗಿಸಿದಳು.

ಪ್ಯಾರಿಸ್‌ನಿಂದ ಲಂಡನ್ನಿಗೆ ಹಿಂದಿರುಗಿದನಂತರ ನನ್ನ ಅಭಿಪ್ರಾಯ ಬದಲಾದುದನ್ನು ನಿಶ್ಚಯವಾಗಿಯೂ ಜನರಿಗೆ ಸ್ಪಷ್ಟಪಡಿಸುವ ಅವಶ್ಯಕತೆಯಿತ್ತು. ಆ ವರ್ಷದ ಆಗಸ್ಟ್ ತಿಂಗಳ Reformer ಪತ್ರಿಕೆಯಲ್ಲಿ ಹೀಗೆ ಬರೆದಿತ್ತು:

“ನನ್ನ ಮತ್ತು ನನ್ನ ನಂಬಿಕೆಗಳನ್ನು ಕುರಿತಾಗಿ ಹಲವು ತರಹದ ಹೇಳಿಕೆಗಳನ್ನು ಈಗಾಗಲೇ ಇತ್ತೀಚಿನವರು, ಅವುಗಳಲ್ಲಿ ಕೆಲವು ತಿಳಿಗೇಡಿತನದಿಂದ ಮತ್ತು ಕೆಲವು ಮತ್ಸರದಿಂದ ಹೇಳಿದ ಸುಳ್ಳು ಮಾತುಗಳಾಗಿದ್ದುವು. ಅದನ್ನು ನಂಬಬೇಡಿವೆಂದು ನನ್ನ ಮಿತ್ರರಿಗೆ ಹೇಳಬೇಕಾಗಿದೆ. National Reformer ಪತ್ರಿಕೆಯ ಓದುಗರಲ್ಲಿ ಬಹು ಜನರಿಗೆ ನನ್ನ ಸ್ವ

ವಾಗಿ ಕಂಡು ಬರಲಾರದ Theosophy ತತ್ವವನ್ನು ಕುರಿತಾಗಿ ನನ್ನ ಲೇಖನಿಯು ಮೂಲಕ ವಿವರಿಸಿ ಆ ರೀತಿಯಾಗಿ ಸುದೀರ್ಘವಾದ ವಾದವನ್ನು ಎಬ್ಬಿಸಲು ನನಗೆ ಅವಕಾಶವನ್ನು ಈ ಪತ್ರಿಕೆಯು ಮೂಲಕವಾಗಿ ಕೊಡಲು ನನ್ನ ಮಿತ್ರನಾದ ಶ್ರೀ ಬ್ರ್ಯಾಡ್ಲೆಯುನ್ನು ಕೇಳುವುದು ಅವನಿಗೆ ನ್ಯಾಯವಾಗಿ ತೋರಲಾರದು. ಪರಿಸ್ಥಿತಿಯು ಇಂತಿರಲು ನನ್ನ ಮೇಲೆ ಮಾಡಿದ ಟೀಕೆಗಳಿಗೆ ನಾನು ಇಲ್ಲಿ (ಪತ್ರಿಕೆಯಲ್ಲಿ) ಉತ್ತರಿಸಲು ಸಾಧ್ಯವಿಲ್ಲ. ಹೇಗೂ ನಾನು ಯಾವ ಪಕ್ಷದಲ್ಲಿ ಸೇರಿ ಇದ್ದರೂ ಮರೆಗೆ ಪಡೆದಿದ್ದೆನೋ ಆ ಪಕ್ಷಕ್ಕೆ ನನ್ನ ಈ ಹೊಸ ಕಾರ್ಯಕ್ರಮದ ಬಗ್ಗೆ ತಕ್ಕ ವಿವರಣೆಯನ್ನು ನನ್ನಿಂದಲೇ ಪಡೆಯುವ ಹಕ್ಕು ಇದೆ. ಆದುದರಿಂದ ಆ ವಿಷಯವನ್ನು ಕುರಿತು ಪೂರ್ತಿ ವಿವರಣೆಯಿಂದ ಕೂಡಿದ ಒಂದು ಲೇಖನವನ್ನು ಬರೆಯುತ್ತಿದ್ದೇನೆ. ಅಷ್ಟೇ ಅಲ್ಲ, "ನಾನೇಕೆ ತತ್ವಜ್ಞಾನಿಯಾದೆ?"—"Why I Became a Theosophist?" ಎಂಬುದರ ಮೇಲೆ Hall of Science, ಇಲ್ಲಿ ಎರಡು ಭಾಷಣಗಳನ್ನು ಕೊಡಲು ನಾನು ಶ್ರೀ ಆರ್. ಓ. ಸ್ಮಿತ್ ಇವರೊಡನೆ ಏರ್ಪಡಿಸಿದ್ದೇನೆ. ಹಲವು ವರ್ಷಗಳಿಂದ Free Thought- ಪಕ್ಷದಲ್ಲಿ ಒಬ್ಬ ಸಾಮಾನ್ಯ ಸೇವಕಿಯಾಗಿದ್ದ ನನ್ನ ಮತಭೇದವನ್ನು ಕುರಿತು ನನ್ನನ್ನು ತಿಳಿಯದೆ ನನ್ನನ್ನು ಖಂಡಿಸಕೂಡದೆಂದು ತೋರಲು ಅವಕಾಶವೀಯುವರೆಂದು ನಂಬುತ್ತೇನೆ. ಹಿಂದೆ Free-thinkers ಇವರು ನನ್ನನು ಹಲವು ಬಾರಿ ಹೊಗಳಿದ್ದ ಕಾರಣದಿಂದ ತತ್ವಜ್ಞಾನ—Theosophy— ಇದರ ಪರವಾಗಿ ಮತ್ತು ಜ್ಞಾನಾನ್ವೇಷಣೆಯ ದೃಷ್ಟಿಯಿಂದ ಕೆಲವು ವಿಚಾರಗಳು ಹೇಳುತ್ತಿರಬಹುದೆಂದು ಸೂಚಿಸಲು ಇಚ್ಛಿಸುತ್ತೇನೆ. ಜೀವನದ ಗಂಭೀರ ಧ್ಯೇಯವನ್ನು ಕುರಿತಾಗಿ ಕೆಲವು Free-thinkers ಇವರಿಂದ ಕೊಡಲ್ಪಟ್ಟ ಹಾಸ್ಯ ಚಿತ್ರಗಳು, Christian Evidence ಸಂಘದವರು ನಾಸ್ತಿಕತೆಯನ್ನು ಬಿಡಿಸಿದ ಹಾಸ್ಯಚಿತ್ರಗಳಂತೆಯೇ ತೋರಿಸಲು ಅವೆಲ್ಲವೂ ಎದುರಾಳಿಗೆ ತಪ್ಪಾಗಿ ಚಿತ್ರಿಸಲ್ಪಟ್ಟಿದೆಯೆಂಬುದನ್ನು ಅವರಾಗಿಯೇ ಊಹಿಸಿ ಒಂದು ಅಭಿಪ್ರಾಯಕ್ಕೆ ಬರುವವರಿಗೂ ಕಾಯಬೇಕೆಂದು ನಾನು ಟೀಕೆಯನ್ನು ಮಾಡುತ್ತಿದ್ದವರಿಗೆ ಹೇಳುತ್ತಿದ್ದೇನೆ."

ಈ ವಿಚಾರವಾಗಿ ಭಾಷಣಗಳನ್ನು ಕೊಟ್ಟನಂತರ ಅದೇ ಶಿರೋನಾಮೆಯಿಂದ ಅವುಗಳ ಸಾರಾಂಶವನ್ನು ಒಂದು ಕರಪತ್ರದ ಮೂಲಕವಾಗಿ ಪ್ರಕಟಿಸಿದಾಗ ಅದು ವಿಶೇಷವಾಗಿ ಪ್ರಚಾರವಾಯಿತು. ಆ ಲೇಖನವು ಕಡೆಗಂತೂ ಈ ರೀತಿಯಾಗಿ ಕೊನೆಗೊಂಡಿತು:—

"ನಾವಿರುವ ಈ ಲೋಕದಲ್ಲಿ ಮಾನವರು ಮತ್ತು ಇತರ

ಜೀವಿಗಳಿಲ್ಲದೆ ಇತರ ಲೋಕಗಳೆಲ್ಲೂ ಇದೇ ರೀತಿ ಜೀವಿಗಳು ಇರುವರೆಂದು ಸಮರ್ಥಿಸುವ ನಮ್ಮ ವಾದವು ನಮ್ಮ ವಿರೋಧಿಗಳಿಗೆ ತಮ್ಮ ವ್ಯಂಗ್ಯವನ್ನು ಪ್ರದರ್ಶಿಸಲು ಒಂದು ಅಗ್ಗದ ವಿಷಯವಾಗಲು, ತತ್ವಜ್ಞಾನ (Theosophy) ಇದರ ಬಗ್ಗೆ ನಿಜಕ್ಕೂ ದ್ವೇಷವನ್ನು ಹುಟ್ಟಿಸುವ ಆತಂಕವು Free-Thinkers ತತ್ವವನ್ನು ಸಾರುವವರ ಮನಸ್ಸಿನಲ್ಲಿ ಅಂತೆಯೇ ಇದೆ. ಹಾಗೆ ಹೇಳುವಾಗ ಇದನ್ನು ತಿಳಿಯದೆ ಕಣ್ಣಿಗೆ ಅಲ್ಲಿ ನಿಲ್ಲದೆ ಬೆನ್ನು ಹಾಕಿ ಹೋಗುವವರು ಈ ಅಪಾರ ವಿಶ್ವದಲ್ಲಿ ನಮ್ಮ ಈ ಬಹು ಚಿಕ್ಕ ಭೂಗೋಲವು ಭಯಂಕರ ಮರುಭೂಮಿಯ ಒಂದು ಚಿಕ್ಕ ಮರಳಿನ ಕಣದಂತೆ ಇರುವಾಗ ಈ ಒಂದು ಗೋಲದಲ್ಲಿ ಮಾತ್ರ ಜೀವಿ ಜಂತುಗಳು ಇರುವುದೆಂಬುದನ್ನು ನಿಜವಾಗಿ ಮತ್ತು ಸ್ಪಷ್ಟವಾಗಿ ಅವರು ನಂಬುವರೇ ಎಂಬುದು ಅವರನ್ನು ಕೇಳುವುದು ಅವಶ್ಯವಿದೆ. ನಮ್ಮ ಈ ಸೂರ್ಯನಂತಹ ಸೂರ್ಯನಿರುವಲ್ಲಿ ಈ ಅಗಾಧ ವಿಶ್ವವಿದು ಮೂಕವಿದೆಯೆ? ನಮ್ಮ ಕಣ್ಣಿನ ನೋಟವಲ್ಲದೆ ಈ ವಿಶ್ವಕ್ಕೆ ಬೇರೆ ಕಣ್ಣಿಲ್ಲವೇ? ನಾವು ಇರುವ ಈ ಲೋಕವು ವಿಶ್ವದ ಕೇಂದ್ರವೆಂದು, ಜಗನ್ನಿಯಾಮಕನು ಹುಟ್ಟಿಸಿ ಸಾವಿನೊಳು ಹೊಗಿಸಿ ಚಿತ್ರಿಸಿದ ಜೀವಿಗಳೆಯು ಒಂದೇ ಒಂದು ಎಂಬುದಾಗಿಯೂ ಕ್ರೈಸ್ತಮತ ತಪ್ಪು ತಿಳಿದಿದ್ದ ಆ ಕಾಲದಲ್ಲಿ ಇಂಥ ತಿಳಿಗೇಡಿತನದ ನಂಬಿಕೆಗಳು ನಿಜವಾಗಿದ್ದಿರಬಹುದು. ಆದರೆ ಅಸಂಖ್ಯ ಲೋಕಗಳಲ್ಲಿ ಒಂದಾಗಿ ಇರುವ ಈ ಸಣ್ಣ ಲೋಕದಲ್ಲಿ ನಮ್ಮ ಸ್ಥಾನವೆಲ್ಲಿ ಎಂದು ನಾವು ಅರಿತಿರುವುದರಿಂದ ಇಂದ್ರಿಯಗಳ ಅಧೀನದಲ್ಲಿರುವ ನಮ್ಮ ಅಸ್ತಿತ್ವದ ಮಿತಿಯನ್ನು ಮೀರಿದ ಹೆಮ್ಮೆಯನ್ನು ವಿಶಿಷ್ಟವಾದ ಅಹಂಕಾರ ಪ್ರದರ್ಶನಕ್ಕೆ ಉಪಯೋಗಿಸಲು ಆಧಾರವೆಲ್ಲಿದೆ? ಭೂಮಿ, ಗಾಳಿ, ನೀರು ಎಲ್ಲವೂ ನಮ್ಮ ಸುತ್ತಮುತ್ತಲೂ ಪರಿಸ್ಥಿತಿಗನುಸಾರವಾಗಿ ಜೀವಿಸುವ ಮಿಲ್ಯಾಂತರ ಜೀವಿಗಳಿಂದ ತುಂಬಿವೆ. ನಾವಿರುವ ಭೂಗೋಲವು ಸಹ ಜೀವರಾಶಿಯಿಂದ ತುಂಬಿ ತುಳುಕುತ್ತಿದೆ. ಅಂತೆಯೇ ಆಲೋಚಿಸುತ್ತಾ ನಾವು ನಮ್ಮ ಅವರಣದಿಂದ ದಾಟಿದ ಸ್ಥಾನವೇ ಎಲ್ಲವೂ ಬದಲಾಗುವಂತಿದೆ. ಅಂಥಾ ಊಹೆಯನ್ನು ಶಾಸ್ತ್ರೀಯವಾಗಲೀ ಸಾಮಾನ್ಯವಾಗಲೀ ಸಮರ್ಥಿಸದು. ನಮ್ಮ ಲೋಕವಲ್ಲದೆ ಇತರ ಎಲ್ಲಾ ಲೋಕಗಳೂ ಜೀವರಾಶಿಯಿಂದ ತುಂಬಿವೆಯೆಂದು ಹೇಳಿದ್ದು ಬ್ರೂನೋ (Bruno) ಇವನ ತಪ್ಪುಗಳಲ್ಲಿ ಒಂದಾಗಿದೆ. ಅದಕ್ಕೆ ಅವನನ್ನು ಸುಟ್ಟುಹಾಕಿದ ಸನ್ಯಾಸಿಗಳಿಗಿಂತ ಅವನು ಬುದ್ಧಿವಂತನಾಗಿದ್ದನು. ಭಾರತೀಯ ಶಾಸ್ತ್ರದ ಪ್ರತಿಯೊಂದು ಪಂಥದಲ್ಲೂ ಅದಕ್ಕೆ ತಕ್ಕಂಥ ಜೀವಿಗಳು ಇದ್ದೇ ಇವೆಯೆಂದೂ ಇಡೀ ವಿಶ್ವವೇ ಜೀವಾಂಶದಿಂದ ಚಲಿಸುವಾಗಿದೆಯೆಂದೂ ಪ್ರಾಜ್ಞರುಗಳು

« Theosophists— ಎನಿಸಿಕೊಳ್ಳುತ್ತಾರೆ. ಅಂಧಾಭಿಮಾನ ಎಂಬ ಮತ್ತು
« ಭ್ರಾಂತಿಯಿಂದ ಕೂಡಿದ್ದವರು ಅಂತ ಕರೆಯುತ್ತಾರೆ, ಆದರೆ ಬ್ಯಾಕ್ಟೀರಿ
« ಯಾ ಕ್ರಿಮಿ ಅಥವಾ ನಮ್ಮ ಕಣ್ಣಿಗೆ ಗೋಚರವಾಗದ ಜೀವಿಗಳು
« ಇವೆಯೆಂದು ಹೇಗೆ ನಂಬುತ್ತೀವೋ ಅದೇ ಬಗೆಯ ಅಂಧಾಭಿ
« ಮಾನವು ಅದಲ್ಲದೆ ಹೆಚ್ಚಿಲ್ಲ. spirit ಎಂಬುದು ಸ್ಪಷ್ಟತೆ
« ವಸ್ತು ಕೊಡದ ಒಂದು ಶಬ್ದವಾಗಿದೆ. ಚಾರಿತ್ರಿಕವಾಗಿ ಅದು ವಾ
« ಸ್ತವಿಕವಾಗಿಲ್ಲದ ಮತ್ತು ನೈಸರ್ಗಿಕ ಶಕ್ತಿಯನ್ನು ಮೀರಿದ ಒಂದು
« ಅಸ್ತಿತ್ವವನ್ನು ಕುರಿತು ಪ್ರತಿಪಾದಿಸುತ್ತದೆ, ಆದರೆ ತತ್ವಜ್ಞಾನಿ
« ಯು (Theosophist) ಅವು ಎರಡರಲ್ಲಿ ಯಾವುದೊಂದನ್ನೂ
« ನಂಬಲಾರನು, ಎಲ್ಲಾ ಜೀವಿಗಳೂ ಒಂದು ವಾಸ್ತವಿಕ ಆಧಾರದ
« ಲ್ಲಿ ನಿಲುಕಿ ತಿಳಿಯುತ್ತವೆಯೆಂದೂ ಆತ್ಮ – spirit, ಮತ್ತು
« ವಸ್ತು – matter, ಇವು ಪ್ರತ್ಯೇಕವೆಂದೂ ಅವನು ನಂಬುವನು,
« ಆದರೆ ವಿಜ್ಞಾನಕ್ಕೆ ತಿಳಿದಂತೆ ರೀತಿಯಲ್ಲಿ ಅಲ್ಲದೆ ವಸ್ತುವು
« ವಿವಿಧ ಹಂತದಲ್ಲಿ ನೋಡುವುದೆಂದೂ ಅವನು ತಿಳಿಯುತ್ತಾನೆ.
« ಇದನ್ನು ನಂಬಲು ಸಾಧ್ಯವಿಲ್ಲವೆಂದು ಹೇಳಿದರೆ ಅದು ನೀರು
« ಗಡ್ಡೆಯಾಗುವುದನ್ನು ಕಾಣದೇ ಇದ್ದ ಒಬ್ಬ ಹಿಂದೂ ರಾಜಕು
« ಮಾರನು ಹಿಮವೆಂಬುದಿದೆಯೆಂದು ಹೇಳಿದರೆ ಅದನ್ನು ನಂ
« ಬದೇ ಇರುವಂತಾಗುತ್ತದೆ, ತಕ್ಕ ಆಧಾರವು ಸಾಕ್ಷ್ಯವಾಗಿ ದೊರೆ
« ಯುವ ವರೆಗೂ ನಂಬುವುದಕ್ಕೆ ತಿರಸ್ಕರಿಸುವುದು ಒಳ್ಳೆಯದೇ;
« ಆದರೆ ನಮ್ಮ ಮಿತಿಯೊಳಗಡಗಿದ ಅನುಭವಕ್ಕೆ ನಿಲುಕ
« ದುದನ್ನೆಲ್ಲಾ ಇಲ್ಲವೆಂದು ಹೇಳುವುದು ತಿಳಿಗೇಡಿತನವಾಗಿದೆ.

ನನ್ನ ಭೌತಿಕವಾದೀ ಮಿತ್ರರಿಗೆ ಹೇಳಲು ಒಂದು ಕಡೇ ಮಾತು ಇದೆ: ನಾವು ವಹಿಸಿಕೊಂಡ "ಸ್ಥಾನಗಳನ್ನು ಬಿಡಿರಿ" ಎಂದು ನೀವು ಹೇಳಿದರೆ ನಾನು ಬಿಡುತ್ತೇನೆ, ನಾನು ಯಾವ ಶಿಷ್ಯರನ್ನೂ ಬಲಾತ್ಕಾರವಾಗಿ ಸೇರಲಾರೆನು. ನಾನು ಯಾವಾಗ ಎಲ್ಲಿ ಆಹ್ವಾನಿಸಲ್ಪಡುವುದಿಲ್ಲವೋ ಆಕ್ಷಣವೇ ನಾನು ಅಲ್ಲಿಂದ ಹೋಗುತ್ತೇನೆ.*

ನಾನು ಭೌತಿಕವಾದದಿಂದ ತುಂಬಾ ನಿರೀಕ್ಷಿಸಿದ್ದೆನಾದರೂ ಈಗ ಅದರಿಂದ ನಿರಾಶೆಯನ್ನು ಹೊಂದಿದ್ದೇನೆಂದು ಒಪ್ಪಲು ನನಗೆ ತುಂಬಾ ಬೇಸರವನ್ನುಂಟುಮಾಡಿದೆ. ಹೇಗೂ ಅದರಿಂದ ಆ ರೀತಿಯಾಗಿ ಬೇರ್ಪಟ್ಟಾಗ ಅದರೊಡನೆ ನನ್ನ ಹಳೆ ಮಿತ್ರರನ್ನು ತೊರೆಯಬೇಕಾಯಿತು, ಆದರೆ ಇಲ್ಲಿ ಸಹ, ನಾನು ಇತರ ಸಂದರ್ಭಗಳಲ್ಲಿ ವರ್ತಿಸಿದಂತೆ ಸತ್ಯವನ್ನು ಹೇಳಿ ಶಾಂತಿಯನ್ನು ಪಡೆ

---

* ನಾನು ಇದನ್ನು 1889ರಲ್ಲಿ ಬರೆದುದಾಗಿದೆ. ರಾಷ್ಟ್ರೀಯ ಭೌತಿಕವಾದೀ ಸಂಸ್ಥೆಯು ಹೆಚ್ಚು materialism ಇದನ್ನು ಅನುಸರಿಸಿದುದರಿಂದ ಅದರಲ್ಲಿ — ನನಗೆ ಸ್ಥಳವಿಲ್ಲವೆಂದು ಬಗೆದು ನಾನು ಅದರಲ್ಲಿದ್ದ ನನ್ನ ಸ್ಥಾನಕ್ಕೆ 1890 ರಲ್ಲಿ ರಾಜೀನಾಮೆ ಕೊಟ್ಟೆನು.

ಯಲು ಯತ್ನಿಸಿದ್ದೇ ಇಲ್ಲ, ನಾನು ಹೇಳುವುದು ಕ್ಷಿಪ್ತವೇ ಇರಲಿ, ಅಧಿ
ತವೇ ಇರಲಿ, ಅದು ಹೊಗಳಿಕೆಯನ್ನೇ ತರಲಿ, ತೆಗಳಿಕೆಗೇ ಕಾರಣವಾ
ಗಲಿ, ವಿಷಯಗಳನ್ನು ನಾನು ಹೇಗೆ ಕಂಡೆನೋ ಅಂತೆಯೇ ಹೇ
ಳುವ ಸ್ವಯಂಪ್ರತಿಜ್ಞೆಯು ನನ್ನನ್ನು ಹೇಳಿಸುತ್ತಿದೆ. ಯಾವ ಮಿ
ತ್ರತ್ವವು ಮುರಿದುಹೋದರೂ ಮಾನವೀಯ ಬಾಂಧವ್ಯವೇ ಕಡಿದು
ಹೋದರೂ ಸತ್ಯಕ್ಕಾಗಿ ನನ್ನ ಆ ನಿಷ್ಠೆಯನ್ನು ನಿಶ್ಚಲವಾಗಿ ಇಟ್ಟು
ಕೊಳ್ಳಲೇ ಬೇಕಿದೆ. ಸತ್ಯವು ನನ್ನನ್ನು ನಿರ್ಜನ ಭೂಮಿಗೆ ಕೊಂಡು
ಹೋಗಬಹುದಾದರೂ ನಾನು ಅದನ್ನು ಹಿಂಬಾಲಿಸಲೇ ಬೇಕು. ಅದು
ನನ್ನ ಪ್ರೀತಿಯನ್ನೆಲ್ಲ ಕಸಿದುಕೊಂಡರೂ ನಾನು ಅದನ್ನು ಅನುಸರಿ
ಸಲೇ ಬೇಕು. ಅದು ನನ್ನನ್ನು ಕೊಂದುಹಾಕಬಹುದಾದರೂ
ನಾನು ಅದನ್ನು ನಂಬಲೇ ಬೇಕು, ನನ್ನ ಸಮಾಧಿಯ ಮೇಲೆ
ಹೀಗಲ್ಲದೆ ಮತ್ತಾವ ಶಿಲಾ ಲೇಖನವನ್ನು ನಾನು ಇಚ್ಛಿಸಲಾರೆನು:

"ಅವಳು ಸತ್ಯವನ್ನನುಸರಿಸಲು ಪ್ರಯತ್ನಿಸಿದಳು".

ಇಷ್ಟರಲ್ಲಿ ಹೊಸ ಬಗೆಯ ವಾಗ್ವಾದಗಳಲ್ಲಿ ನಾನು ಮು
ಳುಗಿದ್ದರೂ, ನಿಜವಾಗಿ ಹೇಳುವುದಿದ್ದರೆ ನನಗೆ ಅತಿ
ಹಿತಕರವಾದ 'ಮಿತ್ರರು ಕಳೆದ ಒಂದೂವರೆ ವರ್ಷಗಳ ಅವಧಿ
ಯಲ್ಲಿ 150 ಪೌಂಡುಗಳನ್ನು ಉದಾರವಾಗಿ ಕೊಟ್ಟು ಸಹ
ಕರಿಸಿದುದರಿಂದ ನನ್ನ ಸ್ಕೂಲ್ ಬೋರ್ಡ್ ಕೆಲಸವೂ ಎಂದಿ
ನಂತೆಯೇ ಮುಂದುವರಿಯಿತು, ಅದೇ ರೀತಿ ಸಮಾಜ
ವಾದಕ್ಕೆ ಸಂಬಂಧಿಸಿದ ಕೆಲಸವೂ ಬಿರುಸಿನಿಂದ ಮುಂದುವರಿ
ಯಿತು, ಅಲ್ಲದೆ ಕಾರ್ಮಿಕ ಚಳುವಳಿಯಲ್ಲೂ ಮುಂದಾಳುತನವನ್ನು
ವಹಿಸುತ್ತಲೇ ಇದ್ದೆನು, ಅವುಗಳಲ್ಲಿ ಪ್ರಮುಖ ಕಾರ್ಯಕ್ರಮ
ವೆಂದರೆ ದಕ್ಷಿಣ ಲಂಡನ್ನಿನ ತುಪ್ಪುಳ ಅಥವಾ ಪಶುರೋಮದ
ಚರ್ಮವನ್ನು ಸುಲಿಯುವವರನ್ನು (fur-pullers) ಒಂದು
ಕೂಟದೊಳಗಡಗಿಸಿದ್ದೂ ಮತ್ತು ಮಧ್ಯರಾತ್ರಿ ಕಳೆದನಂತರ
ನಡೆ ಜರುಗುತ್ತಿದ್ದ ಟ್ರಾಮ್ ಮತ್ತು ಬಸ್ಸು ಕೆಲಸಗಾರರ ದೈ
ನಿಕ ಕೆಲಸದ ಅವಧಿಯನ್ನು ಕಡಿಮೆ ಮಾಡುವ ಚಳುವಳಿಯಲ್ಲಿ
ಸಹಕರಿಸಿದ್ದೇ ಆಗಿದ್ದುವು. ನನ್ನ ಜಿಲ್ಲೆಯ ಸುತ್ತಮುತ್ತಲ
ಕಾಲನಿಗಳಲ್ಲಿ ಕೆಲವೆಡೆ ಬಡತನದಿಂದ ರೋಗದಿಂದ ಆ ಮ
ಕ್ಕಳ ಪೋಷಣೆ ಮತ್ತು ಬಟ್ಟೆ ತೊಡಿಸುವ ಬಗೆ ಏರ್ಪಡಿಸು
ವುದರಲ್ಲಿ ತುಂಬಾ ಸಮಯವು ವಿನಿಯೋಗವಾಗುತ್ತಿತ್ತು. ನಾ
ನು ರೈಲು, ಟ್ರಾಮ್, ಮತ್ತು ಕುದುರೆಗಾಡಿಗಳಲ್ಲಿ ತಿರುಗುವಾಗ
ಮಾತ್ರ ಓದುತ್ತಿದ್ದೆನಲ್ಲದೆ ಅವರೆಡೆಯಲ್ಲಿ ರಾತ್ರಿವೇಳೆಯಲ್ಲಿ
ಹೆಚ್. ಪಿ. ಬ್ಲಾವಟ್ಸ್ಕಿ ಇವರು ಮಾತಾಡುವುದನ್ನು ಕೇಳುತ್ತಿಂ
ದು ನನ್ನ ಸಮಯವನ್ನು ಕಳೆಯುತ್ತಿದ್ದೆನು.

ಚಾರ್ಲ್ಸ್ ಬ್ರಾಡ್ಲೆಯು ಅಲ್ಲಿಂದ ಸುಮಾರು ಹದಿನೈದು ತಿಂಗಳು

ವರೆಗೆ ಜೀವಿಸಿದ್ದನಾದರೂ ಆ ವರ್ಷದ (1890) ಸೆಪ್ಟೆಂಬರ್ ತಿಂಗಳಲ್ಲಿ ಅ
ವನ ದೇಹಬಲವು ಕಡಿಮೆ ಬಾರಿಗೆಂಬಂತೆ ಕಾಣಿಸಿಯಿತು, ರಕ್ತ ಪಿತ್ತಾದಿ, ಮೂ
ತ್ರ ರೋಗದ ಖಾಯಿಲೆಗೆ ತುತ್ತಾಗಿ ಅವನು ಪಕ್ಕನೆ ಹಾಸಿಗೆ ಹಿಡಿದು
ಅವನ ಪರಿಸ್ಥಿತಿಯು ಶೋಚನೀಯ ಸ್ಥಿತಿಗೇರಿದಾಗ ಅವನ ಮಕ್ಕಳಲ್ಲಿ
ಹಿರಿಯವಳಾಕೆ ಹಿಂದಿನ ಬೇಸಗೆಯಲ್ಲಿ ಮೃತಳಾಗಿ ಕಡೆಗೆ ಒಬ್ಬಳೇ ಆಗಿ
ಉಳಿದ ಅವನ ಮಗಳು, Mrs Bonner ಇವಳು, ಅವನನ್ನು ತುಂಬಾ
ನಿಷ್ಠೆಯಿಂದ ಶುಶ್ರೂಷೆ ನಡೆಸಿ ನೋಡಿಕೊಂಡಳು, ಬ್ರ್ಯಾಡ್ಲೆಯು ನಿಧಾ
ನವಾಗಿ ಗುಣಮುಖವಾಗುತ್ತಿರುವಂತೆ ತೋರಲು ಅಂತೆಯೇ ಸಾಕಷ್ಟು
ದೇಹಬಲವನ್ನು ಪಡೆದನು, ಅವನ ವೈದ್ಯನು ಅವನನ್ನು ವಿಶ್ರಾಂತಿ
ಪಡೆಯಬೇಕೆಂದೂ ಸಾಧ್ಯವಿದ್ದರೆ ಸಮುದ್ರಪ್ರಯಾಣವನ್ನು ಕೈಗೊ
ಳ್ಳಬೇಕೆಂದೂ ಹೇಳಲು ಅವನು ನವೆಂಬರ್ ೨೮ರಲ್ಲಿ ಹಿಂದೂಸ್ಥಾನ
ದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಲಿಕ್ಕೆಂದು
ಪ್ರಯಾಣವನ್ನು ಬೆಳೆಸಿದನಲ್ಲದೆ ಅವನು ಅಲ್ಲಿ ತಲುಪಿದಾಗ ಅವನ
ನ್ನು (ಆಂಗ್ಲ ಸರಕಾರದ ಶಾಸನ ಸಭೆಯಲ್ಲಿ) "ಭಾರತದ ಪ್ರತಿನಿಧಿ" ಎಂ
ಬುದಾಗಿ ತುಂಬಾ ಉತ್ಸಾಹದಿಂದ ಸ್ವಾಗತಿಸಲಾಯಿತು,

ಕ್ರಿ. ಶ. 1888ರ ಶಾಲಾ ಬೋರ್ಡಿನ ಚುನಾವಣೆಯ ಕಾಲದಲ್ಲಿ
ನನಗೆ ಸಂಬಂಧಿಸಿದ ಯಾವುದೋ ಒಂದು ಪುಸ್ತಕದಲ್ಲಿ ಹೇಳಿದ
ಕೆಲವು ಅಸಭ್ಯ ವಿಚಾರಗಳನ್ನು ನನಗೆ ಆರೋಪಿಸಿ ಅವು ನನ್ನ ಅಭಿ
ಪ್ರಾಯಗಳೆಂದು ಸ್ವಧರ್ಮೀಯ ಕ್ರೈಸ್ತಗುರು ರೆವರೆಂಡ್ ಹಾರ್ಕಿನ್ಸ್
ಇವನು ಹೇಳಿದ್ದರಿಂದ ಅವನ ಮೇಲೆ ಮಾನನಷ್ಟದ ವ್ಯಾಜ್ಯವನ್ನು ನಾನು
ಹೂಡಿದಾಗ ಆ ವರ್ಷದ ನವೆಂಬರ್ ತಿಂಗಳು ಕೋರ್ಟು ವಿಚಾರಣೆಯ
ವೇಳೆಗೆ ನಾನೇ ನನ್ನ ವಕಾಲತ್ತು ವಹಿಸಿ ವಾದಿಸಿದೆನು, ನನ್ನ ವಿರೋಧ
ವಾಗಿ ಸರಕಾರೀ ವಕೀಲ ಸರ್ ಎಡ್ವರ್ಡ್ ಕ್ಲಾರ್ಕ್ ಇವನೂ ನ್ಯಾಯಾಧೀಶನಾ
ಗಿ ಹಡ್ಲ್‌ಸ್ಟನ್ ಇವನೂ ಇದ್ದರು, ಅವರೀರ್ವರೂ ನನಗೆ ಮಂಕುಬೂ
ದಿಯೆರಚಲು ನೋಡುತ್ತಿದ್ದರಲ್ಲದೆ, ಕಠಿಣ ರೀತಿಯಲ್ಲಿ ಹೇಳುವು
ದಾದರೆ ನಾನು ಮಿತಸಂತಾನವನ್ನು ಪ್ರತಿಪಾದಿಸುತ್ತಿದ್ದುದರಿಂದ ಸತೀ
ತ್ವವನ್ನೇ ನಾನು ಅಪರಾಧವೆಂಬುದಾಗಿ ಖಂಡಿಸಿದೆನೆಂದು ಪ್ರಮಾಣ
ವನ್ನು ಸಾಧಿಸಲು ಅವರು ಯತ್ನಿಸಿದ್ದರು. ಮೂರು ತಾಸುಗಳ ಕಾಲ
ನಾನು ಅಮಾನುಷ ರೀತಿಯ ಪ್ರಶ್ನೆಗಳಿಗೆ ತುತ್ತಾದರೂ ನನ್ನ ಮೇಲೆ
ಆರೋಪಿಸಲಾದ ಆ ಹೇಳಿಕೆಯನ್ನೆಲ್ಲಾ ತೀವ್ರವಾಗಿ ಪ್ರತಿಭಟಿಸಿದೆನು,
ಧರ್ಮಗುರುವಿಗಾಗಿ ನ್ಯಾಯಾಧೀಶನೇ ವಾದಿಸಿದರೂ 'ಓರ್ವ ನಾಸ್ತಿಕ
ಳ ವಿರೋಧವಾಗಿ ಇತರರು ಪಾದ್ರಿಗಳ ರಕ್ಷಣೆಗಾಗಿ ನಿಂತರು; ನನ್ನ
ಮೇಲೆ ಹೊರಿಸಿದ್ದ ಅಪವಾದವು ಶಾಸನ ಪ್ರಕಾರವಾಗಿ ನ್ಯಾಯವಾ
ದುದೆಂದು ಹೇಳಿದರು, ಧರ್ಮಗುರುವಿಗೆ ಕೋರ್ಟಿನಿಂದ ತಕ್ಕ ತೀ
ರ್ಮಾನವು ದೊರೆಯದೇ ಹೋಯಿತು, ಪಂಚಾಯತ್ತರಲ್ಲೊಬ್ಬನು
ಅನಂತರ ನನಗೆ ಹೇಳಿದ ಪ್ರಕಾರ ಮಾನಭಂಗದ ವಿಚಾರವಾಗಿ ಅವರು

ಒಪ್ಪದಿದ್ದರು, ಕಪ್ಪುತೋಳದಂಥಾ ನಾಸ್ತಿಕವಾದಿಯು ವಿರೋಧವಾಗಿ ತನ್ನ ಧರ್ಮ
ವನ್ನು ಉಳಿಸುವ ಉತ್ಸಾಹದಿಂದ ಉಬ್ಬಿದ ಧರ್ಮಗುರುವಿಗೆ ದಂಡನೆಯು ಜು
ಲ್ಮಾನೆಯನ್ನು ವಿಧಿಸುವುದು ಸರಿಯಲ್ಲವೆಂದು ಕೆಲವರು ಹೇಳಿದರೆ ಇನ್ನು
ಕೆಲವರು ಈ ಮಾನನಷ್ಟ ವ್ಯಾಜ್ಯವು ಕ್ರೂರವಾದುದೆಂದು ಬಗೆದು ಹೆಚ್ಚು
ಪರಿಹಾರ ಧನವನ್ನೀಯುವ ತೀರ್ಪಿಗೆ ಒಪ್ಪದೆಯೇ ಇದ್ದರು. ಹೀಗೆ ಆ ವ್ಯಾ
ಜ್ಯವು ಕೊನೆಗೊಂಡಾಗ ನಾನು ಈ ಅಪರಾಧಕ್ಕೆ ಹೊಣೆಯಲ್ಲ ಎಂದು ಪೂ
ರ್ತಿಯಾಗಿ ಮತ್ತು ಬಹಿರಂಗವಾಗಿ ತಿಳಿದು ಬಂದುದರಿಂದ ಮತ್ತು ಅದನ್ನು
ಮುಂದುವರಿಸಿ ಅದಕ್ಕಾಗಿ ಕ್ಷಮೆಯನ್ನು ಕೇಳುವುದು ಸರಿಯಲ್ಲ
ವೆಂದು ಬಗೆದು ನಾನು ಪುನಃ ಅದನ್ನು ವಿಚಾರಣೆಗೊಳಗಾಗಿಸಲಿಲ್ಲ.

ತಿಂಗಳುಗಳುರುಳಿದುವು. 1890ನೇ ವರ್ಷದ ಪ್ರಾರಂಭ
ದಲ್ಲಿ ಹೆಚ್. ಪಿ. ಬ್ಲಾವಟ್‌ಸ್ಕೀ ಇವಳು ತನಗೆ ಹಿತವೆಂದು ತೋರಿದ
ಉದ್ದೇಶಕ್ಕಾಗಿ, ಅದೇನಾ ತನಗೆ ಒಪ್ಪಿಗೆಯಾದರೆ ಹೆಂಗಸರ ಉಪ
ಯೋಗಕ್ಕಾಗಿ ಒಂದು ಸಾವಿರ ಪೌಂಡುಗಳನ್ನು ಕೊಟ್ಟಳು. ಈ ವಿಷ
ಯವಾಗಿ ತುಂಬಾ ಚರ್ಚಿಸಿದನಂತರ ಅವಳು ಪೂರ್ವ ಲಂಡನ್ನಿನಲ್ಲಿ
ಹುಡುಗಿಯರಿಗಾಗಿ ಒಂದು ವಿಶ್ರಾಂತಿ ಭವನ – club – ಇದನ್ನು ಸ್ಥಾಪಿಸಲು
ನಿಶ್ಚೈಸಿದಳು, ಅವಳ ಸಮ್ಮತಿಯಂತೆ ಕುಮಾರಿ ಲಾರಾ ಕೂಪರ್ ಮತ್ತು
ನಾನು ಒಂದು ಅರ್ಹ ಸ್ಥಳವನ್ನು ಅದಕ್ಕಾಗಿ ಹುಡುಕಿದೆವು. ಕಡೆಗೆ ಬೋ
ರಸ್ತೆಯ (Bow Road) 193ನೇ ಒಂದು ಹಳೆ ಮನೆಯನ್ನು ಗೊತ್ತು
ಮಾಡಿದೆವು. ಅದರ ದುರಸ್ತಿಗೆ ಮತ್ತು ಕಟ್ಟಡಕ್ಕೆ ಒಂದು ಹಜಾರವನ್ನು
ಕಟ್ಟಿಸಲು ಕೆಲವು ತಿಂಗಳುಗಳು ಹಿಡಿದುವು. ಆಗಸ್ಟ ತಿಂಗಳು (1890)
15ನೇ ದಿನ ಶ್ರೀಮತಿ ಬ್ಲಾವಟ್‌ಸ್ಕೀ ಇವಳು ಅದನ್ನು ಉದ್ಘಾಟನೆ ಮಾಡಿ
ತುಂಬಾ ಶ್ರಮಿಸಿದ ಮತ್ತು ಅಲ್ಪ ವೇತನಕ್ಕೆ ದುಡಿಯುವ ಹುಡುಗಿಯರ
ಅಭಿವೃದ್ಧಿಗಾಗಿ ಅದನ್ನು ಮೀಸಲಾಗಿಟ್ಟಳು. ಆ ಕಟ್ಟಡವು ಅದರ ಉದ್ದೇ
ಶವನ್ನು ಕಳೆದ ಮೂರು ವರ್ಷಗಳಿಂದ ಬಹು ಜಯಪ್ರದವಾಗಿ ಈಡೇರಿ
ಸಿದೆ. ಹೆಂಗಸರ ಮತ್ತು ಮಕ್ಕಳ ಕಷ್ಟದ ಪರಿಸ್ಥಿತಿಗೆ ಹೆಚ್. ಪಿ. ಬ್ಲಾ
ವಟ್‌ಸ್ಕೀ ಇವಳ ಹೃದಯವು ಕೋಮಲವಾಗಿದ್ದಿತು. ಅವಳು ರಷ್ಯನ್ ಭಾ
ಷಾ ಲೇಖಿನಿಯು ಬರೆಹವು ಧಾರಾಳ ಹಣವನ್ನು ಸಂಪಾದಿಸುತ್ತಿದ್ದ ಕಾರ
ಣದಿಂದ ಆ ಹಣವನ್ನೆಲ್ಲಾ ತನ್ನ ಉದ್ದೇಶ ಸಾಧನೆಗಾಗಿ ವೆಚ್ಚಮಾಡಿ ಮ
ತ್ತು ತನ್ನ ಬ್ರಹ್ಮಜ್ಞಾನ (Theosophy) ಸಂಸ್ಥೆಯು ಕಾರ್ಯಕ್ರಮದಿಂ
ದ ವಿರಾಮ ಹೊಂದದೆ ಎಡೆಬಿಡದೆ ದುಡಿದು ಕಡೆಗೆ ತನ್ನ ಬಾಳ್ವೆಯ
ಕೊನೆಯ ದಿನಗಳಲ್ಲಿ ಬಡತನಕ್ಕೀಡಾದಳು. ಅವಳಲ್ಲಿದ್ದ ಸ್ವಲ್ಪ ಹ
ಣವೂ ಬೇಗನೆ ಮುಗಿದು ಹೋಯಿತು. ಹಣದಿಂದ ನಿವಾರಿಸಬಹು
ದಾಗಿದ್ದ ಬಾಯಿಲೆಯನ್ನೂ ಅವಳಿಗೆ ತಡೆಗಟ್ಟಲು ಕಷ್ಟವಾಯಿ
ತು. ಒಂದು ದಿನ ಚಿಕ್ಕ ಮಕ್ಕಳಿಗಾಗಿ ನಾನು ಹಣವನ್ನು ಸಂ
ಗ್ರಹಿಸಿ ಅವರಿಗೆ ಕೊಟ್ಟಾಗ ಆ ಚಿಕ್ಕ ಮುಖಗಳು ಇನ್ನೂ ಬೇ
ರೆಂಬ ಸಂತೋಷದಿಂದ ಹೇಗೆ ಪುಲಕಿತವಾಗುತ್ತವೆಂಬು

ವಾಗಿ ನನ್ನ ಸಹೋದ್ಯೋಗಿಗೆ ನಾನು ಬರೆದಿದ್ದ ಪತ್ರವನ್ನು ಅವಳಿಗೆ ತೋರಿಸಿದೆನು. ಈಗ ಬ್ಲಾವಟ್ಸ್ಕಿ ಪತ್ರವೊಂದು ಅವಳ ಉದಾರಗುಣಕ್ಕನುವಾಗಿ ಈ ಕೆಳಗಿನಂತಿದ್ದುದನ್ನು ನಾವು ನೋಡಿದೆವು:—

"--- ನನ್ನ ಅತಿ ನಿಕಟ ಗೆಳತಿಯೇ, ನೀನು --- ಗೆ ಬರೆದ ಪತ್ರವನ್ನು ಇದೀಗ ತಾನೇ ಓದಿದೆನು. ನನ್ನ ಹೃದಯವು ಬಡ ಶಿಶುಗಳಿಗಾಗಿ ಕೊರಗುತ್ತಿದೆ. ಇದೋ ನೋಡು. ನನ್ನ ಸ್ವಂತ ಹಣ ಮೂವತ್ತು ಶಿಲ್ಲಿಂಗ್ ಇದೆ! ಅದನ್ನು (ನಿನಗೆ ತಿಳಿದಿರುವಂತೆ ದರಿದ್ರಳಾದ ನಾನು; ಹೀಗಿರಲು ನಾನು ಹೆಮ್ಮೆಪಡುತ್ತೇನೆ) ನಿನಗೆ ಕೊಡುತ್ತೇನೆ. ಆದರೆ ನೀನು ಅದಕ್ಕೆ ಒಂದೇ ಒಂದು ಪ್ರತಿ ಮಾತನ್ನು ಆಡದೆ ಸ್ವೀಕರಿಸಬೇಕು. ಇದು ಮೂವತ್ತು ಹಸಿದು ಬಳಲಿದ ಬಡ ಪಾಪು ಶಿಶುಗಳಿಗೆ ಮೂವತ್ತು ಊಟಗಳನ್ನು ಕೊಡಬಲ್ಲದೆಂಬ ಆ ಯೋಚನೆಯಿಂದ ಮೂವತ್ತು ನಿಮಿಷಗಳ ಕಾಲ ನಾನು ಸಂತೋಷಪಡುವೆನು. ಈಗ ಬೇರೆ ಏನನ್ನೂ ಹೇಳಬೇಡ. ಹೇಳಿದಂತೆ ಮಾಡು; ನಿನ್ನ ಹೂಗಳನ್ನು ಪ್ರೀತಿಸಿ ಸಂತೋಷಪಡು. ಆ ಪಾಪದ ಮಕ್ಕಳಿಗೆ ಅದನ್ನು ತೆಗೆದುಕೊಂಡು ಹೋಗು. ಈ ಲೋಕದಲ್ಲಿ ಯಾವ ಪ್ರಯೋಜನಕ್ಕೂ ಬಾರದ ನಿನ್ನ ಮುದಿ ಗೆಳತಿಯನ್ನು ನೀನು ಮರೆತುಬಿಡು. ಯಾವಾಗಲೂ ನಿನ್ನವಳಾದ,

[ಸಹಿ] ಹೆಚ್. ಪಿ. ಬಿ."

ಅವಳ ಈ ಕೋಮಲ ಸ್ವಭಾವವೇ ಅವಳು ಗತಿಸಿದನಂತರ ಅವಳ ಹೆಸರಿನಲ್ಲಿ "ಶಿಶು ಮಕ್ಕಳಿಗಾಗಿ ಹೆಚ್. ಪಿ. ಬಿ. ಭವನ"ವನ್ನು ಸ್ಥಾಪಿಸಲು ನಮ್ಮನ್ನು ಪ್ರೇರೇಪಿಸಿತು. ಅವಳ ಇಚ್ಛೆಯನ್ನು ಈಡೇರಿಸುವ ಸಲುವಾಗಿ ಅನಾಥ ಶಿಶುಗಳಿಗೆ ದೊಡ್ಡ ಮನೆಯ ರೀತಿಯಲ್ಲಿ ಒಂದು ನೆಲೆಯನ್ನು ತತ್ವಜ್ಞಾನ ಸಂಸ್ಥೆಯ ಆಶ್ರಯದಲ್ಲಿ ಕಟ್ಟಿಸಲು ನಾವು ನಿರ್ಧರಿಸಿದೆವು.

ಲ್ಯಾಂಡ್ಸ್‌ಡೌನ್ ರಸ್ತೆಯ 17ನೇ ಮನೆಯ ಭೋಗ್ಯದ ಅವಧಿಯು 1890ರ ಪ್ರಾರಂಭಕ್ಕೆ ಮುಗಿಯುವುದರಿಂದ ಏವಿನ್ಯೂ ರಸ್ತೆಯ 19ನೇ ಮನೆಯನ್ನು ಯೂರೋಪಿನ ತತ್ವಜ್ಞಾನ (Theosophy) ಸಂಸ್ಥೆಯ ಕೇಂದ್ರವಾಗಿ ಮಾರ್ಪಡಿಸಬೇಕೆಂದು ನಾವು ತೀರ್ಮಾನಿಸಿದೆವು. ಬ್ಲಾವಟ್ಸ್ಕಿ ಇವಳಿಂದ ಸ್ಥಾಪಿತವಾದ "ಬ್ಲಾವಟ್ಸ್ಕಿ ಲಾಡ್ಜ್" ಕಟ್ಟಡಕ್ಕೆ ಒಂದು ಹಜಾರವನ್ನು ಕಟ್ಟಿಸಿ ಅದನ್ನು ಇನ್ನಷ್ಟು ವಿಸ್ತರಿಸಲಾಯಿತು. ಅವಳ ಕಾರ್ಮಿಕ ವರ್ಗವನ್ನೆಲ್ಲ ಒಂದು ಕಡೆಯಲ್ಲಿ ನೆಲೆಸುವಂತಾಗಿಸಿದಲ್ಲದೆ ಹಿಂದೆ ಅವಳ ಸೇವೆಗಾಗಿಯೇ ಮೀಸಲಾಗಿದ್ದ ಆರ್ಚಿಬಾಲ್ಡ್ ಮತ್ತು ಬರ್ಟ್ರಮ್ ಕೈಟ್ಲಿ ಇವರೂ ಅಲ್ಲಿ ಸೇರಿದರು. ತನ್ನ ಸಂಪತ್ಸಮೃದ್ಧವಾದ ಜೀವನವನ್ನೂ ಉನ್ನತ ಸಾಮಾಜಿಕ ಸ್ಥಾನವನ್ನೂ ತೊರೆದು ಅವಳು ಕೈಗೊಂಡಿದ್ದ ಸೇವೆಗಾಗಿ ತಾನೂ ಶ್ರಮಿಸಲು ಮತ್ತು ಬಹು ವಿಶ್ವಾಸಪೂರ್ವಕವಾಗಿ ಹಾಗೂ ನಿಷ್ಠಾವಂತಳಾಗಿ ಅವಳೊಡನೆ ದುಡಿದ ಕೌಂಟೆಸ್ ವಾಕ್ಟ್‌ಮೀಸ್ಟರ್

ಅವಳ ಕಾರ್ಯದರ್ಶಿಯೂ, ವಿಧೇಯ ಶಿಷ್ಯನೂ, ಮೇಧಾವಿಯೂ, ಗುಣಸಂಪನ್ನನೂ, ಉತ್ತಮ ಜ್ಞಾನಿಯೂ, ಅವಿರತ ದುಡಿಯುವವನೂ ಆದ ಜಾರ್ಜ್ ಮೀಡ್, ಐರಿಷ್ ಜನರಲ್ಲಿ ಬಹು ಪ್ರೀತಿ ಪಾತ್ರನೂ, ತನ್ನ ಶ್ರೇಯೋಭಿಮಾನವಾದ ಗತಕಾಲದ ನಡೆಯಲ್ಲಿ ಸೂಕ್ಷ್ಮ ಬುದ್ಧಿಯಿಂದ ಕೂಡಿದ್ದರೂ ಕಾಣುವಾಗ ಅಜಾಗರೂಕನಂತಿರುವ ಕ್ಲಾಡ್ ರೈಟ್, ಮೈಮರೆತಂತಿದ್ದರೂ ವ್ಯವಹಾರಜ್ಞ ಭಾವದವನೂ ಹುಟ್ಟು ಮತಶಾಸ್ತ್ರಜ್ಞನೂ, ತನ್ನ ಆವರಣದಲ್ಲಿ ವಿಶೇಷ ಜನಪ್ರಿಯನೂ ಆದ ವಾಲ್ಟರ್ ಓಲ್ಡ್, ಅದೇ ರೀತಿ ವಿದ್ಯಾಕಾಂಕ್ಷಿ ಮತ್ತು ನಿಷ್ಠೆಯ ಗೆಳತಿ ಎಮಿಲಿ ಕಿಸ್ಲಿಂಗ್‌ಬರಿ, ತೀಕ್ಷ್ಣ ಮತಿಯೂ ಜ್ಞಾನಾತುರಳೂ ಆಗಿ ಅಭೂತಪೂರ್ವ ಗುಣದಿಂದ ಕೂಡಿ ರಹಸ್ಯಶಾಸ್ತ್ರದಲ್ಲಿ ತಜ್ಞಳಾಗಿದ್ದ ಇಸಬೆಲ್ ಕೂಪರ್ ಓಕ್ಲೆ, ಮತ್ತು ಶಾಸ್ತ್ರೀಯ ಜ್ಞಾನವನ್ನು ಸಾಮಾನ್ಯ ಜನತೆಯಲ್ಲಿ ತೋರಿಸುವುದರಲ್ಲಿ ಅದ್ವಿತೀಯಳೂ, ನಮ್ಮ ಮುದ್ರಣಾಲಯವನ್ನು ಅಭಿವೃದ್ಧಿಗೊಳಿಸುವುದರಲ್ಲಿ ಸಹಾಯಕನೂ ಆದ ಅಮೇರಿಕಾದ ಜೇಮ್ಸ್ ಪ್ರೈಸ್ ಇವರೂ ಮೊದಲ್ಗೊಂಡು ಅಲ್ಲಿ ಇದ್ದರು. ಪ್ರಾರಂಭದಲ್ಲಿ ಇವರು ಮತ್ತು ನಾನು ಅಲ್ಲಿಯೇ ಹೊಂದು ನೌಕರವರ್ಗಕ್ಕೆ ಸೇರಿದ್ದು ಒಡನೆ ಇದ್ದೆವು. ಆದರೆ ಕಾರಣಾಂತರಗಳಿಂದ ನಮ್ಮೊಡನೆ ಒಂದೇ ಕುಟುಂಬದವರಂತೆ ವಾಸಿಸಲಾಗದಿದ್ದ ಕೌಮಾರಿ ಕೂಪರ್ ಮತ್ತು ಹರ್ಬರ್ಟ್ ಬರೋಸ್ ಇವರು ಅಲ್ಲಿ ನಮ್ಮೊಡನೆ ದುಡಿಯುತ್ತಿದ್ದರಾದರೂ ಬೇರೆಡೆ ನೆಲೆಸಿದ್ದರು.

ನಮ್ಮ ಬಿಡಾರದ ಜೀವನ ಕ್ರಮವು ತೀರಾ ಸರಳವಾಗಿದ್ದಿತು. ಹೆಚ್. ಪಿ. ಬಿ. ಇವಳು ಜೀವನದ ನಿತ್ಯ ನಿಯಮದಲ್ಲಿ ಕಠಿಣ ಶಿಸ್ತನ್ನು ಕಡ್ಡಾಯವಾಗಿರಿಸಿದ್ದಳು. ಬೆಳಿಗ್ಗೆ ಎಂಟು ಘಂಟೆಗೆ ಫಲಾಹಾರ, ಮಧ್ಯಾಹ್ನ ಒಂದು ಘಂಟೆಗೆ ಊಟ, ಪುನಃ ಸಾಯಂಕಾಲದ ಊಟ ಏಳು ಘಂಟೆಗೆ ಏರ್ಪಡಿಸಿದ್ದಳು. ಸಂಜೆಯ ಹೊರಗಿನ ಕೆಲಸವನ್ನೆಲ್ಲ ಮುಗಿಸಿಟ್ಟು ನಾವು ಹೆಚ್. ಪಿ. ಬಿ. ಇವಳ ಕೋಣೆಯಲ್ಲಿ ಸೇರಿ ಮುಂದಿನ ಕಾರ್ಯಕ್ರಮದ ಬಗ್ಗೆ ಮಾತಾಡುವುದು, ಅವಳಿಂದ ಸಲಹೆಗಳನ್ನು ಪಡೆಯುವುದು, ಮತ್ತು ಸಮಸ್ಯಾತ್ಮಕ ವಿಷಯಗಳ ಮೇಲೆ ಅವಳ ವಿವರಣೆಯನ್ನು ಕೇಳಿ ಪಡೆಯುತ್ತಿದ್ದೆವು. ಮಧ್ಯರಾತ್ರಿ ಹನ್ನೆರಡು ಗಂಟೆಗೆ ದೀಪ ನಂದಿಸಲ್ಪಡುತ್ತಿತ್ತು; ನನ್ನ ಸಾರ್ವಜನಿಕ ಕಾರ್ಯಭಾರವು ಹಲವು ಗಂಟೆಗಳ ಕಾಲವನ್ನು ತಿಂದು ಹಾಕುತ್ತಿತ್ತು. ನನ್ನ ಮಟ್ಟಿಗೆ ದುಡಿಮೆಯ ವಿರಾಮ ಹಾಗಿದ್ದರೂ ನಮ್ಮ ಅವಿಶ್ರಾಂತ ಜೀವನದ ನಿತ್ಯದ ವ್ಯವಹಾರವೆಲ್ಲವೂ ಹಾಗಿದ್ದಿತು, ಅವಳು ಯಾವಾಗಲೂ ಅಸ್ವಸ್ಥತೆಯಿಂದ ಕೂಡಿದ್ದರೂ ಅವಳ ಅಜೇಯ ಸಂಕಲ್ಪ ಬಲದಿಂದ ಯಾವಾಗಲೂ ಅವಳಾಗಿಯೇ ಬರೆಯುತ್ತಾ ಇರುತ್ತಿದ್ದಳು, ಅವಳು ಶಿಷ್ಯವರ್ಗವನ್ನು ಅವರವರ ಗುಣಸ್ವಭಾವಕ್ಕನುಗುಣವಾಗಿ ಅವರಿಗೆ ತಕ್ಕಂತೆಯೇ ಆತ್ಮೀಯತೆಯಿಂದಲೇ ಕಾಣುತ್ತಿದ್ದಳು, ಸರ್ವ ಬೋಧಕಿಯಾಗಿ

ಅವಳು ವಿಶೇಷ ತಾಳ್ಮೆಯಿಂದ ಕೇಳುತ್ತಿದ್ದಳು. ಒಂದೇ ವಿಷಯವನ್ನು ಪುನಃ ಪುನಃ ಬೇರೆ ಬೇರೆ ರೀತಿಯಲ್ಲಿ ವಿವರಿಸುವಳು. ಕಡೆಗೆ ಅವಳು ಹೇಳಿದ್ದು ಇತರರಿಗೆ ಅರ್ಥವಾಗಲಿಲ್ಲವೆಂದು ತೋರಿದಾಗ ಅವಳು "ಹಾ ದೇವರೇ" ಎಂದೆನ್ನುತ್ತಾ ಶಿಷ್ಯನ ಹಿಂದಕ್ಕೆ ಸರಿದು ಕುಳಿತುಕೊಳ್ಳುತ್ತಿದ್ದಳು. "ನಿನಗೆ ತಿಳಿಯಲಿಕ್ಕೆ ಸಾಧ್ಯವಿಲ್ಲದಷ್ಟು ತಿಳಿಗೇಡಿಯೇ ನಾನು? ಇಲ್ಲಿ ನೋಡು," ಎಂಬುದಾಗಿ ಸ್ವಲ್ಪಮಟ್ಟಿಗೆ ಅರ್ಥವಾಯಿತು ಎಂಬ ದೃಷ್ಟಿಯು ಯಾರಾದರೊಬ್ಬನ ಅಥವಾ ಕೆಲವರ ಮುಖದಲ್ಲಿ ತೋರಿದಾಗ ಅವಳು ಪುನಃ ಮಾತಿಗೆ ತೊಡಗುವಳು. "ನಾನು ಹೇಳುತ್ತಿರುವುದೇನೆಂದು ಈ ಹಳ್ಳಿ ಕಾಲದ ಮುದುಕನಿಗೆ ಹೇಳಿ," ಎಂಬುದಾಗಿ ಒಪ್ಪಿಸುವಳು. ತನ್ನ ಶಿಷ್ಯನು ಉತ್ತಮ ಜ್ಞಾನಿಯಾಗಿ ಮೇಲೇರುತ್ತಿರುವನೆಂದು ಕಂಡು ಬಂದಾಗ ಅವಳು ಹೆಮ್ಮೆ, ದರ್ಪ, ಮತ್ತು ಜ್ಞಾನಿಯೆಂಬುದನ್ನು ತೋರ್ಪಡಿಸಿಕೊಳ್ಳುವ ಅಭ್ಯಾಸದಿಂದ ಬಹಳ ಕಠಿಣಳಾಗಿರುತ್ತಿದ್ದಳು. ಅವಳ ವ್ಯಂಗ್ಯೋಕ್ತಿಯ ಚುಚ್ಚು ಬಾಣಗಳು ಕಠಿಣತನವನ್ನು ಕೊರೆಯುತ್ತಿದ್ದುವು. ಕೆಲವು ಸೋಮಾರಿಗಳನ್ನು ಅವಳು ಕೋಪದಿಂದ ಸಿಡಿದು ಅಪ್ಪಳಿಸಿ ಅವರನ್ನು ನಿಷ್ಕ್ರಿಯಗೊಳಿಸುವಳು. ಇತರರು ಅವಳನ್ನು ಕುರಿತು ಏನು ಆಲೋಚಿಸುವರೆಂಬುದಕ್ಕೆ ಗಮನವೀಯದೆ ತನ್ನ ಆಶ್ರಮವಾಸಿಗಳು ಶಿವನ ಪ್ರಯೋಜನವನ್ನು ಅಲ್ಲಿ ಪಡೆದರಾದರೆ ಅದೇ ತನ್ನ ಧ್ಯೇಯಸಾಧನೆಯೆಂದು ಬಗೆದು ಅವರನ್ನು ತರಬೇತುಗೊಳಿಸುವುದರಲ್ಲಿ ತಾನೊಂದು ಉಪಕರಣ ಮಾತ್ರದಂತೆ ಇದ್ದಳು. ಅವಳೊಡನೆಯೇ ನಿತ್ಯ ಗಳಿಗೆ ಅಲ್ಲಿಯೇ ವಾಸಿಸುತ್ತಿದ್ದ ನಾವು ಅವಳ ಚಟುವಟಿಕೆಗಳನ್ನು ದಿನದಿಂದ ದಿನಕ್ಕೆ ಎಂಬಂತೆ ನೋಡುತ್ತ ಇದ್ದೇವಾದುದರಿಂದ ಅವಳ ನಿಸ್ವಾರ್ಥ ಜೀವನದ ಸೌಂದರ್ಯಕ್ಕೂ ಅವಳ ಗುಣಮಣಗಳ ಗಾಂಭೀರ್ಯಕ್ಕೂ ನಾವು ಸಾಕ್ಷಿಯಾಗಿದ್ದೇವೆ. ಅಷ್ಟೇ ಅಲ್ಲ, ನಾವು ಪಡೆದ ಜ್ಞಾನಕ್ಕೆ, ನಮ್ಮ ಜೀವನದ ಪರಿಶುದ್ಧತೆಗೆ ಮತ್ತು ಗಳಿಸಲಾದ ಮನೋಭಾವಕ್ಕೆ ನಾವು ನಮ್ಮ ಕೃತಜ್ಞತೆಯನ್ನು ಅವಳ ಪಾದಕ್ಕೆ ಸಲ್ಲಿಸುತ್ತೇವೆ. ಎಲೈ, ಉದಾತ್ತ ಹಾಗೂ ವೀರ ಆತ್ಮವೇ, ಕುರುಡುತನದ ಈ ಬಾಹ್ಯ ತೋರಿಕೆ ಅದರ ತಿಳಿಗೇಡಿತನದಿಂದ ನಿನ್ನನ್ನು ತಪ್ಪಾಗಿ ಎಣಿಸಿದ್ದರೂ ಆ ನಿನ್ನ ದೀರ್ಘೋದಾತ್ತ ಗುಣದ ಒಂದು ಭಾಗವನ್ನಾದರೂ ಕಂಡ ನಿನ್ನ ಶಿಷ್ಯರಾದ ನಾವು ಎಷ್ಟು ಹುಟ್ಟು ಸಾವುಗಳ ಮೂಲಕವಾಗಿ ಹಾಯ್ದು ಬಂದರೂ ನಿನಗೆ ಸಲ್ಲಬೇಕಾಗಿರುವ ನಮ್ಮ ಹಾರ್ದಿಕ ಕೃತಜ್ಞತೆಯನ್ನು ಪೂರ್ತಿಯಾಗಿ ಸಲ್ಲಿಸಲಾರದೇ ಹೋಗುವೆವು.

ಈ ರೀತಿ ನಾನು ಬಿರುಗಾಳಿಯನ್ನೆದುರಿಸಿ ಅದೊಂದು ಶಾಂತ ಪರಿಸ್ಥಿತಿಗೆ ತಲುಪಿದೆನು. ಆದರೆ ಯಾವ ಪ್ರಬುದ್ಧ ಆತ್ಮವೂ ಇಚ್ಛಿಸದ ಆ ಬಾಹ್ಯ ಜೀವನದ ಮಾನಸಿಕ ಪ್ರಶಾಂತಿಗೆ ಅಲ್ಲ, ಅದರ ಬದಲಾಗಿ ನಮ್ಮ ತಾಪತ್ರಯಗಳಿಗೆ ಬಗ್ಗದ ಅಂತರಿಕ

ಶಾಂತಿಗೆ, ಕೇವಲ ಕ್ಷಣಿಕವಾಗಿರದೆ ಚಿರಂತನವಾಗಿ ಉಳಿಯುವ ಮತ್ತು ಬರೀ ಮೇಲ್ಪಾಗದಲ್ಲಿ ತೇಲಾಡದೆ ಅತಿ ಆಳದ ಆ ಪ್ರಶಾಂತ ಶಾಂತಿಯನ್ನು ಹೊಂದಿದಂತಾದೆವು. ಅದು ನನ್ನನ್ನು ಯಾವ ಬಾಧೆಗೂ ಒಳಪಡಿಸದೆ 1891ರ ಆ ಶಿಶಿರ ವಸಂತ ಕಾಲವನ್ನು ದಾಟಿಸಿತಾದರೂ ಆ ವೇಳೆಗೆ ಚಾರ್ಲ್ಸ್ ಬ್ರ್ಯಾಡ್ಲೀಯು ತನ್ನ ಸೋಮಾದಿಶ್ಲೇಷಣೆಯಲ್ಲಿ ಪರಿಪೂರ್ಣತೆಯನ್ನು ಹೊಂದಿ ಮೃತ್ಯುವಶನಾದನು, ಹೆಲೆನ್ ಪಿ. ಬ್ಲಾವಟ್ಸ್ಕಿ ಇವರ ವಿಶ್ರಾಂತಿ ಸ್ಥಳದ ಹೆಬ್ಬಾಗಿಲೂ ಅದಾಗಲೇ ತೆರೆಯುತ್ತಿತ್ತು. ಪರಿಣಾಮವಾಗಿ ಹಲವು ಬಗೆಯ ಕಳವಳದಾಯಕ ಸಮಾಚಾರಗಳು ನನ್ನ ತಲೆಯ ಮೇಲೆ ಬಿದ್ದವು. ಪ್ರತಿಯೊಂದು ಪರಿಸ್ಥಿತಿಯೂ ಪ್ರಖರವಾಯಿತು; ಪ್ರತಿಯೊಂದು ಪ್ರಯೋಗವೂ ಶಾಂತವಾಗಿ ಪರಿಣಮಿಸಿತು; ಮತ್ತು ಪ್ರತಿಯೊಂದು ಉತ್ತರವೂ ಶೋಧಿಯನ್ನೊಳಿಸಿತು. ಸಂದೇಹದ ಬದಲಾಗಿ ಶಾಂತ ಮನೋದಾರ್ಢ್ಯತೆಯೂ ಕುತೂಹಲದಾಯಕವಾದ ಅನಿಶ್ಚಿತತೆಯ ಬದಲಾಗಿ ಪ್ರಬಲ ಬದ್ಧತೆಯೂ ಇದೀಗ ಉಂಟಾಯಿತು. ಜೀವನ, ಅನಂತರ ಸಾವು, ಅದರ ಮೂಲಕವೇ ಪುನಃ ಜೀವನ ಎಂಬಂತೆ ನಾನು ವಿಶ್ವ-ಬ್ರಹ್ಮಾಂಡದ ಸೇವಕಿಯಾಗಿರುವೆನು. ಯಾರ ತಲೆಯ ಮೇಲೆ ಒಂದು ಕ್ಷಣಕ್ಕಾದರೂ ಗುರುಹಸ್ತದ ಕೃಪಾಕಟಾಕ್ಷ ಬೀರಿಸಲ್ಪಟ್ಟಿದೆಯೋ ಅಂಥವರು ಮಾತ್ರ ತಮ್ಮ ಚಿರಂತನ ಸತ್ಯಶಾಂತಿಯ ಪ್ರಭೆಯ ಮೂಲಕವಾಗಿ ಈ ಲೋಕವನ್ನು ಪುನಃ ನೋಡಬಹುದಲ್ಲದೆ ಇತರರಲ್ಲ!!!

ಜೀವನ ಚರಿತ್ರೆ - ಟಿಪ್ಪಣಿಗಳು.

ನಾಲ್ಕನೇ ಭಾಗ.

(ಹಳೆ ದಿನಚರಿ ಪತ್ರಗಳು - ಹೆಚ್. ಎಸ್. ಓಲ್ಕಾಟ್ ಇವರಿಂದ)

×

1889.

ಆನಿ ಬೆಸೆಂಟ್ ಮತ್ತು, ಹೆಚ್. ಎಸ್. ಓಲ್ಕಾಟ್ — ಇವರ ಮೊದಲ ಭೇಟಿ:— ಹೆಚ್. ಪಿ. ಬ್ಲಾವಟ್‌ಸ್ಕಿ ಇವರು ಲಂಡನ್ನಿನಲ್ಲಿ ನಾನು ಬಂದಿಳಿದ ಆ ಸೆಪ್ಟಂಬರ್ 4 ರಂದು ತುಂಬಾ ಹಾರ್ದಿಕವಾಗಿ ನನ್ನನ್ನು ಸ್ವಾಗತಿಸಿದರು, ಭೌತಿಕವಾದಿಗಳ ಸಂಸ್ಥೆಯನ್ನು ಬಿಟ್ಟು ತನ್ನ ಕಟ್ಟು ಮೂಟೆಗಳ ಸಹಿತವಾಗಿ ಆನಿ ಬೆಸೆಂಟ್ ಇವರೂ ಆದಾಗಲೇ ಬಂದು ಅದೇ ಮನೆಯಲ್ಲಿ ವಾಸಿಸುತ್ತಿರುವುದನ್ನು ಕಂಡೆನು. ಆದಾಗಲೇ ಆವರು ಬ್ರಹ್ಮಜ್ಞಾನ (Theosophy) ತತ್ವವನ್ನು ಕುರಿತು ಉಪನ್ಯಾಸಕರೂ ಗ್ರಂಥಕರ್ತರೂ ಸಂಪಾದಕಿಯೂ ಬೋಧಕಿಯೂ ಆಗಿ ಅವರ ಶೋಭಾಯಮಾನವಾದ ಜೀವನವು ಆರಂಭವಾಗಿತ್ತು. ಅವರು ಬ್ರಹ್ಮಜ್ಞಾನಿಯಲ್ಲದೆ ಬೇರಾವುದೂ ಆಗಲಿಕ್ಕೆ ಸಾಧ್ಯವಿಲ್ಲವೆಂದರೆ ಆಶ್ಚರ್ಯವಾಗದೇ? ---- ನಾನು ಅವರನ್ನು ಸೆಪ್ಟಂಬರ್ ೫ ರಂದು ಸಾಯಂಕಾಲ ಮೊದಲ ಬಾರಿಗೆ ಕಂಡಾಗ ನಾನು ಅವರಲ್ಲಿ ಕಂಡುದ್ದೇನು ಎಂಬುದನ್ನು ನನ್ನ ದಿನಚರಿ ಪತ್ರದಲ್ಲಿ ಬರೆದೆನು, "ಶ್ರೀಮತಿ ಬೆಸೆಂಟ್ ಇವರು ಸ್ವಭಾವಿಕವಾಗಿ ಓರ್ವ ಬ್ರಹ್ಮಜ್ಞಾನಿ (Theosophist) ಎಂಬುದಾಗಿ ನನಗೆ ಕಂಡುಬಂತು. ಅವರು ಯೋಗ ರಹಸ್ಯವಾದಕ್ಕೆ ಸ್ವಾಭಾವಿಕವಾಗಿ ಆಕರ್ಷಿತರಾದುದರಿಂದ ಅವರು ನಮ್ಮ ಜೊತೆಗೂಡಿದುದು ಅನಿವಾರ್ಯವಾಗಿದೆ. ಸಿನ್ನೆಟ್ (Sinnett) ಇವರನಂತರ ನಮಗೆ ದೊರಕಿದವರಲ್ಲಿ ಅವರೇ ಪ್ರಮುಖರಾಗಿದ್ದಾರೆ---.

ಬಾಗಿಲಿನ ಮರೆಗೆ ಅವರನ್ನು ಬೀಳ್ಕೊಡಲು ಹೋಗುವಾಗ ನಾನು ಅವರ ದಯಾಪೂರ್ಣ ಹಾಗೂ ಭವ್ಯವಾದ ಕಣ್ಣುಗಳನ್ನು ನೋಡಿದೆನು, ಆಗ ಅವರ ಗತಜೀವನಗಳ ಕಾರ್ಯಾವಳಿಯು ನನ್ನ ಸ್ಮೃತಿಯನ್ನು ಹೊಕ್ಕು ಮಿಂಚಿದಂತಾಯಿತು, ನಾನು ಅವರ ಕೈಯನ್ನು ಹಿಡಿದು ಅವರಿಗೆ ಆಗ ಹೇಳಿದ ಮಾತುಗಳನ್ನು ನೆನೆಯುತ್ತೇನೆ. "ನೀನು ನಿನ್ನ ಜೀವನದಲ್ಲಿ ಹಿಂದೆಂದೂ ಪಡೆಯದಿದ್ದ ಶಿಕ್ಷಣ ಸಂತೋಷವನ್ನು ಮುಂದಕ್ಕೆ ಅನುಭವಿಸುವೆಯೆಂದು ಭಾವಿಸುತ್ತೇನೆ, ಏಕೆಂದರೆ ನೀನು ನಿನ್ನ ಹಿಂದಿನ ಪರಿಸ್ಥಿತಿಗೆ ಸೇರಿದ ಓರ್ವ ರಹಸ್ಯವಾದಿಯಾಗಿ ನಾನು ಕಾಣುತ್ತಿದ್ದೇನೆ. ಈಗ ನೀನು ವಿಚಾರಜ್ಞಾನಿಗಳ ಸಂಸಾರದಲ್ಲಿ ಒಬ್ಬಳಾಗಿರುವೆ! ಅವರು ನಿನ್ನನ್ನು ಸಂಪೂರ್ಣವಾಗಿ ತಿಳಿಯುವರು, ಮಾತ್ರವಲ್ಲ, ನಿನ್ನನ್ನು ಪ್ರೀ

ತಿಂಗಳವರೆಗೆ, ಮುಂದಿನ ಆದಿತ್ಯವಾರದಂದು Hall of Science ಇದರಲ್ಲಿ ಶ್ರೀಮತಿ ಬಿಸೆಂಟ್ ಇವರು Memory ಎಂದರೆ 'ಸ್ಮರಣೆ' ಎಂಬುದರ ಮೇಲೆ ಕೊಟ್ಟ ಭಾಷಣವನ್ನು ಕೇಳಲಿಕ್ಕೆ ಹೋಗಿದ್ದೆನು, ಅದು ನಾನು ಮೊದಲ ಬಾರಿಗೆ ಕೇಳಿದ ಅವರ ಪ್ರಮೋಪಿಪೂ ಭಾವಗರ್ಭಿತವೂ ಆದ ಉಪನ್ಯಾಸವಾಗಿತ್ತು. ಇಂದು ಅಸ್ತಿತ್ವದ ಮಾಗಿಯೂ ಮಾರ್ಗವನ್ನು ನೋಡುವ ಈ ಸಂದರ್ಭವನ್ನು ಕಳೆದುಕೊಳ್ಳಬಾರದೆಂದು ಹಲವು ಬಾರಿ ನಾನು ಸಿಬ್ಬನೀ ಎಂದರೆ ಇತರರೊಡನೆ ಹೋಗಿ ಆವರ ಭಾಷಣಗಳನ್ನು ಕೇಳುತ್ತಿದ್ದೆನು, ಅವರು Freethinkers ಇವರ ತತ್ವಕ್ಕೆ ವ್ಯತಿರಿಕ್ತವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದುದರಿಂದ ಅವರು ಆ ಸಂಸ್ಥೆಯ ಆಶ್ರಯದಲ್ಲಿ ಇನ್ನು ಮುಂದಕ್ಕೆ ಮಾತಾಡಲು ಅವಕಾಶವನ್ನು ಕೊಡಬಾರದೆಂದು ತೀರ್ಮಾನಿಸಿದ ದಿನ ಅವರು ತನ್ನ ಹಿಂದಿನ ಸಹೋದ್ಯೋಗಿಗಳಿಂದ ಅಗಲಿದ ಆ ಸಂದರ್ಭದಲ್ಲಿಯೂ ದಿನದಂದು ದುಃಖದಿಂದ ಕೂಡಿದ್ದ ಅವರನ್ನು Hall of Science ಇದರೊಳಕ್ಕೆ ನಾನು ಕರೆತಂದಿದ್ದೆನು.

1890.

ಈ 1890ನೇ ವರ್ಷದಲ್ಲಿ ಶ್ರೀ ಎಂ. ವಿ. ಸಿನ್ನೆಟ್ಟ್ ಇವರ ಮನೆಯಲ್ಲಿ ಲಂಡನ್ನಿನಲ್ಲಿ ಶ್ರೀಮತಿ ಬಿಸೆಂಟ್ ಇವರು ಸಿ. ಡಬ್ಲ್ಯು. ಲೆಡ್‌ಬೀಟರ್ ಇವರನ್ನು ಮೊದಲ ಬಾರಿಗೆ ಭೇಟಿಯಾದರು.

1891

ಬುಧವಾರದಂದು ಮೊದಲನೇ ಅಧಿವೇಶನ:- ಎವಿನ್ಯೂ ರಸ್ತೆಯಲ್ಲಿರುವ "ಬ್ಲಾವಟ್‌ಸ್ಕೀ ಲಾಡ್ಜ್" ಇಲ್ಲಿ ಸಭೆಯು ಸೇರಿತ್ತು.--- ಶ್ರೀಮತಿ ಬಿಸೆಂಟ್ ಇವರು ಬಹು ಚಿಂತೆಯುದಾಗಿ ಮತ್ತು ಅವರ ಮನೋಗತಕ್ಕೆ ತಕ್ಕಂತಹ ಆದರಾಭಿಮಾನದಿಂದ ನನ್ನನ್ನು ಸ್ವಾಗತಿಸಿದಾಗ ಅವರು ಹೇಳಿದ ಮಾತುಗಳನ್ನು ಇಲ್ಲಿ ಸಂಕ್ಷೇಪವಾಗಿ ಹೇಳುವೆನು, ಅವರು ಹೀಗೆಂದರು:—

"ಆಶ್ಚರ್ಯ ವಿಸ್ತಾರತ್ವಗಳಲ್ಲಿಯೂ ದೊಡ್ಡದೆಂದೆನಿಸಲಾದ ಈ "ಬ್ಲಾವಟ್‌ಸ್ಕೀ ಲಾಡ್ಜ್" ಇದರ ಅಧ್ಯಕ್ಷೆಯಾಗಿ ನಾನು ಇಲ್ಲಿ ಸೇರಿದ ಪ್ರತಿನಿಧಿಗಳು ಮತ್ತು ಸದಸ್ಯರ ಪರವಾಗಿ ನಮ್ಮ ಈ Theosophical Society ಇದರ ಸ್ಥಾಪಕ-ಅಧ್ಯಕ್ಷನಿಗೆ ಸ್ವಾಗತವನ್ನೀಯುವುದು ನನ್ನ ಕರ್ತವ್ಯವೂ ಗೌರವಪೂರ್ವಕವಾದ ಕಾರ್ಯವೂ ಆಗಿದೆ, ಅವನ ಜೀವನವು ಯಾವ ಧ್ಯೇಯವನ್ನು ಸಾಧಿಸಲು ಮೀಸಲಾಗಿದೆಯೋ ಅದಕ್ಕಾಗಿ ಅವನು ಹಿಂದೆ ಶ್ರಮಿಸಿದ್ದುದರ ಬಗ್ಗೆ ನಾನು ಇಲ್ಲಿ ನಿಮಗೆ ಹೇಳಬೇಕಾದ ಅವಶ್ಯವಿಲ್ಲ, ಈ ಬ್ರಹ್ಮಜ್ಞಾನ ಸಂಘ (Theosophical Society) ಇದರ ಜೀವಾವಧಿ ಅಧ್ಯಕ್ಷನಾಗಿ ಇರುವುದರಿಂದ

ಅರಿಸಲ್ಪಟ್ಟಿತು, ಅವರ ದಿಗ್ದರ್ಶಕರಾದ ಹೆಚ್. ಪಿ. ಬಿ. ಇವರ ಸಂಪರ್ಕವನ್ನು ಪಡೆದರು, ನಮ್ಮನ್ನು ಹಿಂದಾಗಿ ಬಿಗಿದ ಪ್ರತಿಯೊಂದು ಶಕ್ತಿನಿಂದಲೂ ಬಿಗಿಯಲ್ಪಟ್ಟಿತು, ಮಾತಿನಲ್ಲಿ ಹೇಳಲು ಸಾಧ್ಯವಿಲ್ಲದ ಮತ್ತು ಆಲೋಚನೆಗೆ ಎಟುಕದ ಸ್ನೇಹಬಂಧನಿಷ್ಠೆಯನ್ನು ಪ್ರತಿಯೊಬ್ಬ ಸದಸ್ಯನೂ ನಮ್ಮ ಅಧ್ಯಕ್ಷರಿಗೆ ಸಲ್ಲಿಸಬೇಕಾದುದಕ್ಕಿಂತ ಹೆಚ್ಚೇನೂ ಬೇಕಾಗಿಲ್ಲ. ಈ ಸಂಸ್ಥೆಗಾಗಿ ದುಡಿದು ಕ್ಷೀಣವಾದ ತನ್ನ ದೇಹಾರೋಗ್ಯವನ್ನು ಸುಧಾರಿಸಲು ಆಸ್ಟ್ರೇಲಿಯಾಕ್ಕೆ ಹೋಗಿದ್ದು ಕಡೆಗೆ ಹೆಚ್. ಪಿ. ಬಿ. ಇವರು ನಮ್ಮಿಂದ ಅಗಲಿದುದನ್ನು ಕೇಳಿದೊಡನೆಯೇ ಹಿಂದಿರುಗಿ ಧಾವಿಸಿದ ನಮ್ಮ ಅಧ್ಯಕ್ಷನನ್ನು ಇನ್ನು ಹಾರ್ದಿಕವಾಗಿ ಸ್ವಾಗತಿಸುತ್ತೇವೆ, ಯುರೋಪಿನಲ್ಲಿರುವ ನಮ್ಮನನ್ನು ತನ್ನ ಬರೋಣದಿಂದ ಹುರಿದುಂಬಿಸಿ, ಪ್ರೋತ್ಸಾಹಿಸಿ ಕರ್ತವ್ಯತತ್ಪರರಾಗಿಸಿ ಮುನ್ನಡೆಸಬಹುದೆಂದು ಅವನು ಸ್ವಲ್ಪವೂ ತಡೆಯದೆ ಸಾಗರಗಳನ್ನು ದಾಟಿ ಬಂದನು, ಅಧ್ಯಕ್ಷರೆ, ನಿಮ್ಮನ್ನು ಈ ಅಧಿವೇಶನವನ್ನು ನಡೆಸಿಕೊಡಬೇಕೆಂದು ಕೋರುವಾಗ ನಮ್ಮ ಗುರುಗಳ ಸಂದೇಶವನ್ನು ಎತ್ತಿ ಹಿಡಿಯುತ್ತಿರುವವರಲ್ಲಿ ಒಬ್ಬರೇ ಆದ ನಿಮಗೆ ನಮ್ಮ ಸದಸ್ಯರಲ್ಲಿ ಅಚಲ ವಿಶ್ವಾಸವನ್ನಿಟ್ಟಿದ್ದೇವೆಯೆಂದು ಪ್ರಮಾಣಪೂರ್ವಕವಾಗಿ ಹೇಳುತ್ತೇವೆ, ನಾವು ಹೆಚ್. ಪಿ. ಬಿ. ಯು ಮಾಡಿದ ಕೆಲಸಗಳನ್ನು ಮುಂದುವರಿಸಲಿಕ್ಕಾಗಿ ಇಲ್ಲಿ ಇಂದು ಸೇರಿದ್ದೇವೆ, ಆ ಕಾರ್ಯವನ್ನು ನಡೆಸಲು ಮತ್ತು ಈ ಸಂಸ್ಥೆಯನ್ನು ಬಲಪಡಿಸಲು ಇರುವ ಒಂದೇ ಒಂದು ದಾರಿಯೆಂದರೆ ಪೂರ್ಣ ಸ್ವಾಮಿನಿಷ್ಠೆ ಮತ್ತು ಕರ್ತವ್ಯದಕ್ಷತೆಗಾಗಿ ಅವಳು ಮಾಡಿದಳೋ ಅದಕ್ಕಾಗಿಯೇ ಈ ಲೋಕದಲ್ಲಿ ಬದುಕುವುದು, ಮತ್ತು ಅದಕ್ಕಾಗಿಯೇ ಸಾಯುವುದು ಸಾರ್ಥಕವಾಗುವುದು."

1892

1892 ರ ಡಿಸೆಂಬರ್‌ನ The Theosophist – ಪತ್ರಿಕೆಯ ವಿಶೇಷ ಸಂಚಿಕೆಯಿಂದ: ಭಾರತೀಯ ತತ್ವಜ್ಞಾನಿಗಳಿಗೆ — (Theosophists), 19 ನೇ ಏವಿನ್ಯೂ ರಸ್ತೆ. (NW.) London: —.

"ತಾ. 21-10-1892, ಪ್ರಿಯ ಮಿತ್ರರೇ, ಸೋದರರೇ, ನಾನು ಹಿಂದೂಸ್ಥಾನಕ್ಕೆ ಹೋಗಲು ಸಾಧ್ಯವಾಗದಿದ್ದುದರ ಬಗ್ಗೆ ತುಂಬಾ ನಿರಾಶೆಯುಂಟಾಗಿದೆಯೆಂದು ನನಗೆ ತಿಳಿಸಲಾಯಿತು, ಭಾರತವು ಎಲ್ಲಾ ತತ್ವಜ್ಞಾನಿಗಳಿಗೆ ಹೇಗೋ ಹಾಗೆಯೇ ನನಗೂ ಸಹ 'ಪವಿತ್ರ ಭೂಮಿ'ಯಾಗಿದೆ, ಹೇಗೂ ಆ ಸ್ನೇಹಪೂರ್ವಕವಾದ ನಿರಾಶೆಗೆ ಕಹಿ ಭಾವನೆಯನ್ನು ಬೆರೆಸಿಕೊಳ್ಳಲಾರರೆಂದು ನಾನು ಹೃತ್ಪೂರ್ವಕವಾಗಿ ನಂಬುತ್ತೇನೆ,

"ನನಗೆ ಸಾಧ್ಯವಾದರೆ ಭಾರತವನ್ನು ಕಳೆದ ವರ್ಷ

ಸಂದರ್ಶಿಸುವೆನೆಂದು ಮಾತು ಕೊಟ್ಟಿದ್ದೆನು; ಆದರೆ ಅದನ್ನು ಈಡೇರಿಸಲು ಎರಡು ಘಟನೆಗಳಿದ್ದುವು, ಒಂದನೇದಾಗಿ ನನ್ನ ದೇಹವು ಆ ಹವೆಯನ್ನು ಸಹಿಸುವಂತಿರಬೇಕಿತ್ತು; ಎರಡನೇದಾಗಿ ನಾನು ಸಂಪಾದಿಸುವ ಹಣದಿಂದಲೇ ಈಗ ನಾನು ಜೀವಿಸುತ್ತಿರುವೆನು, ಹೆಚ್. ಪಿ. ಬ್ಲಾವಟ್ಸ್ಕೀ ಇವರು ನನ್ನ ಮತ್ತು ಇತರರ ಆಶ್ರಯದಲ್ಲಿ ಇಟ್ಟ ಆ ಪ್ರಧಾನ ಕಚೇರಿಯು ಕೋಶಗಳಿಗೂ ನನ್ನ ಸಂಪಾದನೆಯನ್ನು ವಿನಿಯೋಗಿಸಬೇಕಾಗಿತ್ತು, ಹಿಂದೂಸ್ಥಾನದಲ್ಲಿ ನನ್ನ ಪ್ರಯಾಣಕ್ಕೆ ತಗಲುವ ಖರ್ಚನ್ನು ಕಾದಿಟ್ಟು ಅಲ್ಲಿಯೇ ಸಂಗ್ರಹಿಸಬೇಕಾಗಿದ್ದರೆ ಪ್ರಧಾನ ಕಚೇರಿಯ ಖರ್ಚಿಗೆ ನಾನು ಯುರೋಪು ಮತ್ತು ಅಮೇರಿಕಾದಲ್ಲಿ ದುಡಿದಿದ್ದರೆ ಎಷ್ಟು ಸಂಪಾದಿಸುತ್ತಿದ್ದೆನೋ ಅಷ್ಟನ್ನು ಅಲ್ಲಿಯೇ (ಇಂಡಿಯಾದಲ್ಲಿ) ಸಂಗ್ರಹಿಸಬೇಕಾಗಿತ್ತು, ಈ ಎರಡು ಉದ್ದೇಶಗಳೂ ಈಡೇರುತ್ತಿಲ್ಲ, ನಾನು ಆಲೋಚಿಸಿದ್ದಂತೆ ಹಿಂದೂಸ್ಥಾನದಲ್ಲಿ ಭಾಷಣ ಪ್ರವಾಸದ ನಿಮಿತ್ತವಾಗಿ ತಿರುಗಿದರೆ ನಾನು ಜೀವಂತವಾಗಿ ಹಿಂದಿರುಗಲಾರೆನೆಂದು ಹೆಚ್. ಪಿ. ಬಿ. ಇವರು ಲಂಡನ್ನಿನಲ್ಲಿ ಇದ್ದಾಗ ಅವರ ಎಚ್ಚರಿಕೆಯನ್ನು ನೋಡಿಕೊಳ್ಳುತ್ತಿದ್ದ ವೈದ್ಯನು ಹೇಳಿದ್ದನು, ಆ ವರ್ಷ ನಾನು ಅವಿರತವಾಗಿ ದುಡಿದು ದೇಹಾಸ್ವಾಸ್ಥ್ಯಕ್ಕೆ ಒಳಗಾಗಿರಲು ಭಾರತದ ಉಷ್ಣ ಹವೆ ಮತ್ತು ತೀರಾ ಬೇರೆಯಾದ ಜೀವನ ಕ್ರಮದಿಂದ ನನ್ನ ಬಲವು ಕುಂದುವುದೆಂದು ನಾನು ಅರಿತೆನು; ಇಂಗ್ಲೆಂಡ್ ಅಥವಾ ಅಮೇರಿಕಾದಲ್ಲಿ ಕೆಲಸಕ್ಕೆ ತೊಡಗುವಂತಾದರೂ ಅಮೇರಿಕಾದ ಸಮಶೀತೋಷ್ಣ ಪ್ರಯಾಣ ಮತ್ತು ಸಮುದ್ರಯಾನ ಹವೆಯಿಂದ ಸುಖಕರವಾಗಬಹುದು, ಆದರೆ ಇಂಡಿಯಾದಲ್ಲಿ ಭಾಷಣ ಪ್ರವಾಸವು ನಿಜಕ್ಕೂ ದೇಹವನ್ನು ಕೆಡಿಸಬಹುದು ಎಂಬೀ ಬಗೆಯ ವಾದಗಳು, ಇತರ ಕಾರ್ಯಗಳಿಗಿಂತ, ನನ್ನ ಪ್ರವಾಸವನ್ನು ಮುಂದುವರಿಸಲು ಸಾಕಾಗಿದ್ದುವು,

ಹೀಗೆ ಎರಡನೆ ಉದ್ದೇಶ ನಡೆಸಲ್ಪಡದೆ ಉಳಿದೇ ಇತ್ತು----ನಾನು ಈ ವರ್ಷವೇ ಇಂಡಿಯಾಕ್ಕೆ ಹೋಗದಿದ್ದುದರಿಂದ ಕೆಲವು ಮದರಾಸಿನ ಸದಸ್ಯರು ನಾನು ಹಿಂದೆ ಮಾಡಿದ ಒಪ್ಪಂದವನ್ನು ಮುರಿದೆನೆಂದು ಹೇಳಲಾರಂಭಿಸಿದರು, ಆದರೆ ನಾನು ಆ ಬಗ್ಗೆ ಯಾವ ಮಾತನ್ನೂ ಕೊಟ್ಟಿರಲಿಲ್ಲ, ಕೆಲವು ಘಟನೆಗಳು ಹಿತಕರ ಸಂಭವಿಸಿದ್ದೇ ಸದಸ್ಯರನು ಸೇರಿಸುವುದನ್ನು ಸಾಧ್ಯವಾಗಿದ್ದರೆ ನಾನು ಕಳೆದ ವರ್ಷವೇ ಹೋಗುತ್ತಿದ್ದೆನೆಂದು ಹೇಳಿದ್ದೆನು, ಸದಸ್ಯರು ಅದಕ್ಕೆ ತಕ್ಕ ವಾಗ್ದಾನವನ್ನು ಮಾಡಿದರೆ ಅದೂ ಅಂತಾಗಲಿಲ್ಲ, ಅಲ್ಲಿಂದಿತ್ತಲಾಗಿ ನಾನು ಯಾವ ರೀತಿಯಲ್ಲೂ ಮಾತು ಕೊಡದ್ದರಿಂದ

ಇದನ್ನು ಮೀರುವ ಪ್ರಸಂಗವೇ ಇದ್ದಿಲ್ಲ.

ಇತರ ಪತ್ರಗಳೂ ಬೇಕಾದಷ್ಟು ಹಣವನ್ನು ಇದೀಗಲೇ ಸಂಗ್ರಹಿಸಲಾಗಿದೆಯೆಂದು ನನಗೆ ತಿಳಿಸಿದ್ದಾರೆ, ಆ ಹಣವು ಬ್ಯಾಂಕಿನಲ್ಲಿದ್ದು ನನ್ನ ಬರುವಿಕೆಗಾಗಿ ಕಾಯುತ್ತಾ ಇದ್ದಾರೆ. ನನ್ನ ಮುಂದಿನ ಕಾರ್ಯಕ್ರಮವನ್ನು ಆ ಹಣವನ್ನು ತೆತ್ತವರೇ ನಿಶ್ಚಯಿಸಬೇಕು; ಇಷ್ಟವಾದರೆ ಇದನ್ನು ಆಯಾ ಉದಾರಿಗಳಿಗೆ ಹಿಂದಕ್ಕೆ ಕೊಡಬಹುದು. ಇದನ್ನು ಕುರಿತು ನಾನು ಏನೂ ಹೇಳುವಂತಿಲ್ಲ.

ನಮ್ಮ ಸಂಸ್ಥೆಯ ಸ್ಥಾಪಕ ಮತ್ತು ಅಧ್ಯಕ್ಷ ಕರ್ನಲ್ ಹೆಚ್. ಎಸ್. ಆಲ್ಕಾಟ್ ಇವರೂ ಹೆಚ್. ಪಿ. ಬಿ. ಇವರ ಪ್ರೀತಿಯ ಗೆಳೆಯನೂ ಶಿಷ್ಯನೂ ಆಗಿದ್ದ ಈಗ ಸಂಸ್ಥೆಯ ಕಾರ್ಯದರ್ಶಿಯಾಗಿರುವ ಸೋದರ ಬರ್ಟ್ರಮ್ ಕೀಟ್ಲಿ (Bertram Keightley) ಇವರೂ ಈಗ ಹಿಂದೂಸ್ಥಾನದಲ್ಲಿರುವುದು ದೇಶದ ಸುಯೋಗವಾಗಿದೆ. ಆ ದೇಶದ ಅವಶ್ಯಕತೆಯು ನಮ್ಮದಕ್ಕಿಂತ ಹೆಚ್ಚಿನದಾಗಿರುವುದರಿಂದ ಇವರ ಜೊತೆಗೆ ನಮ್ಮ ಕಛೇರಿಯಿಂದ ಸೋದರ ಎಡ್ಜ್ ಇವರನ್ನೂ ಕಳುಹಿಸಲಾಗಿದೆ, ಇಷ್ಟೆಲ್ಲ ಇದ್ದಮೇಲೆ ಬಂದಿರತಕ್ಕ ವರ್ಷಗಳಲ್ಲಿ ಅಥವಾ ಅನಂತರ ನಾನು ಅಲ್ಲಿಗೆ ಹೋಗುವ ವಿಚಾರ ಇಷ್ಟೇನೂ ದೊಡ್ಡದಲ್ಲ, ಭಾರತದ ಉದ್ಧಾರವು ಆ ದೇಶದ ಜನರಿಂದ ಮತ್ತು ಅಲ್ಲಿರುವ ನಮ್ಮ ಸಂಸ್ಥೆಯ ಕೆಲಸಗಾರರಿಂದಾಗಬೇಕಲ್ಲದೆ ನಾನು ಭಾರತಕ್ಕೆಂದು ಅಲ್ಲಿ ಹೋದರೆ ಉಂಟಾಗತಕ್ಕ ಉದ್ವೇಗದಿಂದಲ್ಲ, ಆದುದರಿಂದ ನನ್ನ ಸೋದರರೇ, ನಿಮ್ಮ ದೇಶಕ್ಕೆ ನೀವೇ ಜವಾಬ್ದಾರರಾಗಬೇಕು. ನನ್ನ ಹುಟ್ಟಿನಾಡು ಮತ್ತು ಸ್ವಜನರಿಗಿಂತಲೂ ಸಮೀಪದಲ್ಲಿ ನನಗೆ ಹಿಂದೂಸ್ಥಾನ ಮತ್ತು ಹಿಂದೂ ಜನರು ಇದ್ದಾರೆಂದು ತೋರುವ ಆ ಜನದ ಮತ್ತೊಂದೆ ನಿಂತು ಬೇಗನೆ ಮಾತಾಡುತ್ತಿರುವೆನು, ಹೃದಯಾಂತರಾಳದಲ್ಲಿ ನಾನು ನಿಮ್ಮೊಂದಿಗೆ ಇದ್ದೇನೆ, ಮತ್ತು ನಾನು ನನ್ನ ಹಿಂದಿನ ಜನ್ಮದ ಕಾರಣದಿಂದ ನಿಮ್ಮವನೆ ಇದೀಗಲೇ ಸೇರಿದ್ದೇನೆ, ಇದೇನೋ ಮಾಡುವುದಕ್ಕೆ ಸ್ವಲ್ಪ ಕೆಲಸವಿದ್ದುದರಿಂದ ಪಾಶ್ಚಾತ್ಯ ಗಗನದ ಕೆಳಗೆ ಹುಟ್ಟಿದ ನಾನು ನನ್ನ ನಿಜವಾದ ಮಾತೃಭೂಮಿಯನ್ನು ಮರೆಯಲಾರೆನು, ಮಕ್ಕಳು ತಮ್ಮ ತಾಯಿಯನ್ನು ಸೇರಲು ಕಾಯುವಂತೆ ನನ್ನ ಅಂತರಾತ್ಮವು ಪೂರ್ವಾಭಿಮುಖವಾಗಿಯೇ ವಾಲಿದೆ, ಕರ್ಮವು ಅದರ ಬಾಗಿಲನ್ನು ತೆರೆದಾಗ ನಾನು ಅದರ ಮೂಲಕವಾಗಿ ಹಾದು ಹೋಗುತ್ತೇನೆ, ಆಗ ನಾವು ಮಾನಸಿಕವಾಗಿ ಈಗ ಹೇಗೆ ಎದುರುಗೊಂಡಿದ್ದೇವೋ ಅದೇ ರೀತಿ ಮುಖತಃ ಭೇಟಿಯಾಗಿ ವ್ಯವಹರಿಸಲಿದ್ದೇನೆ. ಇತಿ ನಮಸ್ಕಾರ! ಸಹಿ] ಅನಿ ಬಿಸೆಂಟ್, ಎಫ್. ಟಿ. ಎಸ್., (Fellow of Theosophical Society).

———×———

1893

(ಕರ್ನಲ್ ಆಲ್ಕಾಟ್ ಇವರ ಹಳೇ ದಿನಚರಿ - ಪುಟಗಳು)

ಈ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ವಿಶ್ವಧರ್ಮ ಸಮ್ಮೇಳನವು ಚಿಕಾಗೋದಲ್ಲಿ ನಡೆಯುತ್ತಿತ್ತು --- ನನ್ನ ಪರವಾಗಿ ಅದರಲ್ಲಿ ಅಧಿಕೃತವಾಗಿ ಭಾಗವಹಿಸಲು ಸಂಸ್ಥೆಯ (Theosophical Society) ಇದರ ಉಪಾಧ್ಯಕ್ಷ ಶ್ರೀ ಜಡ್ಜ್ ಇವರನ್ನು ನೇಮಿಸಿದೆನು. ಶ್ರೀಮತಿ ಬೆಸೆಂಟ್ ಇವರನ್ನು ಇಡೀ ಸಂಸ್ಥೆಯ ಪರವಾಗಿ ಅಲ್ಲಿ ಮಾತಾಡಲು ವಿಶೇಷ ಪ್ರತಿನಿಧಿಯಾಗಿ ನೇಮಿಸಲಾಯಿತು. 3,000 ಜನರಿಂದ ಕೂಡಿದ ವಿಶ್ವ ಸಮ್ಮೇಳನದಲ್ಲೂ ಮತ್ತಿತರ ಸಭೆಗಳಲ್ಲೂ ತತ್ವಜ್ಞಾನದ ವಿಷಯವಾಗಿ ವ್ಯಕ್ತವಾಗಿ ಹೇಳಲಾಯಿತು. ಡಾ|| ಜಿ. ಎನ್. ಚಕ್ರವರ್ತಿ ಮತ್ತು ಶ್ರೀಮತಿ ಬೆಸೆಂಟ್ ಇವರು ತಮ್ಮ ವಾಗ್ಬಲದಿಂದ ಎಲ್ಲರನ್ನೂ ಮುಗ್ಧಗೊಳಿಸಿ ಸರ್ವರ ಪ್ರಶಂಸೆಗೂ ಪಾತ್ರರಾದರು.

ಏಪ್ರಿಲ್ ತಿಂಗಳ 30ರಂದು ನಾನು ಕೊಲಂಬೊವನ್ನು ತಲುಪಿದೆನು. ಅಲ್ಲಿಂದಿತ್ತಲಾಗಿ ನಾನು ಹಲವು ಕಾರ್ಯಭಾರದಲ್ಲಿ ತಲ್ಲೀನನಾದೆನು. ಬೌದ್ಧ ಜನರನ್ನೆಲ್ಲ ಸೇರಿಸಿ ಶ್ರೀಮತಿ ಬೆಸೆಂಟ್ ಇವರ ಸ್ವಾಗತಕ್ಕೆ ಭಾಷಣಗಳಿಗೂ ವ್ಯವಸ್ಥೆ ಮಾಡುವುದಲ್ಲದೆ ಅವರ ವಿಷಯವಾಗಿ ಮತ್ತು ಅವರ ಸಾರ್ವಜನಿಕ ಸೇವೆಯ ಬಗೆ ಜನರಿಗೆ ಹೇಳುತ್ತಿದ್ದೆನು. ಅವರು ಮತ್ತು ಕೌಂಟೆಸ್ ವಾಕ್ಟ್ ಮೆಯೆರ್ ಇವರು ನವಂಬರ್ ೧೮ ರಾತ್ರಿ ಬಂದರು. ಮಧ್ಯಾಹ್ನದ ನಂತರ ರಾತ್ರಿ ೮ ಗಂಟೆಯವರೆಗೆ ನಮ್ಮ ಥಿಯೊಸೊಫಿಕಲ್ ಸಂಘಕ್ಕೆ ಸೇರಿದ ಶಾಲೆಯ ೨೦೦ ಹುಡುಗರೂ ೧೫೦ ಹುಡುಗಿಯರೂ ಅಲ್ಲದೆ ಸುಮಾರು ೧,೦೦೦ ಜನರು ಸಮಾಧಾನದಿಂದ ಅವರಿಗಾಗಿ ಕಾಯುತ್ತಾ ಇದ್ದು ಆನಂತರ ಹಿಂದಿರುಗಿದರು. ಕಡೆಗೆ ಮರು ದಿನ ಬೆಳಿಗ್ಗೆ ೯ ಗಂಟೆಗೆ ಅವರು ಪಟ್ಟಣಕ್ಕೆ ತಲುಪಿದರು --- ಮಧ್ಯಾಹ್ನ ೨ ಗಂಟೆಗೆ ನಾವು ಕ್ಯಾಂಡಿ (ಶ್ರೀಲಂಕಾ)ಗೆ ಹೋಗಲು ರೈಲು ಹತ್ತಿದೆವು. ಆ ದಿನ ರಾತ್ರಿ ರೈಲು ನಿಲ್ದಾಣದಿಂದ ನಮ್ಮ ಬಿಡಾರಕ್ಕೆ ಕೈದೀವಿಗೆಗಳ ಮೆರವಣಿಗೆಯೊಡನೆ ನಮ್ಮನ್ನು ಸಾಗಿಸಿದಾಗ ಬೌದ್ಧ ಜನ ಸಮೂಹವೆಲ್ಲಾ ಬೀದಿ ಉದ್ದಕ್ಕೂ ನೆರೆದಿತ್ತು --- ರಾತ್ರಿ ೮.30 ಗಂಟೆಗೆ ಪುರಭವನದಲ್ಲಿ ಶ್ರೀಮತಿ ಬೆಸೆಂಟ್ ಇವರು ಮಾತಾಡಿದರು. ಅವರ ವಾಗ್ಝರಿ, ಅವರ ವ್ಯಕ್ತಿತ್ವ, ಅವರ ಹಿರಿತನ ಮತ್ತು ಅವರು ಸಿಲೋನ್ ಜನರ ಆಶೆ ಭರವಸೆಗಳನ್ನು ಕುರಿತು ಸೂಚಿಸಿದ ಸಂತಾಪಕ್ಕೆ ನೆರೆದಿದ್ದ ಜನರೆಲ್ಲಾ ಸಂತೋಷಾತಿಶಯದಿಂದ ಮುಗ್ಧರಾದರು. ಮರುದಿನ ನಾವು ಕೊಲಂಬೋಕ್ಕೆ ಹಿಂದಿರುಗಿದೆವು. ಅಲ್ಲಿ ಶ್ರೀಮತಿ ಬೆಸೆಂಟ್ ಇವರು ಜನಸಾಗರದ

ಜನ ಕಿಕ್ಕಿರಿದು ತುಂಬಿದ್ದ ನಗರ ಸಭಾ ಭವನದಲ್ಲಿ ಮಾತಾಡಿದಳು.
----ಎರಡನೇ ಬಾರಿ ಅವಳಿಗೆ ಅಲ್ಲಿ ಮಾತಾಡಲಿಕ್ಕೆ ಸಾಧ್ಯವಾಗದ್ದ
ರಿಂದ ಜನರು ತುಂಬಾ ನಿರಾಶೆಗೊಳ್ಳಗಾಗಿ ಗದ್ದಲವೆಬ್ಬಿಸಿದರು. ಈ ಎರಡು
ಭಾಷಣಗಳಿಂದ ಶ್ರೀಮತಿ ಬೆಸೆಂಟ್ ಇವಳ 1893-94ರ ಭಾರತೀಯ
ಭಾಷಣ ಪ್ರವಾಸವು ಜಯಪ್ರದವಾಗಿ ಉದ್ಘಾಟನೆಯಾಯಿತಲ್ಲದೆ
ಇದು ಅವಳ ಮುಂದಿನ ಬಹು ಯಶಸ್ವಿಯಾದ ಕಾರ್ಯಕ್ರ
ಮಕ್ಕೆ ನಾಂದಿಯಾದಂತಾಯಿತು.

ನನ್ನ ಮಿತ್ರ ಶ್ರೀ ಎಲ್ಲನ್ ಲಿಯೋ ಇವನಾಗಲೀ ಇನ್ನಾವ ಜ್ಯೋ
ತಿಷ್ಯನಾಗಲೀ ಈ ರೀತಿ ಪ್ರಾರಂಭವಾದ ಶ್ರೀಮತಿ ಬೆಸೆಂಟ್ ಇವಳ
ಭಾರತೀಯ ಪ್ರವಾಸದ ಆ ನಿಶ್ಚಿತ ಸಮಯವನ್ನು ತಲಸ್ಪರ್
ಶವಾಗಿ ಪರಿಶೀಲಿಸಿ ಅದರ ಪರಿಣಾಮವನ್ನು ಹೇಳಿದ್ದಾದರೆ ಆ
ವಳು ಭಾರತದ ನೆಲಕ್ಕೆ ಮೊದಲನೇ ಬಾರಿಗೆ ಕಾಲಿಟ್ಟಿದ್ದು ನವಂ
ಬರ್ 16ನೇ ದಿನ ಬೆಳಿಗ್ಗೆ 10.24 ಘಂಟೆಗೆ ಆಗಿತ್ತು. ಆ ವೇಳೆಗೆ ಕಾ
ಲಮುಹೂರ್ತವು ಶುಭದಾಯಕವಾಗಿದ್ದಿರಬಹುದೆಂದು ಅವಳ ಜಯ
ಪ್ರದವಾದ ಪ್ರವಾಸದಿಂದಲೇ ತಿಳಿಯಬಹುದು. ನಾವು ಟ್ಯೂಟಿಕಾ
ರಿನ್ನಿಗೆ ತಲಪುವಾಗ ಹಿಂದೂ ಮಿತ್ರರ ನಿಯೋಗವೊಂದು ಶ್ರೀಮತಿ
ಬೆಸೆಂಟ್ ಇವಳನ್ನು ಸ್ವಾಗತಿಸುತ್ತಾ ಅವಳಿಗೆ ಒಂದು ಬಿನ್ನವತ್ತಳೆ
ಮತ್ತು ಹೂಗಳನ್ನು ಹಿಡಿದು ನಿಂತಿದ್ದರು. ಜನಸಂದಣಿಯು ಹೆಚ್ಚಿದಾ
ಗ ಮತ್ತು ನಮ್ಮ ರೈಲು ತಿನ್ನವೆಲ್ಲಿಗೆ ಹೊರಡುವ ಮೊದಲೇ ಆ ರೈಲು
ನಿಲ್ದಾಣದಲ್ಲಿಯೇ ನಿಂತು ಒಂದು ತಾತ್ಕಾಲಿಕ ಸಣ್ಣ ಭಾಷಣವ
ನ್ನು ಮಾಡುವಂತೆ ಅವಳನ್ನು ಪ್ರೇರೇಪಿಸಲಾಯಿತು.----ಇದೇ
ದಿನ ನಮ್ಮ ಕೋಣೆಗಳು ಭೇಟಿಗೆ ಬರುವ ಜನದಿಂದ ತುಂಬಿರುತ್ತಿ
ದ್ದವು. ಆದರೆ ಶ್ರೀಮತಿ ಬೆಸೆಂಟ್ ಇವಳು ತನ್ನಲ್ಲಿ ಸಂಗ್ರಹವಾದ
ಒಂದು ಕಟ್ಟು ಪತ್ರಗಳೊಡನೆ ವ್ಯವಹರಿಸಲಿಕ್ಕೆ ಸ್ವಲ್ಪ ಸಮಯ
ವನ್ನು ತೆಗೆದುಕೊಂಡಳು. ಆ ದಿನ ಸಾಯಂಕಾಲ ಬಹು ದೊಡ್ಡ ಸ
ಭೆಯಲ್ಲಿ Life After Death ಎಂಬ ವಿಷಯವನ್ನು ಕುರಿತಾಗಿ
ಒಂದು ಅಮೋಘವಾದ ಭಾಷಣವನ್ನು ಕೊಟ್ಟಳು.

ಬೆಂಗಳೂರು — ಎಷ್ಟೇ ದೊಡ್ಡ ಹಜಾರವನ್ನು ಸಭೆಗೆ ವ
ಸತಿಸಿದರೂ ಅದು ಸಾಲದಾಗುವುದೆಂಬುದಾಗಿ ಹಿಂದೆಯೇ ತಿಳಿ
ದಿದ್ದ ಬೆಂಗಳೂರಿನ ಸ್ವಾಗತ ಸಮಿತಿಯವರು ಶ್ರೀಮತಿ ಬೆಸೆಂಟ್ ಇವಳ
ಭಾಷಣವನ್ನು ಮರುದಿನ ಬೆಳಿಗ್ಗೆ ಒಂದು ಮೈದಾನದಲ್ಲಿ ಏರ್ಪಡಿ
ಸಿದ್ದರು. ನಾವಿಬ್ಬರು ಮಾತ್ರ ನಿಲ್ಲಬಹುದಾಗಿದ್ದ ಚಿಕ್ಕ ವೇದಿಕೆಯ
ಮೇಲೆ ನಿಂತು ಅವಳು ಭಾಷಣವನ್ನು ಮಾಡಿದಳು. ಹವಾಮಾನ
ವು ಚೆನ್ನಾಗಿದ್ದುದರಿಂದ ಸಾವಿರಾರು ಜನರು ನೆರೆದಿದ್ದರು.
ಆ ಸಭಾ ದೃಶ್ಯವು ತುಂಬಾ ಚಿತ್ರಮಯವಾಗಿತ್ತಲ್ಲದೆ ಸ್ವಾಗತ
ಸಮಿತಿಯವರು ಅದರ ಚಿತ್ರವನ್ನು ತೆಗೆದಿದ್ದರು ಪ್ರತಿಯನ್ನು

ಇಂದೂ ಅಡೆಯಾರ್‌ಗೆ ಭೇಟಿಕೊಡುವವರು ನೋಡಬಹುದು.
ವಿಜಯವಾಡ — ಇದು ಚಿಕ್ಕ ಸ್ಥಳ. ಆವರೆಗೆ ನೋಡಿದ್ದ ಜನ
ಸಮ್ಮೇಳನದ ಬದಲಾಗಿ ಇಲ್ಲಿ ಸರ್ವ ಪಕ್ಷಗಳ ಬಹಿರಂಗದಲ್ಲಿ Pilgri-
mage of the Soul - ಎಂಬುದಾಗಿ ಸುಮಾರು ಇಪ್ಪತ್ತೈದು ಜನಕ್ಕೆ ಬಹು
ವಿಚಾರಪೂರ್ಣ ಭಾಷಣವನ್ನು ಅವರು ಕೊಟ್ಟದ್ದು ತುಂಬಾ ಸ್ವಾರಸ್ಯವಾ
ಗಿತ್ತು ---- ನಮ್ಮ ಪ್ರಯಾಣವನ್ನು ಪೂರ್ವ ಕರಾವಳಿ ರೈಲು ನಿಲ್ದಾ
ಣದವರೆಗೆ ಮುಂದುವರಿಸಿ ಕಡೆಗೆ ಒಂದು ದೋಣಿಯಲ್ಲಿ ಕೃಷ್ಣಾ
ನದಿಯನ್ನು ದಾಟಿದೆವು. ಡಿಸೆಂಬರ್ (1893) ೨೦ರ ಬೆಳಿಗ್ಗೆ ನಾವು
ನಮ್ಮ ಅಡೆಯಾರ್ ಮನೆಗೆ ಸೇರಿದೆವು. ರೈಲು ನಿಲ್ದಾಣದಲ್ಲಿ ನೂ
ರಾರು ಮಿತ್ರರು ಹೂಗೊಂಚಲುಗಳ ಸಹಿತವಾಗಿ ನಮ್ಮನ್ನು ಕಾದು
ನಿಂತಿದ್ದರು. ಆ ವೇಳೆಗೆ ಅಡೆಯಾರ್ ತುಂಬಾ ಸುಂದರವಾಗಿ ಕಾ
ಣುತ್ತಿತ್ತಲ್ಲದೆ ಮಹಿಳೆಯರಂತೂ ಆ ದೃಶ್ಯಕ್ಕೆ ಮಾರುಹೋದರು.
1893 ರ ಡಿಸೆಂಬರ್‌ನಲ್ಲಿ ನಡೆದ ಒಂದು ಸಮ್ಮೇಳನದಲ್ಲಿ
ಶ್ರೀಮತಿ ಬೆಸೆಂಟ್ ಇವರು The Building of the Cosmos ಎಂಬು
ದರ ಮೇಲೆ ನಾಲ್ಕು ಭಾಷಣಗಳನ್ನು ಕೊಟ್ಟರು ---- ನಿಯೋಗಾರ್ಥ
ವಾಗಿ ಬಂದಿದ್ದ ಜನರು ತಂಡೋಪತಂಡವಾಗಿ ಅಲ್ಲಿ ಸೇರಿದರು.
ಎಲ್ಲಾ ಕೋಣೆಗಳೂ ಜನರಿಂದ ತುಂಬಿಹೋಗಿದ್ದುವು. ಶ್ರೀಮತಿ ಬೆ
ಸೆಂಟ್ ಇವರ ನಿತ್ಯದ ಸಂಭಾಷಣಾ ಗೋಷ್ಠಿಗೆ ಬಹು ಸಂಖ್ಯೆಯಲ್ಲಿ
ಜನರು ಸೇರುತ್ತಿದ್ದರು. ಅವೆಲ್ಲಾದರೂ ನೆಲದಲ್ಲಿ ಕಾಲುಗಳನ್ನು ಮ
ಡಚಿಕೊಂಡೂಗಳ್ಳೆ ಕೂರುವಂತೆ ಇತರ ಜನರೊಡನೆ ಅಲ್ಲಿ ನಾನು
ಹಾಸಿದ್ದ ದೊಡ್ಡ ಜಮಖಾನೆಯ ಮೇಲೆ ಕುಳಿತು ಎಲ್ಲಾ ದೊಡ್ಡ
ಪ್ರಶ್ನೆಯನ್ನಾದರೂ ಕೂಡಲೇ ಬಹು ಮನದಟ್ಟಾಗುವಂತೆ ಉ
ತ್ತರಿಸುತ್ತಾ ಎಲ್ಲರನ್ನೂ ಮುಗ್ಧಗೊಳಿಸುತ್ತಿದ್ದಳು.

1894.

ಈ ಹೊಸ ವರ್ಷದ ದಿನ ಮಧ್ಯಾಹ್ನ 4.30 ಘಂಟೆಗೆ
ಶ್ರೀಮತಿ ಬೆಸೆಂಟ್ ಇವರು ಮದ್ರಾಸು ಕೋಟೆಯ ಬಳಿಯಿದ್ದ
ಮೈದಾನ (Esplanade) ದಲ್ಲಿ ಸುಮಾರು 6,000 ಜನರಿಂದ
ಕೂಡಿದ್ದ ಸಭೆಗೆ ಅಮೋಘವಾದ ಒಂದು ಭಾಷಣವನ್ನು
ಕೊಟ್ಟು ಸರ್ವರ ಪ್ರಶಂಸೆಗೂ ಪಾತ್ರಳಾದಳು.
ಜನವರಿ 7ನೇ ದಿನ ಶ್ರೀಮತಿ ಬೆಸೆಂಟ್, ಕೌಂಟೆಸ್, ಭ
ವಾನಿ ಮತ್ತು ನಾನು "ಕೇಥಾವರ್" ಎಂಬ ಹಡಗದಲ್ಲಿ ಕಲ್ಕತ್ತಾಕ್ಕೆ
ಹೊರಟೆವು --- 10ನೇ ದಿನ ಸಾಯಂಕಾಲ ಕಲ್ಕತ್ತಾಕ್ಕೆ ತಲುಪಿದೆ
ವು. ಮರುದಿನ ಶ್ರೀಮತಿ ಬೆಸೆಂಟ್ ಇವರು ಭೇಟಿಗೆಂದು ಬಂದ
ಜನರೊಡನೆ ಅವರು ಮಾತಾಡಿದ್ದಲ್ಲದೆ ಸಾಯಂಕಾಲ ಸುಮಾರು
5,000 ಜನ ಸೇರಿದ್ದ ಸಭೆಯಲ್ಲಿ India's Place Among
the Nations — ಎಂಬುದರ ಮೇಲೆ ಮಾತಾಡಿದಳು ---- ಅ

ಭಾಷಣಾನಂತರ ಮೂರು ಜನರು ಪ್ರತ್ಯೇಕವಾಗಿ ನನ್ನ ಬಳಿಗೆ ಬಂದರು ಆ ಭಾಷಣದ ವೇಳೆಗೆ ಅವರು ನೋಡಿದ ಮತ್ತು ಅವರು ಕಾಣಿಸಿದ್ದನ್ನು ಕುರಿತು ಸ್ವತಂತ್ರಪೂರ್ವಕವಾಗಿ ಹೇಳಿದ್ದು ಸ್ವಾರಸ್ಯವಿತ್ತು. ತಾನು ಬಿಳಿಯ ಗಂಟೆಯ ಮಧುರ ಧ್ವನಿಯನ್ನು ಕೇಳಿದಂತಾಯಿತು ಎಂದು ಶ್ರೀಮತಿ ಬೆಸೆಂಟ್ ಇವರು ಮಾತನ್ನು ಆಲಿಸಿದ ಮನೋಹರನು ಹೇಳಿದನು, ಭಾರತೀಯ ಗಂಧರ್ವನಾಟಿಗಳು ಬಳಿಕೆಯಾಗಲು ಅದರ ಆಜ್ಞಾಧಾರಕರ ಶರೀರವುಳ್ಳವು ಅವಳು ಮಾತಾಡುತ್ತಿದ್ದಾಗ ಎತ್ತಲೂ ಆವರಿಸಿದ್ದಂತಾಯಿತೆಂದು ಇನ್ನೊಬ್ಬನೆಂದನು, ಅವಳಲ್ಲಿ ಬಹು ಶ್ರೇಷ್ಠವಾದ ಜ್ಯೋತಿಯನ್ನು ಕಂಡೆನೆಂದೂ, ಆ ಪ್ರಭೆಯು ಬಂದು ದಿವ್ಯಾಂಶವು ಆ ಭಾಷಣಗಾರ್ತಿಯ ಸ್ಪರ್ಶ ಬೆಳಗಿ ಬೆರೆತು ಅದರ ನೆನಪಿನಿಂದ ಅವಳ ನರನಾಡಿಗಳಲ್ಲಿ ಹರಿಯುತ್ತಿರುವ ಹಾಗೆ ಭಾಸವಾಯಿತೆಂದೂ ಇತರರು ಹೇಳಿದರು,

ಬೆನಾರಿಸ್:— ಇಲ್ಲಿಗೆ ತಲುಪಿದಾಗ ನಾವು ಶೆಲ್ಲಿ ಕಾಸ್ಲಿನ್ ಟಾಗೋರ್ ಇವರ ಭವನಕ್ಕೆ ಗಾಡಿಯಲ್ಲಿ ಹೋದೆವು, ಮುನ್ನೂರು Theosophical Society ಇದರ ಒಂದು ವಿಶೇಷ ನಿಬಂಧನೆಯನ್ನು ನೆರವೇರಿಸುವಾಗ ಶ್ರೀಮತಿ ಬೆಸೆಂಟ್ ಇವರಿಗೆ ತುಂಬಾ ಅಲಂಕೃತವಾದ ಮತ್ತು ಬೋಜದಲ್ಲಿ ಕೆತ್ತನೆಯುಳ್ಳ ಪತ್ರದಲ್ಲಿ ಶೋಭಾಯಮಾನವಾಗಿ ಬನ್ನಮತ್ಪತ್ರವನ್ನು ಬರೆದು ಅರ್ಪಿಸಲಾಯಿತು, ಆ ದಿನ ಸಾಯಂಕಾಲ ಬೆಳ್ದಿಂಗಳಲ್ಲಿ ಅವಳು ಕೆಲವು ಮಿತ್ರರೊಡಗೂಡಿ ಗಂಗಾನದಿಯಲ್ಲಿ ತೇಲಾಡಿದಳು, ಅವಳು, ಕೌಂಟೆಸ್ ವಾಕ್ಟ್‌ಮೆಸ್ಟರ್, ಭವಾನಿ ಉಪೇಂದ್ರನಾಥ ಮತ್ತು ನಾನು "ಮಾಜಿ" ಎಂಬುದಾಗಿ ಬ್ಲಾವಟ್ಸ್ಕಿ ಇವಳ ಗುರುತಿಯಾಗಿ 1879 ರಿಂದಲೇ ಇದ್ದ ಮತ್ತು ಬಹಳ ಯೋಗಿನಿಯೆಂದು ಪ್ರಸಿದ್ಧಳಾದವಳನ್ನು ನೋಡಲು ಹೋದೆವು, ಅವಳು ಗಂಗೆಯ ತಟದಲ್ಲಿ ತನ್ನ ಸ್ವಂತ ಆಶ್ರಮದಲ್ಲಿ ಬಹು ಕಾಲ ಮತ್ತು ತಾನು ಸಾಯುವ ವರೆಗೂ ಅಲ್ಲಿಯೇ ವಾಸವಿದ್ದಳು,

ಆಗ್ರಾ:— ಫೆಬ್ರುವರಿ 7 ರಂದು ಅಲ್ಲಹಾಬಾದಿನ ಕುಂಭಮೇಳಕ್ಕೆ ಯಾತ್ರಿಕರು ನೆರೆಯುವ ಕಾರಣದಿಂದ ರಸ್ತೆಗಳಲ್ಲಿ ವಾಹನಗಳಿಂದ ಮತ್ತು ಜನರಿಂದ ತುಂಬಿದ್ದವು, ನಾವು ಆಗ್ರಾಕ್ಕೆ ರೈಲಿನಲ್ಲಿ ಪ್ರಯಾಣ ಬೆಳೆಸಿ ತಲುಪಿದಾಗ ನಮ್ಮ ನಿರೀಕ್ಷಿತ ಸಮಯವು ಮೀರಿತ್ತು, ನಮ್ಮನ್ನು ಅಲ್ಲಿ ನನ್ನ ಹಳೆ ಮಿತ್ರನೂ ವಿದ್ಯಾರ್ಥಿ ಸ್ನೇಹಿತ ಸ್ವತಂತ್ರ ಮನೋಭಾವಿಯೂ ಆದ ಲಾಲ ಬೈಜನಾಥ್ ಇವರು ಆದರದಿಂದ ನಮ್ಮನ್ನು ಸ್ವಾಗತಿಸಿದನು— — — ಅಲ್ಲದೆ ಬಹು ಆತಿಥ್ಯವನ್ನು ತೋರಿ ಸತ್ಕರಿಸಿದನು. ಮರುದಿನ ಜಗತ್ತಿನಲ್ಲಿ ಮಾನ್ಯತೆಯುಳ್ಳ ಕಲೆಯ ವೈಚಿತ್ರ್ಯವೆನಿಸಿದ ತಾಜಮಹಲನ್ನು ಮೊದಲು ಬಾರಿಗೆ ನೋಡಲೆಂದು ಹೆಂಗಸರು ಹೋದರು— — — ನಾವು ಉದ್ಯಾನದ ದಾರಿಯಾಗಿ ನಡೆದು ಸಮಾ

ದಿಯು ಕಟ್ಟಿಗೋಸ್ಕರ ಇರಿದಾಗ, ಅದೇನೋ ದುಃಖದಲ್ಲಿ, ಅಂತರ್ಯದಲ್ಲಿ ಮರುಕಗುತ್ತಿದ್ದ ಶ್ರೀಮತಿ ಬೆಸೆಂಟ್ ಇವರನ್ನು ಕಾಂಗ್ರೆಸ್ ಮತ್ತು ನಾವು ನೋಡಿದೆವು. ಅವರು ಆ ಬೆಂಗಳೂರು ರಾತ್ರಿಯನ್ನೇ ಕೇವಲ ಉದಾಸೀನತೆಯಿಂದ ಮತ್ತು ಬಿದ್ದಿಗಳಿಂದ ನೋಡುತ್ತಾ ಇದ್ದರು. ಅದೇಕೆ ಅವರು ಬೇರೆ ಕಡೆಯಲ್ಲಿರುವವರಿಂದಲು ಹೇಳಿದಾಗ ಅವರು ಎದುರಿಗೆ ಆಗುವ ದಿನದಲ್ಲಿ ಮತ್ತು ತೀ ಜೋರ್ ಆದ ಈ ಕಟ್ಟಿಗೆ ಹಿಂದೆ ಇರುವ ಎತ್ತರದ ಮತ್ತು ವ್ಯಾಪಾರದಲ್ಲಿ ಕಟ್ಟಿದ ಕೋಟೆಯನ್ನು ನಿಶ್ಚಯವಾಗಿ ಬಲಾತ್ಕಾರದಿಂದ ದುಡಿದ ಅಂದಿನ ಕಾರ್ಮಿಕರ ಆರ್ತನಾದವನ್ನು ಕೇಳುತ್ತಿರುವೆನೋ ಎಂಬ ಮನೋವ್ಯಾಕುಲತೆಗೊಳಗಾಗಿದ್ದೇನೆ ಅದರ ಕಟ್ಟೋಣಗಳ ಸುತ್ತಲೂ ಅದರ ರಕ್ತವು ಚೆಲ್ಲಿರಬಹುದೆಂಬುದನ್ನು ನೆನೆಯುತ್ತಾ ಮೈ ನಡುಗುತ್ತಿರುವೆನೆಂದು ಹೇಳಿದರು.

<u>ಲಾಹೋರ್</u>:— ಇಲ್ಲಿ ಶ್ರೀಮತಿ ಬೆಸೆಂಟ್ ಇವರು ಸುಮಾರು ೩,000 ಜನರು ಇದ್ದ ದರ್ಬಾರಿಗೆ ಭಾಷಣವನ್ನು ಕೊಟ್ಟರು. ಅವರ ಅಸಾಧಾರಣವಾದ ಕಂಠಸ್ವರವು ಕೇಳುವ ಎಲ್ಲ ಜನವನ್ನು ಮುಗ್ಧವಾಗಿ ಸೆಳೆಯುತ್ತದೆ. ಅವರ ಭಾಷಣದ ವಿಶೇಷತೆಯಾಗಿದೆ. ಅವರೊಡನೆ ಸಂಭಾಷಣೆ ನಡೆಸುವಾಗ ಅವರು ಎಷ್ಟು ಗಟ್ಟಿಯಾಗಿ ಮಾತಾಡುವರೆಂದು ಯಾರೂ ಯೋಚಿಸಲಾರರು, ಏಕೆಂದರೆ ಅವರು ಯಾವಾಗಲೂ ಇಳಿಸ್ವರದಲ್ಲಿ ಇನಿದನಿಯಿಂದ ಮಾತಾಡುವಾಗ ಕೆಲವು ಬಾರಿ ಸ್ವಲ್ಪ ಮಟ್ಟಿಗೆ ಕಿವುಡಾಗಿರುವವರಿಗೆ ಕೇಳಲು ಅಸಾಧ್ಯವಾದಷ್ಟು ಮೆಲ್ಲನೆ ಮಾತಾಡುವರು.

<u>ಬರೇಲಿ (Bareilly)</u>:— ಇಲ್ಲಿ ಶ್ರೀಮತಿ ಬೆಸೆಂಟ್ ಇವರು "Man and His Destiny" ಈ ವಿಷಯವಾಗಿ ಕೊಟ್ಟ ಭಾಷಣವು ಎಷ್ಟು ಸುಂದರವಾಗಿತ್ತೆಂದರೆ ನಾನು ನನ್ನ ದಿನಚರಿಯಲ್ಲಿ "A Kohinoor Among Diamonds" ಎಂದು ಬರೆದೆನು. ಈ ನೈಸರ್ಗಿಕ ಸ್ಫೂರ್ತಿಯನ್ನು ಹೊಂದಿದ ವಾಗ್ಮಿಯೊಡನೆ ನಾನು ಪ್ರವಾಸವನ್ನು ಕೈಗೊಂಡಾಗ ನಾನು ಅನುಭವಿಸಿದ ಆತ್ಮಾನಂದದ ಹಿರಿಮೆಯನ್ನು ಎಂತಿದ್ದಿತ್ತೆಂಬುದನ್ನು. ಓದುಗರೇ ಊಹಿಸಿಕೊಳ್ಳಬೇಕಾದೆ,

<u>ಬೊಂಬಾಯಿ</u>:— ನಮ್ಮ ಈ ಪ್ರವಾಸವು ಕೊನೆಗೊಳ್ಳುವುದರಲ್ಲಿತ್ತು. ಆದರೆ ನನ್ನ ಪ್ರಿಯ ಗೆಳತಿಯು ಶಾರೀರಿಕ ಆಯಾಸದ ಚಿಹ್ನೆಯನ್ನು ತೋರಿಸುತ್ತಿರಲಿಲ್ಲವೆಂಬುದನ್ನು ಹೇಳಲು ಸಂತೋಷಪಡುತ್ತೇನೆ. ಅವಳ ಮಾನಸಿಕ ಶಕ್ತಿಯಾದರೋ ಅವಳ ಮೆದುಳಿಗೆ ಕೆಲಸ ಕೊಡುತ್ತಿದಂತೆ ಇನ್ನಷ್ಟು ಪ್ರಕಾಶಮಾನವಾಗಿ ಹೊಳೆಯುತ್ತಾ ಇತ್ತು. ನಾವು ಮರುದಿನ ಬೆಳಿಗ್ಗೆ ಸೂರತ್ತಿಗೆ ಹೋಗಬೇಕಾಗಿದ್ದುದರಿಂದ ಬೊಂಬಾಯಿಯಲ್ಲಿ ಒಂದು ದಿನ ಮಾತ್ರ ಇದ್ದೆವು. ಆದರೆ ನಾವು

ಸಮಯವನ್ನು ವ್ಯರ್ಥ ಕಳೆಯುತ್ತಿಲ್ಲ, ಶ್ರೀಮತಿ ಬೆಸೆಂಟ್ ಇವರು Novelty Theatre ನಲ್ಲಿ ಕಿಕ್ಕಿರಿದು ನೆರೆದ ಸಭೆಯೊಂದರಲ್ಲಿ The Insufficiency of Materialism - ಎಂಬ ವಿಷಯವಾಗಿ ಮಾತಾಡಿದರು. ಪತ್ರಿಕಾ ವರದಿಗಾರರು ಹಲವರಿದ್ದರಾದರೂ ಅವರಲ್ಲಿ ಯಾರೂ ಅವರು ಮಾಡಿದ ಉಪನ್ಯಾಸದ ಸಾರಾಂಶವನ್ನು ಸ್ಪಷ್ಟವಾಗಿ ಕೊಡಲಿಲ್ಲ. (ಮುಂಬಾಯಿಯಲ್ಲಿ ಮಾರ್ಚ್ ೨೦ರ ವರೆಗೆ ಐದು ದಿವಸ ಕಳೆದರು.)

ಶ್ರೀಮತಿ ಬೆಸೆಂಟ್ ಹಿಂದೂಸ್ಥಾನದಲ್ಲಿ ಕೆಲವೇ ದಿವಸಗಳು ಇರುವುದರಿಂದ ತಿಳಿದಾಗ ಅವರನ್ನು ಭೇಟಿಯಾಗಲು ಹಲವರು ಹಾತೊರೆದರು; ಹಲವು ಬಾರಿ ಕೇವಲ ತುಚ್ಛ ವಿಷಯಗಳ ಮೇಲೂ ಅವರನ್ನು ಜನರು ಪ್ರಶ್ನಿಸುತ್ತಿದ್ದರು. ಅವರ ಸಹನಾಶೀಲಲಕ್ಷಣವಾಗಿ ಅವರು ಎಲ್ಲರನ್ನು ತೃಪ್ತಿಪಡಿಸುತ್ತಿದ್ದರೂ ಮಾನವ ಸಹಿಷ್ಣುತೆಗೂ ಒಂದು ಮಿತಿಯು ಇರುವುದಷ್ಟೆ! ಆ ಕಾರಣದಿಂದ ಕೆಲವರನ್ನು ನಿರಾಕರಿಸಲಾಯಿತು. ಅವರು ಪ್ರಯಾಣ ಬೆಳೆಸಿದ್ದ ಹಡಗಿಗೆ ನಾವು ಅವರ ಸಾಮಾನುಗಳ ಸಹಿತ ಹೋಗಿ ಅನಂತರ ಅವರಿಗೆ ಭಾರತೀಯ ಊಟದ ವ್ಯವಸ್ಥೆಯನ್ನೊದಗಿಸುವ ಬಗ್ಗೆ ಹಡಗಿನಲ್ಲಿ ಆ ಸಂಬಂಧಿಸಿದವರೊಡನೆ ಮಾತಾಡಿದೆವು ---- ಅದರನಂತರ ನಾವು ಮೊರಾರ್ಜಿ ಗೋಕುಲದಾಸ್ ಇವರ ಭೋಜನವಾದ ಮಾರನೆ ವಸತಿಗೆ ಹೋದೆವು, ಅಲ್ಲಿ ತಂಗಿದ್ದ ಆನಿ ಬೆಸೆಂಟ್ ಇವರಿಗೆ ಅವರು ಹೊರಡುವ ಮುನ್ನ ಕಿತ್ತಳೆ ಹಾರವನ್ನು ಅರ್ಪಿಸಲಾಯಿತು, ಅವರ ಕೈಗಳಲ್ಲಿ ಬಹು ಬೆಲೆ ಬಾಳುವ ರೇಷ್ಮೆ ಜರತಾರಿ ಸೀರೆಯನ್ನು ಇರಿಸಿ ಅವರನ್ನು ಬೀಳ್ಕೊಳ್ಳಲಾಯಿತು, ಅದರನಂತರ ನಾವು ಬಂದರಕ್ಕೆ ಹೋದೆವು, ಅಲ್ಲಿ ಹಲವು ಆತ್ಮೀಯ ಮಿತ್ರರು ನೆರೆದು ಅವರ ಅಗಲುವಿಕೆಯ ನಿಮಿತ್ತ ವ್ಯಸನವನ್ನು ಸೂಚಿಸಿದರು --- ಸಾಯಂಕಾಲ ಐದು ಘಂಟೆಗೆ ಹಡಗು ಆನಿ ಬೆಸೆಂಟ್ ಇವರನ್ನು ಅವರೊಡನೆಯೇ ಇಡೀ ಹಿಂದೂಸ್ಥಾನದ ಹೃದಯವನ್ನು ಹೊತ್ತುಕೊಂಡು ತೇಲಿತು,

"The Theosophist" (1928ರ ಪತ್ರಿಕೆಯೊಂದರಲ್ಲಿ)

"ಇಪ್ಪತ್ತು ವರ್ಷಗಳ ಪರಿಶ್ರಮ"!

ಶ್ರೀಮತಿ ಬೆಸೆಂಟ್ ಇವರು 1894ರ ಆಗಸ್ಟನಲ್ಲಿ ಆಸ್ಟ್ರೇಲಿಯಾಕ್ಕೆ ತೆರಳಿದರು. ಮೆಲ್ಬೋರ್ನದಲ್ಲಿ ಆಗ ಸಾರ್ವತ್ರಿಕ ಚುನಾವಣೆಯ ಬಗ್ಗೆ ಗದ್ದಲವು ನಡೆಯುತ್ತಿತ್ತು. ಸಭೆ ನಡೆಯುತ್ತಿದ್ದರೂ ಬರೇ ಖಾಲಿ ಬೆಂಚುಗಳಿಗೆ ತಮ್ಮ ಕಲೆಯನ್ನು ಪ್ರದರ್ಶಿಸುತ್ತಿದ್ದರು. ಹಾಗಿದ್ದರೂ ಆನಿ ಬೆಸೆಂಟ್ ಇವರು ಅಲ್ಲಿಯ ರಾಯಲ್ ಥಿಯೇಟರಿನಲ್ಲಿ ನಾಲ್ಕು ಭಾಷಣಗಳನ್ನು ಮಾಡಿದಾಗ ಆ ಕಿಕ್ಕಿರಿದ ಸಭೆಗಳಲ್ಲಿ ನಿಲ್ಲಲಿಕ್ಕೆ ಸ್ಥಳವಿಲ್ಲದೆ ನೂರಾರು ಜನರು ಹಿಂದಕ್ಕೆ ಹೋಗಬೇಕಾಯಿತು. ಅವರ ಭಾಷಣಗಳನ್ನು ಕೇಳಲು ಉತ್ಸುಕರಾಗಿದ್ದ ಜನವು ಅಸಂಖ್ಯವಾಗಿ

ಬೆಂಗಳೂರಿನಲ್ಲಿ ಅವರ ನಾಲ್ಕು ಭಾಷಣ ಕಾರ್ಯಕ್ರಮವನ್ನು ಏರ್ಪಡಿಸಿದರು. ಆಸಕ್ತಿಯಾದ ಸಾರ್ವಜನಿಕರು ಅವರಿಗೆ ನಮ್ಮ ನಗರದಲ್ಲಿ ಕೊಟ್ಟ ಸ್ವಾಗತವು ಇನ್ನಷ್ಟು ಉತ್ಸಾಹಭರಿತವಾಗಿತ್ತು. ಇಲ್ಲಿನ Opera House ಸಭಾಂಗಣವು ಕಿಕ್ಕಿರಿದು ತುಂಬಿರುತ್ತಿತ್ತು. ಈ ವಿಷಯವಾಗಿ ಶ್ರೀಮತಿ ಬೆಸೆಂಟ್ ಇವರು, "ನಮ್ಮ Theosophical Society ಇಲ್ಲಿ ಸಂಖ್ಯಾಬಲದಿಂದಲೂ ವಿಸ್ತೃತಿಯಿಂದಲೂ ಪ್ರಗತಿಯನ್ನು ಸಾಧಿಸುತ್ತಾ ಇದೆ" ಎಂಬುದಾಗಿ ಅನಂತರ ಬರೆದಳು.

ಸೆಪ್ಟೆಂಬರ್ ೧ರಂದು ಅವರು ನ್ಯೂಜಿಲ್ಯಾಂಡ್‌ಗೆ ತೆರಳಿದಾಗ ಅಲ್ಲೂ ಅದೇ ರೀತಿ ಸುಸ್ವಾಗತವನ್ನು ಪಡೆದರು. ಆಕ್ಲೆಂಡ್, ಕ್ರೈಸ್ಟ್ ಚರ್ಚ್, ಡ್ಯುನೆಡಿನ್ ಮತ್ತು ವೆಲ್ಲಿಂಗ್ಟನ್ ಪಟ್ಟಣಗಳನ್ನು ಸಂದರ್ಶಿಸಿ ಅವರು ಹೀಗೆಂದರು.

"ನನ್ನ ಈ ಸಂದರ್ಶನದ ವೇಳೆಗೆ ನಡೆದ ಒಂದು
"ಘಟನೆಯಿಂದ ಸಾಮಾನ್ಯವಾಗಿ ನಂಬಿರುವ ಮತೀಯ ಭಾ
"ವನೆಯ ತೀವ್ರಗಾಮಿತ್ವವನ್ನು ಸ್ವಲ್ಪಮಟ್ಟಿಗೆ ಕಡಿಮೆ
"ಮಾಡುವುದೆಂದು ನಂಬುತ್ತೇನೆ. ನಾನು ಅಲ್ಲಿದ್ದಾಗ ಆಕ್ಲೆಂ
"ಡಿನ ಧರ್ಮಗುರುಗಳು ಮತ್ತು ಅವರ ಮಗಳು ನನ್ನ
"ತತ್ವಜ್ಞಾನಿ ಕೂಟಗಳಿಗೆ (Theosophical Lodges)
"ಬಂದಿದ್ದರು. ಅಲ್ಲಿ ನಾನು ಕ್ರೈಸ್ತದೀಕ್ಷೆಯನ್ನು ಹೊಂದ
"ದೆ ನಂಬಿಕೆಯಿಂದಾಗಿ ಯಾರಾದರೂ ಪರಿಪೂರ್ಣತೆಯನ್ನು ಪಡೆ
"ದಿದ್ದರೆ ಅದು ನಿಜವಲ್ಲವೆಂಬುದಾಗಿ ಹೇಳುತ್ತಿದ್ದೇನೆ,
"ಆದರೆ ಅದನ್ನು ಕುರಿತಾದ ಮಾತು ಆಕ್ಲೆಂಡಿನಲ್ಲೆಲ್ಲ ಹಬ್ಬಿ
"ತ್ತು. ನಾನು ಹೀಗೆ ದೀಕ್ಷೆಯನ್ನು ಮನ್ನಿಸಿದ್ದೇನೆಂದು ಹೇ
"ಳಿದ ಆ ವೇಳೆಗೆ ನಾನು ಚರ್ಚೊಂದರ ಕಲ್ಲರದು ಒಂದು
"ಸಭೆಯಲ್ಲಿ ಭಾಗವಹಿಸಿದ್ದೆನು, ಹಾಗಿದ್ದರೂ ಕ್ರೈಸ್ತರಿಗೂ
"ಅದೊಂದು ಮುಖ್ಯವಾದ ವಿಷಯವಲ್ಲ. ಆದರೆ ಕ್ರೈಸ್ತಮತ
"ದ ಸ್ವಾತಂತ್ರ್ಯ ಹರಿವನ್ನು ಕಂಡು ನಾನು ತಿಳಿದಿ
"ದ್ದೇನೆ. ಈ ಹಿಂದಿನ ಉಚ್ಚ ಪರೀಕ್ಷೆಯನ್ನು ಕಂಡು ಇದೀಗ
"ಗಂಗೆಯಲ್ಲಿ ಸ್ನಾನಮಾಡಿದ ನಾನು ಮತೀಯ ವಿಭಾಗ
"ಗಳಲ್ಲಿ ಎತ್ತರ ವಿಶ್ವಾಸಾರ್ಹವಾದ ಭಾವನೆಯನ್ನು ಹೊಂ
"ದಿದ್ದವಳೆಂಬುದನ್ನು ತಿಳಿಯಬೇಕಿದೆ ನಾನು."

ಡಿಸೆಂಬರ್ ೨೭ರಲ್ಲಿ ಶ್ರೀಮತಿ ಬೆಸೆಂಟ್ ಇವರು ತತ್ವಜ್ಞಾನ (Theosophy) ಸಂಸ್ಥೆಯ ಸಮ್ಮೇಳನಕ್ಕೆಂದು ಮದ್ರಾಸಿಗೆ ಬಂದು ತಲುಪಿದರು. ಕಾರ್ಯಕಾರೀ ಮಂಡಳಿಯ ಸಭೆಯಲ್ಲಿ ಅಮೋಘವಾದ ಒಂದು ಭಾಷಣವನ್ನು ಮಾಡುತ್ತಾ ಅವರು ಅಮೇರಿಕಾದಲ್ಲಿ ತಮ್ಮ ಸಂಸ್ಥೆಯ ಉದ್ದೇಶದ ಬಗ್ಗೆ ಆಸಕ್ತಿಯನ್ನು ಸಾಧಿಸುತ್ತಿರುವ ಶ್ರೀ ಕೆಲ್ಲ.

ಶ್ರೀ. ಜಡ್ಜ್ ಇವನನ್ನು ತನ್ನ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡುವಂತೆ ಹೇಳಬೇಕೆಂಬುದಾಗಿ ಒಂದು ಠರಾವನ್ನು ಮಂಡಿಸಿದ್ದರು. ಆ ವೇಳೆ ಆಗ ಮಾಡಿದ ಭಾಷಣದ ಬಗ್ಗೆ ಕರ್ನಲ್ ಆಲ್ಕಾಟ್ ಇಂತೆಂದನು:-

“ಅನಿ ಬೆಸೆಂಟ್ ಇವಳ ಜೀವನ ಚರಿತ್ರೆಯನ್ನು ಮುಂದಕ್ಕೆ ಬರೆಯುವಾಗ ಇತರ ಪ್ರಯೋಗಗಳಿಂದ, ಸ್ವಲ್ಪವೂ ಸ್ನೇಹವಾಗಲೀ ಅಥವಾ ನ್ಯಾಯವಾದ ನಿಂದೆಗೆ ಎಡೆಗೊಡದಂತೆಯೂ ಮಾಡಿದ ಅವಳ ಭಾಷಣವನ್ನು ಪ್ರಕಟಿಸಬೇಕು!”

1895

ಲಂಡನ್ನಿಗೆ ಹಿಂದಿರುಗಿದನಂತರ ಅನಿ ಬೆಸೆಂಟ್ ಇವಳು 1895ರ ಏಪ್ರಿಲ್ 27ರಂದು ಸೆಂಟ್ ಜೇಮ್ಸ್ ಹಜಾರದಲ್ಲಿ The Mahatmas as Facts and Ideals,” ಎಂಬ ವಿಷಯವಾಗಿ ಭಾಷಣವನ್ನು ಕೊಟ್ಟಳು. ಶ್ರೀ ಸಿನ್ನೆಟ್ಟ ಇವನು ಸಭಾಧ್ಯಕ್ಷನಾಗಿ ಇದ್ದು ಒಂದು ಅಂಥ ಭಾಷಣವನ್ನು ಮಾಡಿದನು, ಅವಳ ಆ ಭಾಷಣವನ್ನು ಒಂದು ಕರಪತ್ರದ ರೂಪದಲ್ಲಿ ಸಂಘದ ಎಲ್ಲ ಸದಸ್ಯರಿಗೂ ಹಂಚಲಾಯಿತು.

ಬ್ರಹ್ಮಜ್ಞಾನ ಸಂಘವು (Theosophical Society) ಮಹಾಸಭೆ ಸಮಿತಿಯಲ್ಲಿಯೇ ತುಂಬಾ ಬಿರುಸಾಗಿ ಭಯಂಕರ ವಾಗ್ವಾದಗಳಿಂದ ನಡೆಯಿತು, Mr. W. Q. Judge ಇವನ ಅನುಯಾಯಿಗಳು ತಮ್ಮ ಪ್ರತಿಭಟನೆಯನ್ನು ಸೂಚಿಸುತ್ತಾ ಸಭೆಯಿಂದ ಎದ್ದು ಹೋದರು.

ಅನಿ ಬೆಸೆಂಟ್ ಇವಳು ಆದಿತ್ಯವಾರ ದಿನಗಳಲ್ಲಿ ಅದೇ ಸೆಂಟ್ ಜೇಮ್ಸ್ ಹಜಾರದಲ್ಲಿ “ಕರ್ಮ” ಎಂಬ ವಿಷಯದ ಮೇಲೆ ಧಾರಾವಾಹಿ ಭಾಷಣವನ್ನು ಮಾಡಿದಳು. ಅವಳ ಭಾಷಣಮಾಲೆಯ ನಾಲ್ಕನೇ ಭಾಗದಲ್ಲಿ ಪ್ರಕಟವಾಗಿದೆ. ಇದರಲ್ಲಿ ಜ್ಯೋತಿಷ್ಯ, ಮತ್ತು ಮನಶ್ಶಾಸ್ತ್ರದ ಬಗ್ಗೆ ವ್ಯಾಖ್ಯಾನಗಳು ಹೇಳಲಾಗಿವೆ. ಇದು ಅವಳ ಇತರ ಬರವಣಿಗೆಗಳಂತೆ ಅಲ್ಲ; ತನ್ನ ಸ್ವಾನುಭವದ ವರ್ಣನೆಯಾಗಿದ್ದು ಹೆಚ್. ಪಿ. ಬಿ. ಇವಳ ಬೋಧನೆಗಳನ್ನು ಅದು ಅವಲಂಬಿಸಿಲ್ಲ. ಅವಳು ಹಾಲೆಂಡಿಗೆ ಎರಡನೇ ಬಾರಿ ಭೇಟಿಯಿತ್ತಳು, ಆ ವರ್ಷದ ಆಗಸ್ಟನಲ್ಲಿ “The Outer Court” ಎಂಬುದರ ಮೇಲೆ ಧಾರಾವಾಹಿಯಾಗಿ “ಬ್ಲಾವಟ್ಸ್ಕಿ ಲಾಡ್ಜ”ದಲ್ಲಿ ಭಾಷಣವನ್ನು ಕೊಟ್ಟಳು.

ಸೆಪ್ಟೆಂಬರ್ ತಿಂಗಳಲ್ಲಿ ಅವಳು ಹಿಂದೂಸ್ಥಾನಕ್ಕೆ ಹೋಗಲು ಇಚ್ಛಿಸಿದ್ದರೂ ಹಲವು ಅನಾನುಕೂಲತೆ ಮತ್ತು ಹಣವ್ಯಯದ ಕಾರಣದಿಂದ ಆ ಕಾರ್ಯಕ್ರಮವನ್ನು ವಿಳಂಬಿಸಿದ ಆ ವೇಳೆಯಲ್ಲಿ ಅವಳು ಹೀಗೆ ಬರೆದಳು:—

“ಹೆಚ್. ಪಿ. ಬಿ., ಕರ್ನಲ್ ಆಲ್ಕಾಟ್ ಮತ್ತು ನಾನು

ಈಗ ತುಂಬಾ ನಿಂದನೆಗೆ ಒಳಗಾಗಿದ್ದೇವೆ--- ನ್ಯಾಯವಾದ ಆಪಾದನೆಗಳಿ
ದ್ದರೆ ಅದರ ಬಗ್ಗೆ ಪರಿಶೀಲಿಸಲು ನಾನು ಇಲ್ಲಿ ಇರುವುದು ಸೂಕ್ತವಾಗಿದೆ,
ನಮ್ಮ ವಿರೋಧಿಗಳು ನಮ್ಮ ಸಂಸ್ಥೆಯ ಪ್ರಧಾನ ಸದಸ್ಯರ ಮೇಲೆ
ಆರೋಪಣೆಗಳನ್ನು ಹೊರಿಸುವುದು; ಅವರು ಇಲ್ಲಿಯೇ (ಲಂಡನ್ನಿನಲ್ಲಿ)
ಇರುವಾಗ ಮೌನವಾಗುವುದು; ಅವರು ಜಗತ್ತಿನ ಇನ್ನೊಂದೆಡೆ ಇರುವಾ
ಗ ಸಾರ್ವಜನಿಕವಾಗಿ ಅವರನ್ನು ದೂಷಿಸುವುದು, ಅಥವಾ ಅವರಿಲ್ಲ
ದಿರುವಾಗ ದ್ವೇಷ ಸಾಧಿಸುವುದು ಇತ್ಯಾದಿ ವೀರತನದ ಅಥವಾ ಗೌರ
ವದಾಯಕವಾದ ವರ್ತನೆಯಲ್ಲ----ಆ ಕಾರಣದಿಂದ ನಾನು ನನ್ನ
ಸಾಮಾನುಗಳನ್ನೆಲ್ಲ ಕೂಡಿಟ್ಟು ಇಲ್ಲಿಯೇ ನನ್ನ ಕೆಲಸವನ್ನು ಮಾಡಲು
ಕುಳಿತೆನು, ಆದರೆ ಈ ನನ್ನ ಕಾರ್ಯಕ್ರಮವನ್ನು ಹೀಗೆ ಬದಲಾ
ಯಿಸಿ ಭಾರತದ ಜನವನ್ನು ನಿರಾಶೆಗೆ ಒಳಪಡಿಸಿದ್ದಕ್ಕೆ ವಿಷಾದಿ
ಸುತ್ತೇನೆ, ಹೇಗೂ ಇಂಡಿಯಾವೇ ಇರಲಿ, ಇಂಗ್ಲೆಂಡೇ ಇರಲಿ, ಕೆಲ
ಸವು ಒಂದೇ ಆಗಿದೆ, ಸದ್ಯಕ್ಕೆ ಸೇವೆಯು ಅಗತ್ಯವಾಗಿ ಎ
ಲ್ಲಿಗೆ ಸಲ್ಲಬೇಕೋ ಅಲ್ಲಿ ಕಾರ್ಯವನ್ನು ಕೈಗೂಡಿಸಬೇಕಿದೆ--
----ಈ ತತ್ವಜ್ಞಾನ ಸಂಸ್ಥೆಯನ್ನು ನಾನು ಬಿಟ್ಟಿದ್ದೇನೆ, ಅಥವಾ
ಬಿಡಲಿದ್ದೇನೆ, ಎಂಬುದಾಗಿ ವಾರ್ತಾಪತ್ರಿಕೆಗಳು ಹೇಳಿಕೊಳ್ಳು
ತ್ತಿದ್ದರಾದರೂ 1889 ರಲ್ಲಿ ಇದಕ್ಕೆ ಸೇರಿದಂದಿನಿಂದ ಇಂದಿ
ಗೂ ನಾನು ಅದಕ್ಕೆ ಸೇರಿದ್ದು ತಪ್ಪೆಂದು ನನಗೆ ತೋರಿ
ದ್ದಿಲ್ಲ, ಅದರ ಬದಲಾಗಿ ಪ್ರತಿವರ್ಷವೂ ಅದರ ಸದಸ್ಯತ್ವವು
ವರ್ಧಿಸುತ್ತಿರುವುದು ನನಗೆ ಆನಂದವನ್ನುಂಟುಮಾಡಿದೆ, ನನ್ನಲ್ಲಿ
ಹೇಗೆ ಎಲ್ಲಾ ಉತ್ತಮವಲ್ಲವೋ ಅದೇ ರೀತಿ ಈ ಥಿಯಾಸಾಫಿಕಲ್
ಸಂಸ್ಥೆ ಮತ್ತು ಅದರ ಸ್ಥಾಪಕರಲ್ಲಿ ಮತ್ತು ಸದಸ್ಯರಲ್ಲಿ ಉತ್ತ
ಮವಾದುದನ್ನು ನಾನು ನಿರೀಕ್ಷಿಸಲಾರೆನು, ಅವರು ನನ್ನ ತಪ್ಪು
ಗಳನ್ನು ಹೇಗೆ ಮನ್ನಿಸುವರೋ ಅದೇ ರೀತಿ ಅವರ ತಪ್ಪುಗಳನ್ನು
ನಾನು ದೊಡ್ಡದೆಂದೆಣಿಸಲಾರೆನು, ಆದರೆ ಕರ್ನಲ್ ಆಲ್ಕಾಟ್ ಇವರ
ಇಪ್ಪತ್ತು ವರ್ಷಗಳ ದಿಟ್ಟತನದ ಮತ್ತು ಶ್ರದ್ಧಾಪೂರ್ವಕವಾದ
ಸೇವೆಗೂ ಶ್ರೀಮತಿ ಬ್ಲಾವಟ್‌ಸ್ಕಿ ಇವಳು ನನಗಿತ್ತ ಪ್ರೀತಿ ಆದರ
ಗಳಿಗೂ, ಸಮನಾಗಿ ನಾನು ಅವರಿಗೆ ಇಂದಿಗೂ ಅದೇ ಭಕ್ತಿ ಪ್ರೀತಿ
ಗಳನ್ನು ಸಲ್ಲಿಸಲು ಅಸಮರ್ಥಳಾದರೂ ಅವಳು ಭೌತಿಕವಾದ
(materialism) ಇದಕ್ಕೆ ವಿರೋಧವಾಗಿ ನಡೆಸಿದ ಅಗಾಧ ಕಾರ್ಯ
ಭಾರಕ್ಕೆ ನಾನು ಕೃತಜ್ಞಳಾಗಿದ್ದೇನೆ, ಅವಳು ಅತ್ಯಂತ ನಿರರ್ಗಳ
ವಾಗಿ ನರಳಿದ ಉಪೇಕ್ಷೆಗಳ ತಿರಸ್ಕಾರದಿಂದ ಅವಳು ಯಾರಿಂದ
ಮೆಚ್ಚಿಸಿಕೊಂಡಿದ್ದಳೋ ಅವರೆಲ್ಲರ ಪ್ರೀತಿ ಆದರಗಳಿಗೆ ಅವಳು ಪಾ
ತ್ರಳಾಗುವಳಲ್ಲದೆ ನನಗೆ ಅವಳಿತ್ತ ಸದುಪಕಾರ ಮತ್ತು ಜ್ಞಾನಬೋ
ಧಾಮೃತ ರೀತಿಗೆ ನಾನು ಅವಳಿಗೆ ಎಷ್ಟು ಆಭಾರಿಯಾಗಿದ್ದರೂ
ಸಾಲದು. ಕೇವಲ ಅಲ್ಪ ವಿಚಾರಗಳ ಮಾಯೆಗೆ ಹೆದರುತ್ತಾ ನಾವು

ಜೀವನದಲ್ಲಿ ಪಡೆಯಬಹುದಾದ ಅತಿ ಸಂತೋಷಗಳನ್ನು ಆ ಮತ ಭಾವಿಸುವ
ತ್ತಿರಲು ಸಾಧ್ಯವಾಗಿದ್ದಂಥವರಿಗೂ ಮುಂದಕ್ಕೆ ಜ್ಞಾನ ಮತ್ತು ಸಾಧ
ನೆಗಳು ಉದಯವಾಗಲಿ."

ಕ್ರಿಸ್ಮಸ್ಸಿನ ದಿನವು ಸಮೀಪಿಸುತ್ತ, ಡಿಸೆಂಬರ್ ೨೭ರಂದು ಶ್ರೀಮತಿ ಬೆಸೆಂಟ್ ಇವರು ಬೊಂಬಾಯಿಯಿಂದ ಹೊರಟು ಅಡಿಯಾರನ್ನು ತಲುಪಿದರು. ಸಾಯಂಕಾಲ ಸಭಾಭವನದ ಹಜಾರದಲ್ಲಿ ಅವರು ದೊಡ್ಡ ಉತ್ಸಾಹದಾಯಕವಾದ ಸಭೆಯನ್ನು ನಡೆಸಿದರು. ಎಂಥಾ ಕಷ್ಟಕರ ಸಮಸ್ಯೆಗಳನ್ನು ಕುರಿತಾಗಿಯೂ ತನ್ನ ನಿತ್ಯದ ಸರಳ ಸೌಂದರ್ಯದ ಹಾಗೂ ಲಾವಣ್ಯದೊಡಗೂಡಿಸಿ ಸಭಿಕರಿಗೆ ವಿವರಿಸುತ್ತಿದ್ದರು ---- ನಿದ್ರಿಸಿದವರು ಕನಸಿನಲ್ಲಿ ಮಾಡುವುದನ್ನು ನೋಡಿ ತಿಳಿಯುವುದು, ಸಾರತ್ಯದಂತೆ ಸುತ್ತುತ್ತಿರುವ ಲೋಕಗಳು ತಾಂತ್ರಿಕ ನಿರ್ಮಾಣಗಳು, ಜಾಗ್ರತಾವಸ್ಥೆಯಲ್ಲಿಯೂ ರೂಪಗಳನ್ನೇ ಧ್ಯಾನ: ಸಾಧಿಸುವುದು, ಮತ್ತು ಆತ್ಮೋಚ್ಛನೆಗಳು ಮೇಲಿಂದ ಮೇಲೆ ಬರುವುದು ಮತ್ತು ಇಂದ್ರಿಯಗಳ ವೇಗ ಕ್ರೀಡೆಗಳಿಂದ ಪ್ರಕೃತಿ ಮಾರ್ಗಸೂಚಕ ಮನೋತರಂಗಗಳನ್ನು ಕುರಿತಾಗಿ ಅವರು ವಿವರಿಸುವಾಗ ನಾನು ಪಡುತ್ತಿದ್ದ ಸಂತೋಷಕ್ಕಿಂತ ಹೆಚ್ಚಾಗಿ ಅವರು ಇನ್ನುಳಿದ ಉಪನ್ಯಾಸದ ಬಗ್ಗೆ ಪಡುತ್ತಿದ್ದರೆಂದು ನನಗೆ ತಿಳಿಯುತ್ತದೆ.

1896.

ಈ ವರ್ಷದ ಮೊದಲ ದಿನ, ಶ್ರೀ ಕೀಟ್ಲೆ ಮತ್ತು ಬಾಬು ಉಪೇಂದ್ರನಾಥ್ ಇವರೊಡನೆ ಶ್ರೀಮತಿ ಬೆಸೆಂಟ್ ಇವರು ತನ್ನ ಭಾಷಣ ಕಾರ್ಯಕ್ರಮವನ್ನು ಮುಗಿಸಿ ಪ್ರಯಾಣದಿಂದ ಹೋದರು.

ಜನವರಿ ೭ರಂದು ಅವರು ಕಲ್ಕತ್ತಾದಲ್ಲಿ Vivisection ಎಂಬ ವಿಷಯವಾಗಿ ಶಾಸನಭವನದಲ್ಲಿ ಆ ಮೋಘವಾದ ಭಾಷಣವನ್ನು ಮಾಡಿ ಜನರನ್ನು, ಅದರಲ್ಲೂ ಪ್ರಬಲ ಬ್ರಾಹ್ಮಣ ವಿರೋಧಿಗಳಾದ ಜೈನರ ಉತ್ಸಾಹವನ್ನು ಕೆರಳಿಸುತ್ತ, ಆ ಪ್ರವೃತ್ತಿಯಲ್ಲೂ ಜನರು ಕಿಕ್ಕಿರಿದು ನೆರೆದಿದ್ದರು ---- ಹಿಂದೂಗಳ ಸುಧಾರಣೆಯ ನಿಮಿತ್ತವಾಗಿ ಶ್ರೀಮತಿ ಬೆಸೆಂಟ್ ಇವರು ಪ್ರತಿದಿನವೂ ಉಪನ್ಯಾಸ ಸಂಭಾಷಣೆಗಳನ್ನು ನಡೆಸುತ್ತಿದ್ದರು. ಅವರ ಕಡೆಯ ಭಾಷಣವು Education — ಶಿಕ್ಷಣ ವಿಷಯವಾಗಿ ಫೆಬ್ರವರಿ ಒಂದನೇ ದಿನ ನಡೆಯಿತು. ಅನಂತರ ಕೆಲವು ದಿನಗಳ ನಂತರ ಅವರನ್ನು ಬನಾರಸ್ಸಿಗೆ ಹೋಗುವ ರೈಲಿನಲ್ಲಿ ಕೂರಿಸಿದೆನು.

ಆ ವರ್ಷದ ಪ್ರಾರಂಭದಲ್ಲಿ Man & His Bodies ಎಂಬ ವಿಷಯದಲ್ಲಿ ಲೇಖನ ಮಾಲಿಕೆಯು "Lucifer" ಪತ್ರಿಕೆಯ ಮೂಲಕ ಬೆಳಕಿಗೆ ಬಂದುವು. ಏಪ್ರಿಲ್ ೪ನೇ

ದಿನದಂದು ಅನಿ ಬೆಸೆಂಟ್ ಇವರು ಭಾರತದಿಂದ ಯೂರೋಪಿಗೆ ತೆರಳಿದರು. ಅದೇ ತಿಂಗಳು ಲಂಡನ್ನಿನ Queen's Hall ನಲ್ಲಿ ತತ್ವಜ್ಞಾನ (Theosophy) ಇದರ ಕುರಿತಾಗಿ ಹಲವು ಭಾಷಣಗಳನ್ನು ಕೊಟ್ಟರು. 'The Ancient Wisdom' ಇದರಲ್ಲಿ ಪ್ರಕಟವಾಯಿತು.

ಆ ವರ್ಷದ ಜುಲೈ ತಿಂಗಳಲ್ಲಿ ಅವರು ಲಂಡನ್ನಿನಲ್ಲಿ ನಡೆದ ಯೂರೋಪಿನ ತತ್ವಜ್ಞಾನಿಗಳ ಕಾಂಗ್ರೆಸ್ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಆಗಸ್ಟನಲ್ಲಿ ಇಂಗ್ಲೆಂಡಿನುದ್ದಕ್ಕೂ, ಸೆಪ್ಟೆಂಬರದಲ್ಲಿ ಹಾಲೆಂಡಿನಲ್ಲೂ ಭಾಷಣ ಪ್ರವಾಸವನ್ನು ಮಾಡಿ ಅಮ್ಸ್ಟರ್‍ಡಮ್ಮಿನಿಂದ ಅವರು ಹಿಂದೂಸ್ಥಾನಕ್ಕೆ ತೆರಳಿದರು. ಸೆಪ್ಟೆಂಬರ್ ೨೦ ರಲ್ಲಿ ಶ್ರೀಮತಿ ಬೆಸೆಂಟ್ ಬೊಂಬಾಯಿಗೆ ತಲುಪಿದರು. ಹಲವು ಭಾಷಣಗಳು ಮತ್ತು ಭೇಟಿಗಳಿಂದ ಕಾರ್ಯಕ್ರಮಗಳನ್ನು ಮುಗಿಸಿ ಅವರು ಭಾರತೀಯ ತತ್ವಜ್ಞಾನಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಬನಾರಸ್ಸಿಗೆ ಹೋದರು. ಸಮ್ಮೇಳನಕ್ಕೆ ಒಂದು ವಾರವಿದೆಯೆಂದಾಗ ಅವರು ಈ ರೀತಿಯಾಗಿ ಬರೆದರು:—

"ಕ್ರಿಸ್‌ಮಸ್ ಹಬ್ಬವು ಹೇಗೋ ಅದೇ ರೀತಿ ದಸರಾಪೂಜೆಯು ಕುಟುಂಬದ ಹಬ್ಬವಾಗಿದೆ, ತಮ್ಮ ಮನೆಯ ಹಬ್ಬಗಳ ಕಾಲದಲ್ಲಿ ಹಿಂದೂಗಳು ಉತ್ಸಾಹದಿಂದ ಹಬ್ಬವನ್ನು ಆಚರಿಸುವುದರ ಬದಲಾಗಿ ಉಪವಾಸವನ್ನು ಕೈಗೊಳ್ಳುತ್ತಾರೆ, ತುಂಬಾ ಹಣವನ್ನು ವೆಚ್ಚಮಾಡುತ್ತಾರೆ, ಆದರೆ ಭಾರತ ಉಳಿಯಬೇಕಾದರೆ ಮತ್ತು ಅವನ ಕುಟುಂಬವು ಬದುಕುವ ಕ್ಷಾಮದ ಕಾರಣದಿಂದ ಸಾಮಾನ್ಯ ಜನತೆಗಳ ಬೀಳು ಪರಿಸ್ಥಿತಿಯಿಂದ ತಮ್ಮ ಹಣವನ್ನು ಬಡಜನರ ಕಷ್ಟನಿವಾರಣೆಗಾಗಿ ಉಪಯೋಗಿಸಿ ಈ ವರ್ಷ ಹಿಂದೂ ಹೊಸ ಆದರ್ಶವನ್ನು ತೋರಿದರು. ಅವರು ಹಲವು ಗಾಡಿಗಳಲ್ಲಿ ಗೋಧಿಯನ್ನು ಸಾಗಿಸಿ ತಮ್ಮ ಅಂಗಳದಲ್ಲಿಯೇ ಮಾರಾಟಕ್ಕಿಟ್ಟು ಸಂತೆಯ ಬೆಲೆಗಿಂತ ಕಡಿಮೆ ದರದಲ್ಲಿ ಮಾರಾಟ ಮಾಡಿದರು. ಹೀಗೆ ಕ್ಷಾಮಪೀಡಿತರಾಗಿದ್ದವರಿಗೆ ಸಹಕರಿಸಿದರು————ನಮ್ಮ ಸಮ್ಮೇಳನವು ಸಂಗಮವಾಗಿ ನಡೆಯುತ್ತದೆ; ತುಂಬಾ ಕೆಲಸವು ನಡೆಸಲ್ಪಡುತ್ತದೆ; ಅವುಗಳಲ್ಲಿ ಒಂದೆಂದರೆ ಈ Theosophical Society—ಇದನ್ನು ಕ್ಷಾಮಪೀಡಿತರಾದವರ ಸಹಾಯಕ್ಕೆ ಉಪಯೋಗಿಸುವುದು ದಿಕ್ಕಾಗಿತ್ತು. ಹಿಂದೂಸ್ಥಾನದ ಎಲ್ಲೆಡೆಯೂ ಮಳೆ ಕಡಿಮೆಯಾಗಿ ಬೆಳೆಯೂ ಅಲ್ಪವಾಯಿತು, ಅಂಥಾ ಕ್ಷಾಮವು ಹಿಂದೆಂದೂ ಇರಲಿಲ್ಲ; ಇರುವ ಧಾನ್ಯವು ಈ ಚಳಿಗಾಲ ಮುಗಿಯುವ ವರೆಗೂ ಸಾಲದು! ಹೊರಗಿಂದ ತಂದ ಆಹಾರ ಧಾನ್ಯಗಳಿಂದ ಮಾತ್ರ ನಮ್ಮ ಮಿಲಿಯ ಜನ

"ಮನಸ್ಸು ಹೇಗೆ ಕಲ್ಪಿಸಬಹುದು, ಎಂಬುದೇ ಸಮಸ್ಯೆಯಾಗುತ್ತ, ದೊಡ್ಡ
"ಅಪಘಾತವೇ ಸಂಭವಿಸುವ ಗಂಡಾಂತರವು ಕಾಣುತ್ತಿತ್ತು."

ಬೆನಾರಸ್ (ಕಾಶಿ) ನಿಂದ ಶ್ರೀಮತಿ ಬೆಸೆಂಟ್ ಮತ್ತು ಉಪೇಂದ್ರನಾಥ ಬಸು, ಇವರು ಆ ನವಂಬರ್ ತಿಂಗಳಲ್ಲಿ ಶಂಕರ್ ಮತ್ತು ಸಿಂಧ್ ಪ್ರಾಂತಗಳಲ್ಲಿ ತಮ್ಮ ಪ್ರಚಾರವಾಸವನ್ನು ಕೈಕೊಂಡರು, ಮದ್ರಾಸಿನಿಂದ ಅವಳು ಈ ರೀತಿ ಬರೆದಳು:—

"ತತ್ವಜ್ಞಾನ (Theosophy) ವು ಅವರ ಸ್ವಂತ ಮತ ಬೋ
"ಧೆಗಳಿಗೆ ಸಂಬಂಧಿಸಿದ ಕ್ರಿಯಾಶಕ್ತಿ ಇದೆಯೆಂದರೆ, ಅದು ಹೇಗೆ
"ಎಂಬುದನ್ನು ಜನರಿಗೆ ಹೇಳಿದೆನು, ಹಲವು ಸೂಕ್ತಿಗಳು ಮತ್ತು
"ಹಲವು ಸಂಕೇತಗಳ ಅರ್ಥವನ್ನು ಅದು ಹೇಗೆ ವಿವರಿಸಬಲ್ಲು
"ದೆಂಬುದನ್ನು ಪ್ರತಿಪಾದಿಸಿದೆನು ---- ನಾಳೆ ದಿನ ನಾವು ಕಾನ್ಪೂ
"ರಿಗೂ ಬಹುದು! ಯಾರೂ ಹೋಗದಿದ್ದ ಸಂದರ್ಭಕ್ಕೆ ಹೋಗುವೆವು."

ನಂತರ ಹೈದರಾಬಾದಿನಿಂದ ಹೀಗೆ ಬರೆದಳು!—

"ಈ ಪತ್ರವನ್ನು ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಬರೆ
"ಯುವುದಾಗಿದೆ, ಹೆಂಗಸರು ಗುಂಪುಗಳನ್ನು ಕಟ್ಟಿಕೊಂಡು ಕಿಟಕಿಯೊಳ
"ಗಿಂದ ನೋಡುತ್ತಿದ್ದಾರೆ, ಮತ್ತು ಹೊಸ್ತಿಲಿನಿಂದ ಬಗ್ಗಿ ನೋಡು
"ತ್ತಿರುತ್ತಿದ್ದಾರೆ, ಹಲವು ಮಹಮ್ಮದೀಯ ಜನರು ಒಂದು ಕೋ
"ಣೆಯಲ್ಲಿ ನಿಂತು ಕಾಯುತ್ತಿದ್ದಾರೆ, ಒಬ್ಬ ಪಂಡಿತನು ಗುರು ನಾ
"ನಕ್ಕೆ ಕಾಣಿಸಿದ ಗುರುವಿನೊಡನೆ ಮಾತನಾಡುತ್ತಿದ್ದಾನೆ, ನಾನು
"ಇಂಗ್ಲಿಷ್ ಪತ್ರವ್ಯವಹಾರಗಳನ್ನು ಮಾಡಬೇಕಾಗಿರುವುದರಿಂದ
"ನನ್ನ ಕಾರ್ಯಕ್ರಮಗಳನ್ನು ಮುಗಿಸಿರುವೆನೆಂಬ ಕಾರಣದಿಂ
"ದ ಪರಮಾತ್ಮ ಮತ್ತು ಆತ್ಮ ಎಂಬ ವಿಷಯದ ಮೇಲೆ ಕೇ
"ಳಿದ ಪ್ರಶ್ನೆಗಳಿಗೆ ಉತ್ತರಿಸಲು ನಿರಾಕರಿಸಿದೆನು. ಇದು ವಿ
"ಚಿತ್ರವಾದೊಂದು ಸ್ಥಳವಾಗಿದೆ. ಜನರು ಸಹೃದಯರೂ ಸಭ್ಯ
"ರೂ ಆ ಜ್ಞಾನಿಗಳೂ ವಿಚಾರ ಜ್ಞಾನವನ್ನು ಪಡೆಯಲು ಕಾತ
"ರಿಸುವವರೂ, ಆಲೋಚನಾ ಶಕ್ತಿಯನ್ನು ಪಡೆಯಬೇಕೆಂಬು
"ವವರೂ ಆಗಿದ್ದು ತಮ್ಮದೇ ಮತ ಗ್ರಂಥಗಳನ್ನು ಓದುತ್ತಿ
"ಲ್ಲಿಯದೆ ಇರುವವರಾಗಿರುವರು ---- ಮದ್ರಾಸಿನಿಂದ
"ಹೈದರಾಬಾದಿಗೆ ಹೋಗುವ ಮೇಲೆ ಸಿಂಧೂನದಿಯ ಹಲವು
"ದ ದಂಡೆಯು ಅಗಲವಾಗಿರುವ ಬಹಳ ಉಷ್ಣದ ಮರಳು
"ಭೂಮಿಯುಂಟಾ ಭೂಮಿಯನ್ನು ದಾಟಿ ಹೋದೆವು, ಈ
"ಸ್ಥಳವು ಮರಳಿಯಲ್ಲಿದ್ದರೂ ದೊಡ್ಡ ನದಿಯು ಕೃಷಿಕಾರ್ಯ
"ಕ್ಕೆ ಇರುವುದರಿಂದ ಇಲ್ಲಿ ಬರಗಾಲವು ಇಲ್ಲ ---- ಹೈದ
"ರಾಬಾದಿನಲ್ಲಿ ಮೊದಲ ಬಾರಿಗೆ ಮಾಡಿದ ಭಾಷಣದಂದು ಬಹಳ
"ದೊಡ್ಡ ಜನರ ಗುಂಪೊಂದು ಆದರ(ಪೂರ್ವಕ)ದಿಂದ ಒಂದು ಬಾಗಿ
"ಲಲ್ಲಿ ಜನರು ಕೋರಿಕೆಗೆ ಮಾಡಿದ ಪ್ರಾರ್ಥನೆಯನ್ನಿಲ್ಲ ಪ್ರತಿ

"ಹಾರಿಸುತ್ತ, ನಾನು ಒಂದು ಮೇಜಿನ ಮೇಲೆ ನಿಂತು ಕೂಗಿದೆನು. ತುಂಬಿದ ಮತ್ತು ಮೌನವಾಗಿ, ಮತ್ತು ಬಹುಶಃ ತುಂಬಾ ಶ್ರದ್ಧೆವಹಿಸಿ ನಿಂತಿದ್ದ ಜನಸಂದಣಿಗೆ ಭಾಷಣವಿತ್ತೆನು. ಅದರ ನಂತರದ ಮೂರು ದಿನಗಳೂ ನಾನು ಒಂದು ಜಗಲಿಯ ಮೇಲೆ ನಿಂತು ಸುತ್ತೆಲ್ಲ ಹಬ್ಬಿದ ಜನಸ್ತೋಮಕ್ಕೆ ಅದೇ ರೀತಿ ಉಪನ್ಯಾಸವನ್ನಿತ್ತೆನು, ಪ್ರತಿ ದಿನ ಬೆಳಿಗ್ಗೆ ಜನರು ಸಂಘಗಳಿಂದ ಕಾತರದಿಂದ ನೆರೆಯುತ್ತಿದ್ದರಾದರೂ ಅವರು ತುಂಬಾ ಅಜ್ಞಾನದಿಂದ ಕೂಡಿದ್ದವರಾಗಿದ್ದರು, ಅವರಲ್ಲಿ ಸಾಹಿತ್ಯ ವಿಷಯ ಜ್ಞಾನವನ್ನರಿತವರನ್ನು ತೋರಿಸಿ ರವರಿಗೆ ನಿತ್ಯವೂ ವ್ಯವಹರಿಸಲಿಕ್ಕೆ ಒಂದು ಕೇಂದ್ರವನ್ನು ತೆರೆಯುವಂತೆ ಸೂಚಿಸಿದೆನು, ಅದಕ್ಕೆ ಇನ್ನೂ ಹೆಚ್ಚು ಕಲಿಯುವುದಕ್ಕೆ ತತ್ವಜ್ಞಾನ (Theosophy) ಸಂಸ್ಥೆಗೆ ಸೇರಬೇಕೆಂದು ಹೇಳಿದೆನು, ನನ್ನ ಬಳಿ ಬಂದ ಶ್ರೋತೃಗಳೆಲ್ಲರನ್ನೂ ಅವರು ಬೀದಿಗೆ ಕೊಂಡುಕೊಂಡರು, ಅವರಲ್ಲಿಯೇ ಕಲಿಯಲು ಆತುರರಾಗಿದ್ದ ಹೊಂಗನರ ಸಂಖ್ಯೆ ವಿಶೇಷ ನಿಧಿಯನ್ನು ತೋರಿಸಿ ಅವರೊಡನೆಯೂ ಮಾತಾಡಿದೆನು,"

ಹೈದರಾಬಾದಿನಿಂದ (ಸಿಂಧ್) ಶ್ರೀಮತಿ ಬೆಸೆಂಟ್ ಇವರು ಕರಾಚಿಗೆ ಹೋಗಿ ಅನಂತರ ದಕ್ಷಿಣಾಭಿಮುಖವಾಗಿ ಬೆಂಗಳೂರು ಮತ್ತು ಮೈಸೂರಿಗೆ ಹೋಗಿ — Theosophy — the Science of Soul — ಎಂಬ ವಿಚಾರವನ್ನು ಕುರಿತು ಮಾತಾಡಿದಾಗ್ಗೆ ಸಭೆಯು ಉತ್ಕೃಷ್ಟವಾದ ರಾಜ್ಯದ ಮುಖ್ಯಮಂತ್ರಿಯು ಭಾಷಣಕ್ಕೆ ಸಂತೋಷವನ್ನು ವ್ಯಕ್ತಪಡಿಸಿದ್ದಲ್ಲದೆ ಮುಖ್ಯವಾಗಿ ವಿದ್ಯೆಗೆ ಸಂಬಂಧಿಸಿದ ಆ ಭಾಷಣವನ್ನು ಬರೆದು ಮುದ್ರಿಸಿ ಪ್ರಚಾರಪಡಿಸಲಿಕ್ಕೆಂದು ಕೇಳಿದನು,

ಅಲ್ಲಿಂದ ಅವರು ತತ್ವಜ್ಞಾನ (Theosophy) ಸಂಸ್ಥೆಯ ವಾರ್ಷಿಕ ಅಧಿವೇಶನಕ್ಕೆಂದು ಅಡಿಯಾರಿಗೆ ಹೋದರು, 1896ರ ಡಿಸೆಂಬರಿನ ಸಮ್ಮೇಳನವು ಹಿಂದಿನದಕ್ಕಿಂತಲೂ ಜನರ ದಟ್ಟಣೆಯಾಗಿ ಮತ್ತು ಉತ್ಸಾಹದಲ್ಲಿ ತುಂಬಾ ಪ್ರಶಂಸನೀಯವಾಗಿತ್ತು, ಎಂದಿನಂತೆ ತುಂಬಾ ಜನರು ನೆರೆದಿದ್ದರು, ಶ್ರೀಮತಿ ಬೆಸೆಂಟ್ ಇವರು ಪ್ರಾತಃಕಾಲದಲ್ಲಿ ಯಾವಾಗಲೂ ಹಿಂದೂ, ಪಾರ್ಸಿ, ಬೌದ್ಧ ಮತ್ತು ಕ್ರೈಸ್ತ ಮತಗಳ ಮೇಲೆ ಕೊಡುತ್ತಿದ್ದ ಭಾಷಣಗಳು ಉತ್ತಮವೂ ವಿಸ್ತೃತವೂ ಮತ್ತು ಆಕರ್ಷಕವಾಗಿಯೂ ಇರುತ್ತಿದ್ದುವು, ಓರ್ವ ಭಾರತೀಯ ದೇಶೀಯ ರಾಜ ಮತ್ತು ಮೈಸೂರಿನ ಮುಖ್ಯಮಂತ್ರಿ (ದಿವಾನ) ಇವರೂ ಅವರ ಭಾಷಣಗಳಿಗೆ ಹಾಜರಿರುತ್ತಿದ್ದರು!

1897

ಹಿಂದೂಸ್ಥಾನದಿಂದ ಇಂಗ್ಲೆಂಡಿನ ಮೂಲಕ ಅಮೇರಿಕಾಕ್ಕೆ ಬಂದ ಶ್ರೀಮತಿ ಬಿಸೆಂಟ್ ಇವರು ಕ್ಷೇಮದಿಂದ ದೀರ್ಘ ಹಾಗೂ ಉಗ್ರವಾದ ಈ ವಿಧದ ಮಾರ್ಗದಲ್ಲಿ ಪ್ರವಾಸವು ಅವರು ಮಾರ್ಚ 18 ರಂದು ನ್ಯೂಯಾರ್ಕಿಗೆ ತಲುಪಿದಾಗ ಕೊನೆಗೊಂಡಿತು --- ಅವರು ಕೌಂಟೆಸ್ ವಾಚ್ಟ್‌ಮೆಸ್ಟರ್ ಮತ್ತು ಕುಮಾರಿ ವಿಲ್ಸನ್ ಇವರೊಡನೆ ಕೂಡಿ ಪಶ್ಚಿಮಾಭಿಮುಖವಾಗಿ ಸೇಂಟ್ ಲೂಯಿಗೆ ಹೋದರು. ಕುಮಾರಿ ವಿಲ್ಸನ್ ಇವರು ಹೀಗೆ ಬರೆದಳು:—

"ನಾವು ನ್ಯೂಯಾರ್ಕನಲ್ಲಿದ್ದಾಗ ಮಿಸಿಸಿಪ್ಪೀ ನದಿ
"ಕ್ಕೆ ಮಹಾ ಪ್ರದೇಶವು ಪ್ರವಾಹಕ್ಕೀಡಾಗಿದೆಯೆಂದು ತಿಳಿದಿದ್ದೆವು,
"ನಾವು ಸೇಂಟ್ ಲೂಯಿಸನತ್ತ ಮಿಸ್ಸಿಸ್ಸಿಪ್ಪಿ ಮತ್ತು ಮಿಸ್ಸೂರಿ
"ನದಿಗಳು ಸಂಗಮದ ಸಮೀಪಕ್ಕಾಗಿ ಹೋಗಲು ನಾವು ಕೈರೋನಿಂ
"ದ ಬರುವಿಯಲ್ಲ ಆದಾಗಲೇ ಹೊಲದ ಜಮೀನುಗಳು ಪರಿ
"ಣಾಮವಾಗಿ ಪ್ರವಾಹಕ್ಕೀಡಾದುದನ್ನು ನೋಡಿದೆವು, ವಾರ್ತಾ
"ಪತ್ರಿಕೆಗಳಲ್ಲಿ ಈ ವಾರ್ತೆಯನ್ನು ತುಂಬಾ ಕಳವಳದಿಂದ
"ತಿಳಿಸುತ್ತಿದ್ದವು, ಪ್ರವಾಹವೇರಿದ್ದರಿಂದ ಮತ್ತು ಇನ್ನಿತರ
"ಕಾರಣಗಳಿಂದ ಸೇಂಟ್ ಲೂಯಿಸನಲ್ಲಿ ಬಹಿರಂಗ ಕಾರ್ಯಕ್ರ
"ಮವು ನಡೆಸುವುದಿಲ್ಲವೆಂಬುದಾಗಿ ತಂತಿ ಮೂಲಕ ನಮಗೆ
"ತಿಳಿಸಲಾಯಿತು, ಆದ್ದರಿಂದ ನಾವು ಕಾನ್ಸಸ್ ನಗರಿಗೆ
"ಹೋದೆವು, ಇಲ್ಲಿ ಹೊಸ ಒಂದು ಕೇಂದ್ರವನ್ನು ಸ್ಥಾಪಿಸಲಾ
"ಯಿತು, ಟೋಪೇಕಾ (Topeka) ದ ಸುಂದರವಾದ ಚಿಕ್ಕ ಊ
"ರಿಗೆ ಸುಮಾರು ಹನ್ನೆರಡು ಜನರ ಒಂದು ಕೇಂದ್ರವನ್ನು
"ಸ್ಥಾಪಿಸಿದ ನಾವೇ ಆ ಸ್ಥಳವನ್ನು ಮೊದಲ ಬಾರಿಗೆ ಸಂದರ್ಶಿಸಿ
"ದ ತತ್ವಜ್ಞಾನ ಸಂಸ್ಥೆಯ ಸದಸ್ಯರೆಂದು ಜನರು ಹೇಳಿದರು
"ಅಲ್ಲಿನ ಗ್ರಂಥಭಂಡಾರದ ಹಜಾರವು ಸಮಾಜದ ಮೇಲ್ದ
"ರ್ಜೆಯ ಜನರಿಂದ ತುಂಬಿತ್ತು. ಡೆನ್ವರ್ (Denver) ನಲ್ಲಿ
"ಇದೇ ರೀತಿ ಕಾದಿರುತ್ತಿದ್ದ ಜನಸಂದಣಿಯು ಆ ಸಭಾಂಗಣ
"ವು ತುಂಬುವ ವರೆಗೂ ಹೆಚ್ಚುತ್ತಲಿದೆ ಮೂವತ್ತೆರಡು
"ಜನರಿಂದ ಕೂಡಿದ ಒಂದು ಕೇಂದ್ರವನ್ನು ತೆರೆಯಲಾಯಿ
"ತು, ಅವರೆಲ್ಲರೂ ಸೇರಿ ಒಂದು Theosophical Reading
"Room ಮತ್ತು ಲೈಬ್ರರಿಗಾಗಿ ಸ್ಥಳವನ್ನು ಪಡೆದುಕೊಳ್ಳುವೆನೆಂ
"ದು ಮುಂದೆ ಬಂದರು, ಆದರನಂತರ ಕೊಲೊರಾಡೋ
"ಸ್ಪ್ರಿಂಗ್ಸ್ (Colorado Springs) ನಲ್ಲಿ ಜನರು ತತ್ವಜ್ಞಾನ
"ದ ಬಗ್ಗೆ ಪ್ರಾರಂಭದಲ್ಲಿ ಆಸಕ್ತಿಯನ್ನು ತೋರುತ್ತಿಲ್ಲ,
"ಆದರೆ ನಾವು ಅಲ್ಲಿಂದ ಹೊರಡುವ ಮುನ್ನ ಹನ್ನೊಂದು
"ಜನರು ಸೇರಿ ಒಂದು ಕೇಂದ್ರವನ್ನು ಸ್ಥಾಪಿಸಲು ಮುಂದಾ

"ದರು. ಅನಂತರ ನಾವು ರೈಲು ಹತ್ತಿ ರಾಕೀ ಪರ್ವತಗಳ ಒಳಗಿನಿಂದ ಸುಂದರ
" ದೃಶ್ಯಗಳನ್ನು ನೋಡುತ್ತಾ ದಾಟಿ ಕಡೆಗೆ ಒಂದು ಮರುಭೂಮಿಗಿಳಿ
" ದು ಅನಂತರ ಶೀತಪ್ರದೇಶವಾಗಿ ಹಿಮದ ಪರ್ವತಗಳಿಂದ ಸುತ್ತು
" ವರಿದ ಸಮತಟ್ಟಾದ ಭೂಮಿಯ ಮೇಲೆ ನಿಂತ Salt Lake
" City ಇಲ್ಲಿಗೆ ತಲುಪಿದೆವು. ಹಲವು ಕಾರಣದಿಂದ Mormon ಪಂಥ
" ದ ಕೇಂದ್ರವಾದ ಈ ಸ್ಥಳವು ತತ್ವಜ್ಞಾನ ವಿಚಾರಗಳಲ್ಲಿ ಆಸಕ್ತಿ
" ಯುಳ್ಳಂತೆ ತೋರುತ್ತಿಲ್ಲ. ನಮ್ಮ ಸಭೆಗೆ ಕೆಲವೇ ಜನರು ಬಂದಿ
" ದ್ದರು; ಆದರೂ ಲಾಡ್ಜ್ ಒಂದು ಕೇಂದ್ರವನ್ನು ಸ್ಥಾಪಿಸಲು ಸಾಕ
" ಷ್ಟು ಜನರು ಮುಂದೆ ಬಂದರು. ಒಗ್ಡೆನ್ (Ogden) ನಲ್ಲೂ
" ಅದೇ ರೀತಿಯಾಯಿತು. ಹೀಗೆ ನಾವು ಹೋದಲ್ಲೆಲ್ಲ ಕೇಂದ್ರಗ
" ಳನ್ನು ಸ್ಥಾಪಿಸಿ ಒಂದು ಶಿಬಿರಗಳ ಮಾಲೆ (a chain of Lodges
" ಯನ್ನೇ ಸೃಷ್ಟಿಸಿದೆವು.

"ಇದರನಂತರ Great Salt Lake ಇದನ್ನು ಬಳಸಿ
" ಮರುಭೂಮಿಯ ಮಧ್ಯೆ ಹಾದು ಸಿಯರಾ ನೆವಾಡ (Sierra
" Nevada) ವನ್ನು ದಾಟಿ ಕ್ಯಾಲಿಫೋರ್ನಿಯಾವನ್ನು ಸೇರಿ ಮೆಕ್ಸಿ
" ಕೋ ದೇಶದ ಗಡಿಯ ಸಮೀಪದಲ್ಲಿ ಮತ್ತು ಸುಂದರವಾದ
" ಪರಿಸರದಲ್ಲಿ ಒಂದು ಕೊಲ್ಲಿಯ ತೀರದಲ್ಲಿರುವ San Diego
" ನಗರಕ್ಕೆ ತಲುಪಿದೆವು. ಸಾಯಂಕಾಲ ನಾವು ಉಳಿದುಕೊಂಡಿ
" ದ್ದ ಹೋಟೆಲನ್ನು ಶ್ರೀಮತಿ ಬೆಸೆಂಟ್ ಇವಳನ್ನು ನೋಡಲಿಂ
" ದು ಜನರು ತುಂಬಿದರು. ಅವರ ಪೈಕಿ ಕೆಲವು ಹಳೆಯ ಸ
" ದಸ್ಯರೂ ಇದ್ದರು. ಅವರು ಆ ಪುಸ್ತಕಗಳನ್ನು ಕೇಳುತ್ತಾ
" ತತ್ವಜ್ಞಾನ ಸಂಸ್ಥೆಯ ಧ್ಯೇಯ ಉದ್ದೇಶಗಳ ಬಗ್ಗೆ ಜಿಜ್ಞಾಸ
" ಆದರವನ್ನು ತೋರ್ಪಡಿಸುತ್ತಿದ್ದುದು ಆನಂದದಾಯಕವಾದ
" ವಿಷಯವಾಗಿತ್ತು. ಅವರಿಗೆ ಸಮಸ್ಯಾತ್ಮಕವಾಗಿ ತೋರಿದು
" ಮತಗಳ ಮೇಲೆ ಪ್ರಶ್ನಿಸಲು ಅವಕಾಶವೂ ಇತ್ತು; ಕಡೆಗೆ ಹೊಸ
" ಸದಸ್ಯರೊಡಗೂಡಿ ಒಂದು ಕೇಂದ್ರವನ್ನು ತೆರೆಯಲನುವಾ
" ದರು. ಲಾಸ್ ಏಂಜೆಲ್ಸ್‌ನ Harmony Lodge ಇದರ ಸ
" ದಸ್ಯರು ಶ್ರೀಮತಿ ಬೆಸೆಂಟ್ ಮತ್ತು ಕೌಂಟೆಸ್ ಇವರಿಗೆ
" ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದು ಸುಮಾರು 300
" ಜನರಿಂದ ಕೂಡಿತ್ತು. ಆರು ದಿನಗಳ ಕಾರ್ಯಕ್ರಮದನಂ
" ತರ ನಮ್ಮ ಪುಟ್ಟ ತಂಡವು ಸಾನ್ ಫ್ರಾನ್ಸಿಸ್ಕೋ ಕಡೆ ಮುಂ
" ದುವರಿಯಿತು. ಅಲ್ಲಿಯೂ ಭಾಷಣಗಳೂ ಉಪನ್ಯಾಸಗಳೂ
" ನಡೆದುವಲ್ಲದೆ White Lotus ದಿನದಂದು ಶ್ರೀಮತಿ ಬೆ
" ಸೆಂಟ್ ಇವಳಿಗೆ ಸುಮಾರು 300 ಜನರಿಂದ ಕೂಡಿದ್ದ ಸತ್ಕಾರ
" ಕೂಟವನ್ನು ಏರ್ಪಡಿಸಲಾಯಿತು. ಮತ್ತೆ Lodge Meetings
" ಅನ್ಯ ಕೇಂದ್ರಕ್ಕೆ ಸಂಬಂಧಿಸಿದ ವ್ಯಾವಹಾರಿಕ ಕೂಟಗಳೂ

"ಇತರ ಮಾತುಕತೆಗಳೂ ನಡೆದುವು, ಮಾನವ ಸಾಧನೆಯ ಬಗ್ಗೆ ಹೊಸ
" ಭಾವನೆಯನ್ನು ಪ್ರಚೋದಿಸಿ ಸರ್ವಜನಿಕರ ಮೆಚ್ಚುಗೆಯನ್ನು ಗಳಿಸಿದ
" ಶ್ರೀ ಮಾರ್ಕೋನಿ ಇವರನ್ನು ಇಲ್ಲಿ ಭೇಟಿಯಾಗುವ ಸದವಕಾಶವು
" ನಮಗುಂಟಾಯಿತು. ಇಲ್ಲಿ ಶ್ರೀಮತಿ ಬಿಸೆಂಟ್ ಇವರು ಒಂದೇ
" ಒಂದು ದಿನ ಮೂರು ಭಾಷಣಗಳನ್ನು ಕೊಟ್ಟರು. ಅದೇನೋ ತಪ್ಪಾಗಿ
" ಅವರಿಗೆ ತಿಳಿಸದೆ ಒಂದು ಭಾಷಣಕ್ಕೆ ಪ್ರವೇಶಧನವಾಗಿ ಅದಕ್ಕೆ ಆ
" ಮೇಲ್ತು ನಿಷೇಧದ ಅಭಾವದಿಂದ ಏರ್ಪಡಿಲ್ಲ; ಆದರೂ ಆ ಸಭೆಗೆ
" ಬಂದ ಜನರು ನಿರಾಶರಾಗದಂತೆ ಅವರು ಅಲ್ಲೂ ಹೋಗಿ ಮಾತಾಡಿ
" ದರು. ಅಲ್ಲಿಂದ ಅಲಮೀಡ, ಓಕ್‌ಲ್ಯಾಂಡ್ ಮತ್ತು ಸಾನ್ ಫ್ರಾನ್ಸಿಸ್ಕೊ
" ದ ಸ್ಟ್ಯಾನ್‌ಫರ್ಡ್ ವಿಶ್ವವಿದ್ಯಾಲಯವನ್ನು ನೋಡಿ ಗಸ್ ಮತ್ತು
" ಹಿಮದ ಶಿಖರಗಳನ್ನುಳ್ಳ ಗಿರಿಗಳಿಂದ ಕೂಡಿದ, ದೇವದಾರು
" ಮರಗಳಿಂದ ಆವರಿಸಿದ Puget Sound ನಲ್ಲಿರುವ ಟ
" ಕೋಮಾವನ್ನು ಸಂದರ್ಶಿಸಿದೆವು. ಒಲಿಂಪಿಯಾದಲ್ಲಿ ಆ
" ಪ್ರಾಂತದ ಗವರ್ನರನೂ ಭಾಷಣವನ್ನು ಕೇಳಲು ಬಂದಿದ್ದರು.
"ಸ್ಪೋಕೇನ್ ಅಮೆರಿಕ ಮತ್ತು ಸ್ವತಂತ್ರ ಹವೆಯಿಂದ
"ಕೂಡಿದ ಸಿಯಾಟಲ್ ನಲ್ಲಿ ಅಗಾಧವಾದ ಜಿಲ್ಲೆಯನ್ನು ಪ್ರ
" ದರ್ಶಿಸಿದ ಸಂಭ್ರಮ ಕೇಂದ್ರ ಒಂದನ್ನು ಸ್ಥಾಪಿಸಲಾಯಿತು.
" ಅವಿಶ್ರಾಂತ ಪರಿಶ್ರಮದಿಂದ ಸ್ಥಾಪಿತವಾದ ಕೇಂದ್ರಗಳ
" ಲ್ಲಿ ಇದೂ ಒಂದಾಗಿದೆ. ಬರೀ 'ಒಂದು ವರ್ಷಕ್ಕೆ ಹಿಂದೆ
" ಸ್ಥಾಪಿತವಾಯಿತಾದರೂ ಇಲ್ಲಿ ಒಂದು ಸಭಾಂಗಣ, ಗ್ರಂಥಭಂ
" ಡಾರವಲ್ಲದೆ ೧೫ ಮತ್ತು ಜನ ಸದಸ್ಯರೂ ಸೇರಿರುವುದ್ದರಿಂದ,--
" ಸ್ಪೋಕೇನ್ ನಲ್ಲಿ ಸಭೆಗೆ ತುಂಬಾ ಜನ ಸೇರಿದ್ದರಲ್ಲದೆ ನೂರಾರು
" ಜನರು ಕೂರಲಿಕ್ಕೆ ಸ್ಥಳ ಸಾಲದೆ ಹಿಂದಿರುಗಬೇಕಾಯಿತು.
" ಮೊಂಟಾನದಲ್ಲಿ ಬಹಳ ಪ್ರಸಿದ್ಧವಾಗಿದ್ದ ಹತ್ತಾರು, ಬೆಳ್ಳಿ, ಕಬ್ಬಿಣ,
" ಮತ್ತು ಚಿನ್ನ ಇವುಗಳ ಆಶ್ರಯವಾದ Butte ಎಂಬಲ್ಲಿ ತಂಗಿ
" ದೆವು. ಇನ್ನೆರಡು ಗಣಿ ಪಟ್ಟಣಗಳಾದ Anaconda ಮತ್ತು
" Helena ಇವನ್ನು ಸಂದರ್ಶಿಸಿದೆವು. Helena ದಲ್ಲಿ ಭೂಪ್ರ
" ಶಸ್ತ್ರಗಾರರವು ತಮ್ಮ ಗೃಹದಲ್ಲಿ ಉಪನ್ಯಾಸದ ಏರ್ಪಾ
" ಶ್ರೀಮತಿ ಬಿಸೆಂಟ್ ಇವರನ್ನು ಸಭೆಗೆ ಪರಿಚಯ ಮಾಡಿ
" ದರು. ಜೂನ್ ೧೫ರಲ್ಲಿ ನಾವು Sheridan ಮತ್ತು ಮನ್ನ
" ಪ್ರಗತಿಗೆ ತಾಣವಾದ ಮತ್ತು Buffalo Bill ಇವರ ಸ್ಮಾ
" ರಕ ಹತ್ತಿರವಿದ್ದ Wyoming ಇಲ್ಲಿ ತಂಗಿದೆವು. ಇಲ್ಲಿ
" ಮಾಂಟಾನದ ಗಣಿಕೆಲಸದವರ ಬದಲಿಗೆ ಬೇರೊಂದು ಬಗೆಯ
" ಜನವನ್ನು, ದನ ಸಾಕುವವರನ್ನು ಕಂಡೆವು. ಅಲ್ಲಿದ್ದ ಹೊಸ
" ಒಂದು 'ಥಿಯಾಸಫಿಕಲ್ ಕೇಂದ್ರದಲ್ಲಿ ಅದಾಗಲೇ ಮೂವತ್ತು
" ಜನ ಸದಸ್ಯರಿದ್ದುದು ಆಶ್ಚರ್ಯಕರವಾಗಿತ್ತು. ಇನ್ನು ಕೆ

ಲವರು ಇದಕ್ಕೆ ಸೇರಿದರು, ಅಲ್ಲದೆ ದಿನ ಕಾಯುವ ವರ್ಗದ ಜನರು ಅಲ್ಲಲ್ಲಿ ಚದರಿದ ತಮ್ಮ ಮನೆಗಳಿಗೆ ಹಿಂದಿರುಗುವಾಗ ಈ ಹೊಸ ಮಹತ್ವದ ಸಂದೇಶವನ್ನು ತಮ್ಮ ದೈನಿಕ ಜೀವನದಲ್ಲಿ ಪಾಲಿಸಲು ಕೊಂಡು ಹೋಗುವರೆಂದು ನಾವು ಆಶಿಸುತ್ತೇವೆ, ಲಿಂಕನ್ ಮತ್ತು ನೆಬ್ರಾಸ್ಕಾ ನಗರಗಳಲ್ಲಿ ನಾವಿದ್ದ ಆ ಎರಡು ದಿನವೂ the Universalist Church ಇಲ್ಲಿ ಸಭೆ ಸೇರಿಸಲು ಜನವು ಕಿಕ್ಕಿರಿದಿತ್ತು. ಇಲ್ಲಿ ಒಂದು ವ್ಯಾಸಂಗ ಕೂಟವನ್ನು (study class) ಸ್ಥಾಪಿಸಲಾಯಿತು, ಒಮಾಹದಲ್ಲಿ ಪ್ರಾಮುಖ್ಯವಾದ ಹೆಂಗಸರ ಸಂಸ್ಥೆಯೊಂದು ಶ್ರೀಮತಿ ಬೆಸೆಂಟ್ ಇವರ ಗೌರವಾರ್ಥವಾಗಿ ಒಂದು ಕೂಟವನ್ನು ಏರ್ಪಡಿಸಿತ್ತು, 'Opera House' ಇಲ್ಲಿ ನಡೆದ ಭಾಷಣಗಳಿಗೆ ಸಾವಿರಾರು ಜನರು ಸೇರಿದ್ದರು. ಆದರೆ ಹೆಚ್ಚು ಸೆಖೆಯಿದ್ದುದರಿಂದ ಜನರು ಹವಾ ಬದಲಾವಣೆಗೆಂದು ಬೇರೆಡೆ ಹೋಗಿದ್ದ

"ಚಿಕಾಗೋದಲ್ಲಿ ನಡೆದ ಅಧಿವೇಶನಕ್ಕೆ ಹಲವು ಪ್ರತಿನಿಧಿಗಳು ಕೂಡಿದ್ದರು; ಅದೇ ರೀತಿ ಇತರ ಶಾಖೆಗಳಿಗೂ ಪ್ರತಿನಿಧಿಗಳು ಸೇರಿದ್ದರಲ್ಲದೆ ಹಲವು ಪತ್ರಗಳು, ತಂತೀ ಸಂದೇಶಗಳೂ ಕಳುಹಿಸಲ್ಪಟ್ಟಿದ್ದುವು. ಹಿಂದೂಸ್ಥಾನ ಮತ್ತು ಯೂರೋಪಿನಲ್ಲಿ ಸಾಧಿಸಿದ ಸಫಲತೆ ಸಂಕ್ಷೇಪವಾಗಿ ಹೇಳಿದನಂತರ ಶ್ರೀಮತಿ ಬೆಸೆಂಟ್ ಇವರು ತತ್ವಜ್ಞಾನ (Theosophy) ಸಂಸ್ಥೆಯು ಉಪದೇಶಗಳಿಗೆ ಬೇಕಾದ ಹೊಸ ಸಾಹಿತ್ಯದ ಅಗತ್ಯವನ್ನು ಹೇಳಿದರು, ಅಲ್ಲದೆ ಸದಸ್ಯರು ಆ ತತ್ವದ ಬೋಧೆ ಮತ್ತು ಮೂಲೋದ್ದೇಶಗಳ ಬಗೆ ಜ್ಞಾನವನ್ನು ಗಳಿಸಿ ಇತರರಿಗೂ ಅದನ್ನು ತಿಳಿಸಬೇಕಾದ ಆವಶ್ಯಕತೆಯನ್ನು ವಿವರಿಸಿದರು. ಆ ಜ್ಞಾನದಿಂದ ಕಟ್ಟಿದ ಯಾವ ಸಂಸ್ಥೆಯೂ ನಿಲ್ಲಲಾರದು, ಅಂತಾ ಸಂಸ್ಥೆಗಳು ಹಾಗೆ ಉಳಿಯಲೂ ಬಾರದು; ಗುರುಗಳು ಕರುಣೆಯಲ್ಲಿ ಗುರುಗಳೇ ಆಗಿರುವರಾದರೂ ಅವರು ಬುದ್ಧಿಜ್ಞಾನದಲ್ಲೂ ಗುರುಗಳಾಗಿರುವರು, ಎಂಬುದಾಗಿ ಹೇಳಿದರು,

"ಚಿಕಾಗೋದಿಂದ ಶ್ರೀಮತಿ ಬೆಸೆಂಟ್ ಇವರು ಪ್ರವಾಸಮುಖವಾಗಿ ಹೊರಟರು. Menominee ಇದರ ಬಳಿ ಹಿಂದಿನ ದಿನಗಳ ದೊಡ್ಡ ಮಳೆಯಿಂದಾಗಿ ಮೂರು ಸೇತುವೆಗಳು ಕೊಚ್ಚಿ ಹೋಗಿದ್ದುವು, ಅವುಗಳನ್ನು ಪುನಃ ತಾತ್ಕಾಲಿಕ ರೀತಿಯಲ್ಲಿ ನಿಲ್ಲಿಸಿದನಂತರ ನಮ್ಮ ರೈಲುಗಾಡಿಯು ಅದರ ಮೇಲೆ ಬಹು ನಿಧಾನವಾಗಿ ಹೋಗುವುದಿತ್ತು, ಭದ್ರವಾಗಿ ತಲುಪುವವರೆಗೆ ನಾವು ತಾಳ್ಮೆಯಿಂದ ಕಾಯಬೇಕಾಗಿತ್ತು.

"ಓಹಾಯೊ, ಟೊಲಿಡೋ, ಸ್ಯಾಂಡಸ್ಕೀ ಮತ್ತು ಕ್ಲೀವ್‌ಲ್ಯಾಂಡ್, ಮತ್ತು ಅದಕ್ಕಿಂತ ಹಿಂದೆ ಮಿಚಿಗನ್-ಹೀಗೆ ಹೋದೆಡೆಯಲ್ಲೆಲ್ಲ ಹೊಸ Theosophical Lodges—

" ತತ್ತ್ವಜ್ಞಾನ ಶಿಬಿರಗಳು - ಇವನ್ನು ಸ್ಥಾಪಿಸಿದ್ದಲ್ಲದೆ ಇತ್ತೀಚೆಗೆ ಅಮೇರಿಕಾದ
" ಕೇಂದ್ರ ಸಮಿತಿಗೆ ಶ್ರೀಮತಿ ಬಿಸೆಂಟ್ ಇವರು ಹಲವು ಗ್ರಂಥಗಳನ್ನು
" ಪೆಟ್ಟಿಗೆಗಳಲ್ಲಿ ತುಂಬಿಸಿ ಗ್ರಂಥಭಂಡಾರಗಳಿಗೆ ಕೊಡಿಸಿದ್ದರು, ಇಂಗ್
" ಲ್ಯಾಂಡಿನಿಂದ ಅಮೇರಿಕಕ್ಕೆ ಹೋಗುವಾಗ ದಾರಿಯಲ್ಲಿ [illegible]
" ಬಂದು [illegible] ಬೀಳ್ಕೊಟ್ಟರೆಂದು ತಿಳಿದು ಬಂತು, ನಾವು ಅಲ್ಲಿ
" ಗೆ ಹೋಗಲೇ ಬೇಕೆಂದೆನಿಸಿದುದರ ಜೊತೆಗೆ ನಮ್ಮನ್ನು ಅವರೇ ಆ
" ಮಂತ್ರಿಸಲು ನಾವು ಆಲ್ಬಿಡೇಲ್ ಎಂಬಲ್ಲಿ ಅವರಿಗೆ ಭಾಷಣವನ್ನೀಯು
" ವಂತೆ ಏರ್ಪಾಡಿಸಿದೆವು. ಆ ಕಡೆಗೆ ಹೋಗುವ ರೈಲುಗಾಡಿಯು
" ತಪ್ಪಿಹೋದುದರಿಂದ ನಾವು ಹುಲ್ಲುಪ್ರಾಂತದ ದಾರಿಯನ್ನು ಆ ಕತ್ತಲೆ
" ಯಲ್ಲಿ ಅಳೆಯುತ್ತ ಹೋದೆವು, ಅವರು ನಮಗಾಗಿ ಕಾದಿದ್ದರು.
" ಸೌಂಡಿಸ್ ಮತ್ತು ಶ್ರೀಮತಿ ಬಿಸೆಂಟ್ ಇವರನ್ನು ಸಭಾಂಗಣದೊ
" ಳಕ್ಕೆ ಕರೆದೊಯ್ಯಲಾಯಿತು, Life and Death ಎಂಬ ವಿ
" ಷಯದಲ್ಲಿ ಮಾಡಿದ ಭಾಷಣವನ್ನು ಬಹು ಶ್ರದ್ಧೆಯಿಂದ ಜನರು
" ಆಲಿಸಿದರು, ಮರುದಿನ ಹಲವರು ನಮ್ಮ ಬಳಿಗೆ ಬಂದು ಕುತೂ
" ಹಲದಿಂದ ಹಲವು ಪ್ರಶ್ನೆಗಳನ್ನು ಕೇಳಿದರು. ವಿದ್ಯಾವಂತರಾ
" ದ ಸಾಧಕರು ತಮ್ಮ ಸಂಕುಚಿತ ಆವರಣಗಳಲ್ಲಿ ತಿಳಿದುಕೊಂ
" ಡದ್ದೇ ಸಾಲದು ಎಂದು ಹಲವು ವಿಷಯಗಳನ್ನು ತಿಳಿಯಲು ಕಾತ
" ರಿಸಿದ್ದರು, ಶ್ರೀಮತಿ ಬಿಸೆಂಟ್ ಇವಳು ಅಲ್ಲಿ ಇನ್ನೊಂದು ಭಾಷ
" ಣವನ್ನು ಕೊಟ್ಟುದಲ್ಲದೆ ಒಂದು ತತ್ತ್ವಜ್ಞಾನ ಕೂಟವನ್ನೂ ಅಲ್ಲಿ ತೆರೆದಳು.

" ಅಮೇರಿಕದಿಂದ ಸ್ವೀಡನ್ ಜಲಮಾರ್ಗಕ್ಕೆ ಮತ್ತು ಕೆ
" ನಡಾದ [illegible] ಸಹೋದರರುಗಳಿಗಾಗಿ ಹಾದು ಟೊರೊಂಟೊ
" ಕ್ಕೆ ತಲುಪಿದೆವು, ಅಲ್ಲಿದ್ದ ಥಿಯೊಸಫಿ ಕೇಂದ್ರಗಳಿಗೆ ಹೋಗಿ ಸ
" ದಸ್ಯರನ್ನು ಸೇರಿಸಿ ಹ್ಯಾಮಿಲ್ಟನ್ನಿಗೆ ಹೋಗಿ ಅಲ್ಲೂ ಒಂದು ಕೇಂ
" ದ್ರವನ್ನು ತೆರೆಯಲಾಯಿತು, ಅದೇ ಸರೋವರವನ್ನು ದಾಟಿ
" ಹಿಂದಕ್ಕೆ ಬಂದು ಕುಮಾರಿ ಸಿಲ್ವಿಯಾನ್ ಅಂತೋನಿ ಇವಳು ಅಧ್ಯಕ್ಷೆ
" ಯಾಗಿದ್ದ ರಾಚೆಸ್ಟರ್‌ನಲ್ಲಿ ಶ್ರೀಮತಿ ಬಿಸೆಂಟ್ ಇವಳ ಭಾಷ
" ಣ ಕಾರ್ಯಕ್ರಮವಿದ್ದೊಡನೆ ಅಲ್ಲೂ ಒಂದು ಕೇಂದ್ರವನ್ನೂ ಸ್ಥಾ
" ಪಿಸಲಾಯಿತು, ತತ್ತ್ವಜ್ಞಾನ (Theosophy) ಪ್ರಚಾರದಲ್ಲಿ ಇದ್ದ
" ಎಲ್ಲಾ ಅಭಿರುಚಿಯುಳ್ಳ ಇದೀಗ ಸಮಿತ್ರಿಗೊಂಡು ನಮ್ಮ ಕಾರ್ಯ
" ವು ಜಯಪ್ರದವಾದಂತೆ ತೋರಿತು. ಬೋಸ್ಟನ್‌ನಲ್ಲಿ ಮ
" ತ್ತೆ ಜನ ಸದಸ್ಯರನ್ನು ಸೇರಿಸಿ ಒಂದು ಕೇಂದ್ರವನ್ನು ಸ್ಥಾ
" ಪಿಸಲಾಯಿತು, ಕೆಲವು ಹಳೆ ಸದಸ್ಯರು ಪುನಃ ಸಕ್ರಿಯ
" ಸದಸ್ಯರಾಗಿ ಸೇರಿದರು, ---- ನ್ಯೂಯಾರ್ಕಿನಲ್ಲಿ ಅವಳು
" "Theosophy - Its Past, Present & Future", ಎಂಬು
" ದಾಗಿ ಕೊಟ್ಟ ಕಡೇ ಸಾರ್ವಜನಿಕವಾದ ಭಾಷಣವು ತತ್ತ್ವಜ್ಞಾನ
" ದ ಬಗ್ಗೆ ಸಮಗ್ರ ವಿಷಯವನ್ನು ವಿವರಿಸಿ ಇಂದಿಗೂ ಅನೇಕ

"ಈ ಸ್ವಾಮಿಗಳ ಆಜ್ಞೆಯು ಕೂಡಿರುವಂತೆ ಜಗತ್ತಿನಲ್ಲಿ ಇರುವ ದುಃಖದಿ
"ಯಿಂದೂ ಮುಂದಕ್ಕೆ ಇರುವ ಉತ್ತಮ ಭವಿಷ್ಯವನ್ನು ಜ್ಞಾನಾಸಕ್ತಿ
"ಯ ತೀವ್ರಹದಿಯ ಚೇತರಿಸುವ ಪ್ರವೃತ್ತಿ ಕಾಣುತ್ತಿರುವುದರಿಂದಲೂ ಹೇಳಿದಳು,
"ಇವಳು ಆರು ತಿಂಗಳು ನಿರಂತರ ಪ್ರವಾಸ, ಮತ್ತು ಆತ್ಮ ತೃಪ್ತಿಯನ್ನು
"ಕೊಡುತ್ತಿರುವ ಸಂತೋಷದ ಕಾರ್ಯಕ್ರಮವಾಗಿ ಇಲ್ಲಿಗೆ ಆಯೋ
"ಜನೆಯು ಕೊನೆಗೊಂಡಿತು."

ಇದರ ನಂತರ ಹತ್ತು ದಿನಗಳು ವಿಶ್ರಾಂತಿಯನ್ನು ಪಡೆದು ಇಂಗ್ಲೆಂಡಿನಲ್ಲಿ ಇದೇ ಕಾರ್ಯಾರ್ಥವಾಗಿ ಸಂಚರಿಸಿದಳು. ಆ ವರ್ಷದ ಡಿಸೆಂಬರನಲ್ಲಿ ಶ್ರೀಮತಿ ಬೆಸೆಂಟ್ ಇವಳು ಫ್ರಾನ್ಸಿಗೆ ಹೋಗಿ ಅಲ್ಲಿ ಇಂಗ್ಲಿಷ್ ಮತ್ತು ಫ್ರೆಂಚ್ ಭಾಷೆಗಳೆರಡರಲ್ಲೂ ಭಾಷಣಗಳನ್ನು ಕೊಡುತ್ತಾ ಸಂಚರಿಸಿದಳು.

1897ರ ಡಿಸೆಂಬರನಲ್ಲಿ ತತ್ವಜ್ಞಾನ ಸಂಘವು (Theosophical Society) ಇದರ ೨೨ನೇ ವಾರ್ಷಿಕೋತ್ಸವವು ಅಡಿಯಾರನಲ್ಲಿ ನಡೆದಾಗ ಶ್ರೀಮತಿ ಬೆಸೆಂಟ್ ಇವಳು ಲಂಡನ್‍ನಲ್ಲಿ ಇದ್ದಳು; ಅಲ್ಲಿಂದ ಪ್ರಧಾನ ಕೇಂದ್ರದ ಅಧ್ಯಕ್ಷನಿಗೆ ಈ ರೀತಿ ಸಂದೇಶವನ್ನು ಕಳುಹಿಸಿದಳು:—

"ನನ್ನ ಪ್ರಿಯ ಅಧ್ಯಕ್ಷರೆ, ನನ್ನ ನೆಚ್ಚಿನ ಭಾರತೀಯ ಸೋದ
"ರ ಸೋದರಿಯರಿಗೆ ನನ್ನ ಶುಭಾಶಯಗಳನ್ನು ಅರ್ಪಿಸಿ. ನನ್ನ
"ನಾಲಗೆಯು ಅವರಿಂದ ದೂರ (ಇಲ್ಲಿಂದ) ಮಾತಾಡುತ್ತಿದ್ದರೂ ನನ್ನ ಹೃ
"ದಯವು ಅವರನ್ನು ಸೇರಿಸುತ್ತಿದೆಯೆಂದು (ಅವರಿಗೆ) ಹೇಳುವಿ
"ರೋ? ಸಹಸ್ರಾರು ಮೈಲುಗಳು ಈ ಅಂತರವು ನಮ್ಮ ದೇಹಗಳ
"ನ್ನು ಪ್ರತ್ಯೇಕಿಸುವದಾದರೂ ನಾವೆಲ್ಲರೂ ನಮ್ಮ ಆತ್ಮ, ಪ್ರೀತಿ
"ಮತ್ತು ಯಾವ ಮಹಾಸಾಧನೆಗೆ, ದೈವಿಯಶಕ್ತಿಯು ಯಾರಲ್ಲಿ ಶ್ರದ್ಧೆ
"ಯುಳ್ಳ ದುಡಿಯಲು ಪ್ರೇರೇಪಿಸುತ್ತಿರುವುದೋ ಆ ನಮ್ಮ ಉದ್ದೇಶ
"ದಲ್ಲಿ ನಾವೆಲ್ಲರೂ ಒಂದೇ ಆಗಿರುವೆವು.

"ಆ ನಮ್ಮ ಗುರುಗಳ ಆಶೀರ್ವಾದವು ನಿಮಗೆ ದೊರೆತು
"ಶಕ್ತಿಯನ್ನು ಒದಗಿಸಿ ನಿಮ್ಮ ಕಾರ್ಯಕ್ರಮಗಳನ್ನು ಜಯಪ್ರದವಾಗಿ
"ಸದಾ! ನಿಮ್ಮ ಮತ್ತು ಅವರ ಪ್ರೀತಿಯ ಗೆಳತಿ; ಅನ್ನಿ ಬೆಸೆಂಟ್."

1898

ಜನವರಿ ೪ರಂದು ಶ್ರೀಮತಿ ಬೆಸೆಂಟ್ ಇವಳು ಇಂಗ್ಲೆಂಡಿನಿಂದ ನಾರ್ವೆ ಮತ್ತು ಸ್ವೀಡನ್ನಿಗೆ ಹೋದಳು, ಅಲ್ಲಿ Theosophy & Christianity ಮತ್ತು States of Consciousness ಎಂಬ ವಿಷಯವಾಗಿ ಮಾತಾಡಿದಳು. ನಾರ್ವೆ ಇದ್ದಾಗ Christiania ಕುರಿತಾಗಿ ಹೀಗೆ ಬರೆದಳು:—

"ನಮಗೆ ಆಶ್ಚರ್ಯಕರವಾಗಿ ತೋರುವ ರೀತಿಯಲ್ಲಿ
"ಈ ಭೂಮಿಗೆ ಕತ್ತಲು ಕವಿಯುವದು; ಬಿಳಿದಾದ ತಾರೆಗಳು

“ಕಾಲದ ಸೂರ್ಯ ಬೆಳಕು ಮಾತ್ರವಿದೆ; ಆದರೆ ಅದು ಬೆಳಕಲ್ಲ; ಇಲ್ಲಿನ ಹವೆಯು ಕಗ್ಗತ್ತಲ ಕಪ್ಪಿನಿಂದ ಕೂಡಿದ್ದು ನಸುಗತ್ತಲ ಮಬ್ಬಿನ ಮರೆಗೂ ಬೇರೆ ಬೇರೆ ರೀತಿಯಾಗಿದೆ. ಎಲ್ಲೆಲ್ಲಿ ಕೂಡ, ಮಂಜು ಮಾತ್ರವಲ್ಲದೆ ಸೂರ್ಯನೇ ಇಲ್ಲ. ಇಲ್ಲಿ ಪ್ರಕೃತಿಯು ತನ್ನ ಮಕ್ಕಳಿಗೆ ಕ್ರೂರ ಮಲತಾಯಿಯಂತಿದ್ದಾಳೆ, ನಾರ್ವೆ ಜನರ ದುರಂತ ಕತೆಗಳು ಇಲ್ಲಿ ನಿಜವಾಗಿರಬಹುದಾದಂತೆ ತೋರುತ್ತದೆ. ಅಲ್ಲಿ ಹೇಳಲಾದ ಫೆನ್ರಿಸ್ ಎಂಬ ಭಯಂಕರ ತೋಳವೇ ಇಲ್ಲಿ ತಕ್ಕುದಾದ ನಿವಾಸಿಯಂತೆ ತೋರಿದ್ದು ನಿಜವೆನಿಸಿದೆ. ಹೀಗೆ ಪ್ರಕೃತಿಯು ಮೌನದಲ್ಲೂ Christiania –(ನಾರ್ವೆ) ಇದು ನಮ್ಮ ಸಭೆಗೆ ಮೇಧಾವಿಗಳಿಂದ ಕೂಡಿದ ದೊಡ್ಡ ಜನಸಮೂಹವನ್ನೇ ನೆರೆಸಿತ್ತು. ಸ್ಟಾಕ್‌ಹೋಂ ನಗರವು ನಮಗೆ ಸುಸ್ವಾಗತವನ್ನೀಯಿತು, ಅಲ್ಲಿ ವಿಶ್ವವಿದ್ಯಾಲಯದ ಕಟ್ಟದಲ್ಲಿ, ಉಪ್ಸಲಾದಲ್ಲಿ, ಇರುವ ವಿದ್ಯಾಮಂದಿರದ ಹಜಾರವು ನಮ್ಮ ಕಾರ್ಯಕ್ರಮಕ್ಕೆ ಜನವನ್ನು ತುಂಬಿತ್ತು. ತತ್ವಜ್ಞಾನ (Theosophy) ಇದರಲ್ಲಿ ಅವರಿಗಿರುವ ಅಭಿರುಚಿಗೆ ಸಾಕ್ಷ್ಯವೋ ಎಂಬಂತೆ ಡೆನ್ಮಾರ್ಕ್ ರಾಜಧಾನಿ ಕೋಪನ್‌ಹೇಗನ್‌ನಲ್ಲಿ ಬಂದು ಸಾವಿರಕ್ಕಿಂತಲೂ ಹೆಚ್ಚು ಜನ ನೆರೆದಿದ್ದರು. ನಸುಗತ್ತಲ ಉತ್ತರದ ಸೀಮೆಗಳಿಂದ ಅಮ್ಸ್ಟರ್‌ಡ್ಯಾಮಿಗೆ ಬಂದಾಗ ನಮಗೆ ಕಾಣಬರುತ್ತಿದ್ದ ಡಚ್ಚ ಮಿತ್ರರನ್ನು ಕಂಡು ನಮ್ಮ ಸ್ವಗೃಹಕ್ಕೆ ಸೇರಿದಂತೆಯೇ ಆಯಿತು. ಡಚ್ಚ ಪತ್ರಿಕೆಗಳು ನಮ್ಮ ಕಾರ್ಯಕ್ರಮಕ್ಕೆ ತುಂಬಾ ಸಹಾನುಭೂತಿಯನ್ನು ತೋರಿದ್ದುವಲ್ಲದೆ ತತ್ವಜ್ಞಾನದ ಸಂದೇಶವನ್ನು ಸಹಸ್ರಾರು ಮನೆಗಳಿಗೂ ತಲುಪಿಸಿದ್ದುವು. ಇದೇ ರೀತಿ “ದಿ ಹೇಗ್” (The Hague) ಇಲ್ಲಿ ಸಹ ನಮ್ಮ ಕಾರ್ಯಕ್ರಮವು ಜಯಪ್ರದವಾಗಿತ್ತು, ಲೋಕದ ಕತ್ತಲನ್ನು ಹೋಗಲಾಡಿಸುವ, ಈ ತತ್ವಜ್ಞಾನದ ಧ್ಯೇಯಗಳನ್ನು ಅರಿಯುವ ಕಾತರತೆಯನ್ನು ಜನರು ತೋರಿಸುತ್ತಿದ್ದುದನ್ನು ನೋಡಿ ನಮಗೆ ಸಂತೋಷವಾಯಿತು. ಧರ್ಮ ಜ್ಞಾನಕ್ಕಾಗಿ ಜನವು ಹಸಿದಿದ್ದಾರೆ; ಆದರೆ ಅವರಿಗೆ ರೊಟ್ಟಿಯ ಬದಲಾಗಿ ಕಲ್ಲನ್ನು ಕೊಡುವರೋ ಎಂದು ಹೊಗಳುತ್ತಿದ್ದಾರೆ, ಬರೀ ಹುಸಿಮಾತು ಬರೆವಣಿಗೆಗಳನ್ನು ಕೇಳುತ್ತಾ ಅವರು ಸೋತು ಹೋಗಿದ್ದಾರೆ, ಆದರೆ ಸತ್ಯವನ್ನು ಸಕಾರಣವಾಗಿ ಮತ್ತು ಸ್ವತಃ ಪ್ರತ್ಯಕ್ಷತೆಯಿಂದ ಹೇಳಿದರೆ ಅವರು ಸಂತೋಷದಿಂದ ಕೇಳುತ್ತಾರೆ.”

ಇದರನಂತರ ಸ್ಕಾಟ್ಲೆಂಡಿನಲ್ಲಿ ಒಂದು ಭಾಷಣ ಪ್ರವಾಸವನ್ನು ಕೈಗೊಳ್ಳಲಾಯಿತು. 1898 ರ ಮಾರ್ಚ್ 14 ರಲ್ಲಿ ಶ್ರೀಮತಿ ಬೆಸೆಂಟ್ ಇವರು ರೋಮಿನಲ್ಲಿ ಒಂದು ಭಾಷಣವನ್ನು ಮಾಡಿ ಅಲ್ಲಿಂದ ಹಿಂದೂಸ್ಥಾನಕ್ಕೆ ಹೊರಟರು. ಬೆನಾರೆಸ್‌ಗೆ ಏಪ್ರಿಲ್ 3 ರಂದು ತಲುಪಿ ಅವರು

ಅಲ್ಲಿ Central Hindu College ಇದನ್ನು ಸ್ಥಾಪಿಸುವುದರಲ್ಲಿ ತನ್ನ ಸಹಾಯವೆಲ್ಲವನ್ನೂ ಸಲ್ಲಿಸಿದಳು.

ಜೂನ್ ತಿಂಗಳಲ್ಲಿ ಶ್ರೀಮತಿ ಬೆಸೆಂಟ್ ಇವಳು ಇಂಗ್ಲೆಂಡಿಗೆ ಹೊರಟಗಿ ಹೆಚ್ಚಾಗಿ ಲಂಡನ್‌ನಲ್ಲಿ ಹಲವು ಭಾಷಣಗಳನ್ನು ಆ ಒಂದೆರಡು ತಿಂಗಳುಗಳ ಕಾಲ ಕೊಟ್ಟಳು. ಸೆಪ್ಟೆಂಬರ್‌ನಿಂದ ಮೂರು ತಿಂಗಳು ಕಾಲ ಸತತ ಬನಾರಸ್‌ನಲ್ಲಿಯೇ ಇದ್ದಳು. ಮತ್ತೆ ಒಂದೊಂದು ವೇಳೆ ತನ್ನ ಸಮಯವನ್ನು ಉತ್ತರದ ಕಡೆಗಳಲ್ಲಿ ಕಳೆದಳು!

ಡಿಸೆಂಬರ್ 27ರಂದು ಅಡೆಯಾರ್‌ನ ಅಧಿವೇಶನದ ಸಭಾಂಗಣವು (The Convention Hall) ಬೆಳಿಗ್ಗೆ ಎಂಟು ಘಂಟೆಯ ವೇಳೆಗೆ ಬಹು ಶೋಭಾಯಮಾನವಾಗಿ ತೋರುತ್ತ. ಆಗ The Evolution of Life and Form, ಎಂಬುದರ ಮೇಲೆ ಪ್ರತಿದಿನ ಬೆಳಿಗ್ಗೆ ಕೊಡುವ ನಾಲ್ಕು ಭಾಷಣಗಳನ್ನು ಒಂದರನಂತರ ಒಂದಾಗಿ ಕೊಡಲು ಕರ್ನಲ್ ಹೆನ್ರಿ ಆಲ್ಕಾಟ್ ಇವರು ಶ್ರೀಮತಿ ಬೆಸೆಂಟ್ ಇವಳನ್ನು ವೇದಿಕೆಗೆ ಕರೆತಂದರು. ಜನವಾದರೋ ಇಡೀ ಕಟ್ಟಡದ ಒಳಗೂ ಹೊರಗೂ ಕಿಕ್ಕಿರಿದು ತುಂಬಿದ್ದರು. ಸಮರ ಪ್ರೀತಿಗೆ ಪಾತ್ರಳಾದ ಭಾಷಣಗಾರ್ತಿಯನ್ನು ಎಲ್ಲರೂ ಬಹು ಉತ್ಸಾಹದಿಂದ ಸ್ವಾಗತಿಸಿದರು. ಮದ್ರಾಸು ಅಧಿಪತ್ಯದ ಮಾನ್ಯ ಗವರ್ನರ್ ಸರ್ ಆರ್ಥರ್ ಹ್ಯಾವ್‌ಲಕ್ ಇವರೂ ಹಾಜರಿದ್ದರು. ಅವರನ್ನು ಕರತಾಡನಗಳಿಂದ ಒಳಗೆ ಕರೆತರಲಾಯಿತು. ಶ್ರೀಮತಿ ಬೆಸೆಂಟ್ ಇವಳು Ancient and Modern Science ಎಂಬುದಾಗಿ ಅವಳು ಹಿಂದೆಂದೂ ತೋರಿಸದೇ ಇದ್ದ ದಿವ್ಯ ವಾಕ್ಶಕ್ತಿಯನ್ನು ಪ್ರದರ್ಶಿಸಿ ಮಾತಾಡಿದಳು. ಆ ಅಧಿವೇಶನದ ಮುಕ್ತಾಯದ ವೇಳೆಗೆ ಅವಳು Theosophy and Future of INDIA — ಎಂಬ ವಿಚಾರದ ಮೇಲೆ ಸ್ಫೂರ್ತಿದಾಯಕವಾಗಿ ಮಾತಾಡಿದಳು. ಆಗ ಅವಳು ಹೇಳಿದ ಕೆಲವು ಮಾತುಗಳು ಹೀಗಿವೆ:—

“ಲೋಕದ ರಾಷ್ಟ್ರಗಳಲ್ಲಿ ಧರ್ಮದ ತವರಾಗಿ, ಮತದ ತೊ
“ಟ್ಟಿಲಾಗಿ ಮತ್ತು ಅಧ್ಯಾತ್ಮ ಜ್ಞಾನದ ರಹಸ್ಯವನ್ನು ಇತರರಿಗೆ
“ಅರುಹುವ ಅಮೋಘ ಸೇವೆಯನ್ನು ಸಗತಿಕ್ಕಾಗಿ ಅಧಿಶಕ್ತಿಯು
“ಪೂರ್ವಕಾಲದಲ್ಲಿ ಈ ಭರತಖಂಡವನ್ನು ನಿಯಮಿಸಿತ್ತು. ಅ
“ದು ಹಿಂದೂಸ್ಥಾನದ ಪ್ರಾಮುಖ್ಯವಾದ ಕೆಲಸವಾಗಿತ್ತು. ಆದ
“ಮರ್ಮವನ್ನು ಅವಳು ಸಾಧಿಸಿದ್ದವರಿಗೆ ಉತ್ತಮವಾದುದೇನೂ
“ಅವಳದೇ ಆಗಿತ್ತು. ಈಗ ಅವಳು ಲೋಕದ ಮತಧರ್ಮ
“ಗಳ ಜನಿಸಿಕೊಂಡಿದ್ದ ಮಾತೃಸ್ಥಾನವನ್ನು ಕಾಲಾನಂತರ ಕಳೆದು
“ಕೊಂಡಳೋ ಅಂದಿನಿಂದ ಅವಳನ್ನು ಬಹು ಮೇಲಿನ ಸ್ಥಾ
“ನಕ್ಕೇರಿಸಿದ ಆ ಹಿಂದಿನ ಸತ್ವವನ್ನೆಲ್ಲ ಕಳೆದುಕೊಂಡಳು.

ಅವಳ ಸಂಪತ್ತು ಅಧೋಗತಿಗಿಳಿಯುತ್ತದೆ; ಅವಳ ಸ್ವಾತಂತ್ರ್ಯವು ಮಾಯ-
ಗೊಳ್ಳುತ್ತದೆ; ಕಡೆಗೆ ಅವಳ ಜನರು ಇತರ ಜನಾಂಗಗಳಿಂದ ತುಳಿಯುತ್ತಿದ್ದ
ನಿಮ್ನ ಸ್ಥಾನವನ್ನು ಕಾಲದಿಂದ ಕಾಲಕ್ಕೆ ಎಂಬಂತೆ ಕಳೆದುಕೊಂ-
ಡಳು. 'ಇತರ ರಾಷ್ಟ್ರಗಳು ಹಿಂದಿನ ಕಾಲದಲ್ಲಿ ಅದೇ ದಾರಿಯನ್ನು
ಹಿಡಿದಿದ್ದುವು. ಅಂದಿನ ಜಗತ್ತಿನಲ್ಲಿ ಪ್ರಬಲ ನಾಗರೀಕತೆಯಂತೂ
ಇದ್ದಿತು. ಈಗ ಅಂಥಿನ ಜನರು ಆಳಿದ, ಕಾದಾಡಿದ ಮತ್ತು ಮಾನಸಿ-
ಕ್ಷೇತ್ರಗಳ ಅವಶೇಷಗಳು ಮಾತ್ರ ಉಳಿದಿವೆ ---- ರಾಷ್ಟ್ರಗಳು
ಒಂದರನಂತರ ಒಂದಾಗಿ ಸತ್ತು ಹೂಳಲ್ಪಟ್ಟಾಗ ಅವಳಿಗಿಂತಲೂ
ಹಿರಿದಾದ ಹಿಂದೂಸ್ಥಾನವು ಮಾತ್ರ ಇನ್ನೂ ಸಾಯುತ್ತಿಲ್ಲ. ಅವಳ
ಪಾದ ಧೂಳಿಯು ಇನ್ನೂ ಚಿತೆಯ ಮೇಲೆ ಬೀಳುತ್ತಿಲ್ಲ. ನಿಧಾನ-
ವಾಗಿ ಮತ್ತು ಮೆಲ್ಲಗೆ ಶ್ವಾಸವನ್ನು ಬಿಡುತ್ತಿದ್ದರೂ ಹಿಂದೂ-
ಸ್ಥಾನವು ಇನ್ನೂ ಬದುಕಿದೆ, ಇತರ ಎಲ್ಲಾ ರಾಷ್ಟ್ರಗಳಿಗಿಂತಲೂ
ಎತ್ತರ ಹಿರಿದಾದ ಹಿಂದೂಸ್ಥಾನವು ದುರ್ಗೆಯು ನಿಂತಿರುವಂತೆ
ಇನ್ನೂ ನಿಂತಿದೆ. ಆ ದೇವತೆಯು ನಿಲುವಿನ ಹಿಂದೆ ಚಿರಂತನ
ಬಾಳು ಇದ್ದರೂ ಅವಳು ಎಳೆಬಾಲೆಯಾಗಿಯೇ ನಿರಂತರ ಇರು-
ವಳು; ಏಕೆಂದರೆ ಆತ್ಮಕ್ಕೆ ಪ್ರಾಯವಾಗಲೀ ಮುಪ್ಪಾಗಲೀ, ಸಾ-
ವು ಆಗಲೀ ಇಲ್ಲ. ಆಧ್ಯಾತ್ಮಿಕತೆಯು ಸಂಕೇತವಾಗಿ ಒಂದು
ರಾಷ್ಟ್ರವು ಇದ್ದರೆ ಅದು ಬಾಳುತ್ತೇ ಬರುತ್ತೆ, ಅವಳ ಮ-
ಕ್ಕಳು ಅವಳನ್ನು ತಿರಸ್ಕರಿಸಿದರೂ ಅವಳ ಪ್ರೇಮಿಗಳು
ದೂರ ನಿಂತರೂ ಅವಳು ಹಸನಾಗಿಯೇ ಇರುವವಳು, ತನ್ನ
ಭೂಮಿಯನ್ನು ನೋಡುತ್ತಾ ಯಾರೋ ಒಬ್ಬನನ್ನು ಅವರ
ಸೇವೆಯನ್ನು ಮಾಡಲೆಂದು ಕಾಯುತ್ತಾ, ತಾಯಿಯು ತನ್ನ
ಕೈಗಳನ್ನು ದೇವರತ್ತ ಮೇಲಕ್ಕೆತ್ತಿ, "ಅಹಾ, ನಾನು ನ-
ನ್ನ ಕೆಲವು ಮಕ್ಕಳ ಆತ್ಮಗಳನ್ನು ತೆಗೆದು --- ಇತರ
ರಾಷ್ಟ್ರಗಳಿಗೆ ಕಳುಹುವೆನು; ಅವರು ಇತರ ಜನಾಂಗಗ-
ಳ ಜೊತೆಯಲ್ಲಿ ಬಳಿಯುತ್ತ ---- ನನ್ನ ರಾಷ್ಟ್ರದ ಮಕ್ಕಳ
ಪ್ರೀತಿಯು ತಪ್ಪಾಗಿ ಅವರ ಪ್ರೀತಿ ಮಾಡಿದರೂ ಅಂತೆ-
ಯೇ ಉಳಿಯುತ್ತದೆ. ಆಗ ನಾನು ಈ ಭೂಮಿಯ ದೂ-
ರದ ದೇಶಗಳಲ್ಲಿರುವ ಅವರನ್ನು ಒಂದಕ್ಕೆ ನನ್ನ ಮನೆಗೆ
ಕರೆತರುವೆನು. ನನ್ನ ಮಕ್ಕಳಿಗೆ ಬುದ್ಧಿಯನ್ನು ಕಲಿಸಲು
ಅವರಿಗೆ ಹೇಳುವೆನು; ತಮ್ಮ ಪ್ರಾಚೀನ ದೈವತ್ವವನ್ನು
ಸ್ಮರಿಸಲು ಮತ್ತು ಆ ಆಧ್ಯಾತ್ಮಿಕತೆಗೆ ಹೊಸ ಜೀವವ-
ನ್ನು ಕೊಡುವ ಸಾಧ್ಯತೆಯನ್ನು ಅವರಿಗೆ ತಿಳಿಸುವೆನು."
ಹಾಗೆಸ್ಟಲು ಹಲವು ದೇಶಗಳಲ್ಲಿರುವವರು ತಮ್ಮ ತಾಯಿ-
ಯು ಕರೆಯನ್ನು ಕೇಳಿ ಹಲವು ಸಾಗರಗಳನ್ನು ದಾಟಿ ಓಗೊ-
ಡುತ್ತಾ ಬಂದರು. ಹಾಗೆ ಬಂದು ಅವಳ ಮಕ್ಕಳಿಗೆ, ಇತರ

"ರಿಗೆ ನಾಚಿಕೆಯಾಗುವಂತೆ ಅವಳ ಸಂದೇಶಗಳನ್ನು ಸಾಧಿಸಲು ಹೇಳುವರು
"ವರೆಂದರೆ ಅವಳ ಹಿಂದಿನ ಜನ್ಮದ ಮಕ್ಕಳು ಇದೀಗ ಅಪರಿಚಿತರ ರೀತಿ
"ಯಲ್ಲಿ ಬಂದು ಅವಳ ಈ ಭೂಮಿಯಲ್ಲಿ, ಈ ಭರತಖಂಡದಲ್ಲಿ, ಹುಟ್ಟಿದ
"ಮಕ್ಕಳಿಗಿಂತ ನಿಷ್ಠಾವಂತರಾಗಿ ದುಡಿಯುವುದು ಬೇಡವೆಂದು ಇಲ್ಲಿ ಹು
"ಟ್ಟಿದವರಿಗೇ ದುಡಿಯಲು ಹೇಳುವರು----ನೀವು ನಮ್ಮ ಹಿಂದಿನ ಜ
"ನ್ಮಗಳಲ್ಲಿದ್ದುದಕ್ಕಿಂತಲೂ ಪ್ರಬಲರಾಗಿ, ಆಧ್ಯಾತ್ಮಿಕತೆಯಲ್ಲಿ ಇನ್ನೂ ಉ
"ತ್ಕೃಷ್ಟರಾಗಿ, ಆತ್ಮಶಕ್ತಿಯಲ್ಲಿ ಇನ್ನೂ ವೈಭವಪ್ರದರಾಗಿ, ಸಾರ್ವಜನಿ
"ಕತೆಯಲ್ಲಿ ಇನ್ನಷ್ಟು ಶಕ್ತಿವಂತರಾಗಿ ಹಿಂದಿನ ಕಾಲದ ಋಷಿಗಳಂತೆ
"ಸಹ ಇಲ್ಲದಿದ್ದಷ್ಟು ಕ್ರಿಯಾಶೀಲರಾಗಿ ಅವರು ಪುನಃ ಇದೇ ಹುಟ್ಟು
"ಭೂಮಿಯಲ್ಲಿ ಉದಿಸುವಷ್ಟು ಬಲವತ್ತಾಗಿ ಈ ದೇಶವು ಆಗು
"ವುದೆಂದು ನಾನು ಹೇಳುತ್ತೇನೆ----ಶಾಸ್ತ್ರದಲ್ಲಿ ಭವಿಷ್ಯರಾದ
"ವರು ಸರಳ ಸಾಮಾನ್ಯವಾಗಿ ಪವಿತ್ರರಾಗಿ ಕರ್ತವ್ಯ ತತ್ಪರರಾಗಿ
"ತಮ್ಮ ಸ್ವಾರ್ಥಕ ಪ್ರವೃತ್ತಿಯಿಂದ ಜೀವಿಸಬಹುದಾದರೆ ಉಳಿದುದೆಲ್ಲ
"ವನ್ನೂ ಅವರು ಅಂತೆಯೇ ಹೊಂದುವರು."

1899

ಬರೀ ಕೆಲವು ದಿವಸಗಳಿಗೆಂದು ಜನವರಿಯಲ್ಲಿ ಶ್ರೀಮತಿ ಬೆಸೆಂಟ್ ಇವಳು ಬರ್ಮಾಕ್ಕೆ ಹೋಗಿ ಅಲ್ಲಿ ಭಾಷಣಗಳನ್ನು ಕೊಟ್ಟು Central Hindu College (ಬನಾರಸ್) ಇದರ ಸ್ಥಾಪನೆಗೆ ಹಿಂದೂ ಸಮಿತಿಯನ್ನು ನೇಮಿಸಿ, ಅನಂತರ ಬನಾರಸ್ (ಕಾಶಿ)ಗೆ ಹಿಂದಿರುಗಿದಳು. ಅಲ್ಲಿ ಸುತ್ತಮುತ್ತಲ ಪ್ರಾಂತಗಳಲ್ಲೆಲ್ಲ ಅಂಥಾ ಸಮಿತಿಗಳನ್ನು ಸ್ಥಾಪಿಸಲು ಹಾಡಿದುದಲ್ಲದೆ ಬನಾರಸ್‌ನಲ್ಲಿ ತೆರೆಯಲಾದ ಹಿಂದೂ ಕಾಲೇಜಿನ ಪ್ರಗತಿಗೆ ಶ್ರಮಿಸಿದಳು. ಆ ವರ್ಷದ ಏಪ್ರಿಲ್ ೨೨ರಲ್ಲಿ ಅವಳು ಬೊಂಬಾಯಿಯಿಂದ ಯೂರೋಪಿಗೆ ಹೊರಟು ಮೇ ೬ನೇ ದಿನ ಇಂಗ್ಲೆಂಡಿಗೆ ತಲುಪಿದಳು,

White Lotus Day - ಈ ದಿನದಂದು ಅಡೆಯಾರ್‌ನಲ್ಲಿ ಸಂಸ್ಥೆಯ ಸ್ಥಾಪಕರಲ್ಲೂ ಪ್ರಥಮ ಅಧ್ಯಕ್ಷೆಯೂ ಆಗಿದ್ದ ಹೆಚ್. ಪಿ. ಬ್ಲಾವಟ್‌ಸ್ಕಿ ಇವಳ ಪ್ರತಿಮೆಯೊಂದನ್ನು ನಿಲ್ಲಿಸಲಾಯಿತು. ಆಗ ಶ್ರೀಮತಿ ಬೆಸೆಂಟ್ ಇವಳು ಈ ರೀತಿ ಬರೆದಳು:-

"1891ರ ಮೇ ೮ರ ೮ ದಿನಕ್ಕೂ 1899ರ ಮೇ ತಿಂಗ
"ಳ ೮ನೇ ದಿನಕ್ಕೂ ಎಷ್ಟು ವ್ಯತ್ಯಾಸವಿದೆ. ಅಂದು ದುಃಖಿತ ಹೃ
"ದಯಗಳು ಮೃತ್ಯುತ್ವ ಪಾಲಾದ ದೇಹದ ಸುತ್ತಲೂ ನೆರೆದು ಮುಂ
"ದೇನಾಗುವುದೋ ಎಂದು ತತ್ತರಿಸಿದ್ದು ಕೊಂಡಿದ್ದೆವು----ಇಂ
"ದು ಬ್ರಹ್ಮವಿದ್ಯಾ (Theosophy) ತತ್ವಗಳು ಪ್ರತಿಧ್ವನಿಸುತ್ತಿರು
"ವ ಲೋಕದಲ್ಲಿ ಅವಳ ಕೆಲವು ಬೋಧನೆಗಳು ವೈಜ್ಞಾನಿಕ
"ವಾಗಿ ಮತ್ತು ವಿಸ್ತೃತಗೊಳವಾಗಿ ಹರಡುತ್ತಿರುವ ಕಾಂಡಬಂ
"ಧುರವಾಗ ನಾವು ಅವಳ ಪ್ರತಿಮೆಯನ್ನು ಅನಾವರಣ ಮಾಡು

ವಾದವು ಉಚಿತವಾಗಿದೆ. ಅವಳು ಮತ್ತು ಹೆನ್ರಿ ಸ್ಟೀಲ್ ಅಲ್ಕಾಟ್ ಇವರು ಸ್ಥಾಪಿಸಿದ ಈ ಧರ್ಮಸಂಸ್ಥೆಯು ಇಂದು ಬಲವತ್ತಾಗಿದೆ, ಮತ್ತು ಸುವ್ಯವಸ್ಥಿತವಾಗಿದೆ. ಅಂತರಂಗವಾಗಿ ಶಾಂತಿಯುಂಟಾಗಲೂ ಬಹಿರಂಗವಾಗಿ ಗೌರವದಾಯಕವಾಗಿಯೂ ಇದೆ. ಇದಕ್ಕೆ ಸಂಬಂಧಿಸಿದ ಸಾಹಿತ್ಯವು ಪ್ರಚಾರವಾಗುತ್ತಾ ಇದೆ. ಇದರ ಧ್ಯೇಯವು ಉದ್ದೇಶಗಳು ಆಧುನಿಕ ವಿಚಾರಗಳಿಗೆ ಪ್ರೇರಕವಾಗಿ ಹಬ್ಬಿವೆ."

ಇಂಗ್ಲೆಂಡಿನಲ್ಲಿ ಅವಳ ಭಾಷಣ ಕಾರ್ಯಕ್ರಮಗಳನ್ನು ಮುಂದುವರಿಸುತ್ತಾ ಅವಳು The Ascent of Man; Mahabharata ಎಂದು ಮೊದಲಾದ ವಿಷಯಗಳ ಮೇಲೆ ಮಾತಾಡಿದಳು, ಅವಳು ಫ್ರಾನ್ಸಿನಲ್ಲಿ The Ancient Wisdom – ಇದನ್ನು ಕುರಿತು ಮಾತಾಡಿದಾಗ ನೆರೆದವರು ಎಂಟುನೂರು ಜನ ಇದ್ದರು. ಪುನಃ ಇಂಗ್ಲೆಂಡಿಗೆ ಹಿಂದಿರುಗಿ ವಿವಿಧ ವಿಷಯಗಳನ್ನು ಕುರಿತಾಗಿ ಮಾತಾಡಿದಳು.

ಆಗಸ್ಟ್ ತಿಂಗಳಲ್ಲಿ ಶ್ರೀಮತಿ ಬೆಸೆಂಟ್ ಇವಳು ವಾಗ್ನರ್ ಹಬ್ಬದ ವೇಳೆಯಲ್ಲಿ ಮಾತಾಡಿದಳು. ವಾಗ್ನರ್ ಸಂಗೀತದ ವಿಷಯವಾಗಿ ಅವಳು ಹೀಗೆ ಬರೆದಳು. "ಅವನ (Wagner) ಕೆಲವು ಸಂಜ್ಞೆಗಳು ಮತ್ತು ನಾದ ಲಯ ಸ್ವರಭೇದಗಳು ಈ ಭೂಮಿಗೆ ಸಂಬಂಧಿಸಿದ್ದಲ್ಲ. ಅವು ನಿಜಕ್ಕೂ ದೇವಲೋಕದ್ದಾಗಿದೆ; ದೇವತೆಗಳ ಆವೇಶಪೂರ್ಣ ಸಂಗೀತದ ಪ್ರತಿಧ್ವನಿಯಾಗಿದೆ."

ಕೆಲವು ದಿನಕ್ಕೆಂದು ಆಮ್ಸ್ಟರ್‌ಡಾಂ ಮತ್ತು ಬ್ರುಸ್ಸೆಲ್ಸಿಗೆ ಹೋಗಿ ಅವಳು ಲಂಡನಿಗೆ ಹಿಂದಿರುಗಿ Dreams ಮತ್ತು Eastern & Western Science – ಎಂಬುದರ ಮೇಲೆ ಬಹು ಸೊಗಸಾದ ವ್ಯಾಖ್ಯಾನವನ್ನು ಕೊಟ್ಟಳು.

ಆ ವರ್ಷದ ಒಕ್ಟೋಬರದಲ್ಲಿ ಅವಳು ಪುನಃ ಭಾರತಕ್ಕೆ ಬಂದಾಗ ಶ್ರೀಮತಿ ಬೆಸೆಂಟ್ ಇವಳು Central Hindu College ಇದರ ಬಗ್ಗೆ ಯೋಜನೆಯನ್ನು ಮುಂದುವರಿಸಿ ಸಾಧಿಸಿದಳು. ಇದರ ಉದ್ದೇಶಗಳು ಇಂಡಿಯ ವೈಸ್ರಾಯ್ ಲಾರ್ಡ್ ಕರ್ಜನ್ಸ್ ಮತ್ತು ಪ್ರಾಂತದ ಲೆಫ್ಟಿನೆಂಟ್ ಗವರ್ನರ್ ಇವರ ದೃಷ್ಟಿಯನ್ನು ಸೆಳೆದವು, ಅವಳು ಆ ಕಾಲೇಜಿನ ಮೊದಲ ವಾರ್ಷಿಕ ಅಧಿವೇಶನದಲ್ಲಿ ಭಾಗಿಯಾದುದಲ್ಲದೆ ಅದರ ಮುಖ್ಯ ಭಾಷಣವನ್ನು ಮಾಡಿದಳು. ಡಿಸೆಂಬರ್‌ನಲ್ಲಿ ಅವಳು "ಅವತಾರಗಳು" ಎಂಬುದರ ಮೇಲೆ ಅಡಿಯಾರ್‌ನಲ್ಲಿ ಮಾತಾಡುತ್ತಾ ತನ್ನ ಪ್ರಚಂಡ ವಾಗ್ಬಲವನ್ನು ಮಂತ್ರಮುಗ್ಧರಾದ ಜನಸ್ತೋಮದವರಿಗೆ ಬಿಚ್ಚಿಟ್ಟಳು.

1900

ಈ ವರ್ಷವು ಶ್ರೀ–ಅನಿ ಬೆಸೆಂಟ್ ಇವಳು ತನ್ನ ವ್ಯವಸ್ಥಾಪನಾ ಕೌಶಲ್ಯವನ್ನು ಹಿಂದೂದೇಶದ ವಿದ್ಯಾಭಿವೃದ್ಧಿಯ ಬಗ್ಗೆ

ಮತ್ತು ದೇಶದ ಪ್ರಸಿದ್ಧಿಯನ್ನು ಹೆಚ್ಚಿಸುವ ಹಲವಾಗಿ ಉಪಯೋಗಿ
ಸಿದಳು ---- ಮಾರ್ಚ್ ತಿಂಗಳಲ್ಲಿ ಅವಳು ತನ್ನ ಹಲವು ವರ್ಷ
ಗಳ ನಿವಾಸವಾಗಿದ್ದ ಬನಾರಸ್ಸಿನ "ಶಾಂತಿ ಕುಂಜ"ಕ್ಕೆ ಹೋದಳು,
ಏಪ್ರಿಲ್‌ನಲ್ಲಿ ಅವಳು ಭಾರತವನ್ನು ಬಿಟ್ಟು --ನೇ ತಾರೀಖಿನಲ್ಲಿ
ಇಟಲಿಯನ್ನು ತಲುಪಿ ಕಡೆಗೆ ನೇಪಲ್ಸ್, ರೋಮ್, ಫ್ಲೋರೆನ್ಸ್ ಮತ್ತು
ವೆನ್ನಿಸ್‌ನಲ್ಲಿ ಭಾಷಣಗಳನ್ನು ಕೊಟ್ಟು ಮೇ ತಿಂಗಳಲ್ಲಿ ಇಂಗ್ಲೆಂಡಿಗೆ ಹೋ
ದಳು. ಅಲ್ಲಿ ಲಂಡನ್ನಿನ Queen's Hall ನಲ್ಲಿ ಅವಳು Emo-
tions, their place, Evolution of Culture - ಎಂಬೀ ವಿಷಯ
ದ ಬಗ್ಗೆ ಹಲವು ಉಪನ್ಯಾಸಗಳನ್ನು ಕೊಟ್ಟುದ್ದಲ್ಲದೆ --ನೇ
Albermarle Street ಇಲ್ಲಿ Thought-power, its control
and Culture ಎಂಬುದರ ಮೇಲೆ ಧಾರಾವಾಹಿಯಾಗಿ ಉಪನ್ಯಾ
ಸಗಳನ್ನು ಕೊಟ್ಟಳು, ಜುಲೈ ಮತ್ತು ಆಗಸ್ಟ್‌ನಲ್ಲಿ ಅವಳು ಕೆಲ
ವು ಪ್ರಮುಖ ಆಂಗ್ಲ ಶಿಬಿರ (Lodge)ಗಳನ್ನು ಸಂದರ್ಶಿಸಿ
ಸೆಪ್ಟೆಂಬರದಲ್ಲಿ ಹಿಂದೂಸ್ಥಾನಕ್ಕೆ ಹೊರಟಳು.

ಬನಾರಸ್‌ನಲ್ಲಿ ವಾರ್ಷಿಕ ತತ್ವಜ್ಞಾನ ಸಮ್ಮೇಳನವು
(Annual Theosophical Convention) ಸೇರುವ ವರೆಗೆ
ಶ್ರೀಮತಿ ಬಿಸೆಂಟ್ ಇವಳು ಉತ್ತರ ಹಿಂದೂಸ್ಥಾನದ ಕೆಲವು
ಪಟ್ಟಣಗಳಲ್ಲಿ ಸನಾತನ ಹಿಂದೂಧರ್ಮದಲ್ಲಿರುವ 'ಕೆಲವು ಪ್ರಬಲ
ಬೋಧೆಗಳು ಭವ್ಯ ಉದ್ದೇಶಗಳಿಗಾಗಿ ಬೇರೂರಿಟ್ಟು ಹಿಂದೂಧರ್ಮ
ಕ್ಕೆ ಅವು ಹೇಗೆ ತಳಹದಿಯಾಗಿದೆಯೆಂಬುದನ್ನು ವಿವರಿಸಿದ
ಳು, ಅದನ್ನೆಲ್ಲ ಅವಳು Ancient Ideals in Modern Life
ಎಂಬ ಶಿರೋನಾಮೆಯಲ್ಲಿ ಸಂಗ್ರಹವಾಗಿ ಬರೆದಳು ಬನಾರಸ್ ಅಧಿ
ವೇಶನದ ವೇಳೆಗೆ ಮಾಡಿದ ಭಾಷಣದಲ್ಲಿ ಅವಳು ತನ್ನ ಮನಸ್
ಸಿ ಅದೆಂಬಂತೆ ಆವೇಶವಾಗಿ ಪ್ರತಿಪಾದಿಸಿದಳು.

1901.

ಈ ವರ್ಷವಿಡೀ ಶ್ರೀಮತಿ ಬಿಸೆಂಟ್ ಇವಳು ಹಿಂದೂ
ಸ್ಥಾನದಲ್ಲಿಯೇ ಇದ್ದಳು, ಮಾರ್ಚ್ ತಿಂಗಳವರೆಗೆ ಹಿಂದೂ
ಮತ ಧರ್ಮ ವಿಚಾರದ ಬಗ್ಗೆ ಸಮರ್ಥನೀಯ ರೀತಿಯಲ್ಲಿ
ಉಪನ್ಯಾಸಗಳನ್ನು ಕೊಡುತ್ತಾ, ಹಿಂದೂ ಮತ ಮತ್ತು
ತತ್ವಜ್ಞಾನ (Theosophy) ಇವುಗಳನ್ನು ಕುರಿತಾಗಿ ಬಿಡಿ
ಸಿದೇ ವಿವರಿಸುತ್ತಾ, ಸ್ಥಳದಿಂದ ಸ್ಥಳಕ್ಕೆ ತಿರುಗಿದಳು,
---- ಅವಳ ಕಾರ್ಯಕ್ರಮಗಳಲ್ಲಿ ವಿದ್ಯಾಪ್ರಚಾರವೇ
ಮೊದಲನೇದಾಗಿತ್ತು, ಅದಕ್ಕಾಗಿ ಅವಳು ಬನಾರಸ್‌ನಲ್ಲಿ ಸ್ಥಾ
ಪಿಸಿದ 'ಹಿಂದೂ ಕಾಲೇಜು' ಅವಳ ಜೀವ ಮತ್ತು ಆತ್ಮ
ವೆಂಬಂತೆ ಇದ್ದಿತು. ಅವಳು ಅಲ್ಲಿಯೇ ಹಲವು ದಿವಸಗಳನ್ನು
ಕಳೆಯುತ್ತಿದ್ದಳು. ಕರ್ನಲ್ ಆಲ್ಕಾಟ್ ಇವನು ತನ್ನ ಪ್ರವಾ

ವಳ್ಳಿ ಮಾತುಗಳನ್ನು ಬರೆದು ಬೌದ್ಧಮತಕ್ಕೆ ಯಾವ ಸೇವೆಯನ್ನು ಮಾಡಿ
ದರೋ, ಅದೇ ರೀತಿ ಇವರು ಎಳೆಯ ಹಾಗೂ ಪ್ರೌಢವಯಸ್ಸಿನ ಮಕ್ಕಳಿಗೆ
ತಕ್ಕುದಾದ Advanced Text-book of Hinduism- ಇದನ್ನು
ಅನಾಮಧೇಯಳಾಗಿ ಬರೆದರು. ಉತ್ತಮವೂ ಅಧಿಕೃತವೂ ಆದ
ಪುಸ್ತಕವಾಯಿತಲ್ಲದೆ ತತ್ವಜ್ಞಾನದ ಮತ್ತು ಉತ್ತಮ ನಿರೂ
ಪಣೆಯಿಂದ ಕೂಡಿತ್ತು. ಇಂಥಾ ಪುಸ್ತಕಗಳ ಜೊತೆಗೆ
ಅವರ ಭಾಷಣಗಳು ವಿಶೇಷ ವಿಚಾರಜ್ಞಾನವನ್ನುಂಟುಮಾಡುತ್ತಿದ್ದುವು,
ಬನಾರಸ್ ಹಿಂದೂ ಕಾಲೇಜಿನಲ್ಲಿ ರಾಮಾಯಣದ ವಿಷಯ
ವಾಗಿ ತುಂಬಾ ಭಾವಗರ್ಭಿತ ಭಾಷಣಗಳನ್ನು ಕೊಟ್ಟಳು. ಆ ಭಾ
ಷಣಗಳು Sri Ramachandra- the Ideal King ಎಂಬ
ಹೆಸರಿನಿಂದ ಪುಸ್ತಕರೂಪದಲ್ಲಿ ಪ್ರಕಟವಾಯಿತು.

ಭಾರತದ ಪುನರುತ್ಥಾನ ಕಾರ್ಯಕ್ಕೆ ಶ್ರೀಮತಿ ಬೆಸೆಂಟ್
ಇವರು 'ವಿವಿಧ ಕ್ಷೇತ್ರಗಳಲ್ಲಿ' ತಜ್ಞರಾದ ಅತಿ ಉತ್ತಮ ಹಿಂದು
ಗಳನ್ನು ಆಕರ್ಷಿಸಿದ್ದಲ್ಲದೆ ಅವರ ಪ್ರಚಂಡ ಸಾಮಾಜಿಕ
ಮತ್ತು ಮತೀಯ ಕಾರ್ಯಕ್ರಮಗಳು ಸರಕಾರದ ಪ್ರಶಂಸೆ
ಗೂ ಪಾತ್ರವಾಯಿತು. ಅವರು ಭಾರತದ ನಾಲ್ಕೂ ದಿಕ್ಕುಗಳಲ್ಲಿ
ಸಂಚರಿಸಿ ಜನರನ್ನು ಕರ್ತವ್ಯಶೀಲರಾಗಲು, ಹೆಚ್ಚಿನ ವಿದ್ಯೆ
ಯನ್ನು ಪಡೆಯಲು ಹುರಿದುಂಬಿಸಿದರು. ಕರ್ನಲ್ ಹೆನ್ರಿ
ಆಲ್ಕಾಟ್ ಇವರು ಹೀಗೆ ಹೇಳಿದರು:—

"ನಮ್ಮ ಪ್ರಿಯ ಶ್ರೀಮತಿ ಬೆಸೆಂಟ್ ಇವರು ಸೆಪ್ಟೆಂಬರ್ 24
"ರಂದು ಬನಾರಸ್‌ನಿಂದ ಜ್ವರಪೀಡಿತಳಾಗಿ ಮತ್ತು ಮನಸ್ಸಿಗೆ
"ಕಷ್ಟಕರವಾದ ಪರಿಸ್ಥಿತಿಯಲ್ಲಿ ಪ್ರಯಾಣ ಬೆಳೆಸಿ ಅಡ್ಯಾರನ್ನು
"ತಲುಪಿದರು, ನಮ್ಮ ನಗರಗಳ ಅಪಾರ ಸಮಾಜಗಳು ಮತ್ತು ಮತೀಯ
"ಸ್ವರಿಯದ ಜನಸಾಮಾನ್ಯರು ಅವರು ಅಂಥಾ ಪರಿಸ್ಥಿತಿಯಲ್ಲೂ
"ಮೊದಲಿನಂತೆಯೇ ಎರಡನೇ ಸಲವೂ ವೇದಿಕೆಯನ್ನೇರಿ
"ಮಾತಾಡಬಲ್ಲಳೆಂಬುದನ್ನು ತಿಳಿಯಲಾರರು, ನಮ್ಮಾರು
"ಹಿಂದೂಗಳು ಸುಮಾರು 1,500 ಜನರನ್ನು ಮೀರಿದ್ದ ಜನ
"ಸಭೆಗೆ "Islam"- ಇದರ ಮೇಲೆ ಎಂದಿನಂತೆ ಅವರ ಅದ್ಭು
"ತ ರೀತಿಯಲ್ಲಿ ಯಾವುದೇ ತೊಡಕು ಇಲ್ಲದೆ ಭಾಷಣವನ್ನು
"ಮಾಡಿದರು. ಹಾಗಿದ್ದರೂ ಅವರ ಕೊನೆಯಿಂದ ಎರಡನೇ
"ದಿನ ಸಭಾಂಗಣಕ್ಕೆ ಬರಲು ಕೆಲವು ನಿಮಿಷಗಳ ಕಾಲ ತೆಗೆದು
"ಕೊಂಡರು. ಈ ಭಾಷಣವು ಅವರು ಇಸ್ಲಾಮ್, ಜೈನ ಮ
"ತ, ಸಿಕ್ಖ ಮತಗಳ ಮೇಲೆ ಧಾರಾವಾಹಿಯಾಗಿ ಮಾಡಿದ
"ಭಾಷಣಗಳಲ್ಲಿ ಮೊದಲನೆಯದಾಗಿದ್ದು ಇವೆಲ್ಲವೂ ಅನಂತರ The
"'Religious Problem in India- ಎಂಬುದಾಗಿ ಹಿಂದು
"ಪುಸ್ತಕರೂಪದಲ್ಲಿ ಪ್ರಕಟವಾಯಿತು."

1902.

ಅಧಿವೇಶನದನಂತರ ಶ್ರೀಮತಿ ಬಿಸೆಂಟ್ ಇವರು ಹಿಂದೂಸ್ಥಾನದಲ್ಲಿ ವಿಸ್ತೃತ ಪ್ರವಾಸವನ್ನು ಕೈಕೊಂಡುದಲ್ಲದೆ ಅವರ ವಿದ್ಯಾಪ್ರಗತಿಯ ಕೆಲಸವನ್ನು ಅವರೊಡನೆಯೇ ಯಶಸ್ವಿಯಾಗಿ ನಡೆಸಿದರು. ಏಪ್ರಿಲ್‌ನಲ್ಲಿ ಅವರು ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿದಾಗ ದಾರಿಯಲ್ಲಿ ಹಡಗಿನಲ್ಲಿಯೇ ಸೇರಿದ್ದ ಆ ಜನಕ್ಕೆ ಭಾಷಣವನ್ನು ಮಾಡಿದರು. ಅವರು ಇಂಗ್ಲೆಂಡಿಗೆ ತಲುಪಿದನಂತರ ಕುಮಾರಿ ಎಡಿತ್ ವಾರ್ಡ್ ಇವರು ಈ ರೀತಿಯಾಗಿ ಬರೆದರು:—.

"ಅವರ ಶ್ರಮದಾಯಕ ಪ್ರಯಾಣದಿಂದ ತುಂಬಾ ಆಯಾ-
"ಸವನ್ನು ಹೊಂದಿದ್ದರಾದರೂ ಅವರು ಎಂದಿನಂತೆಯೇ ಉತ್ಸಾಹದಿಂ-
"ದ ಕಾರ್ಯನಿರತರಾಗಿದ್ದಲ್ಲದೆ ತಮ್ಮ ಕೆಲಸದ ಹೊರೆಯನ್ನು ಲೆಕ್ಕಿಸದೇ
"ಹುಮ್ಮಸ್ಸಿನಿಂದ ಹೊತ್ತರು. ಅವರು ಹಿಂದೂಸ್ಥಾನದಲ್ಲಿದ್ದಾಗ
"ಹಿಡಿದ ಜ್ವರವು ಅವರಿಂದ ಅಗಲಿರಬಹುದೆಂದು ಸಂತೋಷ-
"ಪಡುತ್ತೇವೆ. ಅವರು ಹಿಂದಿನಂತೆ ಶಕ್ತಿಯುಳ್ಳವರಲ್ಲದೆ ಬೇಗನೆ ಆ-
"ಯಾಸವನ್ನು ಹೊಂದುತ್ತಿದ್ದರಾದರೂ ಅವರು ತಮ್ಮ ಸಹಜಾ
"ಶಕ್ತಿಯನ್ನು ಕ್ರಮೇಣ ಹೊಂದುವರೆಂದು ಆಶಿಸುತ್ತೇವೆ. ಅ-
"ವರು ಕೈಗೊಂಡ ಕೆಲಸವು ಪ್ರಬಲವಾಗಿದೆ; ಈ ಮೂರು ವಿ-
"ವಿಧ ಉಪನ್ಯಾಸಮಾಲಿಕೆಗಳನ್ನು ವರ್ಣಿಸಿದ್ದೇವೆ. ಅವರ
"ವಿಚಾರಪೂರ್ಣ ಭಾಷಣಗಳನ್ನು ಕೇಳಲು ಮುನ್ನೂರಕ್ಕಿಂತಲೂ
"ಹೆಚ್ಚು ಜನ ಸೇರುತ್ತಿದ್ದರು; ಹಲವರು ಸ್ಥಳಾಭಾವದಿಂದ ಹಿಂ-
"ದಕ್ಕೆ ಕಳುಹಿಸಲ್ಪಡುತ್ತಿದ್ದರು. Theosophy and Imp-
"erialism — ಎಂಬುದನ್ನು ಕುರಿತು ಮಾತಾಡುತ್ತಾ ಅವರು
"ಸಾಮ್ರಾಜ್ಯವಾದೀ ಜನಾಂಗವು ಪ್ರಪಂಚದ ಚರಿತ್ರೆಗೆ ಸಲ್ಲಿಸ-
"ಬೇಕಾದುದೇನು ಎಂಬುದರ ಬಗೆ ಹೇಳಿದರು. ಸಭಾಂಗಣ-
"ದ ಪ್ರತಿ ಮೂಲೆಗೂ ಅವರು ಮಾತಾಡುತ್ತಿದ್ದುದು ಕೇಳಿಸಿತು."

ಆಗಸ್ಟ ತಿಂಗಳಲ್ಲಿ ಅನಿ ಬಿಸೆಂಟ್ ಇವರು ಹಾಲೆಂಡ್ ಮತ್ತು ಬ್ರುಸೆಲ್ಸ್‌ಗೆ ಹೋದರು. ಸೆಪ್ಟೆಂಬರ 15ರಂದು ಅವರು ಲಂಡನ್ನಿಂದ ಥಿಯೋಸೋಫಿ ಶಾಖೆಗಳ ಅಧಿವೇಶನಕ್ಕಾಗಿ ಬರ್ಲಿನ್ನಿಗೆ ಹೋಗಿ ತನಂತರ ಪ್ಯಾರಿಸಿಗೆ ಹೋದರು. ಅದರನಂತರ ದಕ್ಷಿಣಾಭಿಮುಖವಾಗಿ ಜಿನೇವಾ, ಗ್ರೆನೊಬಲ್, ಮಾರ್ಸೆಲ್ಲಿ, ಮತ್ತು ನೀಸ್. ಜಿನೋವ (Genoa) --- ಅನಂತರ ರೋಮ್, ಫ್ಲೋರೆನ್ಸ್, ಬೊಲೋನ್ಯಾ, ಮಿಲಾನ್, ಮತ್ತು ಟ್ಯೂರಿನ್ ಪ್ರವಾಸ ಮುಗಿಸಿ ನವೆಂಬರ್-೨೪ರಲ್ಲಿ ಹಿಂದೂಸ್ಥಾನಕ್ಕೆ ಹೊರಟರು.

ಈ ವರ್ಷ ಶ್ರೀಮತಿ ಬಿಸೆಂಟ್ ಇವರು — the Co-Masonic Order ಎಂಬ ಇನ್ನೊಂದು ಚಳುವಳಿಯಲ್ಲಿ

ನಿರತಳಾದಳು. ಕುಮಾರಿ ಫ್ರಾನ್ಸಿಸ್ ಅರುಂಡೇಲ್ ಇವಳು ಈ ಸಂಘಕ್ಕೆ ಸೇರಿದ ಮೊದಲನೇ ಅಂಗವತಿಯಾಗಿದ್ದಳು. ಇವಳು ಶ್ರೀಮತಿ ಬೆಸೆಂಟಳಿಗೆ ಈ ಉಪ್ಪಾರರ ಕೆಲಸ ಸಂಬಂಧದ Free-masonry ಕಾರ್ಯಕ್ರಮವನ್ನು ಗಂಡಸರು ಮತ್ತು ಹೆಂಗಸರಿಗೆ ಬೋಧಿಸಿದರೆ ಆಧ್ಯಾತ್ಮಿಕದಲ್ಲಿ ದೊಡ್ಡ ಶಕ್ತಿಯೇ ಆಗುವುದು, ಎಂಬುದಾಗಿ ಕಲಿಸುತ್ತಿದ್ದಳು. ಶ್ರೀಮತಿ ಬೆಸೆಂಟ್ ಇವಳು ಈ Free-masonry ಸಂಘಕ್ಕೆ ಪ್ರಾರಂಭದಲ್ಲಿ ಸೇರಿದಾಗ ಅವಳು ಅದರಲ್ಲಿ ತೋರಿಸಿದ ಅಭಿರುಚಿಯ ಕಾರಣದಿಂದ ಅದು ಹಲವು ದೇಶಗಳಲ್ಲಿ ಹಬ್ಬಿತು, ಅಷ್ಟೇ ಅಲ್ಲ, ಅವಳು ಆ ಸಂಸ್ಥೆಯ The Very Illustrious Vice-President, Member of the Supreme Council ಮತ್ತು the Most Puissant Grand Commander of the British Jurisdiction ಎಂಬುದಾಗಿ ನೇಮಕವಾದಳು,

ಬೆನಾರಸ್‌ನಲ್ಲಿ ನಡೆದ ವಾರ್ಷಿಕ ಅಧಿವೇಶನದಲ್ಲಿ ಶ್ರೀಮತಿ ಬೆಸೆಂಟ್ ಇವಳು "The Law of the Higher Life" ಈ ವಿಷಯವನ್ನು ಕುರಿತಾಗಿ ಮಾತಾಡಿದಳು.

1903

ಶ್ರೀಮತಿ ಬೆಸೆಂಟ್ ಇವಳು ತತ್ವಜ್ಞಾನ (Theosophy)ದ ವಿಶಾಲ ಮನೋಭಾವ ಮತ್ತು ಸೌಂದರ್ಯವನ್ನು ಜನರಿಗೆ ಬಿಚ್ಚಿಡುತ್ತಾ ವಿದ್ಯಾಭ್ಯಾಸದ ಬಗ್ಗೆ ಜನತೆಯನ್ನು ಪ್ರೇರೇಪಿಸುತ್ತಾ ಉತ್ತರ ಹಿಂದೂಸ್ಥಾನದಲ್ಲಿ ತುಂಬಾ ಸಂಚರಿಸಿದಳು. ದೇಶದ ಹಿರಿಯ ವರ್ಗದ ಜನರ ಮತ್ತು ಹೆಂಗಸರ ಮನಸ್ಸನ್ನು ವಿಕಾಸಗೊಳಿಸಲು ಶ್ರಮಿಸಿದಳು; ಅವಳು ಸಾಮೂಹಿಕ ಸತ್ಕಾರ್ಯಗಳಿಗೆ ಸಹಕರಿಸಬೇಕೆಂದು ಕೋರಿದಳು; ಯುವಕರಿಗೆ ಉತ್ತಮ ವಿದ್ಯೆಯನ್ನು ನೀಡುವ ಬಗ್ಗೆ ಶ್ರದ್ಧೆ ವಹಿಸಿದ್ದಳಲ್ಲದೆ [illegible] ಭಾರತದ ಸಂಸ್ಕೃತಿ ಮತ್ತು ವೇದಾಂತ ಜ್ಞಾನಕ್ಕೆ ಆಧಾರವನ್ನು ತಯಾರಿಸುತ್ತಿದ್ದಳು.

ಈ ವರ್ಷ ಅಡೆಯಾರ್‌ನಲ್ಲಿ ನಡೆದ ವಾರ್ಷಿಕ ಅಧಿವೇಶನಕ್ಕೆ ಸಂಸ್ಥೆಯ ಅಧ್ಯಕ್ಷ ಕರ್ನಲ್ ಓಲ್ಕಾಟ್ ಇವನು ತುಂಬಾ ಜನರು ನೆರೆದಿದ್ದ ಕಾರಣದಿಂದ ಕಷ್ಟಕ್ಕೆ ಬಿದ್ದನು. ತಾನು ನಿತ್ಯವೂ ವಾರ್ಷಿಕ ಅಧಿವೇಶನಕ್ಕೆ ಕೊಡುತ್ತಿದ್ದ ನಾಲ್ಕು ಭಾಷಣಗಳಿಂದ ಪ್ರಾರಂಭಿಸಿ ಡಿಸೆಂಬರ್ 27 ರಂದು ಅವಳು ಸಾರ್ವಜನಿಕ ಭಾಷಣವನ್ನು ಹೊರಗೆ ಮೈದಾನದಲ್ಲಿಯೇ ಕೊಡುವಂತೆ ಅವಳಿಗೆ ಹೇಳಿದನು, The Value of Philosophy in the Raising of India — ಎಂಬುದೇ ಅವಳ ಭಾಷಣದ ವಿಷಯವಾಗಿತ್ತು. ಹೊರಗೆ ಅಂಗಳದ ಹಿಂದು ಭಾಗವು ಜಮಖಾನೆ ಹಾಸಲ್ಪಟ್ಟು ಮತ್ತು ತಂತಿಬೇಲಿಯುಳ್ಳ ಭದ್ರ

ಪಾಠಿಸಿ ಮರುದಿನದ ಸಭೆಗೆ ಸಿದ್ಧತೆಯನ್ನು ಮಾಡಿದಾಗ ಅವರ ಭಾಷಣದ ದಿನ ಬೆಳಿಗ್ಗೆ ಮುಂಜಾನೆಯಿಂದಲೇ ಜನರು ತಂಡೋಪತಂಡವಾಗಿ ನೆರೆದರು. ಆ ತಂತಿ ಬೇಲಿಯನ್ನೆಲ್ಲ ಕಳಚಿ ಹಾಕಿ ಅಲ್ಲಿದ್ದ ಬೆಂಚು ಕುರ್ಚಿಗಳಲ್ಲೆಲ್ಲ ಕುಳಿತರು. ಜಮಖಾನೆ ಸ್ಥಳವನ್ನು ಆಕ್ರಮಿಸಿ ಅವರೆಲ್ಲಾ ಕಾದು ಕುಳಿತರು. ಶ್ರೀಮತಿ ಬೆಸೆಂಟ್ ಇವರು ಬರುವಷ್ಟರಲ್ಲಿ ಸಭಿಕರ ಸಂಖ್ಯೆಯು ೨000ಕ್ಕೂ ಮೀರುತ್ತು. ಅವರು ನೆಗಡಿ ಕಾಯಿಲೆಯಿಂದ ನರಳುತ್ತಿದ್ದರೂ ಅವರ ಧ್ವನಿಯು ಸ್ಪಷ್ಟವಾಗಿಯೇ ಇದ್ದಿತು. ಅವರ ಭಾಷಣವನ್ನು ಕೇಳುತ್ತಾ ಜನರು ಒಮ್ಮೊಮ್ಮೆ ಕರತಾಡನವನ್ನು ಮಾಡುತ್ತಿದ್ದರಾದರೂ ಅವರು ಮೌನದಿಂದಲೇ ಆಲಿಸದಂ ಹಾಗೆ ಮಾತಾಡುತ್ತಾ, ಅವರ ಕಂಠಕ್ಕೆ ಸಾಕಷ್ಟು ದಣಿವುಂಟಾಗುತ್ತಿದ್ದುದರಿಂದ ಮುಂದಿನ ಅವರ ಕಾರ್ಯಕ್ರಮಗಳನ್ನೆಲ್ಲ ಅಧಿವೇಶನ ಹಜಾರದೊಳಗೇನೇ ನಡೆಸಲಾದುವು, ಹಾಗಿದ್ದರೂ ಜನರು ಆ ಕಟ್ಟಡದ ಹೆಬ್ಬಾಗಿಲು ಮತ್ತಿತರ ತಡೆಗಳನ್ನೆಲ್ಲ ಮುರಿದು ಹಾಕಿ ಹಜಾರದೊಳಕ್ಕೆ ಮುತ್ತಿಗೆಯಿಕ್ಕ ನೆರೆದರು.

1904

ಈ ವರ್ಷದ ಜನವರಿ ಅಂತ್ಯದೊಳಗಾಗಿ ಶ್ರೀಮತಿ ಬೆಸೆಂಟ್ ಇವರು ಬೆಳಿಗ್ಗೆ 6.30 ಘಂಟೆಗೆ ಸ್ಥಳದಿಂದ ಸ್ಥಳಕ್ಕೆ ಹೋಗಿ ಕೆಲವು ಬಾರಿ ದಿನಕ್ಕೆ ಎರಡು ಭಾಷಣಗಳನ್ನು ಕೊಡುತ್ತಾ ದಕ್ಷಿಣ ಮತ್ತು ಮಧ್ಯ ಹಿಂದೂಸ್ಥಾನದ ಪಟ್ಟಣಗಳಲ್ಲೆಲ್ಲ ತಿರುಗಿದರು. ವಿದ್ಯಾರ್ಥಿಗಳೇ ಅವರ ಮುಖ್ಯ ಧ್ಯೇಯವಾಗಿತ್ತು. ಅದರೊಡನೆಯೇ ತತ್ವಜ್ಞಾನ (Theosophy)ದ ದೃಷ್ಟಿಯಲ್ಲಿ ಹಿಂದೂಮತತತ್ವಸಂಬಂಧವನ್ನು ಪ್ರತಿಪಾದಿಸುತ್ತಿದ್ದರು. ಅದರೊಡನೆಯೇ Central Hindu College Magazine - ಎಂಬ ಪತ್ರಿಕೆಯನ್ನೂ ಅಭಿವೃದ್ಧಿಪಡಿಸಿದರು.

ಫೆಬ್ರುವರಿ 17ರಂದು ಬನಾರಸ್ಸಿನಿಂದ ಶ್ರೀಮತಿ ಬೆಸೆಂಟ್ ಇವರು ಬರೆದ ಒಂದು ರಹಸ್ಯವಾಗಿ ತೋರುವ ಪತ್ರವೊಂದರ ಕೆಲವು ಭಾಗವನ್ನು ಮಾತ್ರ ಇಲ್ಲಿ ಕೊಡಲಾಗಿದೆ:

"ನನ್ನ ಪ್ರಿಯ ಮಿತ್ರರೆ, ಲಂಡನ್ನಿನ ಬ್ರಹ್ಮಜ್ಞಾನ ಸಂಘದ
"ಲ್ಲಿ ಮೊಳೆತ ಒಂದು ಅಭಿಪ್ರಾಯದಂತೆ ನನ್ನನ್ನು ಓರ್ವ ಮಹಾಸ
"ತೀತ ಮಹಾ ಪ್ರಿಯಳಾಗಿ ಅನಿಂದ್ಯ ದೇವತೆಯಂತೆ ಮನ್ನಿಸಲ್ಪಡ
"ಬೇಕೆಂಬ ವಿಷಯವು ನಾನು ಅನಿರೀಕ್ಷಿತವಾಗಿ ತಿಳಿಯುವಂತಾಗಿದೆ.
"ನಿಜವಾಗಿಯೂ ಹೇಳುವುದಾದ್ದರೆ ಅಂಥಾ ಅವಿವೇಕದ ವಿಚಾರವ
"ನ್ನು ನಾನು ನಂಬಲಾರೆನು, ಅಂಥ ಅಭಿಪ್ರಾಯವು ಪ್ರಚಾರ
"ವಾದುದಾದರೆ ನಾನು ಅದನ್ನು ನನ್ನ ಶಕ್ತಿಯನ್ನು ಮೀರಿ ಖಂಡಿಸು
"ತ್ತೇನೆ, ಅಂಥ ಒಂದು ನಂಬಿಕೆಯನ್ನು ಕೆಲವರಾದರೂ ಇಟ್ಟು
"ಕೊಂಡರೆ ಅದು ಸಮಾಜಕ್ಕೆ ಹಾನಿಯೇ ಸರಿ. ಬಹು ಜನರು

"ಇದರಂತೆ ವರ್ತಿಸಿದರೆ ಸ್ವತಂತ್ರ ಮನೋಭಾವವನ್ನೇ ನಾಶಪಡಿಸಿದಂತಾಗುತ್ತದೆ---- ಇತರರೆಲ್ಲಾ ಜನರಂತೆ ನಾನು ಹಲವು ಬಾರಿ ತಪ್ಪುಗಳನ್ನು ಮಾಡುತ್ತೇನೆ---- ನನ್ನ ವಿಷಯವಾಗಿ ಬರೆದ ಅತಿ ಕಠಿಣವಾದ ಟೀಕೆಗಳನ್ನು ನಾನು ನನ್ನ ಜೀವಮಾನವಿಡೀ ಓದಿದ್ದೇನೆ---- ಆದುದರಿಂದ ಇಂತಹ ಅಭಿಪ್ರಾಯಗಳು ಮುಂದಿನ ಅಭಿವೃದ್ಧಿಗೆ ಬಾಧಕವಾಗಿವೆ. ಅಂತಹ ತಿಳಿಗೇಡಿತನದ ಅಭಿಮಾನಗಳನ್ನು ಕುರಿತಾಗಿ ನೀವು ತಿಳಿದುಬಂದರೆ ನೀವು ಅದನ್ನು ತಿರಸ್ಕರಿಸುವಿರೆಂದು ಕೋರುತ್ತೇನೆ---- ನಮ್ಮ ಸದಸ್ಯರಾಗುವವರು ಸಂಸ್ಥೆಗೆ ಅವರ ನಿಷ್ಠೆಯನ್ನು ತೋರಬೇಕಲ್ಲದೆ ಅವರ ಅಭಿಪ್ರಾಯಗಳನ್ನು ಮಾತ್ರ ಅಲ್ಲ! ಈಗ ಕರ್ನಲ್ ಆಲ್ಕಾಟ್, ಶ್ರೀ ಸಿನ್ನೆಟ್ಟ್, ಶ್ರೀ ಮೀಡ್ (Mr. Mead) ಮತ್ತು ನಾನು ಇದ್ದೇವೆ, ನಮ್ಮೆಲ್ಲರಿಗೆ ಶಿಷ್ಯ ವರ್ಗದವರು ಬೇಕಾಗಿಲ್ಲ. ನಮಗೆ ಬೇಕಾಗಿರುವುದು ದಕ್ಷ ಶೋಧಕರು ---- ನನಗಾದರೋ ವೈಯಕ್ತಿಕವಾಗಿ ಈ ಬೋಧನೆಗಳ ಮೇಲಿರುವ ಪ್ರೀತಿ ಮತ್ತು ಗೌರವ ಅಗಾಧವಾಗಿದೆ, ನನ್ನ ಜೀವನವನ್ನೇ ಅದಕ್ಕೆ ಅರ್ಪಿಸಿದ್ದೇನೆ. ನನ್ನ ಭ್ರಾತೃ ನೀತಿಯಿಂತೆಂದು ಸಂತೋಷಪಡುವ ಉದ್ದೇಶ ಸಾಧನೆಯನ್ನು ಇದು ಹೊಂದಿಕೊಂಡಿದೆ---- ಈ ತತ್ತ್ವಜ್ಞಾನ ಸಂಸ್ಥೆಯಲ್ಲಿ ಪೋಪ್ ಮಹಾಗುರುಗಳೇನೂ ಇಲ್ಲ. ಇಲ್ಲಿ ಇರುವವರು ಕೇವಲ ಸತ್ಯಾನ್ವೇಷಕರಾದ ವಿದ್ಯಾರ್ಥಿಗಳು ಮಾತ್ರ---"

ಶ್ರೀಮತಿ ಬೆಸೆಂಟ್ ಇವರು ಫೆಬ್ರವರಿ - ಮಾರ್ಚ್ ತಿಂಗಳುಗಳನ್ನು ಬನಾರಸ್ಸಿನಲ್ಲಿ ಕಳೆದು ಏಪ್ರಿಲ್‌ನಲ್ಲಿ ಯೂರೋಪಿಗೆ ತೆರಳಿದರು, ದಾರಿಯಲ್ಲಿ ರೋಮ್, ಫ್ಲಾರೆನ್ಸ್ ಮತ್ತು ಜಿನೀವಾ ಇಲ್ಲಿ ತತ್ತ್ವಜ್ಞಾನ ವಿಚಾರವಾಗಿ ಭಾಷಣವನ್ನು ಮಾಡಿದರು, ಪ್ಯಾರಿಸ್‌ನಲ್ಲಿ ಕೆಲವು ದಿನ ತಂಗಿದರು. ಅವರು ಬಿಡುವಿಲ್ಲದಷ್ಟು ಕಾರ್ಯಕ್ರಮದಲ್ಲಿ ನಿರತರಾಗಿದ್ದರು.

ಅವರ ನಿತ್ಯದ ಕೆಲಸವನ್ನು ಮುಂದುವರಿಸುತ್ತ ಇಂಗ್ಲೆಂಡಿಗೆ ವಾಪಾಸು ಬಂದರು, Theosophy and the New Psychology - ಎಂಬುದಾಗಿ Queen's Hall ನಲ್ಲಿ ಶ್ರೀಮತಿ ಬೆಸೆಂಟ್ ಕೊಡುತ್ತಿದ್ದ ಭಾಷಣಗಳಿಗೆ ತುಂಬಾ ಜನರು ನೆರೆಯುತ್ತಿದ್ದು ಹಲವಾರು ಜನ ಕೂರಲಿಕ್ಕೆ ಸ್ಥಳವಿಲ್ಲದೆ ಹಿಂದಕ್ಕೆ ಹೋಗುತ್ತಿದ್ದರು, ಜೂನ್ ತಿಂಗಳಲ್ಲಿ ಅವರು ವಾರ್ಷಿಕ [illegible] ಅಧಿವೇಶನವನ್ನು ಉದ್ಘಾಟಿಸಿದ್ದಲ್ಲದೆ ಅಂತರ್ರಾಷ್ಟ್ರೀಯ ಕಾಂಗ್ರೆಸ್ಸು ಅದೇ ತಿಂಗಳಲ್ಲಿ ನಡೆದಾಗ ಅದರಲ್ಲಿ ಅವರು ಪ್ರಧಾನ ವ್ಯಕ್ತಿಯಾಗಿದ್ದರು, ಆ ವರ್ಷದಲ್ಲಿ ಅವರು "Is Theosophy Anti-Christian?", "The New Psychology", "The Message of Theosophy to Mankind," ಎಂಬೀ ವಿಷಯಗಳನ್ನು ಕುರಿತಾಗಿ ಭಾಷಣಗಳನ್ನು ಕೊಟ್ಟರು. ಸ್ವೀಡನ್, ನಾರ್ವೆ ಮತ್ತು ಜರ್ಮನಿಯನ್ನು ಸಂದರ್ಶಿಸಿದರು.

ಶ್ರೀಮತಿ ಬೆಸೆಂಟ್ ಇವರು ಹಿಂದೂಸ್ಥಾನಕ್ಕೆ ಹಿಂತಿರುಗುವಾಗ ರೋಮ್ ನಗರದಲ್ಲಿ ಒಂದು ಹೊಸ ಕೇಂದ್ರವನ್ನು ಆ ವರ್ಷ ನವೆಂಬರ್‌ನಲ್ಲಿ ತೆರೆದಳು; ಅಲ್ಲದೆ Vatican ಇದನ್ನು ಸಂದರ್ಶಿಸಲಿಕ್ಕೆ ಅವಕಾಶ ಕೊಡಲಾಗಿತ್ತು. ಆ ವರ್ಷ ಅಕ್ಟೋಬರ್‌ನಲ್ಲಿ ನಡೆದ ವಾರ್ಷಿಕ ಸಮ್ಮೇಳನದಲ್ಲಿ ಶ್ರೀಮತಿ ಬೆಸೆಂಟ್ ಇವರು "Theosophy in Relation to Human Life - ಇದರ ಮೇಲೆ ನಾಲ್ಕು ಭಾಷಣಗಳನ್ನು ಕೊಟ್ಟಳು!

1905.

ಈ ವರ್ಷದ ಮೊದಲ ನಾಲ್ಕೈದು ತಿಂಗಳು ಹಿಂದೂಸ್ಥಾನದಲ್ಲಿ ಪ್ರವಾಸ ತಿರುಗುತ್ತಾ ಶ್ರೀಮತಿ ಬೆಸೆಂಟ್ ಇವರು ತಮ್ಮ ಕಾಲವನ್ನು ಕಳೆದಳು. Unification of India - ಎಂಬ ವಿಚಾರವನ್ನು ಕುರಿತಾಗಿ ಬೊಂಬಾಯಿಯಲ್ಲಿ ಮಾತಾಡುತ್ತಾ ಹೀಗೆಂದಳು:-

"ಒಂದೇ ಒಂದು ಒಕ್ಕಟ್ಟಾದ ಒಂದೇ ರಾಜ್ಯವಾಗಿ ಹಿಂ
"ದೂಸ್ಥಾನವು ಎಂದೆಂದೂ ಇಲ್ಲದೇ ಇದ್ದುದೇ ಅದರ ಗಂಡಾಂತರ
"ಗಳಿಗೆ ಕಾರಣವಾಗಿದೆ. ಆಗಿಂದಾಗ್ಯೆ ತಾತ್ಕಾಲಿಕವಾಗಿ ಒಂದೇ
"ರಾಜ್ಯವಾಗಿ ಅಲ್ಲಲ್ಲಿ ಇದ್ದಿತ್ತಾದರೂ ಹಿಮಾಲಯದಿಂದ ಕನ್ಯಾಕು
"ಮಾರಿಯವರೆಗೆ ಮತ್ತು ಬಂಗಾಳದಿಂದ ಕಾಠ್ಯಾವಾಡದ ವರೆಗೆ
"ಒಂದೇ ಒಂದು ಹೊಂದಿದ ಸಾಮ್ರಾಜ್ಯ ಎಂದೆಂದೂ ಇದ್ದಿಲ್ಲ--
"--ಆದುದರಿಂದ ಈ ರಾಜ್ಯವನ್ನು ಒಂದು ಸ್ವಾತಂತ್ರ್ಯದಿಂದ ಮ
"ತ್ತು ಸ್ವಾಭಿಮಾನದಿಂದ ಕೂಡಿದ ಜನಾಂಗವಾಗಿ ಮಾಡಬೇಕಾದ್ದು
"ಭಾರತೀಯರ ಕರ್ತವ್ಯವಾಗಬೇಕಾಗಿದೆ."

ಸಾರ್ವಜನಿಕ ಜೀವನ ಚಟುವಟಿಕೆಗಳಲ್ಲಿ ಎಂದೂ ಭಾಗವಹಿಸದೇ ಇದ್ದ ಹೆಂಗಸರನ್ನು ಆನಿ ಬೆಸೆಂಟ್ ಇವರು ತಮ್ಮ ಭಾಷಣಗಳಿಂದ ಹುರಿದುಂಬಿಸಿ ಮತ್ತು ತತ್ವಜ್ಞಾನ (Theosophy) ಸಂಬಂಧವಾಗಿ ವಿವಿಧ ಕೇಂದ್ರಗಳಲ್ಲಿ ಮಾತಾಡಿ ಅವರನ್ನು ಹೊರತಂದಳು. ಮೇ ತಿಂಗಳು 13ನೇ ದಿನ ಅವಳು ಯುರೋಪಿಗೆ ಪ್ರಯಾಣ ಬೆಳೆಸಿ ಮಿಲಾನ್, ಬುಡಾಪೆಸ್ಟ್, ಸ್ಟ್ರಾಸ್‌ಬರ್ಗ್ ಮತ್ತು ನ್ಯಾನ್ಸಿಯಲ್ಲಿ ತಂಗಿದ್ದು ತನ್ನ ಕಾರ್ಯಕ್ರಮದಲ್ಲಿ ನಿರತಳಾದಳು. ಜೂನ್ ತಿಂಗಳಲ್ಲಿ ಪ್ಯಾರಿಸ್‌ನಲ್ಲಿ ಕೆಲವು ಭಾಷಣಗಳು ಮತ್ತು ತನ್ನ ಕೇಂದ್ರದ ವ್ಯವಸ್ಥೆಗಳ ಬಗ್ಗೆ ನೋಡಿದುದು ಅಲ್ಲದೆ ಅಂತರ್‌ರಾಷ್ಟ್ರೀಯ 'ಉಭಯ ಲಿಂಗದವರ (Co-freemasonry) ಸಂಸ್ಥೆಯ Supreme Council ಸಭೆಯಲ್ಲೂ ಭಾಗವಹಿಸಿದಳು.

ಯುರೋಪ್ ಖಂಡದ 'Theosophical Federation - ಇದರ ಸಮ್ಮೇಳನವು ಲಂಡನ್‌ನಲ್ಲಿ ನಡೆಯಿತು. ಅಲ್ಲಿ ಮೊದಲ ಭಾಷಣವನ್ನು The Work of Theosophy in the World ಎಂಬ ವಿಷಯದ ಮೇಲೆ Queen's Hall ನಲ್ಲಿ ಶ್ರೀಮತಿ ಬೆಸೆಂಟ್ ಇವರು ಕೊಟ್ಟಳು. ಸಭಾಂಗಣವೆಲ್ಲಾ ತುಂಬಿ

ಸ್ಥಿತರು, ಹಿಂದೂ ಕೈಗಾರಿಕಾ ಪ್ರದರ್ಶನವನ್ನು ಉದ್ಘಾಟಿಸುತ್ತಾ ಅವರು ಈ ರೀತಿಯಾಗಿ ಹೇಳಿದರು:—

"ಮಾನವ ಗರ್ಭಸ್ಥನಾಗಿ ಪಡೆಯುವ, ಹೊರಗಿನಿಂದ ಪ್ರವೇಶಿಸುವ ಮತ್ತು
" ಹೀನವಾಗಿ ಕಾಣಿಸುವ ಎಲ್ಲಾ ಶಕ್ತಿಗಳು ತತ್ತ್ವಜ್ಞಾನವನ್ನು ಬಿಟ್ಟು ಬೇರೆ
" ಇಲ್ಲ. ಆದುದರಿಂದ ತತ್ತ್ವಜ್ಞಾನ (Theosophy) ಇದರ ತತ್ತ್ವಗಳು ಪ್ರ
" ಚಾರವಾದರೆ ನಮ್ಮ ಆತ್ಮವಿಕಾಸವನ್ನು ಬೆಳೆಸುತ್ತಿರುವ ಈ ತ್ರಿಶ
" ಕ್ತಿಗಳ ಪರಸ್ಪರ ಸಂಪರ್ಕ ಕೌಶಲ್ಯವನ್ನೂ, ಎಲ್ಲಾ ಧ್ಯೇಯಗಳು
" ಸುಂದರವಾಗಿ ಪ್ರತಿಪಾದನೆಯಾಗುವುದನ್ನೂ ಈ ಭಾರತ ರಾಷ್ಟ್ರದ
" ಜೀವಂತ ಮಾನವನಲ್ಲಿ ದೈವಬಲವನ್ನು ಇರಿಸುವುದರಿಂದ ಬುದ
" ನ್ನು ತಿಳಿಯಲು ಶಕ್ತರಾಗುತ್ತೇವೆ."

ಸೆಪ್ಟೆಂಬರ್ ಕಡೇ ವಾರದಲ್ಲಿ ಶ್ರೀಮತಿ ಬೆಸೆಂಟ್ ಬನಾರಸ್ಗೆ ಹಿಂದಿರುಗಿ ತಲುಪಿದರು, ಅವರು ಸ್ಥಾಪಿಸಿದ Central Hindu College ಇದರ ಏಳಿಗೆಗೆ ತನ್ನ ಸೇವೆಯನ್ನು ವಿನಿಯೋಗಿಸಿದರು, ಉತ್ತರ ಹಿಂದೂಸ್ಥಾನದಲ್ಲೆಲ್ಲ ಸಂಚರಿಸುತ್ತಾ ಹಿಂದೂಮತದ ಪುನರುದ್ಧಾರದ ಬಗ್ಗೆ ಮಾತಾಡಿದರು, ಬಾಬು ಹರೀಂದ್ರನಾಥ ದತ್ತ ಇವನಿಗೆ ಹೀಗೊಂದು ಪತ್ರವನ್ನು ಬರೆದರು:—

"ರಾಷ್ಟ್ರೀಯ ಭಾವನೆಯನ್ನು ಜನತೆಯಲ್ಲಿ ಮೊಳಗಿಸು
"ವುದು, ಮತ್ತು ಸಾಹಿತ್ಯ ಭಾವನೆ ಮತ್ತು ಸಂಸ್ಕೃತಿಯಿಂದ ಬೇ
" ರ್ಪಟ್ಟಿ ಭಾರತೀಯ ಧ್ಯೇಯ ಉದ್ದೇಶಗಳಿಂದ ತುಂಬಿಕೊಳಿಸ
" ಲ್ಪಟ್ಟ ವಿದ್ಯಾಕ್ರಮವನ್ನು ಸೃಷ್ಟಿಸುವುದೇ ಹಿಂದೂಸ್ಥಾನಕ್ಕೆ ಅ
" ಗತ್ಯ ಬೇಕಾದುದಾಗಿದೆ."

ಆನಿ ಬೆಸೆಂಟ್ ಇವರು ತತ್ತ್ವಜ್ಞಾನ (Theosophy) ಸಂಸ್ಥೆಯ ವಾರ್ಷಿಕ ಅಧಿವೇಶನದ ಸಂಬಂಧವಾಗಿ ಡಿಸೆಂಬರ್‌ನಲ್ಲಿ ಅಡೆಯಾರ್‌ಗೆ ಬಂದರು ಅಲ್ಲಿ ಭಗವದ್ಗೀತೆಯ ವಿಷಯವಾಗಿ ನಾಲ್ಕಾರು ಭಾಷಣಗಳನ್ನು ಕೊಟ್ಟರು,

1906

ಈ ಇಡೀ ವರ್ಷ ಶ್ರೀಮತಿ ಬೆಸೆಂಟ್ ಇವರು ಹಿಂದೂಸ್ಥಾನದಲ್ಲಿಯೇ ಕಳೆದರು, ಅವರು ಹೈದರಾಬಾದ್ ಮೂಲಕ ಅಡೆಯಾರ್‌ನಿಂದ ಕಲ್ಕತ್ತಾ ಮತ್ತು ಬನಾರಸ್‌ಗೆ ಹೋದರು,

ವೇಲ್ಸ್‌ನ ರಾಜಕುಮಾರ ಮತ್ತು ರಾಜಕುಮಾರಿ (ಅನಂತರ (ಐದನೇ ಜಾರ್ಜ್ ಮತ್ತು ರಾಣಿ ಮೇರಿ) ಇವರು ಫೆಬ್ರುವರಿ ೨೦ರಂದು Central Hindu College ಇದನ್ನು ಸಂದರ್ಶಿಸಿದರು, ಮರುದಿನ ಬೆಳಿಗ್ಗೆ ರಾಜಕುಮಾರಿಯು ಶ್ರೀಮತಿ ಬೆಸೆಂಟ್ ಇವರನ್ನು ಕರೆಸಿ ಅವರ ಖಾಸಗೀ ಸ್ವಹಸ್ತಾಕ್ಷರದ ಪುಸ್ತಕದಲ್ಲಿ ಬರೆಯುವ ಇಚ್ಛೆಯನ್ನು ಪ್ರಕಟಿಸಿದರು. ಆನಿ ಬೆಸೆಂಟ್ ಇವರು ಕಾಲೇಜು ಹಜಾರದಲ್ಲಿ ರಾಜನ ಚಿತ್ರವೊಂದನ್ನು

ಇರುವ ಆಕ್ರಿಯನ್ನು ವ್ಯಕ್ತಪಡಿಸಿದಳು, ಅನಂತರ ನಡೆದ ಸರಕಾರಿ ಫಲಾಹಾರ ಕೂಟಕ್ಕೆ ಆನಿ ಮತ್ತು ಅವಳ ಸಂಗಡಿಗರನ್ನು ಆಹ್ವಾನಿಸಲಾಯಿತು. ಜೋಸೆಫೈನ್ ರ್ಯಾನ್ಸಮ್ ಇವರಿಂದ ಸಂಗ್ರಹವಾದ 'Short History of Theosophical Society' - ಇದರಲ್ಲಿ ಹೀಗೆ ಹೇಳಿದೆ:-

"ಈ ವರ್ಷವೆಲ್ಲ ಶ್ರೀಮತಿ ಬೆಸೆಂಟ್ ಇವಳು ಭಾರತದ
"ಉದ್ದಗಲಕ್ಕೂ ಓಡಾಡುತ್ತಾ ತನ್ನ ವಿವಿಧ ಚಟುವಟಿಕೆಗಳ ಉದ್ದೇಶ
"ಗಳನ್ನು ಕುರಿತು ಜನಕ್ಕೆ ವಿವರಿಸುತ್ತಿದ್ದಳು. ಅವಳು ಸ್ವಾತಂ
"ತ್ರ್ಯಕ್ಕಾಗಿ ಕೊಟ್ಟ ಕರೆಯು ದೇಶದಲ್ಲೆಲ್ಲ ಪ್ರತಿಧ್ವನಿಸಿತು. ಹಿಂ
"ದೂ ವಿಶ್ವವಿದ್ಯಾಲಯಕ್ಕಾಗಿ ಅವಳು ಬಿಡುವಿಲ್ಲದೆ ಶ್ರಮಿಸಿದಳು,
"ಅಲ್ಲದೆ ಅವಳು ಹೋದೆಡೆಯಲ್ಲೆಲ್ಲ ಆ ಸಂಸ್ಥೆಯ ಉದ್ಧಾರಕ್ಕಾಗಿ
"ಹಣವನ್ನು ಸಂಗ್ರಹಿಸಿದಳು. ವಿದ್ಯೆ ಮತ್ತು ಸಾಮಾಜಿಕ ಬೆಳ
"ವಣಿಗೆಗೆ ಪಡೆಯುವುದರಲ್ಲಿಯೂ ಅವಳ ಸಮಯವೆಲ್ಲಾ
"ವಿನಿಯೋಗವಾಯಿತು. ತತ್ತ್ವಜ್ಞಾನ (Theosophy) ಇದರ ಪ್ರಚಾ
"ರದ ನಿಮಿತ್ತ ಸ್ಫೂರ್ತಿದಾಯಕವಾಗಿ ಮಾತಾಡುತ್ತಾ, ಅವಳು ಅ
"ದರ ವಿವಿಧ ರೂಪರೇಷೆಗಳನ್ನು ಸೌಂದರ್ಯಭಾವವನ್ನೂ ಯೋಗ
"ಸೂತ್ರಗಳ ಹಾಗೆ ವಿಶ್ವಮಾನ್ಯವಾಗಿರುವುದೆಂಬುದನ್ನು ಶಾಸ್ತ್ರೀ
"ಯವಾಗಿ ವ್ಯಾಖ್ಯಾನಿಸುತ್ತಿದ್ದಳು.

"ಕರ್ನಲ್ ಆಲ್ಕಾಟ್ ಇವರ ಅನಾರೋಗ್ಯದ ಕಾರಣದಿಂದ
"ಮುಂದೆ ಅಧ್ಯಕ್ಷನಾಗಿ ಯಾರಾಗಿ ಬರುವರೆಂಬ ವಿಷಯವು ಶ್ರೀಮ
"ತಿ ಬೆಸೆಂಟ್ ಇವಳ ಗಮನವನ್ನು ಸೆಳೆಯಿತು. ಅದಕ್ಕೆ ಶ್ರೀ
"ಬರ್ಟ್ರಮ್ ಕೀಟ್ಲೆ (Bertram Keightley) ಇವರಿಗಿಂತ ಯೋ
"ಗ್ಯನು ಬೇರಾರೂ ಇಲ್ಲವೆಂದು ತೋರಿತು; ಏಕೆಂದರೆ ಶ್ರೀ
"ಸಿನ್ನೆಟ್ ಇವರಾಗಲೀ ಶ್ರೀ ಮೀಡ್ ಇವರಾಗಲೀ ಆ ಸ್ಥಾನವನ್ನು
"ವಹಿಸಲು ಒಪ್ಪಲಾರರೆಂದು ಅವಳಿಗೆ ಖಂಡಿತವಾಗಿಯೂ ತಿಳಿ
"ದಿತ್ತು. ಅವಳಾದರೋ ಭಾರತೀಯ ಜನರ, ವಿದ್ಯೆಯ, ಮತ್ತು
"ಹಿಂದೂ ವಿಶ್ವವಿದ್ಯಾಲಯದ ಬಗ್ಗೆ ತಾನು ಬಿಡುವಿಲ್ಲದೆ ಕೆಲ
"ಸ ಮಾಡುತ್ತಿರುವುದರಿಂದ ಈ ದೊಡ್ಡ ಜವಾಬ್ದಾರಿಕೆಯನ್ನು ತನ
"ಗೆ ಹೊರಲು ಅಸಾಧ್ಯವೆಂದೂ ಅವಳಿಗೆ ತಿಳಿದಿತ್ತು.

"ಆ ವರ್ಷದ ವಾರ್ಷಿಕ ಅಧಿವೇಶನಕ್ಕೆ ಸಿದ್ಧತೆಗಳಾ
"ಗುತ್ತಿದ್ದಾಗ ಅಧ್ಯಕ್ಷನು (ಕರ್ನಲ್ ಹೆನ್ರಿ ಆಲ್ಕಾಟ್) ಅದರಲ್ಲಿ ಉ
"ತ್ಸಾಹದಿಂದ ಭಾಗವಹಿಸಿದನು. 'The Wisdom of the Upa-
"nishads' - ಇದರ ಮೇಲೆ ಶ್ರೀಮತಿ ಬೆಸೆಂಟ್ ಇವಳು ತನ್ನ
"ಧಾರಾವಾಹಿ ಭಾಷಣಗಳನ್ನು ಕೊಟ್ಟಳು. ಡಿಸೆಂಬರ್ ೨೮ರಂದು
"ಸಮ್ಮೇಳನವನ್ನು ಉದ್ಘಾಟಿಸುವಷ್ಟು ಶಕ್ತನಾಗಿ ಅಧ್ಯಕ್ಷನಿ
"ದ್ದನು. - - - - ಆದರೆ ಶ್ರೀಮತಿ ಬೆಸೆಂಟ್ ಇವಳು ಅವನ
"ಹೆಸರಾಗಿ ಅಧ್ಯಕ್ಷ ಭಾಷಣವನ್ನು ಓದಿದಳು. ಜನವರಿ ೩ನೇ ತಾ

" ಕೊನೆಯ ದಿನ ಸಮ್ಮೇಳನವನ್ನು ಮುಕ್ತಾಯಗೊಳಿಸುತ್ತಿರಲು ಅವನನ್ನು
" ಹೊತ್ತು ತರಲಾಯಿತು; ಅಲ್ಲದೆ ಅವನು 1875ರಲ್ಲಿ ಮಾಡಿದ ಸಂಸ್ಥೆ
" ಯ ಉದ್ಘಾಟನಾ ಭಾಷಣವನ್ನು ಸ್ವಲ್ಪ ಓದಿದನಲ್ಲದೆ, ತಾತ್ಕಾಲಿಕವಾ
" ಗಿ ಥಿಯಾಸೊಫಿಕಲ್ ಸಂಸ್ಥೆಯ ಅಧ್ಯಕ್ಷೆಯಾಗಿರುವ ಅಧಿಕಾರವನ್ನು
" ಅವನು ಶ್ರೀಮತಿ ಬೆಸೆಂಟ್ ಇವಳಿಗೆ ಒಪ್ಪಿಸಿದನು."

1907

ಈ ವರ್ಷ ಫೆಬ್ರುವರಿ 17ನೇ ದಿನ ಬೆಳಿಗ್ಗೆ 7.27ಕ್ಕೆ ಹೆನ್ರಿ ಆಲ್ಕಾಟ್ ಇವನು ಮೃತನಾದನು. ಅವನ ಅಸ್ವಸ್ಥತೆಯ ಕಡೇ ದಿನಗಳಲ್ಲಿ ಅವನಿಗೆ ಗುರುಗಳು ದರ್ಶನವಾಗಿ ಶ್ರೀಮತಿ ಆನಿ ಬೆಸೆಂಟ್ ಇವಳನ್ನು ಅವನ ಉತ್ತರಾಧಿಕಾರಿಯಾಗಿ ಮಾಡು ವಂತೆಯೂ ಸೂಚನೆಯನ್ನೀಯಲಾಯಿತೆಂದೂ ತಿಳಿದು ಬಂತು. ಮುಂದಿನ ಜೂನ್ ತಿಂಗಳಲ್ಲಿ ಬಹು ದೊಡ್ಡ ಸಂಖ್ಯೆಯ ಮತದಾನದಿಂದ ಆನಿ ಬೆಸೆಂಟ್ ಇವಳು ಅಧ್ಯಕ್ಷೆಯಾಗಿ ಆರಿಸಲ್ಪಟ್ಟಳು. ಡಾ. ಬೆಸೆಂಟ್ ಅವಳು ಅಧ್ಯಕ್ಷೆಯಾಗಿ ಮಾಡಿದ ಮೊದಲ ಭಾಷಣದಲ್ಲಿ ಈ ರೀತಿ ಹೇಳಿದ್ದಳು:—

"ಈ ಸಂಸ್ಥೆಯ (Theosophical Society) ಸ್ಥಾಪಕ
" ಹಾಗೂ ಪ್ರಥಮ ಅಧ್ಯಕ್ಷನು ತನ್ನ ಗುರುವಿನ ಆಜ್ಞೆಯಂತೆ ನನ್ನ
" ನ್ನು ಈ ದೊಡ್ಡ ಸ್ಥಾನಕ್ಕೆ ಅವನ ಉತ್ತರಾಧಿಕಾರಿಯಾಗಿ ಆರಿಸಿ
" ನೇಮಿಸಿದುದನ್ನು ನೀವು ಬಹುಮತದಿಂದ ಒಪ್ಪಿದ್ದೀರಿ----
" ಯಾವ ಸ್ಥಾನಕ್ಕೆ ನನ್ನನ್ನು ಆರಿಸಿದರೋ ಆ ಕಾರ್ಯಭಾರವ
" ನ್ನು ಯೋಗ್ಯರೀತಿಯಲ್ಲಿ ನಡೆಸಲು ಮತ್ತು ಅದರಲ್ಲಿ ಪಾಲು
" ಗಾರರಾಗಲು ನೀವು ಮುಂದೆ ಬಂದು ಸಹಕರಿಸಬೇಕಾಗಿ
" ನಾನು ನಿಮ್ಮನ್ನು ಪ್ರಾರ್ಥಿಸುತ್ತೇನೆ----ನಿಮ್ಮ ಬೆಂಬಲ
" ಮತ್ತು ನಿಮ್ಮ ಒಡಗೂಡಿ ದುಡಿದರೆ ಮಾತ್ರ ಈ ಅಧ್ಯಕ್ಷ ಪ
" ದವಿಯು ಸಾರ್ಥಕವಾಗುತ್ತದೆ, ಆದುದರಿಂದ ಮುಂದಕ್ಕೆ
" ನನ್ನ ಉತ್ತರಾಧಿಕಾರಿಗಳಿಗೆ ಇದನ್ನು ಇನ್ನಷ್ಟು ಸಂಪನ್ನತೆ
" ಯಿಂದ ಕೂಡಿದ ಒಂದು ಸಂಸ್ಥೆಯಾಗಿ ಮಾಡಿ ಒಪ್ಪಿಸಲು
" ಸಹಕರಿಸಿರಿ. ಯಾವ ಗುರುಗಳು ನನ್ನ ಕೈಗೆ ಇದನ್ನಿತ್ತು ಆಶೀ
" ರ್ವದಿಸಿದರೋ ಅವರೇ ದಿಗ್ದರ್ಶಕರಾಗಿ ಇದನ್ನು ಮುನ್ನಡೆಸಲಿ."

ಡಿಸೆಂಬರ್ 1907ರ "The Theosophist" ಪತ್ರಿಕೆಯಲ್ಲಿ ಆನಿಯು ಹೀಗೆ ಬರೆದಿದ್ದಳು:—

"ಇಂಗ್ಲೆಂಡಿನ ನಾದ ಗದ್ದಲಗಳಿಂದ ತಪ್ಪಿಸಿಕೊಂಡು ಮತ್ತು ಅಮೇರಿಕಾದ ಸಡಗರದ ಜೀವನದೊಡನೆ ಬೆರೆಯುವ ಮುಂಚೆ ನಾನು ಅಗತ್ಯವಾದ ಕೆಲವು ಬರವಣಿಗೆಗಳಲ್ಲಿ ಮಗ್ನಳಾಗಲು ಸ್ಯಾಕ್ಸನಿಯ ಕಾಡುಗಳಲ್ಲಿ ನೆಲೆಗೊಂಡು ಇದನ್ನು ಈಗ ಜರ್ಮನಿಯಿಂದ ಬರೆಯುತ್ತಿದ್ದೇನೆ----ತನ್ನ

ಜ್ಞಾನ ಸಂಸ್ಥೆಯು ಒಳಗಿನ ಮತ್ತು ಹೊರಗಿನ ಹಲವು ಕ್ಷೇತ್ರಗಳ ಬಗ್ಗೆ ಸಾಧಿಸಿರುವ ಕಾರ್ಯಕ್ರಮಗಳನ್ನು ಕುರಿತಾಗಿಯೂ ಹಲವು ಲೇಖನಗಳನ್ನು ಬರೆಯಬೇಕಾಗಿದೆ.

"ಪ್ರಾಕ್ಸನಿಯು ಕಾಲಗಳಲ್ಲಿ ರಾಜಾಯತನಿಕ ಚಳುವಳಿಗಳು ಹೇ
" ಗೆ ಆಗುತ್ತಿದ್ದ ಬೆಂಬಲದ ಬಗ್ಗೆ ದೀರ್ಘ ವಿಶ್ಲೇಷಣೆಯನ್ನು ಕೈಕೊ
" ಳ್ಳಲಾಯಿತು ---- ಅಮೇರಿಕಾದ ತನ್ನ ಜ್ಞಾನ ಸಂಸ್ಥೆಯ ಅಧಿ
" ವೇಶನದ ವರದಿಯು ಟಿಪ್ಪಣಿಯಲ್ಲಿ ಎತ್ತಿ ಕಾಣಿಸಲಾಯಿತು,
" ಕೊನೆ ತನಕ ಚರ್ಚಿಸಿದವಾಗಿತ್ತು ---- ಇಂಗ್ಲೆಂಡಿನಲ್ಲಿ ಇದ್ದ ಕಡೆ
" ವಾರದಲ್ಲಿ ನಾನು ತನಕ ಕೆಲಸದಲ್ಲಿ ಮಗ್ನಳಾಗಿದ್ದೆನು ---- ಅದ
" ರನಂತರ ಹಾಲೆಂಡು ---- ಪ್ಯಾರಿಸ್ ---- ಸ್ವೀಡನ್ ---- ಸ್ಟಾಕ್
" ಹೋಮ್, ಸ್ವೀಡನ್ನಿನ ರಾಜ ಓಸ್ಕರ್ ಇವನ ಭೇಟಿ ---- ಇತ್ಯಾದಿ,
" ಸ್ಕಾಂಡಿನೇವಿಯಾದಿಂದ ದಕ್ಷಿಣಾಭಿಮುಖಿಯಾಗಿ ತಿರುಗಿ ಇಟಲಿಗೆ ಬಂ
" ದೆನು, ಇಲ್ಲಿಯ ಭಾಷಣಗಳನ್ನು ಕೊಟ್ಟು ಶ್ರೀಮತಿ ರಸ್ಸೆಲ್ ಮತ್ತು
" ಕುಮಾರಿ ಕಿಂಗ್ ಇವರೊಡಗೂಡಿ ಸಿಂಹಳ ದ್ವೀಪವಾದ ಸಿಲೋ
" ನ್‌ಗೆ (ಶ್ರೀ ಲಂಕಾ) ಹಡಗು ಹತ್ತಿದೆವು ---- ನವಂಬರ್ ೨೩ರಲ್ಲಿ
" ಕೊಲಂಬೋಕ್ಕೆ ತಲುಪಿದಾಗ 1893ರಲ್ಲಿ ನನ್ನನ್ನು ಮತ್ತು
" ಕೌಂಟೆಸ್ ಇವಳನ್ನು ಕರ್ನಲ್ ಓಲ್ಕಾಟ್ ಇವರು ಸ್ವಾಗತಿ
" ಸಿದ ಆ ದಿನಗಳನ್ನು ನೆನೆಯುವಂತೆ ಮಾಡಿತು, ನಾವು
" ಮೊದಲು Buddhist-Theosophical Society ಇದಕ್ಕೆ
" ಹೋದಾಗ ನಮಗೆ ಪ್ರೀತಿಯ ಸ್ವಾಗತವಿತ್ತರು, (ಅದರನಂತ
" ರ ಹಲವೆಡೆ ಭಾಷಣಗಳನ್ನು ಕೊಡಲಾಯಿತು) ----.

"ನವಂಬರ್ ೩೦ಕ್ಕೆ ಸ್ವಗೃಹದಲ್ಲಿ; ಹಿಂದೂಸ್ಥಾನದಲ್ಲಿ!
" ಅದೆಂಥಾ ಸ್ವಾಗತ! ಬಿನ್ನವತ್ತಳೆಗಳು, ಹೂಗೊಂಚಲುಗಳು,
" ಹಾರಗಳು, - ನಮಗೆ ದಾರಿಯಲ್ಲಿ, ಎಲ್ಲ ರೈಲು ನಿಲ್ದಾಣಗಳಲ್ಲೂ
" ಕೊಡಲ್ಪಟ್ಟವು, ಅದಕ್ಕಿಂತ ಮುಂದೆ ಈ ರೈಲು ದಾರಿಯಲ್ಲಿ
" ನಮ್ಮ ಸಂಸ್ಥೆಯ ಶಾಖೆಗಳು ಎಷ್ಟು ಇದ್ದುವೆಂದು ನನಗೆ ತಿ
" ಳಿದಿರಲಿಲ್ಲ, 'ಎರಡು ತಾಸುಗಳನಂತರ ಅಡೆಯಾರಿಗೆ ತ
" ಲುಪಿದೆವು, ಜನರಿಂದ ಕಿಕ್ಕಿರಿದಿದ್ದ ಸಭೆಯಲ್ಲಿ ಎರಡು ಬಿನ್ನ
" ವತ್ತಳೆಗಳು ಕೊಡಲ್ಪಟ್ಟವು, ಸಭೆಯನಂತರ ನಾವು
" ಇತರ ಮನೆಗಳು, ಮುದ್ರಣಾಲಯವನ್ನು ನೋಡುತ್ತಾ ತಿರು
" ಗಾಡಿದೆವು; ಎಲ್ಲವೂ ಸುವ್ಯವಸ್ಥಿತ ಕ್ರಮದಲ್ಲಿದ್ದವು,"

1908

(1908 ರಿಂದ 1929ರ ವರೆಗಿನ ಇಲ್ಲಿ ಕೊಟ್ಟ ಜೀವನ ಚರಿತ್ರೆಯು ಸೂಕ್ಷ್ಮ ವರದಿಯನ್ನು, The Theosophist ಮತ್ತು The Adyar Bulletin ಈ ಪತ್ರಿಕೆಗಳಿಂದಲೂ ಇನ್ನಿತರ ಕೆಲವು ಕಿರು ಹೊತ್ತಿಗೆಗಳಿಂದಲೂ ಎತ್ತಿ ಕೊಟ್ಟಿದಾಗಿದೆ.)

— x —

"The Adyar Bulletin ಎಂಬ ಮಾಸಿಕ ಸಂದೇಶಪತ್ರ
" ವು ಈ ಪ್ರಧಾನ ಶಾಖೆಯಿಂದ (ಅಡಿಯಾರ್-ಮದ್ರಾಸು) ಹೊರಡುವ
" ಮತ್ತು ಸಂದೇಶಗಳನ್ನು ಪರಸ್ಪರ ಸಹಕಾರದ ರೀತಿಯಿಂದ ಕಳಿಸುತ್ತಿರುವ
" ಶಿಷ್ಯರ ಪತ್ರಿಕೆಯಾಗಿದೆ. ತೋರುವ ಪತ್ರಿಕೆಯು ಹಚ್ಚಿದ ಸಂದೇಶ
" ಕ್ಕೊಳಗಿ ವಿಚಾರಭಾವವನ್ನು ಮೊಳೆಸುವ ಸಾಧನವಾಗಿ ಅದು ಇರುವು
" ದರಿಂದ ನಮ್ಮ ಸಂಬಂಧಿಯಾಗಿದೆ, ವಿವಿಧ ದೇಶಗಳಿಂದ ವಾರ್ತೆಗಳು,
" ಜಗತ್ತಿನ ಸದ್ಭಾವ್ಯ ಇರುವ ಥಿಯೊಸೊಫಿ ತತ್ತ್ವಜ್ಞರಿಗೆ ಉಪಯುಕ್ತ ಆದ್ದರಿಂ
" ದ ಸಾಧನವಾಗಿರುವುದರಿಂದ ನಮ್ಮ ಪತ್ರಿಕೆಯಾಗಿದೆ ---- ನಮ್ಮ ಪ್ರ
" ಭಾಷಣಗಳು ನಮ್ಮ ಗುರುಗಳ ನಿಷ್ಠೆಯ ಸೇವಕರಿಗೆ ಕಳಿಸಲಾಗಿ
" ಮತ್ತು ನಿಲಯಾಚೆ ದೂರದಿಂದ ಕಳುಹಿಸಲ್ಪಡುತ್ತಿರುವುದರಿಂದ ನಾವು ಕೋರುವೆವು;

ಪ್ರವಾಸ ಕ್ರಮದ ಸೂಚನೆ: — ಮೊದಲ ತಿಂಗಳು ಮಹಾಮಾಗಿಯ ಕಾರ್ಯಕ್ರಮ ಕೊನೆಗೊಂಡಿತು. ಫೆಬ್ರುವರಿ ೨ನೇ ದಿನ ನಾನು ನಮ್ಮ ಕೇಂದ್ರ ಶಾಖೆಗೆ ತಲುಪಿದೆನು, ಅಲ್ಲಿ ತುಂಬಾ ಕೆಲಸ ನನಗಾಗಿ ಕಾದಿದ್ದಿತು. ಬಾಬು ಭಗವಾನ್ ದಾಸ್ ಇವರು ನನ್ನ ಗುರುತು ಕಾರ್ಯದರ್ಶಿಯಾಗಿದ್ದರು. ನಾವಿಬ್ಬರೂ ಬನಾರಸ್‌ನಿಂದ ಹೊರಟು ಕಲ್ಕತ್ತೆಯನ್ನು ತಲುಪಿದೆವು, ಅಲ್ಲಿ ರಾಜಭವನದಲ್ಲಿ ಊಟಕ್ಕೆಂದು ಹೋಗುವ ಮೊದಲು ಭಾರತದ ವೈಸ್ರಾಯರೊಡನೆ ಕಾಶೀ ಹಿಂದೂ ವಿಶ್ವವಿದ್ಯಾಲಯವನ್ನು ಕುರಿತಾಗಿ ಮಾತಾಡುವ ಸಂದರ್ಭವನ್ನು ತಿಳಿದು ಕೊಂಡೆನು ---- ನಮ್ಮ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ನಾನು ಅವರ ಮುಂದಿಟ್ಟ ಕಾರಣಗಳನ್ನೆಲ್ಲ ಅವರು ಕೇಳಿದನಂತರ ಲಾರ್ಡ್ ಮಿಂಟೋ ಇವರು ತಮ್ಮ ಕೈಯಲ್ಲಿ ಸಾಧ್ಯವಾದ ಸಹಕಾರವನ್ನೀಯುವೆನೆಂದು ಭರವಸೆಯಿತ್ತರು. ಅವರ ಔದಾರ್ಯ ಹಾಗೂ ದಯಾಗುಣದಿಂದ ಈ ದೇಶದಲ್ಲಿ ರಾಷ್ಟ್ರೀಯ ವಿದ್ಯಾಲಯವೊಂದು ನ್ಯಾಯವಾಗಿ ಸ್ಥಾಪನೆಯಾಗಬಹುದೆಂದು ನಿರೀಕ್ಷಿಸುತ್ತಿದ್ದೇವೆ---.

ಕಲ್ಕತ್ತಾದಿಂದ ನಾವು ವಿಶಾಖಪಟ್ಟಣಕ್ಕೆ ಹೋದೆವು, ಅಲ್ಲಿ ಹಿಂದು ಯೋಜನೆಯನ್ನು ಜಾರಿಗೆ ತರುವ ಬಗ್ಗೆ ಬಹುಕಾಲದಿಂದ ಆಲೋಚಿಸುತ್ತಾ ಇದ್ದೆನು, ತತ್ತ್ವಜ್ಞಾನಿಗಳು (Theosophists) ಹಿಂದೂ ಆಶ್ರಮವನ್ನು ಸ್ಥಾಪಿಸಿ ತೋರುವ ಜನವನ್ನು ಆಧ್ಯಾತ್ಮಿಕವಾಗಿ, ಮಾನಸಿಕವಾಗಿ, ನೈತಿಕವಾಗಿ ಮತ್ತು ಶಾರೀರಿಕವಾಗಿ ಮುನ್ನಡೆಸಲು ಹಿಂದು ತಂಡವನ್ನೇ ತರಬೇತುಗೊಳಿಸುವುದು ನನ್ನ ಅಭಿಪ್ರಾಯವಾಗಿತ್ತು----.

ಫೆಬ್ರುವರಿ ತಿಂಗಳು ತತ್ತ್ವಜ್ಞಾನ ಸಂಘ (Theosophical Society) ಇದರ ಚರಿತ್ರೆಯಲ್ಲಿ ಸ್ಮರಣೀಯವಾದುದು, ನಾನು (ಅಡಿಯಾರ್)ಗೆ ತಲುಪಿದ ಎರಡು ದಿನಗಳನಂತರ ನಮ್ಮ ಆಶ್ರಯದ ಭಾವನೆಕ್ಕೆ ನದಿಯ ದಡದಲ್ಲಿರುವ ಜಾಗವನ್ನು

ಕೊಂಡುಕೊಳ್ಳುವುದು ಒಳ್ಳೆಯದೆಂಬ ಒಂದು ಸಲಹೆಯನ್ನು ನನ್ನ ಮುಂದಿಡಲಾಯಿತು.---- ಈ ವಿಷಯವಾಗಿ ನಾನು ಒಬ್ಬಿಬ್ಬರು ಮಿತ್ರರೊಡನೆ ಮಾತಾಡಿದೆನು, ಒಂದು ವಾರದೊಳಗಾಗಿ ಅದಕ್ಕೆ ತಕ್ಕಷ್ಟು ಹಣವು ಬಂತು. ಅದರ ಬಗ್ಗೆ ವ್ಯವಹರಿಸಿದ ನನ್ನ ಮಿತ್ರರಲ್ಲಿಬ್ಬರು ಬ್ಲಾವಟ್ಸ್ಕಿ ಇವರಿಗೆ ಮತ್ತು ಕರ್ನಲ್ ಆಲ್ಕಾಟ್ ಇವರಿಗೆ ಅಡಿಯಾರ್ ತೋಟವನ್ನು ಕೊಂಡುಕೊಳ್ಳುವುದರಲ್ಲಿ ಸಹಾಯಕರಾಗಿದ್ದ ಇವರು (ರೂ. 12,000 ಕ್ಕೆ ಕೊಳ್ಳುವ ಕಾಲದಲ್ಲಿ ದೊರಕಿತ್ತು.) ರೂ. 40,000 ಕ್ಕೆ ವ್ಯವಹಾರ ಪೂರ್ತಿ ಮಾಡಿಸಿ ಫೆಬ್ರುವರಿ 15 ಕ್ಕೆ ಆ ಹೊಸ ಜಾಗವು ನನ್ನ ಆಧೀನಕ್ಕೆ ಬಂತು. ಎಂಭತ್ತೊಂದು ವರ್ಷಗಳ ಆ ಆಸ್ತಿಯಲ್ಲಿ ಒಂದು ಬಂಗ್ಲೆಯೂ, ಉತ್ಪತ್ತಿಯನ್ನು ಕೊಡುವ ವ್ಯವಸಾಯ ಯೋಗ್ಯ ಜಾಗವೂ, ಕೃಷಿ ಮಾಡಿದರೆ ಹೊಂದಬಹುದಾದಂಥಾ ಉತ್ತಮ ಕಾಲುವೆಯೂ ಹಣ್ಣಿನ ಮರ ಇತ್ಯಾದಿಗಳೂ ಇವೆ---- ಮೇ 16 ರಂದು ನಾನು ಕೊಲೊಂಬೊಕ್ಕೆ ಹೊರಟೆನು, ಡಾ. ಎಂಗ್ಲಿಶ್ ಇವರೂ ಅವರ ಅಧೀನದಲ್ಲಿ ಶ್ರೀ ಪಾರ್ಟ್ರಿ ಇವರು The Theosophist ಪತ್ರಿಕೆಯ ಜವಾಬ್ದಾರಿಕೆಯನ್ನು ವಹಿಸುವರು, ನಾನು ನನ್ನ ಮನೆಗೆ, ಹಿಂದೂಸ್ಥಾನಕ್ಕೆ, ಸೆಪ್ಟೆಂಬರದಲ್ಲಿ ಹಿಂದಿರುಗಿದೆನು, ಅಮೇರಿಕಾ ಪ್ರವಾಸದ ಕಾರ್ಯಕ್ರಮವನ್ನು ಮುಂದಿನ ವರ್ಷಕ್ಕೆ ಹಾಕಲಾಯಿತು:

ಎಡಿಲೈಡ್ (ಆಸ್ಟ್ರೇಲಿಯಾ - ಜೂನ್ 1908) — ಮೊದಲು ಪರ್ತ್‌ನಲ್ಲಿ ಇಳಿದೆನು, ಮೊದಲ ಕಾರ್ಯಕ್ರಮವು ಒಂದು ಚಲಚ್ಚಿತ್ರ ಎಂದರೆ ಮಧ್ಯಾಹ್ನ ಭಾಷಣ; ಅದೇಕೆಂದರೆ ಸಾಯಂಕಾಲ ಇಟ್ಟುಕೊಂಡರೆ ದೂರದಲ್ಲಿರುವ ಜನರಿಗೆ ಬಂದು ಹೋಗಲು ಅನುಕೂಲವಾಗುವುದಿಲ್ಲ ಎಂಬ ಕಾರಣಕ್ಕಾಗಿ ಎಂದು ತಿಳಿದು ಬಂತು. ಅನಂತರ ಹಲವು ಸದಸ್ಯರ ಮತ್ತು ಸಂದರ್ಶಕರ ಭೇಟಿ! ಇಲ್ಲಿ Free-thought ಸಂಸ್ಥೆಯ ಒಬ್ಬ ಸ್ಥಾಪಕ, ಶ್ರೀ ಮಾರ್ಟಿನ್‌ಸನ್ ಇವರು ಪ್ರಗತಿಶೀಲ ಪ್ರಾರಂಭದಲ್ಲಿರುವವನಾದರೂ ಅವರ ಮನಸ್ಸು ಹಿಂದಿನಂತೆಯೇ ಇದೆ, ಪರ್ತ್ ಮತ್ತು ಫ್ರೀಮೆಂಟಲ್‌ನ ಉತ್ತಮ ಸಭೆಗಳು ನಮ್ಮಲ್ಲಿ ಉಳಿದಿವೆ, ನನ್ನ ಭಾಷಣಕ್ಕೆ ತುಂಬಾ ಜನರು ಸೇರಿದ್ದರು. ಪ್ರೀತಿಯಿಂದ ಆಲಿಸಿದರು; ತಿಳಿಯಲು ಸಿದ್ಧರೂ ಆಗಿದ್ದರು. ಹೆಚ್ಚುವರು ಆಸ್ಟ್ರೇಲಿಯಾದ ಜನರು ತೀಕ್ಷ್ಣ ಮತಿಯು ತೀವ್ರಗಾಮಿಗಳಾಗಿ ಸ್ವಾತಂತ್ರ್ಯವಾದಿಗಳಾಗಿ ವಿಷಯಗಳನ್ನು ತಿಳಿಯಲು ಆಕಾಂಕ್ಷೆಯುಳ್ಳವರಾಗಿದ್ದಾರೆ---- ಅಲ್ಲಿಂದ ನಾವು ಎಡಿಲೈಡಿಗೆ ಹೋಗಲು ಚಿಕ್ಕ ಒಂದು ತುತ್ತುಜಾನಿ ಕಾಲವೊಂದು ನಷ್ಟವನ್ನು ಅದರೊಳಗೆ ತೀರಿಸುವ ನಿಮಿತ್ತವೋ ಎಂಬಂತೆ ಸ್ಥಗಿತಗೊಳಿಸಲಾಗಿದೆಯೆಂದು ಸ್ಥಳೀಯ ಜನರು ನಮಗೆ ತಿಳಿಸಿದರು----.

ಎಡಿಲೈಡ್ ಪುರಭವನದಲ್ಲಿ ಹಲವು ಭಾಷಣಗಳನ್ನು

ಕೊಡಲಾಯಿತು ---- ಒಮ್ಮೆ ಧರ್ಮಭವನಕ್ಕೆ ನಾನು ಹೋಗುತ್ತಿದ್ದಾಗ್ಗೆ ಜನಸಂದಣಿಯಿಂದ ಅಲ್ಲಿ ಸುತ್ತೆಲ್ಲ ನಿಂತಿತ್ತು, ಬೀದಿಯಿಂದ ನಾನು ಒಳ್ಳೆ ಹೋಗುವಾಗ ಮತ್ತು ಹೆಬ್ಬಾಗಿಲಿಗೆ ತಲುಪಿದಾಗ ಒಬ್ಬ ಕಾವಲಿಗನು "ಇನ್ನು ಪ್ರವೇಶವಿಲ್ಲ," ಎಂದೆನ್ನುತ್ತಾ ತಡೆದನು, "ಸರಿ, ನನಗೇನೂ ಇಲ್ಲ; ಹಾಗಾದರೆ ಭಾಷಣವೂ ಇಲ್ಲ," ಎಂಬುದಾಗಿ ನಾನಂದೆನು, "ಓಹೋ" ಎಂದು ನಗುತ್ತಾ ಅವನು ದೊಡ್ಡ ಕಬ್ಬಿಣದ ಹೆಬ್ಬಾಗಿಲನ್ನು ತೆರೆದನು. ನಿಜಕ್ಕೂ ಅದೊಂದು ಉತ್ತಮ ದೃಶ್ಯ ವಾಗಿತ್ತು. ಅಷ್ಟರಲ್ಲಿ ಆ ದೊಡ್ಡ ಸಭಾಂಗಣವಾದರೂ ಜನರಿಂದ ಕಿಕ್ಕಿರಿದು ತುಂಬಿಹೋಗಿತ್ತು, ಹಲವರು ಗೋಡೆಗಳಿಗೆ ಒರಗಿ ನಿಂತಿದ್ದರು, ವೇದಿಕೆಯ ಸುತ್ತೆಲ್ಲ ಜನರು ಕುಳಿತಿದ್ದರು, ಜನವೆಲ್ಲಾ ಮೌನದಿಂದ ಭಾಷಣವನ್ನು ಕೇಳಿದರು, ಮರುದಿನ ಬೆಳಿಗ್ಗೆ ಪತ್ರಿಕೆಗಳಲ್ಲೆಲ್ಲಾ ನವ್ಯ ತತ್ವಜ್ಞಾನ (Theosophy) ಇದರ ವಿಷಯವಾಗಿಯೇ ತುಂಬಿಹೋಗಿದ್ದುವು!----.

<u>ಮೆಲ್ಬೋರ್ನ್ -(ಜೂನ್ 24-1908)</u> ಇಲ್ಲಿ ನಾಲ್ಕು ಕೇಂದ್ರ (Lodges)ಗಳಿಗಿಂತ ಕಡಿಮೆಯಿಲ್ಲದೆ ಇವೆಯಲ್ಲದೆ ಅವೆಲ್ಲವೂ ನನ್ನ ಸಂದರ್ಶನದ ಭಾಷಣಗಳನ್ನೇರ್ಪಡಿಸಲು ಒಟ್ಟಾಗಿ ದುಡಿಯುತ್ತಿದ್ದುವು ---- ಹೊಬಾರ್ಟ್ ಮತ್ತು ಎಡಿಲೈಡ್‌ಗಳಲ್ಲಿ ಕರ್ಮ, ಪುನರ್ಜನ್ಮ ಇತ್ಯಾದಿ ವಿಚಾರಗಳ ಬಗ್ಗೆ ಮಾತಾಡಿದ್ದೆನು, ಹೊಬಾರ್ಟನಲ್ಲಿ ಒಬ್ಬನು ಆ ಭಾಷಣವನ್ನು ಕೇಳಿ ತಾನು ತತ್ವಜ್ಞಾನ (Theosophy)ದ ವಿಷಯವಾಗಿ ತಿಳಿಯಲು ಬಯಸಿದ್ದೆನೆಂದೂ ಮಿಕ್ಕುಳಿದ ವಿಷಯವೆಲ್ಲವೂ ಸಾಮಾನ್ಯವಾದುವೆಂದೂ ಹೇಳಿದುದು ಸ್ವಾರಸ್ಯವಾಗಿತ್ತು.

ಜೂನ್ ೩೦ - ಮೆಲ್ಬೋರ್ನ್ ಕೇಂದ್ರಗಳ ಸದಸ್ಯರು ನನ್ನನ್ನು ತುಂಬಾ ಚೆನ್ನಾಗಿ ನೋಡಿಕೊಂಡರು, ಅವರು ನನ್ನ ಕೈಗಡಿಯಾರಕ್ಕೆ ಸರಪಳಿಯನ್ನು (gold wristlet) ಬಹುಮಾನವಿತ್ತರು. ಆ ವರೆಗೂ ಹಿಂದೂಸ್ಥಾನದ ಉಷ್ಣಕ್ಕೆ ತಗಿದೇ ಇದ್ದ ತೊಗಲ ಪಟ್ಟಿಯನ್ನೇ ಕಟ್ಟಿಕೊಂಡಿದ್ದೆನು, ನನ್ನೊಡನೆ ಪ್ರಯಾಣ ಬೆಳೆಸಿ ನನ್ನ ಶ್ರಮವನ್ನು ಕಡಿಮೆ ಮಾಡುತ್ತಿದ್ದ ಶ್ರೀಮತಿ ಜಾನ್ ಇವರಿಗೂ ಒಂದು ಬಹುಮಾನವನ್ನು ಕೊಟ್ಟರು---!

<u>ಸಿಡ್ನೀ (ಆಸ್ಟ್ರೇಲಿಯಾ - ಜುಲೈ 7, 1908)</u> - ಮೆಲ್ಬೋರ್ನ್‌ನಿಂದ ಎಕ್ಸ್‌ಪ್ರೆಸ್ ಗಾಡಿಯಲ್ಲಿ ಜೂನ್ ೩೦ರಂದು ಹೊರಟು ನ್ಯೂ ಸೌತ್ ವೇಲ್ಸ್‌ಗೆ ಮರುದಿನ ಬೆಳಿಗ್ಗೆ ತಲುಪಿ ಅದರ ರಾಜಧಾನಿ ಸಿಡ್ನೀ ಪಟ್ಟಣಕ್ಕೆ ಹನ್ನೊಂದು ಗಂಟೆಯ ವೇಳೆಗೆ ಮುಟ್ಟಿದೆವು. ಆಗ ತುಂಬಾ ಚಳಿಯಿತ್ತು ---- ಸಿಡ್ನಿಯ ಮಿತ್ರರು ಜನಪ್ರಿಯನಾದ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಜಾನ್ ಇವರ ಮುಂದಾಳ್ತನದಲ್ಲಿ ನಮ್ಮನ್ನು ನಿಲ್ದಾಣದಲ್ಲಿ ಸ್ವಾಗತಿಸಿದರು.

ಮೊದಲ ಸಾರ್ವಜನಿಕ ಭಾಷಣವು ಜುಲೈ ೧೨ರಂದು ಶತಮಾನೋತ್ಸವ ಹಜಾರ (Centenary Hall)ದಲ್ಲಿ ಮಾಡಲಾಯಿತು ---- ಜೀವನ ದರ್ಶನವನ್ನು ಕುರಿತಾಗಿ ಇಲ್ಲಿ ಕೊಟ್ಟ ಭಾಷಣವು ಅಲ್ಲಿ ನೆರೆದ ಜನಸಂದಣಿಯನ್ನು ಸಂತೋಷಪಡಿಸಿತಲ್ಲದೆ ಆಸ್ಟ್ರೇಲಿಯಾದ ಜನರು ಇತರ ವಿಷಯಗಳಿಗಿಂತಲೂ ಈ ವಿಷಯವನ್ನು ತುಂಬಾ ಮೆಚ್ಚಿದ್ದಂತೆ ತೋರಿತು.

ಬ್ರಿಸ್ಬೇನ್ — ಜುಲೈ ೧೮-1908:— ಶ್ರೀಮತಿ ಜಾನ್ ಮತ್ತು ನಾನು ಸಿಡ್ನಿಯಿಂದ ಜುಲೈ 13ರಂದು ಸೇರಿದ ಜನತೆಯ ಹಾರ್ದಿಕ ಬೀಳ್ಕೊಡುವಿಕೆಯ ಮಧ್ಯೆ ರೈಲು ಗಾಡಿಯನ್ನು ಹತ್ತಿ ಹೊರಟೆವು ---- ಮರುದಿನ ಬೆಳಿಗ್ಗೆ ನಮ್ಮ ಗಾಡಿಯು ನ್ಯೂ ಸೌತ್ ವೇಲ್ಸನ ಬೆಟ್ಟಪ್ರದೇಶಕ್ಕಾಗಿ ಹಾಯುತ್ತ ಕಡೆಗೆ ಪಕ್ಕದ ಪ್ರಾಂತದ ಗಡಿಯಲ್ಲಿ ಬೇರೊಂದು ಗಾಡಿಯನ್ನು ಹಿಡಿದು ಕ್ವೀನ್ಸ್‌ಲ್ಯಾಂಡ್‌ಗೆ ಪ್ರಯಾಣ ಬೆಳೆಸಿದೆವು, ಆ ಪ್ರಯಾಣವು ನಾವು ಬೊಂಬಾಯಿಯ ಬಳಿ ಘಟ್ಟ ಬೆಟ್ಟಗಳೆಡೆಯಲ್ಲಿ ಪ್ರಯಾಣ ಬೆಳೆಸುತ್ತಿದ್ದುದನ್ನು ನೆನಪಿಗೆ ತರುತ್ತಿತ್ತು. ಆ ದಿನ ಸಾಯಂಕಾಲ, ಎಂದರೆ ಜುಲೈ 14 ರಂದು (ರಾತ್ರಿ) ಬ್ರಿಸ್ಬೇನ್ ನಿಲ್ದಾಣದಲ್ಲಿ ಇಳಿದೆವು. ಆ ಬೆಳಗಿನ ಚಳಿಯಲ್ಲಿ ಹೊಸ ಮುಖಗಳಾದರೂ ಹಾರ್ದಿಕ ವಿಶ್ವಾಸದಿಂದ ಕೂಡಿದ ಜನರು ನಮ್ಮ ಸಿದ್ಧಿಯ ಹೊಂದಿರುವಂತೆಯೇ ಪ್ರೀತಿಯಿಂದ ನಮ್ಮನ್ನು ಸ್ವಾಗತಿಸಿದರು.

ಆಸ್ಟ್ರೇಲಿಯಾದ ಪ್ರವಾಸದಲ್ಲಿ ನಾವು ಕಂಡುದೇನೆಂದರೆ ಅಲ್ಲಲ್ಲಿ ಒಬ್ಬೊಬ್ಬ ಹಳೆ ಮಿತ್ರರು, ಇಂಗ್ಲೆಂಡಿನಲ್ಲಿದ್ದಾಗ ನನ್ನನ್ನು ಅಥವಾ ನಮ್ಮ ಪ್ರೀತಿಯ ಬ್ಲಾವಟ್‌ಸ್ಕಿಯನ್ನು ತಿಳಿದಿದ್ದ ಜನರು ಅಲ್ಲಿ ಕಾಣುತ್ತಿದ್ದರು. ಒಬ್ಬ ವೃದ್ಧನು ಬ್ಲಾವಟ್‌ಸ್ಕೀ ಇವಳು ಇದ್ದಾಗ ತತ್ವಜ್ಞಾನ (Theosophy) ಸಂಘಕ್ಕೆ ಹೋಗುತ್ತಿದ್ದನೆಂಬುದನ್ನು ನಮಗೆ ತಿಳಿಸಿದನು ---! ಕ್ವೀನ್ಸ್‌ಲ್ಯಾಂಡ್ ಪ್ರವಾಸವು ನಮ್ಮ ಆಸ್ಟ್ರೇಲಿಯಾ ಕಾರ್ಯಕ್ರಮಕ್ಕೆ ತಕ್ಕ ಸಮಾಪ್ತಿಯನ್ನಿತ್ತಿತು. ಆನಂತರ ೨೦ನೇ ತಾರೀಖಿನಲ್ಲಿ ನಾವು ನ್ಯೂಝೀಲ್ಯಾಂಡಿಗೆ ಹೋಗಲು ಗಾಡಿ ಹತ್ತಿದೆವು.

ಆಕ್ಲ್ಯಾಂಡ್ (Aukland, New Zealand) — ಭೂಗೋಳಿಕವಾಗಿ ಗ್ರೀನ್‌ವಿಚ್ ನಮ್ಮ ಕಾಲಿನ ಅಡಿಯಲ್ಲಿ, ನಮ್ಮ ಮತ್ತು ಇಂಗ್ಲೆಂಡಿನ ಮಧ್ಯೆ ಹಿಂದೂಸ್ಥಾನವು ಇದ್ದರೂ ತತ್ವಜ್ಞಾನ (Theosophy) ಬೇರೆ ದೇಶಗಳಲ್ಲಿ ಹೋಗಿರುವ ಹಾಗೆಯೇ ಇಲ್ಲಿಯೂ ಅದನ್ನು ಅಭ್ಯಾಸಿಸಲು ಸಿದ್ಧರಿದ್ದರೂ ಮತ್ತು ಅದನ್ನು ಉಳಿಸಲು ಮೇಧಾವಿಗಳೂ ಇದ್ದರು, ಇಲ್ಲಿ ಈಗ ಚಳಿಯಾದರೂ ಎರಡು ತಿಂಗಳು ಮಳೆಯ ನಂತರ ದೇಶವು ಹಚ್ಚ ಹಸುರಿನಿಂದ ಶೋಭಾಯಮಾನವಾಗಿದೆ. ಇಂದು ಸೂರ್ಯನು ಪ್ರಕಾಶಮಾನನಾಗಿದ್ದನೆ. ಬಿಳಿ ಮೋಡಗಳು ತೇಲುತ್ತಿ ಚದರಿ ಆಕಾಶದ ಅಂದ

ಹಾಯುತ್ತಾ ಇಂಗ್ಲೆಂಡಿನ ವಸಂತ ಋತುವನ್ನು ನೆನಪಿಗೆ ತರುತ್ತದೆ,

<u>ವೆಲ್ಲಿಂಗ್ಟನ್, ನ್ಯೂಜಿಲ್ಯಾಂಡ್ – ಆಗಸ್ಟ್ 3, 1908 –</u> ಆಕ್ಲೆಂಡ್
ನಲ್ಲಿ ಎರಡು ದೊಡ್ಡ ಸಾರ್ವಜನಿಕ ಸಭೆಗಳು ನಡೆದು ಸುಮಾರು
೩೦೦ ಜನಕ್ಕಿಂತಲೂ ಹೆಚ್ಚಾಗಿ ಬಂದೊಂದು ಸಭೆಯಲ್ಲಿ ಹಾಜರಿ
ದ್ದರು. ಭಾಷಣದನಂತರ ಹಲವು ಪ್ರಶ್ನೆಗಳನ್ನು ಕೇಳಿದರು.

ಮನೋಹರವಾದ ವೆಲ್ಲಿಂಗ್ಟನ್‌ನಲ್ಲಿ ಒಂದು ತಂಡ ಸದಸ್ಯ
ರು ರೈಲು ನಿಲ್ದಾಣದಲ್ಲಿ ನನಗಾಗಿ ಕಾದಿದ್ದರು. ಸಾಯಂಕಾಲ ವಿಶ್ವ
ವಕೀಲ ಮಂದಿರಕ್ಕೆ ಅಲ್ಲಿಗೆ ತಲುಪಿದೆವು ---- ಮರುದಿನ ಪೂರ್ವಭಾವಿ
ದಲ್ಲಿ ಬಹು ದೊಡ್ಡ ಸಭೆಯು ಉತ್ಸಾಹದಿಂದ ನೆರೆದಿತ್ತು; ವೆ
ಲ್ಲಿಂಗ್ಟನ್‌ನಲ್ಲಿ ತತ್ವಜ್ಞಾನಕ್ಕೆ ಸಂಬಂಧಪಟ್ಟ ವಿಚಾರಗಳು ಹೊ
ಸದಾಗಿದ್ದಂತೆ ತೋರುತ್ತಿತ್ತು; ಆದರೆ ವಿಚಾರವಾಗಿ ಜನರು ಹೆಚ್ಚು
ತಿಳಿದಿದ್ದಂತೆ ತೋರಲಿಲ್ಲ.

<u>ಡ್ಯೂನೆಡಿನ್, ನ್ಯೂಜಿಲ್ಯಾಂಡ್ – ಆಗಸ್ಟ್ 10, 1908 –</u> ಡ್ಯೂ
ನೆಡಿನ್ ಸ್ಕಾಟ್ಲೆಂಡಿನ ಸ್ಕಾಚ್ ಜನರಿಂದ ತುಂಬಿದ್ದಿತು, ಇಲ್ಲಿ ಮೂರು
ಸಾರ್ವಜನಿಕ ಭಾಷಣಗಳು ನಡೆದುವು, ಆಗಸ್ಟ್ 10 ರಲ್ಲಿ ನಾವು ಬ್ಲಫ
ಪಟ್ಟಣಕ್ಕೆ ರೈಲು ಹತ್ತಿ, ಕಡೆಗೆ ನ್ಯೂಜಿಲ್ಯಾಂಡಿನ ಹದಿನೈದು
ದಿನಗಳ ಪ್ರಯಾಸಕರವಾದ ಪ್ರವಾಸದನಂತರ ಹಿಂದಕ್ಕೆ ಬರ
ಲೆಂದು ಹಡಗನ್ನು ಏರಿದೆವು ----.

ಹೋದಲ್ಲೆಲ್ಲ ನಮ್ಮನ್ನು ಪ್ರತಿನಿಧಿಗಳಿಂದ ಸ್ವಾಗತಿಸಿ
ಸತ್ಕರಿಸಿದರು, ನಮ್ಮ ತತ್ವಜ್ಞಾನಿ ಗುರುಗಳು ಆದೇಶದಂತೆ
ನಾನು ಅದರ ಅಧ್ಯಕ್ಷೆಯಾಗಿ ದುಡಿಯುತ್ತಿರುವುದರಿಂದ
ಜನತೆಯ ಪ್ರೀತಿ ಅಭಿಮಾನಗಳೆಲ್ಲ ನಮ್ಮ ಸಂಸ್ಥೆಯ ಧ್ಯೇ
ಯಕ್ಕೆ ಅಲ್ಲದೆ ನನಗೆ ವೈಯಕ್ತಿಕವಾಗಿ ಅಲ್ಲ ಎಂದು ಅರಿ
ತಿದ್ದೇನೆ, ಈ ಆಸ್ಟ್ರೇಲಿಯಾ ಪ್ರವಾಸವು ಶ್ರೀಮತಿ ಜಾನ್
ಇವಳಿಂದಾಗಿ ವಿಶೇಷ ಜಯಪ್ರದವಾಯಿತು,

ಈ ಪ್ರವಾಸವು ನನ್ನನ್ನು ನಲ್ವತ್ನಾಲ್ಕು ದಿನಗಳು ಹಗಲಿರು
ಳು ಪ್ರಯಾಣದಲ್ಲಿ ಸೇರಿ 17,630 ಮೈಲು ನೆಲ ಮತ್ತು ಜಲ
ದಾಗೆ ಕೊಂಡು ಹೋಗಿದೆ ---- ನಲ್ವತ್ನಾಲ್ಕು ಸಾರ್ವಜನಿಕ ಭಾ
ಷಣಗಳು ಮತ್ತು ಸಂಸ್ಥೆಯ ವ್ಯಾವಹಾರಿಕ ಸಭೆಗಳು
ತುಂಬುತ್ತ ನಡೆಸಲಾದುವು ---- ಇದು ಅರುವತ್ತು ವಯ
ಮೀರಿದ ಬಿಳಿ ಹೆಂಗಸಿಗೆ ಸಾಮಾನ್ಯವಾದ ಕೆಲಸದಂತೆ ತೋ
ರಲಿಲ್ಲ, ಆದರೂ ಯಾವನೋ ಒಬ್ಬ ವಿರೋಧಿಯು ನನ್ನನ್ನು ಬರೇ
ಹಿಂದಿನ ವರ್ಷ ನಾನು ಸಾಯುತ್ತೇನೆಂದೂ ಆದುದರಿಂದ
ನಾನು ತತ್ವಜ್ಞಾನ ಸಂಘ (Theosophical Society) ಇದರ ಅಂ
ತರಾಷ್ಟ್ರೀಯ ಸಂಸ್ಥೆಯ ಅಧ್ಯಕ್ಷೆಯಾಗಿರಲು ಅನರ್ಹಳೆಂದೂ
ಹೇಳಿದಾಗ ನನ್ನ ಈ ಪ್ರವಾಸವು ನಿಜಕ್ಕೂ ಸ್ವಾರಸ್ಯವಿದೆ,

ಬನಾರಸ್‌ನಲ್ಲಿ ಆನಿ ಬೆಸೆಂಟ್ ಇವರ ಹುಟ್ಟಿದಿನ:— ಒಕ್ಟೋಬರ್ ತಿಂಗಳ ಮೊದಲ ದಿನ ಹಿಂದೂ ಕಾಲೇಜಿನ ಹಜಾರದಲ್ಲಿ ಹೂಗಳಿಂದ ಅಲಂಕರಿಸಲ್ಪಟ್ಟ ಶ್ರೀಮತಿ ಬೆಸೆಂಟ್ ಇವರ ದೊಡ್ಡ ಭಾವಚಿತ್ರವೊಂದು ಎದುರಿನ ಗೋಡೆಯಲ್ಲಿ ಇಡಲ್ಪಟ್ಟಿತು, ಕೇಂದ್ರ ಹಿಂದೂ ಕಾಲೇಜಿನ ಹುಡುಗರು ಶ್ರೀಮತಿ ಬೆಸೆಂಟ್ ಇವರ ಜೀವನದ ಸ್ಥೂಲ ಚಿತ್ರವೆಂದು ಗಣಿಸಿದ ಅವರ ಪ್ರಸಿದ್ಧ ನುಡಿಯೊಂದನ್ನು ಚಿನ್ನದ ಅಕ್ಷರಗಳಲ್ಲಿ ಆ ಭಾವಚಿತ್ರದ ಕೆಳಗೆ ಹೀಗೆ ಬರೆದಿದ್ದರು:—

"ಗೆಳೆಯರು ನನ್ನನ್ನು ಹೊಗಳಿದರೆ ಅದು ಹೋಗಲೇ ಬೇಕು; ಮಾನವ ಶ್ರೀಮಂತರು ನನ್ನನ್ನು ಕೈಬಿಟ್ಟರೆ ಅದು ಸಹ ತ್ಯಾಜ್ಯವಾಗಲೇ ಬೇಕು; ಏಕೆಂದರೆ ನಾನು ಪಾಲಿಸುವ ಸತ್ಯಕ್ಕೆ ನಾನು ಸತ್ಯದಿಂದಲೇ ನಡೆಯಬೇಕು, ಮತ್ತು ನಾನು ಪಾಲಿಸುವ ಈ ಲೋಕದಲ್ಲಿ ನಾನು ಆ ಸತ್ಯ ದೇವತೆಯ ಸೇವೆಯನ್ನು ಮಾಡಲು ನಾನು ಪ್ರಯತ್ನಿಸಬೇಕೇ? ಹೌದು, ಅವರು ನನ್ನನ್ನು ಮರುಭೂಮಿಯತ್ತಲೂ ಒಯ್ಯಬಹುದು, ನಾನು ಅವರನ್ನು ಹಿಂಬಾಲಿಸುವೆನು, ಅವರು ನನ್ನಲ್ಲಿರುವ ಪ್ರೀತಿಯನ್ನೆಲ್ಲ ಕಳೆದು ಹಾಕಲೂ ಬಹುದು, ಹಾಗಿದ್ದರೂ ನಾನು ಅವಳನ್ನೇ (ಸತ್ಯದೇವತೆ) ಬಲವಾಗಿ ಅಪ್ಪಿಕೊಂಡಿರುವೆನು; ಅಲ್ಲದೆ ನನ್ನ ಸಮಾಧಿ ಕಲ್ಲಿನ ಮೇಲೆ ಹೀಗಲ್ಲದೆ ಮತ್ತಾವ ಪ್ರಶಂಸಾ ಪೂರ್ವಕ ಬರೆಹವನ್ನು ನಾನು ಇಚ್ಛಿಸಲಾರೆನು!—

"ಅವಳು ಸತ್ಯವನ್ನೇ ಪಾಲಿಸಲು ಪ್ರಯತ್ನಿಸಿದ್ದಳು"

1909

ಅಡೆಯಾರ್! ತತ್ವಜ್ಞಾನ ಸಂಸ್ಥೆ (Theosophical Society) ಇದರ 33ನೇ ಅಧಿವೇಶನದ ಭಾರತೀಯ ವಿಭಾಗದ ಸಭೆಗೆ 650ಕ್ಕೆ ಕಡಿಮೆಯಿಲ್ಲದಷ್ಟು ಪ್ರತಿನಿಧಿಗಳು ಸೇರಿದ್ದರು, ಎಲ್ಲೆಲ್ಲೂ ಗಂಡಸರು, ಹೆಂಗಸರು ಮತ್ತು ಮಕ್ಕಳು ಸಹ ಸುತ್ತಲ ದಾರಿಗಳಲ್ಲಿ, ಬಾವಿಯ ಕಿನಾರಗಳಲ್ಲಿ, ಅಲ್ಲಿ ಇದ್ದ ಆಸನಗಳಲ್ಲಿ ಕೆರೆ ಕಟ್ಟೆಯ ದಡಗಳಲ್ಲಿ (ಅಷ್ಟಕ್ಕೆ ನಿರೀಕ್ಷಿಸಿದ್ದಂತೆ) ನೆರೆದಿದ್ದರು; ಹಾಗಿದ್ದರೂ ಅಡೆಯಾರ್ ಅವರಿಂದ ಸಹಜವಾದ ಗಂಭೀರ ಮಾನವತ್ವ ಹಾಗೆ ವಿವಿಧ ವರ್ಗದ ಜನರ ಸೇರುವಿಕೆಯಿಂದಲೂ ಭೇದಿಸಲ್ಪಡಲಿಲ್ಲ! -----,

ತಮ್ಮ ಹಿಂದಿನ ಸೇವೆಯನ್ನು ಯಾವುದೇ ರೀತಿಯಲಾದರೂ ಸಲ್ಲಿಸುತ್ತಿಂದು ಅಷ್ಟು ದೂರದಿಂದ ಈ ಅಧಿವೇಶನಕ್ಕೆ ಬಂದ ಕೇಂದ್ರೀಯ ಹಿಂದೂ ಕಾಲೇಜು (ಬನಾರಸ್) ಇದರ ಒಂದು ತಂಡ ವಿದ್ಯಾರ್ಥಿಗಳನ್ನು ಕುರಿತು ಹೇಳುವುದೇ ಈ ನನ್ನ ಟಿಪ್ಪಣಿಯನ್ನು ಕೊನೆಗೊಳಿಸಲಾರೆನು, ಅವರು ನಮ್ಮ ಕೆಲಸಗಳನ್ನು ಮಾರುವಂತೆ ನೆರೆದ ಜನರಿಗೆ ಪುಸ್ತಕಗಳನ್ನು

ಮಾಡುವ ಪಾಠವನ್ನೂ, ಜನಸಂದಣಿಯನ್ನು ಶಿಸ್ತಿನಲ್ಲಿಡುವುದು, ಅತಿಥಿಗಳಿಗೂ ಭಾಷಣಕಾರರಿಗೂ ಬೇಕಾದುದನ್ನು ಒದಗಿಸುವುದು, ಮಾಡುವುದೂ ಇತ್ಯಾದಿ ಕೆಲಸಗಳಲ್ಲಿ ನಿರತರಾಗಿದ್ದರಲ್ಲದೆ ಅವೆಲ್ಲಕ್ಕೂ ಮೀರಿ ಸಮಾಜದಿಂದ ಬಹಿಷ್ಕರಿಸಲಾದ ತಮ್ಮ ಸೋದರ ಸೋದರಿಯರಾದ ಅಂಟುವರಾದವ ಹರಿಜನ ಮಕ್ಕಳ ಶ್ರೇಯೋಜನಕ್ಕೆ ಹಣಸಂಗ್ರಹವನ್ನು ಮಾಡುತಿದ್ದರು----.

ಫೆಬ್ರವರಿ 10 ರಂದು ವಾನ್ ಮನೆನ್ ಇವನೊಡನೆ ಶ್ರೀ ರಿಚ್ ಬಿಚರ್ ಇವರು ಬಂದಾಗ ಇಡೀ ಕೇಂದ್ರದ ಎಲ್ಲ ಸದಸ್ಯರು, ಸಿಪಾಯಿಗಳು ಮತ್ತು ಮಕ್ಕಳು ಅವರನ್ನು ಒಂದು ಮೆರವಣಿಗೆಯ ರೀತಿಯಲ್ಲಿ ಸಾಲುಗಟ್ಟಿ ನಿಂತು ಸ್ವಾಗತಿಸಿದರು---ಸಮಾರಂಭದ ಕಡೇ ದಿನದ ಭಾಷಣಕ್ಕೆ ಗವರ್ನರ್ Sir Arthur Lawley ಇವರು ಹಾಜರಾಗಿದ್ದರು----ಬಿಟೀರಿಯ ಮದ್ರಾಸ ಶಾಖೆಯನ್ನು 1909ರ ಏಪ್ರಿಲ್ 15ರಂದು ಉದ್ಘಾಟಿಸಲಾಯಿತು----.

ಶ್ರೀಮತಿ ಬೆಸೆಂಟ್ ಇವರು ಏಪ್ರಿಲ್ 23 ರಂದು ಬೊಂಬಾಯಿಯಿಂದ ಲಂಡನ್ನಿಗೆ ತೆರಳಿದರು. ಆಗ ವಾಹನ ಓಡಾಟಗಳಲ್ಲಿ ಲಂಡನ್ ತುಂಬಾ ಬದಲಾಗಿತ್ತು. ಕುದುರೆಗಾಡಿಗಳಿಲ್ಲ ಕಾಣೆಯಾಗಿ ಮೋಟಾರುಗಳು ಓಡಾಡುತ್ತವೆ---ಬಾಟರ್‌ಸೀ ಮತ್ತು ಹೆಚ್. ಪಿ. ಬಿ. ಶಿಬಿರಗಳಲ್ಲಿ (Lodges) ಧಾರಾವಾಹಿ ಭಾಷಣಗಳನ್ನು ಕೊಡಲಾದುವು---ಇತರ ಪಟ್ಟಣಗಳಲ್ಲಿ ಹೊಸ ಕೇಂದ್ರಗಳು ಸ್ಥಾಪಿತವಾದುವು, ಬ್ಲ್ಯಾಕ್‌ಪೂಲ್, ಮ್ಯಾಂಚೆಸ್ಟರ್, ನ್ಯೂಕೇಸಲ್, ಸಂಡರ್‌ಲ್ಯಾಂಡ್, ಲೀಡ್ಸ್, ಎಡಿನ್‌ಬರೋ, ಡಬ್ಲಿನ್, ಗ್ಲಾಸ್‌ಗೋ, ಬ್ರೈಟನ್ ಇತ್ಯಾದಿ ಸ್ಥಳಗಳಲ್ಲಿ ಅಲ್ಲದೆ ಸೌತಾಂಪ್ಟನ್, ಲಿವರ್‌ಪೂಲ್, ಶೆಫೀಲ್ಡ್, ಬರ್ಮಿಂಗ್‌ಹ್ಯಾಂ, ನಾಟಿಂಗ್‌ಹ್ಯಾಂ, ಡಬ್ಲಿನ್, ಬ್ರಾಡ್‌ಫರ್ಡ್, ಹಾರೋಗೇಟ್ ಮತ್ತು ಆಕ್ಸ್‌ಫರ್ಡ್‌ಗಳಲ್ಲೂ ಹೊಸ ಶಿಬಿರಗಳನ್ನು ಸ್ಥಾಪಿಸಲು ಮಾರ್ಗದರ್ಶಿಸಿದರು, ಇಂಗ್ಲೆಂಡಿನಿಂದ ಹೊರಗೆ ಬೆಲ್ಜಿಯಂ, ಹಾಲೆಂಡ್, ಹಂಗೇರಿ, ಫ್ರಾನ್ಸ್, ಮತ್ತು ಇಟಲಿ, ಆದರ ನಂತರ ಎರಡು ತಿಂಗಳು ಅಮೇರಿಕಾದಲ್ಲೂ ಭಾಷಣ ಪ್ರವಾಸದ ಕಾರ್ಯಕ್ರಮವಿದ್ದಿತು---ಮೇ 24 ರಂದು ನನ್ನ ಹಳೆ ಮಿತ್ರ ಡಬ್ಲ್ಯೂ. ಟಿ. ಸ್ಟೀಡ್ ಇವರನ್ನು ಕಂಡರು, ಮತ್ತು ಅವರು ತನ್ನ ಆಧ್ಯಾತ್ಮ ಸಾಧನೆಯಲ್ಲಿ ಮಗ್ನನಾಗಿದ್ದದನ್ನು ನೋಡಿ ಸಂತೋಷಪಟ್ಟರು--- ಮೇ 27 ರಂದು ಕಾರ್ಯದರ್ಶಿ ಕುಮಾರಿ ಬ್ರೈಟ್ ಮತ್ತು ಇತರ ಕೆಲವು ಮಿತ್ರರೊಡಗೂಡಿ ಬುಡಾಪೆಸ್ಟಿಗೆ ಹೊರಟರು. ವಿಯೆನ್ನಾದಲ್ಲಿ ಕ್ಲಿಂಚ್ ಕಾರ್ಯದರ್ಶಿ ಮತ್ತು ಅವರ ಸೋದರಿಯರು, ಇವರನ್ನೆಲ್ಲ ಕರೆದುಕೊಂಡು ಮೇ 29 ರಲ್ಲಿ

ಬುಡಾಪೆಸ್ಟಿಗೆ ತಲುಪಿದೆವು, ಯುರೋಪಿಯನ್ ತತ್ತ್ವಜ್ಞಾನಿಗಳ ಅಂತರ್ರಾಷ್ಟ್ರೀಯ ಅಧಿವೇಶನವು ಅಲ್ಲಿ ಜರುಗಲಿತ್ತು.

ಜೂನ್ ೨ರಂದು ಆ ಅಧಿವೇಶನವನ್ನು ನಾನು ಮುಕ್ತಾಯಗೊಳಿಸಿದೆನು, ಡಾ. ಸ್ಟೀನರ್ ಇವರು ಆ ದಿನ ಬಹು ವಿಸ್ತಾರವಾದ ಒಂದು ಭಾಷಣವನ್ನು ಮಾಡಿದರು----ಅಲ್ಲಿಂದ ಹಿಂದಿರುಗಿ ನನ್ನ ಚಟುವಟಿಕೆಯು ಸ್ಕಾಟ್ಲೆಂಡಿನತ್ತ ಹರಿಯಿತು----ಜುಲೈ ೭ರಂದು ಬ್ರಿಟನ್ ಮತ್ತು ಐರ್ಲೆಂಡ್ ಇವುಗಳ ಥಿಯೊಸಾಫಿಕಲ್ ಸಂಘದ ೫೧ನೇ ವಾರ್ಷಿಕ ಅಧಿವೇಶನವು ಜರುಗಿತು, ನಾನು ಅಧ್ಯಕ್ಷೀಯವಾಗಿ The Place of Theosophy in the Coming Civilization—ಎಂಬುದಾಗಿ ಬಹಳ ಹೊತ್ತು ಮಾತಾಡಿದೆನು.

ಆಗಸ್ಟ್ ೩ರಂದು ನ್ಯೂಯಾರ್ಕಿಗೆ ಪ್ರಯಾಣ ಬೆಳೆಸಿದೆನು, ಪೂರ್ವಾಭಿಮುಖವಾಗಿ ತಿರುಗಿ ನೋಡಿದಾಗ ನಾನು ಆ ತೀರ ಜಲದಾರಿಯು ಹಿಂದೆ ಬಿಟ್ಟು ಇಂಗ್ಲೆಂಡನ್ನು ಮತ್ತು ಅಲ್ಲಿ ನನ್ನ ಹತ್ತು ದಿನಗಳ ಕಾರ್ಯಕ್ರಮವನ್ನೆಲ್ಲ ಕಾಣುತ್ತಿದ್ದೆನು----ನನ್ನ ಹಡಗು ಅಮೇರಿಕಾದ ದಡಕ್ಕೆ ತಲುಪಿದೊಡನೆಯೇ ನನ್ನ ಮಿತ್ರರೂ ನಾಲ್ಕಾರು ಛಾಯಾಚಿತ್ರ ಪೆಟ್ಟಿಗೆಗಳನ್ನು ಹೊತ್ತ ಮತ್ತು ಪತ್ರಿಕಾ ವರದಿಗಾರರೂ ಅಲ್ಲಿ ಕಾದು ನಿಂತಿದ್ದರು, "New York Herald Tribune" ಪತ್ರಿಕೆಯು ಈ ರೀತಿಯಾಗಿ ಹೇಳಿತು!—

"ಶ್ರೀಮತಿ ಆನಿ ಬೆಸೆಂಟ್ ಇವರು ಇಂಗ್ಲೆಂಡಿನಿಂದ ಬಂದು ಪಾರ್ಕ್ ಎವಿನ್ಯೂ ಹೊಟೇಲ್ ಇದರಲ್ಲಿ ಇಂದು ಉಳಿದುಕೊಳ್ಳುವ ನಿರೀಕ್ಷೆಯಿದೆ, ಆವಳ ಹಲವು ಮಿತ್ರರು ಆವಳಿಗಾಗಿ ಬಂದರಿನಲ್ಲಿ ತುಂಬಿರಲು ಹಡಗು ಕಂಪನಿಯವರು ಇನ್ನೂ ಹೆಚ್ಚಿನ ಜನಕ್ಕೆ ಅಲ್ಲಿಗೆ ಪ್ರವೇಶಕ್ಕವಕಾಶಗೊಡದೆಯೇ ಇರುವರು---."

ಆಗಸ್ಟ್ ೧೧ರಲ್ಲಿ ನಾವು ಚಿಕಾಗೋವನ್ನು ತಲುಪಿದೆವು---ಅಲ್ಲಿ ಮಾಡಿದ ಸಾರ್ವಜನಿಕ ಭಾಷಣಕ್ಕೆ ತುಂಬಾ ಜನ ಸೇರಿದ್ದರು. ಜಿನರಾಜದಾಸನು ಇತ್ತೀಚಿಗೆ ಇಲ್ಲಿ ಇದ್ದು ಸುಮಾರು ೨೦೦ ಜನರಿಂದ ಕೂಡಿದ್ದ ಸಭೆಯನ್ನು ಮಾತಾಡಿದನು, ಸಂಯುಕ್ತ ಸಂಸ್ಥಾನಗಳಲ್ಲಿ ಜಿನರಾಜದಾಸನು ತತ್ತ್ವಜ್ಞಾನದ ಧ್ಯೇಯಗಳನ್ನು ವಿಸ್ತಾರವಾಗಿ ಪ್ರತಿಪಾದಿಸುತ್ತಿದ್ದ ಕಾರಣದಿಂದ ತುಂಬಾ ಜನಪ್ರಿಯನಾಗಿದ್ದನು---

ಅಲ್ಲಿಂದ ನಾವು ಮುಂದುವರಿದು ಪಶ್ಚಿಮ ತೀರದ ಸೀಯಾಟಲ್ (Seattle)ಗೆ ಹೋಗಲು ನೂರಾರು ಜನರು ನಮ್ಮನ್ನು ಸ್ವಾಗತಿಸಿದರು. ಅಲ್ಲಿ ನಾನು, Theosophy—

Its Meaning and Value - ಎಂಬ ವಿಚಾರಪೂರ್ಣ ಬಾಷಣವನ್ನು ಕೇಳ್ಳಿದೆವು. ಮರುದಿನ ಜಿನರಾಜದಾಸನು ನಮ್ಮೊತ್ತಗೂಡಿದನು. ನಾವು ಅಲ್ಲಿಂದ ಹೊರಟನಂತರ ಅವನು ಅಲ್ಲಿ ಕಾರ್ಯಕ್ರಮ ನಡೆಸುವುದರಲ್ಲಿದ್ದನು --- ಸಿಯಾಟಲ್‌ನಿಂದ ನಾವು ರೈಲಿನಲ್ಲಿ ಬರ್ಲಿನ ಹೋಗುವುದರ ಬದಲಾಗಿ ಹಡಗಿನಲ್ಲಿ ನೆಟ್ಟನೆ ಕೆನಡಾದ ಬ್ರಿಟಿಷ್ ಕೊಲಂಬಿಯಾ ಪ್ರಾಂತದ ವ್ಯಾಂಕೂವರ್‌ಗೆ ಹೋದೆವು. ಆಗಸ್ಟ್ 24 ರಂದು ಬ್ರಿಟಿಷ್ ಸಾಮ್ರಾಜ್ಯದ ಒಂದು ಪ್ರಭಾವಿತ ಸ್ಥಳದಲ್ಲಿ ಬಂದಿಳಿದೆವು. ದೇವರು ಚಕ್ರವರ್ತಿಯನ್ನು ರಕ್ಷಿಸಲಿ! (God save the King!)

ಸೆಪ್ಟೆಂಬರ್ 4 ರಂದು ಪಸಡೀನಾ (Pasadena) ದ ಥಿಯಸೊಫಿಯರ್ ಕ್ಲಬ್‌ನಲ್ಲಿ ಮಾತಾಡಿದೆನು. ಹಲವು ಪ್ರಶ್ನೆಗಳಿಗೆ ಉತ್ತರಿಸಿದೆನು --- ನಾವು ನ್ಯೂಯಾರ್ಕ್‌ಗೆ ತಲುಪಿದಾಗ ನಗರವು ಹಡ್ಸನ್ - ಫುಲ್ಟನ್ ಹಬ್ಬದ ಕಾರಣದಿಂದ ತುಂಬಾ ಸಡಗರದಿಂದ ಕೂಡಿತ್ತು --- ಅಕ್ಟೋಬರ 1ನೇ ದಿನ ನ್ಯೂಯಾರ್ಕ್ ಕೇಂದ್ರದ ಸದಸ್ಯರು ನನ್ನ ಹುಟ್ಟುದಿನದ ನಿಮಿತ್ತವಾಗಿ ಬಹುಮಾನವನ್ನಿತ್ತು ಗೌರವಿಸಿದರು. ಚಿಲಿಯಿಂದ ಬಂದಿದ್ದ ಒಬ್ಬ ಸದಸ್ಯನು ವಾಲ್ಪರೈಸೋದ ತತ್ವಜ್ಞಾನ ಸಂಸ್ಥೆಯ ಸದಸ್ಯರ ಸಹಿಯೊಂದಿಗೆ ಕೂಡಿದ ಮತ್ತು ಸುಂದರವಾಗಿ ಬರೆದ ಬಿನ್ನವತ್ತಳೆಯನ್ನು ನನಗೆ ಅರ್ಪಿಸಿದನು. ಸಂಸ್ಥೆಯ ಮುದ್ರೆಯಿಂದ ಕೂಡಿದ ಆ ಪತ್ರವು ಲೋಕದ ವಿವಿಧ ಭಾಗದ ಸದಸ್ಯರು ನಮ್ಮ ಸಂಸ್ಥೆಯ ಬಗ್ಗೆ ತೋರಿಸುವ 'ಗೌರವ ಮತ್ತು ಪ್ರೀತಿಯ ಸ್ಮಾರಕವಾಗಿರುವುದರಿಂದ ಅದು ಪ್ರಧಾನ ಕಚೇರಿಯಲ್ಲಿ ಅಡೆಯಾರ್ ಇಡಲ್ಪಟ್ಟಿರುವುದು.

ಅಕ್ಟೋಬರ್ ಎರಡು ನಾನು ಹಿಂದಿರುಗಲೆಂದು ಹಡಗನ್ನು ಏರಿದಾಗ ಕೆಲವು ವಿಶ್ವಾಸಪಾತ್ರರಾದ ಮಿತ್ರರು ಅಲ್ಲಿ ತಮ್ಮ ಅಧ್ಯಕ್ಷೆಯ ಸುತ್ತುಗಟ್ಟಿದರು. ಅವರಲ್ಲಿ ಶ್ರೀ ವಾರಿಂಗ್ಟನ್ ಮತ್ತು ಶ್ರೀಮತಿ ಕೋಚರ್‌ಸ್ಪರ್ಜರ್ ಇವರು ನನ್ನೊಡನೆ ಈ ಪ್ರವಾಸದಲ್ಲಿ 10,620 ಮೈಲು ದಾರಿದವರೆಗೂ ನನ್ನೊಡನೆಯೇ ನಾನು ನ್ಯೂಯಾರ್ಕ್‌ಗೆ ಕಾಲಿಟ್ಟಂದಿನಿಂದಲೇ ಇದ್ದು ನನ್ನ ಸೌಕರ್ಯದ ಕಡೆ ಲಕ್ಷಿಸಿ ಸಹಕರಿಸಿದ ಅವರಿಗೆ ನಾನು ಧನ್ಯವಾದಗಳನ್ನು ಅರ್ಪಿಸಬೇಕಿದೆ ----- ಟಿಪ್ಪಣಿಗೆ (ಪತಿಂಗ) ಹೋದುದರ ಪರಿಣಾಮವಾಗಿ ಪ್ರತಿಯೊಂದರಲ್ಲೂ ಸುವ್ಯವಸ್ಥೆ ಇದ್ದಿತು. ಸದಸ್ಯರಂತೆ ಸೇರಿಸಿದೆವು. ಆ ರೀತಿ ಆ ಕಾರ್ಯಕ್ರಮವು ತೃಪ್ತಿಕರವಾಗಿ ಪ್ರಾರಂಭಗೊಂಡಂತಾಯಿತು.

೨೦ನೇ ಅಕ್ಟೋಬರಿನಲ್ಲಿ ಆಕ್ಸ್‌ಫರ್ಡ್ ಪುರಭವನದಲ್ಲಿ ಹಲವು ಉತ್ಸಾಹೀ ಮಿತ್ರರು ಸೇರಿದ್ದರು. Hibbert-Journal ಇದರ ಸಂಪಾದಕ ಶ್ರೀ. ಎಲ್.ಪಿ. ಜ್ಯಾಕ್ಸ್ ಇವರು ಅಧ್ಯಕ್ಷರಾಗಿದ್ದರು. ಕಡೇ ದಿನದ ಖಾಸಗೀ ಕಾರ್ಯಕ್ರಮವನ್ನು ಮುಗಿಸಿ ಮರುದಿನ ಹಾಲೆಂಡ್ ಮತ್ತು ಫ್ರಾನ್ಸಿಗೆ ತೆರಳಿದೆವು---ಅಲ್ಲಿ ಬ್ಯಾನಿಸ್ಟ್, ಅಲ್ಜೀರಿಯರ್ಸ್ ಮೊದಲಾದ ಪ್ರಾಂತೀಯ ಪಟ್ಟಣಗಳಿಂದ ಸದಸ್ಯರು ನಮ್ಮನ್ನು ಭೇಟಿಯಾದರು, ಅದೇ ದಿನ ಸಾಯಂಕಾಲ ಫ್ರಾನ್ಸ್ ಮತ್ತು ಇಂಗ್ಲೆಂಡಿನ ಕಾರ್ಯದರ್ಶಿಗಳೊಡಗೂಡಿ ಜಿನೀವಾಕ್ಕೆ ಹೋದೆವು --- ಇದು ಸಂಸ್ಕೃತಿಯನ್ನು ಹೊಂದಿದ ನಗರವಾದರೂ ಕಾಲ್ವಿನ್ನನ ನೆನಪು ಈಗಲೂ ಅಲ್ಲಿ ಜನಕ್ಕೆ ಚಳಿಯನ್ನು ಹುಟ್ಟಿಸುವಂತೆ ಇದೆ---ನವಂಬರ್ 3ರಂದು ನಾವು Lyonಗೆ ಹೋದೆವು, ಅದು ಪುರಾತನ ಕ್ರೈಸ್ತಸಂಪ್ರದಾಯದವರ ಮತ್ತು ಕ್ಯಾಥೋಲಿಕರ ಗೂಡಾಗಿದೆ. ಆದರೂ ಕೆಲವು ಜನರು ಅಲ್ಲಿ ತಮ್ಮ ಹಕ್ಕಿಗಾಗಿ ಕಾದುತ್ತಿದ್ದರು, ಪರಿಸ್ಥಿತಿಯು ಅಲ್ಲಿ ಬಿಗುವಾಗಿದ್ದರೂ ವಿರೋಧಿ ಗುಂಪಿನವರು ಅಲ್ಲಿ ಬಂದು ಸಾರ್ವಜನಿಕ ಭಾಷಣವನ್ನು ಕೇಳಲು ನೆರೆದರು---.

Marsellies ಇಲ್ಲಿ ಹಲವರು ನಮಗಾಗಿ ಕಾದು ನಿಂತಿದ್ದರು, ಅವರಲ್ಲಿ ಬಾರ್ಸಿಲೋನಾದ ಜನರೂ ಇದ್ದರು, ನೀಸ್ (Nice) ಇದನ್ನು ಸಂದರ್ಶಿಸಿ ನಾನೀಗ ಈ ದೇಶದಿಂದ ಹೊರಡುತ್ತಿದ್ದೇನೆ---ಅದರನಂತರ ಪುನಃ Genoa ಮತ್ತು Milan ಮತ್ತು Turin ಇಲ್ಲಿ ಮೂರು ದಿನಗಳಿದ್ದೆವು, ಬ್ರಿಂಡಿಸಿ---ಮತ್ತು (ಯುರೋಪ ಪ್ರವಾಸ ಮುಗಿಸಿ) ಪುನಃ ೨೬ನೇ ನವಂಬರನಲ್ಲಿ ಮದ್ರಾಸಿಗೆ ತಲುಪಿದೆನು, ತುಂಬಾ ಜನರು ರೈಲು ನಿಲ್ದಾಣದಲ್ಲಿ ನೆರೆದಿದ್ದರು, ಅಡಿಯಾರ್‌ನಲ್ಲಿ ನಮ್ಮ ಮನೆಯು ಮಕ್ಕಳು ಸೇರಿ ನಮ್ಮನ್ನು ಸ್ವಾಗತಿಸುತ್ತಾ, ಬೇರೇ ಹಾರವನ್ನು ಹಾಕಿದರು, ಹೀಗೆ ನನ್ನ ನೆಲ, ಜಲ ಪ್ರಯಾಣವು ಏಪ್ರಿಲ್‌ನಿಂದ ನವಂಬರ್ ವರೆಗೆ 37,176 ಮೈಲುಗಳಷ್ಟು ದೂರ ಕೊಂಡುಹೋಯಿತು----ತತ್ವಜ್ಞಾನ (Theosophy) ಸಂಘದ ಆ ವರ್ಷದ ಅಧಿವೇಶನವು ಡಿಸೆಂಬರ್ 27ರಲ್ಲಿ ಬನಾರಸ್‌ನಲ್ಲಿ ಪ್ರಾರಂಭವಾಯಿತು!

1910

1910ರ ಜನವರಿ 11ನೇ ದಿನ (ಜೆ. ಕೃಷ್ಣಮೂರ್ತಿಯ ಹುಟ್ಟುದಿನ) ವನ್ನು ಮೌನದಿಂದ ಕಳೆದೆವು. Central Hindu College ಇದರ ಹನ್ನೊಂದನೇ ವಾರ್ಷಿಕೋತ್ಸವವನ್ನು ಜನವರಿ 18-19-20ರಲ್ಲಿ ನಡೆಸಿದಾಗ ಬನಾರಸ್‌ನಲ್ಲಿ ಎಲ್ಲರೂ ಸಂತೋಷದಿಂದ ಇದ್ದೆವು. ಅಂದು ಹು

ಹುಡುಗಿಯರ ಶಾಲೆಯ ಮಕ್ಕಳು ತಮ್ಮ ನಿರಂತರವಾದ ಉದ್ಯೋಗಗಳಲ್ಲಿ ಮತ್ತು ಉತ್ಸಾಹದಿಂದ ಕೂಡಿ ಇತರ ಜನಕ್ಕೆ ಮಾರ್ಗದರ್ಶಕರಾದರು, ಕುಮಾರಿಯರಾದ ಅರುಂಡೇಲ್ ಮತ್ತು ಪಾಲ್ಮರ್ ಇವರು ತಮ್ಮ ಶಾಲಾಮಕ್ಕಳ ಬಗ್ಗೆ ನ್ಯಾಯವಾದ ಹೆಮ್ಮೆಯನ್ನು ಹೊಂದಿದ್ದರು. ಹುಡುಗರ ಶಾಲೆಯ ಮತ್ತು ಕಾಲೇಜಿನ ವಿದ್ಯಾರ್ಥಿಗಳು ಅದೇ ರೀತಿ ೧೯ ಮತ್ತು ೨೦ನೇ ತಾರೀಖಿನಂದು ಮೆರವಣಿಗೆ ಹೊರಟು ಇದೇ ಉತ್ಸವಕ್ಕೆ ಕಳೆಗೊಟ್ಟರು.

ಮದ್ರಾಸು ರಾಜಭವನದಲ್ಲಿ ಮಾರ್ಚ್ ೧೬ರಂದು Prevention of Cruelty to Animals ಇದರ ಬಗ್ಗೆ ಸ್ಥಾಪಿಸಲಾದ ಸಂಸ್ಥೆಯ ಆಶ್ರಯದಲ್ಲಿ ನಡೆದ ಸಭೆಯಲ್ಲಿ ಮದ್ರಾಸು 'ಅಧಿಕೃತ ಗವರ್ನರ್ ಸರ್ ಆರ್ಥರ್ ಲಾಲಿ ಇವರು ಶ್ರೀಮತಿ ಬೆಸೆಂಟ್ ಬಗ್ಗೆ ಹೀಗೆಂದರು:—

"ನಾವು ಈಗ ತಾನೇ ಕೇಳಿದ ಶ್ರೀಮತಿ ಬೆಸೆಂಟ್ ಇವರ ಸ್ಫೂರ್ತಿದಾಯಕ ಭಾಷಣವನ್ನು ಕೇಳಿದ ಮೇಲೆ ನಾನು ಏನನ್ನು ತಾನೇ ಹೇಳಲಿ? ಅವರ ಅಸಾಮಾನ್ಯ ವಾಗ್ಬಲದ ಮಹತ್ವವು ನಿಮಗೆ ತಿಳಿದೇ ಇದೆ, ಜನತೆಯನ್ನು ಬಹು ದೊಡ್ಡ ಸಾಹಸಕ್ಕೆ, ಉದಾತ್ತ ಧ್ಯೇಯಕ್ಕೆ ಮತ್ತು ಭಾವನೆಯ ಅತಿ ಉನ್ನತ ಮಟ್ಟಕ್ಕೆ ಏರಿಸಲು ಅವರು ಈ ರೀತಿ ಉದ್ರೇಕದಿಂದ ಮನವಿ ಮಾಡುತ್ತಾ ಬಂದುದನ್ನು ನಿಮಗೆ ನಾನು ಹೇಳಬೇಕಾಗಿಲ್ಲ. ಈ ತತ್ವಜ್ಞಾನ ಸಂಸ್ಥೆಯ ಪರವಾಗಿ ಅವರಿತ್ತ ಅಮೋಘವಾದ ಭಾಷಣಕ್ಕೆ ನಾನು ಅವರಿಗೆ ವಂದಿಸುತ್ತೇನೆ. ಅವರ ಮಾತುಗಳು ಈ ಸಭೆಯಲ್ಲಿರುವ ಎಲ್ಲಾ ಗಂಡಸು ಮತ್ತು ಹೆಂಗಸರಿಗೂ ಸ್ಫೂರ್ತಿಯುತ್ತಿದೆಯೆಂದು ನಾನು ಭಾವಿಸುವೆನಲ್ಲದೆ ಅವರ ಈ ಕರೆಸ್ವರವು ಈ ಸಭಾಂಗಣದ ಹೊರಗೂ ಬಹುದೂರಕ್ಕೆ ಪ್ರತಿಧ್ವನಿಸಲಿ, ಎಂದು ಇಚ್ಛಿಸುವೆನಲ್ಲದೆ ಇನ್ನೂ ಹಲವು ಜನರನ್ನು ಈ ಪ್ರಾಮುಖ್ಯವಾದ ಕಾರ್ಯಕ್ರಮದಲ್ಲಿ ಭಾಗಿಗಳಾಗಿ ಸಹಕರಿಸುವಂತೆ ಕೇಳಿಕೊಳ್ಳುತ್ತೇನೆ."

ಮಾರ್ಚ್ 17 ರಂದು ಅಡೆಯಾರ್‌ನಲ್ಲಿ Leadbeater Chambers ಎಂಬುದಾಗಿ ಬಂದ ವಿದ್ಯಾರ್ಥಿ ಭವನವನ್ನು ಶ್ರೀಮತಿ ಆನಿ ಬೆಸೆಂಟ್ ಇವರು ತೆರೆದರು, ಅದು ನಮ್ಮ ಮಿತ್ರ ಶ್ರೀ ಸಿ. ಆರ್. ಹಾಪ್ ಇವರ ಕೊಡುಗೆಯಾಗಿತ್ತು. ಅದನ್ನು ಬೆಳಿಗ್ಗೆ ೧೧ ಘಂಟೆಗೆ ಶುಭಮುಹೂರ್ತಕ್ಕೆ ಸರಿಯಾಗಿ ಉದ್ಘಾಟಿಸಲಾಯಿತು. - - - - ಮಾರ್ಚ್ ೧೨ ರಂದು ಅಧ್ಯಕ್ಷೆ ಬೆಸೆಂಟ್ ಬನಾರಸ್‌ಗೆ ಹೊರಟರು; ಉತ್ತರ ಹಿಂದೂಸ್ಥಾನದಲ್ಲಿ ತತ್ವಜ್ಞಾನ, ವಿದ್ಯೆ ಮತ್ತು ಹಿಂದೂಮತದ ವಿಷಯವಾಗಿ ಭಾಷಣಗಳನ್ನು ಕೊಡುತ್ತಾ ಸಂಚರಿಸಿದರು. ಮೇ ತಾರೀಕು ೫ರಲ್ಲಿ ಆ ವಿಚಾರವನ್ನು ಹೀಗೆ ಬರೆದರು:—

"---ಹಿರಿಯ ಸದಸ್ಯರು ಕಿರಿಯರಿತ್ತ ಸಲಹೆಗಳನ್ನು
" ನಿರ್ಲಕ್ಷ್ಯವಾದುದೆಂದು ತಿರಸ್ಕರಿಸಬಾರದು; ಅವರು ತಮಗಿಂತ ಕಿರಿಯ
" ರಿಗೆ ಎಲ್ಲಾ ಸಹಕಾರಗಳನ್ನು ಕೊಡಬೇಕು; ಭವಿಷ್ಯವು ಕಿರಿಯ ಸ
" ದಸ್ಯರ ಕೈಯಲ್ಲಿ ಇದೆ, ಅದುದರಿಂದ ಅವರ ಕಾರ್ಯೋತ್ಸಾಹಗಳು
" ನಮ್ಮ ಕೆಲಸಕ್ಕೆ ಬೇಕಾಗಿವೆ. ಆದರೆ ಹಿರಿಯರು ಬಹಳ ಕಾಲದ ಪ
" ರಿಸ್ಥಿತಿಯಲ್ಲಿ ಸಾಧಿಸಿ ಪಡೆಸಿಕೊಂಡು ಬಂದುದರಿಂದ ಕಿರಿಯರು
" ಇಂದಿಗೆ ಅದನ್ನು ಅನುಭವಿಸುತ್ತಿದ್ದಾರೆಯೆಂದು ತಿಳಿಯಬೇಕು,
" ಹಾಗಿಲ್ಲದಿದ್ದರೆ ಅವರು ಇಂದು ಅಷ್ಟು ಅನುಕೂಲಕರ ಜೀವನವನ್ನು
" ನಡೆಸುತ್ತಿರಲಿಲ್ಲ, ಆ ಕಾರಣದಿಂದ ಹಿರಿಯರ ಪರಿಶ್ರಮವನ್ನು ಕೇ
" ವಲ ಕೃತಘ್ನತೆಯಿಂದ ನಿರ್ಲಕ್ಷಿಸಬಾರದು ---ನಮ್ಮ ಪ್ರಧಾನ
" ಕಚೇರಿಯಲ್ಲಿ ಎಲ್ಲವೂ ಸುಗಮವಾಗಿ ನಡೆಯುತ್ತಿದೆ, ಈ ತಿಂಗಳು
" ಬೆನಾರಸ್‌ನಿಂದ ತುಂಬಾ ಜನರು ಇಲ್ಲಿಗೆ (ಅಡಿಯಾರ್‌ಗೆ) ತಮ್ಮ ರಜೆ
" ಯನ್ನು ಕಳೆಯಲು ಬರುತ್ತಾರೆ. ಅಡಿಯಾರ್ ಮತ್ತು ಬೆನಾರಸ್ಸನ್ನು
" ಒಂದುಗೂಡಿಸಬೇಕೆಂಬುದು ಸರಿಯೇ ಆಗಿದೆ---,"

1910 ರ ಮೇ ತಿಂಗಳು 6 ರಂದು ೭ನೇ ಎಡ್ವರ್ಡ್ ದೊರೆಯು ಮೃತನಾದನು ----ನಮ್ಮ ಕೇಂದ್ರವು ಸಂತಾಪವನ್ನು ಸೂಚಿಸಿತು, ಜೂನ್ ೧೬ರಲ್ಲಿ ನಾನು ಅಡಿಯಾರನ್ನು ಬಿಟ್ಟು ದಕ್ಷಿಣ ಬೆಟ್ಟಸಾಲುಗಳ ಬದಿಯಲ್ಲಿ ರೈಲು ನಿಲ್ದಾಣದಿಂದ ೨೭ ಮೈಲು ದೂರವಿರುವ ಕೋತಗಿರಿ ಎಂಬ ಚಿಕ್ಕ ಪಟ್ಟಣಕ್ಕೆ ಹೋದೆನು, ಆ ಸ್ಥಳವನ್ನು ಒಂದು ಮೋಟಾರು ಬಸ್ಸಿನ ಮೂಲಕ ತಲುಪಲಾಯಿತು, ಆ ಸುಂದರ ಊರಿಗಾಗಿ ಹೋಗುವಾಗ ಜನವಿಲ್ಲ ಏರುತ್ತ, ತಿರುಗುತ್ತ, ಹೋಗುವ ಗಾಡಿಯನ್ನು ನೋಡುತ್ತಿದ್ದರು ----ಈ ವರ್ಷದ ಬೇಸಿಗೆಯಲ್ಲಿ ಹೆಚ್ಚು ಬಾಧೆಗಳನ್ನು ಕೊಡಲಾಗಲಿಲ್ಲ. ನೀಲಗಿರಿಯ ಜಿಲ್ಲಾ ತತ್ವಜ್ಞಾನ ಸಮ್ಮೇಳನದ ಅಧ್ಯಕ್ಷತೆಯನ್ನು ನಾನು ವಹಿಸಿದ್ದೆನು, ಈ ವರ್ಷ ಆಗಸ್ಟ್ 19 ರಿಂದ 22 ರ ವರೆಗೆ ಆ ಸಭೆಯು ಸುಂದರ ಬೆಟ್ಟ ಪ್ರದೇಶವಾದ ಮತ್ತು ರೈಲು ನಿಲ್ದಾಣದಿಂದ ಎಂಟು ಮೈಲು ದೂರವಿರುವ ವಡಸವೆಳ್ಳಿಯಲ್ಲಿ ಜರುಗಿತು ---- ನಾವು ರೈಲು ನಿಲ್ದಾಣದಲ್ಲಿ ಇಳಿದ ಕೂಡಲೇ ನೂರಾರು ಜನರು, ಹೆಂಗಸರು ಮಕ್ಕಳೇ ಮೊದಲ್ಗೊಂಡು ಹೂ, ತೆಂಗಿನಕಾಯಿ, ನಿಂಬೆಹಣ್ಣು, ವೀಳ್ಯದೆಲೆ ಇತ್ಯಾದಿಗಳ ಸಹಿತವಾಗಿ ನಮ್ಮನ್ನು ವಹಿತ್ತಿದರು ----ನಿಷ್ಕಲ್ಮಷ ಪ್ರೀತಿಯು ಅವರಲ್ಲಿ ಇರುವುದನ್ನು ಕಣ್ಣಾರೆ ಕಂಡೆನು.

ಮದನಪಲ್ಲಿ ಶಿಬಿರ (Lodge)ವು ಬಹಳ ಹಳೆಯದಾಗಿದೆ ಕರ್ನಲ್ ಆಲ್ಕಾಟ್ ಹಿಂದೂ ಹುಡುಗರ ಸಂಸ್ಥೆಯು ಮೊದಲ ಪತ್ರವನ್ನು "ಆರ್ಯನ್ ಬಾಲಬೋಧಿನಿ" ಎಂಬ ಹೆಸರಿನ ಪತ್ರಿಕೆಯನ್ನು ಅಲ್ಲಿ ನೋಡಿದೆನು ---- ಹೆಂಗಸರು ಅಲ್ಲಿ ಉತ್ಸಾಹದಿಂದ ನೆರೆ

ಮತ್ತೇ ಅಲ್ಲಿ ಹಬ್ಬಿಗೆ ಕಳುಹಿಸುತ್ತಿದ್ದರು? ಭಾರತದ ಸ್ತ್ರೀಯರನ್ನು ಮನಂ ದಕ್ಕೆ ತರಲು ಪ್ರವರ್ತಿಸಿದ ಮಾತುಕರ್ತೆಯಾದಂತ ಒಂದೇ ದೇಶೀಯ ಸ್ತ್ರೀ ಇದ್ದಿದ್ದರೆ ಬಹುಶಃ ತತ್ತ್ವಜ್ಞಾನ (Theosophy) ಸಂಸ್ಥೆಯು ಹೆಂಗಸ ರನ್ನು ತಮ್ಮ ಧ್ಯೇಯದಲ್ಲಿ ಗೆದ್ದರೆ ಹಿಂದೂಸ್ಥಾನವನ್ನೇ ಅದು ಗೆದ್ದಂ ತಾಯಿತು; ಇಂಗ್ಲಿಷ್ ವಿದ್ಯಾವಂತ ಭಾರತೀಯರನ್ನು ಮಾತ್ರವಲ್ಲ!

ನಾವು ನನ್ನ ಜತೆಗಾರರು ಮತ್ತು ಅವರ ಮಕ್ಕಳೊಂದಿ ಗೂಡಿ ಡಿಸೆಂಬರ್ ೭ನೇ ರಂದು ಮದ್ರಾಸಿನಿಂದ ಕಲ್ಕತ್ತಕ್ಕೆ ಹೊರ ಟೆವು. ದಾರಿಯಲ್ಲಿ ರೈಲು ನಿಲ್ದಾಣಗಳಲ್ಲಿ ದಯಾಳುಗಳಾದ ಮಿ ತ್ರರು ನಮಗೆ ಹಾಲು ಹಣ್ಣುಗಳನ್ನು ತಂದು ಕೊಟ್ಟರು ---ಬನಾ ರಸ್ಸಿನಲ್ಲಿ ನೂರಾರು ಜನರು ಸೇರಿ ನಮ್ಮನ್ನು ಸ್ವಾಗತಿಸುತ್ತಾ ದೇವತೆಗಳಂತೆ ನಮ್ಮ ಮೇಲೆ ಹೂಮಳೆಗರೆದರು. ಜಯಘೋ ಷ ನಿರಂತರವಾಗಿ ನಮ್ಮ ಗಾಡಿಯನ್ನು ಎಳೆಯುತ್ತಾ "ಶಾಂತಿಕುಂ ಜ"ಕ್ಕೆ ನಮ್ಮನ್ನು ಶಾಲಾ ಮತ್ತು ಕಾಲೇಜು ಹುಡುಗರು ತಂ ದು ಬಿಟ್ಟರು ----ತಾರೀಖು 1 ರಲ್ಲಿ (ಡಿಸೆಂಬರ್) ನನ್ನ ಹುಟ್ಟು ದಿನವಾದುದರಿಂದ ಒಂದು ಹಬ್ಬವನ್ನೇ ನಡೆಸಿದರು; ಬಂಗಾಳೀ ಮತ್ತು ಹಿಂದೀ ನಾಟಕಗಳನ್ನು ಆಡಿದರು ----ಮಧ್ಯಾಹ್ನದ ಮೇಲೆ ನಾವು ಕಾಲೇಜು ಬಜಾರದಲ್ಲಿ ಸೇರಿ ಸಭೆ ನಡೆಸಿದಾ ಗ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಬಹಳ ಪ್ರೀತಿಯ ಮಾತುಗಳನ್ನಾಡಿದರು ----ಶಿಸ್ತು, ಧೈರ್ಯ ಮತ್ತು ಭಕ್ತಿ ಯನ್ನು ಕಲಿತು ಅದೇ ನಮ್ಮ ನಿತ್ಯದ ಧ್ಯೇಯವಾಗಬೇಕೆಂ ಬುದನ್ನು ನಾನು ಸಮರ್ಥಿಸಿದೆನು. ಬನಾರಸ್ಸಿನಲ್ಲಿ ಹದಿನೈದು ದಿನ ಇದ್ದು ಅಲ್ಲಿಂದ ಷಹರನ್‌ಪುರ, ಜಲಂಧರ್, ಲಾಹೋರ್, ಢಿಲ್ಲಿ, ಆಗ್ರಾ ಮತ್ತು ಕಾನ್‌ಪುರದಲ್ಲಿ ಸಂಚರಿಸಿದೆನು, ನವಂಬರ್ 10 ರಲ್ಲಿ ವೈ ಸ್ರಾಯ್ ಲಾರ್ಡ್ ಮಿಂಟೋ ಇವರು ಬನಾರಸ್ಸಿನಲ್ಲಿ ನಮ್ಮ ಕಾ ಲೇಜನ್ನು ಸಂದರ್ಶಿಸಿದರು, ತಾರೀಖು 14 ರಲ್ಲಿ ಕಾಲೇಜು ಸಂಸ್ಥೆಯ ಸಭೆಯನ್ನು ನಡೆಸಿ ನಾವು ಅಡೆಯಾರಿಗೆ ಹಿಂದಿರುಗಿದೆ ವು ----ಈ ವರ್ಷದ ಡಿಸೆಂಬರ್ ತಿಂಗಳು ಸ್ಮರಣೀಯವಾಗಿ ರುವುದು, ಏಕೆಂದರೆ ಶ್ರೀ ಕೃಷ್ಣಮೂರ್ತಿ ಇವರು ತಮ್ಮ ಗುರುಕೃಪೆಗೆ ಒಳಗಾಗಿ ಬರೆದ "Alcyone" ಎಂಬ ಪುಸ್ತ ಕವು ಪ್ರಕಟವಾಯಿತು ---.

1911

ರಂಗೂನಿನಲ್ಲಿ:----ಕುಮಾರಿಯರಾದ ಅರುಂಡೇಲ್, ವಿ ಲ್ಸನ್, ಶ್ರೀಮತಿ ವಾನ್ ಹೂಕ್, ಅವಳ ಮಗ, ಶ್ರೀ ಲೀಡ್‌ಬೀಟರ್, ನಾನು ಮತ್ತು ನಮ್ಮ ಇಬ್ಬರು ಭಾರತೀಯ ಮಿತ್ರರು ಕೂಡಿ ಜನವರಿ 12ರಂದು ರಂಗೂನಿಗೆ ಹೊರಟೆವು.---- ನಮ್ಮ ಸ ಭೆಗಳಿಗೆ ಸಾಕಷ್ಟು ಜನರಿರುತ್ತಿದ್ದರು, Law of Action an

Reaction - ಎಂಬುದರ ಮೇಲೆ ನಾನು ಮಾಡಿದ ಭಾಷಣವನ್ನು The Rangoon Times ಪತ್ರಿಕೆಯು ಚೆನ್ನಾಗಿ ವರದಿ ಮಾಡಿತು. ಶ್ರೀ ಎಡ್ವಿನ್ ಅರ್ನಾಲ್ಡ್ ಇವರ ಮಗನೂ ಆ ಪತ್ರಿಕೆಯ ಸಂಪಾದಕನೂ ಆದ ಶ್ರೀ ಚೆನ್ನಿಂಗ್ ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. The Light of Asia - ಇದರ ಕರ್ತೃವಿನ ಮಗನೂ ತನ್ನ ತಂದೆಯ ವಿದ್ವತ್ತನ್ನೇ ಪ್ರದರ್ಶಿಸಿದರು ನೋಡಿದಾಗ ಸಂತೋಷವಾಯಿತು ---- ೭ನೇ ತಾರೀಖಿನಂದು ಮಾಲ್ಮೀನ Moulmein - ಇದನ್ನು ಸಂದರ್ಶಿಸಿ ಏಪ್ರಿಲ್ 1ರಂದು ಪೆನ್ನಾಂಗ, ಮಾಂಡಲೇ ಮತ್ತು ಮೇಮಿಯೋ ಪಟ್ಟಣಗಳಿಗೆ ಸಂದರ್ಶನವಿತ್ತು 10ನೇ ತಾರೀಖಿಗೆ ಮದ್ರಾಸಿಗೆ ಹಿಂದಿರುಗಲು ಆರಂಭಿಸಿದೆವು, ಮೇಮಿಯೋ ರಸ್ತೆಯು ಬೆಟ್ಟಗುಡ್ಡಗಳ ಮೇಲಿದ್ದು ತುಂಬಾ ಚಳಿಯಿಂದ ಕೂಡಿತ್ತು. ರಂಗೂನಿನಲ್ಲಿ ತುಂಬಾ ದೊಡ್ಡ ವಿದ್ವಾಂಸನಾದ ಬೌದ್ಧ ಭಿಕ್ಷು ಆನಂದ ಮೆಟ್ಟೇಯ ಇವರನ್ನು ಕಂಡಿದ್ದೇ ಆಗಿತ್ತು. ಹುಟ್ಟು ಸ್ಕಾಟ್ ಜನಾಂಗದವನಾದ ಇವರು ಬೌದ್ಧ ನಿಯೋಗವೊಂದನ್ನು ಇಂಗ್ಲೆಂಡಿಗೆ ಕಳುಹಿಸುವುದರಲ್ಲಿ ಹೊರಡುವುದಲ್ಲದೆ ಅಲ್ಲೊಂದು ಬೌದ್ಧ ಸಂಘವನ್ನೂ ಸ್ಥಾಪಿಸಿದರು. ಮದ್ರಾಸಿಗೆ ನಾವು ತಾರೀಕು 14 ರಂದು ಮಾರ್ಗ ಬಂದು ತಲುಪಿದೆವು.

ಪುನಃ ಅಡೆಯಾರ್‌ನಿಂದ ಕಲ್ಕತ್ತಾ, ಬನಾರಸ್, ಬೊಂಬಾಯಿ ಎಂಬುದಾಗಿ ಪ್ರಯಾಣ ಬೆಳೆಸಿ ಯೂರೋಪಿಗೆ ಹೊರಟೆನು ---- ಏಪ್ರಿಲ್ 21 ರಂದು ಬೊಂಬಾಯಿ ಮಿತ್ರರು ನಮ್ಮನ್ನು ಬೀಳ್ಕೊಡಲು ಉತ್ಸಾಹದಿಂದ ಬಂದಿದ್ದರು ಇಲ್ಲದೆ ಜನರು ಬಹು ಸಂಖ್ಯೆಯಲ್ಲಿ ನೆರೆದು ನಮಗೆ ಶುಭಾಶಯವನ್ನಿತ್ತರು ---- ಹಡಗಿನಲ್ಲಿದ್ದ ಜನರು ಒಂದು ಭಾಷಣವನ್ನು ಮಾಡಬೇಕೆಂದು ಹೇಳಲು ನಾನು ಬೊಂಬಾಯಿ ಮತ್ತು ಏಡನ್ನಿನ ಮಧ್ಯೆ Reincarnation - ಇದನ್ನು ಕುರಿತಾಗಿ ಮಾತಾಡಿದೆನು.

ಮೇ ತಿಂಗಳು 12ರಂದು ಲಂಡನ್ನಿಗೆ ತಲುಪಿದೆವು. ಕೆಲವು ಉದಾರಿ ಮಿತ್ರರು ತಮ್ಮ ಮೂರು ತಿಂಗಳು ಕಾಲದ ನಗರ ಸಂಚಾರಕ್ಕೆ ಒಂದು ಮೋಟಾರು ಕಾರನ್ನು ನನಗಾಗಿ ಕೊಟ್ಟರು ---- ಲಂಡನ್ ನಗರವು ರಾಜನ ಪಟ್ಟಾಭಿಷೇಕದ ನಿಮಿತ್ತವಾಗಿ ತುಂಬಾ ಗದ್ದಲದಿಂದ ಕೂಡಿತ್ತು. ಮೇ 26ರಲ್ಲಿ Fabian Society ಇದರ ಆಶ್ರಯದಲ್ಲಿ England and India ಎಂಬ ವಿಷಯದ ಮೇಲೆ ಭಾಷಣವನ್ನು ಮಾಡಿದೆನು, ಶ್ರೀಮತಿ ಸಿಡ್ನಿ ವೆಬ್ ಅಧ್ಯಕ್ಷತೆ ವಹಿಸಿದ್ದರು.

ಜೂನ್ 12 ರಿಂದ 17ರ ವರೆಗೆ ಪ್ಯಾರಿಸ್‌ನಲ್ಲಿದ್ದೆನು. ಸೋರ್ಬೋನ್‌ನಲ್ಲಿ ಕೊಟ್ಟ ಭಾಷಣವು ನನಗೇನೇ ಆಶ್ಚರ್ಯವಾಗುವಷ್ಟು ಜಯಪ್ರದವಾಯಿತು, 4,000 ಜನಕ್ಕೂ ಹೆಚ್ಚು

ಹೇಳಿದ್ದರು----The Message of Giordano to the Modern World, ಈ ಭಾಷಣವು ಕಿಕ್ಕಿರಿದು ಸೇರಿದ ಸಭಿಕರನ್ನು ಹುರಿದುಂಬಿಸಿತು. 1911 ರ ಜೂನ್ 22 ರಂದು ಪಟ್ಟಾಭಿಷೇಕದ ದಿನ ನಮಗೂ ಆಮಂತ್ರಣವಿದ್ದುದು ಸಂತೋಷವೆನಿಸಿತು. ದೊಡ್ಡ ಮೆರವಣಿಗೆಯನ್ನು ನೋಡಿದೆವು ---- ಇಂಗ್ಲೆಂಡಿನ ತತ್ವಜ್ಞಾನ (Theosophy) ಸಂಸ್ಥೆಯ ಸ್ಥಳೀಯ ಅಧಿವೇಶನದ ಸಭೆಯು ಉತ್ತರಭವನದಲ್ಲಿ ನಡೆಯಿತು. ನಿವೃತ್ತರಾಗುತ್ತಿದ್ದ ಶ್ರೀಯುತ ಶಾರ್ಪ್ ಇವರ ಸೇವೆಯನ್ನು ಬಾಯ್ತುಂಬ ಎಲ್ಲರೂ ಪ್ರಶಂಸಿಸಿದರು. ಹೊಸ ಕಾರ್ಯದರ್ಶಿ ಶ್ರೀ ವೆಡ್ಜ್‌ವುಡ್ ಇವರು ತಮ್ಮ ಕಾರ್ಯಭಾರವನ್ನು ಸಂತೋಷದಿಂದ ವಹಿಸಿಕೊಂಡರು----ನನ್ನ ಭಾಷಣ ಕಾರ್ಯಕ್ರಮವೂ ಮುಗಿಯಿತು. (ಇಂಗ್ಲೆಂಡನ್ನು ನಾನು '[illegible]' ಮಾಡಿದ ಕಡೇ ಕಾಲದಿಂದ ರ "English Section" ಇದರ ಕೇಂದ್ರ ಕಚೇರಿಯು ಕಟ್ಟಡದ ಅಸ್ತಿಭಾರವನ್ನು ಸೆಪ್ಟಂಬರ್ 3ನೇ ದಿನ ಹಾಕಿದ್ದಾಗಿದೆ. ಈ ಕಟ್ಟಡವು ಈಗ The British Medical Association ಇದಕ್ಕೆ ಸೇರಿದೆ.

ನಮ್ಮ ಸಂಸ್ಥೆಯ ಕೇಂದ್ರ ಕಚೇರಿ (ಅಡೆಯಾರ್) ಮತ್ತು ಬನಾರಸ್ ಇವು ಸಮೀಪವಿದ್ದಿದ್ದರೆ ಒಳ್ಳೆಯದಿತ್ತು. ಅತ್ತಿಂದಿತ್ತ ಹೋಗಲು ಮೂರು ರಾತ್ರಿ ಮತ್ತು ಎರಡು ದಿನಗಳು ರೈಲಿನಲ್ಲಿ ಕಳೆಯಬೇಕಿದೆ. ಅದಕ್ಕೆ ತಗಲುವ ಖರ್ಚು ಬೇರೆ. ಹಿಂದೂ ವಿಶ್ವವಿದ್ಯಾಲಯದ ಕೆಲಸಕ್ಕೆ ನಾನು ಸೆಪ್ಟೆಂಬರ್ 17 ರಲ್ಲಿ ಅಲ್ಲಿದ್ದು ಅನಂತರ ಬೇರೊಂದು ಕೆಲಸಕ್ಕೆ ಮದ್ರಾಸಿನಲ್ಲಿ ಅಕ್ಟೋಬರ್ ತಿಂಗಳು 31 ರಂದು ಇರಲು ನಾನು ದಕ್ಷಿಣಕ್ಕೆ ಪ್ರಯಾಣ ಮಾಡಿದಾಗ ನನಗೆ ಈ ವಿಷಯವು ಮನಸ್ಸಿಗೆ ಹೊಳೆಯಿತು. ಬನಾರಸ್ಸು ಮತ್ತು ಮದ್ರಾಸು ಇವೆರಡು ನಮ್ಮ ಭಾರತೀಯ ಚಟುವಟಿಕೆಗಳ ಕೇಂದ್ರವಾಗಿದ್ದುವು. ಅವುಗಳ ಮಧ್ಯೆ ನಮ್ಮ ಪ್ರೀತಿ ಸಂಬಂಧಗಳು ಶಿಥಿಲವಾಗುತ್ತಿದ್ದುವು. ಬನಾರಸು ನನ್ನ ಮೊದಲನೇ ಭಾರತೀಯ ಸದನವಾಗಿತ್ತು----ನವಂಬರ್ 17 ರಂದು ನಮ್ಮ ತತ್ವಜ್ಞಾನ ಸಂಸ್ಥೆಯ 36ನೇ ಹುಟ್ಟುದಿನದ ಹಬ್ಬವನ್ನು ಮುಖ್ಯ ಕಚೇರಿ (ಅಡೆಯಾರ್) ಯಲ್ಲಿ ನಡೆಸಿದೆವು----.

1912

ಫೆಬ್ರುವರಿ 3 ರಂದು ನಾವು ಬೊಂಬಾಯಿಯಲ್ಲಿ ಹಡಗು ಹತ್ತಲು ನೂರಾರು ಜನ ನಮ್ಮ ಪ್ರೀತಿಯ ಗೆಳೆಯರು ಪುಷ್ಪಹಾರಗಳಿಂದ ನಮ್ಮನ್ನು ಬೀಳ್ಕೊಟ್ಟರು. ಸಿ. ಜಿನರಾಜದಾಸ, ಕೃಷ್ಣಮೂರ್ತಿ, ನಿತ್ಯಾನಂದ ಮತ್ತು ನಾನು ಈ ಜನಸಂದಣಿಯಿಂದ ನಮ್ಮ ಹಡಗಿನ ಕಡೆಗೆ ನಡೆದೆವು---- ಪುನಃ ಹಿಂದಿನಂತೆ ಏಡನ್‌ಗೆ ತಲುಪುವುದರೊಳಗಾಗಿ The Meaning of Theosophy ಎಂಬುದಾಗಿ ಭಾಷಣವನ್ನು ಕೊಟ್ಟೆನು. 7ನೇ

ಫೆಬ್ರುವರಿಯಂದು ಮಾರ್ಸೆಲ್ಸಿಗೆ ತಲುಪಿದೆವು ---- ಪುನಃ ಇಂಗ್ಲೆಂಡಿನಲ್ಲಿ, ಆ ನಂತರ ---- ಭೂಮಧ್ಯ ಸಮುದ್ರದ ಸುಂದರ ಸ್ಥಳಗಳಲ್ಲಿ ಸ್ವಲ್ಪ ಸಮಯವು ಶ್ರೀ ಲೆಡ್‌ಬೀಟರ್ ಮತ್ತು ಶ್ರೀ ಮ್ಯಾಕ್‌ಬೀನ್ ಇವರನ್ನು ಭೇಟಿಯಾದೆವು ---.

ಲಂಡನ್ನಿನಲ್ಲಿ ಅತಿ ದೊಡ್ಡ ಶ್ರೀಮಂತೆ ಶ್ರೀಮತಿ ಬ್ರೈಟ್ ಇವರಲ್ಲಿ ಉಳಿದುಕೊಂಡಿದ್ದೆವು. ಆದಿತ್ಯವಾರದ ಸಭೆಗಳಲ್ಲಿ ಭಾಗವಹಿಸಿ ಆ ನಂತರ ನಾವು ಕೇಂಬ್ರಿಜ್‌ಗೆ ಹೋದೆವು --- ವೇಲ್ಸ್‌ನಲ್ಲಿ ಪ್ಯಾರಿಸ್ ಮತ್ತು ಯೂರೋಪಿನ ಇತರ ದೇಶಗಳಲ್ಲಿ ಸಂಚರಿಸಿದೆವು, ಸುಂದರ ಸ್ಥಳವನ್ನು ಸಂದರ್ಶಿಸಿದೆವು. ಲೋಕದ ಅತಿ ಸುಂದರವಾದ ಸ್ಥಳಗಳಲ್ಲಿ ನಿಸರ್ಗವು ಒಂದಾಗಿದೆ ---- ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಭಾಷಣವನ್ನು ಕೊಟ್ಟೆನು. ಶ್ರೀ ಲೆಡ್‌ಬೀಟರ್ ಇವರು ಅಡಿಯಾರ್‌ಗೆ ಹೋಗಲು ಹಡಗಿನಲ್ಲಿ ಸ್ಥಳವನ್ನು ಮೀಸಲಿರಿಸಿದೆವು. ನಾನು ಅವರ ತಂದೆಯು ಅನೇಕ ಮಕ್ಕಳಿಂದ ಕರೆದುಕೊಂಡು ಬಂದ ನನ್ನ ಆಶ್ರಯದಲ್ಲಿರುವ ಇಬ್ಬರು ಮಕ್ಕಳು (ಕೃಷ್ಣಮೂರ್ತಿ ಮತ್ತು ನಿತ್ಯಾನಂದ) ಇಲ್ಲಿ ವಿಶ್ವವಿದ್ಯಾಲಯದಲ್ಲಿ ಶಿಕ್ಷಣವನ್ನು ಪಡೆಯಲು ಬಿಟ್ಟಿದ್ದೇನೆ, ಅವರನ್ನು ಹಿಂದೆ ಪಾರ್ಲಿಮೆಂಟ್ ಸದಸ್ಯನಾಗಿದ್ದ ಮಾನ್ಯ ಜೇಕಬ್ ಬ್ರೈಟ್ ಇವರ ವಿಧವೆಯ ಮೇಲ್ವಿಚಾರಣೆಯಲ್ಲಿ ಬಿಟ್ಟಿದ್ದೇನೆ ----.

ಆಗಸ್ಟ 23ರಂದು ಲಂಡನ್ ಚಾರಿಂಗ್ ಕ್ರಾಸ್ ರೈಲು ನಿಲ್ದಾಣದಿಂದ ನಾವು ಹೊರಟಾಗ ಬಹು ದೊಡ್ಡ ಜನಸಂದಣಿಯು ನಮ್ಮನ್ನು ಬೀಳ್ಕೊಡಲು ಕಾದಿತ್ತು. ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡಿನ ತತ್ವಜ್ಞಾನ ಸಂಸ್ಥೆಯ ಕಾರ್ಯದರ್ಶಿಗಳು ಸೌತಂಪ್ಟನ್ನಿನ ಕುಮಾರಿ ಗ್ರೀನ್ ಇವರು ನನ್ನನ್ನು ಮತ್ತು ಕುಮಾರಿ ಬ್ಲೆವೆಟ್ ಇವರನ್ನು ಡೋವರ್ ವರೆಗೆ ಬಿಡಲು ಬಂದರು, ಅವರ ಪ್ರೀತಿಪೂರ್ವಕವಾದ ಬೀಳ್ಕೊಡುವಿಕೆಯೊಂದಿಗೆ ಇಂಗ್ಲೆಂಡಿನ ಬಗೆಗೆ ನಮ್ಮ ಕಡೆ ನೋಟವಾಗಿದೆ ---- ಬ್ರಿಂಡಿಸಿನಲ್ಲಿ ಇನ್ನೊಂದು ಜನ ಸಂದಣಿಯು ನಮಗಾಗಿ ಕಾದಿತ್ತು ----.

ಬೊಂಬಾಯಿಯಲ್ಲಿ ನಮಗೆ ಅಭೂತಪೂರ್ವ ಸ್ವಾಗತವು ಕಾದಿತ್ತು. ನಮ್ಮ ಸಾಮಾನುಗಳನ್ನು ಒಂದೆಡೆ ಇರಿಸಿದ ಕೂಡಲೆ ನಮ್ಮನ್ನು Gaiety Theatre ಇದಕ್ಕೆ ಸಾಗಿಸಲಾಯಿತು. ಅಲ್ಲಿ ಬೊಂಬಾಯಿಯ ತತ್ವಜ್ಞಾನಿಗಳು (Theosophists) ಬಹುಸಂಖ್ಯೆಯಲ್ಲಿ ಸೇರಿದ್ದರು ---- ಅಕ್ಟೋಬರ್ 1ರಲ್ಲಿ ಬನಾರಸ್‌ನಲ್ಲಿ ನನ್ನ ಮಿತ್ರರೆಲ್ಲ ಸೇರಿ ನನ್ನ 63ನೇ ಹುಟ್ಟಿದ ದಿನದ ಹಬ್ಬವನ್ನು ಜರುಗಿಸಿದರು, ಕಾಲೇಜು ಪ್ರಾಂಗಣದಲ್ಲಿ ಸರಸ್ವತೀ ಪೂಜಾಲಯದ ಸುತ್ತಲೂ ಜನರು ಬೆಳಿಗ್ಗೆ 7.30 ಗಂಟೆಗೆ ಸೇರಿದ್ದರು.—

Cadet Corps ಇದರ ಬಾಲಕರು ನನ್ನನ್ನು ಅಲ್ಲಿಗೆ ಕರೆದೊಯ್ದರು, ಹಿಂದೂ, ಜೈನ, ಪಾರ್ಸೀ, ಬೌದ್ಧ ಮತಗಳ ಪ್ರತಿನಿಧಿಗಳನ್ನು ಪಾಲಿ, ಚೀನೀ, ಟಿಬೆಟನ್ ಮತ್ತು ಜಪಾನೀ ಭಾಷೆಗಳಿಂದ ಓದಿದರು. ಕ್ರೈಸ್ತರು, ಮಹಮ್ಮದೀಯರು, ಸಿಕ್ಕರು ಮೊದಲ್ಗೊಂಡು ಸೇರಿ ಹಬ್ಬವನ್ನು ಸರಳ ಸುಂದರವಾಗಿ ನಡೆಸಿದರು.---- ಡಿಸೆಂಬರ್ 7ರಲ್ಲಿ ಬನಾರಸದಲ್ಲಿ ಹಿಂದೂ ವಿಶ್ವವಿದ್ಯಾಲಯದ ಕಾರ್ಯಕ್ರಮವನ್ನು ಕುರಿತು ಬೃಹತ್ಸಭೆಗೆ ಭಾಷಣವನ್ನು ಮಾಡಿದೆನು.

ನನ್ನ ಆಶ್ರಯದಲ್ಲಿದ್ದ ಬಾಲಕರನ್ನು ನನ್ನ ವಶದಿಂದ ತಪ್ಪಿಸಲು ನನ್ನ ಮೇಲೆ ವ್ಯಾಜ್ಯವನ್ನು ಹೂಡಲಾಗಿತ್ತು. ಈ ಬಗ್ಗೆ ಪತ್ರವನ್ನು ನನಗೆ ೨೫ನೇ ತಾರೀಕಿನಲ್ಲಿ ಕೊಡಲಾಯಿತು. ಅದಕ್ಕೆ ಉತ್ತರವನ್ನು ನಾನು ನವೆಂಬರ್ ೬ರಲ್ಲಿ ಬರೆದೆನು---- ಮದ್ರಾಸಿನ ವಿಕ್ಟೋರಿಯಾ ಹಜಾರವು ಪ್ರತಿದಿನವೂ ನನ್ನ ಭಾಷಣಗಳನ್ನು ಕೇಳಲು ಜನರು ಕಿಕ್ಕಿರಿದು ನೆರೆಯುತ್ತಿದ್ದರು. ನೂರಾರು ಜನರು ಪ್ರತಿದಿನವೂ ಕೂರಲಿಕ್ಕೆ ಸ್ಥಳವಿಲ್ಲದೆ ಹಿಂದಿರುಗುತ್ತಿದ್ದರು---- ಮೂರು ಭಾಷಣಗಳಿಗೆ ಕೆಲವು ಕಾದಿಟ್ಟ ಸ್ಥಳವನ್ನು (reserved seats) ಮಾರಾಟ ಮಾಡಿದೆವು. ಅದರಲ್ಲಿ ದೊರೆತ ಹಣದಿಂದ ಖರ್ಚು ಕಳೆದು ಉಳಿದುದನ್ನು Prevention of Cruelty to Children - ಈ ಸಂಸ್ಥೆಗೆ ಕೊಟ್ಟೆವು.

ಅಡೆಯಾರ್‌ನಲ್ಲಿ ಎಂದಿನಂತೆ ಸಂಸ್ಥೆಯ ವಾರ್ಷಿಕ ಅಧಿವೇಶನವು ಉತ್ಸಾಹದಿಂದ ಪ್ರಾರಂಭವಾಗಿ ಡಿಸೆಂಬರ್ ೨೬ನೇ ತಾರೀಕಿನಿಂದ [illegible]ರಲ್ಲಿ ನೆರೆಯುತ್ತಿದ್ದರು---- ಅಂದು ೪:೩೦ ಘಂಟೆಗೆ ಶ್ರೀ ಜಾರ್ಜ್ ಅರುಂಡೇಲ್ ಇವರು Education as Service - ಎಂಬ ವಿಷಯದ ಮೇಲೆ ಉದ್ಬೋಧನಾ ಭಾಷಣವನ್ನು ಮಾಡಿದಾಗ MADRAS MAIL ಪತ್ರಿಕೆಯು ಸಭೆಯಲ್ಲಿ ಅಂದಾಜು ೩೫೦೦ ಜನರಿದ್ದರೆಂದು ಹೇಳಿತು. ದೊಡ್ಡ ಆಲದ ಮರದ ತಳವೇ ನಮ್ಮ ಸಭಾಂಗಣವಾಗಿದ್ದು ಅದರ ಅತಿ ವ್ಯಾಪಕ ರೆಂಬೆಗಳೇ ಮೇಲ್ಛಾವಣಿಯಾಗಿಯೂ ಬೀಳಲುಗಳೇ ಕಂಬಗಳಾಗಿಯೂ ಇದ್ದುವು----"

1913

ಈ ವರ್ಷದ ಪ್ರಾರಂಭದಲ್ಲಿ ನಮ್ಮ ಪ್ರಕಟಣಾ ಶಾಖೆಯನ್ನು The Theosophist Office ಎಂಬುದರ ಬದಲಾಗಿ The Theosophical Publishing House ಎಂಬುದಾಗಿ ಕರೆಯತೊಡಗಿದೆವು. ನನ್ನ ಆಶ್ರಯದಲ್ಲಿದ್ದ ಮಕ್ಕಳ ವಿಷಯದಲ್ಲಿ ನನ್ನ ಮೇಲೆ ವ್ಯಾಜ್ಯವನ್ನು ಹೂಡಿದ ಕಾರಣದಿಂದ ನಾನು ತತ್ವಜ್ಞಾನ ಸಂಸ್ಥೆಯನ್ನು ಅದರಿಂದ ದೂರವಿರಿಸಲು, ಮತ್ತು ನಾನು ಅದರ ಅಧ್ಯಕ್ಷೆಯಾಗಿ ಸಂಸ್ಥೆಯ ಘನತೆಯನ್ನು ಉಳಿಸಲು

ಸಾರ್ವಜನಿಕ ಚಟುವಟಿಕೆಗಳನ್ನು ಕಡಿಮೆ ಮಾಡಿದೆನು, ಭಾಷಣ ಗಳಿಗೆ ಕರೆ ಬಂದಾಗ ತಿರಸ್ಕರಿಸಿದೆನು----ಸರಕಾರೀ ಆಮಂತ್ರಣ ಗಳನ್ನು ಸ್ವೀಕರಿಸುತ್ತಿದ್ದೆನು, Royal Commission ಬಂದಿದ್ದಾಗ ಅವರಿಗಿತ್ತ ಸತ್ಕಾರ ಕೂಟಕ್ಕೆ ರಾಜಭವನಕ್ಕೆ ಹೋದೆನು---ಫೆಬ್ರುವರಿ 17ರಲ್ಲಿ ತನ್ನ 66ನೇ ವರ್ಷವನ್ನು ಪೂರ್ತಿಗೊಳಿಸುವ ಲೆಡ್‌ಬೀಟರನನ್ನು ನಾವೆಲ್ಲರೂ ಕೂಡಿ ಸತ್ಕರಿಸಿದೆವು----ಏಪ್ರಿಲ್ ೨೦ರಲ್ಲಿ ಅಡೆಯಾರಿನ ನಿವಾಸಿಗಳು ಬೇಸಿಗೆಯ ಕಾರಣದಿಂದ ನಗರವನ್ನು ಬಿಟ್ಟು ಹೊರಗಿದ್ದರಾದರೂ ಆಲದ ಮರದ ನೆರಳಿನಲ್ಲಿ ಒಂದು ಚಹಾಕೂಟವು ನಡೆದಾಗ ಡಾ. ಎಂಗ್ಲಿಷ್ ಇವರು ಒಂದು ಬಿನ್ನವತ್ತಳೆಯನ್ನು ಓದಿ ನನಗಿತ್ತರು. ಅದು ಹೀಗಿತ್ತು!—.

"ಪ್ರಿಯ ಸನ್ಮಾನ್ಯ ತಾಯಿಯೇ, ನೀವು ನಮ್ಮ ಗೌರವಕ್ಕೆ ಪಾ
"ತ್ರನಾದ ಗುರು ಶ್ರೀ ಲೆಡ್‌ಬೀಟರ್ ಮತ್ತು ನಮ್ಮ ಪ್ರೀತಿಯ ಕೃಷ್ಣಮೂ
"ರ್ತಿ ಇವರ ಪರವಾಗಿ ಮದ್ರಾಸಿನಲ್ಲಿ ಉಚ್ಚ ನ್ಯಾಯಾಲಯದಲ್ಲಿ
"ಧೀರತನದಿಂದ ವಾದಿಸಿ ಆ ರೀತಿ ತೋರಿಸಿದ ನಿಮ್ಮ ಸಾಹಸಕ್ಕೆ ಅಡೆ
"ಯಾರಿನ ನಿವಾಸಿಗಳಾದ ನಾವು ತುಂಬಾ ಪ್ರಶಂಸಿಸುತ್ತಿದ್ದೇವೆ ಎಂ
"ಬುದನ್ನು ಇಲ್ಲಿ ಸೂಚಿಸುತ್ತೇವೆ.

"ನ್ಯಾಯಾಲಯದ ತೀರ್ಪು ನಮ್ಮ ಸಂಸ್ಥೆಯ ಕೀರ್ತಿಯನ್ನು
"ಮೀರುತ್ತಿದೆ; ಅಲ್ಲದೆ ನಿಮ್ಮ ಪ್ರಭಾವ ವಿಜಯಕ್ಕೆ ನಾವು ಅಭಿನಂ
"ದಿಸುತ್ತೇವೆ. ನೀವು ನಮ್ಮ ಗುರುವೆಂಬ ಹೆಮ್ಮೆಯಿಂದ ನಾವು ಆ
"ಮಹಾಮಹಿಮರಿಗೆ ಕೃತಜ್ಞರಾಗಿದ್ದೇವೆ.'

"ಈ ವ್ಯಾಜ್ಯವು ಮೇಲ್ಮನವಿ (appeal)ಯ ರೂಪದಲ್ಲಿ ಇನ್ನೂ
"ನ್ಯಾಯಾಲಯದಲ್ಲಿ ಇರುವುದರಿಂದ ಅದು ಸಹ ನಿಮಗೆ ಜಯವನ್ನು ತ
"ರಲಿ, ನಿಮ್ಮ ವಿಧೇಯರಾದ ಮತ್ತು ವಿಶ್ವಾಸಪಾತ್ರರಾದ ಸಹೋದ್ಯೋ
"ಗಿಗಳು ಮತ್ತು ಅನುಯಾಯಿಗಳು!"

ಮೇಲಿನ ಬಿನ್ನವತ್ತಳೆಗೆ ಈ ಥಿಯೊಸೊಫಿ ಆಶ್ರಮದ 63 ನಿವಾಸಿಗಳು ಸಹಿ ಹಾಕಿದ್ದರು, ಇಷ್ಟರಲ್ಲಿ ಮದ್ರಾಸಿನ ವಾರ್ತಾಪತ್ರಿಕೆಗಳು Theosophical Lodges ಮತ್ತು ಸಂಸ್ಥೆಗಳ ಠರಾವುಗಳನ್ನೆಲ್ಲ ಪ್ರಕಟಿಸಲು ಆರಂಭಿಸಿದ್ದರು, ಅಲ್ಲದೆ ಆ ಎರಡು ಮಕ್ಕಳ (ಕೃಷ್ಣಮೂರ್ತಿ ಮತ್ತು ನಿತ್ಯಾನಂದ) ಸಂಬಂಧವಾಗಿದ್ದ ವ್ಯಾಜ್ಯದಲ್ಲಿ ನನ್ನ ನಿಲುವನ್ನು ಅವರು ಸಮರ್ಥಿಸಿದ್ದರು, ಮೇ ತಾರೀಖು 17ರಲ್ಲಿ ಬೊಂಬಾಯಿಯಿಂದ ಲಂಡನ್ನಿಗೆ ಹಡಗನ್ನು ಹತ್ತಿದೆನು, ಜೂನ್ ೧ರಲ್ಲಿ ಲಂಡನ್ನಿನ Queen's Hallನಲ್ಲಿ ಮಾಡಿದ ನನ್ನ ಭಾಷಣಕ್ಕೆ ತುಂಬಾ ಜನರು ನೆರೆದಿದ್ದರು----ಭಾರತೀಯ ಪತ್ರಿಕೆಗಳು ನನ್ನ ವಿಷಯವಾಗಿ ಬರೆದ ಕ್ರೂರ ಟೀಕೆಗಳು ಆಂಗ್ಲ ಜನಕ್ಕೆ ನನ್ನಲ್ಲಿದ್ದ ಗೌರವವನ್ನು ಕಡಿಮೆಮಾಡಲಿಲ್ಲ, ಹೋರಾಟವಾಗಿದ್ದ ಮದ್ರಾಸಿನ ವಾತಾವರಣದಿಂದ ಹೊರಗೆ ಪುನಃ ನಾನೊಮ್ಮೆ ಮಾನವ

ಯಿಂದು ನನ್ನನ್ನು ಕಾಣುವ ಈ ಆಂಗ್ಲ ಮಾತಾಪಿತೃಗಳಿಗೆ ಬಂದುದು ನನಗೆ ತೃಪ್ತಿಯನ್ನುಂಟುಮಾಡಿತು.

Abolition of Vivisection - ಎಂಬುದಾಗಿ ಪ್ರಾಣಿಗಳನ್ನು ಕೊಲ್ಲಕೂಡದೆಂಬುದರ ಬಗ್ಗೆ ಸ್ಥಾಪಿಸಲಾದ ಬ್ರಿಟಿಷ್ ಸಂಸ್ಥೆಗಳ ಒಂದು ಸಭೆಯು ಜೂನ್ ೯ರಲ್ಲಿ ಲಾರ್ಡ್ ಲ್ಯಾನಿಂಗ್ಟನ್‌ರ ಅಧ್ಯಕ್ಷತೆಯಲ್ಲಿ ಕೆನ್ಸಿಂಗ್‌ಟನ್ ಪುರಭವನದಲ್ಲಿ ನಡೆಯಿತು. ವಿಜ್ಞಾನ ಅಥವಾ ಪ್ರಾಣಿಶಾಸ್ತ್ರದ ಹೆಸರಿನಲ್ಲಿ ಪ್ರಾಣಿಹಿಂಸೆಯನ್ನು ಮಾಡುವುದಕ್ಕೆ ವಿರೋಧವಾಗಿ ಮಾತಾಡಿದವರಲ್ಲಿ ನಾನೊಬ್ಬಳಾಗಿದ್ದೆನು. ಜೂನ್ ೧೪ ರಿಂದ ೧೮ರ ವರೆಗೆ The Theosophical European Federation - ಸಭೆಯಲ್ಲಿ (ಸ್ಟಾಕ್‌ಹೋಮ್‌ನಲ್ಲಿ) ಭಾಗವಹಿಸಿದೆನು ---- ಜೂನ್ ೨೩ರಂದು ಯೂರೋಪಿನಿಂದ ಹಿಂದೂಸ್ಥಾನಕ್ಕೆ ಹಿಂದಿರುಗಿದೆನು.

ಕೋರ್ಟ್ ವ್ಯವಹಾರಗಳಿದ್ದರೂ ಪುನಃ ಭಾರತೀಯರ ಹಿತವನ್ನು ಸೇವಿಸುವುದೇ ಸಂತೋಷವಾಗಿದೆ. ನನಗೆ ಗೊತ್ತು, ಅಥವಾ ಗೊತ್ತಿಲ್ಲದೇ ಇರಲಿ, ಭಾರತೀಯರು ಅನೇಕರು ನನಗೆ ಆಕರ್ಷಿತರಾಗಿದ್ದಾರೆ, ತತ್ವಜ್ಞಾನ (Theosophy) ಸಂಸ್ಥೆಯ ಮತ್ತು ನಾನು ಸಾಕಿದ ನನ್ನ ಮಕ್ಕಳ ಎರಡು ಹುಡುಗರ (ಕೃಷ್ಣಮೂರ್ತಿ ಮತ್ತು ನಿತ್ಯಾನಂದ) ಸಲುವಾಗಿ ನಾನು ವ್ಯಾಜ್ಯಗಳನ್ನು ಹೂಡಿದಾಗ ನಾನು ಭಾರತೀಯರಿಗೆ ದೂರಾಗಿ ಇಂದು ಸ್ವಾಭಿಪ್ರಾಯಕ್ಕೊಳಗಾಗಿ ನಾನು ಹೀಗೆ ಮನೋವೇದನೆಗೊಳಗಾಗುವೆನೆಂದು ಭಾವಿಸಿರಲಿಲ್ಲ ---- ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ - ಆ ಹುಡುಗರ ತಂದೆಯು ಹೂಡಿದ ವ್ಯಾಜ್ಯದ ಸಂಬಂಧವಾಗಿ ನ್ಯಾಯಾಸ್ಥಾನಕ್ಕೆ ಹೋಗುತ್ತಲೇ ದಿವಸಗಳು ಕಳೆದುಹೋದುವು.

ಅಕ್ಟೋಬರ್ ೧ರಲ್ಲಿ ಪುನಃ ಹುಟ್ಟುದಿನ. ನನ್ನನ್ನು ಪ್ರೀತಿಸುವವರಿಗೆ ನನ್ನ ಸಂದೇಶವು ಹೀಗಿದೆ:- "ಶಕ್ತಿವಂತರಾಗಿ, ಧೈರ್ಯಶಾಲಿಗಳಾಗಿ ಮತ್ತು ಸತ್ಯವಂತರಾಗಿ ಇರಿ."

ನನ್ನ ಇತರ ಕಾರ್ಯಕಲಾಪಗಳಲ್ಲಿ ಮತ್ತು ಸಮಾಜ ಸುಧಾರಣೆಯ ವಿಷಯವಾಗಿ ಎಂಟು ಭಾಷಣಗಳನ್ನು ಏರ್ಪಡಿಸಿದೆನು, ಮದ್ರಾಸಿನ ಪ್ರಾಮುಖ್ಯ ವಿದ್ವಾಂಸರು ಮತ್ತು ಮುಂದಾಳುಗಳು ಬೇರೆ ಬೇರೆ ದಿವಸಗಳಲ್ಲಿ ಅಧ್ಯಕ್ಷತೆಯನ್ನು ವಹಿಸಿದರು. ಅಕ್ಟೋಬರ್ ೧೮ ರಿಂದ ೨೭ರ ವರೆಗೆ ಮಧುರೆ ಮತ್ತು ತಿರುಚಿನಾಪಳ್ಳಿಗಳಿಗೆ ಹೋದೆವು. ಮಧುರೆಯ ಜನರು ನಮ್ಮನ್ನು ಅಂಬಾರಿಯಲ್ಲಿ ಕೂರಿಸಿ ಸ್ವಾಗತಿಸಿದರು. ವಾದ್ಯ ಸಂಗೀತಗಳಿಂದ ಇಡೀ ಪಟ್ಟಣವೇ ನಾದಮಯವಾಗಿತ್ತು. ಅಲ್ಲಿ ಒಂದೆರಡು ಸಭೆಗಳಲ್ಲಿ ಭಾಗವಹಿಸಿ ಮತ್ತು ಮಾತಾಡಿ ತಿರುಚಿನಾಪಳ್ಳಿಗೆ ಬಂದೆವು ---- ಮಾನ್ಯ

ವೈಸ್ರಾಯ್ ಹಾರ್ಡಿಂಜ್ ಮತ್ತು ಶ್ರೀಮತಿ ಹಾರ್ಡಿಂಜ್, ಇವರು ಮದ್ರಾಸಿಗೆ ಬಂದಿದ್ದಾಗ ಅಡೆಯಾರ್‌ನ ನಿವಾಸಿಗಳು ಆ ಸಂಬಂಧವಾಗಿ ರಾಜಭವನದಲ್ಲಿ ನಡೆದ ಕೂಟಗಳಲ್ಲಿ ಹಾಜರಿದ್ದರು ---- ವಿಶ್ವವಿದ್ಯಾಲಯದ ಗ್ರಂಥಭಂಡಾರದ ಉತ್ತರಭಾಗವನ್ನು ತೆರೆದಾಗ ನಾನೂ ಆಹ್ವಾನಿಸಲ್ಪಟ್ಟಿದ್ದೆನು. ಪ್ರಪಂಚದ ಇತರ ಭಾಗಗಳಲ್ಲಿರುವ ಮಿತ್ರರು ನನ್ನ ವ್ಯಾಜ್ಯದ ಬಗ್ಗೆ ಏನಾಯಿತೆಂದು ಕೇಳಿ ಬರೆಯುತ್ತಾರೆ; ಅವರಿಗೆಲ್ಲ ಬರೆದು ತಿಳಿಸಿದ್ದೇನೆ-: ಆ ಎಲ್ಲ ವಿಷಯವಾಗಿ ಈಗ ಹೆಚ್ಚು ಹೇಳಲಾರೆನು.

1914.

ಹಿಂದಿನ ವರ್ಷ (1913) ಕೇವಲ ಮನೋವೇದನೆಗೆ ಕಾರಣವಾಗಿದ್ದ ಅವಧಿಯಾಗಿತ್ತು. ನನ್ನ ಹೊಸ ವಾರಪತ್ರಿಕೆಯಾದ The Commonweal ಇದರ ಮೊದಲ ಸಂಚಿಕೆಯು ಶುಭಹಾರೈಕೆಗಳೊಡನೆ ಇದೀಗ ಪ್ರಕಟವಾಗಿದೆ. ಅದರ ಮೊದಲ ಸಂಚಿಕೆಯಲ್ಲಿ "Our Policy" ಎಂಬುದಾಗಿ ಒಂದು ಸಂಪಾದಕೀಯವು ಇತ್ತು.

ಏಪ್ರಿಲ್ 3 ರಲ್ಲಿ ಬೊಂಬಾಯಿಯಲ್ಲಿ National Education- ಇದನ್ನು ಕುರಿತು ಮಾತಾಡಿದೆನು. ಅಡೆಯಾರ್ ಪುಸ್ತಕ ಭಂಡಾರಕ್ಕೆ ಓರ್ವ ಬ್ರಾಹ್ಮಣ ಮತ್ತು ಓರ್ವ ಪಾರ್ಸಿ ಬಹು ಬೆಲೆಬಾಳುವ ಉಡುಗೊರೆಗಳನ್ನಿತ್ತರು ---- ಲಂಡನ್ನಿಗೆ ಹೋಗಲು ಹಡಗನ್ನು ಹತ್ತಿದೆನು. ನನ್ನ ಗುರುವಿನ ಪವಿತ್ರವಾದ ಮತ್ತು ಪ್ರಿಯವಾದ ಮಾತೃಭೂಮಿಯನ್ನು ಈಗ ಕೆಲವು ದಿವಸಗಳಿಗೆ ತೊರೆಯುವೆನು ---- ಮೇ ತಿಂಗಳು 7 ರಲ್ಲಿ ನಾವು ಡೋವರ್ ಇಳಿದು ಲಂಡನ್ ರೈಲು ನಿಲ್ದಾಣಕ್ಕೆ ತಲಪಿದಾಗ ಸುಮಾರು 300 ಜನರು ನಮಗಾಗಿ ಕಾದು ನಿಂತಿದ್ದರು.

ಮೇ ತಾರೀಕು ೮ ರಲ್ಲಿ ಪಿಲ್‌ಸ್ಬ್ಯ ಕಾರಭವನದಲ್ಲಿ ತತ್ವಜ್ಞಾನಿಗಳ ದೊಡ್ಡ ಸಭೆಯು ನಡೆಯಿತು, ಉಪಾಧ್ಯಕ್ಷ A. P. Sinnett ಇವನು ಅಧ್ಯಕ್ಷಸ್ಥಾನದಿಂದ ಬಹು ಚೆನ್ನಾಗಿ ಭಾಷಣವನ್ನು ಮಾಡಿದನು. 10ನೇ ಸೋಮವಾರ ದಿನ ನನ್ನ ವ್ಯಾಜ್ಯದ ಬಗ್ಗೆ ಮನವಿ (appeal) ಯನ್ನು ನ್ಯಾಯಾಲಯದಲ್ಲಿ ಪರಿಶೀಲಿಸುವ ದಿನವಾಗಿತ್ತು ---- ಮೇ 20 ರಂದು ಗ್ರಾಹಾಂ ಪೋಲ್, ವೆಡ್ಜ್‌ವುಡ್, ಬ್ರ್ಯಾಂಕ್ಸ್, ಕೃಷ್ಣಮೂರ್ತಿ ಮತ್ತು ನಾನು ಪ್ಯಾರಿಸಿಗೆ ಹೋಗಿ ಅಲ್ಲಿಂದ ಸ್ವಿಟ್ಜರ್‌ಲ್ಯಾಂಡ್, ಹಾಲೆಂಡ್, ಬೆಲ್ಜಿಯಂ ಮತ್ತು ಪ್ಯಾರಿಸ್ಸಿಗೆ ಹೋದೆವು ---- ಹಲವು ಸಭೆಗಳಲ್ಲಿ ಭಾಗವಹಿಸಿದೆವು. Co-Freemasonry ಸಂಸ್ಥೆಗಳಲ್ಲೂ ಮಾತಾಡಿದೆವು ---- ಜೂನ್ 18 ರಲ್ಲಿ ಲಂಡನ್ನಿಗೆ ಹಿಂದಿರುಗಿದನಂತರ The Yoga Philosophy- ಇದರ ವಿಷಯವಾಗಿ ಮಾತಾಡಿದೆನು, ---- ಹಿಂದೂ ತತ್ವಶಾಸ್ತ್ರವನ್ನು ಕುರಿತು ಮಾತಾಡುವಾಗ ಇಂಗ್ಲೆಂಡಿನ ಸುಸಂಸ್ಕೃತರೂ ವಿದ್ಯಾವಂತರೂ ತೋರಿಸಿದ ಅಭಿರುಚಿಯು ಬಹಳ ಹರ್ಷಕರವಾಗಿತ್ತು.. ಹತ್ತು ದಿನಗಳಲ್ಲಿ ಬ್ರೈಟನ್,

ಮತ್ತು ಬೇರೆ ಕಡೆಯಲ್ಲಿ ಸಂಚರಿಸಿ ಒಟ್ಟಾಗಿ ಹನ್ನೆರಡು ಭಾಷಣಗಳನ್ನು ಕೊಟ್ಟುದು ಒಳ್ಳೆಯ ಸಾಧನೆಯೇ ಆಗಿತ್ತು.

ಇಂಗ್ಲೆಂಡನ್ನು ಬಿಡುವ ಮುನ್ನ ಕೆಲವು ದಿನ ನಾನು ಬಿಡುವಿಲ್ಲದ ಕೆಲಸದಲ್ಲಿ ನಿರತಳಾಗಿದ್ದೆನು. ಜೂಲೈ 11ರಲ್ಲಿ ಸ್ವಸ್ಥಳದಲ್ಲಿ (ಅಡ್ಯಾರ್) ಇದ್ದೆನು. ನನ್ನ ಸ್ವಂತ ಹಣದಿಂದ 1841ರಷ್ಟು ಹಿಂದೆಯೇ ಸ್ಥಾಪಿತವಾದ The Madras Standard-ಪತ್ರಿಕೆಯನ್ನು ಕೊಂಡುಕೊಂಡೆನು----ಅದರ ಹೆಸರನ್ನು New INDIA ಎಂದು ಬದಲಾಯಿಸಿದಲ್ಲದೆ 1100 ಪ್ರತಿಗಳಂತೆ ಆ ವರೆಗೆ ಅಚ್ಚಾಗುತ್ತಿದ್ದ ಆ ಪತ್ರಿಕೆ ಆಗಸ್ಟ 15ಕ್ಕೆ 5,000 ಪ್ರತಿಗಳಷ್ಟು ಮುದ್ರಣವಾಗಿ ಪ್ರಚಾರವಾಯಿತು.

ವಿದೇಶಗಳ ಸಾಮ್ರಾಜ್ಯಗಳಲ್ಲಿ ಯುದ್ಧದ ಕಾರ್ಮೋಡವು ಆವರಿಸಿ ಅದು ಯುರೋಪು ಖಂಡವನ್ನೆ ಸಮರಾಗ್ನಿಯಿಂದ ಹೊತ್ತಿಸಿತು, ಆ ಎಲ್ಲ ದೇಶಗಳಲ್ಲೂ ತತ್ವಜ್ಞಾನ (Theosophy) ಸಂಸ್ಥೆಗಳೂ ಅವುಗಳ ಸದಸ್ಯರೂ ಇದ್ದರು. ಆದುದರಿಂದ ಶಾಂತಿ ಮತ್ತು ಸೋದರ ಭಾವವನ್ನು ದಿನಾಂಗಗಳೊಳಗೆ ಸ್ಥಾಪಿಸಲೆಂದು ನಾವು ಶ್ರಮ ತೆಗೆದಿಟ್ಟೆವು----ಇಲ್ಲಿ ಪುನಃ ಎಲ್ಲಾ ವರ್ಗಗಳವರಿಗೆ ತತ್ವಜ್ಞಾನ ಅಂತರ್ರಾಷ್ಟ್ರೀಯ ಸಂಸ್ಥೆಯ ಅಧ್ಯಕ್ಷೆಯಾಗಿ ಆರಿಸಲ್ಪಟ್ಟೆನು. The Adyar Bulletin ಎಂಬ ಪತ್ರಿಕೆಯೂ ಮುಂದುವರಿಯಿತು. New India ಸೆಪ್ಟೆಂಬರ್ ಅಂತ್ಯಕ್ಕೆ 8,700 ಪ್ರತಿಗಳಂತೆ ಮುದ್ರಣವಾಗುತ್ತಿತ್ತು. ಇದೀ ಹಿಂದೂಸ್ಥಾನದಲ್ಲಿ ಒಂದು ಹಗಲು ಪತ್ರಿಕೆಯಾಗಿ ಪ್ರತಿಗಳ ಸಂಖ್ಯೆಯು ಏರುತ್ತಾ ಬಂದಿತು.

1915

ಮಾರ್ಚ್ 20ರಲ್ಲಿ ನಾನು ಮಧುರೆಗೆ ಹೋಗಿದ್ದೆನು, ನನ್ನ ಇತರ ಕೆಲಸಗಳ ಎಡೆಯಲ್ಲಿ, ಪ್ರಗತಿ ಹೊಂದಿದ ಈ ನಗರದಲ್ಲಿ ತತ್ವಜ್ಞಾನ (Theosophy) ಪ್ರಚಾರಕ್ಕಾಗಿ ಶ್ರಮಿಸಿದ ಶ್ರೀ ಟಿ. ನಾರಾಯಣ ಅಯ್ಯರ್ ಇವರ ಸ್ಮಾರಕವಾಗಿ ಕಟ್ಟಲ್ಪಟ್ಟ ಭಾವಚಿತ್ರ ಮತ್ತು ಶಿಲಾಶಾಸನದ ಅನಾವರಣವನ್ನು ಮಾಡಿದೆನು.

ಶ್ರೀ ಮತ್ತು ಶ್ರೀಮತಿ (ಮಹಾತ್ಮ) ಗಾಂಧಿಯವರು ಅಡ್ಯಾರನ್ನು ಸಂದರ್ಶಿಸಿದ್ದು ಸಂತೋಷದ ವಿಷಯವಾಗಿತ್ತು. ಸಮೀಪದಲ್ಲಿಯೇ ಉರೂರ್ ಗ್ರಾಮದ ಪಂಚಮರ ಶಾಲೆಯನ್ನು ಅವರು ಸಂದರ್ಶಿಸಿದರು. ಶ್ರೀ ಗಾಂಧಿಯವರು ನಮ್ಮ ವಸಂತ ಮುದ್ರಣಾಲಯವನ್ನು ತುಂಬಾ ಆಸಕ್ತಿಯಿಂದ ನೋಡಿದರಲ್ಲದೆ ಅವರೂ ಆ ಕ್ಷೇತ್ರದಲ್ಲಿ ದಕ್ಷಿಣಾಫ್ರಿಕಾದಲ್ಲಿದ್ದಾಗ ಅನುಭವವನ್ನು ಪಡೆದಿದ್ದರು. ಆಲದ ಮರದ ಕೆಳಗೆ ನಾವು ಅವರಿಗೆ ಊಟವನ್ನು ಏರ್ಪಡಿಸಿದ್ದೆವು. ಸುಮಾರು 200 ಅತಿಥಿಗಳು ಹಾಜರಿದ್ದರು.

ಬೇಸಗೆ ಕಾಲವಾದುದರಿಂದ ಅಡಿಯಾರ್‌ನ ಹಕ್ಕಿಗಳೆಲ್ಲ ಉದಕಮಂಡಲ, ಕೂನೂರು ಮತ್ತು ಕೋಟಗಿರಿಯತ್ತ ಹಾರಿಹೋಗಿದ್ದವು. ಈ ತಿಂಗಳು ನಾನು "ಊಟಿ"ಗೆ ಆ ಸ್ಥಳದ ಪರಿಚಯವನ್ನು ಪಡೆಯುವ ಉದ್ದೇಶದಿಂದ ಒಂದು ವಾರದ ಅವಧಿಗಾಗಿ ಹೋಗಿದ್ದೆನು.

ಪ್ರಮುಖ ಮಹಾರಾಷ್ಟ್ರ ರಾಜ್ಯವಾದ ಕೊಲ್ಹಾಪುರದ ತತ್ವಜ್ಞಾನ (Theosophy) ಸಂಸ್ಥೆಗಳು ಮೂರು ದಿನಗಳ ಸಮ್ಮೇಳನದ ಸಭಾಧ್ಯಕ್ಷತೆಯನ್ನು ವಹಿಸಲು ಅಲ್ಲಿಗೆ ಹೋಗಿ ಬಂದೆನು----ಶ್ರೀ ಎ.ಪಿ. ಸಿನ್ನೆಟ್ಟ್ ಇವರು ಬರೆದ The Spiritual Powers and the War - ಎಂಬ ಕಿರುಹೊತ್ತಿಗೆಯು, ನಾವಿನ್ನೂ ಹಿಂದಿನ ರೀತಿಯಲ್ಲಿ ಆಲೋಚಿಸುತ್ತಿರುವೆವು ಎಂಬುದನ್ನು ತೋರಿಸುತ್ತ.

ನಮ್ಮ ವಾರಪತ್ರಿಕೆ - The Commonweal - ಇದರ ದೇಶದ ಪ್ರಮುಖ ರಾಜಕೀಯ ವಲಯಗಳಲ್ಲೆಲ್ಲ ಪ್ರಚಾರವಾಗುತ್ತಿದೆ. How India Wrought For Freedom - ಎಂಬುದಾಗಿ ಕಳೆದ ಮೂವತ್ತು ವರ್ಷಗಳ ಕಾಂಗ್ರೆಸ್ ಸಂಸ್ಥೆಯ ಚರಿತ್ರೆಯನ್ನು ಅಧಿಕೃತ ಆಧಾರಗಳಿಂದ ಧಾರಾವಾಹಿಯಾಗಿ ಬರೆಯಲು ಪ್ರಾರಂಭಿಸಿದ್ದೇನೆ, ಜುಲೈ 31 ರಿಂದ ಆ ಲೇಖನ ಮಾಲೆಯು ಪ್ರಾರಂಭವಾಗಿದೆ----.

ನನ್ನ ಕೆಲವು ಮಿತ್ರರು ನಾನೇಕೆ ರಾಜಕೀಯಕ್ಕೆ ಕೈ ಹಾಕಬೇಕೆಂದು ಕೇಳುತ್ತಿದ್ದಾರೆ, ಇದಕ್ಕೆ ಉತ್ತರ ನನ್ನ ಜೀವನ ಚರಿತ್ರೆಯಲ್ಲಿಯೇ ಇದೆ! ಒಮ್ಮೆ ನಾನು (ಇಂಗ್ಲೆಂಡಿನಲ್ಲಿ) ರಾಜಕೀಯದಲ್ಲಿ ಇದ್ದು ಅನಂತರ ಹೆಚ್.ಪಿ. ಬ್ಲಾವಟ್ಸ್ಕಿ ಇವರ ಅಭಿಲಾಷೆಯಂತೆ ಬಿಟ್ಟೆನು, ತತ್ವಜ್ಞಾನ ಸಂಸ್ಥೆಗೆ ಸೇರಿ ಅದರ ಬಗೆ ಸಾಮಾಲೋಚನೆ ನಡೆಸಬೇಕಾಗಿದ್ದುದರಿಂದ ನನ್ನ ಆಧ್ಯಾತ್ಮಿಕ ವಿದ್ಯೆಯ ಅಭ್ಯಾಸಕ್ಕೆ ರಾಜಕೀಯ ಕೆಲಸವು ಅಡ್ಡಿಯಾಗುವುದೆಂದು ಅವರು ನ್ಯಾಯವಾಗಿಯೇ ಊಹಿಸಿದ್ದರು----ಹೀಗೂ ಕಾಲಕ್ರಮೇಣವಾಗಿ ನಾನು ಹಿಂದೂಸ್ಥಾನದ ಗತಕಾಲದ ಚರಿತ್ರೆಯನ್ನೂ ಪುರಾತನ ಕಾಲದ ಸ್ವಾತಂತ್ರ್ಯ ಸ್ವಾಭಿಮಾನಾದಿಗಳ ಬಗೆ ತಿಳಿಯಲೆತ್ನಿಸಿದೆನು. ಪಂಚಾಯತ್ತು ಆಳ್ವಿಕೆ ಕ್ರಮವು ಹಿಂದಿನ ಕಾಲದಲ್ಲಿ ಹೇಗಿತ್ತೆಂಬುದಾಗಿಯೂ ಅರಿತೆನು. ಆಗಿಂದಾಗ್ಯೆ ನಾನು ರಾಷ್ಟ್ರೀಯ ಸಮಸ್ಯೆಗಳನ್ನು ಕುರಿತಾಗಿ ಭಾಷಣಗಳನ್ನು ಕೊಡುತ್ತಿದ್ದೆನು, ಅದರೊಡನೆಯೇ ಇಂಗ್ಲೆಂಡು ಈ ಭಾರತವನ್ನೂ ಇತರ ತನ್ನ ವಸಾಹತುಗಳನ್ನೂ ತನ್ನ ಸಾಮ್ರಾಜ್ಯವಾದದ ಬಲದಿಂದ ಹೇಗೆ ತುಳಿಯುತ್ತಿದೆ ಎಂಬುದನ್ನೂ ತಿಳಿದೆನು----.

ಅಂದಿನ ನನ್ನ ವಿಚಾರಾಭ್ಯಾಸವು ಇಂದಿಗೆ ಉಪಯೋಗವಾಗುತ್ತಿದೆ, ಹಿಂದೂದೇಶಕ್ಕಾದ ಅನ್ಯಾಯ, ಕಷ್ಟನಷ್ಟಗಳು, ಹೋರಾಟಗಳಿಗೆಲ್ಲ ನಾನು ಭಾಗಿಯಾಗಿ ನನ್ನ

ಸಂತಾಪವನ್ನು ಸೂಚಿಸಿದ್ದನಲ್ಲದೆ ಚಾರ್ಲ್ಸ್ ಬ್ರ್ಯಾಡ್ಲೋರನು ನಾನು ಈ ದೇಶಕ್ಕಾಗಿ, ಹಿಂದೂಸ್ಥಾನಕ್ಕಾಗಿ ದುಡಿದುದು, ದಾದಾಭಾಯಿ ನವರೋಜಿಗೆ ಅವನ ಚುನಾವಣೆಯಲ್ಲಿ (ಇಂಗ್ಲೆಂಡಿನಲ್ಲಿ) ಸಹಕರಿಸಿದ್ದು, ನನಗೆ ಅವನು (ನವರೋಜಿ) ಹೇಳಿದಂತೆ ನಾನು ಈ ದೇಶಕ್ಕೆ ಕಾಲಿಟ್ಟಂದಿನಿಂದಲೇ ನನ್ನ ಮಾತೃಭೂಮಿಗೆ ಕಾಲಿಟ್ಟೆನೆಂಬ ಆವೇಶವು ನನ್ನಲ್ಲಿ ಉಕ್ಕಿ ಹರಿದುದೆಲ್ಲ ಹಿಂದಿನ ವಿಚಾರವಾಗಿದೆ ---- ಶಿವಾಜಿಯು ಮಹಾರಾಷ್ಟ್ರ ರಾಜ್ಯದ ಸ್ಥಾಪನೆಗೆ ನಡೆಸಿದ ಹೋರಾಟದನಂತರ ಇತ್ತೀಚೆಗೆ ಹುಟ್ಟಿದ ಬ್ರಹ್ಮಸಮಾಜ, ಆರ್ಯಸಮಾಜ, ತತ್ವಜ್ಞಾನ (Theosophy) ಸಂಸ್ಥೆಗಳೆಲ್ಲ, ಸ್ವಾಮಿ ವಿವೇಕಾನಂದರ ಸ್ಫೂರ್ತಿದಾಯಕ ನುಡಿಗಳೆಲ್ಲ, ರಾಷ್ಟ್ರೀಯ ಭಾವನೆಗೆ ಪ್ರಚೋದಕವಾಯಿತು. ಅದರನಂತರ ವಿದ್ಯಾಭಿವೃದ್ಧಿಗೆ ನಡೆಸಿದ ಕಾರ್ಯಕ್ರಮ, ಹಿಂದೂ ಕಾಲೇಜು ವಿದ್ಯಾರ್ಥಿಗಳು 'ದೇಶಾಭಿಮಾನಕ್ಕೊಳಗಾದುದು, ಭಾರತೀಯರನ್ನು ಆಂಗ್ಲರು ನಡೆಸಿಕೊಳ್ಳುತ್ತಿದ್ದ ರೀತಿ, ಗೋಖಲೆಯವರನ್ನು ಭೇಟಿಯಾದುದು, ಲಾರ್ಡ್ ಕರ್ಜನ್ ಇವನ ವೈಸ್ರಾಯಿತನ, ಮತ್ತು ನಿರಾಶಾದಾಯಕವಾದ ಅವನ ಕೊನೆಯದಿನಗಳ ಆಡಳಿತ, ಬಂಗಾಳದ ವಿಭಜನೆ ಇತ್ಯಾದಿಗಳೆಲ್ಲ ರಾಜಕೀಯವಾಗಿ ಹೊಸ ಸನ್ನಿವೇಶಕ್ಕೆ ಅವಕಾಶವಿತ್ತುವು, ಅಲ್ಲದೆ ನಾನು ಬಹಿರಂಗವಾಗಿ ರಣಾಂಗಣಕ್ಕಿಳಿದು ನನ್ನ ನಾಲಗೆಯೆಂಬ ಅಸ್ತ್ರವನ್ನು ಉಪಯೋಗಿಸಲು ಕಾಲವು ಬಂದಿದೆ ಎಂಬುದು ನಿಶ್ಚಯವಾಯಿತು!

1916

'ಅಡಿಯಾರ್ ಮತ್ತು ಬನಾರಸ್ಸನ್ನು ಉಳಿದು ತತ್ವಜ್ಞಾನ (Theosophy) ಸಂಸ್ಥೆಯ ಅಧಿವೇಶನವು ಮೊದಲ ಬಾರಿಗೆ ಬೊಂಬಾಯಿಯಲ್ಲಿ ನಡೆಯಿತು. ಆ ಸಮಾರಂಭವು ಜಯಪ್ರದವಾಯಿತಲ್ಲದೆ ತತ್ವಜ್ಞಾನ ಸಂದೇಶವು ಲೋಕವಿಖ್ಯಾತವಾದೊಂದು ಸಂಸ್ಥೆಯಿಂದ ಖಚಿತವಾಯಿತು ---- ನಾನು ಥಿಯೋಸಫಿಯನ್ನು ಕುರಿತು ನಾಲ್ಕು ಭಾಷಣಗಳನ್ನು ಕೊಟ್ಟೆನು ---- ಮಾರ್ಚ್ ತಿಂಗಳಲ್ಲಿ ನಾನು ಭಾಷಣ ಪ್ರವಾಸವನ್ನು ಬಿಡುವಿಲ್ಲದೆ ಕೈಗೊಂಡೆನು, ನನ್ನ ಹೆಸರಿನಿಂದ ಕರೆಯಲ್ಪಟ್ಟ ಒಂದು ಕಟ್ಟಡದ ಉದ್ಘಾಟನೆಯನ್ನು ಮಾಡುವ ಸಂದರ್ಭದಲ್ಲಿ ಒಂದು ಇಡೀ ದಿನವನ್ನು ಬೆಂಗಳೂರಿನಲ್ಲಿ ಕಳೆದೆನು, "ಶ್ರೀಮತಿ ಅನ್ನಿಬೆಸಂಟ ಸಂಘ"ವೆಂಬುದಾಗಿ "ಆನಿ"ಯೆಂಬುದಕ್ಕೆ ಅನ್ನವೆಂದೂ "ಬಿಸೆಂಟ್" ಎಂಬುದಕ್ಕೆ ವಸಂತವೆಂದೂ ಕರೆದುದರ ಔಚಿತ್ಯವನ್ನು ವಿವರಿಸಲಾಯಿತು --- ಅಲ್ಲಿಂದ ಶ್ರೀ ಗೋಪಾಲಕೃಷ್ಣ ಗೋಖಲೆಯ ಭಾವಚಿತ್ರವನ್ನು ಅನಾವರಣ ಮಾಡಲು ಶೋಲಾಪುರಕ್ಕೆ ಹೋದೆನು ---- NEW INDIA

ಪತ್ರಿಕೆಯ ಆಫೀಸಿನಲ್ಲಿ ದಿವಸವಿಡೀ ಕೆಲಸಮಾಡಿ ಸಾಯಂಕಾಲ Theosophical Trust ಇದರ ಕಾರ್ಯದರ್ಶಿ Mr. Wood ಇವರೊಡನೆ ಕುಂಭಕೋಣದಲ್ಲಿ ಒಂದು ಹುಡುಗಿಯರ ಶಾಲಾ ಕಟ್ಟಡಕ್ಕೆ ಅಸ್ತಿಭಾರವನ್ನು ಹಾಕಲಿಕ್ಕೆಂದು ಆ ಕಡೆ ಹೋದೆನು - - - .

The Theosophical Trust ಇದು ಮದ್ರಾಸಿನಲ್ಲಿಯ ಹುಡುಗರ ಕಾಲೇಜನ್ನು ಸ್ಥಾಪಿಸಿದ್ದಲ್ಲದೆ ಈಗ ಬನಾರಸದಲ್ಲಿ ಹುಡುಗಿಯರಿಗಾಗಿ ಒಂದು ಕಾಲೇಜನ್ನು ಸ್ಥಾಪಿಸಲು ಪ್ರಯತ್ನಿಸುತ್ತ, ಈ ಹೊಸ ಕಾಲೇಜನ್ನು ಹಿಂದೂ ವಿಶ್ವವಿದ್ಯಾಲಯಕ್ಕೆ ಸೇರಿಸಲಾಗುವುದು - - - - ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಮೂರು ದಿನಗಳ ಸಭೆಗೆ ಮೇ ತಿಂಗಳ ನಡುವಿನಲ್ಲಿ ಮದ್ರಾಸಿನಿಂದ ಅಲ್ಲಹಾಬಾದಿಗೆ ದೀರ್ಘ ಪ್ರಯಾಣವನ್ನು ಬೆಳೆಸಬೇಕಾಯಿತು, ಅಲ್ಲಿ ಅಲ್ಲಹಾಬಾದ್ ಗೋಖಲೆ ಸಂಸ್ಥೆಯ ಆಶ್ರಯದಲ್ಲಿ ಪ್ರಸಿದ್ಧ ವಕೀಲ ಮೋತಿಲಾಲ್ ನೆಹರುವಿನ ಮನೆಯ ಅಂಗಳದಲ್ಲಿ ಉತ್ಸಾಹಕರವಾದ ಒಂದು ಭಾಷಣ ಕಾರ್ಯಕ್ರಮವು ನಡೆಯಿತು - - - - ಅಲ್ಲಹಾಬಾದಿನಿಂದ ಬನಾರಸ್ಸಿನಲ್ಲಿ ಹೆಂಗಸರ ಕಾಲೇಜು ಸ್ಥಾಪನೆಯ ಸಂಬಂಧವಾಗಿ ಹೋಗಿ ಅಲ್ಲಿಂದ ಕಲ್ಕತ್ತಾ ಮತ್ತು ಪೂರ್ವ ಬಂಗಾಳದ ಢಾಕ್ಕಾದವರೆಗೂ ಹೋಗಿ ಅಲ್ಲೆಲ್ಲ ಭಾಷಣಗಳನ್ನು ಕೊಟ್ಟು ಕಡೆಗೆ ಕಲ್ಕತ್ತಾದಿಂದ ಮದ್ರಾಸಿಗೆ ಹಡಗಿನಲ್ಲಿ ಬಂದೆನು, ಅಲ್ಲಿಂದ ಕೆಲವು ದಿನಗಳಲ್ಲಿಯೇ, ಮೇ ೭ ರಂದು ಕಾಲ್ಯಾಟಿಗೆ ಹೋದೆನು - - -."

ನಮ್ಮೊಳಗೆ ಕುತೂಹಲದಾಯಕವೂ ಸ್ವಾರಸ್ಯವೂ ಆದ ಒಂದು ಪ್ರಶ್ನೆಯು ಬಂದಿತ್ತು, ಬೊಂಬಾಯಿ ಅಧಿಕತ್ವದ ಗವರ್ನರ್ ಲಾರ್ಡ್ ವೆಲ್ಲಿಂಗ್ಟನ್ ಇವರು ತನ್ನ ಪ್ರಾಂತದಲ್ಲಿ ಯಾವ ಬಗೆಯ ರಾಜಕೀಯಕ್ಕೂ ಎಡೆಗೊಡದೆ ನನ್ನನ್ನು ಸಹ ಆ ಸಂಸ್ಥಾನಕ್ಕೆ ಹೋಗಗೊಡದಂತೆ ನಿಶ್ಚಯಿಸಿದ್ದನು, ಅದು ಅವನ ಅಧಿಕಾರವಾದರೂ ಅವನ ಹಕ್ಕು ಆಗಲಾರದು - - - - ತತ್ವಜ್ಞಾನ ಸಂಸ್ಥೆಯ ಸದಸ್ಯರು ಆ ಕಾರ್ಯದಿಂದ ಒಟ್ಟು ಸೇರಿ ಸರಕಾರದ ಆ ನೀತಿಯನ್ನು ಖಂಡಿಸಿ ಒಂದು ಠರಾವನ್ನು ಬೊಂಬಾಯಿ ಪ್ರಾಂತದ ಗವರ್ನರನಿಗೆ ಕಳುಹಿಸಬೇಕಾಯಿತು, ನಾನು ಆ ಸಂಸ್ಥೆಯ ಅಧ್ಯಕ್ಷೆಯಾದರೂ ಸದಸ್ಯರು ನನಗೆ ತಿಳಿಸದೆಯೇ ಆ ರೀತಿ ನಿರ್ಣಯಿಸಿದ್ದು ವಿಶಿಷ್ಟದ ವಿಷಯವಾಗಿತ್ತು, ನನಗೆ ಅದು ತಿಳಿದೊಡನೆಯೇ ನಾನು "New India" ಪತ್ರಿಕೆಯಲ್ಲಿ ಈ ರೀತಿ ಬರೆದೆನು:-

"ನನ್ನನ್ನು ಬೊಂಬಾಯಿ ಅಧಿಪತ್ಯದಿಂದ ಬಹಿಷ್ಕರಿಸಿದ್ದ
"ಕಾರ್ಯಕ್ಕಾಗಿ ವಿರೋಧವನ್ನು ಪ್ರತಿಭಟಿಸಿ ಯಾವ ಠರಾವನ್ನೂ
"ತರಬಾರದು, ಅದೇ ರಾಜಕೀಯವಾಗಿ ನಾನು ಸರಕಾರದಿಂದ
"ತೊಂದರೆಗೆ ಒಳಗಾದರೆ ನನ್ನಲ್ಲಿ ಸಹಾನುಭೂತಿಯನ್ನು ತೋ
"ರಿಸಬಾರದು, ಏಕೆಂದರೆ ತತ್ವಜ್ಞಾನ (Theosophy) ಸಂಸ್ಥೆಗೆ

" ರಾಜಕೀಯವೂ ಇಲ್ಲ. ಅಲ್ಲದೆ ನಮ್ಮ ಸದಸ್ಯರಲ್ಲಿ ಹಲವರು ಸರಕಾರೀ
" ಉದ್ಯೋಗಿಗಳು. ಆದುದರಿಂದ ನಮ್ಮ ಶಿಬಿರ (Lodge) ದಿಂದ ಯಾವು
" ದೇ ಠರಾವನ್ನು ಬಹಿರಂಗಪಡಿಸಿದರೂ ಅದು ಶಾಸನ ಬಾಹಿರವಾದು
" ದು, ಮಾತ್ರವಲ್ಲ, ನನ್ನ ಉದ್ದೇಶಕ್ಕೆ ವಿರೋಧವಾದುದು. ಸಹಿ — ಅನಿ
" ಬೆಸೆಂಟ್, ಅಧ್ಯಕ್ಷೆ; (The Adyar Bulletin, Aug. 1916.)"

ನಮ್ಮ ಪ್ರಕಟಣೆಗಳ ಮೇಲೆ ಭದ್ರತಾ ಹಣವನ್ನು ಸರಕಾರವು ಏಕೆ ಕೇಳುತ್ತಾ ಇದ್ದಿಯದು, ಅದಕ್ಕೆ ಕಾರಣಗಳನ್ನೂ ಅವರು ಕೊಡುತ್ತಿಲ್ಲ. ನನ್ನ ಎಂಟು ವರ್ಷಗಳ ಕಾಲದ ಈ ದೇಶದ ರಾಜಕೀಯ ಜೀವನದಲ್ಲಿ ನನಗೆ ಸಂದೇಹ ಎಚ್ಚರಿಕೆಯನ್ನೂ ಅವರು ಕೊಟ್ಟಿದ್ದಿಲ್ಲ---- ಪ್ರಕಟಣೆಗಳ ರಕ್ಷಣೆಗೋಸ್ಕರ ನಾನು ಮದ್ರಾಸಿನಲ್ಲಿ ಸ್ವಂತ ಹೊಸ ಮುದ್ರಣ ಯಂತ್ರವನ್ನು ಸ್ಥಾಪಿಸಿದ್ದೇನೆ. The Commonweal ಪತ್ರಿಕೆ ಮತ್ತು ಇತರ ರಾಜಕೀಯ ಹೊತ್ತಿಗೆಗಳನ್ನೆಲ್ಲ ಅಲ್ಲಿಂದ ತೆಗೆದು ಹಾಕಿ ವಸಂತಾ ಮುದ್ರಣಾಲಯದಲ್ಲಿ ಬರಿ ಧಾರ್ಮಿಕ ಮತ್ತು ಸಾಮಾಜಿಕ ಪ್ರಕಟಣೆಗಳನ್ನು ಮಾತ್ರ ಹೊರಡಿಸಲಾಗುತ್ತಿದೆ.

ನಮ್ಮ ತತ್ವಜ್ಞಾನ (Theosophy) ಪ್ರಕಟಣೆಗಳಿಗೂ ಮದ್ರಾಸು ಸರಕಾರವು ನಿಷೇಧಾಜ್ಞೆಯನ್ನು ಹೊರಡಿಸಬಹುದೆಂದು ಬೇಸರದಿಂದ ನಮ್ಮ ಸದಸ್ಯರಿಗೆ ಮುಂಜಾಗ್ರತೆಯನ್ನು ಯಬೇಕಾಗಿದೆ, ವಸಂತ ಮುದ್ರಣಾಲಯಕ್ಕೆ ರೂ. ೫,೦೦೦ ದಂತೆ ಭದ್ರತಾ ಹಣವನ್ನು ಕಟ್ಟಲಾಗಿದೆ. ಆದರೆ Press Act ವಿಧಿಗನುಸಾರವಾಗಿ ಮುದ್ರಣಾಲಯದ ಬದಲಾಗಿ ಅವರು Commonweal- ಪತ್ರಿಕೆಯ ಮೇಲೆಯೇ ಭದ್ರತಾ ಹಣವನ್ನು ಕೇಳಬಹುದಿತ್ತು.

ಈ ವರ್ಷ ತತ್ವಜ್ಞಾನ (Theosophy) ಸಂಸ್ಥೆಗಳ ಸಮ್ಮೇಳನವು ಲಕ್ನೋದಲ್ಲಿ ನಡೆಯುವುದು, ದೊಡ್ಡ ಜನಸಂದಣಿಯು ಅಲ್ಲಿ ಸೇರಿಯುವ ಸಂಭವವಿದೆ---- ಅದರಂತೆಯೇ ಒಂದು ವಾರದ ವರೆಗಿನ ಅವಧಿಯಲ್ಲಿ ವೈಭವಪೂರ್ಣ ಲಕ್ನೋ ನಗರವು ಸಂಭ್ರಮದ ಮೇಳವನ್ನು ನೆರೆಯಿಸಿತು.

1917.

'---- ನಾನು ಯಾವಾಗ ಹೋದರೂ ಮಹಿಳೆಯರ ಸಭೆಯು ಕೂಡುವುದು ಇಂದಿನ ನಿತ್ಯದ ವ್ಯವಹಾರವಾಗಿದೆ---- ಭಾರತೀಯ ಸ್ತ್ರೀಯರಲ್ಲಿ ಹಿಂದಿನ ಹಾರತವು ಹಾಮ್ಮನಗಳು ಪುನಃ ಮೊಳೆತರೆ ಅವರು ದೇಶದಲ್ಲಿ ಪ್ರಬಲವಾದೊಂದು ಶಕ್ತಿಯಂತೆಯೇ ತೋರ್ಪಡಿಸುವರು,

(The Theosophist-ಪತ್ರಿಕೆಯಲ್ಲಿ 'Watch Tower' ಎಂಬುದಾಗಿ ಪ್ರಕಟವಾಗುತ್ತಿದ್ದ ಟಿಪ್ಪಣಿಗಳು ಶ್ರೀಮತಿ ಬೆಸೆಂಟ್ ಇವರ ಮೇಲೆ ಸರಕಾರವು ತನ್ನ ಕ್ರಮವನ್ನು ತೆಗೆದುಕೊಂಡಿದ್ದುದರ ಪರಿಣಾಮವಾಗಿ ನಿಂತು ಹೋಗಿತ್ತಲ್ಲದೆ ಆ ಟಿಪ್ಪಣಿ

ಗಳನ್ನು ಆ ಪತ್ರಿಕೆಯಲ್ಲಿ ಇತರರು ಬರೆಯುತ್ತಿದ್ದರು.)

ಜೂನ್ ತಾರೀಕು 16 ರಂದು ಮದ್ರಾಸು ಸರಕಾರವು ತಾರೀಕು 7ರಲ್ಲಿ ಸಹಿ ಹಾಕಿದ್ದ ಸಂಸ್ಥೆಯ ಅಧ್ಯಕ್ಷೆ (ಶ್ರೀಮತಿ ಬೆಸೆಂಟ್), ಶ್ರೀ ಜಾರ್ಜ್ ಅರುಂಡೇಲ್ ಮತ್ತು ಬಿ. ಪಿ. ವಾಡ್ಯ ಇವರ ಮೇಲಿನ ಬಂಧನದ ಆಜ್ಞೆಯನ್ನು ಹೊರಡಿಸಿದರು ---- ಅದಕ್ಕನುಸಾರವಾಗಿ ತಾರೀಕು 21ರಲ್ಲಿ ಅಧ್ಯಕ್ಷೆಯನ್ನು, 22 ರಂದು ಅರುಂಡೇಲ್ ಮತ್ತು ವಾಡ್ಯ ಇವರನ್ನು ನೀಲಗಿರಿಯ ಉದಕಮಂಡಲದ ಅವರ ನಿವಾಸಗಳಿಗೆ ಸಾಗಿಸಿದರು, ಅವರನ್ನು ತತ್ವಜ್ಞಾನ (Theosophy) ಸಂಸ್ಥೆಯ ಸ್ಥಾಪಕ ಮತ್ತು ಪ್ರಥಮ ಅಧ್ಯಕ್ಷ (ಕರ್ನಲ್ ಆಲ್ಕಾಟ್)ನು ಕಟ್ಟಿಸಿದ "ಗುಲಿಸ್ತಾನ್" ಭವನದಲ್ಲಿ ಇಡಲಾಯಿತು, ಅವರ ಮೇಲಿನ ವಿಧಿಸಿದ್ದ ನಿಬಂಧನೆಗಳಲ್ಲಿ ಅವರು ಯಾವ ಪತ್ರವ್ಯವಹಾರಗಳನ್ನು ನಡೆಸಕೂಡದೆಂದೂ ಇತ್ತು!

ಅಡಿಯಾರ್ ಥಿಯೋಸಫಿಕಲ್ ಸಂಘದ ಕಾರ್ಯಕ್ರಮಗಳು ಕಾರ್ಯಕಾರೀ ಸಮಿತಿಯವರಿಂದ ನಡೆಸಲ್ಪಡುವಂತೆ ತೀರ್ಮಾನವಾಯಿತಲ್ಲದೆ ಅಧ್ಯಕ್ಷೆಯ ಗೈರುಹಾಜರಿನಲ್ಲಿ ಶ್ರೀ ಜಿನರಾಜದಾಸನು ಮೇಲ್ವಿಚಾರಣೆಗಳ ಬಗ್ಗೆ ನೋಡುವುದಲ್ಲದೆ The Theosophist ಮತ್ತು Adyar Bulletin ಪತ್ರಿಕೆಗಳ ಹಂಗಾಮಿ ಸಂಪಾದಕನಾಗಿಯೂ ಅವನು ಅವುಗಳನ್ನು ನಡೆಸಿದನು,

ತತ್ವಜ್ಞಾನ ಸಂಸ್ಥೆಗೆ ಸೇರಿದ ಪ್ರಪಂಚದ ನಾನಾ ಭಾಗದ ಸದಸ್ಯರು ಅಧ್ಯಕ್ಷೆಯನ್ನು ಆ ರೀತಿ ಬಲಾತ್ಕಾರಿಕವಾಗಿ ಸೆರೆಮನೆಯೊಳಗೆ ಇರಿಸಿದ್ದು ಅವಳ ಶರೀರಕ್ಕೆ ಆಘಾತವುಂಟುಮಾಡಬಹುದೆಂದೂ ಕಳವಳವನ್ನು ವ್ಯಕ್ತಪಡಿಸಿದರು. ಮೂವತ್ನಾಲ್ಕು ವರ್ಷಗಳನಂತರ ಇದೀಗ ಮೊದಲ ಬಾರಿಗೆ ಅವಳು ಈ ರೀತಿ ಸಾರ್ವಜನಿಕವಾಗಿ ನರಳಬೇಕಾದ ಕಾರಣದಿಂದ ಅವಳು ಪುನಃ ಪುನಃ ತನ್ನ ಹಿಂದಿನ ಆರೋಗ್ಯವನ್ನೇ ಹೊಂದುವಳೋ ಇಲ್ಲವೋ ಎಂಬುದಾಗಿ The Adyar Bulletin ಪತ್ರಿಕೆಯು ಹೇಳಿತು.

ಸೆಪ್ಟಂಬರಿನಲ್ಲಿ ಶ್ರೀಮತಿ ಬೆಸೆಂಟ್, ಶ್ರೀ ಅರುಂಡೇಲ್ ಮತ್ತು ಶ್ರೀ ವಾಡ್ಯ ಇವರನ್ನು ಮದ್ರಾಸು ಸರಕಾರದ ಸೆರೆಮನೆಯಿಂದ ಬಿಡಲಾಗಿದೆಯೆಂಬ ವಾರ್ತೆಯು ಬಂತು. ಅದು ಯಾವ ಶರತ್ತಿಗೂ ಒಳಗಾಗದ ಬಿಡುಗಡೆಯಾದುದರಿಂದ ಶ್ರೀಮತಿ ಬೆಸೆಂಟ್ ಇವಳು ದೇಶದ ರಾಜಕೀಯ ಮುಂದಾಳು ಆಗಿ ಹಿಟನಾತ್ಮಕವಾದ ಜಯವನ್ನೇ ಪಡೆದಿದ್ದಳು, ಎಂಬುದಾಗಿ ಮೇಲಿನ ಹೆಸರಿಸಿದ ಪತ್ರಿಕೆಯು ಹೇಳಿತು.

ಅಕ್ಟೋಬರ್ 1 ರಂದು ಆಕೆಯ ಹುಟ್ಟುದಿನದ ಸಂದೇಶವು ಹೀಗಿತ್ತು. "ಸಂಕಲ್ಪ, ಬುದ್ಧಿಬಲ ಮತ್ತು ಜ್ಞಾನಬಲ —
"ಇವು ಮೂರು ದೈವಿಕ ತ್ರಿವಿಧಿಗಳಾಗಿವೆ. ಜ್ಞಾನವು ಯೋಚಿಸಲಿಕ್ಕೆ
"ಬುದ್ಧಿಯು ಸ್ಫೂರ್ತಿಗೊಳಿಸಲಿಕ್ಕೆ ಮತ್ತು ಸಂಕಲ್ಪ ಸಾಧಿಸಲಿಕ್ಕೆ! ---"

ಸರ್ ಎಡ್ವಿನ್ ಮಾಂಟೆಗ್ (the Secretary of State for India) ಇವರು ಈ ದೇಶಕ್ಕೆ ಸಂದರ್ಶನವಿತ್ತುದು ಭಾರತಕ್ಕೆ ಇಂಗ್ಲೆಂಡಿನ ನ್ಯಾಯ ಮತ್ತು ಸ್ವಾತಂತ್ರ್ಯದಲ್ಲಿರುವ ಪ್ರೀತಿಯ ಮೇಲೆ ವಿಶ್ವಾಸವನ್ನು ಪ್ರದರ್ಶಿಸಿದಂತಾಗಿದೆ. ನನ್ನನ್ನು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷೆಯಾಗಿ ಆರಿಸಿದುದು ನಮ್ಮ Home Rule ಚಳುವಳಿಕ್ಕೆ ದೇಶವು ಇತ್ತ ಒಪ್ಪಿಗೆಯ ಪರಿಣಾಮವಾಗಿದೆ---- ನನ್ನ ಗೃಹ ಬಂಧನವು ಈಗ ನನ್ನ ಪ್ರಯಾಣವನ್ನು ಅವಲಂಬಿಸಿದೆ. ಸಿಮ್ಲಾಕ್ಕೆ ಹೋಗಿ, ಅನಂತರ ಮದ್ರಾಸಿಗೆ ಹಿಂದಿರುಗಬೇಕು, ಪುನಃ ಡಿಲ್ಲಿಗೆ ಹೋಗಬೇಕು. ಹತ್ತು ದಿನಗಳನಂತರ ಮತ್ತೊಮ್ಮೆ ಎಂಬಂತೆ ಡೆಲ್ಲಿಗೆ ಹೋಗಿ ಮದ್ರಾಸಿಗೆ ಹಿಂದಿರುಗಬೇಕು ---- ಈ ವರ್ಷ ನಮ್ಮ ಸಂಘದ ಸಮ್ಮೇಳನವು (The Theosophical Convention) ಕಲ್ಕತ್ತೆಯಲ್ಲಿ ನಡೆಯುವುದು. ಜಿನರಾಜದಾಸ, ಜಾರ್ಜ್ ಅರಂಡೇಲ್, ವಾಡಿಯ ಮತ್ತು ನ್ಯಾಯಮೂರ್ತಿ ಸದಾಶಿವ ಐಯ್ಯರ್ ಇವರು ಭಾಷಣಗಳನ್ನು ಕೊಡುವರು,

"ರಾಷ್ಟ್ರೀಯ ವಾರ" (National Week) ಇದರ ಸಂಬಂಧವಾಗಿ ತುಂಬಾ ಕೆಲಸ ಇದೆ, National Board of Education-ಇದರ ಮೊದಲ ಸಭೆಯು ಡಿಸೆಂಬರ್ ೨೫ಕ್ಕೆ ಸೇರುವುದು. ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನವು ೨೬ರಂದು ನಡೆಯುವುದು. ನಾನು ಕಲ್ಕತ್ತೆಯಲ್ಲಿ ೨೪ ರಂದು ಸ್ವಾಗತಿಸಲ್ಪಡುವೆನು, ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಯೂ ೨೪ರಲ್ಲಿ ಕೂಡುವುದರಿಂದ ಆ ದಿನವೆಲ್ಲಾ ಬಿಡುವಿಲ್ಲದಷ್ಟು ಕೆಲಸವಿದೆ. ಕಾಂಗ್ರೆಸ್ ಸಭೆಗಳು ೨೬ ರಿಂದ ೩೧ರ ವರೆಗೂ, ಮುಸ್ಲಿಮ್ ಲೀಗ್ ಸಭೆಯು '20 ರಿಂದ ಹಿಂದಿರುವ ದಿನವೂ ನಡೆಯುವುವು. ಕೈಗಾರಿಕಾ ಮತ್ತು ಸಾಮಾಜಿಕ ಪರಿಷತ್ತುಗಳು ನಡೆಸಲ್ಪಡುವುವು. ಶ್ರೀ ಗಾಂಧಿ (ಮಹಾತ್ಮ ಗಾಂಧಿ) ಇವರು ಸಮಾಜ ಸೇವಾ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸುವರು. (The Theosophist, Jan. 1918)

1918

ಇದೀಗಲೇ ನಾನು ಹಿಂದಣ ಚಿಕ್ಕ ಪ್ರವಾಸವನ್ನು ಕೈಗೊಂಡಿದ್ದೇನೆ. ಬೊಂಬಾಯಿ, ಸೂರತ್, ಬ್ರೋಚ್, ಡಿಲ್ಲಿ, ಖಾನ್‌ಪುರ್, ಲಕ್ನೌ ಮತ್ತು ಬಿಹಾರ್. ಎರಡು ಮೂರು ಇತರ ಸ್ಥಳಗಳ ಮೂಲಕವಾಗಿ ಹೋಗುವೆನು, ಭಾರತದ ಪ್ರಗತಿಯ ಬಗ್ಗೆ ತತ್ವಜ್ಞಾನ, ವಿದ್ಯೆ ಮತ್ತು ರಾಜಕೀಯ ಕಾರ್ಯಕ್ರಮಗಳನ್ನು ಮುಂದಿಟ್ಟುಕೊಂಡು ಮಾಡಬೇಕಾಗಿದೆ --- ಭಾರತ ಸ್ವಾತಂತ್ರ್ಯದೊಡನೆ ನನ್ನ ರಾಜಕೀಯವು ಸ್ವಾಭಾವಿಕವಾಗಿ ಕೊನೆಗೊಳ್ಳುವುದು. ಆ ಒಂದು ಧ್ಯೇಯಕ್ಕಾಗಿ ನಾನು ಆ ಕ್ಷೇತ್ರಕ್ಕೆ ಕಾಲಿಟ್ಟೆನು,

ಹಲವು ಸ್ಥಳಗಳನ್ನು ಸುತ್ತಾಡುವೆನು. ಹಲವು ಭಾಷಣಗಳನ್ನು ಕೊಟ್ಟು ಆಯಿತು, ಹಲವು ಜನರನ್ನು ನೋ

ತಿಯೂ ಬಂದಿತು. ಕಲ್ಕತ್ತಾದಲ್ಲಿ ಆ ನಮ್ಮ ಕೂಡುವಿಕೆ ಮತ್ತು ಅಗಲು ವಿಕೆಗಳು ಯಾವಾಗಲೂ ಆಗುತ್ತಕ್ಕಂತಿದ್ದಿಲ್ಲ. ಕೆಲಸವಾದರೋ ಬಹಳ ಪ್ರಯಾಸಕರವೇ ಆಗುತ್ತಿತ್ತು. ಆರ್ಥರ್ ಶಿಂಟ್‌ಲ್ಯಾಂಡ್ ಮತ್ತು ಅವನ ಮೂವರು ಸಹೋದ್ಯೋಗಿಗಳು ನನಗೆ ಅನ್ಯಾಯದ ಶಿಕ್ಷೆಯನ್ನು ವಿಧಿಸಿ ನನ್ನ ಆರೋಗ್ಯವನ್ನು ಕೆಡಿಸಿದರು, ಎಂದು ಊಹಿಸುತ್ತೇನೆ. ನಾನು ಇನ್ನೂ ಕಷ್ಟಪಟ್ಟು ದುಡಿಯುವೆನಾದರೂ ಬೇಗನೆ ಆಯಾಸವನ್ನು ಹೊಂದುತ್ತೇನೆ. ಹಿಂದಿನಂತೆ ನಿದ್ರೆಯು ಕಡಿಮೆಯಾಯಿತು. ಬಹುಶಃ ಪುನಃ ಹಿಂತಿರುಗಿ ಬರಲಾರದ ನನ್ನ ಸಾತ್ವಿಕ ಶಕ್ತಿಯಿಲ್ಲವೂ ಈ ಇಳಿವಯಸ್ಸಿನಲ್ಲಿ ಮಾಯವಾಗಿ ರೋಗವನ್ನು ನಿವಾರಿಸುವ ಶಕ್ತಿಯೂ ಕಡಿಮೆಯಾಗುತ್ತಾ ಇದೆ----- ನಮ್ಮ ಸೌಂದರ್ಯ ಮೂರ್ತಿಯು (ಅಡಿಯಾರ್) ಅಧ್ಯಾಪಿಕರಿಗೆ ಬೇಸಗೆಯಲ್ಲಿ ಎರಡು ವಾರಗಳ ತರಬೇತಿ ಸ್ಕೂಲು ತುಂಬಾ ಗದ್ದಲದಿಂದ ಕೂಡಿತ್ತು----- ಮೇ 13 ರಂದು ಆ ಶಾಲೆಯನ್ನು ಉದ್ಘಾಟಿಸುವ ಗೌರವವು ನನಗೆ ದೊರಕಿದಾಗ ನಾನು "ವಿದ್ಯೆ"- ಕುರಿತಾಗಿ ಮಾತಾಡಿದೆನು. ಅನಂತರ ಭಾಷಣಗಳು, ಸಾರ್ವಜನಿಕ ಪ್ರವಚನಗಳು, ವಾಗ್ವಾದಗಳು, ಪ್ರಬಂಧಗಳು, ಸಂಗೀತ, ಟಾಗೋರ್ ಕೃತ ನಾಟಕ, ಚಿತ್ರಶಿಲ್ಪ ಇತ್ಯಾದಿ ಉತ್ಸವಕರವಾಗಿತ್ತು---- ಹಿಂದಿನ ದಿನ ಸಾಯಂಕಾಲ ಕವಿಗಳೆಲ್ಲಾ ಸೇರಿ ತಮ್ಮ ಸ್ವಂತ ಹಾಡುಗಳನ್ನು ಹಾಡಿದರು. ಕವಯಿತ್ರಿ ಸರೋಜಿನಿ ತನ್ನ ಸಹೋದರ, ಸಹೋದರಿಯರು, ಮತ್ತು ಮಕ್ಕಳಿಂದ ಹಲವು ಜನರ ತೀರ್ಥಯಾತ್ರೆ ಸಂಸಾರದ ಸಮೇತವಾಗಿ ಅಲ್ಲಿಗೆ ಬಂದಿದ್ದಳು. ಅವಳು ತನ್ನ ಆಹ್ಲಾದಕರವಾದ ಕವನಗಳನ್ನು ಓದಿದಳು. (The Theosophist – June 1918.)

ಪ್ರಪಂಚದಲ್ಲಿ ಆಂಗ್ಲ ಭಾಷೆಯು ಎಲ್ಲಿ ಉಪಯೋಗಿಸಲ್ಪಡುತ್ತದೋ ಅಲ್ಲೆಲ್ಲ ಪರಿಚಯವಿರುವ ಬಿಷಪನು ಹೇಳಿದಂತೆ ಇಂಗ್ಲೆಂಡಿನ ಜನಕ್ಕೆ ಹಿಂದೂ ಧರ್ಮವನ್ನು ಕುರಿತಾಗಿ ತನ್ನ ತಿಳುವಳಿಕೆಯನ್ನು ಕೊಡಲು ತತ್ವಜ್ಞಾನ (Theosophy) ಸಂಸ್ಥೆಯು ತುಂಬಾ ಪ್ರಯತ್ನಿಸಿದೆಯೆಂದು ಜನರು ತಿಳಿದಿದ್ದರು. 'ನಮ್ಮ ಹೆಚ್. ಪಿ. ಬ್ಲಾವಟ್‌ಸ್ಕೀ ಇವರು ಇದ್ದಿದ್ದರೆ ಅದನ್ನು ಕೇಳಲು ತುಂಬಾ ಇಚ್ಛಿಸುತ್ತಿದ್ದರೆಂಬುದು ನಿಜವೇ ಆಗಿದೆ---.

ನನಗಂತೂ ತುಂಬಾ ಕೆಲಸವಿದೆ. (ಮೊಂಟೆಗ್ಯೂ- ಚೆಮ್ಸ್‌ಫರ್ಡ್) ಸುಧಾರಣೆಗಳನ್ನು ಕುರಿತಾದ ಹಿಂದೂ ಸಭೆಗೆ ಬೊಂಬಾಯಿಗೆ ಹೋಗಲಿದ್ದೇನೆ. ರಾಷ್ಟ್ರೀಯ ವಿದ್ಯೆಗೆ ಉತ್ತೇಜನವೀಯಲು ತಳಹದಿಯನ್ನು ಭದ್ರವಾಗಿ ಹಾಕಲಾಯಿತು. ಜುಲೈ 14 ರಲ್ಲಿ ರಾಷ್ಟ್ರೀಯ ವಿದ್ಯಾಲಯಕ್ಕೆ ಹಂಗಾಮಿಯಾಗಿ ವ್ಯವಹರಿಸಿದ್ದ ಕೃತ್ಯವನ್ನು ಅದರ ಉಪಕುಲಪತಿ ದಿವಾನ್ ಬಹದ್ದೂರ್ ಸದಾಶಿವ ಅಯ್ಯರ್ ಇವರಿಂದ ತೆರೆಯಲಾಯಿತು.

ಅದೇ ಸ್ಥಳದಲ್ಲಿ ಮತ್ತು ಅದೇ ವೇಳೆಗೆ ಸುಸಂಸ್ಕೃತ ಜನರ ಆ ಸಭೆಯಲ್ಲಿ ಹಿಂದು ವ್ಯವಸಾಯ ಕಾಲೇಜನ್ನು ತೆರೆಯಲಾಯಿತು. 16 ನೇ ಜುಲೈಯಲ್ಲಿ ಹುಡುಗರ ರಾಷ್ಟ್ರೀಯ ಶಿಕ್ಷಣಶಾಲೆಯು ಬಹು ವಿಶಾಲವಾದ ಮೈದಾನದಲ್ಲಿ ಅಡ್ಯಾರ್ ನದಿಯ ಸ್ಥಳದಲ್ಲಿ ಇರಿಸಲ್ಪಟ್ಟ ಭವ್ಯ ಕಟ್ಟಡವೊಂದರಲ್ಲಿ ಪ್ರಾರಂಭಿಸಲ್ಪಟ್ಟಿತು. ಹುಡುಗಿಯರ ರಾಷ್ಟ್ರೀಯ ಶಿಕ್ಷಣಶಾಲೆಯನ್ನು ಮರುದಿನ ಸಾಯಂಕಾಲ ಉದ್ಘಾಟಿಸಲ್ಪಟ್ಟಿತು ಅದೇ ದಿನ ಹಿಂದು Commerce College ಇದನ್ನು ತೆರೆಯಲಾಯಿತು--- ಶ್ರೀಮತಿ ಬೆಸೆಂಟ್ ಇವರು ದೇಶಸೇವಾ ನಿಮಿತ್ತ ಯಾವಾಗಲೂ ಉತ್ತರ ಮತ್ತು ಪಶ್ಚಿಮ ಹಿಂದೂಸ್ಥಾನದಲ್ಲಿ ಸಂಚರಿಸುತ್ತಿರುವರು. ಈ ತಿಂಗಳು ಅವರು ಎರಡು ಬಾರಿ ಬೊಂಬಾಯಿಗೂ ಎರಡು ಬಾರಿ ಕಲ್ಕತ್ತೆಗೂ ಹೋದರು. ಇದೀಗ ಮೂರನೇ ಬಾರಿಗೆ ಬೊಂಬಾಯಿಗೆ ಹೋಗಿರುವರು. (The Adyar Bulletin-ಆಗಸ್ಟ್)

ವಾರ್ತೆಗಳನ್ನು ತಿಳಿಸುವ ಈ ದಿನಗಳಲ್ಲಿ ಎಲ್ಲಾ ವಿಷಯಗಳನ್ನು ನಮ್ಮ ಓದುಗರಿಗೆ ತಿಳಿಸುವುದು ಕಷ್ಟವಾಗಿದೆ. ಆದುದರಿಂದ ಆಗಸ್ಟ 29-31 ರಲ್ಲಿ 5,100 ಪ್ರತಿನಿಧಿಗಳಿಂದಲೂ 6,000 ಸಂದರ್ಶಕರಿಂದಲೂ ಕೂಡಿದ ಹಿಂದು ವಿಶೇಷ ರಾಷ್ಟ್ರೀಯ ಕಾಂಗ್ರೆಸ್ ಸಭೆಯು ಸೇರಿದ್ದನ್ನು ನಾವು ಜನಕ್ಕೆ ಹೇಳಬಾರದು. ಬೊಂಬಾಯಿಯಲ್ಲಿ ನಡೆದ ಈ ಸಭೆಗೆ ದೇಶದ ಎಲ್ಲಾ ಕಡೆಗಳಿಂದಲೂ ಪ್ರತಿನಿಧಿಗಳು ಬಂದಿದ್ದರು. ಎಲ್ಲ ವರ್ಗದ ಮತ್ತು ಜಾತಿಯ ಹೆಂಗಸರೂ ಗಂಡಸರೂ ಸೇರಿದ್ದರು---ಅಗ ಮಂಜೂರಾದ ಹಿಂದು ಠರಾವನ್ನು ಇಲ್ಲಿ ಹೇಳುವುದು ಸಾಕಾಗಿದೆ.
“ಗಂಡಸರಿಗೆ ಸಾರ್ವಜನಿಕ ಕ್ಷೇತ್ರದಲ್ಲಿ ಭಾಗವಹಿಸಲು ಈಗ ತಾನೇ
“ಜಾರಿಗೆ ಬಂದ ಸುಧಾರಣೆಗಳಲ್ಲಿ ಯಾವ ಯೋಗ್ಯತೆಯನ್ನು ವಿಧಿಸ
“ಲಾಗಿದೆಯೋ ಅಷ್ಟೇ ಯೋಗ್ಯತೆಯುಳ್ಳ ಹೆಂಗಸರಿಗೂ ಇದ್ದರೆ ಅವರ
“ನ್ನು ಹೆಂಗಸರೆಂಬ ಕಾರಣದಿಂದ ಸ್ಥಾನಮಾನಗಳಿಗೆ ಅನರ್ಹಗೊಳಿಸಿದೆ
“ಇರಬಾರದು.” (The Theosophist-1918)

ಸೆಪ್ಟೆಂಬರ್ 1ರ ಹುಟ್ಟುದಿನದ ಸಂದೇಶವು ಹೀಗಿತ್ತು:- “ಹೃದಯ ಶುದ್ಧತೆಯಿಂದ ಮನೋಬಲದಿಂದ ಮತ್ತು
“ಆತ್ಮಸಂಯಮತೆಯಿಂದ ಇರಿ. ನೀವು (ಆನಿ ಬೆಸೆಂಟ್)
“ಯುಗಾಂತರಗಳ ಬಂಡೆಗಲ್ಲಿನ ಮೇಲೆ ಇರುವಿರಿ; ಅಗೋ, ಬ
“ಲಿಸುವ ಮೋಡಗಳ ಹಿಂದೆ ನಕ್ಷತ್ರವೊಂದು ಪ್ರಜ್ವಲಿಸುತ್ತಿದೆ.”

ನನ್ನ 71ನೇ ಹುಟ್ಟು ದಿನದಂದು ಪ್ರಪಂಚದ ನಾನಾ ಕಡೆಗಳಿಂದ ನನಗೆ ಶುಭಾಶಯದ ಪತ್ರಗಳನ್ನೂ ತಂತಿಗಳನ್ನೂ ಕಳುಹಿಸುವವರೆಲ್ಲಾ ವಂದಿಸುತ್ತೇನೆ---The Theosophist ಪತ್ರಿಕೆಯು ಅದರ ಸಂಪಾದಿಕೆಯು ಸೆಪ್ಟೆಂಬರ್ 1-ರಂದೇ ತನ್ನ ಐಹಿಕ ಜೀವನದ ಹೊಸ

ವರ್ಷಕ್ಕೆ ಕಾಲಿಡುತ್ತಿರುವುದು ವಿಸ್ಮಯದ ವಿಚಾರವಾಗಿದೆ. ತನ್ನ ಬಾಲ್ಯದ ಸಂತೋಷಕರವಾದ ಆ ಕೆಲವು ವರ್ಷಗಳನ್ನುಳಿದು ಸಂಪಾದಿಕೆಯ 71 ವರ್ಷಗಳು ಹೋರಾಟದ ಬಾಳನ್ನು ನಡೆಸಿದ್ದಾಳೆ. ಆದರೆ ಬಾಲ್ಯದಲ್ಲಿಯೇ ಸ್ಫೂರ್ತಿದಾಯಕವಾದ ಧ್ಯೇಯವನ್ನು 1874 ರಿಂದ ಮೊದಲ್ಗೊಂಡು ತಾಳಿದ್ದಾಳೆ. ಸತ್ಯ, ಸ್ವಾತಂತ್ರ್ಯ ಮತ್ತು ಸೇವೆ ಇದಕ್ಕಾಗಿ ತನ್ನ ಜೀವನವನ್ನು ಮೀಸಲಿಟ್ಟಳು---.

"ಇದೀಗ ನಾನು ನನ್ನ ಮೆಚ್ಚಿನ ಸ್ವಗೃಹದ ಬನಾರಸ್
"ಗೆ ಹೋಗುತ್ತಿದ್ದೇನೆ, ಅಲ್ಲಿ ಹಿಂದೂ ವಿಶ್ವವಿದ್ಯಾಲಯದ ನ್ಯಾಯಾ
"ಸ್ಥಾನ ಮತ್ತು ಸೆನೆಟ್ ಸಭೆಗಳಲ್ಲಿ ಭಾಗವಹಿಸುವೆನು---ಅ
"ಲ್ಲದೆ ಹುಡುಗಿಯರ ಕಾಲೇಜು ಮತ್ತು ಹುಡುಗರ ಮತ್ತು ಹು
"ಡುಗಿಯರ ಶಾಲೆಗಳನ್ನು ಸಂದರ್ಶಿಸಿದಾಗ ಸಂತೋಷಪಡು
"ತ್ತೇನೆ, ಬನಾರಸ್ ಯಾವಾಗಲೂ ನನಗೆ ನನ್ನ ಭಾರತೀಯ ಗೃಹ
"ವಾಗಿತ್ತು. ಅಡೆಯಾರನ್ನು ನಾನು ಪ್ರೀತಿಸಿದ್ದರೂ ನನ್ನ ಹೃದ
"ಯವು ಬನಾರಸ್‌ನಲ್ಲಿರುತ್ತಿತ್ತು, ನಮ್ಮ ಸಂಘದ (Theosophy)
"ವಾರ್ಷಿಕೋತ್ಸವವು ಈ ವರ್ಷ ದಿಲ್ಲಿಯಲ್ಲಿ ನಡೆಯುವುದು,
"ಅದರ ಕೂಡನೆಯೇ ರಾಷ್ಟ್ರೀಯ ವಿದ್ಯಾಕ್ರಮದ ಉತ್ಸವವೂ ನಡೆ
"ಸಲ್ಪಡುವುದು"— (The Theosophist-1918)

ದಿಲ್ಲಿಯಲ್ಲಿ ನಡೆದ ತತ್ವಜ್ಞಾನ (Theosophy) ಸಭೆಗಳು ತೃಪ್ತಿಕರವಾಗಿ ನಡೆದುವು, The Problems of Peace- ಎಂಬ ವಿಷಯದ ಮೇಲೆ ನಾಲ್ಕು ಭಾಷಣಗಳನ್ನು ಕೊಟ್ಟೆನು. ಕಿಕ್ಕಿರಿದು ನೆರೆದ ಆ ಸಭಾಸದರು ನನ್ನ ಆ ನಾಲ್ಕೂ ಭಾಷಣವನ್ನು ಮೆಚ್ಚಿದರು. ಸೋದರ ಜಿನರಾಜದಾಸನು ನನ್ನ ಪರವಾಗಿ ಆ ಕೂಟದ ಇತರ ಕಾರ್ಯಕಲಾಪಗಳನ್ನು ನಡೆಸಿದನು. ಜಾರ್ಜ್ ಅರುಂಡೇಲನು ವಿದ್ಯಾಭ್ಯಾಸ, ಬಾಲಚರವೂ ಇತ್ಯಾದಿ ವಿಷಯಗಳ ಮೇಲೆ ಕಾರ್ಯಭಾರಗಳನ್ನು ಯಶಸ್ವಿಯಾಗಿ ನಡೆಸಿದನು,

ರಾಷ್ಟ್ರೀಯ ವಿಶ್ವವಿದ್ಯಾಲಯದ ಕುಲಪತಿಯಾದ ರವೀಂದ್ರನಾಥ ಠಾಗೋರ್ ಇವನು ಅಡೆಯಾರ್‌ಗೆ ಎರಡು ದಿವಸಗಳಿಗಾಗಿ ಬರಲಿದ್ದನು. ಬರುವ ಜನವರಿ 12 ರಿಂದ ಬಂದು ವಾರದ ವರೆಗೆ ಇಲ್ಲಿ ಇರಲು ಅವನು ಪುನಃ ಬರುವನು. ಸರ್ ರವೀಂದ್ರನಾಥ್ ಇವನ ತಲೆಯು ಕ್ರೈಸ್ತನ ತಲೆಯಂದದಿನ್ನು ಬಹುನಾದ ರೀತಿಯಲ್ಲಿದೆ, ಅಲ್ಲದೆ ಅವನು ಆಕರ್ಷಕವಾದ ಹಾಗೂ ಧ್ಯೇಯಪೂರ್ಣ ವ್ಯಕ್ತಿತ್ವವನ್ನು ಹೊಂದಿದ್ದಾನೆ. (The Adyar Bulletin - ಜನವರಿ 1919.)

1919

ಹೊಸ ವರ್ಷದ ಶುಭಾಶಯಗಳು----ನಾನು ಇದೀಗಲೆ ದಿಲ್ಲಿಯಿಂದ ಹಿಂದಿರುಗಿದೆನು. ಪುನಃ (ಜನವರಿ 27ರಲ್ಲಿ) ಬೊಂ

ಬಾಯಿಗೆ ಹೋಗಿ ಹದಿನೈದು ದಿವಸಗಳ ಕಾಲದ ವರೆಗೆ ಸಿಂಧ್ ಪ್ರಾಂತದಲ್ಲಿ ಪ್ರವಾಸವನ್ನು ಕೈಗೊಳ್ಳುವೆನು.

ಫೆಬ್ರುವರಿ 17ನೇ ದಿನ ಅಡೆಯಾರ್‌ಗೆ ವಿಶೇಷವಾಗಿದೆ. ಬಿಷಪ್ ಹಿಬರ್ ಇವರ ಹುಟ್ಟುದಿನ, ಕರ್ನಲ್ ಆಲ್ಕಾಟ್ ಇವರು ಗತಿಸಿದ ದಿನ ಮತ್ತು Giordano Bruno ಇವರನ್ನು ರೋಮ್ ನಗರದಲ್ಲಿ ಸುಟ್ಟ ದಿನ! ಇಂದು ನಾವು ಬೊಂಬಾಯಿಯಲ್ಲಿದ್ದಾಗ "ಚೈನಾಬಾಗ್"ನಲ್ಲಿ ಒಂದು ಸಭೆಯು ಸೇರಿತು, ಅನಂತರ ಆರ್ಯಭವನದಲ್ಲಿ The Value of Theosophy to India ಎಂಬುದರ ಮೇಲೆ ಭಾಷಣವನ್ನು ಮಾಡಿದೆನು ----ಇಂಗ್ಲೆಂಡಿನಲ್ಲಿ ನಾನು ಪ್ರವಾಸವನ್ನು ಕೈಕೊಂಡು ಎಲ್ಲಾ ಪಟ್ಟಣಗಳಲ್ಲೂ ಭಾಷಣಗಳನ್ನು ಕೊಡಬೇಕೆಂದು ನನಗೆ ಪತ್ರಗಳು ಬರುತ್ತಿವೆ----ಆದರೆ ನಾನು ಇಲ್ಲಿಂದ ಹೋಗುವುದು ನನ್ನ ರಾಜಕೀಯ ಕಾರ್ಯಕ್ರಮವನ್ನು ಹೊಂದಿಕೊಂಡಿದೆ----ನಾನು Montague--Chelmsford ಸುಧಾರಣೆಗಳನ್ನು ಒಪ್ಪುವೆನಾದರೂ ಬಹುಸಂಖ್ಯೆಯ ಜನರು ಅದಕ್ಕೆ ಒಪ್ಪುತ್ತಿಲ್ಲ----ನಾನು ಅದಕ್ಕಾಗಿ ಮುಂದುವರಿದು ಹೋಗಲು ಒಪ್ಪಲಿಲ್ಲ. ಡಿಲ್ಲಿಯಲ್ಲಿ ನಡೆದ ಕಾಂಗ್ರೆಸ್ ಸಭೆಯಲ್ಲಿ ಬಹುಮತದವರು ನನ್ನ ಅಭಿಪ್ರಾಯವನ್ನು ಒಪ್ಪುವುದಿಲ್ಲವಾದುದರಿಂದ ನಾನು ಒಂದು "ಕಪ್ಪು ಕುರಿ" (black sheep) ಆಗಿರುವೆನು, ನಾನೇನೂ ಮಾಡಲಿಕ್ಕೆ ಸಾಧ್ಯವಿಲ್ಲ, "ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್" ಯೋಜನೆಯನ್ನನುಸರಿಸಿ ಅದರಂತೆ ನಾವು ಹೋದುದಾದರೆ ನಮಗೆ ತುಂಬಾ ಪ್ರಯೋಜನವಿದೆ. ಇಂದಿನ ಪರಿಸ್ಥಿತಿಯಲ್ಲಿ ಅಂತಲ್ಲದೆ ನಾವು ಹಿಂದೆ ತಾಳಿದ್ದ ಅಭಿಮತವನ್ನನುಸರಿಸಿ ಹೆಚ್ಚಿನ ರಿಯಾಯಿತಿಯನ್ನು ಅಗ್ಗ ಕೇಳಿದರೆ ನಮ್ಮ ಯೋಜನೆಯೆಲ್ಲಾ ಕುಸಿದು ಬೀಳುವುದು----ಸರಕಾರದೊಡನೆ ಒಡಂಬಡಿಕೆಗೆ ಒಪ್ಪದ ಪಕ್ಷವು ಡಿಲ್ಲಿ ಕಾಂಗ್ರೆಸ್ ಸಭೆಯಲ್ಲಿ ಜಯಪ್ರದರಾಗಿ ಅವರು ತೋರಿದ ಅಭಿಪ್ರಾಯವನ್ನು ಪ್ರತಿಬಿಂಬಿಸುತ್ತಿದ್ದಾರೆಂದು ಹೇಳುತ್ತಾರೆ----ಹಾಗಿದ್ದರೂ ನಾನು ನನ್ನ ಸಹಜ ಪ್ರವೃತ್ತಿಗನುಗುಣವಾಗಿ ಸತ್ಯಕ್ಕೆ ದೊರೆವ ಅವರೊಡನೆ ಇದೆಯೆಂದು ನಾನು ಒಪ್ಪುವೆನಾದರೂ ನನ್ನ ಅಭಿಪ್ರಾಯವನ್ನು ಬಿಟ್ಟುಕೊಡಲಾರೆನು, ಬಹುಮತವು ಬದಲ್ವಣೆಯಾಗಲೇ ಬೇಕು; ಅದರಲ್ಲಿ ನಾನು ನನ್ನ ನಂಬಿಕೆಯನ್ನಿಟ್ಟಿರುವೆನು-----.

ಅಷ್ಟೇ ಅಲ್ಲ, ಒಂದು ಸಮಿತಿಯ ಬೆಂಬಲದಿಂದ ಗಾಂಧೀಜಿಯವರು ಖಾನೂನನ್ನು ಮುರಿದು ಚಳವಳವನ್ನು ಮುಂದುವರಿಸಬೇಕೆಂದು ಹೇಳಲು ಅದಕ್ಕೆ ನಾನು ಒಪ್ಪದೇ ಇದ್ದ ಘೋಷವನ್ನು ಮಾಡಿದೆನು, ಆ ರೀತಿಯಾಗಿ ಖಾನೂನು ಕಾಯಿದೆಗಳನ್ನು ಮುರಿದರೆ ಅದರ ಪರಿಣಾಮವು ಶಾಸನ ಹಾಗೂ

ನಿರುಪಾಯರಾದ ಜನಸಂದಣಿಯ ಮೇಲೆ ದುಷ್ಪರಿಣಾಮವಾಗಿ ಪರಿಣಮಿಸುತ್ತದೆಂದೂ ಅದು ದೊಂಬಿ ಮತ್ತು ರಕ್ತಪಾತಕ್ಕೆ ಎಡೆಗೊಡುತ್ತದೆಂದೂ ಹೇಳಿದೆನು. ನನ್ನ ನುಡಿಯು ನಿಜವಾಗಿ ಪರಿಣಮಿಸಿದುದು ಮತ್ತೊಂದು ಘೋರ ಶಾಪವಾಯಿತು----ಇಲ್ಲಿರುವ ದೃಢಕಾಯರಾದ ಮಿತ್ರರು ಒಟ್ಟುಸೇರಿ ನಾವು ಈ ಹಿಂದೆ ಸ್ಥಾಪಿಸಿದ್ದರ ಆಧಾರವನ್ನನುಸರಿಸಿ ರಾಷ್ಟ್ರೀಯ Home Rule League— ಎಂಬುದಾಗಿ ಬಂದುದನ್ನು ಸ್ಥಾಪಿಸಿಕೊಂಡಿರು---.

"ರಾಯಿಟರ್‌ನಿಂದ ಪಾಡಿವರೆಗೆ ಸುಖಮಯವಾದ ಪ್ರಯಾಣವನ್ನನುಭವಿಸಿದೆವು----ಕಳೆದ ರಾತ್ರಿ ದೊಡ್ಡ ಮಳೆ, ಬಿರುಗಾಳಿ, ಗುಡುಗು ಮಿಂಚುಗಳಿಂದ ಕೂಡಿದ್ದಿತೆಂದು ಆ ಮೇಲೆ ನನಗೆ ತಿಳಿಯಿತು. ಕೋಶಗಂಟದಲ್ಲಿ ನಮ್ಮನ್ನು ಕಾಣಲೆಂದು ಹಲವು ಜನರು ನೆರೆದಿದ್ದರೆಂದು ಹೇಳಿದರು. ಆದರೆ ನನ್ನ ದೇಹದ ಪ್ರಸಿದ್ಧ ವ್ಯಕ್ತಿಯಂತೆ ನಾನು ನನ್ನ ನಿದ್ರೆಗೆ ಹೆಚ್ಚು ಗಮನವಿತ್ತುದರಿಂದ ಈ ಎರಡು ಘಟನೆಗಳೂ ನನ್ನ ಅವಗಾಹನೆಗೆ ಬಾರದೇ ಹೋಯಿತೆಂಬುದನ್ನು ನಾನು ಒಪ್ಪಬೇಕಾಗಿದೆ. ಶ್ರೀ ವಾಡಿಯ ಇವರು ಸಹ ನನ್ನನ್ನು ಎಬ್ಬಿಸದೇ ಹೋದರು---."

ಆ ವರ್ಷದ ಮೇ ತಿಂಗಳಲ್ಲಿ ಶ್ರೀಮತಿ ಬೆಸೆಂಟ್ ಇವರು ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿದರು. ಅವರು ಬೊಮ್ಮಧ್ಯ ಸಮುದ್ರದಿಂದ ನಾಲ್ಕಾರು ಪತ್ರಗಳನ್ನು ತನ್ನ ಪ್ರಯಾಣದ ವಿಷಯವಾಗಿ ವಿವರಣಾತ್ಮಕವಾಗಿಯೇ ಬರೆದಳು. ಜೂನ್ 6ನೇ ದಿನ ಸಾಯಂಕಾಲ ಪ್ಲಿಮತ್ ಬಂದರದಲ್ಲಿ ಹಡಗು ನಿಂತಿತು, ಕೂಡಲೇ "ಶ್ರೀಮತಿ ಬೆಸೆಂಟ್ ನಿಮ್ಮ ಮಗಳು ಮತ್ತು ಹಲವು ಮಿತ್ರರು ನಿಮ್ಮನ್ನು ಸ್ವಾಗತಿಸಲು ಬಂದಿದ್ದಾರೆ," ಎಂಬುದಾಗಿ ಹೇಳಿದ್ದು ಅವಳಿಗೆ ಕೇಳಿತು, ಅದರನಂತರ ಒಬ್ಬನು "ಶ್ರೀಮತಿ ಬೆಸೆಂಟ್ ಒಬ್ಬ ಪತ್ರಿಕಾ ವರದಿಗಾರನು ನಿಮ್ಮನ್ನು ಕಾಣಲಿಕ್ಕೆ ಬಂದಿದ್ದಾನೆ," ಎಂಬುದಾಗಿ ಹೇಳಿದಾಗ ಅವಳು ತನ್ನ ಪರಿಚಿತ ಹಾಸ್ಯಪ್ರಸನ್ನಮೇಳದ ಮುದ್ರೆ ತೋರಿದಂತಾದಳು.

ಇಂಗ್ಲೆಂಡ್ ಮತ್ತು ವೇಲ್ಸ್ ಇವುಗಳ ತತ್ವಜ್ಞಾನ (Theosophy) ಸಂಸ್ಥೆಗಳ ಸಮ್ಮೇಳನವು ಜೂನ್ 7ಕ್ಕೆ ಆರಂಭವಾಯಿತು. ನಾವು ವಿಂಬಲ್ಡನ್‌ನಿಂದ ಲಂಡನಿಗೆ ಹೋದೆವು. ಬಿ.ಪಿ.ವಾಡಿಯ ಮತ್ತು ಪಿ.ಕೆ.ತೆಲಾಂಗ್ ಇವರಿದ್ದ ಮನೆಯಲ್ಲಿ ತಂಗಿದೆವು, ಅವರ ಮನೆಯು Strand- ಇಲ್ಲಿಂದ ಸ್ವಲ್ಪ ಆಚೆ ಇತ್ತು-----ವಾಡಿಯ, ತೆಲಾಂಗ್ ಮತ್ತು ಸ್ಕೆರ್ (Mr. Scker) ಇವರೂ ಆ ಲಂಡನ್ ಅಧಿವೇಶನದಲ್ಲಿ ಮೊದಲ ಬಾರಿಗೆಂಬಂತೆ ತಮ್ಮ ಭಾಷಣಗಳನ್ನು ಮಾಡಿದರು. (The New INDIA.)

ಲಂಡನ್‌ನಲ್ಲಿ ನಾವಿದ್ದ ಮನೆಯಲ್ಲಿ ಚಹಕೂಟಕ್ಕೆ ಸರ್ ಶ್ರೀನಿವಾಸ ಶಾಸ್ತ್ರಿ, ಪಿ.ಸಿ.ರಾಯ್ ಮತ್ತು ಪೊಲಕ್ ಇವರು ಬಂದರು. ಶ್ರೀ ಮತ್ತು ಶ್ರೀಮತಿ ನಿಹಾಲ್ ಸಿಂಗ್ ಇವರು ವಿಂಬಲ್ಡನ್‌ನಲ್ಲಿಯೇ ನಮ್ಮ ಜತೆ ಸೇರಿದರು. ಆದಿತ್ಯವಾರ ದಿನ ಮೂರು ತತ್ವಜ್ಞಾನ (Theosophy) ಸೇರಿದ್ದ ಶ್ರೀ ಸಿನ್ನೆಟ್ಟ್ ಇವರು ಸ್ವಾರಸ್ಯವಾದ ಭಾಷಣವನ್ನು ಕೊಟ್ಟರು. ಆ ವೇಳೆಗೆ ನಡೆದ ಊಟಕ್ಕೆ ಸ್ವೀಡನ್, ಹಾಲೆಂಡ್, ಫ್ರಾನ್ಸ್, ಬೆಲ್ಜಿಯಮ್, ಸ್ವಿಟ್ಸರ್‌ಲೆಂಡ್, ಸ್ಕಾಟ್ಲೆಂಡ್, ಚಿಲಿ, ಆಸ್ಟ್ರೇಲಿಯಾ ಮತ್ತು ಅಮೇರಿಕಾದಿಂದ ಮಿತ್ರರು ಬಂದಿದ್ದರು.

ಸೋಮವಾರ ಬೆಳಿಗ್ಗೆ ಇನ್ನೊಂದು ಸಭೆ ಸೇರಿತ್ತು. ಲೇಡಿ ಎಮಿಲಿ ಲ್ಯೂಟನ್ ಇವರು Queen's Hall ನಲ್ಲಿ ದೊಡ್ಡ ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಮರುದಿನ ಹೊಸ ಜನರು ವಿಚಾರ ವಿನಿಮಯಕ್ಕೆ ಸೇರಿದರು, ಅವರಲ್ಲಿ ವಿ.ಎಸ್.ಶಾಸ್ತ್ರಿ, ಸಿನ್ಹ, ಡೆಸ್, ನೆವಿನ್‌ಸನ್ ಮೊದಲಾದವರಿದ್ದರು---.

ಇದರನಂತರ ಹಲವು ತತ್ವಜ್ಞಾನ (Theosophy) ಸಭೆಗಳಲ್ಲಿ ಭಾಗವಹಿಸಿದೆನು---- ಸೆಪ್ಟೆಂಬರ್ ತಿಂಗಳು ನಾಲ್ಕು ಆದಿತ್ಯವಾರದ ದಿನಗಳಲ್ಲಿ The War and the Future; The War and its Lessons ಎಂಬಿತ್ಯಾದಿ ವಿಷಯಗಳ ಮೇಲೆ ಮಾತಾಡಿದೆನು---." (The New India)".

ಈ ಮೇಲಿನ ವರದಿಯು ಪ್ರಕಟವಾಗುವ ವೇಳೆಗೆ ಅಧ್ಯಕ್ಷೆ ಶ್ರೀಮತಿ ಬೆಸೆಂಟ್ ಇವರು ಡಿಸೆಂಬರ್ 19ರಂದು ಸುರಕ್ಷಿತವಾಗಿ ಬೊಂಬಾಯಿಗೆ ತಲಪಿದ್ದರೆಂದು ವರದಿಯಾಯಿತು. ಅಲ್ಲಿಂದ ಅವರು ನೆಟ್ಟಗೆ ಬನಾರಸ್‌ಗೆ ಥಿಯೊಸೊಫಿ ಸಂಸ್ಥೆಯ ಅಧಿವೇಶನಕ್ಕೆ ಹೋಗುವರೆಂದೂ ಅನಂತರ ಕಾಂಗ್ರೆಸ್ ಅಧಿವೇಶನಕ್ಕೆ ಅಮೃತಸರಕ್ಕೆ ಹೋಗುವರೆಂದೂ ತಿಳಿಯಲಾಯಿತು!

1920

'ನೀನು ಯುರೋಪಿಗೆ ಹೋಗುತ್ತೀಯ? ಅಮೇರಿಕಾಕ್ಕೆ ಹೋಗಲು ಸಾಧ್ಯವಿದೆಯೆ? ಫಿನ್ಲೆಂಡ್, ಇಟಲಿ, ನಾರ್ವೆ, ಸ್ವಿಟ್ಸರ್‌ಲೆಂಡ್, ಇಂಗ್ಲೆಂಡ್, ಸ್ಕಾಟ್ಲೆಂಡ್, ಫ್ರಾನ್ಸ್, ಈಜಿಪ್ಟ್, ಆಫ್ರಿಕಾ, ಆಸ್ಟ್ರೇಲಿಯಾವನ್ನು ಸಂದರ್ಶಿಸುವೆಯೇ?,— ಎಂಬುದಾಗಿ ಜನರು ನನ್ನನ್ನು ಕೇಳುತ್ತಾ ಇರುತ್ತಾರೆ. ಹಿಂದೂಸ್ಥಾನವು ವಿಸ್ತಾರದಲ್ಲಿ ಒಂದು ಖಂಡವೂ ಪರಿಸ್ಥಿತಿಯಲ್ಲಿ ಒಂದು ದೇಶವೂ ಆಗಿದ್ದರೂ ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೆ, ಪೂರ್ವದಲ್ಲಿ ಬರ್ಮದ ವರೆಗೆ, ತತ್ವಜ್ಞಾನ (Theosophy) ಸಂಸ್ಥೆಯ ಅಧಿವೇಶನ, ರಾಜಕೀಯ ಸಭೆ, ಶಾಲೆ, ಆಸ್ಪತ್ರೆ, ಇತರ ಕಟ್ಟಡಗಳು, ಅಸ್ತಿಭಾರ ಹಾಕುವ ಉತ್ಸವಗಳು, ಉದ್ಘಾಟನೆಗಳು, ವಾರ್ಷಿಕೋತ್ಸವಗಳಿಂ

ದು ಕೆಲಸಗಳು ಇದ್ದೇ ಇದ್ದವು, ನನಗೆ ಒಂದು ಖಾತರಿಯದೇನೂ ವಿದ್ದುದರಿಂದ ಎಲ್ಲಾ ಕೆಲಸಗಳಿಗೂ ಒಮ್ಮೆಲೇ ಕೈಹಾಕಲು ಸಾಧ್ಯವಿರಲಿಲ್ಲ----ತತ್ವಜ್ಞಾನಿಗಳಾದ ಸೋದರರೇ, ನಾನು ಈಗ ನನ್ನ ದೇಹಬಲ ಎಷ್ಟಿದೆಯೋ ಅಷ್ಟು ಮಾತ್ರ ದುಡಿಯುತ್ತೇನೆ. ನನ್ನ ಉದ್ದೇಶವು ತತ್ವಜ್ಞಾನವಾದರೂ ನನ್ನ ಕಾರ್ಯಕ್ಷೇತ್ರವು ಪ್ರಸಂಗವಾಗಿದೆ----ನನ್ನ ಪ್ರಮುಖ್ಯ ಕೆಲಸವು ಹಿಂದೂಸ್ಥಾನದಲ್ಲಿ ಇದೆ. ಅವಳು ತನ್ನ ಶೃಂಗಾರವನ್ನಾಗಿ ತಲೆ ಇಂಗ್ಲೆಂಡು ಕೇಂದ್ರವಾಗಿರುವ Commonwealth ಇದಕ್ಕೆ ಸೇರಿ, ಸ್ವತಂತ್ರ ದೇಶವಾಗಿ ಕೀರ್ತಿಯನ್ನು ಪಡೆಯುವುದು----ನನ್ನನ್ನು "ಪ್ರಸಂಘದ ಅಧ್ಯಕ್ಷೆ" "ಅಂತರ್ರಾಷ್ಟ್ರೀಯ ಅಧ್ಯಕ್ಷೆ" ಎಂದಿತ್ಯಾದಿಯಾಗಿ ಕರೆದಿರುತ್ತ. ಆದರೆ ತೀರ ಸರಳವಾದ "ತತ್ವಜ್ಞಾನ ಸಂಸ್ಥೆಯ ಅಧ್ಯಕ್ಷೆ (of the international Theosophical Society) ಎಂದು ಕರೆದರೆ ಮಾತ್ರ ಯೋಗ್ಯವಾಗಿ ತೋರುವುದು. ಅಧ್ಯಕ್ಷತೆಯ ವಿಷಯವಾಗಿ ಹೇಳುವಾಗ ನನ್ನ ಅಧ್ಯಕ್ಷತೆಯು ಎರಡನೇ ಅವಧಿಯು ಬರುವ ವರ್ಷದಲ್ಲಿ ಕೊನೆಗೊಳ್ಳುವುದು. ಆ ನನ್ನ 74ನೇ ವರ್ಷದಲ್ಲಿ ತತ್ವಜ್ಞಾನ (Theosophy) ಸಂಸ್ಥೆಯು ಹೊಸ ಅಧ್ಯಕ್ಷೆ ನನ್ನು ಆರಿಸುವುದು ವಿಹಿತವಿದೆ. ನಾನು ಮೂವತ್ತೊಂದು ವರ್ಷಗಳ ಕಾಲ ಈ ಸಂಸ್ಥೆಯಲ್ಲಿದ್ದು ಸಾಕಷ್ಟು ದುಡಿದಿದ್ದೇನೆ. ನನಗಿಂತ ಕಿರಿಯರು ಈ ಸ್ಥಾನಕ್ಕೆ ಯೋಗ್ಯರು ಎಂಬುದಾಗಿ ನಾನು ಭಾವಿಸುತ್ತೇನೆ. (The Theosophist - June 1920)

ಪ್ರಪಂಚದ ತತ್ವಜ್ಞಾನ (Theosophy) ನಮ್ಮೆಲ್ಲರನವು ನನಗೆ ಯೂರೋಪಿಗೆ ಹೋಗಲು ಸಾಧ್ಯವಿಲ್ಲವೆಂಬ ಕಾರಣದಿಂದ ಮುಂದುವರಿಸಲಾಗಿದೆಯೆಂದು ತಿಳಿದೆನು. ಅಷ್ಟು ಅನಾನುಕೂಲತೆಗೆ ನಾನು ಕಾರಣಳಾದರೂ ಹಿಂದೂದೇಶದಲ್ಲಿ ಪರಿಸ್ಥಿತಿಯು ವಿಪರೀತವಾಗದಂತೆ ತಡೆಗಟ್ಟಲು ನಾನು ಒಂದು ಕ್ಷಣಿಯಂತೆ ಇರುವೆನು. ಈಸ್ಟ್ ಇಂಡಿಯಾ ಕಂಪನಿಯ ಆರಂಭದ ದಿನಗಳಲ್ಲಿ ಈ ದೇಶಕ್ಕೆ ತಗಲಿದ್ದ ವ್ಯಾಧಿಯಂತೆ ಈಗ ಪುನಃ ಅದೇ ಬಿಕ್ಕಟ್ಟು ಒದಗಿರುವಾಗ ನಾನು ಇಲ್ಲಿಂದ ಈಗ ಹೋದರೆ ಅದು ಹೇಡಿತನವೂ ವಿಶ್ವಾಸಘಾತುಕತನವೂ ಆಗುತ್ತದೆ---!

ಪಂಜಾಬಿನ ದುರಂತ (ಜಲಿಯನ್‌ವಾಲಾ ಬಾಗ್) ವು ನಡೆದ ಮೇಲೆ ಮಹಮ್ಮದೀಯರ ಮತೀಯ ಭಾವನೆಯನ್ನು ತಳದಿಂದಲೇ ಕದಡಿಸುವ ಅವರ ನಿಮಿತ್ತವಾಗಿಯೊಂದು ನಮ್ಮ ಮುಂದಿದೆ. ಪರಿಣಾಮವಾಗಿ ಸರಕಾರದೊಡನೆ ಅಸಹಕಾರ ಚಳುವಳವನ್ನು ಹೂಡಿ ಸರಕಾರದ ಅಭದ್ರತೆಗೆ ಕಾರಣವನ್ನುಂಟು

ಮಾಡುವ ಕಾರ್ಯಕ್ರಮವನ್ನು ಸಿದ್ಧಪಡಿಸಲಾಗಿದೆ. ನಮ್ಮಲ್ಲಿ ಬರೋ ಕೆಲವರು ಇದಕ್ಕೆ ವಿರೋಧವಾಗಿ ಬರೆಯುತ್ತಲೇ ಇದ್ದೇವೆ. ಇದನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ವಿರೋಧಿಸಲು ನಾನು 3,000 ಮೈಲುಗಳಷ್ಟು ದೂರಕ್ಕೆ ಪ್ರಯಾಣ ಬೆಳೆಸಿ ಇದೀಗಲೇ ಹಿಂದಿರುಗಿದೆನು. ನಮ್ಮಲ್ಲಿ ಕೆಲವರು ಮುಖ್ಯ ವ್ಯಕ್ತಿಗಳು ಸಭೆಯಲ್ಲೂ ಅವರಿಗೆ ಸಹಕರಿಸಿ ನಿಂತಿರುವ ಕೆಲವು ತೀವ್ರಗಾಮಿ ಹಿಂದೂಗಳಿಗೂ ಈ ಅಸಹಕಾರ ಚಳುವಳವು ಹಾನಿಕಾರಕವೆಂಬುದನ್ನು ಹೇಳಿದೆವು. (The Adyar Bulletin - June 1920.)

ಈ ಎಲ್ಲಾ ಹೋರಾಟಗಳ ಮಧ್ಯೆಯಲ್ಲಿ ತತ್ವಜ್ಞಾನ ಸಂಸ್ಥೆ (Theosophical Society)ಗಳು ಸಮಾಧಾನದಿಂದ ಶಾಂತತೆಯಿಂದ ತನ್ನ ಕೆಲಸವನ್ನು ಹಿಡಿದು ಮುನ್ನಡೆದಿದೆ---ಪ್ರಪಂಚದ ಎಲ್ಲಾ ಭಾಗದಲ್ಲೂ ನಮ್ಮ ಶಾಖೆಗಳು (Lodges) ಪ್ರತಿದಿನ ಬೆಳೆಯುತ್ತಿವೆ. ಬರ್ಮಾ, ಜಾವಾ, ಚೀನಾ, ಜಪಾನ್, ಕೆನಡಾ, ಉತ್ತರ ಅಮೇರಿಕಾ, ಮೆಕ್ಸಿಕೋ ಇತ್ಯಾದಿ ದೇಶಗಳಲ್ಲಿಯೂ ರೋಡಿಷ್ಯಾ ಖಂಡ ಮತ್ತು ಪೂರ್ವ ಆಫ್ರಿಕಾದಲ್ಲಿ ಶಾಖೆಗಳು ಅಭಿವೃದ್ಧಿಗೊಂಡಿವೆ. ನಾಳೆ ದಿನ ನಮ್ಮ ಸಂಚಾರೀ ಕಾರ್ಯದರ್ಶಿ ಬಿ.ಪಿ. ವಾಡಿಯಾರನ್ನು ನಾವು ಸ್ವಾಗತಿಸುತ್ತೇವೆ---- (1921ರಲ್ಲಿ ಅಧ್ಯಕ್ಷತೆಗೆ ಹೊಸ ಚುನಾವಣೆಯಾಗಬೇಕೆಂದು ಸೂಚಿಸಿದ್ದಕ್ಕೆ ನನಗೆ ಹಲವು ಸಲಹೆಗಳು ಆ ವಿಷಯದಲ್ಲಿ ಬರುತ್ತಾ ಇವೆ. ನನ್ನ ಕಣ್ಣು ನೋವಿನ ಕಾರಣದಿಂದ ನನಗೆ ಅಧ್ಯಕ್ಷೆಯಾಗಿ ಮುಂದುವರಿಯಲು ಸಾಧ್ಯವಿಲ್ಲವೆಂದು ಹೇಳಿದೆನು! ಆದರೆ ಈಗ ಸುಧಾರಿಸುತ್ತಾ ಇದೆ; ದೃಷ್ಟಿ ಬಲವು ಹೆಚ್ಚುತ್ತಾ ಇದೆ----ಸದಸ್ಯರು ಇಚ್ಛಿಸಿದರೆ ನಾನು ನನ್ನ ಕೆಲಸವನ್ನು ಮುಂದುವರಿಸುವುದರಿಂದ ಹಿಗ್ಗಲು ಇಚ್ಛಿಸುತ್ತೇನೆ----ನಾನೀಗ ಕಾಶಿಯಲ್ಲಿ (ಬನಾರಸ್) ಕುಳಿತುಕೊಂಡು ಬರೆಯುತ್ತಿದ್ದೇನೆ. ಹಲವು ಮಹಾಋಷಿಗಳ, ಸಂತರ, ಮಹಾತ್ಮರ, ಪ್ರಸಿದ್ಧ ರಾಜರ ಮತ್ತು ಹಿಂದೂ ಮತದ ಹೃದಯವಾದ ಈ ಕಾಶೀ ನಗರವು ನನಗೆ ತುಂಬಾ ಪ್ರಿಯವಾದುದಾಗಿದೆ. ನಾನು ನನ್ನ ಹಳೇ "ಶಾಂತಿ ಕುಂಜ"ದಲ್ಲಿ, ನನ್ನ ಹಳೇ ಬರೆಯುವ ಮೇಜಿನಲ್ಲಿ ----ಇಂದೀಗ ಇದನ್ನು ಬರೆಯುತ್ತಾ ಇದ್ದೇನೆ---- ಕಾಶಿಯಾದರೋ ನನಗೆ ತುಂಬಾ ಪ್ರಿಯವಾದ ಮತ್ತು ಬಹು ಸುಂದರವಾದ ನಗರವಾಗಿದೆ, ನಾನು ಉತ್ತರ ಪ್ರದೇಶಕ್ಕೆ ಬಂದರೆ ಅದು ನನಗೆ ನನ್ನ ಸ್ವಂತ ಮನೆಗೆ ಬಂದಂತೆಯೇ ಸರಿ. (The Theosophist- Nov. 1920).

1921

ಅಡೆಯಾರಿನ ನಿವಾಸಿಗಳೆಲ್ಲ ಒಟ್ಟುಸೇರಿ ನಮ್ಮನ್ನು ಸಂದರ್ಶಿಸಿಸಿದಲ್ಲದೆ ಸದಸ್ಯರನ್ನೆಲ್ಲ ಆಹ್ವಾನಿಸುತ್ತಾ ಒಂದು ಸಂತೋಷಕರವಾದ ಕೂಟವನ್ನು ನಡೆಸಿದರು ---- ಬಾವಟ್ಟನಲ್ಲಿ ಉದ್ಯಾನದ ಆಲದ ಮರದ ಕೆಳಗೆ The Great Plan - ಎಂಬುದಾಗಿ ನಾಲ್ಕು ಭಾಷಣಗಳನ್ನು ಎಂದಿನಂತೆ ಮಾಡಿದೆನು ---- ಶ್ರೀಯುತ ಜಿನರಾಜದಾಸರು India's Gift to Nations ಎಂಬ ವಿಷಯವಾಗಿ ಮಾತಾಡಿದರು.

ಮಾನ್ಯ ಡ್ಯೂಕ್ ಆಫ್ ಕನ್ನಾಟ್ (Duke of Connaught) ಇವರು ಜನವರಿ 10 ರಂದು ಮದ್ರಾಸಿಗೆ ಬಂದಿದ್ದಾಗ ಒಳ್ಳೆಯ ಸತ್ಕಾರ ಕೂಟವೊಂದನ್ನು ನೀಡಲಾಗಿತ್ತು ---- ಅಸಹಕಾರ ಚಳವಳಿಗಾರರು ಆ ಉತ್ಸವವನ್ನು ಕೆಡಿಸಲು ತುಂಬಾ ಪ್ರಯತ್ನಿಸಿದರಾದರೂ ಅದು ನಗೆಗೀಡಾಗುವಂತೆ ನಿರರ್ಥಕವಾಯಿತು. (The Adyar Bulletin—Jan. 1921.)

ಇದನ್ನು ದೂರದ ದಿಲ್ಲಿಯಿಂದ ಬರೆಯುತ್ತಿದ್ದೇನೆ. ಹಿಂದೂಸ್ಥಾನದ ರಾಜಧಾನಿಯಾದ ಈ ನಗರದಲ್ಲಿ ಎಪ್ಪತ್ತು ಯಾ ಎಂಬತ್ತು ದೇಶೀಯ ರಾಜರು, ಸರಕಾರದ ಪ್ರತಿನಿಧಿಗಳು, ಶಾಸನ ಸಭಾಸದಸ್ಯರು ಮತ್ತು ಜನಸಂದಣಿಯೆಲ್ಲಾ ಕೂಡಿರಲು ಆ ದರ್ಬಾರಿಯಲ್ಲಿ ನಾನೂ ಇದ್ದೇನೆ. ಎಲ್ಲರೂ The Duke of Connaught ಇವರ ಸುತ್ತುಗಟ್ಟಿದ್ದಾರೆ ---- ಫೆಬ್ರುವರಿ 9 ರಂದು ಶಾಸನ ಸಭೆಗೆ ರಾಜನ ಸಂದೇಶವು (The King's message) 'ಸ್ವರಾಜ್ಯದ ಪ್ರಾರಂಭ' ಎಂಬುದಾಗಿ ಶ್ರುತಪಡಿಸಿತು.. (The Adyar Bulletin.)

Scout and Guide ಎಂಬ ಬಾಲಚಮೂ ದಳದ ಸ್ಥಾಪಕರೂ ಪ್ರಧಾನಿಯೂ ಆದ ಜನರಲ್ ಸರ್ ರಾಬರ್ಟ್ ಬ್ಯಾಡನ್ ಪೋವೆಲ್ ಮತ್ತು ಅವರ ಹೆಂಡತಿಯೂ ಹಿಂದೂಸ್ಥಾನಕ್ಕೆ ಬಂದುದು ಮತ್ತೊಂದು ಪ್ರಾಮುಖ್ಯ ಘಟನೆಯಾಗಿದೆ. ಅವರು ಭಾರತದ ಬಾಲಚಮೂ ದಳವನ್ನೆಲ್ಲ ಒಂದೇ ಸಂಸ್ಥೆಯೊಳಗೊಳಗಾಗುವ ಉದ್ದೇಶದಿಂದಾಗಿ ಬಂದಿದ್ದರು. ಪ್ರಾಚೀನ ಭಾರತೀಯ ಹುಡುಗರ ಸ್ಕೌಟು ದಳವನ್ನು ನಾನೇ ಸ್ಥಾಪಿಸಿದೆನು. ಶ್ರೀ ಎಫ್. ಜಿ. ಪಿಯರ್ಸ್ ಮತ್ತು ಜಿ. ಎಸ್. ಅರುಂಡೇಲ್ ಇವರು ತರಬೇತುಗೊಳಿಸುವವರಾಗಿದ್ದು ಕೂಡಲೇ ಈ ದಳವು ಹಿಂದೂಸ್ಥಾನದಲ್ಲೆಲ್ಲಾ ಹಬ್ಬಿತು. ನನ್ನನ್ನು ಭಾರತೀಯ ದಳದ "Protector" ಎಂಬುದಾಗಿ ಹೇಳಲಾಗಿತ್ತು ---- ಮದ್ರಾಸು ಗವರ್ನರ್ ಲಾರ್ಡ್ ಪೆಂಟ್ಲ್ಯಾಂಡ್ ಇವರು ಆಂಗ್ಲ ಹುಡುಗರಿಗೆ ಮತ್ತು ಆಂಗ್ಲಭಾರತೀಯ (Anglo-Indian) ಹುಡುಗರಿಗೆ ಪ್ರತ್ಯೇಕ ಸ್ಕೌಟುದಳವನ್ನು

ಸ್ಥಾಪಿಸಿದನು. ನಮ್ಮ ಇಂಡಿಯ ಗವರ್ನರ್ ಲಾರ್ಡ್ ವಿಲ್ಲಿಂಗ್ಡನ್ ಇವರ ನೇತೃತ್ವದಲ್ಲಿ "ಬೆಸೆಂಟ್ ಸ್ಕೌಟ್" ಮತ್ತು "ಸೆಂಟ್‌ಲ್ಯಾಂಡ್ ಸ್ಕೌಟ್" ಎಂಬುದಾಗಿ ಕರೆಯಲ್ಪಡುತ್ತಿದ್ದ ಎರಡೂ ದಳಗಳನ್ನು ಜೊತೆಗೂಡಿಸಿ ಅವೆಲ್ಲವನ್ನು ಬ್ಯಾಡೆನ್ ಪೊವೆಲ್ ಇವರ ದಳಕ್ಕೆ ಸೇರಿಸಲಾಯಿತು, ಆಗ ನಡೆಸಿದ ಬಹು ದೊಡ್ಡ ಕವಾಯತ್ತಿನಲ್ಲಿ (rally) ಸರ್ ಬ್ಯಾಡೆನ್ ಪೊವೆಲ್ ಇವರ ಸ್ಕೌಟ್ ದಳಗಳಲ್ಲಿ ಎಲ್ಲವೂ ಒಂದೇ ಸಂಸ್ಥೆಯಾಗಿ ಮಾರ್ಚ್ ಮಾಡುತ್ತಿದ್ದುದನ್ನು ಕುರಿತಾಗಿ ಬಹಿರಂಗಪಡಿಸಿದನು. (The Theosophist – ಮಾರ್ಚ್ 1921)

ಮೇ 27ರಂದು ನಾನು ಮದ್ರಾಸಿನಿಂದ ಬೊಂಬಾಯಿಗೆ ಹೋಗಿ ಅಲ್ಲಿಂದ ಮಾರ್ಸೇಲ್ಸ್ ಮತ್ತು ಲಂಡನ್ನಿಗೆ ಹೋದೆನು. ಇಂಗ್ಲೆಂಡ್, ವೇಲ್ಸ್ ಮತ್ತು ಸ್ಕಾಟ್ಲೆಂಡಿನಲ್ಲಿ ಹಿಂದಿನ ತಿಂಗಳ ಪ್ರವಾಸವನ್ನು ಕೈಕೊಂಡು ಅದರನಂತರ ಪ್ಯಾರಿಸ್ ಅಧಿವೇಶನದಲ್ಲಿ ಆಮ್‌ಸ್ಟರ್‌ಡಾಂ ಮತ್ತು ಬ್ರುಸ್ಸೆಲ್ಸ್‌ಗೆ ಹೋಗಬೇಕಾದೆ. ಸಮಯ ಉಳಿದಾದರೆ ಜಿನೇವಾಕ್ಕೆ ಹೋಗಿ ಹಿಂದೂಸ್ಥಾನಕ್ಕೆ ಹಿಂದಿರುಗಬೇಕಾದೆ --- (The Theosophist – ಜೂನ್ 1921.)

ಜುಲೈ ಅಂತ್ಯದಲ್ಲಿ ಪ್ಯಾರಿಸ್‌ನಲ್ಲಿ ನಡೆದ ತತ್ವಜ್ಞಾನ ಸಂಘದ ವಿಶ್ವ ಪರಿಷತ್ತು (World Congress of Theosophists) ತುಂಬಾ ಜಯಪ್ರದವಾಯಿತು, ಎಂದು ಹೇಳಲು ಸಂತೋಷಪಡುತ್ತೇನೆ ---- ನನ್ನ ಈ ಪ್ರಯಾಣದ ವೇಳೆಗೆ ನಾನು ತುಂಬಾ ಬರೆಯುತ್ತಲೇ ಇರಬೇಕಾಗಿತ್ತು. ನಾನು ಬೊಂಬಾಯಿಗೆ ಹಿಂದಿರುಗಿ ಎರಡು ದಿನದಲ್ಲಿಯೇ National Home Rule League ಇದು ಏರ್ಪಡಿಸಿದ Reform Conference ಇದರ ಅಧ್ಯಕ್ಷೆ ಭಾಷಣವನ್ನು ತಯಾರಿಸಬೇಕಿತ್ತಲ್ಲದೆ ಪ್ರತಿ ವಾರವೂ New India ಪತ್ರಿಕೆಗೆ ಸಲ್ಪು ಹೆಚ್ಚು ಬರೆವಣಿಗೆಯನ್ನು ಕಳುಹಿಸಲೇ ಬೇಕಾಗಿತ್ತು ---- ಜುಲೈ 23ರಂದು ಥಿಯೋಸೊಫಿ ಸಂಸ್ಥೆಯ ವಿಶ್ವ ಪರಿಷತ್ತು ಪ್ರಾರಂಭವಾಯಿತು. 1,400 ಪ್ರತಿನಿಧಿಗಳು ಮೂವತ್ತೊಂಭತ್ತು ದೇಶಗಳಿಂದ ಬಂದಿದ್ದು ಈ ಮೊದಲನೇ ವಿಶ್ವ ಪರಿಷತ್ತು ಬಹು ಜಯಪ್ರದವಾಗಿ ಕೊನೆಗೊಂಡಿತು.

ನನ್ನ 73ನೇ ಹುಟ್ಟು ಹಬ್ಬದ ನಿಮಿತ್ತ ಎಂದಿನಂತೆ ಎಲ್ಲೆಡೆಗಳಿಂದಲೂ ವಿದೇಶ ತಂತಿಗಳು, ಪತ್ರಗಳು, ಉಡುಗೊರೆಗಳು, ಎಂದು ಮೊದಲಾಗಿ ಬಂದೇ ಬಂದುವು. ಹಿಂದಿನ ರೂಢಿಯಲ್ಲಿ ಬಂದ ಬಹುಮಾನಗಳನ್ನು ನಾನು ಪ್ರಯಾಣ ಖರ್ಚಿಗಾಗಿ ಉಪಯೋಗಿಸಿದೆನು --- ಹುಡುಗರಾಗಿದ್ದಾಗ ನಮ್ಮಿಂದ ಅಗಲಿದ್ದ ಇವರ ಸೋದರರನ್ನು ಇದೀಗ ನಾವು ಬೊಂಬಾಯಿಯಲ್ಲಿ ಇದೇ ಡಿಸೆಂಬರ್ 3ನೇ ದಿನದಂದು ಸಂತೋಷದಿಂದ ಸ್ವಾಗತಿಸಿದೆವು. 5ನೇ ತಾರೀಖಿನಲ್ಲಿ ಅಡೆಯಾರ್‌ನಲ್ಲಿ ಅವರಿವರಿಗೆ ಸಂಭ್ರಮದ ಆಹ್ವಾನವನ್ನೀಯಲಾಯಿ

ತ್ತು----ವಾದ್ಯ, ಸಂಗೀತ, ತೋರಣಾದಿ ಅಲಂಕಾರಗಳಿಂದೊಡಗೊಂಡು ಒಂದು ಸಭೆಯನ್ನು ಸೇರಿಸಿ ನಾನು ಅವರವರ ಮಧ್ಯೆ ವೇದಿಕೆಯಲ್ಲಿ ನಿಂತು, ನಮ್ಮ ಹಿಂದೆ ನಮ್ಮ ಥಿಯೋಸೊಫಿ ಸಂಸ್ಥೆಯ ಸಂಸ್ಥಾಪಕರವರ ಪ್ರತಿಮೆಗಳೂ, ನಮ್ಮ ಎದುರಿಗೆ ಹಜಾರದಲ್ಲಿ ಸಭಿಕರೂ ಇರಲು ನಾನು ಮಾತಾಡಲು ತೊಡಗಿದಾಗ ಸಂತೋಷದಿಂದ ಉದ್ವೇಗಗೊಂಡಿದ್ದ ನಮ್ಮ ಬಾಯಿಯಿಂದ ಮಾತುಗಳೇ ಹೊರಡದಾದುವು. ನಾನೇ ಸ್ವಲ್ಪ ಹೊತ್ತು ಮಾತಾಡಿದನಂತರ ಶ್ರೀ ಜಿಡ್ಡು ಕೃಷ್ಣಮೂರ್ತಿಯೂ ಅದರನಂತರ ನಿತ್ಯಾನಂದನೂ ಕೆಲವು ನಿಮಿಷಗಳ ಕಾಲ ಸಂಕ್ಷೇಪವಾಗಿ ಮಾತಾಡಿದರು. ಈ ರೀತಿಯಾಗಿ 1910 ರ ಜನವರಿ 11ನೇ ತಾರೀಖಿನಿಂದ ಪ್ರಾರಂಭವಾದ ನಮ್ಮ ಜೀವನಚರಿತ್ರೆಯ ಒಂದು ಭಾಗವು 1921ರ ಡಿಸೆಂಬರ್ 5ಕ್ಕೆ ಮುಗಿಯಿತು. ಅಂದು ಸೋದರ ಲೆಡ್‌ಬೀಟರನ ತರಬೇತಿನಲ್ಲಿ ಇದ್ದ ಅವರು ಇಂದಿಗೆ ನೈತಿಕವಾಗಿಯೂ ಮಾನಸಿಕವಾಗಿಯೂ ಉತ್ತಮ ನಾಗರಿಕರಾಗಿ ವಿರಾಜಮಾನರಾಗಿದ್ದಾರೆ---.

1922.

ಡಿಸೆಂಬರ್ (1921) 13 ರಂದು ವೇಲ್ಸ್‌ನ ಮಾನ್ಯ ರಾಜಕುಮಾರನು ಬನಾರಸ್‌ಗೆ ಬಂದು ಹಿಂದೂ ವಿಶ್ವವಿದ್ಯಾಲಯಕ್ಕೆ ಭೇಟಿಯಿತ್ತು, ಗೌರವ ಡಾಕ್ಟರೇಟ್ ಪದವಿಯನ್ನು ಸ್ವೀಕರಿಸಿದ್ದನು, ಕುರಿತು ಹೇಳುವುದಕ್ಕೆ ಮರೆಯಲಾರೆನು, ಆ ರಾಜಕುಮಾರನ ಸಂದರ್ಶನವನ್ನು ವಿರೋಧಿಸಿ ನಗರದಲ್ಲಿ ಒಂದು ಹರತಾಳವನ್ನು ನಡೆಸಲಾಗಿತ್ತು, ಆದರೆ ವಿಶ್ವವಿದ್ಯಾಲಯವು ನಗರದ ಹೊರಗೆ ಇರುವುದರಿಂದ ಅಲ್ಲಿ ಏನೂ ತೊಂದರೆಯಾಗಲಿಲ್ಲ----ರಾಜಕುಮಾರನು ಕೇವಲ ತರುಣನಂತೆ ಕಾಣುತ್ತಿದ್ದನಲ್ಲದೆ ಅವನ ಕಂಠಸ್ವರವು ಚೆನ್ನಾಗಿದ್ದು ಎಲ್ಲರಿಗೂ ಕೇಳಿಸುವಂತಿತ್ತು--

ಮರುದಿನವೇ [illegible] ಅದೇ ತರಹದ ಡಾಕ್ಟರೇಟ್ ಪದವಿಯನ್ನಿತ್ತು ನನ್ನನ್ನು ಗೌರವಿಸಿದಾಗ ನಾನು ಆ ವಿದ್ಯಾರ್ಥಿಗಳಿಗೆ ಹದಿನೆಂಟು ವರ್ಷ ಸಲ್ಲಿಸಿದ ನನ್ನ ಕಾಲಿನ ಸೇವೆಯನ್ನು ನೆನೆದು ಸಂತೋಷಪಡುತ್ತಿದ್ದೆನು. ಜನವರಿ 12ರಂದು ರಾಜಕುಮಾರನು ಮದ್ರಾಸಿಗೆ ಬಂದನು, 2000 ಸ್ಕೌಟು ಮತ್ತು ಗೈಡ್ ದಳದ ಬಾಲಕರು ತಾರೀಕು 16 ರಂದು ರಾಜಭವನದಲ್ಲಿ ನೆರೆದು ಅವನನ್ನು ಗೌರವಪೂರ್ವಕವಾಗಿ ಸ್ವಾಗತಿಸಲು ಏರ್ಪಡಿಸಿದೆನು. ಇದು ಹಿಂದೂಸ್ಥಾನದಲ್ಲಿಯೇ ಆ ವರೆಗೂ ನಡೆಯದೇ ಇದ್ದ ದೊಡ್ಡ ಕವಾಯತು (Record rally) ಎಂದೆನ್ನಲಾಗಿದೆ. ವೇಲ್ಸ್‌ನ ರಾಜಕುಮಾರನ ಸಂದರ್ಶನದ ವೇಳೆಗೆ ಬ್ರಿಟಿಷ್ ಸರಕಾರವನ್ನು ಅಪಮಾನಕ್ಕೀಡಾಗಿಸಲು ಕೆಲವರು ಯತ್ನಿಸುತ್ತಿದ್ದಾರೆ. ಹೀಗೂ ಆಡ್ಯಾರ್ ಬುಲೆಟಿನ್, New INDIA ಪತ್ರಿಕಾ ಬುಲೆಟಿನ್ ಮತ್ತು "ಗೋ

ಖಿಲಿ ಹಾಲ್" ಕಟ್ಟಡಗಳಲ್ಲಿವೂ ರಾಜಕುಮಾರನ ಆಗಮನವನ್ನು ಸ್ವಾಗತಿಸುವುದಕ್ಕಾಗಿ ಅಲಂಕರಿಸಲ್ಪಟ್ಟವು. (Adyar Bulletin.)

"ನಾನು ಈ ಆರು ದಿನಗಳು ದಿಲ್ಲಿಯಲ್ಲಿದ್ದು ಅಡೆಯಾರ್‌ಗೆ ಮಾರ್ಚ್ 12 ರಂದು ಹೊರಡುತ್ತೇನೆ. ಈಗ ಬಹಳ ವಿಷ್ಣದ ಕೆಲಸವೂ ಇದೆ. Legislative Assembly ಇದರಲ್ಲಿ ಬಜೆಟ್ ವಿಷಯವಾಗಿ ಚರ್ಚೆಯು ನಡೆಯುತ್ತಿದೆ. ಎರಡು ದಿನ ನಾನು ಗ್ಯಾಲರಿ ಸಭಾ ಭವನದಲ್ಲಿ ಹಾಜರಿದ್ದೆನು ---- ಮರುದಿನ ರಾಷ್ಟ್ರಪತಿ ಭವನದಲ್ಲಿ ಊಟ ಮಾಡಿದೆನಲ್ಲದೆ ವೈಸರಾಯರೊಡನೆ ವಿಚಾರವಿನಿಮಯವನ್ನು ಮಾಡಿದೆನು ---- ಎಡ್ವಿನ್ ಮಾಂಟೆಗ್ಯೂ ಇವರು ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟನೆಂಬ ಕಹಿ ವಾರ್ತೆಯು ಶೀಘ್ರವಾಗಿ ತಲುಪಿತು. ಅವನ ಅಗಲುವಿಕೆಯಿಂದ ಈ ದೇಶವು ಒಬ್ಬ ಮಿತ್ರನನ್ನು ಕಳೆದುಕೊಂಡಿತು ---- ಇಂದು ನಾನು Civil Disobedience—Its Use and Abuse— ಇದನ್ನು ಕುರಿತಾಗಿ ಮಾತಾಡುತ್ತೇನೆ. ಅದನ್ನು ಯಥಾರ್ಥವಾಗಿ ಪ್ರಾರ್ಥನೆಗೊಳಿಸುವೆನೋ ಇಲ್ಲವೋ ತಿಳಿಯೆನು. (The Adyar Bulletin—March 1922.)

"---- ನಾನು ಶ್ರೀ ವಾರಿಂಗ್ಟನ್ ಇವನೊಡನೆ ಅಡೆಯಾರ್‌ನಿಂದ ಕೊಲೊಂಬೋಕ್ಕೆ ಹೋಗಿ ಅಲ್ಲಿಂದ ಆಸ್ಟ್ರೇಲಿಯಾಕ್ಕೆ ಹೋಗುತ್ತೇನೆ ---- ಮೇ ೨ ರಂದು ಪರ್ತ್ ನಗರದಲ್ಲಿ ಇಳಿದೆವು. ಅಲ್ಲಿನ ತತ್ವಜ್ಞಾನ (Theosophy) ಸಂಘದ ಸದಸ್ಯರು ನನಗೆ ಒಂದು ಸಾರ್ವಜನಿಕ ಸತ್ಕಾರ ಕೂಟವನ್ನು ಏರ್ಪಡಿಸಿದರು. ನಾನು ಸಿಡ್ನಿಯಲ್ಲಿದ್ದಾಗ ಶ್ರೀ ಮತ್ತು ಶ್ರೀಮತಿ ಮ್ಯಾಕೆ (Mackay) ಇವರ ಅತಿಥಿಯಾಗಿದ್ದೆನು. ಇವರಿಬ್ಬರೂ ಬಹಳ ಶ್ರದ್ಧಾವಂತ ತತ್ವಜ್ಞಾನಿಗಳಾಗಿದ್ದರು. ಶ್ರೀ ಲೆಡ್‌ಬೀಟರ್ ಇವರು ಮತ್ತು ಶ್ರೀ ಮತ್ತು ಶ್ರೀಮತಿ ಜಿನರಾಜದಾಸ ಇವರೂ ಸಿಡ್ನಿಯಲ್ಲಿ ಆ ವೇಳೆಗೆ ಇದ್ದರು ---- ಇಲ್ಲಿ ನಾವು ತುಂಬಾ ಪ್ರಯೋಜನಕಾರಿಯಾದ ಕೆಲಸಗಳಲ್ಲಿ ನಿರತರಾಗಿದ್ದೆವು. ಥಿಯೊಸೊಫಿ ಸಂಘದ ಪರವಾಗಿ ಹಲವು ಸಭೆಗಳನ್ನು ನಡೆಸಲಾದವು. ಸಿಡ್ನೀ ಮತ್ತು ಮೆಲ್ಬೋರ್ನ ಮಧ್ಯೆ ಹಲವು ಬಾರಿ ಓಡಾಡಿದೆವು." (The Theosophist—July 1922).

"ಹಿಮಾಲಯದ ತಪ್ಪಲಿನ ಸಿಮ್ಲಾದಿಂದ ಬಹಳ ಅನುಕೂಲತೆಯ ಹವೆಯಲ್ಲಿ ನೆಲಸಿ ಅಲ್ಲಿಂದ ಬರೆಯುತ್ತಿದ್ದೇನೆ. ಲಂಡನ್ನಿನ ಮಂಜಿನಂತೆ ಎಲ್ಲೆಲ್ಲಿ ದಟ್ಟವಾಗಿ ಮಂಜು ಕವಿದಿದೆ ---- ಈ ಮೂರು ದಿನಗಳಲ್ಲಿ His Majesty the Sun— ಇವನು ಸ್ವಲ್ಪ ಮಾತ್ರ ತನ್ನ ಶೋಭಾಯಮಾನ ಮುಖವನ್ನು ತೋರಿಸಿದನು. ಶ್ರೀ ಮತ್ತು ಶ್ರೀಮತಿ ಜಮ್ನಾದಾಸ್ ದ್ವಾರಕಾದಾಸ್ ಇವರು ಸಿಮ್ಲಾಕ್ಕೆ ಆ ಜಡಿಮಳೆಯ ಎಡೆಯೇ ಬಂ

ದರು. ಆದರೆ ಭಾರತದ ವೈಸ್ರಾಯಿಯು ಆಹ್ವಾನವನ್ನು ನಿರುಪಾಯವಾಗಿ ಮಾಡಲು ನಿರಾಕರಣೆಯನ್ನು ಕಳುಹಿಸಿದರು, ವೈಸ್ರಾಯ್ ಲಾರ್ಡ್ ರೀಡಿಂಗ್ ಇವರು ಗಿಂಡಿಯ ಸಭೆಯನ್ನು ತಮ್ಮ ಪ್ರಾರಂಭ ಭಾಷಣದೊಡನೆ ಉದ್ಘಾಟಿಸಿದರು ---" (The 6th Sept. 1922)

"--- ಈಗ ನಾನು ಬರೋಡಾದಿಂದ ಬರೆಯುತ್ತಿದ್ದೇನೆ, ಕುಮಾರಿ ವಿಲ್ಸನ್ ಮತ್ತು ನಾನು ಸರಕಾರೀ ಅತಿಥಿಗಳಾಗಿದ್ದೇವೆ. ಇಲ್ಲೂ ಹಲವು ಸಾರ್ವಜನಿಕ ಭಾಷಣಗಳನ್ನು ಕೊಡಲಾಯಿತು --- ಇಲ್ಲಿ ಸ್ಕೌಟ್ ದಳದ ಕವಾಯತು, ಸೂರತ್ತಿನಿಂದ ಬಂದ ನಿಯೋಗದೊಡನೆ ಮಾತುಕತೆ, ಹುಡುಗಿಯರ ಶಾಲೆಗೆ ಸಂದರ್ಶನ, ಸಾರ್ವಜನಿಕ ಭಾಷಣಗಳು ಎಂದು ಕಡೆಗೆ ಮೂರು ದಿನ ಅಹ್ಮದಾಬಾದಿಗೆ ಅದೇ ರೀತಿ ಕಾರ್ಯ ನಿರ್ವಹಣೆಗಾಗಿ ಹೋಗಬೇಕಿದೆ, ಅಲ್ಲಿಂದ ಒಂದು ದಿನಕ್ಕೆ ಭಾವನಗರಕ್ಕೆ ಹೋಗಿ ಅನಂತರ ಬೊಂಬಾಯಿಗೆ ಹೋಗುತ್ತಿದ್ದೇವೆ." (The Adyar Bulletin - Nov. 1923)

ಮಹಾರಾಜ ಹೋಲ್ಕರರು ತಮ್ಮ ರಾಜ್ಯದಲ್ಲಿ ವಿದ್ಯಾಭಿವೃದ್ಧಿಯನ್ನು ಸಾಧಿಸುವುದಕ್ಕಾಗಿ ಅಡಿಯಾರ್ ಕೇಂದ್ರದಿಂದ ಡಾ॥ ಜಾರ್ಜ್ ಅರುಂಡೇಲ್ ಇವರನ್ನು ಅಲ್ಲಿಗೆ ಕರೆಸಿಕೊಂಡರು, ಆ ಕೆಲಸಕ್ಕೆ ಅರುಂಡೇಲರಿಗೆ ಸಮಾನವಾದ ಯೋಗ್ಯತೆಯನ್ನು ಹೊಂದಿದವರು ಬೇರಾರೂ ಇರಲಿಲ್ಲ, ಅಲ್ಪ ಕಾಲದಲ್ಲಿ ಅವರು ಆ ರಾಜ್ಯದ ವಿದ್ಯಾಪ್ರಗತಿಗಾಗಿ ವಿಶೇಷವಾಗಿ ದುಡಿದುದರ ವರದಿಯು ಅದಾಗಲೇ ಬಂತು --- ಮಾರ್ಚ್ ತಿಂಗಳ ಅಂತ್ಯದಲ್ಲಿ ಅಡಿಯಾರ್ ಆಲದ ಮರದ ಕೆಳಗೆ ಒಂದು ಸಭೆಯನ್ನು ನಡೆಸಿದೆವು, Christ in History - ಎಂಬ ವಿಷಯದ ಮೇಲೆ ನಾನು ಮಾತಾಡಿದೆನು. ಶ್ರೀ ಜಿನರಾಜದಾಸರು ತಮ್ಮ ಇತರ ಕಾರ್ಯಕ್ರಮಗಳೊಡನೆ ಮಾಯಾಲಾಂದ್ರವನ್ನು ತೋರಿಸುತ್ತಾ ಸಮ್ಮೇಳನವನ್ನು ಉತ್ಸಾಹಕರವಾಗಿ ಜರುಗಿಸಿದರು ---- (ಜೂನ್ ತಿಂಗಳಲ್ಲಿ ಶ್ರೀಮತಿ ಬೆಸೆಂಟ್ ಇವರು ಒಂದು ವಿಷಹಾವಿನ ಕಡಿತಕ್ಕೊಳಗಾಗಿ ರಕ್ತವು ಕೆಟ್ಟು ಚಿಕಿತ್ಸೆ ಹೊಂದುತ್ತಿದ್ದುದು ತಿಳಿಯಲಾಯಿತು.)

ಶ್ರೀ ಅರುಂಡೇಲರು The Adyar Bulletin, New India, The Theosophist ಪತ್ರಿಕೆಗಳ ಸಂಪಾದಕೀಯವನ್ನು ತಾತ್ಕಾಲಿಕವಾಗಿ ಬರೆಯುತ್ತಿದ್ದರು ---- ಸೆಪ್ಟೆಂಬರ್ - ನವೆಂಬರ್ ತಿಂಗಳಲ್ಲಿ The Brotherhood Campaign ಇದಕ್ಕಾಗಿ ದೇಶದ ಎಲ್ಲ ವರ್ಗದವರನ್ನೆಲ್ಲ ಜೊತೆಗೂಡಿಸಿದ್ದಲ್ಲದೆ ಸೆಪ್ಟೆಂಬರ್ ೨೦ರಲ್ಲಿ Gokhale

Hall ಇದರಲ್ಲಿ ದೊಡ್ಡ ಸಭೆಯನ್ನು ಸೇರಿಸಲಾಯಿತು. ಜಾರ್ಜ್ ಅರುಂಡೇಲರು ಬೆಸೆಂಟರಿಗೆ ಆ ಬಗ್ಗೆ ಒಂದು ವಂದನೆಯನ್ನು ಮಾಡಿದರು. ಥಿಯೊಸೊಫಿಕಲ್ ಸಂಸ್ಥೆಯ ಹುಟ್ಟಿದಿನವಾದ ನವಂಬರ್ 17ರಲ್ಲಿ ಅಂತರರಾಷ್ಟ್ರೀಯ ಯುವಕರ ಸಭೆಯ ಭಾರತೀಯ ವಿಭಾಗವನ್ನು ಸ್ಥಾಪಿಸಲಾಯಿತು. (The Adyar Bulletin - Dec. 1923)

1924.

"ನವ್ಯ ರಾಷ್ಟ್ರೀಯ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭ (Convocation) ವನ್ನು ಅಡೆಯಾರ್ ಕೇಂದ್ರದ ಹಜಾರದಲ್ಲಿ ನಡೆಸಿದೆವು. ಶ್ರೀ ಅರುಂಡೇಲರ ಭಾಷಣವು ತುಂಬಾ ಸ್ವಾರಸ್ಯವೂ ಗಂಭೀರವೂ ಆಗಿತ್ತು ---- ರವೀಂದ್ರನಾಥ್ ಟಾಗೋರ್ ಇವರು ಕುಲಪತಿಯಾದುದರಿಂದ ಆ ಸಭೆಗೆ ಬರಬೇಕಾಗಿದ್ದರೂ ಆಗ ಕಾರ್ಯಾಂತರದಲ್ಲಿ ಇರಬೇಕಾಗಿದ್ದುದರಿಂದಲೂ ಉಪಕುಲಪತಿ ಸುಬ್ರಹ್ಮಣ್ಯ ಅಯ್ಯರು ಅಸ್ವಸ್ಥರಾಗಿದ್ದುದರಿಂದಲೂ ಆ ಸಮಾರಂಭಕ್ಕೆ ಅಧ್ಯಕ್ಷಸ್ಥಾನವನ್ನು ವಹಿಸುವ ಗೌರವವು ನನಗೆ ವಹಿಸಲ್ಪಟ್ಟಿತು. (The Theosophist)

"ಆಗಸ್ಟ್ 1ಕ್ಕೆ ನಾನು ನನ್ನ ಐವತ್ತು ವರ್ಷಗಳ ಸಾರ್ವಜನಿಕ ಜೀವನ (1874-1924) ವನ್ನು ಪೂರೈಸಿಕೊಳ್ಳುತ್ತೇನೆ. ನಾನು Political status of Women - ಎಂಬುದಾಗಿ ಮಾತಾಡಿದ್ದೇ ನನ್ನ ಮೊದಲ ಸಾರ್ವಜನಿಕ ಭಾಷಣವಾಗಿತ್ತು. ಅದೇ ವರ್ಷ Reformer ಪತ್ರಿಕೆಯಲ್ಲಿ "Ajax" ಎಂಬ ಗುಪ್ತನಾಮದಿಂದ ನಾನು ನನ್ನ ಮೊದಲನೇ ಲೇಖನವನ್ನು ಬರೆದೆನು ---- (ಪೂನಾ, ಅಲ್ಲಹಾಬಾದ್ ಮತ್ತು ಬೊಂಬಾಯಿಗೆ ಹೋಗಿ ಅದರನಂತರ ಡಾ. ಅನಿ ಬೆಸೆಂಟ್ ಇವರು ಯುರೋಪಿಗೆ ಪ್ರಯಾಣ ಬೆಳೆಸಿದರು). ಇಂಗ್ಲೆಂಡಿನಲ್ಲಿ ನಡೆದ ತತ್ವಜ್ಞಾನ (Theosophy) ಸಮ್ಮೇಳನವು ಬಹು ಉತ್ಸಾಹದಿಂದ ನಡೆಯಿತು. (The Adyar Bulletin)

[ಡಾ. ಅನಿ ಬೆಸೆಂಟ್ ಇವರ ಐವತ್ತು ವರ್ಷಗಳ ಸಾರ್ವಜನಿಕ ಸೇವೆಯ ಗೌರವಾರ್ಥವಾಗಿ ಲಂಡನ್ನಿನ Queen's Hall ನಲ್ಲಿ 1924ರ ಜುಲೈ 23ರಂದು ದೊಡ್ಡ ಸಭೆಯು ಸೇರಿತು. ಆಗ ಅವರು ಎಲ್ಲ ಜನಾಂಗಕ್ಕೆ ಈ ರೀತಿ ಸಂದೇಶವಿತ್ತರು:—

"ನಾವು ಸಾಧಿಸದೇ ಬಿಟ್ಟ ಮಹತ್ತಾದ ಕೆಲಸಗಳನ್ನು ಸಾಧಿಸಲು ನೀವು ಮುಂದೆ ನೋಡಿರಿ. ನಾವು ಕಾಣದೇ ಹೋದ ಉನ್ನತ ಧ್ಯೇಯಗಳನ್ನು ಈಡೇರಿಸಲು ಹೋಗಿರಿ. ಮಾನವ ಗಣದ ಮಕ್ಕಳು ಪಾರಂಪರ್ಯವಾಗಿ ಮಹತ್ತಾದುದನ್ನು ಸಾಧಿಸುವಾಗ ಜನಾಂಗಗಳು ಮಳೆಯನ್ನು ಪಡೆಯುತ್ತವೆ--- ಕೆಲವರು ನಾನಿನ್ನೂ ತರುಣಿಯೆಂದು ಹೇಳುತ್ತಾರೆ, ಹೌದು, ಏಕೆಂದರೆ ಚಿರಂತನ ಜೀವನದ ಧ್ಯೇಯವಿರುವವರಿಗೆ ಪ್ರಾಯವೆಂಬುದೇ ಇಲ್ಲ."

ಶ್ರೀಮತಿ ಬೆಸೆಂಟ್ ಇವಳು ಮಾತಾಡಲಿಕ್ಕೆ ಎದ್ದು ನಿಂತಾಗ ಅವಳು ಪೂರ್ತಿ ಗಾಗಾಂಗಿನಿಯಾಗಿ ತುಂಬಾ ಸಂತೋಷದಿಂದ ಕಾಣುತ್ತಿದ್ದಳು--- ಅವಳು ತನ್ನ ವೈಯಕ್ತಿಕ ಪ್ರಭೆಯನ್ನ ಈಗ ನಂದಿಸಿದ್ದಳು--- ಅವಳು ಯೂರೋಪಿನಿಂದ ಸೆಪ್ಟಂಬರ್ ಗರತಿ ಹಿಂದಿರುಗಿದ್ದಳು. ಅವಳಿಗಾದರೋ ಇಲ್ಲಿ ತುಂಬಾ ಕೆಲಸಗಳು ಕಾದಿದ್ದುವು. ಸಭೆಗಳು, ಸಂದರ್ಶನಗಳು, ಭೇಟಿಗಳು ಎಂಬ ಕಾರ್ಯಕ್ರಮಗಳು ಇದ್ದುವು. ಅವಳು ಸಿಮ್ಲಾಕ್ಕೆ ಹೋಗಿ ಆನಂತರ ಬೊಂಬಾಯಿಗೆ ಬಂದು ಅಕ್ಟೋಬರ್ ಮೊದಲ ವಾರದಲ್ಲಿ ಅಡಿಯಾರ್‌ಗೆ ಬರುವಳು. (The Adyar Bulletin.)

"ನವೆಂಬರ್ 24, 1924ರಂದು ಜಿಡ್ಡು ಕೃಷ್ಣಮೂರ್ತಿ ಮತ್ತು ನಿತ್ಯಾನಂದ ಇವರನ್ನು ಪುನಃ ಸ್ವಾಗತಿಸಲು ನಾನು ಅಡಿಯಾರ್‌ನಿಂದ ಬೊಂಬಾಯಿಗೆ ಬೇರೊಂದು ಕೆಲಸದ ನಿಮಿದಿಂದ ಹೋದೆನು----ತತ್ವಜ್ಞಾನ ಸಂಸ್ಥೆ (Theosophical Society) ಇದರ 49ನೇ ಅಧಿವೇಶನವನ್ನು ಬೊಂಬಾಯಿಯಲ್ಲಿ ನಡೆಸಿದೆವು. ಬಹಳ ಸಂಖ್ಯೆಯಲ್ಲಿ ಜನರು ನೆರೆದಿದ್ದರು. ನಾನು ಸಾಯಂಕಾಲ 5:30 ಘಂಟೆಗೆ ಮೊದಲ ಭಾಷಣವನ್ನು ಮಾಡಿದೆನು. ಡಾ. ಮತ್ತು ಶ್ರೀಮತಿ ಕಸಿನ್ಸ್ ಇವರು ಒಂದು ಕಲಾಪ್ರದರ್ಶನವನ್ನು ಏರ್ಪಡಿಸಿದ್ದು ಸಾರ್ವಜನಿಕರಿಗೆ ತೆರೆಯಲಾಗಿತ್ತು."

1925

ಸಂಪಾದಿಕೆ (Mrs. Besant) ಗೆ ಒಂದು ವಿಮಾನವು ಅಗತ್ಯವಾಗಿ ಬೇಕಾಗಿದೆ. ಅವಳು ಪ್ರಯಾಣ ಮಾಡುತ್ತಿರುವ ದೂರ ಮತ್ತು ಹಲವು ಸ್ಥಳಗಳನ್ನು ಸಂದರ್ಶಿಸುವುದನ್ನೆಲ್ಲ ಇಲ್ಲಿ ಗಮನಿಸಬೇಕಾಗಿದೆ. (The Adyar Bulletin-Feb. 1925.)

"ಕಲ್ಕತ್ತೆಯಲ್ಲಿ ಜನವರಿ 12ರಿಂದ ಎರಡು ದಿನ ಮೂರು ಭಾಷಣಗಳನ್ನು ಕೊಡಲಾಯಿತು. ಮೊದಲಿನದು Commonwealth of India Bill ಎಂಬುದರ ವಿಷಯವಾಗಿತ್ತು. ತಾರೀಖು 16ರಲ್ಲಿ ನಾವು ಬನಾರಸ್ಸಿಗೆ ಹೋಗಿ 21ರ ವರೆಗೆ ಇದ್ದು ಆನಂತರ ಶ್ರೀ ಶಿವರಾವ್ ಮತ್ತು ನಾನು ಡೆಲ್ಲಿಗೆ ಹೋದೆವು. 22ನೇ ತಾರೀಖಿನಲ್ಲಿ ಮಾನ್ಯ ವೈಸ್ರಾಯರನ್ನು ನೋಡುವ ಅವಕಾಶವು ದೊರೆತಾಗ ನಾನು ಅವನಿಗೆ Draft-Commonwealth of India Bill ಇದರ ಪ್ರತಿಯನ್ನು ಕೊಟ್ಟೆನು. ಈ ಸಂಬಂಧವಾಗಿ ನಾನು ಭಾಷಣಗಳನ್ನು ಕೊಡುತ್ತಾ ಬೊಂಬಾಯಿ, ಕಾನ್ಪುರ ಮತ್ತು ಮದ್ರಾಸಿಗೆ ಹೋದೆನು---."

ಡಾ. ಬೆಸೆಂಟ್ ಇವಳ ಉಪಸಂಪಾದಕರು ~~ಹೀ~~ರೀತಿಯಾಗಿ ವರದಿ ಮಾಡಿದರು. "ಥಿಯೊಸಾಫಿಕಲ್ ಸೊಸೈಟಿ" ಇದರ ಅಧ್ಯಕ್ಷೆ ಜುಲೈ 4ರಲ್ಲಿ ಬೊಂಬಾಯಿಯಿಂದ ಲಂಡನ್ನಿಗೆ ಹೋಗುವಳು----ಅಲ್ಲಿಗೆ ತಲುಪಿದ ಕೂಡಲೇ ಚಕ್ರವರ್ತಿ

ಜಾರ್ಜ್ ಮತ್ತು ರಾಣಿ ಮೇರಿ ಇವರು ಬಕ್ಕಿಂಗ್‌ಹ್ಯಾಮ್ ಅರಮನೆ
ಯಲ್ಲಿ ಕೊಟ್ಟ ಔತಣಕೂಟಕ್ಕೆ ಹಾಜರಿದ್ದರು. The Times ಪತ್ರಿ
ಕೆಯು ಬರೆದಂತೆ ಎರಡನೇ ಬಾರಿ ಔತಣಕೂಟದಲ್ಲಿ ರಾಜನು ಬಿಳಿ
ಗೌನಿನ ಮತ್ತು ಸ್ವರ್ಣ ವರ್ಣದ ಉಡುಗೆಯಿಂದ ಅಲಂಕೃತ
ಳಾಗಿದ್ದ ಶ್ರೀಮತಿ ಅನಿ ಬೆಸೆಂಟ್ ಇವರೊಡನೆ ಮಾತಾಡುವ ಸಂ
ದರ್ಭವನ್ನು ಪಡೆದುಕೊಂಡನು."

ಆಗಸ್ಟ್ ತಿಂಗಳಲ್ಲಿ ಶ್ರೀಮತಿ ಬೆಸೆಂಟ್ ಇವರು ಹಾಲೆಂಡಿ
ನಲ್ಲಿದ್ದರು. The Theosophist ಪತ್ರಿಕಾ ವರದಿ ಪ್ರಕಾರ ಅವರು
ಲಂಡನ್ನಿಗೆ The Commonwealth of India Bill ಇದನ್ನು ತೆ
ಗೆದುಕೊಂಡು ಹೋಗಿದ್ದರು, ಅದರ ಭಾರತದ ರಾಜಕೀಯ ಮುಂ
ದಾಳುಗಳು (ಕೆಲವರು ಮಾತ್ರ) ಅದು 'ಜಯಪ್ರದವಾಗುವುದೆಂ
ದು ವಿಶ್ವಾಸವಿಟ್ಟಿದ್ದರು, ಆಗ Secretary of State for India
ಸ್ಥಾನದಲ್ಲಿದ್ದ ಲಾರ್ಡ್ ಬರ್ಕನ್‌ಹೆಡ್ ಇವನು ಭಾರತೀಯರು ಹೊಸ
ರಾಜ್ಯಘಟನೆಯನ್ನು ತಯ್ಯಾರಿಸುವುದರ ಬಗ್ಗೆ ಆಕ್ಷೇಪವನ್ನೆತ್ತಿದನು,
ಡಾ. ಅನಿ ಬೆಸೆಂಟ್ ಇವರು ಆ ರಾಜ್ಯಘಟನೆಯ ಬಗೆ ದುಡಿಯು
ತ್ತಿದ್ದರಾದರೂ ಲಾರ್ಡ್ ಬರ್ಕನ್‌ಹೆಡ್ ಇವನ ಆಕ್ಷೇಪವು ಇಡೀ ಹಿಂ
ದೂಸ್ಥಾನದ ದೃಷ್ಟಿಯು ಅದರತ್ತ ಸೆಳೆಯಿತು ---.

ಶ್ರೀಮತಿ ಬೆಸೆಂಟ್ ಇವರು ಲಂಡನ್ನಿನಲ್ಲಿ World Pro-
blems Today ಎಂಬ ವಿಚಾರವಾಗಿ ಆರು ಆದಿತ್ಯವಾರಗಳಲ್ಲೂ ಭಾ
ಷಣವನ್ನು ಮಾಡಿದರು. ಸೆಪ್ಟೆಂಬರ್ ಮತ್ತು ಒಕ್ಟೋಬರ್ ತಿಂಗಳು
ಗಳನ್ನು ಅಲ್ಲಿ ಕಳೆದು ನಂತರ ಜೆ. ಕೃಷ್ಣಮೂರ್ತಿ ಮತ್ತು ಇತರ
ರೊಡನೆ ನೇಪಲ್ಸಿಗೆ ಬಂದು ನವೆಂಬರ್ 21ರಂದು ಕೊಲೊಂಬೋ
ಬಂದರಕ್ಕೆ ತಲಪಿದರು. (The Theosophist – Sept. 1925)

1926

ತತ್ತ್ವಜ್ಞಾನ (Theosophy) ಸಂಸ್ಥೆಯ ಸ್ವರ್ಣ
ಮಹೋತ್ಸವವನ್ನು ಜರುಗಿಸಿದೆವು, ೩,೦೦೦ಕ್ಕೂ ಹೆಚ್ಚು
ಪ್ರತಿನಿಧಿಗಳು ಲೋಕದ ಎಲ್ಲಾ ಭಾಗಗಳಿಂದಲೂ ಬಂದಿದ್ದ
ರು ----ಮೊದಲು ಬಿಜೇರಿಯ ಪ್ರಕಾಶವನ್ನು ಭಾಷಣಗಳಿ
ಗಾಗಿ ಉಪಯೋಗಿಸಿದೆವು ----ಧ್ವನಿವಾಹಕ ಯಂತ್ರವನ್ನು
(loud-speakers) ಆವಾಗ ಉಪಯೋಗಿಸಿದ್ದು ಹಿಂದೂ
ಸ್ಥಾನದಲ್ಲಿಯೇ ಮೊದಲನೇ ಬಾರಿಗೆ ಆಗಿದೆ --- ಸೋದರ
ಜೆ. ಕೃಷ್ಣಮೂರ್ತಿಯು ಆ ಉತ್ಸವದ ವೇಳೆಗೆ ಮಾತಾಡುತ್ತಿ
ದ್ದಾಗ ನಮ್ಮ ಗುರುವು ಅವನ ವಾಕ್ಯವನ್ನು ಕತ್ತರಿಸಿ ಅವನ ದೇ
ಹವನ್ನು ತನ್ನ ವಶಕ್ಕೆ ತೆಗೆದುಕೊಂಡು ಅನಂತರ ಸಂದೇಶದ
ಮಾತುಗಳನ್ನು ಹೇಳಿದನು. ಇದೇ ಸಭೆಯೇ ಸ್ಪಷ್ಟತೆಯಿಂದ
ನೋಡಿತು. ಗಂಭೀರವಾದ ಮೌನವನ್ನು ತಾಳಿ ಅಂತೆಯೇ ಕೇಳ

ಸಮಯದ ನಿರ್ಬಂಧತೆಗೊಳಗಾಯಿತು. (The Theosophist – Jan. 1926.)
ಫೆಬ್ರವರಿ 4ನೇ ದಿನ ಕುಮಾರಿ ಬ್ರೈಟ್, ಕೃಷ್ಣಮೂರ್ತಿ, ರಾಜಗೋಪಾಲಾಚಾರ್ ಮತ್ತು ನಾನು ಅಡೆಯಾರ್‌ನಿಂದ ಹೊರಟೆವು--- ತಾರೀಖು 6 ರಲ್ಲಿ ಪೂನಾ ತತ್ವಜ್ಞಾನ (Theosophy) ಶಿಬಿರದ ಉದ್ಘಾಟನವನ್ನು ಮಾಡಿದೆವು. ಮರುದಿನ ನಾವು ಬೊಂಬಾಯಿಯ ಸಮೀಪದ ಜುಹೂಗೆ ಕಾರಿನಲ್ಲಿ ಪ್ರಯಾಣಮಾಡಿ ತತ್ವಜ್ಞಾನ ಸಹಕಾರ ಶಿಬಿರವನ್ನು ಸ್ಥಾಪಿಸುವ ಬಗ್ಗೆ ಮಾತಾಡಿದೆವು---.

“ಫೆಬ್ರವರಿ ೮ರಂದು ಬೊಂಬಾಯಿಗೆ ಹೋದೆವು, ಮರು“ದಿನ ಮಾನ್ಯ ಗವರ್ನರ್ ಅವರ ಅಧ್ಯಕ್ಷತೆಯಲ್ಲಿ ಶಿಶು ಕಲ್ಯಾಣ “ಉತ್ಸವದಲ್ಲಿ ಭಾಗವಹಿಸಿದೆನು. ಬೊಂಬಾಯಿ ಗವರ್ನರ್ ಸರ್ ಲೆ“ಸ್ಲಿ ವಿಲ್ಸನ್ ಇವರು ನನಗಾಗಿ ಔತಣವನ್ನು ಕೊಟ್ಟರು. ಅದೇ ರಾತ್ರಿ “ಹೈದರಾಬಾದ್ (ಸಿಂಧ್)ಗೆ ಹೋದೆವು. ಶ್ರೀ ಶಿವರಾಮನು ಅಹ್ಮದಾ“ಬಾದಿನಲ್ಲಿ ನನ್ನ ಜತೆ ಸೇರಿದನು. ತತ್ವಜ್ಞಾನ (Theosophy), “ಸಂಗೀತ, ರಾಜಕೀಯ, ಬಾಲಚಮೂ ಮತ್ತು ಕಾರ್ಮಿಕರ ಕಾರ್ಯ“ಕ್ರಮಗಳೆಲ್ಲವೂ ನಮ್ಮ ಪ್ರವಾಸದಲ್ಲಿ ಸೇರಿದ್ದ ಕರಾಚಿ, ಮು“ಲ್ತಾನ್, ಲಾಹೋರ್‌ಗಳಲ್ಲೆಲ್ಲ ಕಾರ್ಯಕ್ರಮಗಳನ್ನು ನಡೆಸಿದೆವು.”

“ಏಪ್ರಿಲ್ ೨೮ರಂದು ನಾವು ಅಡೆಯಾರ್‌ನಿಂದ ಹೊರಟು “ಅನಂತರ ಬೊಂಬಾಯಿಯಿಂದ ಮೇ ೮ರಲ್ಲಿ ಹಡಗಿನಲ್ಲಿ ಸೂರ“ತ್ತಿಗೆ ಬಂದೆವು ಅಲ್ಲಿಂದ ಬ್ರೋಚ್, ಅಹ್ಮದಾಬಾದ್, ಮತ್ತು ಬರೋಡಾ“ವನ್ನು ಸಂದರ್ಶಿಸಿ ತೆರಳಿದೆವು. ಆಗಸ್ಟ್‌ನಲ್ಲಿ ಅಮೇರಿಕಾದಲ್ಲಿ “ಭಾಷಣ ಪ್ರವಾಸವನ್ನು ಮಾಡಿ ಅನಂತರ ಚಿಕಾಗೋ (ತತ್ವಜ್ಞಾನ— “Theosophy) ಸಮ್ಮೇಳನದಲ್ಲಿ ಭಾಗವಹಿಸುತ್ತಿರುವೆನು.”

“ಪತ್ರಿಕಾ ವರದಿ---ಶ್ರೀಮತಿ ಬೆಸೆಂಟ್ ಇವರು ಮೇ ತಿಂಗಳು ೨೨ ರಲ್ಲಿ ತಲುಪಿದವರು. ಅವರ ಆರೋಗ್ಯವು ಚೆನ್ನಾಗಿದೆ--- ಜೂನ್ ತಿಂಗಳಲ್ಲಿ ಅವರು Queen's Hall ನಲ್ಲಿ The Coming of the World Teacher ಎಂಬುದಾಗಿ ಕೊಟ್ಟ ನಾಲ್ಕು ಭಾಷಣಗಳು ಬೇಗನೆ ಪ್ರಕಟವಾಗುವುವು. ಸಹಸ್ರಾರು ಜನರು ಅವರ ಭಾಷಣ ಕಾರ್ಯಕ್ರಮಕ್ಕೆ ನೆರೆದಿದ್ದರು--- ಆಗಸ್ಟ್ ೨೦ರಲ್ಲಿ ಚಿಕಾಗೋದಲ್ಲಿ ತತ್ವಜ್ಞಾನ ಸಮ್ಮೇಳನವನ್ನು ಉದ್ಘಾಟಿಸುವುದು--- ಅವರ ಭಾಷಣವು ಭಾವಪ್ರಚೋದಕವಾಗಿತ್ತು--- ತತ್ವಜ್ಞಾನ ಸಂಸ್ಥೆಯ ಅಮೇರಿಕನ್ ಸದಸ್ಯರು ೭೦೦೦ಕ್ಕೂ ಮಿಕ್ಕಿ ಇದ್ದಾರೆ. 'ಬಹು ತೃಪ್ತಿಕರವಾಗಿ ಕೆಲಸವು ನಡೆಯುತ್ತಿದೆ'.”

ಡಾ. ಬೆಸೆಂಟ್ ಇವರು ಹೀಗೆಂದರು: “ಅಟ್ಲಾಂಟಿಕ್ “ತೀರದಿಂದ ಮತ್ತೊಂದು ದಡದ ಪೆಸಿಫಿಕ್‌ವರೆಗಿನ ಬಹು“ದೀರ್ಘ ಅಮೇರಿಕಾ ಪ್ರವಾಸವು ಮುಗಿಯಿತು. ಆದರೆ ನನ್ನ ಪತ್ರ“ವ್ಯವಹಾರಗಳೆಲ್ಲ ಅಂತೆಯೇ ಇವೆ, ಹೀಗೂ ಕೆಲವನ್ನಾದರೂ ಪ

"ತತ್ವಸೂತ್ರಗಳನ್ನು ಬರೆಯಲು ಈಗ ನಿಮಗೆಯವು ದೊರೆತಿದೆಯೆಂದೆನ್ನಲು ಸಂತೋಷಿಸುತ್ತೇನೆ----ನಾನೀಗ (ಜಿಡ್ಡು) ಕೃಷ್ಣಮೂರ್ತಿಯೊಡನೆ ಓಹೈ ಕಣಿವೆಯಲ್ಲಿ ವಿಶ್ರಮಿಸುತ್ತಿದ್ದೇನೆ. ಶ್ರೀಮತಿ ಎಮಿಲಿ ಲೂಟಿಯನ್ಸ್ ಮತ್ತು ಅವಳ ಮಗಳು ಮೇರಿ ಡಿಸೆಂಬರ್ 16ರಲ್ಲಿ ಇಲ್ಲಿಗೆ ಬರುವರು. ನಾನೀಗ ಇದನ್ನು ನಿಮ್ಮ ಕಣಿವೆಯಿಂದ ಲಾಸ್ ಎಂಜಲ್ಸ್‌ಗೆ ಹೋಗುವ ಪ್ರಯಾಣ ಮಾರ್ಗವಾಗಿ ಬರೆಯುತ್ತಿದ್ದೇನೆ. ಓಹೈಯಿಂದ ಲಾಸ್ ಎಂಜೆಲ್ಸ್‌ಗೆ ಎಂಭತ್ತು ಮೈಲುಗಳಿವೆ. ರಸ್ತೆಯು ದಾರೀ ಗುಡ್ಡಬೆಟ್ಟಗಳ ಮೇಲೆ ತಿರುಗು ಮುರುಗಾಗಿ ಹೋಗುತ್ತದೆ." (The Theosophist - Feb. 1927.)

ಡಿಸೆಂಬರ್ ೨೮ರಲ್ಲಿ ಕ್ಯಾಲಿಫೋರ್ನಿಯಾದ ಕ್ರೊಟೋನ ಎಂಬಲ್ಲಿ ನಡೆದ Star Meeting ಇದಕ್ಕೆ ಶ್ರೀಮತಿ ಬೆಸೆಂಟ್ ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ತತ್ವಜ್ಞಾನ (Theosophy) ಸಂಸ್ಥೆಯ ೫೧ನೇ ವಾರ್ಷಿಕೋತ್ಸವವು ಡಿಸೆಂಬರ್ 1926ರಲ್ಲಿ ನಡೆದಾಗ ಶ್ರೀಮತಿ ಬೆಸೆಂಟ್ ಇವರು ತನ್ನ ಭಾಷಣವನ್ನು ಸಮ್ಮೇಳನಕ್ಕೆ ಬರೆದು ಕಳುಹಿಸಿದ್ದರು, ಅದರಲ್ಲಿ ಹೀಗೆ ವಾರ್ಷಿಕೋತ್ಸವದ ವೇಳೆಗೆ ಹಾಜರಿಲ್ಲದೇ ಇದ್ದುದು ಅದೇ ಎರಡನೇ ಬಾರಿಗೆ ಎಂದೂ ಈಗ ಅವರು ಅಮೇರಿಕಾದಲ್ಲಿದ್ದುದರಿಂದ ವಾರ್ಷಿಕ ವರದಿಯು ಸಮಯಕ್ಕೆ ಸರಿಯಾಗಿ ತಲುಪಲಿಲ್ಲವೆಂದೂ ತನ್ನ ಬದಲಿಗೆ ಸಿ. ಜಿನರಾಜದಾಸರು ಬನಾರಸ್ಸಿನಲ್ಲಿ ನಡೆಯುವ ಈ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಅವರ ಕಾರ್ಯಕ್ರಮವನ್ನು ಸರಿಯಾಗಿ ನಡೆಸುವರೆಂಬ ನಂಬಿಕೆಯು ತನಗಿದೆಯೆಂದೂ ಇತ್ಯಾದಿಯಾಗಿ ಸುದೀರ್ಘವಾಗಿ ಬರೆದಿದ್ದರು!

1927.

ಜನವರಿ 11ನೇ ದಿನ ಓಹೈಗೆ ಸಮೀಪದಲ್ಲಿ Order of Star ಸಂಸ್ಥೆಯ ಸುಮಾರು ೨೦೦ ಸಂಸ್ಥೆಯರು ಕೂಡಿದಲ್ಲಿ ಶ್ರೀಮತಿ ಬೆಸೆಂಟ್ ಇವರು ಅಧ್ಯಕ್ಷರಾಗಿದ್ದರು---ಅವರು ಅಮೇರಿಕಾದಿಂದ ಆಸ್ಟ್ರೇಲಿಯಾಕ್ಕೆ ಹೋಗುವುದನ್ನು ತಡೆದು ಯೂರೋಪಿಗೆ ಹೋಗುವಂತೆಯೂ ಜೂನ್ ತಿಂಗಳಲ್ಲಿ ಲಂಡನ್ನಿನ Queen's Hall ನಲ್ಲಿ ಹಲವು ಭಾಷಣಗಳನ್ನು ಮಾಡುವಂತೆಯೂ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಜುಲೈ ತಿಂಗಳಲ್ಲಿ ಅವರು ಹೀಗೆ ಬರೆದಿದ್ದಾರೆ:—

"ಜುಲೈ ೨೮ರಲ್ಲಿ ಲಂಡನ್ನಿನ ಹೋಲ್ಬರ್ನ್ ಹೋಟೆಲಿನಲ್ಲಿ Malthusian League ಸ್ಥಾಪನೆಯ ಸ್ಮರಣೋತ್ಸವವನ್ನು ಆಚರಿಸಿದ ನೆರೆದ ಭೋಜನಕೂಟದೊಡನೆ ನೆರವೇರಿಸಲಾಯಿತು----ನಾನು ನನ್ನ ಈ ಇಳಿ ವಯಸ್ಸಿನಲ್ಲಿ ಇಷ್ಟು ಚಟುವಟಿಕೆಯಿಂದ ಕೂಡಿದ್ದುದನ್ನು ಕಂಡು ಇಲ್ಲಿನ

"ವಾರ್ತಾಪತ್ರಿಕೆಗಳೂ ಆಶ್ಚರ್ಯವನ್ನು ವ್ಯಕ್ತಪಡಿಸಿದುವು. ಲಂಡನ್ನಿನ
"The Star ಪತ್ರಿಕೆಯು ಹೀಗೆ ಬರೆಯಿತು! —

"ಡಾ. ಚಾರ್ಲ್ಸ್ ನಾಲ್ಟನ್ ಇವರ The Fruits of Philosophy-
"ಯೆಂಬ ಹೊತ್ತಗೆಯನ್ನು ಪುನಃ ಪ್ರಕಟಿಸಿದುದಕ್ಕಾಗಿ ಡಾ. ಅನಿ ಬೆಸೆಂ
"ಟ್ ಮತ್ತು ಪ್ರಸಿದ್ಧ ಶಾಸನ ಸಭಾಸದಸ್ಯ ಚಾರ್ಲ್ಸ್ ಬ್ರ್ಯಾಡ್ಲೆ ಇವರ
"ನ್ನು ವಿಚಾರಣೆಗೆ ಒಳಪಡಿಸಿದ್ದರ ೫೦ನೇ ವರ್ಷದ ಸ್ಮಾರಕೋತ್ಸ
"ವವನ್ನು ಬರುವ ಮಂಗಳವಾರ ದಿನ ಹೋಬರ್ನ್ ಹೋಟೆಲಿನಲ್ಲಿ ಡಾ.
"ಅನಿ ಬೆಸೆಂಟ್ ಇವರ ಗೌರವಾರ್ಥವಾಗಿ ಭೋಜನಕೂಟವನ್ನು ಏರ್ಪ
"ಡಿಸಲಾಗಿದೆ. ಆ ವಿಚಾರಣೆಯ ಪರಿಣಾಮಗಳಲ್ಲಿ ಒಂದೆಂದರೆ
"Malthusian League ಇದರ ಸ್ಥಾಪನೆಯೇ ಆಗಿದೆ! ಅದರ ಮೂಲ
"ಸದಸ್ಯರಲ್ಲಿ ಈಗ ಶ್ರೀಮತಿ ಬೆಸೆಂಟ್ ಇವರೊಬ್ಬರೇ ಜೀವಂ
"ತವಾಗಿ ಇರುವರು ---.

"ಎಂಬತ್ತು ವರ್ಷ ಪ್ರಾಯದ ಡಾ. ಬೆಸೆಂಟ್ ಇವರು ಭಾಗ
"ವಹಿಸುವ ಕೂಟಗಳಲ್ಲಿ ಇದು ಮೂರನೇದಾಗಿದೆ. ಇತರ ಕೂಟಗ
"ಳಲ್ಲಿ Indian Commonwealth League ಇಲ್ಲಿ ಇಂದು ಅಧಿವೇಶನ-
"ಮತ್ತು The Fellowship of Faiths - ಎಂಬುದಾಗಿ ನಾಳೆ ದಿನ ನಡೆ
"ಯುವ ಪತ್ರಿಕೆಯಿಂದ ಸಮಾರಂಭ ಕೂಟವೂ ಆಗಿದೆ."

"ನಾನು ನನ್ನ ಈ ದೈಹಿಕ ಸ್ಥಿತಿಯಲ್ಲಿ ಎಂಬತ್ತು ವರ್ಷಗ
"ಳಿಗೆ ತಲಪಿದ ಕಾರಣದಿಂದ ನಾನು ಮಾಡಬೇಕಾಗಿದೆಯೆಂಬ ತಪ್ಪ
"ನ್ನು ಸಾಧಿಸಲು ಒಪ್ಪಲಾರೆನು, ಈ ದೇಹವು ಕೃಶವಾದನಂತರ
"ಹೊಸದನ್ನು ಕೈಕೊಂಡು ಪ್ರತ್ಯೇಕದನ್ನು ಧರಿಸುವೆನು. ಅಷ್ಟರವರೆಗೆ
"ನಾನೇಕೆ ಅವಿಶ್ರಾಂತವಾಗಿ ದುಡಿಯಬಾರದು?" (The Theosophist.)

ಶ್ರೀ ಮಾರ್ಗರೆಟ್ ಮಾರ್ಚಲ್ ಇವರು ಹೀಗೆ ಬರೆದರು:—

"ಯುರೋಪಿನ ಹಂತದ ಪ್ರಮುಖ ನಗರಗಳಲ್ಲೆಲ್ಲ ೨೧
ದಿನಗಳ ಅವಧಿಯಲ್ಲಿ ೨೦ ಕ್ಕಿಂತ ಹೆಚ್ಚಾಗಿ ಭಾಷಣಗಳನ್ನು
ಕೊಡುತ್ತಾ, ಜರ್ಮನಿ, ಹಾಲೆಂಡ್, ಡೆನ್ಮಾರ್ಕ್, ಹಂಗೇರಿ, ಝೆಕೋ
ಕೋಸ್ಲೋವೇಕಿಯ, ಪೋಲೆಂಡ್, ಫಿನ್ಲಾಂಡ್, ಸ್ವೀಡನ್, ನಾರ್ವೆ,
ಆಸ್ಟ್ರಿಯಾ, ಸ್ವಿಟ್ಜರ್ಲ್ಯಾಂಡ್ ಮತ್ತು ಫ್ರಾನ್ಸ್‌ಗಳಲ್ಲಿ ವಿಮಾ
ನದ ಮೂಲಕ ಪ್ರಯಾಣವನ್ನು ಬೆಳೆಸಿದ ನಮ್ಮ (ಥಿಯೋ
ಸಫೀ ಸಂಘದ) ಅಧ್ಯಕ್ಷೆ ಇವರ ಧೈರ್ಯ ಹಾಗೂ ಶ್ರಮದಾ
ಯಕ ನೋಡಿದವರಿಗೆ ನಿಜಕ್ಕೂ ಆಶ್ಚರ್ಯಕರವಾದುದಾಗಿದೆ.
ಹಾಗಿದ್ದರೂ ಈಗ ನಾವು ಅರ್ಕಾಟಿಕ್ ಸಮೀಪದಲ್ಲಿ ಸ್ಪರ್ಶಕ್ಷಮ
ನಲ್ಲಿದ್ದು ಎಲ್ಲವೂ ತೃಪ್ತಿಕರವಾಗಿ ನಡೆಯುತ್ತಿದೆ --- ಆಗಸ್ಟ್
18ರಲ್ಲಿ ಆ ಮಾಸ್ಕೋ ನಗರದಿಂದ ನಾವು Order of Service-
ಕಮಿಟಿಯವರನ್ನು ಒಮ್ಮೆನ್ (Ommen) ನಲ್ಲಿ ಮುಗಿಸಿ ನಾವು
ವಿಮಾನ ಪ್ರಯಾಣಕ್ಕೆ ತೊಡಗಿದೆವು. (Adyar Bulletin.)"

"ಲಂಡನ್ನಿನ Queen's Hall ನಲ್ಲಿ ನಾನು ನನ್ನ ಕಡೇ ಭಾಷಣವನ್ನು The Future of Europe, Peace or War?— ಎಂಬ ವಿಷಯವಾಗಿ ಕೊಟ್ಟೆನು, ಬುಡಾಪೆಸ್ಟ್, ವಿಯೆನ್ನಾ, ಮತ್ತು ಜಿನೀವಾದಲ್ಲಿ ಅದೇ ವಿಷಯದ ಮೇಲೆ ಮಾತಾಡಿದ್ದೆನು ಯುರೋಪಿನಲ್ಲಿ ಹಲವು ತಾಪತ್ರಯಗಳು ತಲೆಯೆತ್ತುತ್ತಿರುವುದನ್ನು ಕಂಡೆನು ---- ಕ್ಯಾಪ್ಟನ್ ಮ್ಯಾಕ್ಸ್ ವಾರ್ಡಲ್ಲನು New INDIA ಪತ್ರಿಕೆಯಲ್ಲಿ Dr. Besant's Flights— ಎಂಬುದಾಗಿ ಎರಡು ಲೇಖನಗಳನ್ನು ಬರೆದು ಉತ್ತರ ಮತ್ತು ಪೂರ್ವ ಯುರೋಪಿನಲ್ಲಿ ಮಾಡಿದ ವಿಮಾನ ಪ್ರವಾಸವನ್ನು ಚಿತ್ರಿಸಿದ್ದಾನೆ---- New India ಪತ್ರಿಕೆಯ ಸಹ-ಸಂಪಾದಕನೂ ನಾನೂ ದಕ್ಷಿಣ ಹಿಂದೂಸ್ಥಾನದ ಹಲವು ಸ್ಥಳಗಳಿಗೆ ರಾಜಕೀಯ ಪ್ರವಾಸವನ್ನು ಕೈಗೊಂಡೆವು, ಮದ್ರಾಸಿನಿಂದ ನವಂಬರ್ 12 ರ ರಾತ್ರಿ ಹತ್ತು ಘಂಟೆಯ ರೈಲಿನಲ್ಲಿ ಕುಂಭಕೋಣಕ್ಕೆ ಹೋದೆವು, ಅಲ್ಲಿ ಪುರಸಭೆಯವರು ಬಂದು ಸ್ವಾಗತ ಪತ್ರಗಳನ್ನು ಒಪ್ಪಿಸಿದರು ----.

"ಶ್ರೀ. ಕೃಷ್ಣಮೂರ್ತಿಯು ಅಮೆರಿಕೆಯಲ್ಲಿ ನನ್ನನ್ನು ನೋಡಿದನು, ಅಲ್ಲಿಂದ ಪುನಃ ನಾಲ್ವರು ಶಿಷ್ಯರೊಗೆ ಹೋಗಿ ಮದ್ರಾಸಿಗೆ 31ನೇ ತಾರೀಕಿನಲ್ಲಿ ಹಿಂದಿರುಗಿದೆವು, ಕೃಷ್ಣಮೂರ್ತಿಯು ಹಿಂದಿರುಗಿದ ಮೇಲೆ ನಾನು ಪಿ. ಶಿವರಾಯರ್ ನೊಡನೆ ಪ್ರಯಾಣ ಬೆಳೆಸಿ ಕಲ್ಲಿಕೋಟೆಯಲ್ಲಿ Home Rule ಇದರ ಬಗ್ಗೆ ಪ್ರಚಾರಿಸಿ ಹಿಂದಿರುಗಿದೆವು. ತತ್ವಜ್ಞಾನ (Theosophy) ಸಂಸ್ಥೆಯ ಐವತ್ತನೇ ವಾರ್ಷಿಕೋತ್ಸವವು ಅಡೆಯಾರಿನಲ್ಲಿ ಡಿಸೆಂಬರಿನಲ್ಲಿ ಆಚರಿಸಲಾಯಿತು.

1928

"----ಭಾರತದಲ್ಲಿ Home Rule ಇದರ ಸ್ಥಾಪನೆಗೆ ನಾವು ನಡೆಸಿದ ಹೋರಾಟದ ಕಡೇ ಹಂತದಲ್ಲಿ ಈಗ ನಾವು ಇದ್ದೇವೆ---- ಇದಕ್ಕೆ ಆಸ್ಟ್ರೇಲಿಯಾದ ರಾಜ್ಯಘಟನೆಯು ಆದರ್ಶವನ್ನು ಈಗ ಇಲ್ಲಿ ತೆಗೆದುಕೊಂಡಿದ್ದೇವೆ---- ಈ ಬಾರಿ The Theosophist—ಪತ್ರಿಕೆಯು ಹೊರಬರಲು ವಿಳಂಬವಾದುದಕ್ಕೆ ನಾನೇ ಕಾರಣಳಾಗಿದ್ದೇನೆ, ಅದರಲ್ಲಿ ನಾನು ಕೊಡುತ್ತಿರುವ "Watch-Tower" ಲೇಖನವನ್ನು ನಾನು ಅಲ್ಲಹಾಬಾದಿನಿಂದ ಬನಾರಸ್ಸಿಗೆ ಹೋಗುವಾಗ ರೈಲಿನಲ್ಲಿಯೇ ಬರೆಯಬೇಕಾಯಿತು,----ಬನಾರಸ್ಸಿನಲ್ಲಿ ಮೊದಲ ಬಾರಿಗೆ Indian Star Camp—ಇದು ನಡೆಯಿತು. ಅದಕ್ಕೆ ನಾವು ಸಮಯಕ್ಕೆ ಸರಿಯಾಗಿ ತಲುಪಿದೆವು. ಕೃಷ್ಣಮೂರ್ತಿಯು ಅವನ ಬಂದು ಜೀವನವನ್ನು

ಓದಿದನು. ಅವನ-ಆಜ್ಞೆಯಂತೆ ನಾನು ಚಿಕ್ಕಂದಿನ ಬ್ರಹ್ಮಚರ್ಯವನ್ನು
ಮಾಡಿದೆನು ---- ಬನಾರಸ್‌ನಲ್ಲಿ ಸೈಮನ್ ಕಮಿಷನ್ ಇದನ್ನು
ಬಹಿಷ್ಕರಿಸಲಾಗಿದೆ. ನಗರದ ರಸ್ತೆಗಳಲ್ಲಿ ಒಂದೇ ಒಂದು ವಾಹ
ನವೂ ಓಡಾಡುತ್ತಿಲ್ಲವೆಂದು ಈಗ ನಮಗೆ ತಿಳಿಸಲಾಯಿತು---ಇ
ತರ ವರದಿಗಾರರು ಹೀಗೆ ಬರೆದರು:—.

"ಮಾರ್ಚ್ 1928— ತತ್ವಜ್ಞಾನ (Theosophy) ಸಂಸ್ಥೆಯ
ಅಧ್ಯಕ್ಷೆ ಇವಳು ಅಡಿಯಾರ್‌ನಿಂದ ತನ್ನ ರಾಜ್ಯಘಟನಾ ಸೂತ್ರದ
ಬಗ್ಗೆ ಮಾತಾಡಲು ಡಿಲ್ಲಿಗೆ ಹೋಗಿದ್ದಳು--- ನಮ್ಮ ಸಂಪಾದಕಿ,
ಶ್ರೀಮತಿ ಬೆಸೆಂಟ್ ಬೊಂಬಾಯಿಯಿಂದ ಜೂನ್ ೨ರಂದು ಯುರೋ
ಪಿಗೆ ಹೊರಟು ಹೋದಳು. (The Adyar Bulletin) ಜೂನ್ 17
ರಂದು ಲಂಡನ್ನಿಂದ ಬಂದ ತಂತಿ ವಾರ್ತೆಯಂತೆ ಶ್ರೀಮತಿ ಬೆಸೆಂಟ್
ಮತ್ತು ಅವಳ ಪರಿಜನರು ಲಂಡನ್ನಿಗೆ ಮತ್ತಳಿಯು ದಿಸೆಯಿಂದ
ಬಂದು ದಿನ ತಡವಾಗಿ ತಲುಪಿದಳೆಂದು ಹೇಳಲಾಗಿದೆ---."

ಶ್ರೀಮತಿ ವೈಟ್ (Mrs. Whyte) ಇವಳು ಹೀಗೆ ಬರೆದಳು:-
"ಜುಲೈ ೫ರಿಂದ ಎರಡು ದಿನ ವೆಸ್ಟ್‌ಮಿನಿಸ್ಟರ್ ಹಾಲ್‌ನಲ್ಲಿ
ನಡೆದ Anglo-American Congress ಇದರಲ್ಲಿ ಶ್ರೀಮತಿ
ಬೆಸೆಂಟ್ ಇವಳು ಬಹಳ ಭಾಷಣಗಾರ್ತಿಯಾಗಿದ್ದಳು. ಯುದ್ಧ
ವನ್ನು ತಮ್ಮ ಹೃದಯಗಳಿಂದಲೇ ಕಿತ್ತೊಗೆಯಬೇಕೆಂದು
ಅವಳು ಸಭೆಯಲ್ಲಿ ಹೇಳಿದಳು. ದೇಶ ಮತ್ತು ಜನಾಂಗಭೇದ
ವನ್ನು ತೆಗೆದು ಹಾಕಲು ರಹದಾರಿ (Pass-port) ಗಳನ್ನು
ನಾಶಗೊಳಿಸಬೇಕೆಂದು ಹೇಳಿದಳು. ಶ್ರೀ ಸ್ಟೈನ್ಸ್ ಇವನು
ಮಾತಾಡುತ್ತಾ ಶ್ರೀಮತಿ ಬೆಸೆಂಟ್ ಇವಳು ನಮಗಿಂತಾ ಸ್ವ
ಲ್ಪ ಬೇಗ ಹುಟ್ಟಿ ಸ್ವಲ್ಪ ಮಟ್ಟಿಗೆ ದೇವತೆಗಳ ಸಾಮರ್ಥ್ಯವನ್ನು
ಪಡೆದವಳೆಂದು ಹೇಳಿದನು ---- ಜುಲೈ ೯ರಂದು The
British Committee of Indian Affairs - ಇವರಿಂದ
ಆಹ್ವಾನಿಸಲ್ಪಟ್ಟಾಗ ಡಾ. ಬೆಸೆಂಟ್ ಇವಳು ಹಲವು [illegible]
[illegible] ಮಾತುಕತೆಗಳನ್ನಾಡಿ ಹಿಂದೂಸ್ಥಾ
ನದ ಪರಿಸ್ಥಿತಿಯನ್ನು ಅವರಿಗೆ ತಿಳಿಸಿದಳು.

ಸೆಪ್ಟೆಂಬರಿನ The Theosophist ಪತ್ರಿಕೆಯಲ್ಲಿ ಹೀಗೆ
ಬರೆದರು: "---ಅನಾರೋಗ್ಯದ ಕಾರಣದಿಂದ ಡಾ. ಬೆಸೆಂಟ್ ಇ
ವಳು ತನ್ನ ಹಲವು ಕಾರ್ಯಕ್ರಮಗಳನ್ನು ರದ್ದುಗೊಳಿಸಿರುವಳು. ಹೀ
ಗೂ ಆಗಸ್ಟ್ 10 ನೇ ದಿನ ಯುರೋಪಿನಿಂದ ಇಂಡಿಯಾಕ್ಕೆ ಪ್ರಯಾಣ
ಬೆಳೆಸಿ ಲಕ್ನೋದಲ್ಲಿ ನಡೆಯುವ ರಾಜಕೀಯ ಸಭೆಯಲ್ಲಿ ಪ್ರ
ಮುಖ ಪಾತ್ರವನ್ನು ವಹಿಸುವಳು.

1929

ಡಾ. ಆನಿ ಬೆಸೆಂಟ್ ಇವಳು ಜನವರಿ ತಿಂಗಳ The

Theosophist- ಪತ್ರಿಕೆಯಲ್ಲಿ ಹೀಗೆ ಬರೆದಳು:— "----ತಮ್ಮ ಸಹೋ-
ದರರನ್ನು ಶಿಕ್ಷಣದಿಂದಲು ದೂರವಿಟ್ಟು ಅವರನ್ನು ಅಸ್ಪೃಶ್ಯರೆಂದು
ಮಾಡಿದ ಯಾರಿರುವರೋ ಅವರೇ ತಮ್ಮ ಹೆಮ್ಮೆ ಮತ್ತು ಸ್ವಾಯಂತ್ರ್ಯ
ತೆಕ್ಕೆಗಳಿಂದ ಅಸ್ಪೃಶ್ಯರಾಗಿದ್ದಾರೆ----ನಾವೇ ನಿಸ್ಸಹಾಯಕ ಜನರನ್ನು
ಆ ರೀತಿಯಾಗಿ ಕ್ರೂರವಾಗಿ, ಅನ್ಯಾಯ ಅತ್ಯಾಚಾರಗಳನ್ನು ಮಾಡುತ್ತ
ಇತರರ ಮೇಲೆ ಕೈತೋರಿಸಲು ನಮಗೇನು ಹಕ್ಕು ಇದೆ?---."
ಪುನಃ ಮಾರ್ಚ ತಿಂಗಳಲ್ಲಿ ಹೀಗಂದಳು! — "ಡಿಸೆಂಬರಿನ ಕ-
ಲ್ಕತ್ತೆಯಲ್ಲಿ ಅಧ್ಯಕ್ಷೆಯು ಕೇಳುತ್ತಿರುವ ಈ ಕಾಂಗ್ರೆಸಿಯು ಬೇಡುವದ-
ಲ್ಲಿ ಎಲ್ಲಾ ಇಲ್ಲದಿದ್ದರೂ ಸಮಾಧಾನಕರವಾಗಿದೆ, ಅದೇಕೆ ಎಂದು ಈಗ
ಹೇಳುತ್ತೇನೆ, ನಮ್ಮ ಮೊದಲಿನ ಅಧ್ಯಕ್ಷನೂ ಈ ಸಂಸ್ಥೆಯ ಸ್ಥಾಪಕ-
ನೂ ಇಲ್ಲಿಯೇ ವಾಸಿಸಿದ್ದನು. ಸಂನ್ಯಾಸಿನಿಯಂತಿದ್ದ ಆ ಹಿರಿ, ಹೆಚ್. ಪಿ.
ಬ್ಲಾವಟ್‌ಸ್ಕಿ ಇವಳು ಸಹ ಬಂದಿಳಿದನಂತರ ಸ್ವಮಿತದಿಂದ ಯಾವ
ಆಕರ್ಷಣೆ ಅಪಾದನೆಗಳ ಜಗ್ಗದೆ ಇಲ್ಲಿ ಕುಳಿತು ತನ್ನ ಕೆಲಸವನ್ನು
ಸಾಧಿಸಿದಳು----ನಾನು ಅಡಿಯಾರಿನಲ್ಲಿದ್ದಾಗ ಕರ್ನಲ್ ಆ-
ಲ್ಕಾಟ್ ಮತ್ತು ಬ್ಲಾವಟ್‌ಸ್ಕಿ ಇವರಿಂದ ಪ್ರೇರಿತವಾದ ಇಲ್ಲಿ
ನಾನು ಸ್ವಾತಂತ್ರ್ಯವನ್ನು ಹೊಂದುತ್ತಿದ್ದೇನೆ---."
"ನಾನು ಈ ದಿನ ರಾತ್ರಿ (17ನೇ ಏಪ್ರಿಲ್) ಬೊಂಬಾ-
ಯಿಯ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ Nehru Report
ಇದರ ಬಗ್ಗೆ ಮಾತಾಡಬೇಕೆಂದು ನನ್ನನ್ನು ಕೇಳಿಕೊಳ್ಳಲು ನಾ-
ನು ನನ್ನ ಕೈಯಲ್ಲಾದುದನ್ನು ಮಾಡಲಿಕ್ಕೆ ಸಿದ್ಧನಿದ್ದೇನೆ---."
ಮೇ ತಿಂಗಳು 16 ರಲ್ಲಿ ಅಧ್ಯಕ್ಷೆ ಆನಿ 'ಬೆಸೆಂಟ್' ಇ-
ವಳು ಬನಾರಸ್ಸಿನಿಂದ ಬರೆದಳು----European Fed-
eration ಎಂಬುದಾಗಿ ಸ್ಥಾಪಿಸಲು ಎಲ್ಲಾ ಪ್ರಯತ್ನವನ್ನೂ ಕೈಗೊ-
ಳ್ಳಲಾಗಿದೆ, ಸೋದರ ಜಿನರಾಜದಾಸನು ಮಾಡಿದ ಉತ್ತಮ
ಕೆಲಸವನ್ನು ನಾನು ಬನಾರಸ್ಸಿನಲ್ಲಿ ಮಾಡಿದ ಯುರೋಪಿ-
ಯನ್ ಸಮ್ಮೇಳನದ ವೇಳೆಗೆ ಹೇಳಿದೆನು," ಎಂಬುದಾಗಿ ಡಾ.
ಆನಿ ಬೆಸೆಂಟ್ ಇವಳು ಇಂಗ್ಲೆಂಡಿನಿಂದ ಬರೆದಳು.
"ಚಿಕಾಗೋದಲ್ಲಿ ಆಗಸ್ಟ 24 ರಿಂದ 29ರ ವರೆಗೆ
ನಡೆಯುವ ತತ್ವಜ್ಞಾನ (Theosophy) ವಿಶ್ವಸಭೆಯಲ್ಲಿ
ಹಲವು ಸಂದೇಶಗಳನ್ನು ಕಳಿಸಿ ಇಚ್ಛಿಸುತ್ತೇನೆ, Ommen-
ಇಲ್ಲಿ ನಡೆಯುವ ಶಿಬಿರ-ಸಭೆಗೆ ಮುಂಚಿತವಾಗಿಯೇ
ನಾನು ಅಮೇರಿಕಾಕ್ಕೆ ಹೋಗಬೇಕಾಗಿದೆ, ಇದನ್ನು ಸೋಜಿಗ-
ವಾಗ ಇದನ್ನು ದೊಡ್ಡ ಪ್ರವಾಸ ಮಾಡಬೇಕೆಂದೇ ನನ್ನ ಕಾರಣ-
ವಾಗಿದೆ---" ಎಂದೂ ಬರೆದಳು.
"ಜೊತೆಯಲ್ಲಿ ತಿಂಗಳಲ್ಲಿ ಹಲವು ದೇಶಗಳಲ್ಲಿ ತತ್ವಜ್ಞಾ-
ನ ಸಂಸ್ಥೆ (Theosophical Society)ಗಳ ಸಭೆಗಳಲ್ಲಿ

ಭಾಗವಹಿಸಿದೆನು. ಹಂಗೇರಿ, ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡ್, ಐರ್ಲೆಂಡಿನ ಡಬ್ಲಿನ್ ಮತ್ತು ಬೆಲ್‌ಫಾಸ್ಟಿನಲ್ಲಿ ಭಾಷಣಗಳನ್ನು ಕೊಟ್ಟೆನು. ಅಲ್ಲಿಂದ ಸ್ಕಾಟ್ಲೆಂಡಿಗೆ ಹೋಗಿ ಎಡಿನ್‌ಬರೋದಲ್ಲಿ ಯುವ ಕಾರ್ಯಕ್ರಮವನ್ನು ಮಾಡಿಸಿದೆನು ---- ಅಲ್ಲಿ ಕೃಷ್ಣಮೂರ್ತಿಯವರ ಜೊತೆಗೆ ಅಮೇರಿಕಾದಿಂದ ಬಂದ ಶ್ರೀಮತಿ ಜೋನ್ಸ್ ಇವಳನ್ನು ಪರಿಚಯ ಮಾಡಿಸಿದೆನು, ಅವಳು Ommen Camp ನಿಂದ ಹಿಂದಿರುಗಿ ಹೋಗುವಾಗ ನನ್ನನ್ನು ಚಿಕಾಗೋದ ವಿಶ್ವ ಸಮ್ಮೇಳನಕ್ಕೆ ಕರೆದುಕೊಂಡು ಹೋಗುವಳು---.

"ಚಿಕಾಗೋದ ಸಮ್ಮೇಳನವು ಆಗಸ್ಟ್ 26ರಲ್ಲಿ ನಡೆಯಿತು, ಅದರ ಅಧ್ಯಕ್ಷೆ ಭಾಷಣವನ್ನು ಶ್ರೀಮತಿ ಬೆಸೆಂಟ್ ಇವರು ಮಾಡಿದರು ---- ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷ ಹೂವರ್ ಇವನಿಗೆ ಸೆಪ್ಟೆಂಬರ್ 1 ರಂದು ಈ ರೀತಿಯಾಗಿ ಬರೆದರು:-

"ಅಮೇರಿಕಾದ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷರಿಗೆ:-

"ತತ್ವಜ್ಞಾನ (Theosophy) ಸಂಸ್ಥೆಯು ಅಂತರಾಷ್ಟ್ರೀಯ ಪರಿಷತ್ತು, ಇದರಲ್ಲಿ ನಲವತ್ತೈದು ರಾಷ್ಟ್ರಗಳು ಭಾಗವಹಿಸಿದ್ದು ಇದೇ ಆಗಸ್ಟ್ ೨೪ರಿಂದ ೨೯ರ ವರೆಗೆ ಚಿಕಾಗೋದಲ್ಲಿ ನಡೆಯುತ್ತ, ವಿಶ್ವ ಬಾಂಧವ್ಯ ಮತ್ತು ಸೋದರತ್ವಕ್ಕಾಗಿ ದುಡಿಯುವುದೇ ಅದರ ಮೊದಲ ಧ್ಯೇಯವಾಗಿದೆ. ಈ ಸಂಸ್ಥೆಯು ಕೇಂದ್ರಗಳು ಯೂರೋಪು, ಏಷ್ಯಾ, ಆಫ್ರಿಕಾ, ಹಿಂದೂಸ್ಥಾನ, ಆಸ್ಟ್ರೇಲಿಯಾ ಮತ್ತು ಉತ್ತರ ಹಾಗೂ ಮಧ್ಯ ಅಮೇರಿಕಾ ರಾಷ್ಟ್ರಗಳಲ್ಲಿ ಸ್ಥಾಪಿತವಾಗಿವೆ, 1929ರ ಪರಿಷತ್ತಿಗೆ ಲೋಕದ ಎಲ್ಲಾ ಕಡೆಗಳಿಂದಲೂ 1,700 ಜನಕ್ಕೂ ಮಿಕ್ಕ ಸದಸ್ಯರು ಸೇರಿದ್ದಾರೆ,

"---- ಕಡೇ ದಿನದ ಕಾರ್ಯಕ್ರಮದಲ್ಲಿ ತತ್ವಜ್ಞಾನ ಸಂಸ್ಥೆಯ ಅಮೇರಿಕಾದ ಶಾಖೆಗಳಿಗೆ ಅಧ್ಯಕ್ಷನಾಗಿ ಶ್ರೀ ರೋಜರ್ಸ್ ಇವನನ್ನು ಆರಿಸಲಾಗಿದೆ ---- ಯೂರೋಪಿನಲ್ಲಿ ನಡೆದ ಯುದ್ಧದಿಂದ ಉಂಟಾದ ಅಪಾರ ಕಷ್ಟನಷ್ಟಗಳು ಮುಂದಕ್ಕೆ ಸಂಭವಿಸದಂತೆ, ಮತ್ತು ಯುದ್ಧವನ್ನು ಜಗತ್ತಿನ ರಾಷ್ಟ್ರಗಳೆಲ್ಲಾ ಖಾನೂನು ಬದ್ಧವಾಗಿ ಬಹಿಷ್ಕರಿಸಿ ಸಮಸ್ಯೆಗಳನ್ನೆಲ್ಲಾ ಅಂತರಾಷ್ಟ್ರೀಯ ವಾದ ವಿವಾದಗಳ ಮೂಲಕವಾಗಿ ವ್ಯವಹರಿಸುವ ಬಗ್ಗೆ, ತತ್ವಜ್ಞಾನ ಸಂಸ್ಥೆಯ ನಾಲ್ಕನೇ ವಿಶ್ವ ಪರಿಷತ್ತು, ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷ, ಮಾನ್ಯ ಹೂವರನನ್ನು ಕೇಳಿಕೊಳ್ಳುತ್ತದೆ!— ಇತಿ, (ಸಹಿ) ಅನಿ ಬೆಸೆಂಟ್, ಅಧ್ಯಕ್ಷೆ, ಅಂತರಾಷ್ಟ್ರೀಯ ತತ್ವಜ್ಞಾನ ಪರಿಷತ್ತು. (ಚಿಕಾಗೋ.)"

ನಾನು ಈ ವರ್ಷಕ್ಕೆ ೮೦ ಪತ್ರಗಳನ್ನು ಮುಗಿಸಿದ್ದೇನೆ. ಹಿಂದೆ ನಾನು ನನ್ನ ಗುರುವಿನ ಆದೇಶದಂತೆ ಕೆಲಸಗಳ

ನನ್ನ ಹಿಂದೂಸ್ಥಾನದಲ್ಲಿ ಮತ್ತು ಇಂಗ್ಲೆಂಡಿನಲ್ಲಿ ರಾಜಕೀಯ ಕಾರ್ಯ ಪ್ರಮಾಣಗಳನ್ನು ನಿರ್ವಹಿಸಿದ್ದೇನೆ. ಲಾರ್ಡ್ ಹಾಲ್ಡೇನ್ ಇವರು ನನ್ನನ್ನು ಕುರಿತಾಗಿ ಮಹಾರಾಜಕಾರಣಿಯೆಂದೂ ಶ್ರೀ ಜೆಫ್ರಿ ಪಸ್ಟ ಇವರು ನನ್ನ ರಾಜಕೀಯ ಮುಂದಾಳುತನವನ್ನು ಕುರಿತಾಗಿಯೂ ನಿಮಗೆ ಹೇಳಿದರು --- ಅವೆಲ್ಲ ಹಾಗೇ ಇರಲಿ, ನಾನು ನನ್ನ ಗುರುವಿಗೆ ವಿಧೇಯಳಾಗಿಯೇ ನನ್ನ ಕರ್ತವ್ಯಗಳನ್ನು ಸಲ್ಲಿಸಿದ್ದೇನೆ. ಹಲವು ಬಾರಿ ನನ್ನನ್ನು ನನ್ನ ಆತ್ಮಚರಿತ್ರೆಯನ್ನು ಬರೆಯುವುದಕ್ಕಾಗಿ ಒತ್ತಾಯಿಸಿದ್ದಾರೆ. ಆದರೆ ನಾನು ಹಲವು ಅದನ್ನೆಲ್ಲ ತಿರಸ್ಕರಿಸಬೇಕಾಯಿತು --- ಇದೀಗ ನಾನು ನನಗೆ ಪ್ರಿಯವಾದ ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕಾರಣದಿಂದ ಸ್ವಲ್ಪವಾದರೂ ಹೇಳಬೇಕಾಗುತ್ತದೆ. ಹಿಂದಿನ ದೇಶವು ಅನುಭವಿಸುತ್ತಿರುವ Dominion Status-ಅಂತಾದರೂ ಸಿಗಲಿ!" (The Theosophist - Nov. 1929).

ಡಾ. ಎ. ಬಿ. ಇವರು ಹಿಂದೂಸ್ಥಾನವನ್ನು ಕರೆದಂತೆ ರೀತಿಯಲ್ಲಿಯೇ ನಾನೂ ನನ್ನ "ಗುರುವಿನ ಈ ಕಾಯ್ದೆ" ನಲ್ಲಿಯೇ ಇದ್ದೇನೆ---- ನವೆಂಬರ್ 17 ರಂದು ತತ್ವಜ್ಞಾನ ಸಂಸ್ಥೆಯ ಸ್ಥಾಪನೆಯ ಸ್ಮರಣೋತ್ಸವವನ್ನು ಜರುಗಿಸಲಾಯಿತು --- ಆ ವೇಳೆಗಾದಲ್ಲಿ ನಾನು ನಿರೀಕ್ಷಿಸಿದ್ದರ ಪರಿಣಾಮವಾಗಿ The Theosophist ಪತ್ರಿಕೆಯನ್ನು ಹಿಂದೂಸ್ಥಾನದಿಂದ ಅಮೇರಿಕಾಕ್ಕೆ ಸಾಗಿಸಲು ನಿಶ್ಚಯಿಸಿದೆನು. --- ನಾನು ಪ್ರಧಾನ ಸಂಪಾದಕಿಯಾಗಿಯೇ ಉಳಿಯುವೆನು. ಅದರ ಕ್ಯಾಲಿಫೋರ್ನಿಯಾದಲ್ಲಿ ಶ್ರೀಮತಿ ಹೋಚ್ನರ್ (Mrs. Hotchener) ಇವಳ ಪ್ರಬಲ ಸಹಕಾರವು ಅದಕ್ಕೆ ದೊರೆಯುವುದಲ್ಲದೆ ಶ್ರೀ ಹೋಚ್ನರ್ ಇವರು ಅದರ ಪ್ರಚಾರ ಖಾತೆಯ ಜವಾಬ್ದಾರಿಕೆಯನ್ನು ವಹಿಸುವರು..."

ಜನವರಿ 15 ರಂದು ಅಡಿಯಾರ್‌ನಲ್ಲಿ ಅಚ್ಚಾಗುವ ಪತ್ರಿಕೆಯು The Adyar Theosophist ಎಂದು ಕರೆಯಲ್ಪಡುವುದು. ತತ್ವಜ್ಞಾನ ಸಂಸ್ಥೆಯ ಕೇಂದ್ರ ಕಚೇರಿ ಇರುವ ಅಡಿಯಾರ್‌ನಲ್ಲಿ ಪ್ರಕಟವಾಗುವ ಈ ಪತ್ರಿಕೆಯು ಅಧಿಕೃತವಾಗಿ ಅರಿಸಲ್ಪಟ್ಟ ಸಂಸ್ಥೆಯ ಅಧ್ಯಕ್ಷನ ಅಂಗವಾಗಿ ಇರುವುದು. (The Theosophist - Dec. 1929).

1930

ಕಳೆದ ರಾತ್ರಿ (ಮೇ ತಾರೀಕು ೧೧,) ಅಧ್ಯಕ್ಷೆಯು (ಶ್ರೀಮತಿ ಬೆಸೆಂಟ್ ಇವಳು) ಶ್ರೀ ಜಿನರಾಜದಾಸ ಇವರೊಡಗೂಡಿ ಕೊಲಂಬೋಕ್ಕೆ ರೈಲಿನಲ್ಲಿ ಹೋದರು, ಅಲ್ಲಿ ಅವರು ಬಿಷಪ್ ಅರುಂಡೇಲ ಬಳಗದೊಡಗೂಡಿ ಯುರೋಪಿಗೆ ಪ್ರಯಾಣವನ್ನು ಬೆಳೆಸುವರು --- ಲಂಡನ್ನಿನಲ್ಲಿ ಬಹಳ ಜನರು ವಿಕ್ಟೋರಿಯಾ ನಿಲ್ದಾಣದಲ್ಲಿ ಅವಳನ್ನು ಸ್ವಾಗತಿಸಿದರು. ಜೂನ್ ೯ ರಂದು

ಅವರು ಹೆಚ್ಚು ವಿಳಂಬವಿಲ್ಲದೆ ಹಿಂದೂಸ್ಥಾನದ ಪರಿಸ್ಥಿತಿಯನ್ನು ಪಾರ್ಲಿಮೆಂಟಿನ ಎರಡೂ ಅಂಗಗಳಿಗೆ ವಿವರಿಸಲು House of Commons ಸಭೆಗೆ ಹೋದರು. ಜೂನ್ 27 ರಲ್ಲಿ ಶ್ರೀಮತಿ ಬೆಸೆಂಟ್ ಇವರು ಕ್ವೀನ್ಸ್‌ಹಾಲದಲ್ಲಿ ನಡೆದ ತತ್ವಜ್ಞಾನ (Theosophy) ಸಂಸ್ಥೆಯ ಯುರೋಪಿಯನ್ ಭಾಗದ ಹತ್ತನೇ ಸಮ್ಮೇಳನದಲ್ಲಿ ಮಾತಾಡಿದರು. ಜುಲೈ ೫ ರಲ್ಲಿ ಅಂಗ್ಲ ತತ್ವಜ್ಞಾನ ಪರಿಷತ್ತಿನಲ್ಲಿಯೂ ವ್ಯಾಖ್ಯಾನವನ್ನು ಕೊಟ್ಟರು, ಆಗಸ್ಟ 3 ರಿಂದ 8 ರ ವರೆಗೆ ಹಾಲೆಂಡಿನಲ್ಲಿದ್ದು ವಿಮಾನದ ಮೂಲಕ ಅವರು ಲಂಡನಿಗೆ ಹಿಂದಿರುಗಿದರು.

"---ಒಕ್ಟೋಬರ್ ೧ ರಂದು ತತ್ವಜ್ಞಾನ (Theosophy) ಸಂಸ್ಥೆಯ ಹಲವು ಸದಸ್ಯರು ಅವರ 83ನೇ ಹುಟ್ಟಿದಿನಕ್ಕೆ ಶುಭಹಾರೈಕೆಗಳನ್ನು ಬಯಸಲು ಬಂದರು, ಅವರ ಕಿರುಮಗಳು, ಕುಮಾರಿ ಸಿಬಿಲ್ ಬೆಸೆಂಟ್ ಇವರು "ರಮಾಂಡರ್" ಅವಿನ್ ಇವರನ್ನು ವಿವಾಹವಾದ ಆ ಉತ್ಸವಕ್ಕೆ ಹಾಜರಿದ್ದ ಮರುದಿನ ಲಂಡನ್ನಿಂದ ಹಿಂದೂಸ್ಥಾನಕ್ಕೆ ವಾಪಾಸು ಹೊರಟರು. ತತ್ವಜ್ಞಾನ ಸಂಸ್ಥೆ (Theosophical Society) ಇದರ ಉದ್ದೇಶವನ್ನು ಕುರಿತು ಆಗಿಂದಾಗ್ಗೆ ಅವರು ಕೊಡುತ್ತಿದ್ದ ಸಂದೇಶಗಳು ವಿಚಾರಪೂರ್ವಕವಾಗಿಯೂ ವಿದ್ವತ್ಪೂರ್ವಕವಾಗಿಯೂ ಇರುತ್ತಿದ್ದುವು, ನಮ್ಮ ಸಹಾಯವು ಯಾರಿಗೆ ಅಗತ್ಯವಾಗಿ ಬೇಕಾಗಿದೆಯೋ ಅವರಿಗೆ ನಮ್ಮ ಸೇವೆಯನ್ನು ಸಲ್ಲಿಸಲೋಸುಗ ನಮ್ಮ ಸ್ವಾರ್ಥವನ್ನು ಮರೆತು ಮತ್ತು ಗರ್ವವನ್ನೂ ಕಡೆಕ್ಕಾಗಿ ನಮ್ಮ ಮನಸ್ಸನ್ನು ಶಿಸ್ತಿನಿಂದ ಬೆಳೆಸುವುದೂ ನಿಸ್ವಾರ್ಥ ಹಾಗೂ ನಿಷ್ಕಲ್ಮಷ ಧ್ಯಾನಾಲೋಚನೆಯ ಬೆಳೆಯನ್ನು ಸ್ಥಿರಿಯುವುದೂ ತತ್ವಜ್ಞಾನ (Theosophy) ದ ಮೂಲೋದ್ದೇಶಗಳಾಗಿವೆ, ಎಂಬುದಾಗಿ ಶ್ರೀಮತಿ ಬೆಸೆಂಟ್ ಹೇಳುತ್ತಿದ್ದರು.

ಒಕ್ಟೋಬರ್ ೨ ರಂದು ಅವರಿಗೂ ಜಿನರಾಜದಾಸರಿಗೂ ಲಂಡನ್ನಿನ ವಿಕ್ಟೋರಿಯಾ ನಿಲ್ದಾಣದಲ್ಲಿ ಜನರು ಬಹು ಸಂಖ್ಯೆಯಲ್ಲಿ ನೆರೆದು ಅವರ ಪ್ರಯಾಣಕ್ಕೆ ಶುಭಾಶಯವನ್ನು ಬಯಸಿದರು, ಡಾ. ಬೆಸೆಂಟ್ ಇವರು ನವಂಬರ್ ಮೊದಲ ವಾರದಲ್ಲಿ ಅಡಿಯಾರಿಗೆ ತಲುಪಿದರು, ಅವರ ದಿನಚರಿ ದಾಖಲೆಗಳಲ್ಲಿ ಅವರ ದೇಹಾರೋಗ್ಯದ ಕಾರಣದಿಂದ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸದೆ ಹಿಂದಕ್ಕುಳಿಯಬೇಕಾಯಿತೆಂದು ನಮೂದಿಸಲಾಗಿದೆ.

ಡಿಸೆಂಬರ್ 19 ರಂದು ಅವರು ತತ್ವಜ್ಞಾನ ಸಂಸ್ಥೆಯ 55ನೇ ವಾರ್ಷಿಕೋತ್ಸವದಲ್ಲಿ ಭಾಗವಹಿಸಿದ್ದರು, ಅದಕ್ಕಾಗಿ ಶ್ರೀಮತಿ ಬೆಸೆಂಟ್ ಇವರು ಬನಾರಸ್ಸಿನ ವರೆಗೂ ಹೋದರು, ತಾರೀಕು ೨ ರಲ್ಲಿ The Future of the Theo-

Theosophical Society - ಎಂಬೀ ವಿಷಯವನ್ನು ಕುರಿತಾಗಿ ಎಂದಿನಂತೆ ಭಾಷಣವನ್ನು ಮಾಡಿದ್ದರು.

1931

"ಹೆಚ್. ಪಿ. ಬ್ಲಾವಟ್ಸ್ಕಿ ಇವರ ಶತಮಾನೋತ್ಸವವನ್ನು ಅಡೆಯಾರಿನಲ್ಲಿ ಆಗಸ್ಟ್ 11 ರಂದು ಆಚರಿಸಲು ನಾನು ನಿಶ್ಚಯಿಸಿದ್ದೇನೆ. ಕಳೆದ ಶತಮಾನದ ಅಂತ್ಯದಲ್ಲಿ ಈ ಮಹಾ ತತ್ವಜ್ಞಾನ ಸಂಘದ (Theosophical Movement) ಕೇಂದ್ರವಾಗಿ ಅಂದಿನ ಹಿರಿಯರು ಈ ಅಡೆಯಾರನ್ನು ಆರಿಸಿದರು -- ಅವರ Secret Doctrine - ಈ ಗ್ರಂಥಗಳಲ್ಲಿನ ದೈವಿಕ ಸ್ಫೂರ್ತಿದಾಯಕ ನನ್ನನ್ನು ಅಂದು ಈ ಸಂಘವನ್ನು ಸೇರಲು ಪ್ರೇರೇಪಿಸಿತು. ಈ ತತ್ವಜ್ಞಾನ (Theosophy) ಸಂಘವನ್ನು ನನ್ನ 42ನೇ ವರ್ಷ ಪ್ರಾಯದಲ್ಲಿ ಒಪ್ಪಿ ಹಿಡಿದೆನು. ಇದೀಗ ನಾನು 84ನೇ ವರ್ಷವನ್ನು ಪೂರೈಸುತ್ತಿದ್ದೇನೆ, ಲೋಕದ ಎಲ್ಲಾ ಭಾಗಗಳಲ್ಲೂ ಈ ಸಂಘದ ಉದ್ದೇಶವನ್ನು ಕುರಿತು ಬೋಧಿಸಿದ್ದೇನೆ, ನನಗೆ ಈಗ ವಿಶ್ರಾಂತಿ ಯೆಂಬುದನ್ನೇ ಉಂಟುಮಾಡಿಲ್ಲ, ಶ್ರೀಮತಿ ಬ್ಲಾವಟ್ಸ್ಕಿ ಇವರು ನನಗೆ ದಿಗ್ದರ್ಶನವಾಗಿ ತೋರಿಸಿದ ನನ್ನ ಆ ಗುರುವನ್ನು ನಾನು ಅರಿತಿರುವೆನು; ನನ್ನ ಜೀವನವನ್ನೇ ಅಲ್ಲಿಂದಿತ್ತ ಅವರ ಪಾದಸೇವೆಗಳಿಗೆ ಅರ್ಪಿಸಿರುವೆನು ---- ನನ್ನ ವಿಶ್ವಾಸವೆಲ್ಲವೂ ಜ್ಞಾನಬಲದಿಂದಲ್ಲದೆ ಕೇವಲ ಸ್ವೀಕಾರಬುದ್ಧಿಗಳಲ್ಲ."

ಫೆಬ್ರವರಿ ತಿಂಗಳಲ್ಲಿ ಅಡೆಯಾರಿನ ತತ್ವಜ್ಞಾನಿಗಳು ಸೇರಿ ಮದ್ರಾಸಿನ ಹಿರಿಯರು ಮತ್ತು ಕಿರಿಯರು ಜನಕ್ಕೆ ಅಡೆಯಾರಿನ ಸ್ನೇಹವನ್ನು ಬಿತ್ತಲು ಯಾವ ಕಾರ್ಯಕ್ರಮಗಳನ್ನು ಹಾಕಿ ಕೊಳ್ಳಬೇಕೆಂಬುದಾಗಿ ವಿಚಾರವಿನಿಮಯವನ್ನು ನಡೆಸಿದರು --- ಅದರ ಪರಿಣಾಮವಾಗಿ "ಗೋಖಲೆ ಹಾಲ್" ನಲ್ಲಿ ಜಿನರಾಜದಾಸ ಮತ್ತು ಬಿಷಪ್ ಲೆಡ್ಬೀಟರ್ ಇವರಿಂದ ವಿವಿಧ ವಿಚಾರಗಳ ಮೇಲೆ ಭಾಷಣಗಳನ್ನು ಆಗಿಂದಾಗ್ಗೆ ಕೊಡುವಂತೆ ತೀರ್ಮಾನವಾಯಿತು.

ಅಸ್ವಸ್ಥತೆಯಿಂದ ಅಡೆಯಾರಿಗೆ ಬಂದಿದ್ದವರು ಒಂದೂವರೆ ತಿಂಗಳು ಕಾಲ ಇದ್ದು ಹಿಂದಿರುಗಿದರು. ಜೂನ್ 19 ರಲ್ಲಿ ಅಮ್ಮಾಜಿ (ಶ್ರೀಮತಿ ಬೆಸೆಂಟ್) ಯು ಅವರಿಗೆ ಒಂದು ಸಂದೇಶ ಪತ್ರವನ್ನು ಕಳುಹಿಸಿದ್ದರು. ಅದರಲ್ಲಿ ತನ್ನ ಭವಿಷ್ಯದ ಬಹು ಭಾಗವೆಲ್ಲವೂ ಈ ಖಂಡದಲ್ಲಿ ಉಳಿದಿದೆಯೆಂದೂ ಇಂದು ನೀವು ಇಲ್ಲಿ ಬಿತ್ತುವ ಬೀಜವು ಮೊಳೆತು ವೃಕ್ಷವಾದಾಗ ಅದನ್ನು ಕಟಾವು ಹಂಗಾಮನ್ನು ತಾನು ಹೊಂದಲು ಬರುವೆನೆಂದೂ ಅವರು ಬರೆದಿದ್ದರು.

ಜುಲೈ ತಿಂಗಳ The Theosophist ಪತ್ರಿಕೆಯಲ್ಲಿ

ಕರ್ತವ್ಯಕ್ಕೆ ಆನಿ ಬೆಸೆಂಟ್ ಇವರು ತಮ್ಮ ಮೊಣಕಾಲಿಗೆ ಪೆಟ್ಟು ತಗಲು
ದಾಸಿಗೆ ಹಿಡಿದಿರುವದರಿಂದಲೂ ಪ್ರಕಟವಾಗುತ್ತಿತ್ತು. ಆದರೆ ಈಗ ಅ
ವರು ಗತ್ಯಂತರವಿಲ್ಲದಾಗಿ ಅವರ ಕಾಲುಗಳೆ ಮತ್ತು ಹೊರಕಾಲು
ಗಳಲ್ಲಿಲ್ಲ ತಿರುಗಾಡುವ ಶಕ್ತಿಯನ್ನು ಹೊಂದಿದ್ದರಿಂದಲೂ
ಸಮ್ಮುಖ ಇತರರ ಹೆಗಲ ಮೇಲೆ ಕೈ ಹಾಕಿ ಕಷ್ಟವಾದರೂ
ಗೋಲನ್ನು ಹಿಡಿದುಕೊಂಡು ತಿರುಗಾಡುವದರಿಂದಲೂ ಅವರು
ಇನ್ನು ಮಹಡಿಯಿಂದ ಕೆಳಗೆ, ಅದರಲ್ಲೂ ಅವರ ಪ್ರೀತಿಯ
ಆಲದ ಮರದ ನೆರಳಿನಲ್ಲಿ ನೆರೆಯುವ ಸಭೆಗೆ ಬರು
ವಶಕ್ತಿ ನಶಿಸಿಹೋಗಿದ್ದರಿಂದಲೂ ಶ್ರೀ ಸಿ. ಜಿನರಾಜದಾಸರು
ಸಾರ್ವಜನಿಕರಿಗೆ ತಿಳಿಯಪಡಿಸಿದರು,

'ಅಚಿಂತ್ಯನಾದ ತತ್ವಜ್ಞಾನ ಸಂಸ್ಥೆಯ ಕಾರ್ಯ
ದರ್ಶಿ ಡಾ. ಕಾರ್ಟಿನ್ ಸ್ಟುಡಿಲ್ ಇವರಿಗೆ ಅವರು ನವಂ
ಬರ್ 14 ರಂದು ಈ ರೀತಿಯಾಗಿ ಬರೆದರು:—

"ಪ್ರಿಯ ಸೋದರನೆ, ನನಗೆ ಈ ವರ್ಷಕ್ಕೆ ೮೩ ವ
ರ್ಷಗಳಾದವು, ನಾನು ಆರೋಗ್ಯದಲ್ಲಿರುವೆನಾದರೂ
ಇನ್ನೇನೂ ಹೆಚ್ಚು ವರ್ಷಗಳು ನನ್ನ ಮುಂದೆ ಇಲ್ಲ. ಸೋ
ದರ ಜಿನರಾಜದಾಸರು ನನಗೆ ಕೊಟ್ಟ ಅತಿ ಆದರ್ಶ
ವರದಿಗನುವಾಗಿ ನಾನು ದಕ್ಷಿಣ ಅಮೇರಿಕಾಕ್ಕೆ ಸಂದರ್ಶನ
ವಿತ್ತು ಬಾದರೆ ನಿಜಕ್ಕೂ ಅಚಿಂತ್ಯನಾವನು, ನನ್ನ ಪ್ರೀತಿ
ಸದ ಸ್ನೇಹಿತರೆಲ್ಲರಿಂದಾಗಿ ತೀರಿಸುತ್ತೇನೆ. ನಿಮ್ಮ ಆನಿ ಬೆಸೆಂಟ್."

ಡಾ. ಬೆಸೆಂಟ್ ಇವರು ತಮ್ಮ ಕಾರಿನಲ್ಲಿ ಪುನಃ
ಹೊರಗೆ ಸಂಚರಿಸುವದಕ್ಕೆ ಶಕ್ತರಾಗಿರುವದರಿಂದಲೂ
ಆಲದ ಮರದ ಕೆಳಗೆ ನಡೆಯುವ ಸಭೆಗಳಲ್ಲಿ ಹಿ
ಮ್ಮುಖ ಭಾಗವಹಿಸುವದರಿಂದಲೂ ಡಿಸೆಂ. 6, ಪ್ಲಾಂಟೇಶನ್
ಇವರ ರಥೋತ್ಸವ ನಡೆದಾಗ ಸಾರ್ವಜನಿಕ
ಸಭೆಗಳಿಗೆ ಅವರು ಬಂದಿದ್ದರಿಂದಲೂ ಶ್ರೀ ಜಿನರಾಜದಾ
ಸರು ಅಡಿಯಾರ್ ಪತ್ರಿಕೆಗಳಲ್ಲಿ ಬರೆದರು---.

ಹಿಂದೂಸ್ಥಾನದ ಹಲವು ಮಿತ್ರರು ಡಾ. ಬೆಸೆಂಟ್
ಇವರ ಉಪಯೋಗಕ್ಕೆ ಮಹಡಿಯಿಂದ ಕೆಳಗೆ ಬರಲು
ಮತ್ತು ಮೇಲಕ್ಕೆ ಹೋಗಲು ಒಂದು lift- ಇದನ್ನು
ಆ ಕಟ್ಟಡಕ್ಕೆ ಸಿಕ್ಕಿಸಲು ಉದಾರ ಹಣವನ್ನು ಕೊಟ್ಟಿ
ದ್ದಾರೆ, ಹಾಗೆ ಹಾಕಲಾದ ಆ lift- ಇದು ಭದ್ರವಾಗಿಯೇ
ಇದೆ, ಪ್ರತಿದಿನ ಕಾರಿನಲ್ಲಿ ಹೋಗಿ ಹಿಂದಿರುಗುವಾಗ ಆ
lift- ಇದನ್ನು ಮೇಲಕ್ಕೆ ಏರಿಸುವಾಗ ಸಮ್ಮುಖ ನೋ
ಡಿಕೊಳ್ಳಬೇಕಾಗುತ್ತದೆ, ಆಗ ಅವರು "ನಾವು ಜಾತನನ್ನು
ಪ್ರದತ್ತ ನಮ್ಮ ಸಂಬಂಧಿಗಳಿಂದಲ್ಲದೆ ನಮ್ಮ ಸ್ನೇಹ

ದಿಂದ ಅಲ್ಲ," ಎಂದು ಹಾಸ್ಯವನ್ನು ಬೀರುವವರು. ತಾರೀಖು ೨೪ ರಿಂದ ೨೭ ರವರೆಗೆ ನಡೆದ ಅಡೆಯಾರಿನ ವಾರ್ಷಿಕ ಅಧಿವೇಶನಕ್ಕೆ ಕ್ಯಾಲಿಫೋರ್ನಿಯಾದಿಂದ ಶ್ರೀ ಮತ್ತು ಶ್ರೀಮತಿ ವಾರಿಂಗ್ಟನ್ ಇವರು ಬಂದಿದ್ದರು, ಶ್ರೀ ವಾರಿಂಗ್ಟನ್ ಇವನು ಸಮ್ಮೇಳನದ ಅಧ್ಯಕ್ಷನಾಗಿದ್ದನು, ಆನಿ ಬೆಸೆಂಟ್ ಇವರು ಆ ಸಂದರ್ಭದಲ್ಲಿ ಹಿಂದಿರುವ ಮಾತುಗಳನ್ನಾಡಿದರು,

---ಶ್ರೀ ವಾರಿಂಗ್ಟನ್ ಅನಂತರ ಹೀಗೆ ಬರೆದನು:-

"ಡಾ. ಬೆಸೆಂಟ್ ಇವರು ತನ್ನ ಮಹೋನ್ನತವಾದ ಜೀವನದಲ್ಲಿ ಅವರು ಎಂದೂ ಕಾಣದೇ ಇದ್ದ ಒಂದು ಬೋಧಪ್ರದವಾದ ಪಾಠವನ್ನು ಕೊಟ್ಟರು, ನಾವು ನಮ್ಮ ತತ್ವಜ್ಞಾನಕ್ಕೆ (Theosophy) ತಕ್ಕಂತೆ ಜೀವಿಸಬೇಕು; ನಾವು ಹೀಗೆ ಜೀವಿಸುತ್ತೇವೋ ಅದೇ ರೀತಿ ಆ ತತ್ವವನ್ನು ಬೆಳೆಸುತ್ತೇವೆ; ನಮ್ಮ ಜೀವನವನ್ನು ತೋರುಗಾಣಿಸುವುದು ಮಾತುಗಳಲ್ಲ; ನಮ್ಮ ಜೀವನದ ರೀತಿನೀತಿಗಳೇ ಆಗಿವೆ--- ಜೀವನವು ಪರಿಶುದ್ಧವಾಗಿಲ್ಲವಾದರೆ ಜನರ ಮೇಲೆ ನೀವು ಪರಿಣಾಮವನ್ನು ಬೀರಲಾರಿರಿ; ಏಕೆಂದರೆ ಜನರು ನಿಮ್ಮನ್ನು ನೋಡುತ್ತಾರೆ--- ನಿಮ್ಮಲ್ಲಿ ಹಲವರು ತಮ್ಮನ್ನೇ ತಾವು ತಿಳಿಯಲಾರದೇ ಇದ್ದೀರಿ! ನಿಮ್ಮಲ್ಲಿರುವ ದೈವಿಕ ಶಕ್ತಿಯನ್ನು ನಂಬಿರಿ. ಅದರಲ್ಲಿಯೇ ನಿಮ್ಮ ಶಕ್ತಿಯು ಅಡಗಿದೆ. ನೀವು ದೈವಿಕವೆಂದು ತಿಳಿಯಿರಿ--- ನಿಮ್ಮಲ್ಲಿರುವ ದೈವಕ್ಕೆ ಒಂದು ಅವಕಾಶವನ್ನೀಯಿರಿ. ಬಿಚ್ಚು ಮನಸ್ಸಿನಿಂದ ದಿಟ್ಟತನದಿಂದ ಮುನ್ನಡೆಯಿರಿ---"

1932.

"ಜೂಲೈ ತಿಂಗಳ 6ನೇ ದಿನಕ್ಕೆ ಡಾ. ಬೆಸೆಂಟ್ ಇವರು ತತ್ವಜ್ಞಾನ ಸಂಸ್ಥೆಯ ಅಧ್ಯಕ್ಷೆಯಾಗಿ ಇಪ್ಪತ್ತೈದು ವರ್ಷವನ್ನು ಪೂರೈಸಿದರು.

ಆಗಸ್ಟ ತಿಂಗಳಲ್ಲಿ ಡಾ. ಬೆಸೆಂಟ್ ಇವರು ಓದುತ್ತಿದ್ದ ಒಂದು ಪುಸ್ತಕದ ಒಳಗೆ ಪೆನ್ಸಿಲ್‌ನಲ್ಲಿ ಬರೆದಿದ್ದ ಒಂದು ತುಂಡು ಕಾಗದವು ದೊರಕಿತು, ಅದರಲ್ಲಿ ಅವರು ಹೀಗೆ ಬರೆದಿದ್ದರು:—

"ಹೆಚ್. ಪಿ. ಬ್ಲಾವಟ್‌ಸ್ಕೀ ಇವರು ಲೋಕಕ್ಕೆ ತತ್ವಜ್ಞಾನ (Theosophy) ವನ್ನು ಇತ್ತರು. ಹೆಚ್. ಎಸ್. ಆಲ್ಕಾಟ್ ಇವರು ಲೋಕಕ್ಕೆ ತತ್ವಜ್ಞಾನ ಸಂಸ್ಥೆ (Theosophical Society) ಯನ್ನು ಇತ್ತರು; ಇವರಿಬ್ಬರನ್ನೂ ನಮ್ಮ ಗುರುಗಳೇ ಕಳಿಸಿದರು. ಅವರಿಬ್ಬರೂ ಜಗತ್ತಿಗೆ ತಮ್ಮ ಹಿರಿದಾದ ಕಾಣಿಕೆಯನ್ನು ಅರ್ಪಿಸಲಿಲ್ಲವೇ?— ಸಹಿ] ಆನಿ ಬೆಸೆಂಟ್."

ಒಕ್ಟೋಬರ್ ೧ ರಂದು ಅಡೆಯಾರ್‌ನಲ್ಲಿ ಡಾ. ಅನಿ ಬೆಸೆಂಟ್ ಇವರ ಹುಟ್ಟುದಿನದ ಹಬ್ಬವನ್ನು ಆಚರಿಸಲಾಯಿತು, ಬೆಳಿಗ್ಗೆ ೧೦.೨೦ ಘಂಟೆಗೆ ಪುರೋಹಿತರು ಪ್ರಾರ್ಥನೆಂಬುದ ಸಮೇತವಾಗಿ ಪವಿತ್ರ ಭಾರತ ಸಮಾಜ ದೇವಸ್ಥಾನದಿಂದ ಬಂದರು, ಡಾ. ಬೆಸೆಂಟ್ ಇವರು ತಮ್ಮ ಕೊಠಡಿಯ ಬಾಗಿಲು ಬಳಿ ನಿಂತು ಅವರನ್ನು ಸ್ವಾಗತಿಸಿದರು, ದೇವತೆಗಳ ಆಶೀರ್ವಚನವನ್ನು ಹಾಗು ವ ವೇದಮಂತ್ರಗಳನ್ನು ಬ್ರಾಹ್ಮಣರು ಉಚ್ಚರಿಸಿದರು, ಮಧ್ಯಾಹ್ನ ೩:೪೫ ಕ್ಕೆ ಅಡೆಯಾರಿನ ಎಲ್ಲಾ ನಿವಾಸಿಗಳೂ ಅವರ ಸಂದರ್ಶನವನ್ನು ಪಡೆದರು, ಅವರೆಲ್ಲರೂ ಅವರ ಕೈಗೆ ಹೂಗೊಂಚಲನ್ನು ಕೊಡಿಸಿದರು. ಅವರಾದರೋ ಎಲ್ಲರನ್ನು ಕೈಮುಗಿದು ವಂದಿಸುತ್ತಿದ್ದರು.

ಅಡೆಯಾರ್‌ನಲ್ಲಿ ತತ್ವಜ್ಞಾನ ಸಂಘದ ೫೭ನೇ ವಾರ್ಷಿಕೋತ್ಸವವು ನಡೆದಾಗ "ಅನಿ ಬೆಸೆಂಟ್ ಇವರು ಆ ಡಿಸೆಂಬರ್ ೨೪ ರಿಂದ ೩೧ರ ವರೆಗಿನ ಅವಧಿಯಲ್ಲಿ ತಮ್ಮ ಕೋಣೆಯಿಂದ ಹೊರಗೆ ಇಳಿದು ಬರಲಿಲ್ಲ, ಅವರು ಕಳುಹಿಸಿದ ಸಂದೇಶವನ್ನು ಪ್ರತಿನಿಧಿಗಳಿಗೆ, ಉಪಾಧ್ಯಕ್ಷ ಎ. ಪಿ. ವಾರಿಂಗ್ಟನ್ ಇವರು ಓದಿ ಹೇಳಿದರು, ಅದು ಹೀಗಿತ್ತು:—

"ಪ್ರಿಯ ಮಿತ್ರರೆ, ಸೋದರರೆ, ಗಂಡು ಮಕ್ಕಳೆ, ಮತ್ತು ಹೆಣ್ಣುಮಕ್ಕಳೆ, ನಾನು ನಿಮ್ಮನ್ನು ಇಂದು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ, ನಿಮ್ಮಲ್ಲಿ ಪ್ರತಿಯೊಬ್ಬನೂ, ಪ್ರತಿಯೊಬ್ಬಳೂ, ನನ್ನ ಸ್ವಂತ ಮಕ್ಕಳಂತೆ ನನಗೆ ಪ್ರಿಯರಾಗಿರುವಿರಿ. ಇಂದಿಗೆ ನೀವು ನಮ್ಮ ಗುರುಸದನದಲ್ಲಿ ನೆರೆದಿರುವುದಕ್ಕಿಂತ ಹೆಚ್ಚು ಸಂತೋಷಕರವಾದ ವಿಷಯ ನನಗೆ ಬೇರೊಂದೂ ಇಲ್ಲ --- ದೇವರ ಆಶೀರ್ವಚನವು ನಿಮ್ಮ ಮೇಲೆ ಸುರಿಯುತ್ತಿರಲಿ --- ಇದೀಗ ನಾನು ಈ ಸಮಾರಂಭವನ್ನು ಉದ್ಘಾಟಿಸುವೆನು."

ಡಿಸೆಂಬರ್ ತಿಂಗಳ ೨೭ ರಂದು ಸಭೆಗೆ ಬಂದಿದ್ದ ಏಳ್ನೂರಕ್ಕೂ ಹೆಚ್ಚು ಜನ ಪ್ರತಿನಿಧಿಗಳು ಸುಮಾರು ಒಂದೂಕಾಲು ಘಂಟೆಯ ಕಾಲ ಶ್ರೀಮತಿ ಬೆಸೆಂಟ್ ಇವರ ದರ್ಶನವನ್ನು ಪ್ರತ್ಯೇಕ ಗುಂಪುಗಳ ಸಮೇತವಾಗಿ ಪಡೆದುದಲ್ಲದೆ ಎಲ್ಲರೂ ಅವರಿಗೆ ಭಾರತೀಯ ರೀತಿಯಲ್ಲಿ ಕೈಜೋಡಿಸಿ ನಮಸ್ಕರಿಸಿದರು.

1933

ಶ್ರೀ ಎ. ಪಿ. ವಾರಿಂಗ್ಟನ್ ಇವರು ಡಾ. ಅನಿ ಬೆಸೆಂಟ್ ಇವರನ್ನು ಕುರಿತು ಬರೆದ ಗ್ರಂಥದಲ್ಲಿ ಅವರ ಕಡೇ ದಿನಗಳನ್ನು ಕುರಿತು ವ್ಯಕ್ತವಾಗಿ ಬರೆದಿದ್ದಾರೆ, ತಮ್ಮ ಕಡೇವರ್ಷದ ಆ ಒಂದು ಕಡೇ ತಿಂಗಳ ಕಾಲವನ್ನು ಡಾ. ಅನಿ

ಬಿಸೆಂಟ್ ಇವರು ಅಡೆಯಾರ್‌ನಲ್ಲಿ ಪ್ರವಾಸದಿಂದಲೇ ಕುಳಿತಿದ್ದರು,
ತನ್ನ ಕೋಣೆಯ ಮೇಲ್ಮಹಡಿ ಕೋಣೆಯಿಂದ ಹೊರಗೆ ಬಂದು
ಅಲ್ಲಿಂದಲೇ ಸುತ್ತಲೂ ನೋಡಿದಾಗ ಕಾಣುವ ಅಡೆಯಾರ್ ಹೊಳೆ
ಹರಿಯುತ್ತ ಹೋಗುವ ಪಕ್ಕದಲ್ಲಿ ದೂರವಿದ್ದ ಸಮುದ್ರದತ್ತ ನಿತ್ಯವೂ
ನೋಡುತ್ತಿದ್ದರು ---- ಆ ದೃಶ್ಯವಾದರೋ ತುಂಬಾ ಮೋಹಕವಾಗಿತ್ತು.
ಅವರ ನಿವಾಸಕ್ಕೆ ಆ ಕಡೇ ದಿನಗಳಲ್ಲಿ ಯಾರೂ ಹೋಗಿ ತೊಂದ
ರೆ ಮಾಡಕೂಡದೆಂದು ವಿಧಿಸಿತ್ತು. ಅವರಿಗೆ ಬಹಳ ಪ್ರಿಯವಾಗಿ,
ಬಹಳ ಆಪ್ತವಾಗಿ ಇದ್ದವರು ಮಾತ್ರ ಅವರ ಬಳಿಗೆ ಹೋಗುತ್ತಿದ್ದರು,
ಅವರಾದರೋ ಆಗ ತುಂಬಾ ಸಂತೋಷವನ್ನು ತೋರಿಸುತ್ತಿದ್ದರು,
ಅವರ ಹಿಂದಿನ ಆ ಕಾಂತಿ, ಶಕ್ತಿ, ಶೋಭೆಯೆಲ್ಲವೂ ಅಕ್ಷರಶಃ ಇಲ್ಲ
ದಾಗಿ ಹೋಗಿತ್ತು. ಅವರ ಆಪ್ತ ಮಿತ್ರನಾಗಿದ್ದ ಬಿಷಪ್ ಲೆಡ್ಬೀ
ಟರನಿಗೆ ಅವರ ಶಕ್ತಿಯು ಕುಂದುತ್ತ ಹೋಗುತ್ತಿರುವುದು ಬಹಳ
ದುಃಖದಿಂದ ತಡೆಯಲಾಗಲಿಲ್ಲ ---- ಹೀಗೂ ಅವರು ನಿಧಾ
ನವಾಗಿ ಈ ಇಹವನ್ನು ತ್ಯಜಿಸಲು ಸಿದ್ಧರಾಗುತ್ತಿದ್ದರು ---.

ಡಾ. ಆನಿ ಬಿಸೆಂಟ್ ಇವರು ಸಪ್ಟಂಬರ್ (1933)
೨೦ನೇ ದಿನ ಮಧ್ಯಾಹ್ನ ಸರಿಯಾಗಿ ೪ ಘಂಟೆಗೆ ತನ್ನ ಗುರು
ವನ್ನು ಸೇರಲು ಇಹದಿಂದ ಅಗಲಿದರು.

ಪ. ಮಾ. ಪವಿತ್ರ [illegible]
Vancouver, Br. Columbia
Canada. Sept. 86.
(1970)

ಅನಿ ಬೆಸೆಂಟ್.

(ಆತ್ಮ ಚರಿತ್ರೆ - ಭಾಷಾಂತರ)

ಭಾಗ ಎರಡು

ಪಿ. ಎಸ್. [illegible].
ಪೆನ್ಸನರ್ [illegible].
1970

(ಎಲ್ಲ ಹಕ್ಕುಗಳು ಕಾಯ್ದಿರಿಸಲ್ಪಟ್ಟಿವೆ.)